ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭಾಷಾಭಿವೃದ್ಧಿ ಯೋಜನೆ

ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ

ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳು

(ಔರಾದ-ಬಸವಕಲ್ಯಾಣ-ಸಂಪುಟ-೨)

ಡಾ. ಎಸ್.ಎಮ್. ಹಿರೇಮಠ



ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ-585 106

ಬೀದರ ಜಿಲ್ಲೆಯ

ತತ್ತ್ವಪದಕಾರರ ಸ್ಮಾರಕಗಳು

(ಔರಾದ–ಬಸವಕಲ್ಯಾಣ : ಸಂಪುಟ–೨)

2

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ
ತತ್ವಪದಕಾರರ ಸ್ಮಾರಕಗಳ ಕ್ಷೇತ್ರಕಾರ್ಯ
ಹಾಗೂ ಸಂಪುಟಗಳ ಪ್ರಕಟನಾ ಯೋಜನೆ-೨

ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳು

(ಔರಾದ-ಬಸವಕಲ್ಯಾಣ : ಸಂಪುಟ-೨)

ಪ್ರಧಾನ ಸಂಶೋಧಕರು ಮತ್ತು ಲೇಖಕರು
ಡಾ. ಎಸ್. ಎಮ್. ಹಿರೇಮಠ

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ – ೫೮೫ ೧೦೬

"BIDAR JILLEYA TATVA PADAKARARA SMARAKAGALU" (AURAD - BASVAKALYAN) VOL - 2

Research Articles on Tatvapadakara's life and Monuments -

Written by : **Dr.S.M. Hiremath,** Professor of Kannada.

Published by Institute of Kannada studies Gulbarga University, Gulbarga

Funded by: Government of Karnataka

ISBN : 978-81-920110-1-1

First Impression : 2012

Total Pages : XL+ 526

Paper Used : 80 GSM Maplitho

Price : Rs. 500.00

ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳು (ಔರಾದ – ಬಸವಕಲ್ಯಾಣ) ಸಂ : ೨

ಪ್ರಧಾನ ಸಂಶೋಧಕರು ಮತ್ತು ಲೇಖಕರು : **ಡಾ. ಎಸ್. ಎಮ್. ಹಿರೇಮಠ,**

ಪ್ರಾಧ್ಯಾಪಕರು **ಕನ್ನಡ ಅಧ್ಯಯನ ಸಂಸ್ಥೆ,** ಗುಲಬರ್ಗಾ ವಿಶ್ವವಿದ್ಯಾಲಯ,

ಗುಲಬರ್ಗಾ

ಪ್ರಕಾಶಕರು : ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಪ್ರಥಮ ಮುದ್ರಣ : ೨೦೧೨

ಪುಟಗಳು: XL+ ೫೨೬

ಬಳಸಿದ ಕಾಗದ : ೮೦ ಜಿ.ಎಸ್.ಎಮ್ ಮ್ಯಾಪ್ಲಿಥೊ ಕಾಗದ

ಬೆಲೆ : ರೂ. ೫೦೦.೦೦

ಕೃತಿ ದೊರೆಯುವ ಸ್ಥಳ : ಕನ್ನಡ ಅಧ್ಯಯನ ಸಂಸ್ಥೆ

ಮುದ್ರಕರು :

ಮೆ॥ ಪ್ರಿಂಟ್ ಪಾರ್ಕ್

ಕ್ವಾಲಿಟಿ ಆಫ್ ಸೆಟ್ ಪ್ರಿಂಟರ್ಸ್

೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ

ಶ್ರೀರಾಂಪುರಂ ಅಂಚೆ,

ಬೆಂಗಳೂರು – ೫೬೦ ೦೨೧.

ದೂ : ೦೮೦-೨೩೪೨೨೮೩೮

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಕನ್ನಡ ಭಾಷಾಭಿವೃದ್ಧಿ ಯೋಜನೆ ಸಮಿತಿ

ಅಧ್ಯಕ್ಷರು
ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಉಪಾಧ್ಯಕ್ಷರು
ಪ್ರೊ. ಎಸ್.ಎಲ್. ಹಿರೇಮಠ
ಕುಲಸಚಿವರು

ಸಂಚಾಲಕರು
ಪ್ರೊ. ನಾಗಾಬಾಯಿ ಬುಳ್ಳಾ
ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ

ಸದಸ್ಯರು

ಡಾ. ಪಿ.ಕೆ.ಖಂಡೋಬಾ
ಡಾ. ವ್ಹಿ.ಜಿ.ಪೂಜಾರ
ಡಾ. ವೀರಣ್ಣ ದಂಡೆ
ಡಾ. ಎಚ್.ಟಿ.ಪೋತೆ
ಡಾ. ಜಯಶ್ರೀ ದಂಡೆ
ಡಾ. ಡಿ.ಬಿ.ನಾಯಕ
ಡಾ. ಬಸವರಾಜ ಸಬರದ
ಡಾ. ಬಿ.ಎಸ್. ಪೋಲಿಸ ಪಾಟೀಲ
ಡಾ. ಎಸ್.ಎಂ.ಹಿರೇಮಠ
ಡಾ. ರಾಜಪ್ಪ ದಳವಾಯಿ

6

ಡಿ.ವಿ.ಸದಾನಂದಗೌಡ
ಮುಖ್ಯಮಂತ್ರಿ
ಸಿಎಂ/ಪಿಎಸ್/57/11

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು–560 001
ದಿ: 02.11.2011

ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ ತತ್ತ್ವಪದ ಸಾಹಿತ್ಯ, ದಲಿತ–ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತಕರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನ, ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ, ಪ್ರಬುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ, ಲೇಖಕರೂ, ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠ ಮಟ್ಟದ ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ

೭

ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳ ಅಡಿಯಲ್ಲಿ ಈಗ ಸಿದ್ಧಪಡಿಸಿರುವ ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳು (ಔರಾದ – ಬಸವಕಲ್ಯಾಣ : ಸಂ – ೨) ಸಂಪುಟವನ್ನು ಪ್ರಕಟಿಸಲು ಶ್ರಮಿಸಿದ ಲೇಖಕರನ್ನು ಅಭಿನಂದಿಸಿ, ಈ ಕೃತಿಗಳು ನಾಡಿನ ಸಹೃದಯರ ಮನಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಡಿ.ವಿ. ಸದಾನಂದಗೌಡ
ಮುಖ್ಯಮಂತ್ರಿಗಳು

ಗೋವಿಂದ. ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. 330, 3ನೇ ಮಹಡಿ
ವಿಧಾನಸೌಧ
ಬೆಂಗಳೂರು– 560 001
ದಿ: 16.11.2011

ಶುಭಹಾರೈಕೆ

ಕನ್ನಡ ನಾಡು–ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು–ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡು ಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ ೪೫೦ ರ ಹಲ್ಮಿಡಿಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತ ರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ಧವಾಗುತ್ತಿವೆ. ಈ ಯೋಜನೆಯು ಅಂತಹ ಹಲವು ಯೋಜನೆಯ ಅಡಿಯಲ್ಲಿ ಒಂದು. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಬೀದರ

ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳ (ಔರಾದ – ಬಸವಕಲ್ಯಾಣ : ಸಂ – ೨) ಸಂಶೋಧನ ಸಂಪುಟವನ್ನು ಪ್ರಕಟಿಸುತ್ತಿದೆ ಎಂಬ ವಿಚಾರ ತಿಳಿದು ನನಗೆ ತುಂಬಾ ಸಂತೋಷವಾಗಿದೆ.

ಕನ್ನಡ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು–ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನ ಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಿದ್ದಾರೆ. ನಾಡು–ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಗೋವಿಂದ. ಎಂ. ಕಾರಜೋಳ

ಸಚಿವರು

ಬಿ. ಬಸವರಾಜು ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರ್ಕಾರ

೨, ನೆಲಮಹಡಿ, ವಿಕಾಸ ಸೌಧ,
ಬೆಂಗಳೂರು– ೫೬೦ ೦೦೧
☐ ೨೨೨೦೫೭೮೧ಮ ೨೨೦೩೪೦೦
ಫ್ಯಾಕ್ಸ್: ೨೨೩೫೩೧೦೫
ಇ–ಮೇಲ್: secy-kc@karnataka. Gov.in

ದಿ: ೨೪.೧೦.೨೦೧೧

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದುಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿದೆ. ಕ್ರಿ.ಶ.೪೫೦ರ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡ, ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು, ಕದಂಬರು ಇಲ್ಲಿನ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರವಣಿಗೆಯಲ್ಲಿಯೇ ಕನ್ನಡ ನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪ ಇರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ದಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿರುವ ಶಾಸನದಿಂದಲೇ ಅಶೋಕನಿಗೆ 'ದೇವನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟಕದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಲಯದ ರವಿಕೀರ್ತಿಯ ೫ನೇ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಆದ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ

ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುವುದಕ್ಕಾಗಿ. ೨೦೦೮ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು ಹಮ್ಮಿಕೊಂಡು ಅದರಡಿಯಲ್ಲಿ **ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳು** (ಔರಾದ – ಬಸವಕಲ್ಯಾಣ : ಸಂ – ೨) ಎಂಬ ಸಂಶೋಧನ ಸಂಪುಟವನ್ನು ಪ್ರಕಟಿಸಿದೆ. ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ಸಂಪುಟಗಳು ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತಿಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರು, ಯೋಜನೆಯ ಪ್ರಧಾನ ಸಂಶೋಧಕರು ಮತ್ತು ಲೇಖಕರು ಆದ ಡಾ. ಎಸ್.ಎಮ್.ಹಿರೇಮಠ ಅವರನ್ನು, ಕುಲಪತಿ ಪ್ರೊ. ಈ.ಟಿ.ಪುಟ್ಟಯ್ಯ ಅವರನ್ನು ಮತ್ತು ಕುಲಸಚಿವ ಪ್ರೊ.ಎಸ್.ಎಲ್.ಹಿರೇಮಠ ಅವರನ್ನು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರನ್ನು ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಬಿ. ಬಸವರಾಜು

ಕಾರ್ಯದರ್ಶಿ

ಮನು ಬಳಿಗಾರ್ ಕ.ಆ.ಸೇ
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರ್ಕಾರ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು– ೫೬೦ ೦೦೧
ದಿ: ೧೫.೧೦.೨೦೧೧

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು 'ವೀರಯುಗ' ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು ವಿಕ್ರಮಾರ್ಜುನ ವಿಜಯವಾದರೆ ರನ್ನ ಬರೆದದ್ದು ಸಾಹಸಭೀಮ ವಿಜಯ. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜ ಮಾರ್ಗಕಾರನು ಕನ್ನಡ ಜನರು ಕವಿಗಳೂ, ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡ ನಾಡಿನ ಹತ್ತನೆಯ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯ ಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ರಚನಕಾರರ ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ, ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಅಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು

ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ ಕುವರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾನೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ ೨೦೦೮ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಸಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಲವು ಸಂಪುಟಗಳ ಪ್ರಕಟಣಾ ಯೋಜನೆಯನ್ನು ಕೈಗೆತ್ತಿಕೊಂಡು ಅದರ ಅಡಿಯಲ್ಲಿ ಇದೀಗ **ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳು** (ಔರಾದ – ಬಸವಕಲ್ಯಾಣ : ಸಂ – ೨) ಎನ್ನುವ ಸಂಶೋಧನ ಸಂಪುಟವನ್ನು ಪ್ರಕಟಿಸಿ ಬಿಡುಗಡೆ ಮಾಡುತ್ತಿದೆ. ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಈ. ಟಿ. ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರಿಗೆ, ಪ್ರಾಧ್ಯಾಪಕರೂ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರಿಗೆ, ಈ ಯೊಜನೆಯ ಪ್ರಧಾನ ಸಂಶೋಧಕರು ಮತ್ತು ಲೇಖಕರು ಆದ ಡಾ. ಎಸ್.ಎಮ್.ಹಿರೇಮಠ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪರವಾಗಿ ನಾನು ಹೃತ್ಪೂರ್ವವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮನು ಬಳಿಗಾರ್

ಆಯುಕ್ತರು

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ: ೨೫.೧೦.೨೦೧೧

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. ೧೯೭೦-೭೧ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ ೧೯೮೦ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ

ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ ತತ್ವಪದಕಾರರ ಸ್ಮಾರಕಗಳ ಕ್ಷೇತ್ರಕಾರ್ಯ ಹಾಗೂ ಸಂಪುಟಗಳ ಪ್ರಕಟನಾ ಯೋಜನೆ (ಭಾಗ-೨)ಯೂ ಒಂದು. ಈ ಯೋಜನೆಗೆ ಸಂಬಂಧಿಸಿದಂತೆ ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳ ಮೂರು ಸಂಪುಟಗಳು ಹಾಗೂ ಕೊಪ್ಪಳ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳ ಮೂರು ಸಂಪುಟಗಳು ಬೆಳಕು ಕಾಣುತ್ತಿರುವುದು ವಿಶೇಷದ ಸಂಗತಿ. ಈಗ ಆರು ಸಂಪುಟಗಳಲ್ಲಿ ಬೀದರ ಜಿಲ್ಲೆಗೆ ಸಂಬಂಧಿಸಿದಂತೆ ಮೂರು ಸಂಪುಟಗಳು ಪ್ರಕಟಗೊಳ್ಳುತ್ತಲಿವೆ. ಈ ಕಾರ್ಯವು ನನಗೆ ಅತಿವ ಹರ್ಷವನ್ನುಂಟು ಮಾಡಿದೆ.

ಪ್ರಸ್ತುತ "ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳು" ಎನ್ನುವ ಹೆಸರಿನ ಮೂರು ಸಂಪುಟಗಳನ್ನು ನಮ್ಮ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಡಾ. ಎಸ್.ಎಮ್.ಹಿರೇಮಠ ಅವರು ವಿಶೇಷ ಶ್ರಮವಹಿಸಿ ಕ್ಷೇತ್ರ ಕಾರ್ಯ ಕೈಕೊಂಡು ಸಿದ್ಧಪಡಿಸಿರುವರು. ಈ ಸಂಪುಟಗಳು ಪ್ರಸ್ತುತ ಜ್ಞಾನಕ್ಷೇತ್ರಕ್ಕೆ ಮತ್ತು ಸಮಾಜಕ್ಕೆ ಉಪಯುಕ್ತ ಆಕರಗಳಾಗಿವೆ. ಇಲ್ಲಿ ಎಷ್ಟೋ ಅಜ್ಞಾತ – ಅಲ್ಪಜ್ಞಾತ ತತ್ತ್ವಪದಕಾರರು ಮತ್ತು ಅವರ ಸ್ಮಾರಕಗಳು ಬೆಳಕು ಕಾಣುತ್ತವೆ. ತತ್ತ್ವಪದಕಾರರನ್ನು ಕುರಿತು ಬರೆದ ಇಲ್ಲಿನ ಲೇಖನಗಳು ಹಾಗೂ ಆಯಾ ತತ್ತ್ವಪದಕಾರರಿಗೆ ಸಂಬಂಧಿಸಿದ ಸ್ಮಾರಕಗಳ ಚಿತ್ರಗಳು ತುಂಬ ಮೌಲಿಕವಾದುವಾಗಿವೆ. ಒಟ್ಟಿನಲ್ಲಿ ಪ್ರಸ್ತುತ ಸಂಪುಟಗಳು ಹೊಸ ಆವಿಷ್ಕಾರ ಹಾಗೂ ಚಿಂತನೆಗಳಿಗೆ ಉತ್ತಮ ದಾರಿಯನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿವೆ. ಇಂಥ ಮೌಲಿಕವಾದ ಸಂಪುಟಗಳನ್ನು ಸಿದ್ಧಪಡಿಸಿದ ಈ ಯೋಜನೆಯ ಪ್ರಧಾನ ಸಂಶೋಧಕರೂ, ಲೇಖಕರೂ ಆದ ಡಾ.ಎಸ್.ಎಮ್.ಹಿರೇಮಠ ಅವರಿಗೂ, ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ. ಬಿ.ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಪ್ರಧಾನ ಸಂಶೋಧಕರ ನುಡಿ

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನ ದೊರಕಿದ ಈ ಸಂದರ್ಭವೊಂದು ಶಿವದ ಸಂದರ್ಭವಾಗಿದೆ. ಈ ಸಂದರ್ಭದಲ್ಲಿ ಕನ್ನಡವೇ ಆಗಿರುವ ಸರಕಾರ ಮತ್ತು ಸಮಾಜದ ಮನಸ್ಸುಗಳು ಕನ್ನಡ ಧರ್ಮ-ಸಾಹಿತ್ಯ-ಸಂಸ್ಕೃತಿಗೆ ಮತ್ತೊಮ್ಮೆ ಸುವರ್ಣಯುಗವೊಂದನ್ನು ಪ್ರಾಪ್ತೀಕರಿಸಿಕೊಡುವ ಪಥದಲ್ಲಿ ಪ್ರವೃತ್ತವಾಗಬೇಕಾಗಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯ ಆಶ್ರಯದಲ್ಲಿ ಸರಕಾರವು ಉದಾರ ಮತ್ತು ಕಳಕಳಿಯ ಮನದಿಂದ ನೀಡುತ್ತಿರುವ ವಿಪುಲವಾದ ಅನುದಾನವು ಸತ್ಪಾತ್ರಕ್ಕೆ ಸಲ್ಲುವಂತೆ ಸದುಪಯೋಗ ಮಾಡಿಕೊಂಡು ಕನ್ನಡದ ಶಾಸ್ತ್ರೀಯ ನೆಲೆಗೆ ಪೂರಕವಾಗಿರುವ ಕಾರ್ಯಸಾಧನೆಗಳನ್ನು ಪ್ರಾಮಾಣಿಕ ಮನದಿಂದ ಆಗು ಮಾಡಬೇಕಾಗಿದೆ. ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳ ಸಂಶೋಧನೆ ಮತ್ತು ಪ್ರಕಟಣಾ ಯೋಜನೆಯು ಅಂತಹ ಮಹತ್ವದ ಕಾರ್ಯ ಸಾಧನೆಗಳಲ್ಲಿ ಒಂದು.

ಬಸವಾದಿ ಶಿವಶರಣರ ನಂತರದಲ್ಲಿ ಮತ್ತೊಮ್ಮೆ "ಜನ ಬದುಕಲೆಂದು" ಜನರ ನಡುವೆ ಹುಟ್ಟಿ ಬದುಕುತ್ತ, ಜನಪದ ನಿಲುವಿನ ಕಾಳಜಿಗಳನ್ನು ದೊಡ್ಡ ಸಾಹಿತ್ಯಕ ಪರಂಪರೆಯಾಗಿ ಸಮಾಜಕ್ಕೆ ನೀಡಿದವರು ಕಲ್ಯಾಣ ಕನ್ನಡ ಪ್ರದೇಶದ ತತ್ತ್ವಪದಕಾರರು. ಶರಣ ಚಳುವಳಿಗೆ ಮಾಧ್ಯಮವಾಗಿದ್ದ ಅನುಭವ ಮಂಟಪದ ಪರಿಕಲ್ಪನೆ ಇಲ್ಲಿ ಮತ್ತೆ ನಮಗೆ ಅಮೂರ್ತ ರೂಪದಲ್ಲಿ ಕ್ರಿಯಾಶೀಲಗೊಂಡಂತೆ ಅನುಭವವಾಗುತ್ತದೆ. ತತ್ತ್ವಪದ ಸಾಹಿತ್ಯವು ಹೆಚ್ಚಾಗಿ ಅರಮನೆ-ಗುರುಮನೆ-ಪಂಡಿತರ ಮನೆಗಳಲ್ಲಿ ಹುಟ್ಟಿದ್ದಲ್ಲ. ಅದು ಆಕಾಶದ ಕುಸುಮದಂತಿರುವ ತತ್ತ್ವ ಬೋಧನೆಗೂ ತೊಡಗುವುದಿಲ್ಲ. ಮಠದ ಸ್ವಾಮಿ, ಆರೂಢಸಾಧಕ, ವ್ಯುತ್ಪತ್ತಿಯ ವಿದ್ವಾಂಸ - ಇವರೊಂದಿಗೆ ಸರಿಮಿಗಲಾಗಿ ನಿಂತುಕೊಂಡು ತತ್ತ್ವಪದಗಳನ್ನು ಕಟ್ಟಿ (ರಚಿಸಿ) ಹಾಡಿದ, ಹಾಡುತ್ತಿರುವವರು ನೇಕಾರ, ಕುಂಬಾರ, ಕಂಬಾರ, ಹಡಪಿಗ, ಮಾದಾರ, ಅಸ್ಪೃಶ್ಯ, ಕಬ್ಬಲಿಗ, ಕುರುಬ, ಡೋಹರ, ಸಮಗಾರ, ಮುಸ್ಲೀಮ ಮುಂತಾದ ಜಾತಿ - ಮತ - ಪಂಥ - ಪಂಗಡಾದಿಗಳಿಂದ ಬಂದವರು. ಅವರೆಲ್ಲ ತತ್ತ್ವ ಸಾಹಿತ್ಯದ ನೆಲೆಯಲ್ಲಿ ಸಾಮರಸ್ಯದ ಸಂಸ್ಕಾರಗೊಂಡು ಮನುಷ್ಯರಾಗಿ ನಿಂತವರು. ಮಾನವತೆಯ ಗಾಳಿಯನ್ನೆ ಉಸಿರಾಡಿಸುತ್ತಿರುವವರು. ಇವರ ಸಹಜ

ಮತ್ತು ಸಮನ್ವಯದ ಬದುಕೆ ಸಾಮಾಜಿಕ ಸಾಮರಸ್ಯ, ಜನಾಂಗಿಕ ಭಾವೈಕ್ಯ, ಸಕಲ ಜೀವ ಹಿತ ಸಾಧನೆಯ ದೃಷ್ಟಿಕೋನ ಇವುಗಳಿಗೆ ನಿದರ್ಶನವಾಗುತ್ತದೆ. "ತಾವು ಜೀವಿಸುವಂತೆ ಸಕಲ ಜೀವಿಗಳೂ ಜೀವಿಸಬೇಕೆಂಬುದು" ತತ್ತ್ವಪದಕಾರರ ಒಟ್ಟು ಆಶಯ ಮತ್ತು ಅವರ ಸಾಹಿತ್ಯದ ಸಾರ – ಸಾರಾಯ. ಇಂಥವರ ಜೀವನ ಸಾಧನೆ – ಸ್ಮಾರಕಗಳ ಸಂಶೋಧನೆಗಾಗಿ ನಾನು ಬೀದರ ಜಿಲ್ಲೆಯ ಸು. ಆರು ನೂರಕ್ಕೆ ಮೇಲ್ಪಟ್ಟ ಸ್ಥಳಗಳನ್ನು ತಿರುಗಿದ್ದೇನೆ. ಅಲ್ಲಲ್ಲಿನ ಸಂಶೋಧನೆಯ ವಿವರಗಳು ಸಂಗ್ರಹಗೊಂಡು, ಸಂಪುಟಗಳ ರೂಪದಲ್ಲಿ ಈಗ ನಿಮ್ಮ ಕೈಯಲ್ಲಿವೆ.

ಕನ್ನಡ ಭಾಷಾಭಿವೃದ್ಧಿ ಯೋಜನೆ ಆರಂಭಗೊಂಡು, ಅನುದಾನವು ಬಿಡುಗಡೆಗೊಂಡುದು ಆಗಿನ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರ ಕಾಲದಲ್ಲಿ. ಅವರ ಕನ್ನಡ ಕೈಂಕರ್ಯ ಭಾವದ ವ್ಯಕ್ತಿತ್ವಕ್ಕೆ ಶರಣು ಎನ್ನುತ್ತೇನೆ.

ಕನ್ನಡ ತಾಯಿಯ ಈ ಸೇವಾ ಯೋಜನೆಯ ಸಾರಥ್ಯವು ಮುಂದಿನ ದಿನಗಳಲ್ಲಿ ಧಾರಣ ಮಾಡಿದವರು ಸಧ್ಯದ ಮುಖ್ಯಮಂತ್ರಿಗಳಾಗಿರುವ ಸನ್ಮಾನ್ಯ ಶ್ರೀ ಸದಾನಂದಗೌಡರು. ಅವರು ಹಸನ್ಮುಖ ಮನ–ಹೃದಯದಿಂದ ಇಂತಹ ಮಹತ್ವದ ಸಂಶೋಧನೆಗಳಿಗೆ ಬೆನ್ನುಬಲವಾಗಿ ನಿಂತುಕೊಂಡು ಶುಭ ಹಾರೈಸುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಗೌರವದಿಂದ ನಮಿಸುತ್ತೇನೆ.

ಕರ್ನಾಟಕ ಸರ್ಕಾರದ ಸನ್ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿರುವ ಮಾನ್ಯ ಶ್ರೀ ಗೋವಿಂದ ಎಂ. ಕಾರಜೋಳ ಅವರು ಸರಕಾರದ ಆಶಯಗಳನ್ನು ಸಾಕಾರವಾಗಿಸುತ್ತ, ವಿಶ್ವವಿದ್ಯಾಲಯಗಳಲ್ಲಿ ಕನ್ನಡದ ಮಹತ್ವದ ಸಂಶೋಧನ ಕಾರ್ಯಗಳು ನಡೆಯಲು ಆರ್ಥಿಕ ನೆರವು ನೀಡುತ್ತಲಿದ್ದಾರೆ. ಮಾನ್ಯ ಶ್ರೀ ಗೋವಿಂದ ಎಂ. ಕಾರಜೋಳ ಅವರಿಗೆ ಹೃತ್ಪೂರ್ವಕ ಪ್ರಣಾಮಗಳು.

ಸರಕಾರದ ಕಾರ್ಯಯೋಜನೆಗಳನ್ನು ಸಕ್ರೀಯವಾಗಿ ತಲುಪುವಂತೆ ಆಸ್ಥೆವಹಿಸಿ ಕಾರ್ಯ ನಿರ್ವಹಿಸುವವರು ಅದರ ಪ್ರಮುಖ ಅಧಿಕಾರಿಗಳು. ಇಂದು ಅಂತಹ ಸ್ಥಾನದಲ್ಲಿ ಈ ಕಾರ್ಯಯೋಜನೆಗಳಿಗೆ ಸಂಬಂಧಿಸಿದಂತೆ ಸರಕಾರದ ಕಾರ್ಯದರ್ಶಿಗಳಾಗಿರುವ ಶ್ರೀ ಬಿ. ಬಸವರಾಜು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾಗಿರುವ ಶ್ರೀ ಮನು ಬಳಿಗಾರ ಅವರು ಇದ್ದಾರೆ. ಮಾನ್ಯ ಬಸವರಾಜು ಅವರು ತುಂಬು ಮನದಿಂದ ಕನ್ನಡದ ಕಾರ್ಯಗಳಿಗೆ ಬೆಂಬಲಿಸುತ್ತ; ಅದಕ್ಕೆ ಬೇಕಾದ ನೆರವನ್ನು ಸರಕಾರದಿಂದ ಒದಗಿಸಿ ಕೊಡುತ್ತಲಿದ್ದಾರೆ. ಅವರಿಗೆ

ನನ್ನ ಅನಂತ ನಮನಗಳು. ಶ್ರೀ ಮನು ಬಳಿಗಾರ ಅವರು ಅಧಿಕಾರಿಗಳಾಗಿರುವದರೊಂದಿಗೆ ಸಾಹಿತ್ಯಿಕ ವ್ಯಕ್ತಿತ್ವವುಳ್ಳವರೂ ಆಗಿದ್ದಾರೆ. ಕನ್ನಡ ಶಾಸ್ತ್ರೀಯ ಭೂಮಿಕೆಗೆ ಸಾಧಾರವಾಗಿರುವ ಕಾರ್ಯ ಚಟುವಟಿಕೆಗಳಿಗೆ ತಕ್ಷಣವೆ ಸ್ಪಂದಿಸುವ ಮನವುಳ್ಳ ಶ್ರೀ ಮನು ಬಳಿಗಾರ ಅವರಿಗೆ ನಮೋ ಎನ್ನುತ್ತೇನೆ.

ಗುಲಬರ್ಗಾ ವಿಶ್ವವಿದ್ಯಾಲಯದ ಸರ್ವತೋಮುಖ ಪ್ರಗತಿಗಾಗಿ ಮನಃಪೂರ್ವಕ ಕಾರ್ಯನಿರತರಾಗಿರುವ ಕುಲಪತಿಗಳಾದ ಪ್ರೊ. ಈ.ಟಿ.ಪುಟ್ಟಯ್ಯನವರು ಮತ್ತು ಕುಲಸಚಿವರಾಗಿರುವ ಪ್ರೊ. ಎಸ್.ಎಲ್.ಹಿರೇಮಠ ಅವರು ನಮಗೆಲ್ಲ ಪ್ರೋತ್ಸಾಹದಾಯಕ ಶಕ್ತಿಗಳಾಗಿದ್ದಾರೆ.

ಗೌರವನೀಯ ಕುಲಪತಿಗಳಾಗಿರುವ ಪ್ರೊ. ಈ.ಟಿ. ಪುಟ್ಟಯ್ಯನವರು ಕನ್ನಡ ಮನಸ್ಸಿನ ವಿಜ್ಞಾನಿಗಳು. ನಾವು ಕರ್ತವ್ಯಗಳನ್ನು ಮರೆತು ನಿಂತಾಗ ಎಚ್ಚರಿಸುತ್ತಾರೆ. ಅವುಗಳನ್ನು ಸರಿಯಾಗಿ ನಿರ್ವಹಿಸಿದಾಗ ಪ್ರಾಂಜಲ ಮನದಿಂದ ಶ್ಲಾಘಿಸುತ್ತಾರೆ. ಈ ಕಾರ್ಯ ಸಾಧನೆಗಳ ಹಿಂದೆ ಬೆಳಕಾಗಿ ನಿಂತಿರುವ ಪ್ರೊ. ಈ.ಟಿ.ಪುಟ್ಟಯ್ಯನವರಿಗೆ ವಿನೀತ ಭಾವದಿಂದ ವಂದಿಸುತ್ತೇನೆ.

ಮಾನ್ಯ ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರು ಇಂತಹ ಯೋಜನೆಗಳ ಸಂದರ್ಭದಲ್ಲಿ ನಮಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಎಂದೂ ಬೇಸರಿಸಿದವರಲ್ಲ. ನಗುತ್ತಲೇ ಶಾಂತ ಮನದಿಂದ ಈ ಕಾರ್ಯ ಸಾಧನೆಗಳಿಗಾಗಿ ಬೆನ್ನು ಚಪ್ಪರಿಸುತ್ತಿದ್ದಾರೆ. ಮಾನ್ಯ ಕುಲಸಚಿವರಾದ ಪ್ರೊ. ಎಸ್.ಎಲ್.ಹಿರೇಮಠ ಅವರಿಗೂ ನಾನು ಮನಃಪೂರ್ವಕ ನಮಿಸುತ್ತೇನೆ.

ಕನ್ನಡ ಅಧ್ಯಯನ ಸಂಸ್ಥೆಯು ನನ್ನ ಸಂಶೋಧನ–ಅಧ್ಯಯನ ಸಾಧನೆಗಳಿಗೆ ಫಲವತ್ತಾದ ನೆಲವಾಗಿದೆ. ಇದನ್ನು ಹದಗೊಳಿಸಿದವರು ಅಧ್ಯಯನ ಸಂಸ್ಥೆಯ ಹಿರಿಯರೂ, ಮಿತ್ರರೂ, ಹಿತೈಷಿಗಳೂ ಆಗಿರುವ ಸಹೋದ್ಯೋಗಿಗಳು. ಕನ್ನಡ ಅಧ್ಯಯನ ಸಂಸ್ಥೆಯ ಎಲ್ಲ ಬಳಗಕ್ಕೂ ನಾನು ಆತ್ಮೀಯ ಭಾವದಿಂದ ಸ್ಮರಿಸುತ್ತೇನೆ.

ಈ ಸಂಶೋಧನ ಯೋಜನೆಯನ್ನು ಪೂರೈಸಲು ಸಹಾಯಕವಾಗಿರುವ ಆಕರಗಳನ್ನು ರಚಿಸಿ ಕೊಟ್ಟಿರುವ ವಿದ್ವಾಂಸರಿಗೂ, ಯೋಜನೆಗೆ ಪೂರಕವಾದ ಹಲವಾರು ವಿವರಗಳನ್ನು ನೀಡಿರುವ ಎಲ್ಲ ಸಂಪನ್ಮೂಲ ವ್ಯಕ್ತಿಗಳಿಗೂ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಸಂಶೋಧನಯೋಜನೆಯ ಎಲ್ಲ ಸಂಪುಟಗಳನ್ನು ಸರ್ವಾಂಗ ಸುಂದರವಾಗಿಸಲು ಹಲವಾರು ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿ ಸಾಂಸ್ಕೃತಿಕ ಮನದಿಂದ ಸಹಕರಿಸಿದವರು ಪ್ರಿಂಟ್ ಪಾರ್ಕ್ ಮುದ್ರಣಾಲಯದ

ಒಡೆಯರಾದ ಶ್ರೀ ಜಿ.ಬಿ.ಪಾಟೀಲರು. ಅವರಿಗೆ ಈ ಸಂದರ್ಭದಲ್ಲಿ ಮನಃಪೂರ್ವಕ ಕೃತಜ್ಞತೆಗಳು ಸಲ್ಲಿಸಲೇಬೇಕಾಗುತ್ತದೆ.

ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ

ಡಾ. ಎಸ್.ಎಮ್.ಹಿರೇಮಠ
ಪ್ರಾಧ್ಯಾಪಕರು,
ಮೊ: ೯೪೪೮೨೫೧೬೦೦

ಪ್ರಸ್ತಾವನೆ

ವಚನ ವಾಙ್ಮಯ ಸೆಲೆಗೆ ಹನ್ನೆರಡನೆಯ ಶತಮಾನದ ಕಾಲಸಂದರ್ಭವು ಮಾತೃಸ್ಥಾನವಾಗಿರುವಂತೆ, ತತ್ತ್ವಪದ ಸಾಹಿತ್ಯದ ಸೆಲೆಗೂ ಅದೇ ಯುಗಮಾನವೇ ಜನ್ಯಸ್ಥಾನವೆಂದರೆ ತಪ್ಪಾಗಲಾರದು. ಬಸವಾದಿ ಶಿವಶರಣರಲ್ಲಿ ಬಹುಸಂಖ್ಯಾತರು ವಚನಗಳನ್ನು ರಚಿಸಿದಂತೆ, ಕೆಲವರು ಹಾಡುಗಳನ್ನು ರಚಿಸಿದ್ದಾರೆ. ಬಸವಾದಿ ಶಿವಶರಣರು ಅನುಭಾವಿಗಳು. ಆದುದರಿಂದ ಅವರ ಅನುಭಾವದ ಅಭಿವ್ಯಕ್ತಿಗೆ ಮಾಧ್ಯಮವಾಗಿಯೇ ವಚನಗಳು ಹೊರಹೊಮ್ಮಿ ಬಂದಿವೆ. ಹಾಗೆಯೆ ಶರಣರ ಹಾಡುಗಳು ಅನುಭಾವದ ಶಿವರಸವನ್ನೆ ತುಂಬಿಕೊಂಡು ಹೊರಬಂದಿವೆ. ತತ್ತ್ವಪದಗಳು– ಎಂದರೆ ಇನ್ನೊಂದು ಅರ್ಥದಲ್ಲಿ ಅನುಭಾವದ ಹಾಡುಗಳೇ ಆಗುತ್ತವೆ. ಆದುದರಿಂದ ಈ ಹಾಡು ಪ್ರಕಾರದ ಪರಂಪರೆಗೆ ಶ್ರೀಕಾರ ಬರೆದವರು ಬಸವಾದಿ ಶರಣರೆಂದು ಇಟ್ಟುಕೊಳ್ಳಬೇಕು. ಮುಂದೆ ಹದಿನೈದು–ಹದಿನಾರನೆಯ ಶತಮಾನದಲ್ಲಿ ಹಲವಾರು ಸ್ವರವಚನ–ತತ್ತ್ವಪದಕಾರರು ಈ ಪರಂಪರೆಯನ್ನು ಮುಂದುವರೆಸಿದುದು ಕಂಡುಬರುತ್ತದೆ. ನಂತರದಲ್ಲಿ ಉತ್ತರ ಕರ್ನಾಟಕ; ಅದರಲ್ಲೂ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ವಿಪುಲವಾಗಿ ತತ್ತ್ವಪದ ಸಾಹಿತ್ಯವು ಬೆಳೆದುಬಂದಿದೆ. ಇದಕ್ಕೆ ಕಾರಣ ಮುಂದಿನ ದಿನಗಳಲ್ಲಿ ಉಂಟಾದ ಬಸವಾದಿ ಶರಣರ ಅನುಭಾವ ಜೀವನದ ಪ್ರಭಾವ ಪರಿಣಾಮವೇ ಆಗಿದೆ. ಕನ್ನಡ ಸಾಹಿತ್ಯ–ಸಂಸ್ಕೃತಿಗೆ ವಚನ ಸಾಹಿತ್ಯದಂತೆ ತತ್ತ್ವಪದ ಸಾಹಿತ್ಯವೂ ಸಹ ಒಂದು ಮೌಲಿಕ ಕಾಣಿಕೆಯೆ ಆಗಿದೆ.

ತತ್ತ್ವಪದ ಸಾಹಿತ್ಯದ ಬೇರುಗಳು ಹನ್ನೆರಡನೆಯ ಶತಮಾನದ ಅನುಭಾವದ ಒಡಲಿನಲ್ಲಿ ಚಿಗುರಿದ ಪರಿಯನ್ನು ಕಂಡುಕೊಂಡರೂ, ಆ ಬೇರುಗಳು ಹೆಮ್ಮರವಾಗಿ ಬಾಹ್ಯ ಜಗತ್ತಿಗೆ ಗೋಚರವಾದುದು ಕನ್ನಡ ನಾಡಿನ ಹದಿನೈದು, ಹದಿನಾರು, ಹದಿನೇಳು, ಹದಿನೆಂಟು, ಹತ್ತೊಂಬತ್ತು ಮತ್ತು ಇತ್ತೀಚಿನ ಶತಮಾನಗಳಲ್ಲಿ. ಬಹುಕಾಲದವರೆಗೆ ವಿದ್ವಾಂಸ–ಸಂಶೋಧಕರ ನಿರ್ಲಕ್ಷ್ಯಕ್ಕೆ ಒಳಗಾದ ಈ ಸಾಹಿತ್ಯ ಪರಂಪರೆಯು ಇಂದು ಪಂಡಿತ–ಪಾಮರರನ್ನೆಲ್ಲ ತನ್ನತ್ತ ಕರೆಯುತ್ತಲಿದೆ. ಸಂಸ್ಕೃತಿಯ ಶೋಧಕರಿಗಂತೂ ಈ ಸಾಹಿತ್ಯದ ಶೋಧ; ಸಂಗ್ರಹ, ಅಧ್ಯಯನದ ಕಾರ್ಯವು ಅತ್ಯಂತ ಮಹತ್ವದ್ದಾಗಿ ಕಾಣುತ್ತಲಿದೆ. ಹೀಗಾಗಿಯೇ ಅಜ್ಞಾತ ಅಲ್ಪಜ್ಞಾತವಾಗಿದ್ದ ತತ್ತ್ವಪದ ಸಾಹಿತ್ಯವು ಈಗ ಬಹುಮುಖೀ ಆಯಾಮಗಳಲ್ಲಿ ಚಿಂತನೆಗೆ ಒಳಗಾಗಿದೆ;

ಆಗುತ್ತಲಿದೆ. ಶಿಷ್ಟ–ಪರಿಶಿಷ್ಟ ಸಾಂಸ್ಕೃತಿಕ ಪರಂಪರೆಗಳೆರಡರ ಮೌಲೀಕರಣ ಅಥವಾ ಪುನರ್ ಮೌಲೀಕರಣದ ಕಾರ್ಯದಲ್ಲಿ ತತ್ತ್ವಪದಗಳು ಮಹತ್ವದ ಪಾತ್ರವನ್ನು ನಿರ್ವಹಿಸಬಲ್ಲವುಗಳಾಗಿವೆ. ತತ್ತ್ವಪದಕಾರರು ತಮಗೆ ಅರಿವಿಲ್ಲದೆಯೇ ಅನುಭಾವದ ಚಳುವಳಿಯೊಂದನ್ನು ಹುಟ್ಟುಹಾಕಿದ್ದಾರೆ; ಅದನ್ನು ಜೀವಂತವಾಗಿ ತಮ್ಮ ರಚನೆಯ ಜೀವಂತಿಕೆಯ ಮೂಲಕ ಮುನ್ನೆಡೆಸಿಕೊಂಡು ನಡೆದಿದ್ದಾರೆ.

ತತ್ತ್ವಪದಗಳ ಸ್ವರೂಪವೇನು? – ಈ ಪ್ರಶ್ನೆಯನ್ನು ಕುರಿತಂತೆ ಕನ್ನಡದ ಹಲವಾರು ವಿದ್ವಾಂಸರು–ಸಂಶೋಧಕರು ತಮ್ಮ ತಮ್ಮ ವ್ಯಾಖ್ಯೆಗಳನ್ನು ನೀಡಿದ್ದಾರೆ. ಬಸವಾದಿ ಶರಣರ ವಚನಗಳ ಸ್ವರೂಪ ವಿವೇಚನೆಯಂತೆಯೇ, ತತ್ತ್ವಪದ ಸ್ವರೂಪದ ವಿವೇಚನೆಯೂ ಇದೆಯೆಂದು ನಾನು ಭಾವಿಸುತ್ತೇನೆ. ಶರಣರು ಯಾವುದೇ ಶಾಸ್ತ್ರೀಯ ನಿಯಮಗಳನ್ನು ಎದುರಿನಲ್ಲಿ ಇಟ್ಟುಕೊಂಡು ವಚನಗಳನ್ನು ಬರೆಯಲಿಲ್ಲ. ಹಾಗೆಯೇ ತತ್ತ್ವಪದಕಾರರು ಯಾವುದೇ ಸಾಹಿತ್ಯಿಕ ರಚನೆಯ ನಿಯಮಗಳನ್ನು ಅಧ್ಯಯನ ಮಾಡಿದವರಲ್ಲ; ಅವುಗಳ ಅರಿವೂ ಅವರಿಗಿಲ್ಲ. ಶರಣರು ವಚನಗಳನ್ನು ತಮಗೆ 'ಒಲಿದಂತೆ ಹಾಡಿದರು'. ತತ್ತ್ವಪದಕಾರರು ಇದಕ್ಕೆ ಹೊರತಾದವರಲ್ಲ. ಅವರ ಆಧ್ಯಾತ್ಮದ ಮನಸ್ಸು ಒಲಿದಂತೆ ಹೃದಯದಲ್ಲಿ ಮೂಡಿದ ಹಾಡನ್ನು ದನಿಯೆತ್ತಿ ಹಾಡಿದರು. 'ತತ್ತ್ವಪದ' ಅಥವಾ 'ತತ್ತ್ವದ ಹಾಡು' ಎಂಬ ರಚನೆಯು ಮುಖ್ಯವಾಗಿ ಗೇಯ ಪ್ರಧಾನವಾದುದು.

ತತ್ತ್ವಪದಕಾರರು ತಮ್ಮ ಅನುಭಾವದ–ಆಧ್ಯಾತ್ಮಿಕ ವಿಚಾರಗಳನ್ನು ಮಾತಾಗಿ, ಕತೆಯಾಗಿ ಕಟ್ಟಿಕೊಡದೆ; ಹಾಡಾಗಿ ಹಾಡಿದರು. ಹೀಗಾಗಿ ಅವುಗಳಿಗೆ ಅವುಗಳದ್ದೆ ಆದ ಒಂದು ಲಯವಿದೆ; ಶ್ರುತಿಯಿದೆ. ಆದುದರಿಂದ ಅವುಗಳಲ್ಲಿ ಕಿವಿಗೆ ಇಂಪನ್ನು ನೀಡುವ ಶಕ್ತಿಯು ತನ್ನ ತಾನೆ ಅಡಕವಾಗಿದೆ. ಹಾಡುವ ಕಾರಣದಿಂದಲೇ ಕೆಲವರು ತತ್ತ್ವಪದಗಳನ್ನು 'ಸ್ವರವಚನ'ವೆಂದು ಗುರುತಿಸಿದರು. 'ಕೈವಲ್ಯದ ಹಾಡುಗಳು' ಎಂಬ ಹೆಸರಿನಿಂದಲೂ ತತ್ತ್ವಪದಗಳು ಮೂಡಿ ಬಂದುದುಂಟು. ತತ್ತ್ವಪದಕಾರರು ತಾವು ಬರೆದ ಅಥವಾ ಒರೆದ ಹಾಡುಗಳ ಕೊನೆಯಲ್ಲಿ ತಮ್ಮದೇ ಆದ ಮುದ್ರಿಕೆಯೊಂದನ್ನು ಇರಿಸಿಕೊಂಡಿದ್ದಾರೆ. ಈ ಮುದ್ರಿಕೆಯು ವಚನಕಾರರ ವಚನಗಳಿಗೆ ಕೊನೆಯಲ್ಲಿ ಬರುವ 'ಅಂಕಿತ'ದಂತೆ ಪರಿಭಾವಿಸಿಕೊಳ್ಳಹುದು. ವಚನಗಳು 'ಅಂಕಿತ'ಗೊಂಡು ರಚನೆಯಾಗಿರುವಂತೆ; ತತ್ತ್ವಪದಗಳು ಮುದ್ರೆಗೊಂಡು ರಚಿತವಾಗಿ ಹಾಡುವುದಕ್ಕೆ ಬರುವಂತಿವೆ. ವಚನಗಳನ್ನು ಸ್ವರಗತಿಗೆ ಅಳವಡಿಸಿ ಹಾಡುತ್ತಿರುವುದನ್ನು ನೋಡಬಹುದು. ಈ ಕಾರಣದಿಂದಲೇ ಹಾಡಲು ಬರುವ ವಚನಗಳಂತೆ ಹಾಡಲು ಬರುವ ತತ್ತ್ವಪದಗಳಿಗೆ 'ಸ್ವರವಚನ'ಗಳೆಂದು ಕರೆದಿರುವ ಸಂಭವನೀಯವಿದೆ. ಇದನ್ನು ಇರಿಸಿಕೊಂಡಾಗ ವೀರಶೈವ ಸಂಸ್ಕೃತಿಯ

ಪರಿವೇಷದಲ್ಲಿಯೇ ಸ್ವರವಚನಗಳ ರಚನೆ ನಡೆಯಿತೆಂದು ಹೇಳಬಹುದೇನೋ. ಈ ಕಾರಣದಿಂದಲೇ ಕೆಲವರು ವೀರಶೈವ ಸಂಸ್ಕೃತಿಯ ಪ್ರಭಾವದಲ್ಲಿ ರಚನೆಗೊಂಡವುಗಳು ಸ್ವರವಚನಗಳಾದರೆ, ಅನ್ಯ ಸಾಂಸ್ಕೃತಿಕ ಪರಿಸರದಲ್ಲಿ ರಚನೆಗೊಂಡು ತಾತ್ತ್ವಿಕ ಹಾಡುಗಳನ್ನು ತತ್ತ್ವಪದಗಳೆಂದು ಕರೆದಿದ್ದಾರೆ. ಏನೇ ಇರಲಿ ಸ್ವರ ವಚನ–ತತ್ತ್ವಪದಗಳ ಸಾರ ಸಾರಾಯವು ಹೆಚ್ಚಾಗಿ ಆಧ್ಯಾತ್ಮಿಕ ಚಿಂತನೆಯೇ ಆಗಿದೆ. ಕೈವಲ್ಯ ಪದಗಳು ಆಧ್ಯಾತ್ಮ ಪರವಾದವುಗಳು. ಕೈವಲ್ಯವನ್ನು ಕುರಿತು ಅವು ಹಾಡುತ್ತವೆ. ಮನುಷ್ಯನಿಗೆ ಮೋಕ್ಷದ ಪಥವನ್ನು ದರ್ಶನ ಮಾಡಿಸಿಕೊಡುವ ದಿಶೆಯಲ್ಲಿ ಈ ಪದ್ಯಗಳು ಸಾಧಕನಿಗೆ ಬೋಧೆಯಂತೆ ಕೇಳುತ್ತವೆ. ಕೈವಲ್ಯ ಸಾಧನೆಗೆ ಬೇಕಾದ ಆಚರಣೆಗಳನ್ನು ಕೈವಲ್ಯದ ಹಾಡುಗಳು ಮನುಷ್ಯನಿಗೆ ತಿಳಿಸುತ್ತವೆ. ಒಟ್ಟಾರೆ ಸಾಧಕಜೀವನ ಆತ್ಮದ ಧ್ವನಿಯಂತೆಯೆ ಈ ಹಾಡುಗಳು ಇರುತ್ತವೆ. ಹೀಗಾಗಿ ಕೈವಲ್ಯದ ಹಾಡು ಮತ್ತು ತತ್ತ್ವಪದಗಳಲ್ಲಿ ವ್ಯತ್ಯಾಸಗಳನ್ನು ಗುರುತಿಸುವುದು ಸರಿಯಾದುದಲ್ಲವೆಂದೇ ನನ್ನ ತಿಳಿಕೆ. ಜನಪದರು ಭಜನೆಯ ಮೂಲಕ ತಮ್ಮ ಆರಾಧ್ಯ ದೇವರನ್ನು ಭಜಿಸುತ್ತ ಬಂದಿದ್ದಾರೆ. ಭಜನೆಯ ಕ್ರಿಯೆಯಲ್ಲಿ ಅವರು ಭಜನೆಯ ಪದಗಳನ್ನು ಹಾಡುತ್ತಾರೆ. ಎಲ್ಲ ಭಜನೆಯ ಪದಗಳು ಕೈವಲ್ಯ ಅಥವಾ ತತ್ತ್ವಪದಗಳಾಗುವುದಿಲ್ಲ. ಏಕೆಂದರೆ ಭಜನೆಯ ಪದಗಳು ಕೆಲವೊಮ್ಮೆ ಸ್ತುತಿ–ಸ್ತೋತ್ರ ಪರವಾಗಿದ್ದು ಆಧ್ಯಾತ್ಮಿಕ ಪರವಾದ ಚಿಂತನೆಯು ಅಲ್ಲಿ ಕಾಣಲಾರದು. ಆದರೆ ಭಜನೆಯಲ್ಲಿ ಹಲವಾರು ತತ್ತ್ವಪದಗಳೂ ಸಹ ಹಾಡಲ್ಪಡುವುದು ಸತ್ಯ. ತತ್ತ್ವಭರಿತವಾದ 'ಪದ'ವು 'ತತ್ತ್ವಪದ'ವೆಂಬುದು ಸ್ಥೂಲವಾದ ಒಂದು ವ್ಯಾಖ್ಯೆಯಾದರೂ, ಇಲ್ಲಿರುವ 'ತತ್ತ್ವ'ದ ವಿಶೇಷ ಅರ್ಥವು 'ತತ್ತ್ವಪದ' ಸಾಹಿತ್ಯ ಪ್ರಕಾರಕ್ಕೆ ಅದರದ್ದೇ ಆದ ವಿಶಿಷ್ಟ ಸ್ಥಾನವೊಂದನ್ನು ದೊರಕಿಸಿಕೊಡುತ್ತದೆ. ಸಾಮಾನ್ಯ ಅರ್ಥದಲ್ಲಿ 'ತತ್ತ್ವ'ವೆಂದರೆ ಯಾವುದೋ ಒಂದು ನಿಯಮ; ಕಟ್ಟಳೆ ಬಂಧ – ಎಂದಾಗಬಹುದು. ಆದರೆ ಆಧ್ಯಾತ್ಮಿಕ ಪರಿಭಾಷೆಯಲ್ಲಿ 'ತತ್ವ'ವೆಂಬ ಶಬ್ದವನ್ನು ಆತ್ಮ ಮತ್ತು ಪರಮಾತ್ಮಗಳಿಗೆ ಪರ್ಯಾಯವಾಗಿ ಪ್ರಯೋಗಿಸಲಾಗುತ್ತದೆ. ಯಾವ ಹಾಡುಗಳು ಆತ್ಮದ ವಿಕಾಸ; ಉನ್ನತಿಗೆ, ಮತ್ತು ಪರಮಾತ್ಮ ಸ್ಥಲದ ಸಿದ್ಧಿಗೆ ಹಾದಿಯನ್ನು ತೋರಿಸಬಲ್ಲವೋ, ಅಂತಹ ಹಾಡುಗಳನ್ನು 'ತತ್ತ್ವಪದ'ಗಳೆಂದು ಕರೆಯಬಹುದಾಗಿದೆ. ಜೀವನಕ್ಕೆ ಧಾರಕವಾಗಬಲ್ಲ ನೀತಿಯನ್ನು ಒಳಗೊಂಡಿರುವ ಹಾಡುಗಳೂ ಈ ಪರಿಧಿಗೆ ಸೇರಿಸಬಹುದು.

ತತ್ತ್ವಪದ ಸಾಹಿತ್ಯ ಪರಂಪರೆ ಅತ್ಯಂತ ನಿಚ್ಚಳಗೊಳ್ಳುತ್ತ ನಡೆದಂತೆ, ಬಹುಶ; ತತ್ತ್ವಪದಕಾರರೆ ತಮ್ಮ ಹಾಡುಗಳಿಗೆ ಒಂದು ಸ್ವರೂಪಸಂಹಿತೆಯನ್ನು

ನಿರ್ಮಿಸಿಕೊಂಡಂತೆ ಕಾಣುತ್ತದೆ. ಇಂದು ಯಾವುದೇ ತತ್ತ್ವಪದಕಾರನ ತತ್ತ್ವಪದವು ಮುಂದಿನ ಈ ಸಾಮಾನ್ಯ ಲಕ್ಷಣಗಳನ್ನು ಒಳಗೊಂಡಿರುವುದನ್ನು ಕಾಣಬಹುದು:

i) ಆರಂಭದಲ್ಲಿ 'ಪಲ್ಲವಿ' ಇರುವುದು.

ii) ಪಲ್ಲವಿಯೊಂದಿಗೆ 'ಅನುಪಲ್ಲವಿ' ಎಂಬ ವಾಚಕವಿರುವುದು.

iii) ಒಟ್ಟು ಹಾಡಿನಲ್ಲಿ ಮೂರು, ಐದು, ಏಳು, ಒಂಬತ್ತು ಅಥವಾ ಹನ್ನೊಂದು ನುಡಿಗಳಿರುವುದು ಸಾಮಾನ್ಯ. ಇದಕ್ಕೆ ಹೊರತಾದ ನುಡಿಯ ಸಂಖ್ಯೆಯೂ ಕಾಣಬಹುದು, ಬಹು ಸಂಖ್ಯಾತ ಹಾಡುಗಳಲ್ಲಿ ನುಡಿಯ ಚರಣಗಳು ನಾಲ್ಕರ ಸಂಖ್ಯೆಯಲ್ಲಿಯೇ ಇರುತ್ತವೆ.

iv) ಹಾಡಿನ ಕೊನೆಯ ನುಡಿಯಲ್ಲಿ ಕವಿಯು ಇಟ್ಟುಕೊಂಡಿರುವ ಅಂಕಿತವು ಬರುತ್ತದೆ.

v) ತತ್ತ್ವಪದಗಳು ಬಹು ದೀರ್ಘವಾಗಿರುವುದು ಕಡಿಮೆ.

vi) ಸಂಗೀತಗಾರರು ತತ್ತ್ವಪದಗಳಿಗೆ ರಾಗ-ತಾಳಗಳನ್ನು ಅಳವಡಿಸಿ ಹಾಡುತ್ತಾರೆ. ಅದರಂತೆ ಅವುಗಳನ್ನು ಪ್ರಕಟಿಸಿರುತ್ತಾರೆ.

vii) ಕೆಲವು ಸಮಯದಲ್ಲಿ ತತ್ತ್ವಪದಕಾರನಿಗೆ ಸಂಗೀತ ಜ್ಞಾನವಿದ್ದರೆ, ತಾನು ರಚಿಸುವ ಹಾಡುಗಳನ್ನು ತಾಳ-ರಾಗಬದ್ಧವಾಗಿಯೇ ರಚಿಸುತ್ತಾನೆ.

ಇವೆಲ್ಲ ತತ್ತ್ವಪದ ಸಾಹಿತ್ಯಕ್ಕೆ ಹೊಂದಿಸಬಹುದಾದ ಸ್ಥೂಲವಾದ ರಾಚನಿಕ ನೇಮಗಳೆಂದು ಭಾವಿಸಬೇಕು. ವಚನ ಸಾಹಿತ್ಯ ಪರಂಪರೆಯಲ್ಲಿ ಭಿನ್ನ-ಭಿನ್ನ ನೆಲೆಯಿಂದ ಬಂದ ಅನುಭಾವಿಗಳೆಲ್ಲ ಶರಣರಾಗಿ ವಚನಗಳನ್ನು ರಚನೆ ಮಾಡಿದರು. ಅದರಂತೆ ತತ್ತ್ವಪದಕಾರರ ಆಶ್ರಮಗಳು ಹತ್ತು- ಹಲವಾರು. ಗುರು ಮನೆಯಿಂದ ಮೊದಲಗೊಂಡು, ಗುಡಿಸಲಿನವರೆಗೂ ಆ ವ್ಯಾಪ್ತಿಯು ಬೆಳೆಯುತ್ತದೆ. ಅಸಂಖ್ಯಾತ ತತ್ತ್ವಪದಕಾರರು ತಮಗೆ ಹಿಂದಿದ್ದ ಶರಣರ ಪರಂಪರೆಯ ಧೋರಣೆಗಳನ್ನು ಅಲ್ಲಲ್ಲಿ ಅನುಕರಿಸುವಂತೆ ಕಂಡರೂ, ಅವರು ತಮ್ಮದೇ ಆದ ವಿನೂತನ ಹಾದಿಯೊಂದು ರೂಪಿಸಿಕೊಂಡರು. ಅದುವೆ "ತತ್ತ್ವಪದ"ದ ಹಾದಿ. ಜನಸಾಮಾನ್ಯರೆಲ್ಲ ಆಧ್ಯಾತ್ಮ ಸಾಧಕರಾಗಿ, ಅನುಭಾವಿಗಳಾಗಿ, ಕವಿಗಳಾಗಿ ಹಾಡಿದ ಹಾದಿ. ತನ್ಮೂಲಕ ತಮ್ಮ ಗುರುತ್ವವನ್ನೂ, ತಮಗೆ ಬೇಕಾಗಿರುವ ದೈವತ್ವದ ನೆಲೆಯನ್ನೂ ಸ್ವತಃ ರೂಪಿಸಿಕೊಂಡರು. ತತ್ತ್ವಪದಕಾರರಲ್ಲಿ ಬಹುಸಂಖ್ಯಾತರು ಸಾಮಾನ್ಯ ನೆಲೆಯವರು; ಸಮಾಜದ ಅತ್ಯಂತ ಕೆಳಸ್ತರದಿಂದ ಬಂದವರು ಅಲ್ಲಿ ಹೆಚ್ಚಿನವರು.

ಹೀಗಿರುವಾಗ ಅವರು ಮಾರ್ಗ ಯಾವುದು? ದೇಶಿ ಯಾವುದು? ಎಂಬಂತಹ ಕಾವ್ಯಮೀಮಾಂಸೆಯ ಚರ್ಚೆಗಳಿಗೆ ತಮ್ಮನ್ನು ಒಡ್ಡಿಕೊಳ್ಳಲು ಹೋಗಲಿಲ್ಲ. ಅದರ ಗೊಡವೆಯೂ ಅವರಿಗೆ ಬೇಕಾಗಿರಲಿಲ್ಲ. ತಾವು ಬದುಕಿದ್ದ ಮಣ್ಣಿನ ಸತ್ವವನ್ನೇ ಮೈಗೊಂಡು; ಅದರ ಸಾರವನ್ನೇ ತಮ್ಮ ರಚನೆಗಳಲ್ಲಿ ತುಂಬಿದರು; ಹೊರ ಹೊಮ್ಮಿಸಿದರು. ಹಳೆಯ ತತ್ತ್ವಪದಕಾರರನ್ನೇ 'ತದ್‌ವತ್' ಆಗಿ ಅನುಕರಿಸುವ ಮುಲಾಜೂ ಅವರಲ್ಲಿ ಕಾಣುವುದಿಲ್ಲ. ಅವರ ಹಾಡುಗಳನ್ನು ನೋಡಿದರೆ ತಮ್ಮ ಸಮಕಾಲೀನ ಸಂದರ್ಭಕ್ಕೆ ತಟ್ಟುವ ಮುಟ್ಟುವ ತಹತಹಿಕೆ ಎದ್ದು ಕಾಣುತ್ತದೆ. ಸಮಕಾಲೀನ ಸಂದರ್ಭದ ಎಷ್ಟೋ ವಸ್ತು-ವಿಷಯ-ಆಕರಾದಿಗಳು ತತ್ತ್ವಪದಕಾರರ ಹಾಡುಗಳ ತಾತ್ವಿಕ ಚಿಂತನೆಗೆ ಪ್ರತಿಮೆ-ರೂಪಕಗಳಾಗಿ ನಿಂತುಕೊಳ್ಳುತ್ತವೆ.

ತಮ್ಮ ನಾಲಗೆಗೆ ದತ್ತವಾದ ಭಾಷೆಯನ್ನು ಬಳಕೆ ಮಾಡುವಲ್ಲಿ ತತ್ತ್ವಪದಕಾರರು ಎಂದೂ ಹಿಂದೆ-ಮುಂದೆ ನೋಡುವುದಿಲ್ಲ. ಅವರಿಗೆ ಶೀಲ-ಅಶ್ಲೀಲವೆಂಬ ಭೇದವು ಕಾಣುವುದೇ ಇಲ್ಲ. ಹೈದರಾಬಾದು ಕರ್ನಾಟಕ ಪ್ರದೇಶದ ಭಾಗಗಳಾಗಿರುವ ಬೀದರ, ಕಲಬುರ್ಗಿ, ರಾಯಚೂರು, ಕೊಪ್ಪಳ ಜಿಲ್ಲೆಯಲ್ಲಿನ ತತ್ತ್ವಪದಕಾರರ ಹಾಡುಗಳು ಬಹು ಭಾಷಾ ಪದಗಳಿಂದ ಕೆಲವೊಮ್ಮೆ ಕೂಡಿಕೊಂಡು ಹೊರಬಂದಿವೆ. ಉರ್ದು, ಮರಾಠಿ, ತೆಲಗು ಮುಂತಾದ ಶಬ್ದಗಳು ಕವಿಗಳು ತಮಗೆ ದಕ್ಕಿದಂತೆ ಬಳಸಿಕೊಂಡಿರುವುದುಂಟು. ಈ ಕಾರಣದಿಂದಲೇ ಕೆಲವರು "ತತ್ತ್ವಪದ ಸಾಹಿತ್ಯವೆಂದರೆ-ಭಾಷೆ ಸಂಸ್ಕೃತಿಯ ಸಂಕರದಿಂದ ಜನಿಸಿದ ಹಾಡುಪ್ರಕಾರವೆಂದು" ತಿಳಿದಿರುವುದುಂಟು. ಅವರು ಭಾಷೆಯನ್ನು ಮುಕ್ತವಾಗಿ ಬಳಸಿದ್ದಾರೆ; ಶಕ್ತವಾಗಿ ಬಳಸಿದ್ದಾರೆ. ತತ್ತ್ವಪದ ಸಾಹಿತ್ಯದಲ್ಲಿ ಗ್ರಾಮ್ಯದೊಂದಿಗೆ ಶಿಷ್ಟಭಾಷೆಯೂ ಬಳಕೆಯಾಗದೆ ಇಲ್ಲ. ಆದರೆ ಗ್ರಾಮ್ಯ ಭಾಷೆಯ ಯಜಮಾನಿಕೆಯಲ್ಲಿ ಅದು ಸೇವಕನಂತೆ ಕಾಣುತ್ತದೆಂಬುದು ಸತ್ಯದ ಮಾತು.

ಹಿಂದಿನ ಹಲವಾರು ಪಂಡಿತ-ಸಂಶೋಧಕರು ತತ್ತ್ವಪದಕಾರರನ್ನು ಕೇವಲ ಮೇಲು ವರ್ಗದವರಲ್ಲೇ ಹುಡುಕಾಡಿ; ತಮ್ಮ ಕಾಲ ಬಳಿಯಲ್ಲೇ ಇರುವ ತತ್ತ್ವಪದ ಸಾಹಿತ್ಯದ ಅಮೂಲ್ಯ ನಿಧಿಯನ್ನು ಕಳೆದುಕೊಂಡು ಬಿಟ್ಟಿದ್ದಾರೆ. ಅದನ್ನು ಚರಿತ್ರೆಯಲ್ಲಿ ದಾಖಲಿಸದೆ ಬಿಟ್ಟು ಅಪಚಾರ ಮಾಡಿದ್ದಾರೆ. ಸಂತರಾಮ ಮಹಾರಾಜ; ಕಲ್ಲಪ್ಪ ಮಹಾರಾಜ ಎಂಬ ಹೆಸರುಗಳು ಕಿವಿಯ ಮೇಲೆ ಬಿದ್ದೊಡನೆ ನಮ್ಮ ಲಕ್ಷ್ಯವು ಯಾವ ಕಡೆಗೆ ಹರಿಯುತ್ತದೆ? ಪೂರ್ವಾಶ್ರಮದಲ್ಲಿ ಇವರೆಲ್ಲ ವೀರಶೈವೇತರರು. ಅಸ್ಪೃಶ್ಯರು. ಅನ್ಯ ಪಂಥದವರೊಂದಿಗೆ ವಾಗ್ವಾದ ನಡೆಯಿಸಿ ಶಿವಪಾರಮ್ಯವನ್ನು ಸ್ಥಾಪಿಸಬಲ್ಲ ಸಾಮರ್ಥ್ಯವುಳ್ಳವರು. ಏಕದೇವೋಪಾಸನೆಯೊಂದಿಗೆ ಬಹು ದೇವತಾರ್ಚನೆಯ ಕ್ರಮವನ್ನೂ ಒಪ್ಪಿಕೊಂಡವರು. ತಮಗೆ ತಾವು ಗುರುವಾಗಿ;

ಗುರುತ್ವದ ನೆಲೆಗೆ ಮಹತ್ವ ನೀಡುತ್ತ; ಅನ್ಯರಿಗೆ ಗುರುವಾಗಬಲ್ಲ; ಆಧ್ಯಾತ್ಮದ ಮಹಾರಾಜರಾಗಬಲ್ಲ ಸಾಮರ್ಥ್ಯವನ್ನು ಸಿದ್ಧಿಸಿಕೊಂಡವರು. ಅವರು ಸಂತರೂ ಆಗಬಲ್ಲರು; ಶರಣರೂ ಆಗಬಲ್ಲರು; ಮಹಾರಾಜರೂ ಆಗಬಲ್ಲರು; ದಾಸರೂ ಆಗಬಲ್ಲರು. ಹೀಗೆ ಹತ್ತು ಹಲವು ಆಯಾಮಗಳಲ್ಲಿ ತಮ್ಮ ಸಾಧನೆಯನ್ನು ತೋರುತ್ತ; ಆಧ್ಯಾತ್ಮ ನಾಯಕರಾಗಿ ನಿಂತುಕೊಂಡಿದ್ದಾರೆ ಕೆಳವರ್ಗದ ತತ್ತ್ವಪದಕಾರರು. ಅವರು ತಮ್ಮ ನೆಲೆಯಲ್ಲಿಯೆ ಬಂಡವಾಳಶಾಹಿ-ವಸಾಹತುಶಾಹಿಗಳನ್ನು ಸದ್ದಿಲ್ಲದೆ ವಿರೋಧಿಸಿದಂತೆ ಕಾಣುತ್ತದೆ. ನಾಡಿನಲ್ಲಿರುವ ಗಿಳಿಗೆ ಪಂಜರದ ಬಂಧನ; ಹೊತ್ತು ಹೊತ್ತಿಗೆ ಕೈ ತುತ್ತನ್ನು ಇಕ್ಕುವ ಮಾಲಿಕನ ಕೈಯ್ಯ ಹಂಗು, ದೇಹ ಉಪಚಾರದ ಆರೈಕೆ ಇವೆಲ್ಲ ಬೇಕಾದಾವು. ಕಾಡಿನ ಕೋಗಿಲೆಗೆ ಇವು ಯಾವುದರ ಮುಲಾಜೂ ಇರಲಾರದು. ನಿಸರ್ಗದ ಆಶ್ರಯದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತ; ಅಲ್ಲಿ ಸಿಕ್ಕದ್ದನ್ನು ತಿಂದು, ಸಂತೃಪ್ತಿಯಿಂದ ಹಾಡುತ್ತಿರುತ್ತದೆ. ಅದರಂತೆ ಈ ತತ್ತ್ವಪದಕಾರರು.

ತತ್ತ್ವಪದ ಸಾಹಿತ್ಯವು ನಿಜವಾದ ಭಾವೈಕ್ಯದ ಭಂಡಾರ. ಎಷ್ಟೋ ಮುಸ್ಲೀಮ ತತ್ತ್ವಪದಕಾರರು ವೀರಶೈವ ಸಂಸ್ಕೃತಿಯ ದೀಕ್ಷೆಯನ್ನು ಧರಿಸಿ; ವೀರಶೈವ ತತ್ತ್ವ-ಸಿದ್ಧಾಂತ ಕುರಿತು ಹಾಡುಗಳನ್ನು ರಚಿಸಿದ್ದಾರೆ. ಹಾಗೆಯೇ ಹಿಂದೂ--ವೀರಶೈವ ತತ್ತ್ವಪದಕಾರರು ಮುಸ್ಲೀಂ ಸಂತರಲ್ಲಿ ಭಕ್ತಿಯುಳ್ಳವರಾಗಿ, ಅವರ ಬಗೆಗೆ ಸ್ತುತಿ-ಸ್ತೋತ್ರ ಪರವಾದ ಹಾಡುಗಳನ್ನು ಬರೆದಿರುವರು. ತತ್ತ್ವಪದಕಾರರಲ್ಲಿ ಎಲ್ಲ ಜಾತಿ-ಪಂಥ-ಪಂಗಡಗಳ ಕವಿಗಳಿರುವುದನ್ನು ಕಾಣಬಹುದು. ಅವರು ಎಂದೂ ಭೇದ-ಭಾವವನ್ನು ಮುಂದೊಡ್ಡಿಕೊಂಡು ಬದುಕಲಿಲ್ಲ; ಎಲ್ಲರೊಂದಿಗೆ ಬೆರೆತು; ಎಲ್ಲ ದೇವರನ್ನೂ ಆರಾಧಿಸುತ್ತ; ಬಹು ಸಂಸ್ಕೃತಿಯನ್ನು ಮನ್ನಿಸುತ್ತ ಸಾಮರಸ್ಯದ ಜೀವನ ಸಾಗಿಸುತ್ತಿದ್ದಾರೆ. ತತ್ತ್ವಪಕಾರರ ಸಾಹಿತ್ಯಿಕ ಚಳುವಳಿಯು ನಿಜವಾದ ಅರ್ಥದಲ್ಲಿ ಭಾವೈಕ್ಯದ ಸಾಂಸ್ಕೃತಿಕ ಚಳುವಳಿಯಾಗಿದೆ.

ತತ್ತ್ವಪದಕಾರರು ತಮ್ಮ ಸಾಧನೆಗಾಗಿ ಒಬ್ಬ ದೇವರನ್ನು ನಂಬಿರಬಹುದು; ಒಂದು ಧರ್ಮದ ತತ್ತ್ವಾಚರಣೆಯಲ್ಲಿ ತೊಡಗಿರಬಹುದು. ಆದರೆ ಅವರು ತಾವು ನಂಬಿದ ದೇವರು-ಧರ್ಮಗಳನ್ನು ಎಂದೂ ಸಂಘರ್ಷದ ಸಾಧನೆಗಳಾಗಿ ಮಾಡಿಕೊಳ್ಳಲಾರರು. ಶಿವ, ಅಲ್ಲಾ, ಬುದ್ಧ, ಏಸು, ಬಸವ, ಪೈಗಂಬರ ಇವರೆಲ್ಲ ಅವರ ತಾತ್ವಿಕ ಅನುಭಾವದ ರೂಪಕದಲ್ಲಿ ಐಕ್ಯರಾಗುತ್ತಾರೆ. ಆಗ ಅವರಲ್ಲಿ ಎದ್ದು ಕಾಣುವುದು ತಾತ್ವಿಕತೆಯ ಮಿಡಿತವೆ ಹೊರತು, ವಿರಸದ ಬಡಿತವಂತೂ ಅಲ್ಲವೆ ಅಲ್ಲ. ಹೀಗಾಗಿಯೇ ಮುಸ್ಲೀಂ ತತ್ತ್ವಪದಕಾರರು ಬಸವಾದಿ ಶರಣರ ಉತ್ಸವದಲ್ಲಿ ಭಾಗವಹಿಸುತ್ತಾರೆ. ಹಿಂದೂಗಳ ಹಬ್ಬ ಹರದಿನಗಳಲ್ಲಿ ಸಂಭ್ರಮದಿಂದ ಭಾಗವಹಿಸಿ

ಹರುಷದಾಳುತ್ತಾರೆ. ಹಿಂದೂಗಳಾದ ಕವಿಗಳು ಮೋಹರಂ ಹಾಡುಗಳನ್ನು ರಚಿಸಿ; ಅಲಾವಿ ಪೀರನನ್ನು ಹಿಡಿದು ಕುಣಿಯುತ್ತಾರೆ. ತತ್ತ್ವಪದಕಾರರು ದೇವರು-ಧರ್ಮದ ಮೇಲ್ಮೆಯನ್ನು ಎತ್ತಿ ಹಿಡಿದು ಸಾರಲು ಹೊರಟ ಪ್ರತಿಪಾದಕರಲ್ಲ. ಅವರಿಗೆ ಎಲ್ಲವೂ ಅಷ್ಟೆ; ಎಲ್ಲರೂ ಅಷ್ಟೆ. ಅವರು ಎಲ್ಲವನ್ನೂ ತಮ್ಮ ಸಾಧನೆಗೆ 'ಬೋಧ'ವೆಂದು ಭಾವಿಸುತ್ತಾರೆ. ಆದುದರಿಂದ ತತ್ತ್ವಪದಕಾರರ ಹಾದಿಯೆಂದರೆ "ಬೋಧಪಥ"ವೆಂದು ಹೇಳಬಹುದು.

ತತ್ತ್ವಪದಕಾರರು 'ಗುರು'ವಿಗೆ ಮಹತ್ವದ ಸ್ಥಾನ ನೀಡುತ್ತಾರೆ. ಗುರು ಮುಖೇನ ಅವರು ತತ್ತ್ವಪದ ರಚನೆಯ ರಹಸ್ಯವನ್ನು ತಿಳಿದುಕೊಳ್ಳುತ್ತಾರೆ. ಹೀಗೆ ಗುರುವಿನ ಮೂಲಕ ಹಾಡಿನ ರಚನೆ ಕಲಿತ ಗುರುಪುತ್ರರಾದ ತತ್ತ್ವಪದಕಾರರು ಗುರುವಿನ ಹೆಸರನ್ನೇ ತಮ್ಮ ಹಾಡುಗಳಿಗೆ ಅಂಕಿತವಾಗಿಟ್ಟುಕೊಳ್ಳುತ್ತಾರೆ. ಗುರು ಇಲ್ಲದೆ; ಸ್ವಯಂ ಗುರುವಾಗಿ ನಿಂತು ಹಾಡುಗಳನ್ನು ರಚಿಸುವವರ ಸಂಖ್ಯೆ ಕಡಿಮೆ. ಅಂಥವರಿಗೆ ಅವರಲ್ಲಿನ ಅರಿವೆ ಗುರುವಾಗಿ ಬೋಧೆ ನೀಡುತ್ತದೆಂದು ತಿಳಿಯಬೇಕು. ಗುರುವಿನ ಆಯ್ಕೆಯಲ್ಲೂ ಅವರಿಗೆ ತರತಮದ ಭಾವನೆಯಿಲ್ಲ. ಮೇಲಿನವನು ಕೆಳಜಾತಿಯಲ್ಲಿರುವ ವ್ಯಕ್ತಿಯನ್ನು ಗುರುವಾಗಿ ಹೊಂದಬಲ್ಲನು. ಮೇಲಿನವರಲ್ಲಿನ ವ್ಯಕ್ತಿಯು ಗುರುವಾಗಿ ನಿಂತು ಕೆಳಗಿನ ಸ್ತರದಲ್ಲಿರುವ ಹಾಡುಗಾರನ ಎಲ್ಲ ನಿಲುವುಗಳಲ್ಲಿಯೂ ಎತ್ತಿಹಿಡಿದು ಉದ್ಧರಿಸಬಲ್ಲನು. ಹಿಂದೂವಿಗೆ ಮುಸ್ಲೀಮ ಗುರುವಾಗಬಲ್ಲನು; ಮುಸ್ಲೀಮನಿಗೆ ಹಿಂದೂ ಗುರುವಾಗಬಲ್ಲನು. ತತ್ತ್ವಪದಕಾರರ ಗ್ರಹಿಕೆ-ಮಂಡನೆ-ಪರಿಭಾವನೆ-ಕಲ್ಪನೆ ಇಂತಹವುಗಳೆಲ್ಲ ಗುರುತ್ವದ ಅಧಿನಿಯಂತ್ರಣಕ್ಕೆ ಒಳಪಟ್ಟಂತೆ ಕಾಣುತ್ತದೆ. ಆಸ್ತಿಕಮನದ ಜನಪದರಿಗೆ ಇದು ರಕ್ತಗತವಾದ ಗುಣವೆ ಆಗಿದೆ. ತತ್ತ್ವಪದಕಾರರಲ್ಲಿ ಹೆಚ್ಚಿನವರು ಶುದ್ಧ ಜಾನಪದ ಸಂಸ್ಕೃತಿಯ ಒಡಲಿನಿಂದ ಹುಟ್ಟಿದ ಮಕ್ಕಳೆಂಬುದನ್ನು ಮರೆಯುವಂತಿಲ್ಲ.

ತತ್ತ್ವಪದಗಳಲ್ಲಿ ಹಲವಾರು ಪ್ರತಿಮೆ-ಪ್ರತೀಕ-ಸಂಕೇತಗಳು ಎದುರಾಗುತ್ತವೆ. ಹೀಗೆಂದ ಮಾತ್ರಕ್ಕೆ ಅವು ಅತ್ಯಂತ ಕ್ಲಿಷ್ಟವಾದವುಗಳೆಂದು ಭಾವಿಸುವ ಹಾಗಿಲ್ಲ. ಜನಸಾಮಾನ್ಯರಿಗೆ ಸರಿಯಾಗಿ ಅರ್ಥವಾಡಿ ಕೊಡಲೆಂದೇ ಅಂತಹ ಸಂಕೇತಾದಿಗಳನ್ನು ತತ್ತ್ವಪದಕಾರರು ಬಳಕೆ ಮಾಡುತ್ತಾರೆ. ಅವರಲ್ಲಿ ಬರುವ ಸಂಕೇತಗಳು ಅತ್ಯಂತ ಸ್ಥಳೀಯವಾದವುಗಳಾಗಿರುತ್ತವೆ. ದೈನಂದಿನ ಬದುಕಿನಲ್ಲಿ ಎಲ್ಲರಿಗೂ ಪರಿಚಿತವಿರುವ ಮಾದರಿಗಳನ್ನೇ ಅವರು ತಮ್ಮ ಹಾಡುಗಳಲ್ಲಿ ವಿವರಿಸುತ್ತಾರೆ. ಜಾತ್ರೆ, ಥೇರು, ಪಲ್ಲಕ್ಕಿ, ನಾಯಿ, ಚೇಳು, ಹುಲಿ, ಹಾವು ಇಂತಹ ಹಲವಾರು ಪ್ರತಿಮಾತ್ಮಕ ಶಬ್ದಗಳನ್ನು ಉಲ್ಲೇಖಿಸುತ್ತ ಹೋಗಬಹುದಾಗಿದೆ. ತಮ್ಮ ಪರಿಸರದಲ್ಲಿನ ವಸ್ತುಗಳನ್ನು ರೂಪಕವಾಗಿ ಉಪಯೋಗಿಸುವುದರಿಂದ ಪರಂಪರಾಗತವಾಗಿ ಬಂದಿರುವ ರೂಪಕ-ಪ್ರತೀಕಗಳು ಬದಿಗೆ ಸರಿಯುತ್ತವೆ.

ಉದ್ದೇಶಪೂರ್ವಕವಾಗಿ ಅವುಗಳನ್ನು ತ್ಯಜಿಸಲೇಬೇಕೆಂಬ ಹಠವೇನೂ ತತ್ತ್ವಪದಕಾರರಲ್ಲಿ ಇರಲಾರದು. ಆದರೆ ಸಮಕಾಲೀನ ಸಂದರ್ಭವು ಎಷ್ಟೋ ಸಲ ಅಂತಹ ಪ್ರೇರಣೆಯನ್ನು ತತ್ತ್ವಪದಕಾರರಿಗೆ ದೊರಕಿಸಿಕೊಡುವುದುಂಟು.

ತತ್ತ್ವಪದಕಾರರಲ್ಲಿ ಹೆಚ್ಚಿನ ಜನರು "ಆಶುಕವಿತ್ವ" ಶಕ್ತಿಯುಳ್ಳವರು. ಅವರೆಲ್ಲ ಕುರಿತು ಓದದ ಕಾವ್ಯ ಪ್ರಯೋಗ ಪರಿಣತ ಮತಿಗಳು. ಆಗಿಂದಾಗಲೇ ಅವರು ಹಾಡುಗಳನ್ನು ಕಟ್ಟಿ ಹಾಡಿ ಬಿಡುತ್ತಾರೆ. ಅವರಿಗೆ ಬೇಕಾದ ವಸ್ತು–ವಿಷಯ ಕೊಟ್ಟರೆ ಅದು ಹಾಡಾಗಿ ಬಿಡುತ್ತದೆ. ಅತ್ಯಂತ ಮಧುರವಾದ ತತ್ತ್ವಪೂರ್ಣವಾದ ಹಾಡಾಗುತ್ತದೆ. ಹುಟ್ಟು ಪ್ರತಿಭಾವಂತರಾದ ಅವರು ಹಾಡು ಕಟ್ಟುವುದು ಪವಿತ್ರ ಕಾರ್ಯವೆಂದೇ ತಿಳಿದುಕೊಂಡಿರುತ್ತಾರೆ. ಆ ಶಕ್ತಿಯು "ದೇವರು ತಮಗೆ ನೀಡಿದ ವರ"ವೆಂದು ಅವರು ಭಾವಿಸುತ್ತಾರೆ.

ತಮಗೆ ಈ ಶಕ್ತಿ ದಕ್ಕಿದೆಯೆಂದು ಯಾವಾಗ ಬೇಕೋ ಆವಾಗ ಅವರು ಹಾಡುಗಳನ್ನು ಕಟ್ಟಲಾರರು. ಅವರ ಮನಸ್ಸು ಸಮ್ಮತಿಸಿದಾಗ ಮಾತ್ರ ಅವರು ಕಾವ್ಯ ರಚನಾ ಕ್ರಿಯೆಗೆ ತೊಡಗುತ್ತಾರೆ. ಆಗ ಅವರಿಗೆ ಕಾಗದ ಬೇಕಿಲ್ಲ; ಲೆಕ್ಕಣಿಕೆ ಬೇಕಿಲ್ಲ. ತಮ್ಮಷ್ಟಕ್ಕೇ ತಾವೇ ಹಾಡಿಕೊಂಡು ತತ್ತ್ವಪದದ ಪೂರ್ಣ ಅಭಿವ್ಯಕ್ತಿ ಪೂರೈಸುತ್ತಾರೆ. ಬಡತನವನ್ನು ವರವಾಗಿಸಿಕೊಂಡಿರುವುದು ತತ್ತ್ವಪದಕಾರರ ವಿಶೇಷ ಶಕ್ತಿಯೆಂದು ಹೇಳಬೇಕು. ಇಂದು ನಮಗೆ ಬೀದರ ಜಿಲ್ಲೆಯಲ್ಲಿ ಲಭ್ಯವಾಗಿರುವ ತತ್ತ್ವಪದಕಾರರಲ್ಲಿ ಹೆಚ್ಚಿನವರು ಬಡತನದ ಬೆಂಕಿಯಲ್ಲಿ ಬೆಂದು ಪರಿಶುದ್ಧ ಚಿನ್ನದಂತಾದವರು, ಎರಡು ಹೊತ್ತಿನ ಗಂಜಿಗೆ ಗತಿಯಿಲ್ಲದಿದ್ದರೂ ಅದರ ಬಗೆಗೆ ಅವರು ಚಿಂತಿಸಿದವರಲ್ಲ; ಚಿಂತಿಸುತ್ತಿಲ್ಲ. ಭೌತಿಕ ಬಡತನದ ಬವಣೆಯಲ್ಲಿ ಬದುಕುತ್ತಲೇ ಅವರು ಮೌಖಿಕವಾದ ತತ್ತ್ವಪದಗಳ ರಚನೆ ಮಾಡಿದ್ದಾರೆ; ಮಾಡುತ್ತಲಿದ್ದಾರೆ. ತಾವು ರಚಿಸಿದ ಹಾಡುಗಳನ್ನು ಬಾಳಿನ ಗೋಳು ಮರೆಯಲು ಹಾಡುತ್ತಾರೆ; ಇಲ್ಲವೆ ಹಾಡುಗಾರರಿಂದ ಹಾಡಿಸಿ, ಕೇಳಿ, ಆನಂದಪಟ್ಟು ನೋವಿನಲ್ಲೂ ನಗುತ್ತ ಜೀವಿಸುತ್ತಾರೆ. ತತ್ತ್ವಪದಕಾರರು ಭೌತಿಕ ಸಂಪತ್ತಿನ ದೃಷ್ಟಿಯಿಂದ ಬಡವರೆ ಹೊರತು ಸಾಂಸ್ಕೃತಿಕ ದೃಷ್ಟಿಯಿಂದ ಮಹಾಸಿರಿವಂತರು. ಅವರಲ್ಲಿನ ಹೃದಯ ಶ್ರೀಮಂತಿಕೆಯಂತೂ ಅನುಪಮವಾದುದು.

ತತ್ತ್ವಪದಕಾರರಲ್ಲಿ ನಿರಕ್ಷರಿಗಳು ಹೆಚ್ಚಿನವರಿದ್ದಾರೆ. ಶಾಲೆಗೆ ಹೋದರೂ ಕೆಲವರು ಕಲಿತದ್ದು ಅತ್ಯಂತ ಕಡಿಮೆ ಪ್ರಮಾಣದ ಶಿಕ್ಷಣ. ಬೀದರ, ಕಲಬುರ್ಗಿ ಭಾಗದಲ್ಲಿರುವ ತತ್ತ್ವಪದಕಾರರು ಕಲಿತದ್ದು ಉರ್ದು, ಮರಾಠಿ, ಮೋಡಿ. ಆದುದರಿಂದ ಅವರು ಕನ್ನಡದ ಭಾಷೆಯನ್ನು ಉರ್ದು, ಮರಾಠಿ ಇಲ್ಲವೆ ಮೋಡಿ ಲಿಪಿಯಲ್ಲಿಯೇ

ಬರೆದುದುಂಟು. ಅವರು ಹೋದುದು ಗವಠಿ ಶಾಲೆಗಳಿಗೆ. ಸರಕಾರಿ ಶಾಲೆಗಳಲ್ಲಿ ಕಲಿತವರು ಅಲ್ಪ ಸಂಖ್ಯೆಯಲ್ಲಿ ಸಿಕ್ಕುತ್ತಾರೆ. ಗವಠಿ ಶಾಲೆಯಲ್ಲಿ ಮಾಸ್ತರಿಕೆ ಮಾಡಿಕೊಂಡಿದ್ದವರೂ ಹಾಡುಗಳನ್ನು ಬರೆದುದುಂಟು. ಯಾರು ಆಧುನಿಕ ಶಾಲೆಗಳಲ್ಲಿ ಕನ್ನಡವನ್ನು ಓದಿರುವರೋ ಅವರ ಹಾಡುಗಳಲ್ಲಿ ಶಿಷ್ಟ ಭಾಷೆಯ ಪ್ರಯೋಗ ಕಂಡುಬರುತ್ತದೆ. ಯಾರು ಗವಠಿಯಲ್ಲಿ ಓದಿರುವರೋ ಅವರ ಭಾಷೆಯು ಜಾನಪದ ಸತ್ವದಿಂದ ಕೂಡಿದ್ದು, ಆಡು ನುಡಿಯ ಬೆಡಗಿನಿಂದ ಮೋಡಿ ಮಾಡುತ್ತದೆ. ನಿರಕ್ಷರಿಗಳ ಭಾಷಾ ಪ್ರಯೋಗವೂ ಅತ್ಯಂತ ಶಕ್ತಿಶಾಲಿಯಾದುದೇ ಆಗಿದೆ. ಜನರಾಡುವ ನಾಲಗೆಯ ನುಡಿಯನ್ನೇ ತಮ್ಮ ಹಾಡಿಗೆ ಅಭಿವ್ಯಕ್ತಿಯ ಹಾದಿಯಾಗಿಸಿಕೊಂಡ ಇವರು ಅತ್ಯಂತ ಸ್ವಚ್ಛಂದ ರೀತಿಯಲ್ಲಿ ಹಾಡುಗಳನ್ನು ಕಟ್ಟಿಕೊಂಡು ಹೋಗಿದ್ದಾರೆ. ತಾವು ಕಟ್ಟಿದ ಹಾಡನ್ನು ಸ್ಮರಣೆಯ ಶಕ್ತಿಯಿಂದ ರಕ್ಷಿಸಿಕೊಂಡಿದ್ದು, ಬರಹ ಬಲ್ಲವರಿಂದ ಬರೆಯಿಸಿದ್ದಾರೆ. ಇಲ್ಲವೆ ಮೌಖಿಕ ಪರಂಪರೆಯಿಂದಲೇ ಅದನ್ನು ತಲೆಯಿಂದ ತಲೆಗೆ ಪ್ರಸಾರಗೊಳ್ಳುತ್ತ ಹೋಗುವಂತೆ ಮಾಡಿದ್ದಾರೆ. ನಿರಕ್ಷರ ಲೋಕದ ತತ್ತ್ವಪದಗಳು ಅಕ್ಷರ ಲೋಕವನ್ನು ನಿಜಕ್ಕೂ ತಲೆದೂಗುವಂತೆ ಮಾಡುತ್ತವೆ; ಮಾಡಿವೆ.

ತತ್ತ್ವಪದಕಾರರು ತಮ್ಮ ಹಾಡಿನ ಕೃಷಿಯಿಂದ ಸಾಮಾಜಿಕ ಜೀವನದಲ್ಲಿ ಸಾಮರಸ್ಯವನ್ನು ತರಲು ಪ್ರಯತ್ನಿಸಿದಂತೆ, ಅವರು ತಮ್ಮ ವೈಯಕ್ತಿಕ ಬದುಕಿನಲ್ಲೂ ಸಮರಸ ಭಾವದಿಂದಲೇ ಬದುಕಿದ್ದಾರೆ. ಅವರು ಸಾಧಿಸಿದ ಸಮರಸ ಭಾವದ ಸಿದ್ಧಿಯು ಕುಟುಂಬ ಜೀವನದಿಂದಲೇ ಮೊದಲಾಗಿದೆ. ಸತಿ-ಪತಿಗಳು ಒಂದಾಗಿ ನಿರ್ವಹಿಸುವ ಅವರ ಬದುಕು ನಿರಾಭರಣ ಸುಂದರ ಮತ್ತು ಸಂತೃಪ್ತಿಯ ಬದುಕಾಗಿ ಕಾಣುತ್ತದೆ. ಪತಿಯು ಹಾಡುಕಟ್ಟಿ ಹಾಡುತ್ತಾನೆ. ಅದನ್ನು ಸತಿಯಾದವಳು ಅನುಕರಿಸುತ್ತಾಳೆ. ಒಂದೊಂದು ಸಲ ಪತಿಯು ಹಾಡುವಾಗ ತಪ್ಪಿದಲ್ಲಿ ಅಥವಾ ನುಡಿಗಳು ಹಿಂದೆ ಮುಂದೆ ಆದಾಗ, ಥಟ್ಟನೆ ಹೆಂಡತಿಯಾದವಳು ಅದನ್ನು ಸರಿಪಡಿಸಿ ಹಾಡುತ್ತಾಳೆ. ಒಂದಾಗಿ ಬದುಕುತ್ತ; ಅದರ ನಿರ್ವಹಣೆಗೆ ಒಂದಾಗಿ ದುಡಿಯುತ್ತ; ಬಾಳಿನ ಕಹಿ-ಸಿಹಿಗಳನ್ನು ಒಂದಾಗಿಯೇ ಅನುಭವಿಸುತ್ತಲಿರುವ ತತ್ತ್ವಪದಕಾರ ದಂಪತಿಗಳು ಸಾಹಿತ್ಯ ರಚನೆಯಲ್ಲೂ ತಮ್ಮ ಏಕತೆಯನ್ನು ಕಾಣಿಸುತ್ತಾರೆ. ಆದುದರಿಂದ ತತ್ತ್ವಪದಕಾರರ ಬದುಕೆಂದರೆ ಭೌತಿಕ ಸತಿ ಮತ್ತು ಮೋಕ್ಷದ ಸತಿ ಉಭಯರ ಸಂಗಮದ ನೆಲೆಯೆನ್ನಬೇಕು. ಎಷ್ಟೋ ಸಲ ಪತಿಯಾದವನು ತತ್ತ್ವಪದಗಳನ್ನು ಹಾಡಲೆಂದು; ಭಜನೆಯ ಕಾರ್ಯಕ್ರಮ ನಡೆಯಿಸಿಕೊಡಲೆಂದು ಬೇರೆ-ಬೇರೆ ಸ್ಥಳಗಳಿಗೆ ಹೋಗುವುದು ಅನಿವಾರ್ಯವೇ ಆಗುತ್ತದೆ. ತಿರುಗಾಟ ಅಥವಾ ಸ್ಥಳದಿಂದ ಸ್ಥಳಕ್ಕೆ ಸಂಚಾರ ಮಾಡುವುದು

ತತ್ತ್ವಪದಕಾರರ ಬದುಕಿನ ಒಂದು ಅನಿವಾರ್ಯ ಭಾಗದಂತೆಯೇ ಇದೆ. ಇಂತಹ ಸಂದರ್ಭದಲ್ಲಿ ಹೆಂಡತಿಯಾದವಳು ಮನೆಯ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾಳೆ. ಮಕ್ಕಳನ್ನು ಸಾಕುತ್ತಾಳೆ. ಮನೆಯಲ್ಲಿರುವ ಇತರ ಸದಸ್ಯರ ಬೇಕು–ಬೇಡಗಳನ್ನು ಅನುಲಕ್ಷಿಸಿ, ಒಟ್ಟು ಕುಟುಂಬವನ್ನು ಸರಿಯಾಗಿ ನಡೆಯಿಸುವ ಜವಾಬ್ದಾರಿ ಹೊರುತ್ತಾಳೆ. ಮೈ ಮುರಿದು ದುಡಿದು ತಂದು ಮನೆ ಮಂದಿಗೆಲ್ಲ ಅನ್ನವನ್ನು ಹಾಕುತ್ತಾಳೆ. ಒಟ್ಟಾರೆ ತನ್ನ ಗಂಡನ ತತ್ತ್ವಪದ ಸಾಹಿತ್ಯ ರಚನೆಗೆ ಯಾವುದೇ ಆತಂಕ ಬರದಿರಲೆಂಬಂತೆ; ಆ ಗರತಿ ನಡೆದುಕೊಳ್ಳುವುದನ್ನು ಕಾಣಬಹುದು.

ವಿದ್ವಾಂಸ ವರ್ಗವು ತತ್ತ್ವಪದಕಾರರನ್ನು ಕಳೆದುಕೊಳ್ಳುವಲ್ಲಿ ಇನ್ನೊಂದು ಪ್ರಮಾದವು ಮಾಡಿದೆ. ಕೆಲವು ತತ್ತ್ವಪದಕಾರರು ಜೀವನಾರಭ್ಯದಿಂದಲೇ ಹಾಡುಗಳನ್ನು ಬರೆಯುವುದು; ಅಥವಾ ಕಟ್ಟುವುದಕ್ಕೆ ತೊಡಗಿದ್ದರೆ, ಮತ್ತೆ ಕೆಲವರು ಹಾಡುಗಳನ್ನು ಹಾಡುತ್ತ ರಚನೆಯ ಶಕ್ತಿಯನ್ನು ಸಿದ್ಧಿಸಿಕೊಂಡಿದ್ದಾರೆ. ಜೀವನದ ಬಹು ಭಾಗವೆಲ್ಲ ಬೇರೆಯವರ ಹಾಡುಗಳನ್ನು ಹಾಡುವುದರಲ್ಲಿಯೇ ಕಳೆದು; ಬದುಕಿನ ಉತ್ತರ ಭಾಗದಲ್ಲಿ ಅವರು ಕೆಲವು ಹಾಡುಗಳನ್ನು ಬರೆದಿದ್ದಾರೆ. ಅಂತಹ ಹಲವಾರು ತತ್ತ್ವಪದಕಾರರು ನಮಗೆ ಸಿಕ್ಕುತ್ತಾರೆ. ಹಾಡುಗಾರನ ಒಳಗೆ ಅಡಗಿರುವ ಕವಿಯ ಪರಿಚಯವಾಗುವುದು ಅವನ ಹತ್ತಿರಕ್ಕೆ ಹೋದಾಗ; ಅವನೊಂದಿಗೆ ಆಪ್ತವಾದ ಸಂವಾದಕ್ಕೆ ತೊಡಗಿದಾಗ. ಇಂತಹ ಪ್ರಯತ್ನಗಳಿಗೆ ತೊಡಗದ ಕೆಲವರು ಹಾಡುಗಾರನಲ್ಲಿ ಅಡಗಿರುವ ಕವಿಯನ್ನು ಕಂಡುಕೊಳ್ಳದೆ "ಅವನೊಬ್ಬ ಕೇವಲ ಹಾಡುಗಾರ" ಎಂದು ತಮ್ಮ ಪರಿಮಿತ ಜ್ಞಾನದ ಅಳತೆಯಿಂದ ನಿರ್ಧರಿಸಿಬಿಡುತ್ತಾರೆ. ಇದು ಸರಿಯಾದ ಕ್ರಮವಲ್ಲ. ಇದರಿಂದ ತತ್ತ್ವಪದ ಸಾಹಿತ್ಯ ಚರಿತ್ರೆಗೆ ಅಪಾರ ನಷ್ಟವು ಒದಗುತ್ತದೆಂಬ ಅರಿವು ಸಂಶೋಧಕರಿಗೆ ಇರಬೇಕಾದುದು ಅವಶ್ಯಕ. ಎಲ್ಲರೂ ಅವನನ್ನು 'ಹಾಡುಗಾರ'ನೆಂದು ಗುರುತಿಸುತ್ತಿರುವಾಗ ಆತನು ಕೆಲವು ಹಾಡುಗಳನ್ನು ರಚನೆ ಮಾಡಿದ್ದರೂ, ಅದನ್ನು ಬಹಿರಂಗವಾಗಿ ಹೇಳಿಕೊಳ್ಳಲು ಹಿಂಜರಿಯುತ್ತಾನೆ. ಜನಪದ ಪರಿಸರದಲ್ಲಿ ಬದುಕಿದ ಅವರಿಗೆ ಇನ್ನೊಂದೆಡೆಗೆ ಅಕ್ಷರ ಲೋಕದ ವಿದ್ವಾಂಸರ ಭಯವೂ ಕಾಡುತ್ತಲಿರುತ್ತದೆ. ಹೀಗಾಗಿ ಅಂಥವರ ಎದುರು ಅವರು "ತಾವು ಕವಿಗಳು" ಎಂದು ಹೇಳಿಕೊಳ್ಳದೆ; 'ಹಾಡುಗಾರರು' ಎಂದು ಹೇಳಿಕೊಂಡು ಪಾರಾಗಿ ಹೋಗುತ್ತಾರೆ. ತತ್ತ್ವಪದಗಳ ಹಾಡುಗಾರಿಕೆಯ ಕಲೆಯು ಹಲವಾರು ವ್ಯಕ್ತಿಗಳನ್ನು ತತ್ತ್ವಪದ ರಚನೆಗೆ ಪ್ರೇರಣೆ ಒದಗಿಸಿದೆಯೆಂಬುದರಲ್ಲಿ ಎರಡು ಮಾತಿಲ್ಲ. ಅನುಭಾವಿಗಳ ಸಂಗದ ಫಲವು ಅದಕ್ಕೆ ಇನ್ನೊಂದು ಒತ್ತಾಸೆ.

ಆಶುಕವಿಗಳಾದ ತತ್ತ್ವಪದಕಾರರು ಹಳೆಯದನ್ನೇ ಹಾಡುವುದಿಲ್ಲ; ಹಾಡಿದ್ದನ್ನೇ ಹಾಡುವುದಿಲ್ಲ. ಅವರ ಹಾಡುಗಳು ಆಧ್ಯಾತ್ಮಿಕ ಹಿನ್ನೆಲೆ ಹೊಂದಿರುವಂತೆ ಸಂದರ್ಭಸ್ಫೂರ್ತವೂ ಆಗಿರುತ್ತವೆ. ಹೀಗಾಗಿ ಅವು ಹೊಸ ಹೊಸ ವಿಷಯ ಸನ್ನಿವೇಶಗಳನ್ನು ಒಳಗೊಂಡೇ ಮೂಡಿಬರುತ್ತವೆ. ಆಯಾ ಸಂದರ್ಭದ ರೀತಿ–ನೀತಿಗಳನ್ನು ತತ್ತ್ವಪದಕಾರರು ಸಮಾಜಕ್ಕೆ ಅರುಹದೆ ಇರಲಾರರು. ಅವರು ಸಮಾಜವನ್ನು 'ಶಿವ ಸಮಾಜ'ವಾಗಿಸುವತ್ತ ಹೊರಟವರೆ. ಅದರ ಓರೆ–ಕೋರೆಗಳನ್ನು ಸರಿಪಡಿಸುವ ಕಳಕಳಿಯ ಆವೇಶದಲ್ಲಿ ನೀತಿಯ ವಿವರಗಳು ಹಾಡಾಗಿ ಮೂಡಿ ಬರುತ್ತವೆ. ಹೀಗಾಗಿ ಪ್ರಚಲಿತ ವಿದ್ಯಮಾನಗಳೂ ಅಲ್ಲಿ ಕಾಣುವಂತಾಗುತ್ತವೆ. ವಿಡಂಬನೆಯ ಮೂಲಕವೂ ಅವರು ತಿಳಿಕೆಯನ್ನು ನೀಡುವಲ್ಲಿ ಹಿಂದೆ–ಮುಂದೆ ನೋಡಲಾರರು. ಅವರಿಗೆ ಯಾರ ಮುಲಾಜೂ ಇಲ್ಲ. ನಿರ್ಭಿಡೆಯಿಂದ ಮಾತನಾಡುವ ಧೀರರು ಅವರು. ಅವರ ಧೀರ ನಡೆಯ ಅಭಿವ್ಯಕ್ತಿಯಿಂದಾಗಿ ಒಮ್ಮೊಮ್ಮೆ ತತ್ತ್ವಪದಗಳು ಕಠೋರವೂ ಎನಿಸುತ್ತವೆ.

ತತ್ತ್ವಪದಗಳು ಅನುಭವ–ಅನುಭಾವಗಳೆರಡರ ಸಮನ್ವಯದ ಧ್ವನಿಗಳು. ವೀರಶೈವದ ನೆಲೆಯಲ್ಲಿ ಅನುಭವ–ಅನುಭಾವದ ತಾರತಮ್ಯವಿಲ್ಲ. ಆದರೆ ವೀರಶೈವೇತರ ಪರಿಧಿಯಲ್ಲಿ ನಿಂತು ವಿಚಾರ ಮಾಡುವಾಗ ಈ ಭೇದವು ಕಾಣುವಂತಾಗುತ್ತದೆ. ಭೌತಿಕ ಬದುಕಿನಿಂದ ಬಂದುದು ಅನುಭವವೆಂತಲೂ; ಆತ್ಮಜ್ಞಾನವೇ 'ಅನುಭಾವ'ವೆಂತಲೂ ಅಲ್ಲಿ ಹೇಳಲಾಗುತ್ತದೆ. ವೀರಶೈವರು ಭೌತಿಕ ಬದುಕಿನ ರಂಗವನ್ನು ಆತ್ಮ ಸಾಧನೆಗೆ ಕಮ್ಮಟವೆಂದು ತಿಳಿದುಕೊಂಡರು. ಪ್ರಪಂಚದಲ್ಲಿಯೇ ಪಾರಮಾರ್ಥದ ಸಿದ್ಧಿಯನ್ನು ಹೊಂದುವುದು ಅವರ ಸಿದ್ಧಾಂತದ ರೀತಿಯಾಗಿದೆ. ಜಗತ್ತಿನ ಜ್ಞಾನವು ಅನುಭವವಾಗಿ; ಬ್ರಹ್ಮದ ಜ್ಞಾನವು ಅನುಭಾವವಾಗಿ, ಒಂದನ್ನೊಂದು ಸಂಧಿಸದೆ ವೀರಶೈವತ್ವದಲ್ಲಿ ಉಳಿಯಲಾರವು. ಎಲ್ಲಿ ಜಗತ್ತು ಮಿಥ್ಯವೆನಿಸಿ, ಬ್ರಹ್ಮವೊಂದೇ ಸತ್ಯವಾಗಿರುತ್ತದೆಯೋ ಅಂಥಲ್ಲಿ ಈ ತಾರತಮ್ಯವು ವಿಹಿತವಾದುದೆನಿಸುತ್ತದೆ. ವೀರಶೈವರಿಗೆ ಜಗತ್ತು ಸತ್ಯವಾಗಿರುವಂತೆ; ಬ್ರಹ್ಮವೂ ಸತ್ಯವೆ. ಹೀಗಾಗಿ ಅನುಭವವೂ ಗ್ರಾಹ್ಯವೆ; ಅನುಭಾವವೂ ಗ್ರಾಹ್ಯವೆ. ಅವರಿಗೆ ಅನುಭವದ ವಿಕಾಸೀಕರಣದ ಹಂತವೇ ಅನುಭಾವ ಸ್ಥಲ. ಈ ಕ್ರಿಯಾಚರಣೆಯನ್ನೇ ತತ್ತ್ವಪದಕಾರರು ತಮ್ಮ ಹಾಡುಗಳಲ್ಲಿ ಹಲವು ಹಂತಗಳಲ್ಲಿ ನಿವೇದಿಸಿರುವುದುಂಟು.

ತತ್ತ್ವಪದಗಳು ಇಂದು ಆಧುನಿಕ ವಿದ್ವಾಂಸರಿಗೆ ಹಲವಾರು ಒಳನೋಟಗಳನ್ನು ಕಾಣುವಂತೆ ಮಾಡುತ್ತವೆಯೆಂಬುದಕ್ಕೆ ಈ ಉಲ್ಲೇಖವು ನಿದರ್ಶನವಾಗಿ ಗಮನಿಸಬೇಕು: "ಕೊಳ್ಳೂರು ಹುಸನಾ ಸಾಹೇಬರ (೧೯೦೦–೧೯೬೪) 'ಹಾಯ್ದು ನೋಡು ಹೈದ್ರಾಬಾದಿ ಅಂಗಡಿ" ವಸಾಹತುಶಾಹಿಯ ಸ್ವರೂಪ, ಅದರ

ಕಾರ್ಯವೈಖರಿ, ಅದು ಪಲ್ಲಟಗೊಳಿಸುವ ರೀತಿ ಇತ್ಯಾದಿಗಳನ್ನು ತುಂಬಾ ಚೆನ್ನಾಗಿ ಮತ್ತು ಪರಿಣಾಮಕಾರಿಯಾಗಿ ಗ್ರಹಿಸಿದೆ. ಹಿಂದಿನ ಪದದ ಆಶಯಕ್ಕಿಂತ ಇದು ಭಿನ್ನ. ಹೈದರಾಬಾದಿನ ಅಂಗಡಿ. ಅಲ್ಲಿ ಬಿಕರಿಗಿರುವ ವಸ್ತುಗಳು ಹೊಸ ಕಾಲದವು. ಅದರ ಬಗ್ಗೆ ಆತಂಕ ಗಾಬರಿಯಿಲ್ಲದಿದ್ದರೂ ಅಲ್ಲಿ ಎಚ್ಚರ ಕಳೆದುಕೊಳ್ಳದಿರಬೇಕೆಂಬ ಭಾವನೆ ಈ ಪದದ ಹಿಂದಿದೆ. ಅದನ್ನು ಸ್ವೀಕರಿಸುವ ಇರಾದೆಯೂ ಅಲ್ಲಿ ಕಾಣಿಸುವುದಿಲ್ಲ, 'ಬಾಜಾರ' ಆಕರ್ಷಕವಾಗಿದೆ. ಅದನ್ನು ಸುತ್ತಾಡಿ ನೋಡಲು ಈ ತತ್ತ್ವಪದ ಹೇಳಿದರೂ ಅವಧಾನದಿಂದಿರಬೇಕೆಂಬ ಎಚ್ಚರಿಕೆಯೂ ಅಲ್ಲಿದೆ. ಅಲ್ಲದೆ ಅದರಿಂದ ನಾವು ನಮ್ಮದನ್ನು ಮತ್ತು ನಮ್ಮತನವನ್ನು ಕಳೆದುಕೊಳ್ಳಬಹುದೆಂಬ ಭಯ-ಆತಂಕವೂ ಕಾಣಿಸಿಕೊಳ್ಳುತ್ತದೆ. 'ಕಳಕೋ ಬ್ಯಾಡ ನಿನ್ನ ಘೊಂಗಡಿ' 'ಜತನ ಮಾಡಿಕೋ ಚೀಲಾ ಚುಂಗಡಿ' ಮುಂತಾದ ಮಾತುಗಳು ಇದನ್ನು ಸೂಚಿಸುತ್ತವೆ. ಮುಂಬಯಿಯಂಥ ನಗರಿಗಳು ವಸಹಾತು ಶಾಹಿಯ ಪರಿಣಾಮ. ಅದರ ಆಕರ್ಷಣೆಗೆ ದೇಶೀಯರು ಆಕರ್ಷಿತರಾಗುತ್ತಾರೆ ಎಂಬುದನ್ನು 'ಮಾಯಾದ ಮುಂಬಯಿ ಬಜಾರ' ಎಂಬುದು ಸೂಚಿಸುತ್ತದೆ. ನಮ್ಮದೆಲ್ಲ ಇಂಥಾ ನಗರಗಳಲ್ಲಿ ಕಳೆದು ಹೋಗಿ ಬಿಡಬಹುದೆಂಬ-ಆತಂಕ ಭಯ ಈ ಪದದ ಹಿಂದಿರುವಂತಿದೆ. 'ದೇಸೀ'ಯನ್ನು 'ಜತನ'ವಾಗಿಟ್ಟುಕೊಳ್ಳುವ ಪ್ರಯತ್ನವೂ ಕೂಡ ವಸಹಾತ ಶಾಹಿಯನ್ನು ಎದುರಿಸುವ ಒಂದು ವಿಧಾನ. ೨೦ನೇ ಶತಮಾನದಲ್ಲೂ ಅದರ ಹಿಂದಿನ ಶತಮಾನಗಳ ತತ್ತ್ವಪದಗಳ ಪರಂಪರೆ ಮುಂದುವರೆದಿದೆ ಎಂಬುದನ್ನು ಸೂಚಿಸಲು ಮೇಲಿನ ವಿವರಣೆ ಕೊಡಲಾಗಿದೆ." (ತತ್ತ್ವಪದಕಾರರು ಮತ್ತು ವಸಾಹತ ಶಾಹಿ ವ್ಯವಸ್ಥೆ, ಪುಟ-೪೮).

ಈ ಮೇಲಿನ ವಿವರಣೆಯು ತತ್ತ್ವಪದಗಳ ಅಧ್ಯಯನದ ಹೊಸ ದೃಷ್ಟಿಕೋನಕ್ಕೆ ಸಾಧಕವೆನಿಸುತ್ತದೆ. ಹೀಗೆ ತತ್ತ್ವಪದಗಳನ್ನು ಇಂದಿನ ಕಾಲದಲ್ಲಿ ವಿಶ್ಲೇಷಣೆ-ವಿಮರ್ಶೆಯ ದೃಷ್ಟಿಯಿಂದ ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಜಾಗತೀಕರಣದ ಸಂದರ್ಭದಲ್ಲಿ ಈ ಸಾಹಿತ್ಯವು ತನ್ನ ಪ್ರತಿರೋಧವನ್ನು ಒಡ್ಡುವ ಕ್ರಿಯೆ ಕಾಣಬಹುದು. ಅಧ್ಯಯನದ ಹರವು ಬೆಳೆದಂತೆ ಇಂತಹ ಹಲವು ಹತ್ತು ಸತ್ಯಗಳು ತತ್ತ್ವಪದ ಸಾಹಿತ್ಯದ ಒಡಲಿನಲ್ಲಿಯೇ ಗೋಚರಿಸಲು ಆರಂಭವಾಗುತ್ತವೆ.

'ಅಂಕಿತ'ದ ಬಳಕೆಯು ತತ್ತ್ವಪದ ಸ್ವರೂಪದ ಪ್ರಧಾನ ಅಂಶವೇ ಆಗಿ ಕಾಣುತ್ತದೆ. ಎಲ್ಲೋ ಕ್ವಚಿತ್ತಾಗಿ ಕೆಲವು ಕವಿಗಳು ಅಂಕಿತವಿಲ್ಲದೆ ತತ್ತ್ವಪದವೆಂಬ ಹೆಸರಿನಲ್ಲಿ ಹಾಡುಗಳನ್ನು ರಚಿಸಿದ ಉದಾಹರಣೆಗಳು ಲಭ್ಯವಾಗುತ್ತವೆ. ಆದರೆ ಬಹುಸಂಖ್ಯಾತ ತತ್ತ್ವಪದಗಳಿಗೆಲ್ಲ ಕೊನೆಯಲ್ಲಿ ಅಂಕಿತವು ಇದ್ದೇ ಇರುತ್ತದೆ. 'ಅಂಕಿತ'ವು ಬಹುಮುಖಿಯಾದುದು. ಅದರಲ್ಲಿ ತತ್ತ್ವಪದಕಾರರು ತಮ್ಮ ಗುರುಭಕ್ತಿ, ದೈವೀ ಭಕ್ತಿ, ದೇಶಭಕ್ತಿ, ಜನ್ಮಸ್ಥಳದ ಭಕ್ತಿ ಇಂತಹವೆಲ್ಲ ವ್ಯಕ್ತಗೊಳಿಸುತ್ತಾರೆ. ತಮ್ಮ ಹೆಸರನ್ನೇ

ಅಂಕಿತವಾಗಿ ಬಳಕೆ ಮಾಡುವ ತತ್ತ್ವಪದಕಾರರು ತಮ್ಮ ಅಸ್ಮಿತೆಯನ್ನು ಕಾಣಿಸುತ್ತಾರೆಂದು ಹೇಳಬಹುದು.

ಪ್ರಾಚೀನ ತತ್ತ್ವಪದಕಾರರ ಪರಂಪರೆ ಹೆಚ್ಚು ಆಧ್ಯಾತ್ಮ ನಿಷ್ಠವಾಗಿರುವುದು ಕಂಡುಬರುತ್ತದೆ. ಆದರೆ ಆಧುನಿಕ ತತ್ತ್ವಪದಕಾರರಿಗೆ ಸಂಬಂಧಪಟ್ಟಂತೆ ಈ ಮಾತು ನೂರಕ್ಕೆ ನೂರು ಸತ್ಯವೆಂದು ಹೇಳುವಂತಿಲ್ಲ. ಅವರಲ್ಲಿ ಹಲವಾರು ಕವಿಗಳು ಆಧ್ಯಾತ್ಮದ ಅನುಭವಿಲ್ಲದೆ ತತ್ತ್ವಪದಗಳ ಅನುಕರಣೆಯಿಂದ ಹಾಡುಗಳನ್ನು ಬರೆದಿರುವುದುಂಟು. ಬಸವಾದಿ ಶಿವಶರಣರಿಂದ ಆರಂಭಗೊಂಡ ವಚನ ವಾಙ್ಮಯವು ಆಧುನಿಕ ಕಾಲದಲ್ಲೂ ಮುಂದುವರೆದಿದೆಯಾದರೂ, ಇಂದು ವಚನ ರಚನೆ ಮಾಡುವವರೆಲ್ಲ ಬಸವಾದಿ ಶಿವಶರಣರಂತೆ ಅನುಭಾವಸತ್ವ, ಶರಣಶಕ್ತಿ ಹೊಂದಿದವರೆ ಆಗಿದ್ದಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇದರಂತೆಯೇ ಇಂದು ನಾವು ತತ್ತ್ವಪದ ಸಾಹಿತ್ಯದ ಪರಂಪರೆಯನ್ನು ಅನುಲಕ್ಷಿಸಿದರೆ ಸಾಕು.

ಎಲ್ಲಿ ಆಧ್ಯಾತ್ಮ ನೆಲೆವಿಡಿದು ತತ್ತ್ವಪದಗಳು ಮೂಡಿಬಂದಿವೆಯೋ ಅವು ನಿಜವಾಗಿಯೂ ಪರಿಣಾಮಕಾರಿಯಾಗಿವೆ. ಅಂತಹ ರಚಯಿತೃಗಳ ಇರುವಿಕೆಯು ಲೋಕ ವಿಲಕ್ಷಣವಾಗಿಯೂ ಕಂಡುಬರುತ್ತದೆ. ಅಸ್ತವ್ಯಸ್ತವಾಗಿ ಉಡುಗೆ-ತೊಡುಗೆ ಧರಿಸುವುದು, ಊರೂರು ಅಲೆದಾಡುವುದು, ಬೇಜವಾಬ್ದಾರಿಯಿಂದ ವರ್ತಿಸುವುದು, ಗಾಂಜಾ ಸೇದುವುದು, ಮದ್ಯಸೇವನೆ, ಹುಚ್ಚನಂತೆ ನಡೆದುಕೊಳ್ಳುವುದು, ಮೌನವಾಗಿರುವುದು, ಕೆಲವೊಮ್ಮೆ ಅವಶ್ಯಕತೆಗೆ ಮೀರಿ ಮಾತನಾಡುವುದು, ಧ್ಯಾನಮಗ್ನನಾಗಿ ತಾಸುಗಟ್ಟಲೇ ಕಣ್ಣು ಮುಚ್ಚಿ ಕುಳಿತು ಬಿಡುವುದು ಹೀಗೆ ಹಲವಾರು ವಿಚಿತ್ರ ಕ್ರಿಯೆಗಳು ಅವರಲ್ಲಿ ಕಂಡುಬರುತ್ತವೆ.

ಬೀದರ ಜಿಲ್ಲೆಯ ತತ್ತ್ವಪದ ಪರಂಪರೆಯು ಮೇಲಿನ ವಿವರಗಳಿಗೆ ಹೊರತಾಗಿ ನಿಲ್ಲುವುದಿಲ್ಲ. ಈ ಜಿಲ್ಲೆಯ ತತ್ತ್ವಪದ ಪರಂಪರೆಯು ಸುಮಾರು ಹದಿನೆಂಟನೆಯ ಶತಮಾನದಿಂದ ಆರಂಭಗೊಳ್ಳುತ್ತದೆ.

ಕನ್ನಡ ನಾಡಿನ ಹನ್ನೆರಡನೆಯ ಶತಮಾನದ ಶರಣರ ಚಳುವಳಿಯು ವಿಶ್ವ ಸಂಸ್ಕೃತಿಯ ದೃಷ್ಟಿಯಿಂದ ಅತ್ಯಂತ ಮಹತ್ವದ ಸಾಂಸ್ಕೃತಿಕ ಚಳುವಳಿಯೆಂದು ಒಪ್ಪಿಕೊಳ್ಳುವಾಗ ಅದಕ್ಕೆ ಆಶ್ರಯವಾದ ಬೀದರ ಸ್ಥಳದ ನೆನಪು ಬಾರದೆ ಇರುವುದಿಲ್ಲ. ಇಂದು ಜಿಲ್ಲಾ ಸ್ಥಳವಾಗಿರುವ ಬೀದರ ಜಿಲ್ಲೆ ಔರಾದ, ಹುಮನಾಬಾದ, ಬಸವಕಲ್ಯಾಣ, ಭಾಲ್ಕಿ ತಾಲ್ಲೂಕುಗಳನ್ನು ಒಳಗೊಂಡಿದೆ. ಬೀದರ ಒಂದು ತಾಲ್ಲೂಕಾ ಸ್ಥಳವಾಗಿ ಎಣಿಕೆ ಮಾಡುವಾಗ ಒಟ್ಟು ಜಿಲ್ಲೆ ಐದು ತಾಲ್ಲೂಕಾಗಳ ವ್ಯಾಪ್ತಿ ಹೊಂದುತ್ತದೆ.

ಹಿತಕರವಾದ ಹವಾಗುಣವನ್ನು ಹೊಂದಿರುವ ಈ ಜಿಲ್ಲೆಯು ಸಂಸ್ಕೃತಿಯ ದೃಷ್ಟಿಯಿಂದಲೂ ಸಮೃದ್ಧವಾಗಿದೆ.

ಪುರಾಣ-ಇತಿಹಾಸದ ಆಕರಗಳು ಇದನ್ನು 'ವಿದುರಾನಗರ' 'ಕುಂತಳದೇಶ'ವೆಂದು ಕರೆದಿವೆ. ಬಹುಶಃ ವಿಶ್ವ ಪ್ರಸಿದ್ಧವಾದ ಬಿದರಿ ಕಲೆಗೆ ಇದು ಮಾತೃಕೆಯಾದುದರಿಂದ 'ಬೀದರ' ಎಂಬ ನಾಮ ಧಾರಣ ಮಾಡಿರಬೇಕು. ನಂದರು, ಮೌರ್ಯರು, ಶಾತವಾಹನರು, ವಾಕಟಕರು, ಬದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಳಚುರಿಯರು, ಕಾಕತಿಯರು, ಯಾದವರು ಮುಂತಾದ ಹಿಂದೂ ಅರಸು ಮನೆತನಗಳ ಆಳ್ವಿಕೆಯೊಂದಿಗೆ ಮುಸ್ಲೀಮರ ಆಡಳಿತದ ಪದ್ಧತಿಯನ್ನು ಈ ಸ್ಥಳವು ಕಂಡಿದೆ.

ಬೌದ್ಧ, ಜೈನ, ವೈಷ್ಣವ, ಶೈವ, ವೀರಶೈವಾದಿ ಧರ್ಮಗಳ ಆಡುಂಬೊಲವಾಗಿಯೂ ಬೀದರ ಜಿಲ್ಲೆ ನಿಂತುಕೊಂಡಿದೆ. ತನ್ನ ನೆಲೆಯದ್ದೇ ಆದ ಕಲ್ಯಾಣದ ಮೂಲಕ ಪ್ರಪಂಚವು ಹಿಂದೆಂದೂ ಕಂಡರಿಯದ ಕ್ರಾಂತಿಯನ್ನು ಘಟಿಸಿದುದು ಅದರ ಹೆಗ್ಗಳಿಕೆಗೆ ಸಾಕ್ಷಿಯಾಗಿದೆ.

ಹಿಂದೂ-ಮುಸ್ಲೀಮ ವಾಸ್ತು ಶಿಲ್ಪಗಳ ಸಮನ್ವಯತೆಯೂ ಈ ಜಿಲ್ಲೆಯ ಶಿಲ್ಪಕಲೆಯ ಮುಖ್ಯ ಗುಣವಾಗಿದೆ. ಚಿದ್ರಿಕಲೆ, ಬಿದರಿ ಕಲೆಗಳು ಬೀದರನ್ನು ವಿಶ್ವಕಲೆಯ ಭೂಪಟದಲ್ಲಿ ನಿಲ್ಲುವಂತೆ ಮಾಡಿವೆ.

ಹಿಂದೂ-ಮುಸ್ಲೀಮ ಭಾವೈಕ್ಯದ ಸ್ಥಳವಾಗಿರುವ ಬೀದರ ಜಿಲ್ಲೆಯು ತತ್ತ್ವಪದ ಸಾಹಿತ್ಯ ಪರಂಪರೆಯಲ್ಲಿಯೂ ಅದರ ಸತ್ವವನ್ನು ಅಳವಡಿಸಿಕೊಂಡಿದೆ. ಬೀದರ ಜಿಲ್ಲೆಯ ತತ್ತ್ವಪದಕಾರರಲ್ಲಿ ಹಲವಾರು ಜಾತಿ-ಮತ-ಪಂಥ-ಪಂಗಡಗಳ ತತ್ತ್ವಪದಕಾರರಿರುವಂತೆ, ಹಲವು ವೃತ್ತಿ ಮೂಲದವರೂ ಆಗಿದ್ದಾರೆ. ಬೀದರ ಜಿಲ್ಲೆಯ ತತ್ತ್ವಪದಕಾರರ ಅಧ್ಯಯನವೆಂದರೆ ಒಂದು ಅರ್ಥದಲ್ಲಿ 'ವೈವಿಧ್ಯತೆಯಲ್ಲಿ ಏಕತೆ'ಯ ಅಧ್ಯಯನವೇ ಆಗಿದೆ.

ಬೀದರ ಜಿಲ್ಲೆಯ ತತ್ತ್ವಪದಕಾರರನ್ನು ಕುರಿತು ಈ ಮೊದಲಿಗೆ ಹಲವಾರು ವಿದ್ವಾಂಸರು ತಮ್ಮ ತಮ್ಮ ಪರಿಮಿತ ನೆಲೆಯಲ್ಲಿ ಕಾರ್ಯ ಮಾಡಿರುವುದುಂಟು. ದೇಶಾಂಶ ಹುಡಗಿ, ಡಾ.ಬಸವರಾಜ ಸಬರದ, ಡಾ. ಗುರುಲಿಂಗಪ್ಪ ಧಬಾಲೆ, ಡಾ. ಐಶ್ವರ್ಯ, ಶ್ರೀ ಕಾಶಿನಾಥರೆಡ್ಡಿ, ಡಾ.ಮಾಣಿಕರಾವ ಧನಾಶ್ರೀ ಮುಂತಾದವರನ್ನು ಈ ಸಂದರ್ಭದಲ್ಲಿ ಹೆಸರಿಸಲೇಬೇಕಾಗುತ್ತದೆ. ಡಾ.ಗುರುಲಿಂಗಪ್ಪ ದಭಾಲೆ ಅವರು "ಬೀದರ ಜಿಲ್ಲೆಯ ಅನುಭಾವ ಕವಿಗಳು" ಎಂಬ ವಿಷಯವನ್ನು ಇಟ್ಟುಕೊಂಡು ಪಿಎಚ್.ಡಿ. ಅಧ್ಯಯನ ಕೈಗೊಂಡು ಬೀದರ ಜಿಲ್ಲೆಯ ತತ್ತ್ವಪದ ಸಾಹಿತ್ಯ ಪರಂಪರೆಯ

ಮೇಲೆ ಬೆಳಕು ಚೆಲ್ಲುವ ಕಾರ್ಯ ಮಾಡಿದಂತೆ, ಡಾ. ಐಶ್ವರ್ಯ ಅವರು "ಬೀದರ ಜಿಲ್ಲೆಯ ದಲಿತ ತತ್ತ್ವಪದಕಾರ"ರನ್ನು ಕುರಿತು ಪಿಎಚ್.ಡಿ. ಅಧ್ಯಯನ ಕೈಗೊಂಡು ಅಜ್ಞಾತವಾಗಿದ್ದ ಕೆಳವರ್ಗದ ಅನುಭಾವಿ ಕವಿಗಳನ್ನು ಹೊರಗೆ ಹಾಕಿದ್ದಾರೆ. ಉಳಿದ ಹಲ-ಕೆಲವು ವಿದ್ವಾಂಸರು ಕವಿಗಳ ತತ್ತ್ವಪದಗಳ ಸಂಪಾದನ ಕಾರ್ಯ ಕೈಗೊಂಡಿದ್ದಾರೆ. ಇವೆಲ್ಲ ಪ್ರಯತ್ನಗಳು ನಮ್ಮ ಯೋಜನೆಯ ಸಂದರ್ಭದಲ್ಲಿ ಮಹತ್ವದ ಸುಳುಹುಗಳಾಗಿ ನಿಂತುಕೊಂಡಿರುವುದು ಸತ್ಯ.

ಪ್ರಸ್ತುತ ಯೋಜನೆ "ಹೈದ್ರಾಬಾದ ಕನ್ನಡ ಪ್ರದೇಶದ ತತ್ತ್ವಪದಕಾರರ ಸ್ಮಾರಕಗಳ ಸಂಶೋಧನೆ ಮತ್ತು ಪ್ರಕಟಣೆ" ಎಂಬುದಾಗಿದೆ. ಈ ಯೋಜನೆಯ ಭಾಗ ಎರಡರಲ್ಲಿ ನಾನು ಬೀದರ ಮತ್ತು ಕೊಪ್ಪಳ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳ ಸಂಶೋಧನೆ ಕೈಗೊಂಡಿದ್ದೇನೆ. ಬೀದರ ಜಿಲ್ಲೆಗೆ ಸಂಬಂಧಿಸಿದಂತೆ ಸಿದ್ಧಗೊಂಡಿರುವ ಮೂರು ಸಂಪುಟಗಳು ಇಂದು ನಿಮ್ಮ ಕೈಯಲ್ಲಿವೆ.

ಈ ಸಂಪುಟಗಳಲ್ಲಿ ಬರುವ ತತ್ತ್ವಪದಕಾರರು ನಿಮ್ಮೊಂದಿಗೆ ತಮ್ಮ ಸ್ಮಾರಕಗಳ ಮೂಲಕವೆ ಸಂವಾದಕ್ಕೆ ಇಳಿಯುತ್ತಾರೆ. ಹೀಗಾಗಿ ಅವರ ಬದುಕು ಮತ್ತು ಸಾಹಿತ್ಯಿಕ ಸಾಧನೆ ಕುರಿತು ಅತ್ಯಂತ ಸಂಕ್ಷಿಪ್ತವಾಗಿ ಬರೆಯಲಾಗಿದೆ.

ತತ್ತ್ವಪದಕಾರನಿಗೆ ಸಂಬಂಧಿಸಿದಂತೆ ಯಾವ ಯಾವ ಸ್ಮಾರಕಗಳು ದೊರಕುತ್ತವೆಯೋ ಅವುಗಳತ್ತ ಹೆಚ್ಚಾಗಿ ಗಮನವನ್ನು ಕೇಂದ್ರಿಕರಿಸಲಾಗಿದೆ. ಸ್ಮಾರಕಗಳ ಸಂಗ್ರಹ ಕಾರ್ಯ ಯೋಜನೆ ಇದಾಗಿದ್ದರಿಂದ ಆಯಾ ಸ್ಥಳಕ್ಕೆ ಅನಿವಾರ್ಯವಾಗಿ ಹೋಗಲೇಬೇಕಾಯಿತು. ಹೀಗಾಗಿ ಈ ಅಧ್ಯಯನದ ಸಂದರ್ಭದಲ್ಲಿ ನಾನು ಬೀದರ ಜಿಲ್ಲೆಯ ಆರುನೂರಕ್ಕೂ ಮೇಲ್ಪಟ್ಟು ಹಳ್ಳಿಗಳನ್ನೆಲ್ಲ ಸುತ್ತಿದ್ದೇನೆ. ತತ್ತ್ವಪದಕಾರ ಇರುವ ಅಥವಾ ಗತಿಸಿ ಹೋಗಿರುವ ಮನೆಗೆ ಪ್ರತ್ಯಕ್ಷದರ್ಶಿಯಾಗಿ ಭೇಟಿ ನೀಡಿದ್ದೇನೆ. ಕವಿಗೆ ಸಂಬಂಧಿಸಿದ ವ್ಯಕ್ತಿಗಳೊಡನೆ ವಿಚಾರ ವಿನಿಮಯ ಮಾಡಿದ್ದೇನೆ. ಆ ಪರಿಸರದಲ್ಲಿರುವ ಸ್ಮಾರಕಗಳನ್ನು ಚಿತ್ರೀಕರಿಸಿಕೊಂಡು ಸಂಪುಟಗಳಲ್ಲಿ ದಾಖಲಿಸುವ ಕಾರ್ಯ ಮಾಡಿದ್ದೇನೆ. ಇಲ್ಲಿ ಹಿಂದೆಲ್ಲಿಯೂ ದಾಖಲಾಗದ ಎಷ್ಟೋ ತತ್ತ್ವಪದಕಾರರು ಅವರ ಸ್ಮಾರಕಗಳೊಂದಿಗೆ ಮೊಟ್ಟ ಮೊದಲಿಗೆ ದಾಖಲಾಗಿದ್ದಾರೆ. ಹೀಗಿದ್ದರೂ ಎಲ್ಲವನ್ನೂ ನಾನು ಸಂಶೋಧಿಸಿದ್ದೇನೆಂದು ಹೇಳುವ ಧೈರ್ಯ ನನಗಿಲ್ಲ.

ಈ ಸಂಪುಟಗಳ ರಚನಾ ಕಾರ್ಯದ ಹಿನ್ನೆಲೆಯಲ್ಲಿ ಅತೀವ ತಾಳ್ಮೆ-ಸಹನೆ, ಅಪಾರ ಪರಿಶ್ರಮ, ಅಖಂಡ ಆಸಕ್ತಿ, ಸಂಶೋಧನೆಯ ದಾಹ, ಕರ್ನಾಟಕ ಸರಕಾರವು ಉದಾರ ಮನದಿಂದ ಕನ್ನಡ ಭಾಷಾಭಿವೃದ್ಧಿಗಾಗಿ ನೀಡಿರುವ ಲಕ್ಷಾನುಗಟ್ಟಲೇ

ಹಣವಿರುವಂತೆ, ಸಂಪುಟಗಳ ಒಡಲಲ್ಲಿ ಬೀದರ ಜಿಲ್ಲೆಯ ಅಪೂರ್ವ ಮತ್ತು ಅನನ್ಯವಾದ ತತ್ತ್ವಪದ ಸಾಹಿತ್ಯದ ಸಂಪತ್ತು ಅಡಕಗೊಂಡಿದೆ.

ಈ ಸಂಪತ್ತಿಗೆ ವಾರಸುದಾರರಾದ ನೀವು-ನಾವುಗಳು ಇಂತಹ ಸಾಂಸ್ಕೃತಿಕ ನೆಲದಲ್ಲಿ ಬದುಕುತ್ತಿದ್ದೇವೆಂಬುದೇ ಸೌಭಾಗ್ಯದ ಮಾತಲ್ಲವೇನು?

ಡಾ. ಎಸ್.ಎಂ. ಹಿರೇಮಠ

ಪರಿವಿಡಿ

ಔರಾದ ತಾಲ್ಲೂಕ

ಬಸವಕಲ್ಯಾಣ ತಾಲ್ಲೂಕ

ಔರಾದ ತಾಲ್ಲೂಕ

02

೧. ಮಡಿವಾಳಪ್ಪ ಕೆಂಚಾ

(ಕ್ರಿ.ಶ.ಸು. ೧೮೪೨-೧೯೧೭)

ಮಡಿವಾಳಪ್ಪ ಕೆಂಚಾ ಅವರು ಶರಣ ಜೀವಿಗಳು. ಅವರ ಸ್ವಗ್ರಾಮವು ಚಿಕ್ಕ ಆಲೂರು. ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಬರುವ ಊರು. ಈ ಗ್ರಾಮವು ಮಾಂಜ್ರಾನದಿಯ ದಡದ ಮೇಲಿದೆ. ಹೀಗಾಗಿ ಇದರ ಸುತ್ತಲಿನ ಪರಿಸರವು ಹಚ್ಚ ಹಸುರಾಗಿದ್ದು; ಮನಸ್ಸಿಗೆ ಮುದವನ್ನು ನೀಡುತ್ತದೆ. ಇಂದು ಈ ಗ್ರಾಮದಲ್ಲಿ ಮಡಿವಾಳಪ್ಪನವರ ವಂಶಸ್ಥರು ಇದ್ದಾರೆ. ಅವರಿಗೆ ಗಂಡು ಸಂತಾನವಿರಲಿಲ್ಲ. ಇಂದು ಇರುವವರು ಮಡಿವಾಳಪ್ಪನವರ ಕಿರಿಯ ಸಹೋದರ ಪ್ರಭುಶೆಟ್ಟಿ ಅವರ ಸಂತತಿಯ ಬಳ್ಳಿ.

ಮಡಿವಾಳಪ್ಪನವರ ತಂದೆ ಕರಿಬಸಪ್ಪ. ತಾಯಿ ಶರಣಮ್ಮ. ಈ ಶರಣ ದಂಪತಿಗಳಿಗೆ ಮಡಿವಾಳಪ್ಪನವರು ಕ್ರಿ.ಶ. ೧೮೪೨ರಲ್ಲಿ ಜನಿಸಿದರು. ಕರಿಬಸಪ್ಪನವರು ಆಧ್ಯಾತ್ಮ ಜೀವಿಗಳಾಗಿದ್ದರು. ಅವರಿಗೆ ತಾತ್ವಿಕ ವಿಚಾರಗಳ ಬಗೆಗೆ ಆಳವಾದ ಪರಿಜ್ಞಾನವಿದ್ದಿತು. ಅವುಗಳ ಅನುಸಂಧಾನವೂ ಅವರು ಮಾಡುತ್ತಿದ್ದರು. ಕರಿಬಸಪ್ಪನವರಿಗೆ ಸ್ವರ್ಗ-ನರಕಗಳು ಬೇರೆ ಇರಲಿಲ್ಲ. ಶರಣರು ಹೇಳಿದಂತೆ ಈ ಬದುಕಿನಲ್ಲಿಯೇ ಅವುಗಳನ್ನು ಕಾಣುವುದಾಗಿತ್ತು. ಆಗಾಗ ಅವರು ತಾವು "ಸ್ವರ್ಗ ಕಂಡಿರುವುದಾಗಿ" ಹೇಳುತ್ತಿದ್ದರು. ಅದಕ್ಕೆ "ಚಿಹ್ನೆಯೇನು?" ಎಂದು ಕೇಳಿದರೆ "ನನ್ನ ಸಮಾಧಿಯ ಮೇಲೆ ತನ್ನಷ್ಟಕ್ಕೆ ತಾನೇ ಒಂದು ಬಿಲ್ವ ಪತ್ರಿಯ ಗಿಡವು ಮೊಳೆಯುತ್ತದೆ-ಅದೆ ಚಿಹ್ನೆ" ಎಂದು ಹೇಳುತ್ತಿದ್ದರು. ಮುಂದೆ ಅವರ ಮಾತು ದಿಟವಾಯಿತು.

ಕರಿಬಸಪ್ಪನವರು ಕೃಷಿ ಕಾಯಕ ಜೀವಿಗಳು. ಸಾಕಷ್ಟು ಆಸ್ತಿಯಿದ್ದಿತು. ಶ್ರೀಮಂತರ ಮನೆತನ. ಅವರಿಗೆ ಬಡವರ ಬಗೆಗೆ - ದೀನ-ದುಃಖಿತರ ಬಗೆಗೆ ಅಗಾಧ ಕಾಳಜಿ-ಕಳಕಳಿಗಳಿದ್ದವು. ಭೀಕರ ಬರಗಾಲದಲ್ಲಿ ಅವರು ತಮ್ಮ ಊರಿನ ಜನರಿಗೆ ಸಹಾಯ ಮಾಡಿದ್ದಲ್ಲದೆ; ಮುಳ್ಳುಸಾವಳಿಗೆಯ ಗ್ರಾಮದ ಜನಕ್ಕೂ ಅನ್ನ-ನೀರಿನ ವ್ಯವಸ್ಥೆ ಮಾಡಿದರು; ಅವರ ದನ - ಕರುಗಳಿಗೆ ಮೇವಿನ ವ್ಯವಸ್ಥೆ ಮಾಡಿದರು. ಕರಿಬಸಪ್ಪನವರ ಪತ್ನಿ ಶರಣಮ್ಮನವರಾದರೂ ದಾಸೋಹ ಮನದವರು. ಹೆಸರಿಗೆ ತಕ್ಕಂತೆ ಶರಣೆಯೇ ಆಗಿದ್ದರು. ಇಂತಹ ದಂಪತಿಗಳ ಗುಣಗಳನ್ನು ಮೈಗೊಂಡು ಮಡಿವಾಳಪ್ಪನವರು ಹುಟ್ಟಿದುದು ಸಹಜವೇ ಆಗಿದೆ.

ಮಡಿವಾಳಪ್ಪನವರು ಬಾಲ್ಯದಲ್ಲಿ ಕಲಿತದ್ದು ಮೋಡಿ; ಮಠದ ಅಯ್ಯಗಳ ಶಾಲೆಯಲ್ಲಿ ಒಂದಿಷ್ಟು ಸಂಸ್ಕೃತ. ಅವರ ಕಾಯಕ ಕೃಷಿ. ಮಡಿವಾಳಪ್ಪನವರು ತಂದೆಯಂತೆ ಧಾರ್ಮಿಕ ಪ್ರವೃತ್ತಿವುಳ್ಳವರೆ ಆಗಿದ್ದರು. ಹೀಗಾಗಿ ಆದಷ್ಟು ಅವರು ಅಹಿಕ ಬದುಕಿನಿಂದ ದೂರವಿರುವುದಕ್ಕೆ ಬಯಸಿ ಮದುವೆಯನ್ನು ನಿರಾಕರಿಸಿದರು. ಕರಿಬಸಪ್ಪನವರಿಗೆ ಮಡಿವಾಳಪ್ಪನವರಲ್ಲದೆ ಪ್ರಭುಶೆಟ್ಟಿಯೆಂಬ ಇನ್ನೊಬ್ಬ ಕಿರಿಯ ಮಗನೂ ಇದ್ದನು. ರುದ್ರವ್ವ, ಪ್ರಭಾವತಿ, ಸಂಗವ್ವ, ರಾಚವ್ವ ಎಂಬ ನಾಲ್ವರು ತಂಗಿಯಂದಿರಿದ್ದರು.

ಮಡಿವಾಳಪ್ಪನವರಿಗೆ ಒತ್ತಾಯದಿಂದ ವಿವಾಹ ಮಾಡಲಾಯಿತು. ನೀಲಮ್ಮನವರು ಸತಿಯಾಗಿ ಬಂದರು. ಆದರೆ ಮಡಿವಾಳಪ್ಪನವರು ಅದೇ ದಿನ ರಾತ್ರಿ ಮನೆ ಬಿಟ್ಟು ಹೋಗುತ್ತಾರೆ. ಯೋಗ್ಯ ಗುರುವಿನ ಹುಡುಕಾಟದ ಹಾದಿ ಮಡಿವಾಳಪ್ಪನವರನ್ನು ಹುಮನಾಬಾದ ತಾಲ್ಲೂಕಿನ ಹುಡಗಿ ಗ್ರಾಮಕ್ಕೆ ಕರೆದುಕೊಂಡು ಬರುತ್ತದೆ. ಅಲ್ಲಿನ ಶಿವಯೋಗಿ ಕರಿಬಸವ ಸ್ವಾಮಿಗಳಿಗೆ ಗುರುವಾಗಿ ದೀಕ್ಷೆ ನೀಡಲು ಮಡಿವಾಳಪ್ಪನವರು ಕೇಳಿದರು. ಕರಿಬಸವರು "ನಿನ್ನಂಥ ಮಹಾಜ್ಞಾನಿಗೆ ಗುರುವಾಗುವ ಅರ್ಹತೆ ನನ್ನಲ್ಲಿ ಇಲ್ಲ" ಎಂದು ಹೇಳುತ್ತಾರೆ. ಮುಂದೆ ಮಡಿವಾಳಪ್ಪನವರಿಗೆ ಆಂಧ್ರ ಪ್ರದೇಶದ ನಿಜಾಮಬಾದ ಜಿಲ್ಲೆಯಲ್ಲಿರುವ ಮದನೂರಿನಲ್ಲಿ ವಾಸವಾಗಿದ್ದ ಸಿದ್ಧಲಿಂಗರು ಗುರುವಾಗಿ ದೊರಕಿದರು. ಅವರು ಮೂಲತಃ ಬಸವಕಲ್ಯಾಣ ತಾಲ್ಲೂಕಿನ ಗೊರಟಾ ಗ್ರಾಮದವರು. ಅವರಿಂದ ದೀಕ್ಷೆಗೊಂಡ ಮಾಡಿವಾಳಪ್ಪನವರು ಗುರುಗಳ ಅಪ್ಪಣೆಯಂತೆ ಮರಳಿ ಬಂದು ಊರಲ್ಲಿ ಸಂಸಾರ ನಿರ್ವಹಣೆ ಮತ್ತು ಕೃಷಿ ಕಾಯಕಕ್ಕೆ ತೊಡಗುತ್ತಾರೆ. ಮಡಿವಾಳಪ್ಪನವರಿಗೆ ಅಕ್ಕ ನಾಗಮ್ಮ – ಗಂಗಮ್ಮ ಎಂಬಿಬ್ಬರು ಹೆಣ್ಣು ಮಕ್ಕಳು ಜನಿಸುತ್ತಾರೆ.

ಮಡಿವಾಳಪ್ಪನವರು ಹೊರಗಡೆ ಹೊಲದ ಕೃಷಿ ಮಾಡುತ್ತ, ಅಂತರಂಗದಲ್ಲಿ ಆತ್ಮ ಕೃಷಿಗೂ ತೊಡಗಿದರು. ದಿನನಿತ್ಯ ಮೂರು ಹೊತ್ತು ಸ್ನಾನ, ಇಷ್ಟಲಿಂಗ ಪೂಜೆ ಮಾಡಿಕೊಳ್ಳುತ್ತಿದ್ದರು. ಜಂಗಮ ಪಾದೋದಕ ಸ್ವೀಕರಿಸಿ; ಪ್ರಸಾದ ಮುಗಿಸುತ್ತಿದ್ದರು. ಪುರಾಣ – ಪ್ರವಚನ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. ಗುರು – ಶರಣಬಸವ – ಶಿವಭಜನೆಯ ಹಾಡುಗಳನ್ನು ಹಾಡುತ್ತಿದ್ದರು. ಶರಣ ಜೀವರೊಡಗೂಡಿ ಅನುಭಾವ ಗೋಷ್ಠಿ ನಡೆಸುತ್ತಿದ್ದರು. ಈ ಸಾಧನೆಯಿಂದ ಮಡಿವಾಳಪ್ಪನವರಲ್ಲಿ ಆತ್ಮಜ್ಞಾನವೂ ಹೆಚ್ಚಿತು, ಕವಿ ಪ್ರಜ್ಞೆಯೂ ಜಾಗ್ರತವಾಯಿತು. ತಮಗೆ ಅಂತರಂಗದಲ್ಲಿ ಕಂಡ ಅನುಭವವನ್ನೇ ಅವರು ತತ್ತ್ವಪದಗಳಾಗಿಸಿ ಹೊರಗೆ ಹಾಕಿದರು.

ಮಡಿವಾಳಪ್ಪನವರ ಅನುಭಾವ ಸಾಹಿತ್ಯದಲ್ಲಿ ಗುರು ಭಜನೆ, ಶಿವ ಭಜನೆ, ಬಸವ ಭಜನೆಯ ಪದಗಳು ಸೇರಿವೆ. ಹಾಗೆಯೆ ಹಲವಾರು ಮಂಗಳಾರುತಿ,

ಕರ್ಪೂರಾರತಿ ಪದ್ಯಗಳನ್ನು ಅವರು ರಚಿಸಿದ್ದಾರೆ. ಅವರ ಭಜನೆ ಹಾಡುಗಳನ್ನು ಕೌಠಾದ ಸಿದ್ಧರಾಮಯ್ಯನವರು ಸಂಪಾದಿಸಿ ಕೊಟ್ಟಿದ್ದಾರೆ.

ಮಡಿವಾಳಪ್ಪನವರು ಅಂತರ್‌ದೃಷ್ಟಿಯುಳ್ಳವರಾಗಿದ್ದರು. ತಮಗೆ ಒದಗಿ ಬರಲಿದ್ದ ಸಾವಿನ ಸಂಗತಿಯನ್ನು ಅವರು ಮೊದಲೇ ತಮ್ಮ ಬಂಧು – ಬಾಂಧವರು, ಶಿಷ್ಯರುಗಳಿಗೆ ಹೇಳಿದ್ದರು. ತಮಗೆ "ಶವಸಂಸ್ಕಾರ"ದ ಕಾರ್ಯದಲ್ಲಿ 'ವಿಭೂತಿವೀಳ್ಯ" ಮಾಡಬೇಕೆಂದೂ ತಿಳಿಸಿದ್ದರು. ತಾವು ಲಿಂಗೈಕ್ಯರಾಗುವ ದಿನ ಜಂಗಮ ಸಮಾರಾಧನೆ ಮಾಡಿಸಿದರು. ಜಂಗಮರ ಪಾದೋದಕ–ಪ್ರಸಾದ ಸ್ವೀಕರಿಸಿದರು. ತಮ್ಮ ಸಮಾಧಿಯ ಸುತ್ತಲೂ ತಾವೇ ರಂಗವಲ್ಲಿ ಹಾಕಿದರು. ಅವರು ಹೇಳಿದ ನಿಶ್ಚಿತ ಸಮಯಕ್ಕೆ ಮಡಿವಾಳಪ್ಪನವರು ಲಿಂಗದೊಳಗಾದರು. ಅವರು ಲಿಂಗೈಕ್ಯರಾದ ವರ್ಷವು ಕ್ರಿ.ಶ. ೧೯೧೭. ಮಡಿವಾಳಪ್ಪನವರು ತಮ್ಮ ಹಾಡುಗಳಿಗೆ ಗುರುಸಿದ್ಧಲಿಂಗರ ಹೆಸರನ್ನೆ ಮುದ್ರಿಕೆಯಾಗಿ ಬಳಸಿದ್ದಾರೆ. ಇಲ್ಲಿ ಎರಡು ಪದ್ಯಗಳನ್ನು ಕೊಡಲಾಗಿದೆ:

ಅಂತರಂಗ ಜ್ಞಾನ ತಿಳಿಯೊ

ಡಂಬಕತನ ಸಂಸಾರದ ಗೋಳ
ಹೇಳಿಕೊಂಡೆ ಬಹಳ ಪರರೊಳಗೆ ಹೇಳಿಕೊಂಡೆ ॥ ೧ ॥

ಸಂಸಾರ ಸಂಪತ್ತು ಮೆಚ್ಚಿ ಧರ್ಮ ಮರೆತು
ವ್ಯರ್ಥಗಳದೆ ಹೊತ್ತು ತಿಳಿಲಿಲ್ಲ ಗೊತ್ತು ॥ ೨ ॥

ನೀರು ಗುರುಳಿ ಪರಿಯೊ ತೋರಿ ಅಡಗುವ ದೇಹ
ಮೆಚ್ಚ ಬೇಡ ಕಾಯ ಕೆಟ್ಹೋಗುವದು ॥ ೩ ॥

ಗಾಳಿಗಿಟ್ಟ ದೀಪ ಹೋಗುವದೀ ರೂಪ
ಕಳೆಯೊ ನೀತಿ ಪಾತ ತಿಳಿ ನಿಜರೂಪ ॥ ೪ ॥

ಗಾಳಿ ಬಿಟ್ಟಾಗ ತೂರಿಕೊಳ್ಳೋ ಬೇಗ
ಗಾಳಿ ನಿಂತಾಗ ಏನಿಲ್ಲದಾಗ ॥ ೫ ॥

ಹೊಟ್ಟು ಹಾರಿಸಿಕೊಳ್ಳು ನಿಜವ ಉಳಿಸಿಕೊಳ್ಳೊ
ಪುಣ್ಯಗಳಿಸಿಕೊಳ್ಳೊ ತಿಳಿ ನಿನ್ನೊಳು ॥ ೬ ॥

ಲಿಂಗಪೂಜೆ ಮಾಡಿ ಜಂಗಮಕೆ ನೀಡಿ
ಪರೋಪಕಾರ ಮಾಡಿ ಮೋಕ್ಷಾ ಪಡಿ ॥ ೭ ॥

ಪರಸ್ತ್ರೀಯರ ಸಂಗ ಆಗುವುದು ವ್ರತಭಂಗ
ಮಾಡಬೇಕೋ ಮಂಗ ಹುಚ್ಚ ಹಿಡಿದಂಗ ॥ ೮ ॥

ಮೂರ್ಖ ಮನುಜರ ಕೂಡ ಗೆಳೆತನವು ಬೇಡಾ
ಮಂದ ಮತಿಯ ಮೂಢ ಮೋಕ್ಷಾಕೆ ಕೇಡ ॥ ೯ ॥

ಕಳವು ಮಾಡಬೇಡ ಸಟೆಯ ನುಡಿಯಲು ಬೇಡ
ಸತ್ಪುರುಷರ ಕೂಡ ಅಗಲಿರಬೇಡ ॥ ೧೦ ॥

ಅಂತರಂಗ ಜ್ಞಾನ ತಿಳಿಯೋ ನೀನು
ಪೂರ್ಣಗುರು ಸಿದ್ಧಲಿಂಗನ ಮಾಡೋ ಧ್ಯಾನ ॥ ೧೧ ॥

(ಶ್ರೀ ಸಿದ್ಧಲಿಂಗೇಶ್ವರ ಭಜನಾಮೃತ. ಪು. ೪೩)

ಶಿವಾಚಾರ ನೀಗಿ ನಡೆದವರಿಗೆ ನರಕ

ಶಿವನ ಭಕ್ತನಾಗಿ ಅನ್ಯಮತಕ ಹೋಗಿ
ಶಿವಾಚಾರ ನೀಗಿ ನಡೆದವರಿಗೆ ॥ ೧ ॥

ಬಿದ್ದು ಯಮ ಗುಂಡದಲಿ ಮುಳುಗಿ ತೇಲುತಲೆ
ನರಕ ಭೋಗಿಸುತಲಿ ಇಂದು ಕಡೆಯಲ್ಲ ॥ ೨ ॥

ನಾನಾ ಜನ್ಮಗಳು ತಿರುಗಿ ತಿರುಗಿ ಬರಲು
ಅಂತ್ಯ ಜಾತಿಯೊಳು ಹುಟ್ಟುವರು ॥ ೩ ॥

ವಿಭೂತಿ ಧರಿಸರು ರುದ್ರಾಕ್ಷಿ ಬಿಟ್ಟರು
ಬಹು ಜನ ಕೆಟ್ಟರು ಶಿವಾಚಾರದವರು ॥ ೪ ॥

ಕರ್ಮವ ಮಾಡುವರು ಅಧರ್ಮ ನಡೆವರು
ಮರ್ಮವ ತಿಳಿಯರು ಧರ್ಮ ಬಿಡುವರು ॥ ೫ ॥

ಚಂದನ ರೇಖೆ ತುಳಸಿ ಮಾಲೆ ಹಾಕಿ
ಇರುವರು ಬಹು ಶೋಕಿ ಅರಿಯರು ಧಾಕಿ ॥ ೬ ॥

ಗುರುಲಿಂಗ ಜಂಗಮ ಪಾದೋದಕ ಪ್ರಸಾದನೇಮ
ಬಿಟ್ಟವರಿಗೆ ಯಮ ಶಿಕ್ಷೆ ಮಾಡುವ ॥ ೭ ॥


ಅಷ್ಟಾವರ್ಣ ಕೆಟ್ಟು ಶಿವಾಚಾರ ಬಿಟ್ಟು
ಅನ್ಯಕ್ಕೆ ಮನಸಿಟ್ಟು ನಡೆವ ಭ್ರಷ್ಟರು ॥ ೮ ॥

ಪರಪುರುಷನ ಸಂಗ ಮಾಡುವ ಹಾದರಿ ಹಂಗ
ಮನಿ ಪುರುಷನ ಸಂಗ ಬಿಟ್ಟಿರುಹಂಗ ॥ ೯ ॥

ಅನ್ಯ ದೈವಕ ಹೋಗಿ ಅಡ್ಡ ಬಿದ್ದು ಎರಗಿ
ನಡೆಸಿಕೊಡೋ ಭೋಗಿ ನಮ್ಮ ಹರಕೆಗೆ ॥ ೧೦ ॥

ಶಿವಾಚಾರ ಮಾರ್ಗ ತಿಳಿಸಿದ ಎನಗೀಗ
ಶ್ರೀ ಗುರು ಸಿದ್ಧಲಿಂಗ ಮನ ಬೋಧದಾಗ ॥ ೧೧ ॥


(ಶ್ರೀ ಸಿದ್ಧಲಿಂಗೇಶ್ವರ ಭಜನಾಮೃತ. ಪು. ೪೫)




ಮಡಿವಾಳಪ್ಪನವರ ಹಳೆಯ ಮನೆ (ಚಿಕ್ಕ ಆಲೂರು).



ಹಳೆ ಮನೆಯ ಒಳಾಂಗಣ ನೋಟ.



ಮಡಿವಾಳಪ್ಪ ಕೆಂಚಾ ಅವರ ಹೊಸ ಮನೆ (ಚಿಕ್ಕ ಆಲೂರು)




ಮಡಿವಾಳಪ್ಪ ಕೆಂಚಾ ಅವರ ವಂಶದ ಸಂತತಿಗಳು.




ಮಡಿವಾಳಪ್ಪ ಕೆಂಚಾ ಅವರ ಸೊಸೆ ಗಂಗಮ್ಮ



ಮಡಿವಾಳಪ್ಪ ಕೆಂಚಾ ಅವರ
ಗುರುಗಳು ತುಂಬಲೂರು
ಬಸವಲಿಂಗ ಶಿವಯೋಗಿ.
(ದೇಗಲೂರ ತಾ.)



ಮಡಿವಾಳಪ್ಪ ಕೆಂಚಾ ಅವರ ಆರಾಧ್ಯ ದೇವರು ಬಸವಣ್ಣನ ದೇವಾಲಯ (ಚಿಕ್ಕ ಆಲೂರು).



ಬಸವಣ್ಣನ ದೇವಾಲಯದ ಒಳಗಿರುವ ನಂದಿ ವಿಗ್ರಹ.

೨. ಸಿದ್ಧರಾಮಪ್ಪ ಬಿರಾದಾರ (ಕ್ರಿ.ಶ.ಸು. ೧೮೫೫–೧೯೩೦)

ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಬರುವ ಕಾಳಗಾಪುರ ಗ್ರಾಮವು ಸಿದ್ಧರಾಮಪ್ಪ ಬಿರಾದಾರ ಅವರ ನೆಲಸುವಿಕೆಯಿಂದ ಸಾಂಸ್ಕೃತಿಕ ಚರಿತ್ರೆಯಲ್ಲಿ ದಾಖಲುಗೊಳ್ಳುವಂತಾಗಿದೆ. ಇಂದು ಆ ಪರಿಸರದಲ್ಲಿ ಹಲವಾರು ಸ್ಮಾರಕಗಳು ಸಿದ್ಧರಾಮಪ್ಪನವರ ಬದುಕಿನ ವಿವರಗಳನ್ನು ಅನಾವರಣ ಮಾಡುತ್ತವೆ.

ಸಿದ್ಧರಾಮಪ್ಪನವರು ಅಂದು ವಾಸ ಮಾಡುತ್ತಿದ್ದ ಮನೆ; ತಮ್ಮ ಗುರುಗಳೊಂದಿಗೆ ಸ್ಥಾಪಿಸಿದ ಸಿದ್ಧರಾಮೇಶ್ವರ ಮೂರ್ತಿ ಗದ್ದುಗೆ, ಸಿದ್ಧರಾಮ ಲಿಂಗ ಉದ್ಭವಿಸಿದ ಸ್ಥಳದಲ್ಲಿ ಸಿದ್ಧರಾಮಪ್ಪನವರು ನೆಟ್ಟ ನಂದ್ಯಾಲದ ವೃಕ್ಷ, ಅವರು ಹೊತ್ತಿಸಿದ ಧುನಿ, ಮಿಡಿದ ಏಕತಾರಿ, ಹಚ್ಚಿದ ನಂದದ ದೀಪ, ಸಿದ್ಧರಾಮಪ್ಪನವರ ಮಗ ಶಂಕರೆಪ್ಪನವರ ಮತ್ತು ಆತನ ಪತ್ನಿ ಸಂಗಾಬಾಯಿ ಅವರ ಸಮಾಧಿಗಳು, ಶಂಕರೆಪ್ಪ ದಂಪತಿಗಳು ಹಚ್ಚಿ ಬೆಳೆಸಿದ ಆಲದ ವೃಕ್ಷ – ಇವೆಲ್ಲ ನಮಗೆ ಸಿದ್ಧರಾಮಪ್ಪನವರ ವಿವರಗಳನ್ನು ಮತ್ತೆ ಎದುರಿಗೆ ತಂದು ನಿಲ್ಲಿಸುತ್ತವೆ. ಈಗ ಇಲ್ಲಿ ಸಿದ್ಧರಾಮಪ್ಪನವರ ವಂಶಸ್ಥರೆಂದು ಹೇಳಿಕೊಳ್ಳುವ ಸು. ಎಂಬತ್ತು ವರುಷ ವಯಸ್ಸಿನ ಈರಮ್ಮಾ ಆಯಿ (ಸಿದ್ಧರಾಮಪ್ಪನವರ ಮಗ ಸಂಗಪ್ಪನವರ ಮೊಮ್ಮಗಳು) ಮತ್ತು ಎಪ್ಪತ್ತೈದು ವರುಷ ವಯಸ್ಸಿನ ಕಂತೆಪ್ಪ ಬಿರಾದಾರ (ಸಿದ್ಧರಾಮಪ್ಪನವರ ಮಗ ಚೆನ್ನಪ್ಪ ಮತ್ತು ಪಾರಮ್ಮರ ಮಗ) ಅವರು ವಾಸವಾಗಿದ್ದಾರೆ.

ಸಿದ್ಧರಾಮಪ್ಪನವರ ಪೂರ್ವಜರು ಮೊದಲಿಗೆ ವಾಸಿಸುತ್ತಿದ್ದುದು ಬೀದರ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಕುಟೇಗಾಂವ ಎಂಬ ಗ್ರಾಮದಲ್ಲಿ. ಇಂದು ಅಲ್ಲಿ ಸಿದ್ಧರಾಮಪ್ಪನವರ ಸಂಬಂಧಿಕರು ಇದ್ದಾರೆ. ಸಿದ್ಧರಾಮಪ್ಪನವರದು ಒಕ್ಕಲುತನದ ಕುಟುಂಬ. ಅವರ ತಂದೆಯವರು ಒಕ್ಕಲುತನ ಮಾಡುತ್ತ, ಬದುಕನ್ನು ನಡೆಸುತ್ತಿದ್ದರು. ವೀರಶೈವ ಸಂಸ್ಕೃತಿಯ ಪರಿಪಾಲಕರಾಗಿದ್ದ ಅವರು ಆರ್ಥಿಕವಾಗಿ ತಕ್ಕಮಟ್ಟಿನ ಸ್ಥಿತಿಯಲ್ಲಿದ್ದವರು. ಸಿದ್ಧರಾಮಪ್ಪನವರ ತಂದೆಯ ಹೆಸರು ತಿಳಿದಿಲ್ಲ, ತಾಯಿಯ ಬಗೆಗೆ ಹೇಳುವಾಗ ಕೆಲವರು 'ಈರಮ್ಮ' ಎಂದು ಹೇಳುತ್ತಾರೆ. ಸಿದ್ಧರಾಮಪ್ಪನವರ ಹೆಂಡತಿ ಗುಣವಂತೆವ್ವ ಎಂದು ಉಲ್ಲೇಖಿಸುತ್ತಾರೆ.

ಸಿದ್ಧರಾಮಪ್ಪ–ಗುಣವಂತೆವ್ವ ದಂಪತಿಗಳಿಗೆ ನಾಲ್ಕು ಜನ ಗಂಡು ಮಕ್ಕಳು ಮತ್ತು ಒಬ್ಬಳು ಮಗಳು. ಸಂಗಪ್ಪ, ಮಡಿವಾಳಪ್ಪ, ಗುರುಲಿಂಗಪ್ಪ, ಶಂಕರೆಪ್ಪ ಎಂಬುವರೆ ಆ ಮಕ್ಕಳು. ನೀಲಮ್ಮ ಎಂಬುದು ಸಿದ್ಧರಾಮಪ್ಪನವರ ಮಗಳ ಹೆಸರಾಗಿದ್ದಿತು.

ಸಿದ್ಧರಾಮಪ್ಪನವರು ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ತಮ್ಮ ಸ್ವನೆಲೆಯಾದ ಕುಟೇಗಾಂವ ಬಿಟ್ಟು ಕಾಳಗಾಪುರ ಗ್ರಾಮದಲ್ಲಿ ಬಂದು ನೆಲೆಸಿದಂತೆ ತಿಳಿದು ಬರುತ್ತದೆ. ಅವರಿಗೆ ಒಂದಿಷ್ಟು ಹೊಲ ಇದ್ದಿತು. ಅದನ್ನು ಕುಟೇಗಾಂವ ಗ್ರಾಮದ ಮೆಕ್ರೆನವರಿಗೆ ಒತ್ತೆ ಹಾಕಿ ಬಂದರು. ಕಾಳಗಾಪುರದಲ್ಲಿ ನೆಲೆಸಿರುವಾಗಲೇ ಅವರಿಗೆ ಅಕ್ಕಲಕೋಟೆಯ ಶಿವಬಸಪ್ಪನವರ ಪರಿಚಯವಾಯಿತು. ಶಿವಬಸಪ್ಪನವರು ಮುತ್ತಿನ ವ್ಯಾಪಾರ ಮಾಡುತ್ತಿದ್ದರಂತೆ. ಒಳಗಡೆ ಅವರು ಆಧ್ಯಾತ್ಮ ತತ್ತ್ವದ ಮುತ್ತುಗಳನ್ನು ಹಂಚುವ ವ್ಯಾಪಾರಿಗಳೂ ಆಗಿದ್ದರು. ಇದನ್ನು ಸಿದ್ಧರಾಮಪ್ಪನವರು ಗುರುತಿಸಿಕೊಂಡು ಅವರ ಶಿಷ್ಯತ್ವ ವಹಿಸಿದರು. ಆಗಲೇ ಶಿವಬಸಪ್ಪನವರು "ಸಿದ್ಧರಾಮಪ್ಪ ನೆಲೆಸಿದ ಸ್ಥಳದ ಬಗೆಗೆ ಉಜ್ವಲವಾದ ಭವಿಷ್ಯ" ನುಡಿದರು. ಅದೇ ಸ್ಥಳದಲ್ಲಿ ಶಿವಬಸಪ್ಪ, ಸಿದ್ಧರಾಮಪ್ಪನವರ ಅನುಭಾವ ಗೋಷ್ಠಿ ಆರಂಭವಾಯಿತು. ಮನೆಯ ಎದುರಿನಲ್ಲಿ ಒಮ್ಮೆ ನೆಲವು ಅಗಿಯುತ್ತಿದ್ದಾಗ ಲಿಂಗವೊಂದು ದೊರಕಿತು. ಅದು ತಮ್ಮ ಮುಂದಿನ ಕಾರ್ಯದ ಸಿದ್ಧಿಯ ಸಂಕೇತವೆಂದು ಶಿವಬಸವಪ್ಪನವರು ಭಾವಿಸಿದರು. ಅದಕ್ಕಾಗಿ ದೊರಕಿದ ಲಿಂಗಕ್ಕೆ 'ಸಿದ್ಧರಾಮ' ಎಂತಲೇ ಹೆಸರಿಟ್ಟು ಅದನ್ನು ಸ್ಥಾಪಿಸಿದರು. ಇಂದು ಸಿದ್ಧರಾಮರ ಗದ್ದುಗೆ ಮತ್ತು ದರ್ಶನ ಮೂರ್ತಿಗಳು ಕಾಣಬಹುದಾಗಿದೆ. ಸಿದ್ಧರಾಮಪ್ಪನವರು ಗುರುವಿನ ಅಪ್ಪಣೆಯಂತೆ ಲಿಂಗವು ದೊರಕಿದ ಸ್ಥಳದಲ್ಲಿ ನಂದ್ಯಾಲ ವೃಕ್ಷವನ್ನು ನೆಟ್ಟರು. ಅದು ಇಂದು ಬೆಳೆದು ದೊಡ್ಡದಾಗಿ ನಿಂತಿದೆ.

ಅಕ್ಕಲಕೋಟೆಯ ಕೋರೆ ಅವರ ಮನೆತನದ ಶಿವಬಸಪ್ಪನವರು ಸಿದ್ಧರಾಮಪ್ಪನವರಿಗೆ ಆಧ್ಯಾತ್ಮದ ದೀಕ್ಷೆ ನೀಡಿದರು. ತಾತ್ವಿಕವಾದ ಮಾರ್ಗದರ್ಶನ ಮಾಡಿದರು. ಇಂದಿಗೂ ಅಕ್ಕಲಕೋಟೆಯಲ್ಲಿ ಶಿವಬಸಪ್ಪನವರ ವಂಶಸ್ಥರು ವಾಸವಾಗಿದ್ದಾರೆ.

ಸಿದ್ಧರಾಮಪ್ಪ ಬಿರಾದಾರ ಅವರು ತತ್ತ್ವನಿಷ್ಠರಾಗಿ, ಆಧ್ಯಾತ್ಮ ಸಾಧಕರಾಗಿ ತಮ್ಮ ಗುರುಗಳಾದ ಶಿವಬಸಪ್ಪನವರ ಹೆಸರಿನಲ್ಲಿಯೇ ಹಾಡುಗಳನ್ನು ಬರೆದರು. "ಗುರು ಬಸವೇಶ್ವರ" ವೆಂಬುದು ಅಂಕಿತವಾಗಿದೆ.

ಸಿದ್ಧರಾಮಪ್ಪನವರ ಎರಡು ತತ್ತ್ವಪದಗಳು ಮರಾಠಿ ಲಿಪಿಯಲ್ಲಿ ಬರೆದವುಗಳಾಗಿದ್ದವು. ಅವುಗಳನ್ನು ನಮಗೆ ಈರಮ್ಮ ಆಯಿ ಅವರು ನೀಡಿದರು. ಅವನ್ನೆ ಇಲ್ಲಿ ಕನ್ನಡೀಕರಣಗೊಳಿಸಿ ಕೊಡಲಾಗಿದೆ:

ನೀ ದಯ ಮಾಡೋ

ನೀ ದಯ ಮಾಡೋ ಗುರು ಹರಹರ
ನಿತ್ಯಾನಂದ ನಿಜರೂಪ ಧರಾ ॥ ಪ ॥

ಆರು ಸ್ಥಲವಾ ಏರಿದಿ ಮೂರು ಮಂಡಲ ಬಳಸಿದಿ
ಧೀರ ಗುಣ ಗಂಭೀರದಿ
ಮೀರಿದ ಉನ್ಮನಿ ಸೇರಿದಿ ॥ ೧ ॥

ಸಹಸ್ರ ದಳದ ಕಮಲದಿ
ಶೋಭಿಸುವ ನಡು ಮಧ್ಯದಿ
ಭಾನು ಕೋಟಿ ಪ್ರಕಾಶದಿ
ಭಾವ ರಹಿತ ಮಂಟಪದಿ ॥ ೨ ॥

ಆದಿಗಾಧಾರ ತತ್ತ್ವವನು
ಭೇದಿಸಿ ನೆಲೆ ಗಂಡವನು
ಮೋದದಿಂದ ಮನ ಮಹಾಘನದಲಿ ನಿಲಿಸಿ
ನಾದದೋಂಕಾರವನೆ ಆಲಿಸಿ ॥ ೩ ॥

ವೇದಕ್ಕತೀತ ತತ್ತ್ವವದು
ನಿಜದಿ ನೋಡಲು ವಾದಕ್ಕತೀತವದು
ಸದ್ಗುರುವಿನ ಕರುಣೆಗೆ ನಿಲುಕುವುದು
ದೊರಕುವುದು ಗುರುದಯ ನಿಜದ ಸಾರವದು ॥ ೪ ॥

ಮೆರೆವ ದೇಶ ಕಾಳಗಾಪುರದ ನಡುವೆ ಇರುವ
ಗುರು ಶಿವಬಸವೇಶನು ಅಲ್ಲಿರುವ
ವರವ ನೀಡುವನು ಸದಮಲ ಪ್ರೇಮದಲಿ
ಶಿರಬಾಗಬೇಕು ಅವನ ಚರಣದಲಿ ॥ ೫ ॥

ಗುರು ಭಕ್ತರ ದರ್ಶನದ ಮಹತ್ವ

ಕೋಟಿ ಲಿಂಗದ ಪೂಜೆಯ ಫಲವು
ಗುರು – ಭಕ್ತರ ದರ್ಶನವಣ್ಣಾ ॥ ಪ ॥

ಪರತತ್ತ್ವದ ಹಾದಿ ತೋರಿ ಕೊಡುವರಣ್ಣ
ಮರವಿನ ಕಾಯ ಮಾಯದ ಜಾಲ ಹಿಡಿದು ಬೀಸಾಡುವರಣ್ಣ
ಅರುವಿನ ಕಾಯದ ಘನವ ಗುರುತು ಹಿಡಿವರಣ್ಣಾ ॥ ೧ ॥

ಸ್ಥೂಲ ಸೂಕ್ಷ್ಮ ಕಾರಣ ತನುಮನ
ಮೆಲ್ಲೆಳೆದು ಒಯ್ಯುವರು ಅಣ್ಣಾ
ಅಲ್ಲಿ ಬಿಂಬ ತಿರವಿ ಮ್ಯಾಗಳೆ
ಜ್ವಾಲಾ ನಿಲಸುವರು ಅಣ್ಣಾ ॥ ೨ ॥

ಕಾಲನ ಬಾಧೆಯ ಕಡೆಗೆ ಹಾಯಿಸಿ
ಶೀಲವ ಬಿಡಿಸುವರಣ್ಣಾ
ಮೂರು ಲೋಕದೊಳು ನಿಲ್ಲದೆ ಮದ್ವನ
ಮುಂದಳೆ ನಿಲಿಸುವರು ಅಣ್ಣಾ ॥ ೩ ॥

ಆರು ಚಕ್ರದೊಳು ಏರಿಸಿ ಮ್ಯಾಗಳೆ
ಹಾದಿ ತೋರುವರು ಅಣ್ಣಾ
ಮೂರು ಪುರವ ಪೊಕ್ಕು ಮ್ಯಾಗಳ
ದಾರಿಯ ತೋರುವರು ಅಣ್ಣಾ ॥ ೪ ॥

ಸಾರಾಮೃತ ಮೂಲ ಮುಳಗ್ಯಾಡಿ
ಸೇವೆಯ ತೋರುವರು ಅಣ್ಣಾ
ತಾರಕ ಮೂರುತಿ ನಂದಿಕೇಶ್ವರಾ
ಗುರು ಶಿವ ಬಸವೇಶನಣ್ಣಾ ॥ ೫ ॥

(ಈ ವಿವರಗಳನ್ನು ಇಂದು ಕಾಳಗಾಪುರ ಗ್ರಾಮದಲ್ಲಿ ವಾಸವಾಗಿರುವ ಸಿದ್ಧರಾಮಪ್ಪನವರ ವಂಶಸ್ಥರಾದ ಈರಮ್ಮ ಆಯಿ ಮತ್ತು ಕಂಠೆಪ್ಪ ಬಿರಾದಾರ ಅವರು ನೀಡಿದ್ದಾರೆ.)




ಸಿದ್ಧರಾಮಪ್ಪ ಬಿರಾದಾರ ಅವರು ವಾಸವಾಗಿದ್ದ ಮನೆ (ಕಾಳಗಾಪುರ).




ಮನೆಯ ಒಳಾಂಗಣ ದೃಶ್ಯ



ಮನೆಯ ಒಳಗಡೆ ಇರುವ ಉದ್ಭವಲಿಂಗ ಸಿದ್ಧರಾಮೇಶ್ವರ ದರ್ಶನ ಮೂರ್ತಿ.
(ಕಾಳಗಾಪುರ).




ಸಿದ್ಧರಾಮಪ್ಪನವರ ಮಾರ್ಗದರ್ಶಕ ಆಧ್ಯಾತ್ಮ ಶಕ್ತಿ ಶ್ರೀ ಶಿವಬಸಪ್ಪ ಕೋರೆ.




ಶಿವಬಸವಪ್ಪನವರ ಪೀಠಸ್ಥಾನ (ಕಾಳಗಾಪುರ).



ಪೂಜಾಗೃಹದಲ್ಲಿ ಬೆಳಗುತ್ತಿರುವ ನಂದಾದೀಪ.



ಸಿದ್ಧರಾಮಪ್ಪನವರ ಗದ್ದುಗೆಯ ಎದುರಿನಲ್ಲಿ ಉರಿಯುತ್ತಿರುವ ಧುನಿ.



ಸಿದ್ಧರಾಮಪ್ಪನವರ ತತ್ತ್ವಪದಗಳಿಗೆ ಶ್ರುತಿ ಒದಗಿಸಿದ ಏಕನಾದ.



ಉದ್ಭವಲಿಂಗವು ಅವತರಿಸಿದ ಸ್ಥಳದಲ್ಲಿ ನೆಟ್ಟಿರುವ ನಂದ್ಯಾಲ ವೃಕ್ಷ
(ಕಾಳಗಾಪುರ).



ಸಿದ್ಧರಾಮಪ್ಪನವರ ಮಗ ಶಂಕರೆಪ್ಪ ದಂಪತಿಗಳು ನೆಟ್ಟು ಬೆಳೆಯಿಸಿದ ಆಲದ ವೃಕ್ಷ



ಶಂಕರೆಪ್ಪ ದಂಪತಿಗಳ ಸಮಾಧಿ.



ಸಿದ್ಧರಾಮಪ್ಪನವರ ಸೊಸೆ
ಪಾರಮ್ಮನವರು



ಇಂದು ಸಿದ್ಧರಾಮೇಶ್ವರ ಆಧ್ಯಾತ್ಮ ಧಾಮದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿರುವ ಸಿದ್ಧರಾಮಪ್ಪನವರ ವಂಶಸ್ಥರಾದ ಶ್ರೀಮತಿ ಈರಮ್ಮ ಆಯಿ ಮತ್ತು ಶ್ರೀ ಕಂತೆಪ್ಪ ಬಿರಾದಾರ.

೩. ಶಿವರಾಯ ಮುಚಳಂಬಿ (ಕ್ರಿ.ಶ. ಸು.೧೮೭೭–೧೯೫೨)

ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ಮುಚಳಂಬಿ ಗ್ರಾಮವು ಶಿವರಾಯ ಅವರ ಮೂಲನೆಲೆ. ಅಲ್ಲಿ ಶಿವರಾಯ ಅವರ ಮನೆತನದ ಹೆಸರು ಬಿರಾದಾರ ಎಂಬುದಾಗಿದೆ. ಶಿವರಾಯ ಬಿರಾದಾರ ಅವರು ಲಾದಾ ಗ್ರಾಮಕ್ಕೆ ಬಂದು ನೆಲೆನಿಂತ ನಂತರ "ಶಿವರಾಯ ಮುಚಳಂಬಿ" ಎಂಬ ಹೆಸರನ್ನು ಪಡೆದುಕೊಂಡರು. ಲಾದಾ ಗ್ರಾಮವು ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಬರುವ ಸ್ಥಳವಾಗಿದೆ. ಇದರ ಪೂರ್ವದ ಹೆಸರು 'ಲದ್ದಿ'ಯೆಂಬುದಾಗಿತ್ತು. ಹನ್ನೆರಡನೆಯ ಶತಮಾನದ ಶರಣ ಸೋಮಣ್ಣನ ಗ್ರಾಮವೂ ಇದೆ ಆಗಿದೆ.

ಶಿವರಾಯ ಅವರ ತಂದೆ ಶಿವಲಿಂಗಪ್ಪ ಬಿರಾದಾರ ಗುರುಲಿಂಗ–ಜಂಗಮ ಪ್ರೇಮಿ; ದಾಸೋಹ ನೇಮಿ, ಕೃಷಿ ಕಾಯಕದಿಂದ ಆರ್ಥಿಕ ಸುಭದ್ರತೆಯನ್ನು ಸಾಧಿಸಿಕೊಂಡಿದ್ದ ಗ್ರಾಮದಲ್ಲಿನ ಪ್ರತಿಷ್ಠಿತ ವ್ಯಕ್ತಿ. ಶಿವಲಿಂಗಪ್ಪನವರ ಹೆಂಡತಿ ಚೆನ್ನಮ್ಮನವರು. ಸದಾಚಾರ ಸಂಪನ್ನರು. ದಾನಗುಣವುಳ್ಳವರಾಗಿದ್ದರು. ಈ ದಂಪತಿಗಳ ಉದರದಿಂದ ಶಿವರಾಯ ಅವರು ಕ್ರಿ.ಶ ೧೮೭೭ರಂದು ಜನಿಸಿಬಂದರು.

ಶಿವರಾಯ ಅವರ ಶಿಕ್ಷಣವು ಮುಚಳಂಬಿ ಗ್ರಾಮದ ಮೋಡಿ ಶಾಲೆಯಲ್ಲಿ ನಡೆಯಿತು. ಮೂರನೆಯ ತರಗತಿಯವರೆಗೆ ಅವರು ಮೋಡಿ ಶಿಕ್ಷಣವನ್ನೆ ಪಡೆದುಕೊಂಡರು.

ಶಿವರಾಯ ಅವರು ಮುಚಳಂಬಿಯಲ್ಲಿ ಆಸ್ತಿ ಹೊಂದಿದ್ದು; ಆರ್ಥಿಕ ದೃಷ್ಟಿಯಿಂದ ಸ್ಥಿತಿವಂತರೆ ಆಗಿದ್ದರು. ಕಾರಣಾಂತರಗಳಿಂದ ಊರು ಬಿಟ್ಟು ಲಾದಾಕ್ಕೆ ಬಂದು ನೆಲೆಸಿದ ನಂತರವೂ ಅಲ್ಲಿ ಆಸ್ತಿ ಸಂಪಾದಿಸಿದರು. ಮೊದಲಿನ ಆರ್ಥಿಕ ಸ್ಥಿತಿಯನ್ನೇ ರೂಪಿಸಿಕೊಂಡರು. ಶಿವರಾಯ ಅವರ ಹೆಂಡತಿ ರೇವಮ್ಮ. ಈ ದಂಪತಿಗಳಿಗೆ ಒಟ್ಟು ನಾಲ್ಕು ಜನ ಮಕ್ಕಳಿದ್ದರು. ರತ್ನಮ್ಮ ಎಂಬ ಒಬ್ಬಳು ಹೆಣ್ಣುಮಗಳು. ಶಿವಲಿಂಗಪ್ಪ, ಶಾಂತಪ್ಪ, ಶಂಕರೆಪ್ಪ ಎಂಬ ಮೂವರು ಗಂಡುಮಕ್ಕಳು. ಈಗ ಇವರ ವಂಶವೂ ಮುಂದುವರೆದಿದೆ. ಹಾಗೆಯೇ ಶಿವರಾಯ ಅವರ ಅಣ್ಣನ ವಂಶವೂ ಬೆಳೆದಿದೆ.

ಶಿವರಾಯ ಅವರಿಗೆ ಆಧ್ಯಾತ್ಮದ ಆಸಕ್ತಿಯು ತಾರುಣ್ಯದಿಂದಲೆ ಅಂಟಿಕೊಂಡು ಬಂದುದ್ದಾಗಿತ್ತು. ಅವರು ಲಾದಾ ಗ್ರಾಮದ ಮಾಂಜ್ರಾ ನದಿಯ ದಡದ ಮೇಲಿರುವ ಸೋಮಲಿಂಗ ದೇವರನ್ನು ನಡೆದುಕೊಳ್ಳುತ್ತಿದ್ದರು. ನಾವು ಕ್ಷೇತ್ರ ಕಾರ್ಯಕ್ಕೆ ಹೋದಾಗ ದೇವಾಲಯವು ಮಾಂಜ್ರಾ ನದಿಯಲ್ಲಿ ಮುಳುಗಿ ಹೋಗಿತ್ತು.

ಭಾಲ್ಕಿ ತಾಲ್ಲೂಕಿನ ಖಟಕ ಚಿಂಚೋಳಿ ಗ್ರಾಮದ ಮಲ್ಲಿಕಾರ್ಜುನ ಚಾಮರಡ್ಡಿ ಅವರು ಯೋಗಿಗಳೂ; ಸತ್ಪುರುಷರೂ, ಪವಾಡ ಪುರುಷರೂ ಆಗಿದ್ದರು. ಅವರ ಪ್ರಭಾವಕ್ಕೆ ಒಳಗಾದ ಶಿವರಾಯ ಅವರು ಮಲ್ಲಿಕಾರ್ಜುನ ಅವರನ್ನೇ ತಮ್ಮ ಗುರುಗಳನ್ನಾಗಿ ಮಾಡಿಕೊಂಡರು.

ಶಿವರಾಯ ಅವರು ತಮ್ಮ ಮನೆಯಲ್ಲಿಯೆ ಒಂದು ಗುಹೆಯನ್ನು ಮಾಡಿಕೊಂಡು, ಅದರಲ್ಲಿ ಏಕಾಂತದ ಧ್ಯಾನ ಮಾಡುತ್ತಿದ್ದರು. ಪೂಜೆಯಾದಿಗಳನ್ನು ನಡೆಸುತ್ತಿದ್ದರು. ಅವರು ಸಂತನಂತಿದ್ದರು. ಪೂಜೆಗೆ ಕುಳಿತರೆ ಬಹುಹೊತ್ತಿನವರೆಗೂ ಅವರು ಸಮಾಧಿ ಸ್ಥಿತಿಯಿಂದ ಹೊರಗೆ ಬರುತ್ತಿರಲಿಲ್ಲ. ಯೋಗಾಸನ ಸಾಧನೆ ಮಾಡುತ್ತ; ಕುಳಿತ ಸ್ಥಳದಿಂದ ಎರಡು-ಮೂರು ಅಡಿ ಮೇಲೆದ್ದು ಅಂತರದಲ್ಲಿಯೇ ಉಳಿದು ಕೊಳ್ಳುತ್ತಿದ್ದರು. ಯಾವಾಗಲೂ ಅವರು ಧ್ಯಾನಾಸಕ್ತ ಸಾಧಕನಂತೆ ಇರುತ್ತಿದ್ದರು. ಗ್ರಾಮ ಮತ್ತು ಅದರ ಸುತ್ತ-ಮುತ್ತಲಿನ ಜನರು ಶಿವರಾಯ ಅವರನ್ನು ಸಾಧು-ಸತ್ಪುರುಷನೆಂದು ತಿಳಿದು ಭಕ್ತಿಯಿಂದ ಮನ್ನಿಸುತ್ತಿದ್ದರು.

ಶಿವರಾಯ ಅವರು ಸತ್ಪುರುಷರೊಂದಿಗೆ ಕೂಡಿ ಸತ್ಸಂಗ ನಡೆಸುತ್ತಿದ್ದರು. ಬೋರಗಿ ರೆಹಮಾನ ಪಟೇಲರು ಅದರಲ್ಲಿ ಭಾಗಿಗಳಾಗಿ ಶಿವರಾಯ ಅವರೊಂದಿಗೆ ಹಲವಾರು ಆಧ್ಯಾತ್ಮಿಕ ವಿಷಯಗಳನ್ನು ಚರ್ಚಿಸುತ್ತಿದ್ದರು. ಹಳೆಯಂಬರದ ವೀರಭದ್ರ ಶರಣರು ಆಗಾಗ ಶಿವರಾಯನವರಲ್ಲಿಗೆ ಬರುತ್ತಿದ್ದರು. ಅನುಭಾವ ಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದರು. ಇಂದು ಶಿವರಾಯನ ಮನೆತನದವರು ಹಳೆಯಂಬರದ ವೀರಭದ್ರಪ್ಪನವರಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದಾರೆ.

ಶಿವರಾಯನವರ ಆಧ್ಯಾತ್ಮಿಕ ಸಂಪರ್ಕದಲ್ಲಿದ್ದ ಅವರ ಪತ್ನಿ ರೇವಮ್ಮನವರು ಒಂದು ಅರ್ಥದಲ್ಲಿ ಆಧ್ಯಾತ್ಮ ಸಾಧಕಿಯೇ ಆಗಿದ್ದರು. ಮೌನವಾಗಿ ಅದನ್ನು ಬದುಕಿನಲ್ಲಿ ಅನುಷ್ಠಾನ ಮಾಡಿದರು. ಅವರು ಆಧ್ಯಾತ್ಮ ಸಾಧಕಿಯಾಗಿದ್ದರಿಂದಲೇ ತಮ್ಮ ಮರಣದ ಮುನ್ಸೂಚನೆಯನ್ನು ಗ್ರಾಮಕ್ಕೆ ಸಾರಿ ಹೇಳಿದರು. ಪತಿ ತೀರಿದ ಇಪ್ಪತ್ತೈದು ವರ್ಷಗಳ ನಂತರ ರೇವಮ್ಮನವರು ಲಿಂಗೈಕ್ಯರಾದರು. ತಾವು ಲಿಂಗೈಕ್ಯರಾಗುವ ದಿನ ರೇವಮ್ಮನವರು ಲಾದಾ ಗ್ರಾಮದಲ್ಲಿ ಸಂಚರಿಸಿ **"**ನಮ್ಮ ಪತಿ ಕರೆಯುತ್ತಿದ್ದಾರೆ; ನಾನಿಂದು ಅವರಲ್ಲಿಗೆ ಹೋಗುತ್ತೇನೆ, ನೀವೆಲ್ಲರೂ ನನ್ನನ್ನು ಕಳುಹಿಸಲು ಬರಬೇಕು**"** ಎಂದು ತಿಳಿಸಿದರು. ಅಂದೇ ಅವರು ಲಿಂಗೈಕ್ಯರಾದರು. ಮಾಂಜ್ರಾ ನದಿಯ ದಂಡೆಯ

ಮೇಲೆ ಶಿವರಾಯ ಅವರ ಸಮಾಧಿಯಿದೆ. ಅದರಲ್ಲಿಯೇ ಅವರ ಪತ್ನಿಯವರನ್ನು ಇರಿಸಿ ಸಮಾಧಿ ಮಾಡಲಾಗಿದೆ.

ಸಮಾಧಿಗೆ ಹತ್ತಿರದ ನೆಲೆಯಲ್ಲಿಯೇ ಶಿವರಾಯ ಅವರು ಶರಣರೊಡನೆ ಸತ್ಸಂಗ ನಡೆಸುತ್ತಿದ್ದ ಗುಂಪಾ ಇದೆ. ಶಿವರಾಯ ಅವರ ಗುಂಪಾದ ಬಾಗಿಲು ಸಕಲ ಜನಾಂಗದ ಅನುಭಾವಿಗಳಿಗೆ ಯಾವಾಗಲೂ ತೆರದೇ ಇರುತ್ತಿದ್ದಿತು. ಅವರು ಶರಣತತ್ತ್ವಪಾಲಕರಾಗಿದ್ದರು. ಅಂದು ಸಮಾಜದ ಕಣ್ಣಲ್ಲಿ ಅಸ್ಪೃಶ್ಯರೆಂದು ಪರಿಗಣಿತರಾಗುತ್ತಿದ್ದವರ ಮನೆಗಳಿಗೂ ಶಿವರಾಯ ಅವರು ಹೋಗುತ್ತಿದ್ದರು. ಅನುಭಾವ ಬೋಧೆ ಮಾಡುತ್ತಿದ್ದರು. ಅಲ್ಲಿಯೇ ಅವರು ಇಷ್ಟಲಿಂಗ ಪೂಜೆ-ಪ್ರಸಾದ ಪೂರೈಸುತ್ತಿದ್ದರು.

ಶಿವರಾಯ ಅವರು ಮೋಹರಮ್, ಲಾವಣಿ, ಗೀಗೀ ಹಾಡುಗಳೊಂದಿಗೆ ಹಲವಾರು ತತ್ತ್ವಪದಗಳನ್ನು ರಚಿಸಿದ್ದಾರೆ. ಅವರೊಂದು ನಾಟಕವೂ ರಚಿಸಿದಂತೆ ತಿಳಿದು ಬರುತ್ತದೆ. ಅವರು "ಸೋಮೇಶ್ವರ" ಎಂಬ ಅಂಕಿತದಲ್ಲಿ ತತ್ತ್ವಪದಗಳನ್ನು ರಚಿಸಿದ್ದಾರೆ. ಎರಡು ಪದ್ಯಗಳನ್ನು ಇಲ್ಲಿ ಕೊಡಲಾಗಿದೆ:

ಕಾಯ ಮಸೀದಿ

ಮಸೀದಿ ಎಂಬುದು ಕಾಯಪೂರಾ
ಅದರೊಳಗೆ ಇನ್ನುರಾರವತ್ತು ಅವ ಪೀರ
ಹೆಸರು ಹೇಳಿಕೊಡು ನೀ ಬ್ಯಾರ ಬ್ಯಾರ ॥ ಪ ॥

ಒಂಭತ್ತು ನಿಸೇನಿ ಥರ ಥರ
ಹಸರ ಹಳದಿ ಕೆಂಪ ಬಿಳಿ ರಂಗದಾರ
ಎಲ್ಲಿ ನಡೆಸ್ಯಾರ ಹೇಳೋ ಜಗದ ಹೆಸರ ॥ ೧ ॥

ಒಂಬತ್ತು ನಕ್ಷೆ ನಕ್ಷತ್ರ
ನಡು ಮಧ್ಯ ಭಾಗ ಸೂರ್ಯ ಚಂದ್ರ
ಎಲ್ಲಿ ನಡಸ್ಯಾರ ಹೇಳೋ ಜಗದ ಹೆಸರ ॥ ೨ ॥

ದಿವಟಿಗೆ ಉರಿತಾದ ಭವಕಾರ
ಲೆಕ್ಕಕದ ಇನ್ನೂರ ಹದಿನಾರ
ಎಣ್ಣೆ ಬತ್ತಿ ಇಲ್ಲದೆ ಉರಿತಾದ ಚದರ ॥ ೩ ॥

ತೊರಿಯ ಥಡಿಯಲ್ಲಿ ಲದ್ದಿ ಊರಾ
ಅದು ಸುಂದರ ಬಸ್ತಿ ಅದ ಗುಲ್ಜರ
ಸೋಮೇಶ್ವರ ದಯಾ ನಮ್ಮ ಮ್ಯಾಲ ಪೂರಾ ॥ ೪ ॥

(ಉಲ್ಲೇಖ : ಬೀದರ ಜಿಲ್ಲೆಯ ಅನುಭಾವ ಕವಿಗಳು. ಪು.೧೨೩)

ಸುಳ್ಳೆ ಸುಳ್ಳೆ ಸಂಸಾರ

ಸುಮ್ಮನ ಯಾಕೋ ಬಡಿವಾರ
ಸುಳ್ಳೆ ಅದೋ ಸಂಸಾರ ॥ ಪ ॥

ವೇಳ್ಯಕೆ ಇಲ್ಲೊ ಯಾರು ಯಾರ
ಮನಸ್ಸಿಗೆ ತೂಕ ಹಾಕೋ ಜರಾ
ಬಂಧು-ಬಳಗ ತನ್ನವರೆಲ್ಲ
ಈ ದೇಹಕ ಸಂಗತಿ ಯಾರಿಲ್ಲ ॥ ೧ ॥


ತಾಯಿ-ತಂದೆ-ಬಂಧುಗಳೊ
ದುಡಿದರೆ ಹಾಕುವರು ಕೂಳೊ
ಇಲ್ಲದಿದ್ದರ ತೆಗೆವರು ಜಗಳೊ
ಮನಿ ಹೊರಗ ನಿನಗ ಹಾಕತಾರೋ ಮೂಳಾ ॥ ೨ ॥

ಅಕ್ಕ - ತಂಗಿ - ರಂಭಿಯರು
ರೊಕ್ಕ ಇದ್ದರ ನಂಬುವರು
ಫಕ್ಕನೆ ನಿನಗ ಬಡತನ ಬಂದರ
ದಿಕ್ಕಗೇಡಿ ಅಂತ ಬಯ್ಯುವರು ॥ ೩ ॥

ತೊರ ಥಡಿ ಲದ್ದಿ ಊರವಾಸ
ತೊರಿಯೊಳು ಸೋಮಲಿಂಗೇಶ
ಆತನ ಪಾದಕ ಹೊಂದುವೆ ನಾನು
ಬೇಡಿ ಕೊಂಬುವೆನು ಮುಕ್ತಿಯನು ॥ ೪ ॥

ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳು- ಸಂ : ೨ \ ೨೬


(ಈ ವಿವರಗಳನ್ನು ಕವಿಗಳ ಮೊಮ್ಮಕ್ಕಳಾದ ಬಾಬುರಾವ ಮುಚಳಂಬಿ ಮತ್ತು ಅಣ್ಣೆಪ್ಪ ಮುಚಳಂಬಿ ಅವರು ನೀಡಿದ್ದಾರೆ.)



ಶಿವರಾಯ ಮುಚಳಂಬಿ ಅವರ ಮನೆ (ಲಾದಾ).




ಶಿವರಾಯ ಮುಚಳಂಬಿ




ಶಿವರಾಯ ಮುಚಳಂಬಿ ಅವರ ಮೊಮ್ಮಗ ಶಂಕರೆಪ್ಪ ದಂಪತಿಗಳು



ಶಿವರಾಯ ಅವರ ಮೊಮ್ಮಗ ಬಾಬುರಾವ ದಂಪತಿಗಳು.




ಶಿವರಾಯ ಮುಚಳಂಬಿ ಅವರ ಆಧ್ಯಾತ್ಮ ಸಾಧನೆಯ ಸ್ಥಲ ಪೂಜಾಗೃಹ.



ಶಿವರಾಯ ಮುಚಳಂಬಿ ಅವರ ಗುರಗಳಾದ ಶ್ರೀ ಸಂಗಯ್ಯನವರ ಮಠ (ಲಾದಾ).



ಶಿವರಾಯ ಮುಚಳಂಬಿ ಅವರು ಸತ್ಸಂಗ ನಡೆಸುತ್ತಿದ್ದ ಮಾಂಜ್ರಾನದಿಯ ದಡದ ಮೇಲಿನ ಗುಂಪಾ.



ಶಿವರಾಯ ಮುಚಳಂಬಿ ಅವರ ಸಮಾಧಿ. (ನದಿಯ ದಡದ ಮೇಲಿದೆ).



ಶಿವರಾಯ ಅವರ ಆರಾಧ್ಯ ದೇವರಾದ ಸೋಮೇಶ್ವರ ದೇವಾಲಯವನ್ನು ತನ್ನಲ್ಲಿ ಅಡಗಿಸಿಕೊಂಡಿರುವ ಮಾಂಜ್ರಾನದಿಯ ದೃಶ್ಯ.

೪.ರೆಹಮಾನ ಸಾಹೇಬ (ಕ್ರಿ.ಶ.ಸು. ೧೮೯೦–೧೯೬೦)

ಸುಮಾರು ಎಪ್ಪತ್ತು ವರುಷಗಳ ಸಂತ ಜೀವನವನ್ನು ಬದುಕಿದ್ದ ರೆಹಮಾನ ಸಾಹೇಬರು ಆಜನ್ಮ ಬ್ರಹ್ಮಚಾರಿಗಳು. ಮುಕ್ತಂ ಭಾಷಾನ ಭಕ್ತರಾಗಿ ಜನತೆಗೆ ನೀತಿ ಬೋಧೆ ಮಾಡುತ್ತ ಬದುಕಿದರು. ಅವರದು ಜನಾಂಗ ಸಮನ್ವಯದ ಜೀವನವಾಗಿತ್ತು. ಜಾತಿ ಭೇದವಿರಲಿಲ್ಲ. ಮೇಲು–ಕೀಳಿನ ಆಚರಣೆಯಿರಲಿಲ್ಲ. ಅದರಲ್ಲೂ ಹಿಂದೂ ಮುಸ್ಲೀಮರ ಐಕ್ಯತೆಗಾಗಿ ರೆಹಮಾನ ಸಾಹೇಬರು ತಮಗೆ ಸಾಧ್ಯವಾದಷ್ಟು ಕಾರ್ಯ ನಿರ್ವಹಿಸಿದರೆನ್ನಬೇಕು.

ರೆಹಮಾನ ಸಾಹೇಬರದು ಬೀದರ ಜಿಲ್ಲೆ ಔರಾದ ತಾಲ್ಲೂಕಿನಲ್ಲಿ ಬರುವ ಬೋರಗಿ ಗ್ರಾಮ. ಅವರದು ಮಾಲೀಪಾಟೀಲ ಮನೆತನ. ಆದುದರಿಂದ ಅವರ ಹೆಸರಿನ ಹಿಂದೆ 'ಪಟೇಲ' ಎನ್ನುವ ಶಬ್ದ ಹತ್ತಿಕೊಂಡಿದೆ. ತಂದೆ ಹುಸೇನ ಪಟೇಲರು. ಸಾದಾ–ಸರಳ ವ್ಯಕ್ತಿಗಳು. ಉಪಜೀವನಕ್ಕಾಗಿ ಕೃಷಿಯನ್ನೇ ಅವಲಂಬಿಸಿದ್ದರು. ಅವರು ಮುಕ್ತಮ್ ಭಾಷಾನ ದರ್ಗಾದ ಸೇವೆ ಮಾಡುತ್ತಿದ್ದರು. ಅದಕ್ಕಾಗಿ ಭಕ್ತರು ಅವರಿಗೆ ತಮ್ಮ ಹೊಲದಲ್ಲಿ ಬೆಳೆದುದನ್ನು ತಂದು ಕೊಡುತ್ತಿದ್ದರು. ಹುಸೇನ ಪಟೇಲರ ಹೆಂಡತಿ ಚಾಂದಬಿ. ಇದ್ದುದರಲ್ಲಿಯೇ ಸರಿಯಾಗಿ ಬದುಕನ್ನು ನಡೆಸಿಕೊಂಡು ಹೋಗುತ್ತಿದ್ದ ಮಹಿಳೆ.

ಹುಸೇನ ಸಾಹೇಬರದು ಕಟ್ಟಾ ಧಾರ್ಮಿಕ ಜೀವನ. ದಿನನಿತ್ಯ ದರ್ಗಾಕ್ಕೆ ಹೋಗುತ್ತಿದ್ದರು. ಐದು ಸಲ ನಮಾಜು ಮಾಡುತ್ತಿದ್ದರು. ಕಟ್ಟಾ ಮುಸ್ಲೀಮರಾದರೂ ಬೇರೆಯ ಧರ್ಮೀಯರೊಂದಿಗೆ ಸಹನೆ ಭಾವದಿಂದಲೇ ಬದುಕುತ್ತಿದ್ದರು.

ಹುಸೇನ ಸಾಹೇಬರಿಗೆ ಇಬ್ಬರು ಗಂಡು ಮಕ್ಕಳಿದ್ದರು. ಹಿರಿಯ ಮಗ ಕಮಾಲ ಪಾಶಾ; ಕಿರಿಯ ಮಗ ರೆಹಮಾನ ಸಾಹೇಬರು. ಇವರು ಹುಟ್ಟಿದ್ದು ಕ್ರಿ.ಶ. ೧೮೯೦ರಲ್ಲಿ. ಕಮಾಲ ಪಾಶಾ ಅವರಿಗೆ ಲೌಕಿಕದ ವ್ಯವಹಾರ ಸರಿಯಾಗಿ ತಿಳಿದಿತ್ತು. ಆದರೆ ಕಿರಿಯ ವಯಸ್ಸಿನಿಂದಲೂ ರೆಹಮಾನ ಸಾಹೇಬರಿಗೆ ಅಹಿಕ ಬದುಕಿನಲ್ಲಿ ಆಸಕ್ತಿಯಿರಲಿಲ್ಲ. ಅವರು ಯಾವಾಗಲೂ ದರ್ಗಾದಲ್ಲಿಯೆ ಇರುತ್ತಿದ್ದರು. ನಮಾಜ ಮಾಡುತ್ತಾ; ಇಲ್ಲವೆ ಕುರಾನದ 'ಕಲಮಾ'ಗಳನ್ನು ಪಠಿಸುತ್ತ ಇರುತ್ತಿದ್ದರು. ಮಗನ

ಈ ವರ್ತನೆಯಿಂದ ಹುಸೇನ ಸಾಹೇಬರಿಗೆ ಗಾಬರಿಯಾಗದೆ ಇರಲಿಲ್ಲ. "ಮುಂದೆ ಇವನು ಸಂತನೆ ಆಗಬಹುದು" ಎಂಬ ಭಾವನೆ ಅವರ ಮನದಲ್ಲಿ ಎಷ್ಟೋ ಸಲ ಸುಳಿದು ಹೋಯಿತು. ಆದರೂ ಅವರು ಮಗನ ವರ್ತನೆಯನ್ನು ಗಮನಿಸಿಯೂ ಗಮನಿಸದಂತಿದ್ದರು.

ರೆಹಮಾನ ಸಾಹೇಬರು ಮುಲ್ಲಾನ ಪಾಠ ಶಾಲೆಗೆ ಹೋದರು. ಅಲ್ಲಿ ಉರ್ದು ಕಲಿತರು; ಕುರಾನ ಓದುವುದನ್ನು ಕಲಿತರು. ಧಾರ್ಮಿಕ ವಿಧಾನಗಳನ್ನು ಕರಗತ ಮಾಡಿಕೊಂಡರು. ಹಾಗೆಯೇ ಅವರು ನಾಲ್ಕನೇ ತರಗತಿಯವರೆಗೆ ಮೋಡಿಯಲ್ಲಿ ಶಿಕ್ಷಣ ಪಡೆದರು.

ವಯಸ್ಸಿಗೆ ಬಂದ ಮಕ್ಕಳ ಮದುವೆಗಾಗಿ ಹುಸೇನ ಪಟೇಲರು ಹಂಬಲಿಸಿದರು. ಆದರೆ ರೆಹಮಾನ ಸಾಹೇಬರು ಅದಕ್ಕೆ ಸಮ್ಮತಿಸಲಿಲ್ಲ. ಅಣ್ಣ ಕಮಾಲ ಪಾಶಾನ ಮದುವೆ ಮಾಡಿ ಮುಗಿಸಲಾಯಿತು. ಅವರ ಪತ್ನಿ ರಾಬನ್‌ಬಿ. ಈಗ ಅವರು ಜೀವಿಸಿದ್ದಾರೆ. ಅವರಿಗೆ ಈಗ ಸು. ತೊಂಬತ್ತು ವರುಷಗಳ ವಯಸ್ಸು. ರೆಹಮಾನ ಸಾಹೇಬರ ಅಣ್ಣನವರ ಸೊಸೆ ಅಕ್ತರಬಿ ಅವರು ಇಂದು ಇದ್ದಾರೆ. ಅವರ ಮರಿ ಮೊಮ್ಮಗ ಶಾದಿಲ್ ಪಟೇಲರು ಇಂದು ಅವರ ಹಿರಿಯರ ಬಗೆಗೆ ವಿವರಗಳನ್ನು ಒದಗಿಸುವಲ್ಲಿ ಸಹಕಾರ ನೀಡಿದ್ದಾರೆ.

ರೆಹಮಾನ ಸಾಹೇಬರು ತಿರುಗು ಜಂಗಮರಂತಿದ್ದರು. ಅವರು ಆಗಾಗ ಪ್ರವಾಸ ಕೈಕೊಂಡು ಹೊರಗೆ ಹೋಗುತ್ತಿದ್ದರು. ಒಂದು ಸಲ ಅವರು ಸಂಚಾರ ಕೈಕೊಂಡು ಮೆದಕ್ ಜಿಲ್ಲೆ ; ನಾರಾಯಣ ಖೇಡ್ ತಾಲ್ಲೂಕಿನಲ್ಲಿ ಬರುವ ಚಿಮ್ಮಲ ಪಾಡದಲ್ಲಿ ಹೋಗಿ ಕೆಲವುಕಾಲ ನೆಲೆನಿಂತರು. ಅಲ್ಲಿ ಹಲವಾರು ಪದ್ಯಗಳನ್ನು ಕಟ್ಟಿ ಹಾಡಿದರು. ತಮಗೆ ಅಂತರಂಗದಲ್ಲಿ ಹೊಳೆದುದನ್ನು ತಮ್ಮಲ್ಲಿಗೆ ಬರುವ ಭಕ್ತರುಗಳಿಗೆ ಹೇಳುತ್ತಿದ್ದರು. ಅಲ್ಲಿ ಅವರಿಗೆ ಹಲವಾರು ಜನರು ಶಿಷ್ಯರಾದರು. ಮುಂದೆ ರೆಹಮಾನ ಸಾಹೇಬರು ಮರಳಿ ಬೋರಗಿ ಗ್ರಾಮಕ್ಕೆ ಬಂದರು. ಮನೆಯಲ್ಲಿ ನೆಲೆಸದೆ; ಊರಹೊರಗೆ ಆಶ್ರಮ ಕಟ್ಟಿಕೊಂಡು ಇರತೊಡಗಿದರು.

ರೆಹಮಾನ ಸಾಹೇಬರು ಕನ್ನಡವನ್ನು ವ್ಯವಹಾರಿಕ ಜೀವನದಲ್ಲಿಯೇ ಕಲಿತರು. ಕನ್ನಡದಲ್ಲಿ ಅವರು ಸುಂದರವಾಗಿ ಮಾತನಾಡುತ್ತಿದ್ದರು; ಪ್ರವಚನ ಮಾಡುತ್ತಿದ್ದರು. ಹೀಗಾಗಿ ಅವರು ಕನ್ನಡದಲ್ಲಿ ಹಲವಾರು ತತ್ತ್ವಪದಗಳನ್ನು ಬರೆದರು. ಅವರು ನಾಟಕಕಾರರೂ; ನಿರ್ದೇಶಕರೂ ಆಗಿದ್ದರು.

ರೆಹಮಾನ ಸಾಹೇಬರು ಮೊದಲಿಗೆ ಬರೆದುದು ಮೋಹರಮ್ ಹಾಡುಗಳನ್ನು. ಹನ್ನೆರಡನೆಯ ವಯಸ್ಸಿನಿಂದಲೇ ಅವರಿಗೆ ಕಾವ್ಯ ಶಕ್ತಿ ಸಿದ್ಧಿಸಿದಂತೆ ತಿಳಿದು ಬರುತ್ತದೆ.

ಅವುಗಳೊಂದಿಗೆ ಕೆಲವು ಗೀಗೀ–ಲಾವಣಿ ಹಾಡುಗಳನ್ನು ಕಟ್ಟಿದರು. ಅವರ ಲಕ್ಷ್ಯವು ನಂತರದಲ್ಲಿ ತತ್ತ್ವಪದಗಳೆಡೆಗೆ ಹರಿಯಿತು. ರೆಹಮಾನ ಸಾಹೇಬರು ಹಲವಾರು ತತ್ತ್ವಪದಗಳನ್ನು ಆಶು ಕವಿತ್ವ ಶಕ್ತಿಯಿಂದ ಕಟ್ಟಿ ಹಾಡಿದರು. ಅವರ ಗುರು ಖಯೊಮೋದ್ದಿನ್ ಖಾದ್ರಿ; ಬೀದರ ನಿವಾಸಿ. ಅವರು ಪರಿಪಕ್ವ ವಯಸ್ಸಿಗೆ ಬಂದಾಗ ವಿಚಿತ್ರವಾಗಿ ವರ್ತಿಸತೊಡಗಿದಂತೆ ಜನರು ಕಂಡುಕೊಂಡರು. ದರ್ಗಾದಲ್ಲಿ ಹಿಂದೆ ಯಾರೂ ಭಜನೆಯನ್ನು ಮಾಡುತ್ತಿರಲಿಲ್ಲ. ರೆಹಮಾನ ಸಾಹೇಬರು ಮುಕ್ತಂ ಭಾಷಾನ ದರ್ಗಾದಲ್ಲಿ ಭಜನೆ ಮಾಡುತ್ತಿದ್ದರು; ಕನ್ನಡದ ತತ್ತ್ವಪದಗಳನ್ನು ಹಾಡುತ್ತಿದ್ದರು. ಹಾಗೆಯೇ ಊರಿನ ಹಿಂದೂ ದೇವಾಲಯಗಳಲ್ಲಿ ಅವರು ಭಜನೆಯೊಂದಿಗೆ ಕುರಾನ್ ಓದುವ ಕಾರ್ಯವು ನಡೆಸುತ್ತಿದ್ದರು.

ಈ ವಿಚಿತ್ರವಾದ ವರ್ತನೆ ಲೋಕದವರ ಕಣ್ಣಿಗೆ ವಿಲಕ್ಷಣವಾಗಿಯೇ ಕಂಡಿತು. ಆದರೆ ಅದಾವುದಕ್ಕೂ ಸೊಪ್ಪು ಹಾಕದೆ ರೆಹಮಾನ ಸಾಹೇಬರು ಸಂತ ಮಾರ್ಗದಲ್ಲಿ ನಡೆದು ಹೋದರು. ಕ್ರಿ.ಶ.ಸು. ೧೯೬೦ರಲ್ಲಿ ಅವರು ಪೈಗಂಬರ ವಾಸಿಗಳಾದರು. ಅವರ ಸಮಾಧಿಯು ಮುಕ್ತಮ್ ಭಾಷಾನ ದರ್ಗಾದ ಸನಿಹದಲ್ಲಿಯೇ ಮಾಡಲಾಗಿದೆ.

ರೆಹಮಾನ ಸಾಹೇಬರು ಸ್ವನಾಮ ಅಂಕಿತದಲ್ಲಿಯೇ ತತ್ತ್ವಪದಗಳನ್ನು ಬರೆದಿದ್ದಾರೆ. ಎರಡು ಪದ್ಯಗಳನ್ನು ಇಲ್ಲಿ ಉದ್ಧರಿಸಲಾಗಿದೆ:

ವಿದ್ಯೆ ಕಲಿತರ ಕಲಿ ಆತ್ಮದ ವಿದ್ಯಾ

ವಿದ್ಯಕ ಈಶ್ವರ ಮತಿ ಚತುರ
ವಿದ್ಯ ಕಲಿತರ ಕಲಿ ಆತ್ಮದ ವಿದ್ಯಾ ॥ ಪ ॥

ಮೂರನೂರಾ ಅರವತ್ತು ತೇರ
ಇರುತಾವ ಏಕಗೂಡಿದ ಊರಾ
ಶಿವನ ಶರಣರು ಅಂದರು ಶಂಕರ
ಅಲ್ಲಾನ ಭಕ್ತರು ಮಾಡ್ಯಾರ ನಮಸ್ಕಾರ ॥ ೧ ॥

ಶಿವ–ಅಲ್ಲಾ ಬ್ಯಾರೆ ಇಲ್ಲ
ಭವದೊಳಗ ಒಬ್ಬನೆ ಎಲ್ಲಾ
ಹಿಂದೂ–ಮುಸ್ಲೀಮ್ ಬ್ಯಾರೆ ಇಲ್ಲ
ಅವರೆಲ್ಲ ಶಿವನ ಮಕ್ಕಳೆಲ್ಲಾ ॥ ೨ ॥

ಭೂಮಂಡಲದೊಳಗ ಭೇದ ಭಾವ
ಶಿವ ಮಂಡಲದೊಳಗ ಇಲ್ಲ ಹೇವ
ಶರಣಾಗಿ ಅಲ್ಲಾಗ ಬಾಗೋ ಚೇಲಾ
ನಾವು–ನೀವು ಒಂದೇ ಅನತೀನಿ ಖುಲ್ಲಾ ॥ ೩ ॥

ಅಂತರಂಗ ಬಹಿರಂಗದಲಿ
ಅರಾಪಡಿ ನಮ ಮಂದಿರದೊಳಗ
ನೋಡ ಮೂರಾ ಚಡಿ
ಹೋಗಿ ಖುಶೇಶ್ವರನ ಪರ್ವತಕ್ಕೆ ॥ ೪ ॥

ಹೋಗಿ ನೋಡಿದರ ಬತ್ತೀಸ ದುಗುಣಿ
ಚವಸಟ್ಟ ಕಡಿ, ಸಿಡಿ
ಅಲ್ಲಿ ಏನೋ ಕಂಡಂತೆ ಗುಡಿ ॥ ೫ ॥

ಆರು ಶಾಸ್ತ್ರ ಹದಿನೆಂಟು ಪುರಾಣ ನೋಡಿ
ಆರು–ಮೂರು ಆಗಿತ್ತ ಜನ ನೋಡಿ
ಪಂಡಿತರಿಗೆ ಕೆಡಿಸಿತ್ತು ಮಾಯ ಮಾಡಿ
ಮೋಹದೊಳಗ ಹಾಕಿತಾ ಮೋಡಿ ॥ ೬ ॥

ಬೋರಗಿ ಊರಾಗ ಶೇಖರಹೀಮ ಸಾಬನು
ಮುಕ್ತಂ ಭಾಷಾನ ಶಿಷ್ಯ ಮಗನು
ಪ್ರೇಮದೊಳಗ ಹಾಡಿದ ನೋಡಿ
ಅಲ್ಲಾನ ಕರುಣೆಗೆ ಮೋಕ್ಷಾವ ಬೇಡಿ ॥ ೭ ॥

ಓಂಕಾರ ಮಹಿಮೆ ನಿರ್ಮಲ ನಿರ್ಬಯಲ ಮಾಡಣ್ಣ

ಓಂಕಾರ ಮಹಿಮೆ ನಿರ್ಮಲ ನಿರ್ಬಯಲ ಮಾಡಣ್ಣ
ಗುರು ನಿತ್ಯ ನೇಮ ಸಹಸ್ರ ದಳದಲ್ಲಿ ಸೋಸಿ ನೋಡಣ್ಣ ॥ ಪ ॥

ಕುಂಬಾರನ ಕಳಟಿಗರಿನಿಲ್ಲ
ಕೆಸರ ಮಣ್ಣ ಖೂನಕ್ಕಿಲ್ಲ
ಕುಲವನಿಲ್ಲದ ಕೆಸರು ಗಡಗಿ ಮಾಡಿದರಣ್ಣ ॥ ೧ ॥

ಮೂರ್ಖ ಗಡಗೀಗ ಮುಟ್ಟಣಿಲ್ಲ
ಮುಸರಿ ಗಡಗೀಗಿ ತೊಳಿಯುಣಿಲ್ಲ
ಎರಿಮಣ್ಣಿನ ಗಡಗೀಗ ಮುಹೂರ್ತ ಮಾಡೀದು ಗುರುತಿಲ್ಲಣ್ಣ ॥ ೨ ॥

ಆವುಗಿದೊಳಗ ಕಿಚ್ಚನಿಲ್ಲ
ಅಗ್ನಿಯಿಲ್ಲದೆ ಸುಟ್ಟಾರಲ್ಲ
ಸುಟ್ಟಿದ ಶಿವಶರಣ ಗಡಗೀಗ ಮರಣ ಇಲ್ಲಣ್ಣ ॥ ೩ ॥

ಸಣ್ಣ ಬೋರಗಿ ಸಂತಿಯನಲ್ಲ
ಗರೀಬ ರೆಹಮಾನ ಸಾಬನೇ ಬಲ್ಲ
ಕೆಟ್ಟ ಕಳ್ಳ-ಸುಳ್ಳ ಕುಂಬಾರ ವ್ಯಾಪಾರ ಮಾಡಿದರಣ್ಣ ॥ ೪ ॥

(ಉಲ್ಲೇಖ: ಬೀದರ ಜಿಲ್ಲೆಯ ಅನುಭಾವಿ ಕವಿಗಳು. ಪು. ೧೨೬)

ಹಕ್ಕ ಹಲಾಲ ದುಡಿ ಮೋಕ್ಷ ಪಡಿ

ಹಕ್ಕ ಹಲಾಲ ದುಡಿಬೇಕೋ ತಮ್ಮಾ
ಮೋಕ್ಷಾ ಪಡಿಬೇಕೋ ॥ ಪ ॥

ಮ್ಯಾಲ ಕುಂತಾನ ಮಾಲಿಕ ಅಲ್ಲಾ
ಎಲ್ಲ-ಎಲ್ಲ ಅವನು ನೋಡತಾನಲ್ಲ
ಇಲ್ಲದ-ಸಲ್ಲದ ಹೇಳಬ್ಯಾಡ ಮುಲ್ಲಾ
ಒಲಿದ ಮಾಲೀಕಗ ಕಾಣತಾದ ಖಿಲ್ಲಾ ॥ ೧ ॥


ಕುಂತು ರೊಕ್ಕಾ ಹೊಡೆದೆನಂತಿ
ಮೈ ಮುರದು ದುಡಿಲಾರದೆ ಅದು ಹ್ಯಾಂಗ ತೋಗೋತಿ
ಹಕ್ಕ ಹಲಾಲ ದುಡಿಬೇಕು ಪಕ್ಕಾ
ಲೆಕ್ಕದಂಗ ಸಿಗ್ತಾದ ಮೋಕ್ಷ ॥ ೨ ॥

ಮಜಕೂರ ಹೇಳತೀನ ಕೇಳ ಬಾಲಾ
ಅಲ್ಲಾನ ಲೀಲಾ ಭಾಳಾ ಕೇಳು
ಮುಕ್ತುಂ ಭಾಷಾನ ಮಹಿಮೆ ಹೇಳಲ್ಲ
ಬೋರಗಿ ಊರ್‍ಯಾಗ ನೀನಾಗು ರೆಹಮಾನ ಚೇಲಾ ॥ ೩ ॥

(ಈ ವಿವರಗಳನ್ನು ಬೋರಗಿ ಊರಲ್ಲಿ ಇರುವ ಕವಿಯ ವಂಶಸ್ಥರು ನೀಡಿದ್ದಾರೆ.)



ರೆಹಮಾನ ಸಾಹೇಬರ ಮನೆ (ಬೋರಗಿ).




ರೆಹಮಾನ ಸಾಹೇಬರ ಸೊಸೆ ಅಕ್ತರಬಿ.



ರೆಹಮಾನ ಸಾಹೇಬರ ಅತ್ತಿಗೆ ರಾಬನ್‌ಬಿ.




ರೆಹಮಾನ ಸಾಹೇಬರ ಮರಿಮೊಮ್ಮಗ
ಶಾದಿಲ್ ಪಟೇಲ.




ರೆಹಮಾನ ಸಾಹೇಬರ ಪರಿವಾರ.



ರೆಹಮಾನ ಸಾಹೇಬರ ಸಮಾಧಿ (ಬೋರಗಿ).



ರೆಹಮಾನ ಸಾಹೇಬರ ಆರಾಧ್ಯ ದೇವರು ಮುಕ್ತುಂ ಭಾಷಾನ ದರ್ಗಾ
(ಬೋರಗಿ).



ದರ್ಗಾದ ಪರಿಸರದಲ್ಲಿರುವ ಮುಕ್ತಂ ಭಾಷಾನ ಕೆರೆ.

೫. ಮೋನಪ್ಪ ಬಡಿಗೇರ (ಕ್ರಿ.ಶ.ಸು. ೧೯೦೦-೧೯೫೫)

ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಬರುವ ಜೊನ್ನಿಕೇರಿ ಗ್ರಾಮದ ಮೋನಪ್ಪ ಬಡಿಗೇರ ಅವರು ಹಲವಾರು ಹಾಡುಗಾರ – ತತ್ತ್ವಪದಕಾರರಿಗೆ ಗುರುವಾದವರು. ಅವರಲ್ಲಿ ತಮ್ಮ ಶಕ್ತಿಯನ್ನು ಪ್ರತಿಷ್ಠಾಪಿಸಿ ಬೆಳೆಯುವಂತೆ ಮಾಡಿದವರು. ತನ್ಮೂಲಕ ತತ್ತ್ವಪದಗಳ ಬೆಳಸನ್ನು ಕನ್ನಡ ವಾಙ್ಮಯಕ್ಕೆ ಯಥೇಚ್ಛವಾಗಿ ನೀಡಿದವರು.

ವಿಶ್ವಕರ್ಮ ಮನೆತನಕ್ಕೆ ಸೇರಿದ ವಿಠೋಬಾ ಅವರು ಧಾರ್ಮಿಕ ಪ್ರವೃತ್ತಿವುಳ್ಳರಾಗಿದ್ದರು. ಅವರು ಮೌನೇಶ್ವರರ ಭಕ್ತರಾಗಿದ್ದರೂ; ಬಸವಾದಿ ಶಿವಶರಣರ ತತ್ತ್ವಗಳ ಪರಿಪಾಲಕರಾಗಿದ್ದರು. ಪತ್ನಿಕಾಶೀಬಾಯಿ ದೈವಭಕ್ತೆ. ಇಂತಹ ಸದಾಚಾರ ಶೀಲರಾದ ದಂಪತಿಗಳ ಮಗ ಮೋನಪ್ಪನವರು. ಅವರು ಜನಿಸಿದ್ದು ಕ್ರಿ.ಶ.ಸು. ೧೯೦೦ರಲ್ಲಿ

ಮೋನಪ್ಪನವರು ಸುಶಿಕ್ಷಿತರು-ಸುಸಂಸ್ಕೃತರಾಗಿಯೇ ಬೆಳೆದರು. ಮೋಡಿ-ಉರ್ದು-ಕನ್ನಡ-ಮರಾಠಿ ಭಾಷೆಗಳಲ್ಲಿ ಪರಿಣತಿಯನ್ನು ಸಾಧಿಸಿದರು. ಖಾಸಗಿ ಶಾಲೆಯಲ್ಲಿ ಅವರ ಶಿಕ್ಷಣವಾಯಿತು. ತಂದೆ ವಿಠೋಬಾ ಅವರು ಬಾಲಕ ಮೋನಪ್ಪನವರಲ್ಲಿ ಅರಳುತ್ತಿದ್ದ ಆಧ್ಯಾತ್ಮ ಮತ್ತು ಕಲೆಯ ಶಕ್ತಿಯನ್ನು ಕಂಡುಕೊಂಡಿದ್ದರು. ಅವುಗಳ ವಿಕಾಸಕ್ಕೆ ಬೇಕಾದ ಪರಿಸರವನ್ನು ತಮ್ಮ ಪರಿಮಿತಿಯಲ್ಲಿ ಒದಗಿಸಿಕೊಟ್ಟರು. ವಿಠೋಬಾ ಅವರು ಅಭಂಗಗಳನ್ನು ಹಾಡುತ್ತಿದ್ದರು. ಭಜನೆ ಮಾಡುತ್ತಿದ್ದರು. ತಂದೆಯವರು ಮಾಡುತ್ತಿದ್ದ ಭಜನೆಯಲ್ಲಿ ಮೋನಪ್ಪನವರು ಭಾಗವಹಿಸುತ್ತಿದ್ದರು. ಅವರೊಡನೆ ದನಿಗೂಡಿಸುತ್ತಿದ್ದರು. ವಾದ್ಯ ನುಡಿಸಲು ಪ್ರಯತ್ನಿಸುತ್ತಿದ್ದರು. ಹೀಗಾಗಿ ಮೋನಪ್ಪನವರಲ್ಲಿ ಕಿರಿಯ ವಯದಿಂದಲೇ ಭಜನೆ ಮತ್ತು ಹಾಡುವುದು ಈ ಹವ್ಯಾಸಗಳು ಬೆಳೆಯ ತೊಡಗಿದವು.

ಮೋನಪ್ಪನವರು ಸಂಸಾರ ಬದುಕಿಗೆ ಕಾಲಿಟ್ಟರು. ಭಾಗೀರತಿಬಾಯಿಅವರನ್ನು ಸತಿಯಾಗಿ ಪಡೆದರು. ಈ ದಂಪತಿಗಳಿಗೆ ಒಬ್ಬಮಗ ಮಲ್ಲಿಕಾರ್ಜುನ ಮತ್ತು ಇಬ್ಬರು ಹೆಣ್ಣುಮಕ್ಕಳು ಜನಿಸಿದರು. ಇಂದು ಮಲ್ಲಿಕಾರ್ಜುನ ಅವರು ತಮ್ಮ ಮಕ್ಕಳೊಂದಿಗೆ ಬೀದರಿನ ಪ್ರತಾಪ ನಗರದಲ್ಲಿ ನೆಲೆಸಿದ್ದಾರೆ. ಮಲ್ಲಿಕಾರ್ಜುನ ಅವರೂ ಹಾಡುಗಾರರು. ಸ್ವತಃ ಪದ್ಯಗಳನ್ನು ಕಟ್ಟುತ್ತಾರೆ. ಅವರ ಮಕ್ಕಳು ವ್ಯಾಪಾರ ಮಾಡುತ್ತಿದ್ದಾರೆ.

ಮೋನಪ್ಪನವರು ಆಚಾರ ಶೀಲರಾಗಿದ್ದು; ಹಲವಾರು ಜನರಿಗೆ ಉಪದೇಶ ಮಾಡಿದರು. ಅವರು ಮೊದಲಿಗೆ ತಂಬಲೂರಿನ ಬಸವಲಿಂಗ ಶಿವಾಚಾರ್ಯರಿಂದ ವೀರಶೈವ ದೀಕ್ಷೆಯನ್ನು ಪಡೆದುಕೊಂಡರು. ಮನೆಯಲ್ಲಿ ವೀರಶೈವ ಸಾಂಸ್ಕೃತಿಕ ವಾತಾವರಣವನ್ನು ನೆಲೆಗೊಳಿಸಿದರು. ಮೋನಪ್ಪನವರು ಶ್ರೀಗಂಧದ ಕಟ್ಟಿಗೆಯಿಂದ ಮಾಡಿದ್ದ ದೊಡ್ಡ ಕರಡಿಗೆಯನ್ನು ಕೊರಳಲ್ಲಿ ಧರಿಸುತ್ತಿದ್ದರು. ಅವರ ಪತ್ನಿ ಭಾಗೀರತಿಬಾಯಿಯವರ ಕೊರಳಿನಲ್ಲಿಯೂ ಇಷ್ಟಲಿಂಗ ಇರುವುದನ್ನು ನೋಡಬಹುದಾಗಿದೆ.

ಮೋನಪ್ಪನವರಿಗೆ ಹುಮನಾಬಾದಿನ ವೀರಭದ್ರ ದೇವರು; ತಿಂಥಣಿ ಮೌನೇಶ್ವರರು ಆರಾಧ್ಯ ದೇವರಾಗಿದ್ದರು. ಮೋನಪ್ಪ ಬಡಿಗೇರ ಅವರ ಮುಖಮುದ್ರೆಯು ಗಂಭೀರವಾಗಿತ್ತು. ಅವರ ಮುಖದ ಮೇಲಿನ ದಟ್ಟ ಮೀಸೆಗಳು, ಹಣೆಯ ಮೇಲಿನ ಮೂರು ಬೆರಳಿನ ವಿಭೂತಿ; ಕೊರಳೊಳಗೆ ಕಟ್ಟಿದ ಲಿಂಗದ ಕರಡಿಗೆ ಇವು ಅವರ ವೀರಶೈವ ಅಥವಾ ವೀರಭದ್ರತ್ವದ ನಿಷ್ಠೆಗೆ ಸಂಕೇತವಾದಂತಿದ್ದವು.

ಮೋನಪ್ಪನವರು ಕೆಲವು ಕಾಲ ಬಡಿಗತನವನ್ನು ಮಾಡಿದರು. ಕೃಷಿ ಕಾಯಕವನ್ನು ನಿರ್ವಹಿಸಿದರು. ಅವರು ಹೊರಗಿನ ಕೃಷಿಯೊಂದಿಗೆ ಆಧ್ಯಾತ್ಮ ಕೃಷಿಯನ್ನೂ ಮಾಡಿ ಹಲವಾರು ಆಧ್ಯಾತ್ಮದ ಫಲಗಳನ್ನು ಬೆಳೆದರು. ಹಾಗೆಯೆ ಕಟ್ಟಿಗೆಯಲ್ಲಿ ಸುಂದರವಾದ ಮೂರ್ತಿಗಳನ್ನು ಕೆತ್ತುವುದರೊಂದಿಗೆ ತಮ್ಮ ಸುತ್ತಲಿನ ಜನರ ಮನದಲ್ಲಿ ಸುಂದರ–ಶಿವತ್ವದ ಮೂರ್ತಿಗಳನ್ನು ಕೆತ್ತಿ ನಿಲ್ಲಿಸಿದರು. ಅದೇ ಊರಿನ ಗುಂಡಪ್ಪ ದಾಬಕೆ ಅವರು ಮೋನಪ್ಪನವರ ಪರಮ ಶಿಷ್ಯರಾಗಿದ್ದರು.

ಪತ್ರಿಸ್ವಾಮಿ ಮಠವು ಅನುಭಾವಿಗಳ ಅನುಭಾವ ಗೋಷ್ಠಿಗೆ ಒಳ್ಳೆಯ ನೆಲೆಯಾಗಿತ್ತು. ಅಲ್ಲಿ ಮೋನಪ್ಪನವರ ನೇತೃತ್ವದಲ್ಲಿ ಹಲವಾರು ಆಧ್ಯಾತ್ಮ ಜಿಜ್ಞಾಸುಗಳು ಕೂಡಿ ಕೊಳ್ಳುತ್ತಿದ್ದರು. ಅನುಭಾವ ಗೋಷ್ಠಿ ನಡೆಸುತ್ತಿದ್ದರು. ಆತ್ಮ–ಪರಮಾತ್ಮ, ಲೋಕ–ಪರಲೋಕ, ಸ್ವರ್ಗ–ನರಕ, ನೀತಿ; ಆಚಾರ, ಅರ್ಚನೆ; ದೇವರು, ಮೋಕ್ಷ – ಮುಂತಾದ ವಿಷಯಗಳನ್ನು ಕುರಿತಂತೆ ಪದ್ಯ ಕಟ್ಟಿ ಹಾಡುತ್ತಿದ್ದರು. ಮೋನಪ್ಪ ಬಡಿಗೇರ ಅವರು ಅನುಭಾವ ಗೋಷ್ಠಿಯಲ್ಲಿ ತಲೆದೋರಿದ ಸಮಸ್ಯೆಗಳಿಗೆ ಸಮಾಧಾನ ಹೇಳುತ್ತಿದ್ದರು. ಮೋನಪ್ಪ ಬಡಿಗೇರ ಅವರ ಶಿಷ್ಯ ಸಮೂಹದಲ್ಲಿ ಎಲ್ಲ ವರ್ಗದ ಜನರು ಇದ್ದರು.

ಮೋನಪ್ಪ ಬಡಿಗೇರ ಅವರು ಯೋಗಿಯಾಗಿ; ಸಿದ್ಧಪುರುಷ; ಶರಣಜೀವಿಗಳಾಗಿ; ತತ್ತ್ವಪದಕಾರರಾಗಿ ದಿ.೮–೧೦–೧೯೫೫ರಲ್ಲಿ ಲಿಂಗೈಕ್ಯರಾದರು. ಅವರ ಭೌತಿಕ ದೇಹ ಮರೆಯಾಯಿತು. ಅವರ ಶಿಷ್ಯ ಪರಂಪರೆ ಹಾಗೂ ಅವರು ರಚಿಸಿದ ತತ್ತ್ವಪದಗಳು ಇಂದಿನವರ ನಾಲಿಗೆಯ ಮೇಲೆ ಉಳಿದು ಕೊಂಡಿವೆ. ಅವರು ಅಂದು ಮೀಟಿದ ಏಕತಾರಿಯು ಇಂದಿಗೂ ರಿಂಗುಣಿಸುತ್ತಲಿದೆ.

ಮೋನಪ್ಪನವರು ತತ್ತ್ವಪದಗಳಿಗೆ ತಮ್ಮ ಸ್ವನಾಮವನ್ನೆ ಅಂಕಿತವಾಗಿಟ್ಟುಕೊಂಡಂತೆ ತಿಳಿದು ಬರುತ್ತದೆ. ಅವರ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ಪರಮಾತ್ಮನ ಪೂಜೆ

ಪರಮಾತ್ಮನ ಪೂಜೆಗಾಗಿ ಕಾದು
ಅರುವಿನ ಜಲವನ್ನು ತುಂಬಿಕೊಂಡು
ಪರಮ ಶ್ರದ್ಧೆಯಿಂದಲಿ ನಾನು
ಪರಮಾತ್ಮನ ಪೂಜೆಯ ಮಾಡುವೆನು ॥ ಪ ॥

ಹೃದಯದ ಹಾಸಿಗೆ ಹಾಸಿರುವೆ
ವಿಮಲ ಮನವನ್ನು ಚಾಚಿರುವೆ
ಪರಮಾತ್ಮನೆ ಬಾರಯ್ಯ ತಂದೆ
ಪೂಜೆಗಾಗಿ ಕಾದಿರುವೆನು ॥ ೧ ॥

ನನಗೆ ಮನುಷ್ಯ ಜಲ್ಮ ಸಿಕ್ಕಿತು
ನನಗೆ ನಿಮ್ಮ ಪಾದವು ಸಿಕ್ಕಿತು
ಹೃದಯ ಕಮಲವು ನಕ್ಕಿತು
ವಿಷಯ ವಾಸನೆ ಕಡಿಯಿತು ॥ ೨ ॥

ಸಂಸಾರದ ಬಂಧನದಿಂದ ಬಿಡಿಸಿಕೊಂಡೆ
ನಿಷ್ಕಾಮ ಭಾವದಿಂದ ಹೊದಿಸಿಕೊಂಡೆ
ಶಿವ ನಿಮ್ಮ ದರುಶನವ ಪಡೆದುಕೊಂಡೆ
ಭವ ದೂರನಾಗಿ ನಾನು ನಡೆದುಕೊಂಡೆ ॥ ೩ ॥

ಅಖಂಡ ಭಕ್ತಿಯ ಆರತಿ ಎತ್ತುವೆ
ಅಖಂಡ ಶಕ್ತಿಯ ಕರ್ಪುರವ ಬೆಳಗುವೆ
ಶಿವ ಮಾನಸದ ಹೂವು ಏರಿಸುವೆ
ಸದ್ಭಾವ ನೈವೇದ್ಯ ಹಿಡಿವೆ ॥ ೪ ॥

ವಸುಧಿಯೊಳಗ ಜೊನ್ನಿಕೇರಿ ಪುರವಾ
ಮೋನಪ್ಪ ಹೇಳ್ಯಾನ ಕವಿಗಾರ ನಿಜವಾ
ಪರಮಾತ್ಮನ ಪೂಜೆಯ ಮಾಡಿರಿ
ವರ ಮೋಕ್ಷವ ನೀವು ಬೇಡಿರಿ ॥ ೫ ॥

ಅಡವಿಯ ಪಶು ನಾನು

ಅಡವಿಯ ಪಶು ನಾನು
ಪಶುಪತಿಯು ನೀನಯ್ಯ ॥ ಪ ॥

ಸಂಸಾರದ ಕಲ್ಲು ಎಡವಿ
ಕಡಲ ತೆರೆಗಳ ಹೊಡೆತಕಡರಿ
ಕಡಲ-ಗಿಡಿಲ ಎನುತ ಓಡುತ
ಕಾಕ ಸಂಸಾರದ ಒಡಲೊಳು ಬಿದ್ದೆನು ॥ ೧ ॥

ಕಾನನೆಂದರೆ ಭಯಂಕರ ಕಾಡಿದು
ನೋಡಲಾಗದು ಕಣ್ಣಿನಿಂದಲಿ
ಓಡುತಾವ ಹುಲಿಗಳೈದು
ಹಾರುತಾವ ಸಿಂಹಗಳಾರು ॥ ೨ ॥

ಹರಿದಾಡುತಾವ ಘೋರ ಹಾವುಗಳು
ಕಾಲಿನಲ್ಲೆ ಕಡಿತಾವು ಚೇಳುಗಳು
ಘುರ್ರೆಂಬ ಕರಡಿಗಳು ಕೂಗುತಾವ
ಕಿರ್ರೆಂದು ಮಂಗಗಳು ಬಡಿಯಿತಾವ ॥ ೩ ॥

ಕಾಡಿನಲ್ಲಿ ಕತ್ತಲಾದ, ಕಾಲ ಇಡಲು ಕಾಣದಾದ
ಘೋರನಾದ ಕೇಳುತಾದ
ಭೋರ ಮಳೆಯ ಹಣಿಯುತಾದ
ಖಡಲ್ ಸಿಡಿಲಿನ ಆರ್ಭಟವು ಕೇಳುತಾದ ॥ ೪ ॥

ಬ್ಯಾಡರು ಬಂದು ಮುತ್ತುತಾರ
ಬಾಣಗಳು ಬಿಡುವುತಾರ
ಗುರಿಯ ಇಟ್ಟು ಹೊಡಿಯುತಾರ
ಯಮನ ಲೋಕಕ ಒಯ್ಯುತಾರ ॥ ೫ ॥

ಪಶುಪತಿಯೆ ದಯಾಕರನೆ
ಈಶ ನೀನೆ ಬಿಡಸಲು ಬೇಕು
ಸಾಕು ಸಾಕು ಸಾಕು ಸಂಸಾರ
ಆಯಿತೆನಗತಿ ಬೇಸರ ॥ ೬ ॥

ಧರೆಯೊಳಗೆ ಮೇಲ ಜೊನ್ನಿಕೇರಿ
ವರೆದಾನರಿ ಮೋನಪ್ಪ ಸಾರಿ
ಮರೆಯ ಬೇಡಿರಿ ಶಿವನ ಧ್ಯಾನ
ಮೊರೆ ಹೋಗರಿ ಸಿಗತಾದ ಸಮಾಧಾನ ॥ ೭ ॥

(ಈ ವಿವರಗಳನ್ನು ಕವಿಯ ಮಗ ಮಲ್ಲಿಕಾರ್ಜುನ ಅವರು ನೀಡಿದ್ದಾರೆ.)




ಮೋನಪ್ಪ ಬಡಿಗೇರ ಅವರ ಮನೆ (ಜೊನ್ನಿಕೇರಿ).



ಮೋನಪ್ಪ ಬಡಿಗೇರ ಅವರ ಛಾಯಾ ಚಿತ್ರ.



ಮೋನಪ್ಪ ಬಡಿಗೆರ
ಅವರ ಪತ್ನಿ
ಭಾಗೀರತಿಬಾಯಿ.



ಶ್ರೀಮತಿ ಭಾಗೀರತಿ ಅವರೊಂದಿಗೆ ಸೊಸೆ-ಮೊಮ್ಮಕ್ಕಳು.



ಮೋನಪ್ಪ ಬಡಿಗರ ಅವರ ಪೂಜಾಸ್ಥಳ.

೬. ಸಿದ್ಧರಾಮ ಮುಕರಂಬಿ (ಕ್ರಿ.ಶ.ಸು ೧೯೦೯–೧೯೮೦)

ಬೀದರ ಜಿಲ್ಲೆ ಔರಾದ ತಾಲ್ಲೂಕಿನಲ್ಲಿ ಬರುವ ಹೆಡಗಾಪುರವು ಸಿದ್ಧರಾಮನೆಂಬ ಹೆಸರಿನ ಹಿರಿಯ ತತ್ತ್ವಪದಕಾರರನ್ನು ಪಡೆದುಕೊಂಡಿದೆ. ಈ ಗ್ರಾಮದಲ್ಲಿ ಆಗಿ ಹೋದ ಹಲವು ಕವಿಗಳಲ್ಲಿ ಸಿದ್ಧರಾಮ ಮುಕರಂಬಿ ಅವರು ಹಿರಿಯರು.

'ಮುಕರಂಬಿ' ಎಂಬುದು ಕವಿಯ ಮನೆತನದ ಹೆಸರು. ಮುಕರಂಬಿ ಮನೆತನದ ಹಿರಿಯ ಭೀಮಪ್ಪ ಸಿದ್ಧರಾಮರ ತಂದೆ. ವೀರಶೈವ ಸಂಸ್ಕೃತಿಯ ಅನುಸಂಧಾನಿಯಾಗಿದ್ದ ಭೀಮಪ್ಪನವರು ತಮ್ಮ ಮಕ್ಕಳಿಗೆ ಮನೆಯಲ್ಲಿಯೇ ನೈತಿಕ ಶಿಕ್ಷಣವನ್ನು ನೀಡಿದರು. ಸಿದ್ಧರಾಮರ ಜನನದ ವರ್ಷವು ಕ್ರಿ.ಶ.ಸು. ೧೯೦೯. ತಾಯಿ ಶಂಕ್ರೆವ್ವ.

ಭೀಮಪ್ಪ–ಶಂಕ್ರೆವ್ವ ದಂಪತಿಗಳಿಗೆ ಇಬ್ಬರು ಗಂಡುಮಕ್ಕಳು. ಕವಿಗಳು ಹಿರಿಯ ಮಗನಾದರೆ; ಕಂಟೆಪ್ಪನೆಂಬುವವನು ಕಿರಿಯ ಮಗ.

ಸಿದ್ಧರಾಮ ಅವರು ಮೋಡಿ ಶಾಲೆಯಲ್ಲಿ ತಕ್ಕ ಮಟ್ಟಿನ ಶಿಕ್ಷಣವನ್ನು ಪಡೆದುಕೊಂಡರು. ನಾಲ್ಕನೆಯ ತರಗತಿಯವರೆಗೆ ಓದಿ, ಮುಂದೆ ಶಿಕ್ಷಣಕ್ಕೆ ಶರಣು ಹೊಡೆದರು. ವೀರಶೈವ ಸಿಂಪಿಗ ಮನೆತನದವರಿಗೆ ಬಟ್ಟೆ ಹೊಲಿಗೆ ಮತ್ತು ಬಟ್ಟೆ ಮಾರುವುದು ಸಹಜ ಕಾಯಕ. ಸಿದ್ಧರಾಮ ಅವರು ಮುಂದೆ ಬಟ್ಟೆ ಮಾರುವ ಕಾಯಕಕ್ಕೆ ತೊಡಗಿದರು. ವ್ಯಾಪಾರ ಮಾಡುತ್ತಿದ್ದಂತೆ, ಅವರನ್ನು ಬಂದು ಗೃಹಸ್ಥ ಜೀವನವು ಆಲಂಗಿಸಿತು. ನೀಲಮ್ಮನವರು ಕವಿಯ ಹೆಂಡತಿ. ಈ ದಂಪತಿಗಳಿಗೆ ಎರಡು ಗಂಡು; ಎರಡು ಹೆಣ್ಣು ಮಕ್ಕಳು ಹುಟ್ಟಿದರು. ಶಿವಕುಮಾರ, ವಿಜಯ ಕುಮಾರ, ಸಿದ್ಧಮ್ಮ, ಕಲಾವತಿ ಇವರೆ ಆ ಮಕ್ಕಳಾಗಿದ್ದಾರೆ. ಇಂದು ವಿಜಯ ಕುಮಾರ ಎಂಬ ಮಗ ಧನ್ನೂರಿನ ರೇಲ್ವೆ ಸ್ಟೇಶನ್ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಿದ್ಧರಾಮನ ಮನಸ್ಸು ಕಲಾವಿದನ ಮನಸ್ಸಾಗಿತ್ತು. ನಾಟಕ ಕಲಿಸುತ್ತಿದ್ದರು; ನಟನಾಗಿ ಅಭಿನಯ ಮಾಡುತ್ತಿದ್ದರು. ಹಾರ್ಮೋನಿಯಂ ಬಾರಿಸುತ್ತಿದ್ದರು. ತಬಲಾ ನುಡಿಸುತ್ತಿದ್ದರು. ಹೀಗೆ ಹಲವು ಕಲೆಗಳ ಕೋವಿದ ಸಿದ್ಧರಾಮ ಕವಿಗಳು. ಬಟ್ಟೆ ವ್ಯವಹಾರದಲ್ಲಿ ಸರಿಯಾದ ಗತಿ ಅವರಿಗೆ ಸಾಧಿತವಾಗಲಿಲ್ಲ. ವ್ಯಾಪಾರವು ಹಾನಿಗೆ

ಈಡಾಯಿತು. ಅಹಿಕ ಬದುಕಿನ ಆರ್ಥಿಕತೆಯ ಹಾದಿ ಏರು–ಪೇರಿನದಾಯಿತು. ಅದನ್ನು ಸರಿದೂಗಿಸಿ ಕೊಳ್ಳುವುದಕ್ಕಾಗಿ ಕಿರಾಣಿ ಅಂಗಡಿ ತೆರೆದರು. ಹೋಟೆಲ್ ಇಟ್ಟರು. ಅಲ್ಲಿಯೂ ಕವಿಗಳಿಗೆ ಯಶಸ್ಸು ದೊರಕಲೇ ಇಲ್ಲ. ಎಲ್ಲವನ್ನು ಬಿಟ್ಟರು. ಬೇರೆಯವರಲ್ಲಿ ಕೆಲಸಕ್ಕಾಗಿ ನಿಂತರು. ಸ್ವತಂತ್ರ ಮನದವನಿಗೆ ಸ್ವತಂತ್ರ ವೃತ್ತಿಯೇ ಸರಿದೂಗದಿರುವಾಗ ಇನ್ನು ದುಡಿಯುವುದಕ್ಕೆ ಹೇಗೆ ಸಾಧ್ಯವಾದೀತು? ಬೇರೆಯವರಲ್ಲಿ ಕೆಲಸಕ್ಕೆ ತೊಡಗಿದ ಸಿದ್ಧರಾಮರ ಸ್ಥಿತಿಯೂ ಈಗ ಹೀಗೇ ಆಯಿತು. ಅಹಿಕ ಬದುಕಿನಲ್ಲಿ ವೈರಾಗ್ಯದ ಬಿರುಗಾಳಿಯು ಸುರುವಾಯಿತು. ಬದುಕಿನ ನಾವೆ ಅಲ್ಲಾಡತೊಡಗಿತು. ಊರೂರು ಅಲೆದಾಟ, ಸಾಧು–ಸತ್ಪುರುಷರ–ಸತ್ಸಂಗದ ಬಗ್ಗೆ ಹಂಬಲ. ಆಲಮಟ್ಟಿಯ ಹರ್ಡೇಕರ ಮಂಜಪ್ಪನವರ ದರ್ಶನದಿಂದ ಸಿದ್ಧಾರಾಮರ ಬದುಕು ಸಂಪೂರ್ಣವಾಗಿ ಆಧ್ಯಾತ್ಮದೆಡೆಗೆ ವಾಲುವಂತಾಯಿತು. ಅವರೊಂದಿಗೆ ಸಂಚರಿಸಿದರು. ಅವರ ಜನಹಿತ ಕಾರ್ಯಗಳಿಗೆ ಸಹಕಾರಿಯಾಗಿ ನಿಂತು ಸೇವೆ ಮಾಡಿದರು.

ಮುಂದೆ ಸಂಪೂರ್ಣವಾಗಿ ಸಿದ್ಧರಾಮರ ಬದುಕು ವಿರಾಗದತ್ತ ಒಲಿಯಿತು. ಲೋಕದ ಇಚ್ಛೆಯು ಅವರ ಇಚ್ಛೆಯಾಗಲಿಲ್ಲ. ಅದಕ್ಕೆ ವಿರೋಧವೆಂಬಂತೆ ತಲೆಯ ಮೇಲಿನ ಕೂದಲು ಬೆಳೆಯಿಸಿ, ಜಡೆಕಟ್ಟಿದರು; ಉದ್ದವಾದ ಗಡ್ಡ ಬಿಟ್ಟರು. ಸಂತ–ಸಾಧುವಾದರು. ಮೌನಿಯಾದರು; ಜನತೆಯೊಡನೆ ಬೆರೆಯುವುದು ಕಡಿಮೆ ಮಾಡಿದರು. ತಾವೇ ಕಟ್ಟಿದ್ದ ರೇವಣಸಿದ್ಧೇಶ್ವರ ಭಜನಾ ಸಂಗದಿಂದ ಅವರು ಹಲವಾರು ಕಡೆಗಳಲ್ಲಿ ಭಜನೆ ಮಾಡಿದರು; ತತ್ತ್ವಪದಗಳನ್ನು ಹಾಡಿದರು. ರೇವಣಸಿದ್ಧೇಶ್ವರ ಬಗೆಗಿದ್ದ ಭಕ್ತಿಯ ದ್ಯೋತಕವಾಗಿ ಸಿದ್ಧರಾಮರು ಅವನಿಗಾಗಿ ಗುಡಿಯೊಂದನ್ನು ಕಟ್ಟಿಸಿದರು. ಇಂದು ಊರಲ್ಲಿ ಅದನ್ನು ಕಾಣಬಹುದಾಗಿದೆ.

ಸಿದ್ಧರಾಮ ಅವರು ಭಾನಾಮತಿ ವಿದ್ಯೆಯನ್ನು ಬಲ್ಲವರಾಗಿದ್ದರೆಂದು ಹೇಳಲಾಗುತ್ತದೆ. ಅವರು ಜನತೆಗೆ ಅದರಿಂದ ತೊಂದರೆ ಕೊಡುತ್ತಾರೆಂದು ಭ್ರಮಿಸಿದ ಅಜ್ಞ ಜನರು ಕವಿಗಳಿಗೆ ತೊಂದರೆ ಕೊಟ್ಟಿದ್ದೂ ಉಂಟು. ಹೀಗೆ ಬದುಕಿನ ಕಡು ನಿರಾಶೆಯ ಸನ್ನಿವೇಶಗಳು ವಿರಾಗತ್ವವನ್ನು ಗಟ್ಟಿಗೊಳಿಸಿದವು.

ಹೆಡಗಾಪುರ ಗ್ರಾಮದಿಂದ ಸಂಚರಿಸುತ್ತ ಅವರ ಹಾದಿಯು ಯಾನಾಗುಂದಿ ಮಾಣಿಕಮ್ಮನವರ ಸನ್ನಿಧಿಗೂ ಹೋಯಿತು. ಅಲ್ಲಿ ಕೆಲಕಾಲ ನೆಲೆ ನಿಂತರು. ಅಲ್ಲಿಯೂ ಹೆಚ್ಚು ಕಾಲ ನಿಲ್ಲಲಿಲ್ಲ. ಮತ್ತೆ ಪಯಣ ಆರಂಭವಾಯಿತು. ಮೈಮೇಲಿನ ಬಟ್ಟೆಯ ಅರಿವೂ ಇಲ್ಲದಾಯಿತು. ಲೋಕದ ಅರಿವು ಜಾರಿತು. ಅಂತರ್ ಲೋಕದತ್ತ ಅರಿವಿನ ಕಣ್ಣು ನೋಡ ತೊಡಗಿತು. ಹೊರಲೋಕದವರ ಕಣ್ಣಿಗೆ ಅರೆ ಬೆತ್ತಲೆಯಂತೆ ತಿರುಗುತ್ತಿದ್ದ ಸಂತ ಸಿದ್ಧರಾಮರ ಈ ನಡುವಳಿಕೆ ಮನ–ಭಾವ–ಆತ್ಮಗಳು ಬತ್ತಲೆಯಾದುದಕ್ಕೆ ಸಂಕೇತವಾಯಿತು.

ಲೋಕದ ಮೇಲೆ ಆಶೆಯಿದ್ದಾಗ ಸಿದ್ಧರಾಮರು ಜೋಗುಳದ ಹಾಡು ಬರೆದರು, ನಾಟಕ ಬರೆದರು, ಲಾವಣಿ ಬರೆದರು, ಗೀಗೀ ಹಾಡುಗಳು ಬರೆದರು. ಲೋಕದ ಆಶೆಯಿಂದ ದೂರಾಗಿ ನಿಂತು ಕೊಂಡಾಗ "ಸಿದ್ಧದಾಸ" ಎಂಬ ಅಂಕಿತದಲ್ಲಿ ತತ್ತ್ವಪದಗಳನ್ನು ಕಟ್ಟಿ ಹಾಡುತ್ತ ಹೊರಟರು. ಸೊನ್ನಲಿಗೆಯ ಸಿದ್ಧರಾಮರನ್ನು ಈ ಕವಿಗಳು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರಂತೆ. ಅದಕ್ಕಾಗಿಯೇ ಶಿವಯೋಗಿಸಿದ್ಧರಾಮರ ನಾಮವೇ "ಸಿದ್ಧದಾಸ" ಅಂಕಿತಕ್ಕೆ ಕಾರಣವಾಯಿತು.

ಇಂದು ಸಿದ್ಧರಾಮ ಮುಕರಂಬಿ ಅವರ ಸಾಹಿತ್ಯವು ಕಾಲಗರ್ಭ ಸೇರಿ ನಾಶವಾಗಿದೆ. ಅವರು ರಚಿಸಿದ ಹಾಡುಗಳನ್ನು ಹಾಡುವ ಹಾಡುಗಾರರೂ ಇಲ್ಲ. ಎಪ್ಪತ್ತಾರು ವಯಸ್ಸಿನ ಗಣಪತಿ ಹಿಪ್ಪಳಿಗೆ ಅವರು ಒಂದೆರಡು ಪದ್ಯ ಹೇಳಿದರು. ಅವು ಸಿದ್ಧರಾಮ ಅವರದೆ ಎಂದು ತಿಳಿಸಿದರು. ಅವನ್ನು ಇಲ್ಲಿ ಕೊಡಲಾಗಿದೆ:

ದಿಗಂಬರನಾಗು ಮನುಜಾ

ಇದ್ದ ಬಟ್ಟಿ ಯಾರಿಗೀ ಕೊಟ್ಟಿ
ಥೂ ಹುಚಗೊಟ್ಟಿ । ದಿಗಂಬರನಾಗೋ ಮನುಜಾ ॥ ಪ ॥

ನಶ್ವರ ದೇಹವಿದು
ಮಿರಗಿದರೇನು ? ಮಿಂಚಿದರೇನು ?
ರೇಶ್ಮೆ ಮಕಮಲ್ಲು ತೊಟ್ಟರೇನು ?
ತೊಡದಾಂಗ ನೀನು ಬಿಟ್ಟರೇನು ? ॥ ೧ ॥

ಮೈಮ್ಯಾಲಿನ ಬಟ್ಟೆಯೆಲ್ಲ
ಬಿಟ್ಟೆನೆಂದು ಧೀಮಾಕ ಪಟ್ಟಿ
ಒಳಗಿನ ಖೊಟ್ಟಿ ಗುಣ ಬಿಟ್ಟಿಯೇನೋ
ಮನದ ಕದವನೊಮ್ಮೆ ತಟ್ಟಿಯೇನೋ ॥ ೨ ॥

ಭಾವಕ ಬಂಧನ ಮೋಹದ ಕವಚವು
ಮನಕ ಬಂಧನ ಸಂಕಲ್ಪದರಿವೆಯು
ಆತ್ಮದ ಬಂಧನ ವಿಶಾಲ ಹೊದಿಕೆಯು
ಒಳಗ ಬತ್ತಲಾಗೋ ಮನುಜಾ ॥ ೩ ॥

ಮಾನುಳ್ಳ ಮನುಜರಿಗೆ ಅರಿವೆಯ ಅರಿವಪ್ಪ
ಧ್ಯಾನದಲಿ ಶಿವನ ಬೆರೆದವನಿಗೆ
ಏನು ಅರಿವೆ ಯಾವ ಅರಿವು ।
ಸ್ವಾನುಭಾವದಲಿ ದಟ್ಟದಿಗಂಬರನು ॥ ೪ ॥

ದೇಶಕಧಿಕವಾದ ಲೇಸುಳ್ಳ ಹೆಡಗಾಪುರ
ಈಶ ಸಿದ್ಧದಾಸನೇ ವಾಸುಳ್ಳ ದಿಗಂಬರ
ಒಳಗ ದಿಗಂಬರನಾಗೋ ಮನುಜಾ
ಹೊರಗೇನು ನೋಡುತಿಯೋ ಧನುಜಾ ॥ ೫ ॥

ಭಾವದ ಭ್ರಮೆ

ಭಾವದ ಭ್ರಮೆ ಬಡಕೊಂಡ್ಯದ ಯಕ್ಕಾ
ಸಾವ ಗೊತ್ತು ನಿನಗ ತಿಳಿಲಿಲ್ಲ ಪಕ್ಕಾ ॥ ಪ ॥

ಊರ – ಊರ ತಿರುಗಿ ಹುಡುಕಿದಿ
ಕಾಡುವ –ಮಾಡುವ ಪಾಡುವ ಇದಿ
ಬಿಡುವದಿಲ್ಲಪ್ಪ ಬೆನ್ನ ತಿಳಿಯೋ ಮುದಿ ॥ ೧ ॥

ನಸುಕಿನಲ್ಲಿ ಎದ್ದಿ ; ಇನ್ನಾ ಮಂಜ ಮುಸುಕು ಎಂದಿ
ಉಸುಕಿನ ದಿಣ್ಣಿಯ ಮೇಲೆ ಕುಳಿತು
ಜಾರುತ ಜಾರುತ ತಳಕೆ ಜರದಿ
ಬರುತಾವ ಹೀಂಗ ನಮ್ಮೆಲ್ಲರ ಸರದಿ ॥ ೨ ॥

ಫಕ್ಕಂತ ಬಿದ್ದು ಹ್ವಾದಿ ಆವಾಗ
ಲೆಕ್ಕ ಯಾರೀಗಿ ಒಪ್ಪಿಸೀದಿ ಮಗ
ಚೊಕ್ಕ ಚೊಕ್ಕವಾಗಿ ಚಿಕ್ಕೇರು ಜಗಮಗ
ಬೊಕ್ಕ ಬೋರಲೆ ಬಿದ್ದಿ ॥ ೩ ॥

ಖೊಟ್ಟಿ ಜಲ್ಮದ ಭಟ್ಟಿ
ಇಟ್ಟಲ್ಲೆ ಕೆಟ್ಟು ಹೋಯ್ತಿ
ಪಡಬಾರ್ದ ಪಾಡು ಪಟ್ಟಿ
ಬಿಡಬಾರದು ಬಿಟ್ಟು ಕೆಟ್ಟಿ ॥ ೪ ॥

ಸಡಗರ ಸುಂಟ್ಯಾಣ ಸುಡಗಾಡ
ಸಿದ್ಧದಾಸ ಹೀಂಗ ನುಡಿದಾರ
ಭಾವದ ಭ್ರಮಿ ಕಡಿಯೋ
ಶಿವ ಪಾದವು ಬಿಡದೆ ನಡಿಯೋ ॥ ೫ ॥

(ಈ ಕವಿಗಳ ಬಗೆಗೆ ಒಂದಿಷ್ಟು ವಿವರ ಕೊಟ್ಟವರು ಅವರ ವಂಶಸ್ಥರು ಹಾಗೂ ಗಣಪತಿ ಅವರು.)

□




ಸಿದ್ಧರಾಮ ಮುಕರಂಬಿ ಅವರ ವಾಸದ ಮನೆ (ಹೆಡಗಾಪುರ).



ಸಿದ್ಧರಾಮ
ಅವರ ವಂಶಸ್ಥರ
ಮನೆ
(ಹೆಡಗಾಪುರ).



ಸಿದ್ಧರಾಮ ಅವರು
ಕಟ್ಟಿಸಿದ
ರೇವಣಸಿದ್ಧೇಶ್ವರ
ದೇವಾಲಯ
(ಹೆಡಗಾಪುರ).



ಸಿದ್ಧರಾಮ ಅವರ
ಆರಾಧ್ಯ ದೇವರು
ಶಿವನ ಮಂದಿರ.

೭. ಬಸವಲಿಂಗ ಶಾಸ್ತ್ರಿ (ಕ್ರಿ.ಶ.ಸು ೧೯೧೨–೧೯೬೫)

ಬಸವಲಿಂಗ ಶಾಸ್ತ್ರಿಗಳು ಕರ್ನಾಟಕ–ಮಹಾರಾಷ್ಟ್ರಗಳ ಸಮನ್ವಯದ ಸಂಕೇತದಂತೆ ಬದುಕಿದ್ದವರು. ಅವರ ಸ್ವಗ್ರಾಮ ಹಾಣೇಗಾಂವ. ಇಂದಿನ ನಾಂದೇಡ ಜಿಲ್ಲೆ, ದೇಗಲೂರು ತಾಲ್ಲೂಕಿನಲ್ಲಿ ಬರುವ ಮಹಾರಾಷ್ಟ್ರ ರಾಜ್ಯದ ಸ್ಥಳವಾದರೂ; ಅವರ ಕಾರ್ಯ ಕ್ಷೇತ್ರವು ಕನ್ನಡದ ಪ್ರದೇಶವೇ ಆಗಿದೆ. ಔರಾದ ತಾಲ್ಲೂಕಿನ ಗಡಿಭಾಗದಲ್ಲಿ ಹಾಣೇಗಾಂವ ಬರುತ್ತದೆ; ತಾಲ್ಲೂಕಾ ಪ್ರದೇಶದಿಂದ ಹಾಣೇಗಾಂವಿಯ ಅಂತರ ಕೇವಲ ೧೫ ಕಿ.ಮೀ.ಗಳು. ಬಸವಲಿಂಗ ಶಾಸ್ತ್ರಿಗಳು ಮಹಾರಾಷ್ಟ್ರದ ನೆಲೆಯಲ್ಲಿ ಕನ್ನಡ ಸಂಸ್ಕೃತಿ–ಸಾಹಿತ್ಯದ ರಾಯಭಾರಿಗಳಂತೆ ಕಾರ್ಯ ಮಾಡಿದರು. ಅವರ ಹೆಚ್ಚಿನ ವಾಸ್ತವ್ಯವು ಔರಾದ ಗ್ರಾಮದ ಅವರ ಶಿಷ್ಯರುಗಳ ಮನೆಯಲ್ಲಿಯೇ ಇರುತ್ತಿದ್ದಿತು. ಮಹಾರಾಷ್ಟ್ರದ ಪರಿಸರದಲ್ಲಿ ಬಸವಲಿಂಗ ಶಾಸ್ತ್ರಿಗಳು ಪುರಾಣ–ಪ್ರವಚನಗಳ ಮೂಲಕ; ತತ್ತ್ವಪದಗಳ ರಚನೆ ಮತ್ತು ಹಾಡುಗಾರಿಕೆಯ ಮೂಲಕ ಕನ್ನಡ ಕಂಪನ್ನು ಹರಡಿದರು.

ಮಹಾರಾಷ್ಟ್ರದ ಮಾವಿನ ಮರದಲ್ಲಿ ಕುಳಿತು ಕನ್ನಡದ ತತ್ತ್ವಪದಗಳನ್ನು ಹಾಡಿದ ಕನ್ನಡದ ಕೋಗಿಲೆ ಈ ಶಾಸ್ತ್ರಿಗಳು.

ಬಸವಲಿಂಗ ಶಾಸ್ತ್ರಿಗಳ ಮನೆತನವು ಮಠಪತಿ ಅವರ ಮನೆತನ. ಈ ಮನೆತನವು ಮೂರು–ನಾಲ್ಕು ತಲೆಮಾರುಗಳಿಂದಲೂ ಕನ್ನಡದ ವಾತಾವರಣವು ಕಾಪಿಟ್ಟುಕೊಂಡು ಬರುವ ಪ್ರಯತ್ನ ಮಾಡಿದೆ. ಬಸವಲಿಂಗರ ಅಜ್ಜನವರಾಗಿದ್ದ ಮಾಮಡಯ್ಯನವರು ಲಾವಣಿಗಳನ್ನು ಸ್ವತಃ ರಚಿಸಿ ಹಾಡುತ್ತಿದ್ದರು. ಕೃಷಿಕರು ತಮ್ಮ ಹೊಲಗಳಿಗೆ ಸುಗ್ಗಿಯ ಸಮಯದಲ್ಲಿ ಮಾಮಡಯ್ಯನವರನ್ನು ಕರೆಯಿಸಿ; ಲಾವಣಿ ಹಾಡಿಸುತ್ತಿದ್ದರಂತೆ.

ಬಸವಲಿಂಗ ಶಾಸ್ತ್ರಿಗಳ ತಂದೆ ರಾಮಲಿಂಗ ಶಾಸ್ತ್ರಿಗಳು. ಅವರು ಪುರಾಣ ಪ್ರವಚನಕಾರರೂ, ಒಳ್ಳೆಯ ಕವಿಗಳೂ ಆಗಿದ್ದರು. ರಾಮಲಿಂಗ ಶಾಸ್ತ್ರಿಗಳ ಪತ್ನಿ ಗಂಗಾಂಬೆ ಅವರು ಕನ್ನಡ ಪ್ರದೇಶದವರು. ಹೀಗಾಗಿ ಬಸವಲಿಂಗ ಶಾಸ್ತ್ರಿಗಳಿಗೆ ಮನೆಯಲ್ಲಿ ಪರಿಶುದ್ಧವಾದ ಕನ್ನಡ ಪರಿಸರವು ಮೈಗೊಂಡು ವಿಕಾಸಗೊಳ್ಳುವುದಕ್ಕೆ ಸಾಧ್ಯವಾಯಿತು.

ಬಸವಲಿಂಗ ಶಾಸ್ತ್ರಿಗಳ ಮನೆತನದ ಗುರುಗಳು ಹಾಣೇಗಾಂವಿ ಹಿರೇಮಠದ ಮಹಾಲಿಂಗ ಸ್ವಾಮಿಗಳು. ಬಸವಲಿಂಗರಿಗೆ ಪ್ರಾಸಾದಿಕ ಅನುಗ್ರಹ ನೀಡಿದವರು

ನಾವದಗಿಯ ರೇವಪ್ಪಯ್ಯನವರು. ಬಸವಲಿಂಗ ಶಾಸ್ತ್ರಿಗಳು ನಾವದಗಿಯ ರೇವಪ್ಪಯ್ಯನವರೊಂದಿಗೆ ಹಲವಾರು ವರುಷಗಳ ಕಾಲ ಸಂಚರಿಸಿದರು. ಅವರ ಸನ್ನಿಧಾನದಲ್ಲಿ ಕವಿಗಳು ಆಧ್ಯಾತ್ಮಿಕ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ಬಸವಲಿಂಗ ಶಾಸ್ತ್ರಿಗಳು ನಾವದಗಿ ರೇವಪ್ಪಯ್ಯನವರ ಸಂಪೂರ್ಣ ಕೃಪೆಗೆ ಪಾತ್ರರಾದ ಶಿಷ್ಯರಾಗಿದ್ದರು.

ಬಸವಲಿಂಗ ಶಾಸ್ತ್ರಿಗಳ ವಿದ್ಯಾಭ್ಯಾಸವು ಖಾಸಗಿ ಶಾಲೆಯಲ್ಲಿ ನಡೆಯಿತು. ಅದು ಬೇರೆ ಯಾವುದೋ ಶಾಲೆಯಾಗಿರಲಿಲ್ಲ. ರಾಮಲಿಂಗ ಶಾಸ್ತ್ರಿಗಳು ಮಕ್ಕಳಿಗಾಗಿ ಖಾಸಗಿ ಶಾಲೆಯೊಂದನ್ನು ನಡೆಸುತ್ತಿದ್ದರು. ಅಲ್ಲಿ ರಾಮಲಿಂಗ ಶಾಸ್ತ್ರಿಗಳೇ ಸ್ವತಃ ವಿದ್ಯಾ ಗುರುಗಳಾಗಿ ನಿಂತುಕೊಂಡು ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರು. ಇಲ್ಲಿ ಕನ್ನಡ, ಮರಾಠಿ, ಹಿಂದಿ, ಸಂಸ್ಕೃತ ಭಾಷೆಗಳನ್ನು ಕಲಿಸಿ ಕೊಡಲಾಗುತ್ತಿದ್ದಿತು. ಬಸವಲಿಂಗ ಶಾಸ್ತ್ರಿಗಳು ಈ ಎಲ್ಲ ಭಾಷೆಗಳಲ್ಲಿ ಪಾಂಡಿತ್ಯವನ್ನು ಹೊಂದುವುದರೊಂದಿಗೆ, ತೆಲಗು ಭಾಷೆಯನ್ನೂ ಕಲಿತು ಅದರಲ್ಲಿ ಪುರಾಣ – ಕಾವ್ಯಗಳನ್ನು ರಚನೆ ಮಾಡಿದರು.

ಬಸವಲಿಂಗ ಶಾಸ್ತ್ರಿಗಳು ಪ್ರಾಪಂಚಿಕ ಜೀವನದಲ್ಲಿ "ಕಮಲ ಪತ್ರ ನ್ಯಾಯ"ದಂತೆ ಬದುಕಿದ್ದವರು. ಅವರ ಧರ್ಮಪತ್ನಿ ನಾಗಮ್ಮನವರು ಹಿತಮಿತವಾದ ಸಂಸಾರದ ಪ್ರಜ್ಞೆವುಳ್ಳವರು. ಬಸವಲಿಂಗರಿಗೆ ಒಬ್ಬ ಮಗ ಮತ್ತು ಒಬ್ಬಳೆ ಮಗಳು. ಮಗ ಹಾವಗಿ ಲಿಂಗ ಸ್ವಾಮಿಗಳು ಆಂಗ್ಲಭಾಷಾ ಪದವಿಧರರು ಬರಹಗಾರರೂ ಆಗಿದ್ದಾರೆ. ಇದ್ದುದರಲ್ಲಿ ಸಂಸಾರ ತೂಗಿಸಿಕೊಂಡು ಹೋಗಬಲ್ಲ ವ್ಯವಹಾರ ಚತುರೆ ಆಗಿದ್ದರು. ಬಸವಲಿಂಗ ಶಾಸ್ತ್ರಿಗಳು ಸಾಂಸಾರಿಕ ಜವಾಬ್ದಾರಿಗಿಂತಲೂ ಆಧ್ಯಾತ್ಮಿಕ; ಸಾಂಸ್ಕೃತಿಕ ಜವಾಬ್ದಾರಿಯನ್ನು ಹೆಚ್ಚು ಹೊತ್ತು ನಿಭಾಯಿಸಿದರು. ವರ್ಷದ ಎಂಟು ತಿಂಗಳುಗಳ ಕಾಲವೂ ಅವರು ಕರ್ನಾಟಕ–ಮಹಾರಾಷ್ಟ್ರ–ಆಂಧ್ರ ರಾಜ್ಯಗಳಲ್ಲಿ ಸಂಚರಿಸುತ್ತ ಕನ್ನಡ ಸಂಸ್ಕೃತಿಯನ್ನು ಪ್ರಸಾರ ಗೊಳಿಸಿದರು.

ಬಸವಲಿಂಗ ಶಾಸ್ತ್ರಿಗಳು ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಶರಣಬಸವೇಶ್ವರ ಲೀಲಾಮೃತ (ಮರಾಠಿ, ತೆಲಗು), ನಾವದಗಿ ರೇವಪ್ಪಯ್ಯನವರ ಪುರಾಣ (ಕನ್ನಡ), ಶ್ರೀ ಭಗವದ್ಗೀತಾ ಷಟ್‌ಸ್ಥಲಯೋಗ (ಕನ್ನಡ), ಶ್ರೀ ಹಾವಗಿಲಿಂಗ ಲೀಲಾಮೃತ (ಕನ್ನಡ), ಸಚಿತ್ರ ಷಟ್‌ಸ್ಥಲ ಪ್ರಕಾಶ (ಕನ್ನಡ) ಇವು ಅತ್ಯಂತ ಪ್ರಮುಖ ವಾದವುಗಳಾಗಿವೆ.

ಬಸವಲಿಂಗ ಕವಿಗಳು ಸಂಗೀತ ಮತ್ತು ಚಿತ್ರ ಕಲೆಗಳಲ್ಲಿ ಸಿದ್ಧ ಹಸ್ತರಾಗಿದ್ದರು. ಅವರು ಹಲವು ಸಂಗೀತ ವಾದ್ಯಗಳನ್ನು ನುಡಿಸುತ್ತಿದ್ದರು. ವೀರಶೈವರ ಸಿದ್ಧಾಂತಗಳನ್ನು ಒಳಗೊಂಡಿರುವ ಹಲವಾರು ಸಾಂಕೇತಿಕ ಚಿತ್ರಗಳನ್ನು ಅವರು ಬಿಡಿಸಿದ್ದಾರೆ. ಅವುಗಳಿಗೆ "ಉದ್ಧರಣಾ ಸಾಹಿತ್ಯ" ಎಂದು ಕರೆದಿರುವರು.

ಷಟ್‌ಸ್ಥಲ ಹಾಗೂ ಅದಕ್ಕೆ ಸಂಬಂಧಿಸಿದ ಷಟ್ ಚಕ್ರಗಳ ಸಂಬಂಧವನ್ನು ಸಹ

ಅವರು ಪ್ರತ್ಯೇಕವಾಗಿ ಚಿತ್ರಗಳ ಮುಖಾಂತರ ಬಿಡಿಸಿ ತೋರಿದ್ದಾರೆ. ಯೋಗಕ್ಕೆ ಸಂಬಂಧಿಸಿದ ಹಲವಾರು ಚಿತ್ರಗಳು ಅವರ ಕಲಾ ಕೃತಿಗಳಲ್ಲಿವೆ.

ಬಸವಲಿಂಗ ಶಾಸ್ತ್ರಿಗಳಲ್ಲಿರುವ ಪ್ರತಿಭೆ–ಪಾಂಡಿತ್ಯವನ್ನು ಗುರುತಿಸಿ ಹಲವಾರು ಮಠ–ಮಾನ್ಯ–ಸಂಘ–ಸಂಸ್ಥೆಗಳು ಸನ್ಮಾನಿಸಿವೆ.

ಕ್ರಿ.ಶ. ೧೯೭೦,೭೨,೭೫ರಲ್ಲಿ ಬಿಚಕುಂದಾ, ಉದಗೀರ, ಸೊಲ್ಲಾಪುರಗಳಲ್ಲಿ ಏರ್ಪಡಿಸಿದ್ದ ಸನ್ಮಾನ ಸಮಾರಂಭಗಳಲ್ಲಿ ಬಸವಲಿಂಗ ಶಾಸ್ತ್ರಿಗಳಿಗೆ "ಕವಿರಾಜ", "ಪುರಾಣ ರತ್ನ", "ಬಹುಭಾಷಾ ಪಂಡಿತ" ಎಂಬ ಬಿರುದುಗಳನ್ನು ನೀಡಿ ಗೌರವಿಸಲಾಯಿತು.

ಬಸವಲಿಂಗ ಶಾಸ್ತ್ರಿಗಳು ಪುರಾಣಕರ್ತೃಗಳಾಗಿ; ಪುರಾಣ ಪ್ರವಚನಕಾರರಾಗಿ, ಶರಣ ಜೀವರಾಗಿ; ಆಧ್ಯಾತ್ಮ ಸಂತರಾಗಿ, ಚತುರ್ಭಾಷಾ ಕವಿಗಳಾಗಿ ಎಂಬತ್ತು ಮೂರು ವರುಷಗಳ ಕಾಲ ಸಾರ್ಥಕ ಬದುಕು ಬದುಕಿ ಕ್ರಿ.ಶ. ೧೯೯೫ರಲ್ಲಿ ಲಿಂಗೈಕ್ಯರಾದರು. ಅವರ ಸಮಾಧಿ ಇಂದು ಹಾಣೇಗಾಂವಿಯಲ್ಲಿ ಕಾಣಬಹುದಾಗಿದೆ.

ಬಸವಲಿಂಗ ಕವಿಗಳು ಹಲವಾರು ತತ್ತ್ವಪದಗಳನ್ನು ಸ್ವನಾಮ ಅಂಕಿತದಲ್ಲಿಯೇ ರಚಿಸಿದ್ದಾರೆ. ಇಲ್ಲಿ ಎರಡು ಪದ್ಯಗಳನ್ನು ಕೊಡಲಾಗಿದೆ.

ಹೊಲವ ಹಸನ ಮಾಡು ಶಿವನಾಮ ಬಿತ್ತು

ಹೊಲದ ಕಸವ ಕಸರಿಲ್ಲದೆ ತಗಿಯಬೇಕಣ್ಣ
ಹೊಲದ ಒಳಗ ಮುಕ್ಕಣ ಶಿವನ ನಾಮ ಬಿತ್ತಣ್ಣ ॥ ಪ ॥

ಆಣವ ಮಲದ ಕಸವ ಕಿತ್ತಣ್ಣ
ಮಾಯ ಮಲದ ಕಾಸಗಿ ತೆಗಿಯಣ್ಣ
ಕಾರ್ಮಿಕ ಮಲದ ನಟ್ಟ ಕಡಿಯಣ್ಣ
ನೀ ಮ್ಯಾಲಿಂದ ಮ್ಯಾಲ ಹೊಲವ ಹಸನ ಮಾಡಣ್ಣ ॥ ೧ ॥

ಕಾಮದ ಹೆಂಟೆಯನು ಒಡೆಯಣ್ಣಾ
ಅದರ ಮ್ಯಾಲ ನೇಮದ ನೀರನ್ನು ಹಾಕಣ್ಣಾ
ಮೋಹದ ಮುಳ್ಳನ್ನು ತೆಗೆಯಣ್ಣಾ
ದೇಹದ ಮಮಕಾರ ಅಳಿಯಣ್ಣಾ ॥ ೨ ॥

ಜೀವದ ಜಂಜಡವ ನೀಗಣ್ಣ
ಭಾವದ ಬಗ್ಗಡವ ಕಡಿಯಣ್ಣ
ಪ್ರೇಮದ ಗೊಬ್ಬರವ ಹಾಕಣ್ಣ
ವ್ಯೋಮಕೇಶನ ನಾಮ ಬಿತ್ತಣ್ಣ ॥ ೩ ॥

ನಿಷ್ಠೆಯ ಬೇಲಿಯ ನಿಲಿಸಣ್ಣ
ತುಂಟ ದನಗಳ ಹೊಡೆಯಣ್ಣ
ಮದಗಳ ಹಕ್ಕಿಯ ನೂಕಣ್ಣ
ಕದವ ಹಾಕಿ ಹೊಲವ ಕಾಯಣ್ಣ ॥ ೪ ॥

ಸದಮಲ ಅರುವಿನ ಹಂದರ ಹಾಕಣ್ಣ
ಅದರ ಕೆಳಗ ಚಿನುಮಯದ ಸಸಿಗಳ ನಾಟಿ ಮಾಡಣ್ಣ
ಚಂದ ಚಂದದ ಹೂವ ನೋಡಣ್ಣ
ಸುಗಂಧ ಬೀರುತ ನಿನ್ನ ಮನ ತಣಿಸುತಾವಣ್ಣ ॥ ೫ ॥

ಭವದ ಬೀಜವ ಬೇರೆ ಮಾಡಣ್ಣ
ಹೊಲದೊಳಗಿನಿಂದ ಶಿವದ ಬೀಜವ ಕಡಿಗಿ ಮಾಡಣ್ಣ
ಜಲದ ಕೊರತೆ ಆಗಬಾರದಣ್ಣ
ಯಾವಾಗ ನೋಡಲು ರಂಟೆ-ಕುಂಟೆ ಹೊಡೆಯ ಬೇಕಣ್ಣ ॥ ೬ ॥

ಕಾಲ-ಕರ್ಮದ ಕರಲು ಮುರಿಯಣ್ಣ
ಯರಿಭೂಮಿ ಮಾಡಿ ಅಮರಫಲವ ಬೆಳೆಯ ಬೇಕಣ್ಣ
ಹದವ ನೋಡಿ ಹರಗಬೇಕಣ್ಣ
ಬೆದೆಯ ನೋಡಿ ಬಿತ್ತ ಬೇಕಣ್ಣ ॥ ೭ ॥

ಹೊಲದ ಕಸುವು ಹೊಲದಲ್ಲಿರಲ್ಲಣ್ಣ
ಅದರೊಳಗಿನ ನೀರು ಹರಿದು ಹೋಗದಂಗ ಕಾಯಣ್ಣ
ಸುತ್ತ - ಮುತ್ತ ಅರಣಿ ಕಟ್ಟಣ್ಣ
ಕಲ್ಲಗಾರೆ ಗಚ್ಚು ಹಾಕಿ ಬದುವು ಭರ್ತಿ ಮಾಡಣ್ಣ ॥ ೮ ॥

ವಸುಧಿಯೊಳಗ ಹಾಣೇಗಾಂವಿ
ಬಸವಲಿಂಗನ ಮಧುರವಾಣಿ

ದೇಹವೆಂಬ ಹೊಲಕ ಪ್ರೇರಣಿ
ಶಿವದ ಫಸಲು ಬೆಳೆದು ಉಣ್ಣಿ ॥ ೬ ॥

ಶಿವನು ಎಲ್ಲಿ ಹಾನ ?

ಶಿವನು ಎಲ್ಲಿ ಹಾನಂತಿ
ಭವದಾಗ ನೀ ಯಾಕ ಕುಂತಿ? ॥ ಪ ॥

ಭವ ಬಿಟ್ಟು ಶಿವವಿಲ್ಲ
ಭವದ ಪರಿ ನಿನದಲ್ಲ
ಅಶಿವ ಹರಿ; ಅದು ಅಭವದ ಪರಿ
ನಿನ್ನ ನೀನರಿ; ನೀನೇ ನರಹರಿ ॥ ೧ ॥

ನೀನು ಶಿವನೊಳಗು
ಶಿವನು ನಿನ್ನೊಳಗು
ಭವವು ಭವದೊಳಗು
ಅಭವ ಶಿವದೊಳಗು ॥ ೨ ॥

ಜಾಗ್ರತನಾಗಪ್ಪ ಒಳಗ
ಕಾಣುತಾದ ಬೆಳ್ಳಾನ ಬೆಳಗ
ಅದರೊಳಗ ನೋಡು ನಿನ್ನ
ಅಡಗಿಹನು ಚೆನ್ನ ಚೇತನ ॥ ೩ ॥

ಉತ್ತರದಲಿ ನೋಡಲು ಬೇಡ
ದಕ್ಷಿಣದಲಿ ನೋಡಲು ಬೇಡ
ಪೂರ್ವದಲಿ ನೋಡಲು ಬೇಡ
ಪಶ್ಚಿಮದಲಿ ನೋಡಲು ಬೇಡ ॥ ೪ ॥

ನಿನ್ನ ನೀ ನೋಡುವುದು ಬಹುಪಾಡ ನೋಡ
ನಿನ್ನಂಗ ಅನ್ಯರನು ತಿಳಿವುದು

ನಿನ್ನಲ್ಲಿ ಶಿವನು ಇರುವಾಂಗ
ಅನ್ಯರಲು ಅವನು ಇರುತಿಹನು ಸಂಗ ॥ ೫ ॥

ಧರಿಯೊಳು ಮೆರೆವ ಹಾಣೇಗಾಂವ ಪುರವು
ಇರುತಿಹನು ಬಸವಲಿಂಗ ಗುರುವು
ಇರುತಿಹನು ಶಿವನು ಮನದೊಳಗ
ಇರುತಿಹನು ನಮ್ಮಯ ಆತ್ಮದೊಳಗ ॥ ೬ ॥

(ಈ ವಿವರಗಳನ್ನು ಕವಿಗಳ ಮಗ ಶ್ರೀ ಹಾವಗಿ ಲಿಂಗ ಸ್ವಾಮಿ ಅವರು ನೀಡಿದ್ದಾರೆ.)

▯




ಬಸವಲಿಂಗ ಶಾಸ್ತ್ರಿ ಅವರ ಮನೆ (ಹಾಣೇಗಾಂವ).




ಬಸವಲಿಂಗ ಶಾಸ್ತ್ರಿ ಅವರು.




ಬಸವಲಿಂಗರ ತಂದೆ ರಾಮಲಿಂಗ ಶಾಸ್ತ್ರಿಗಳ ಸಮಾಧಿ.




ಬಸವಲಿಂಗ ಶಾಸ್ತ್ರಿಗಳ ಸಮಾಧಿ (ಹಾಣೇಗಾಂವ).



ಬಸವಲಿಂಗ ಶಾಸ್ತ್ರಿಗಳಿಂದ ಸ್ಥಾಪಿತವಾದ ಮನ್ಮಥಸ್ವಾಮಿ ದೇವಾಲಯ
(ಹಾಣೇಗಾಂವ).



ದೇವಾಲಯದ ಒಳಗಿರುವ ದರ್ಶನ ಪ್ರತಿಮೆ.



ಬಸವಲಿಂಗರ
ಸ್ಮರಣಾರ್ಥವಾಗಿ ಕಟ್ಟಿಸಿದ
ಮಂಟಪ
(ಹಾಣೇಗಾಂವ).

೮. ಶಂಕರರಾವ ಪಂಚಾಳ (ಕ್ರಿ.ಶ.ಸು. ೧೯೨೦-೧೯೯೦)

ಬೀದರ ಜಿಲ್ಲೆ ಔರಾದ ತಾಲ್ಲೂಕಿನ ಏಕಲಾರ ಗ್ರಾಮದ ತತ್ತ್ವಪದಕಾರ ಶಂಕರರಾವ ಪಂಚಾಳ ಅವರು ತಾವು ಕವಿಗಳಾಗುವುದರೊಂದಿಗೆ, ಶರಣಯ್ಯಸ್ವಾಮಿ ಎಡೂರೆ ಅವರನ್ನು ಒಬ್ಬ ತತ್ತ್ವಪದಕಾರರನ್ನಾಗಿ ರೂಪಿಸಿದವರು. ಶರಣಯ್ಯ ಸ್ವಾಮಿಗಳು ಈ ವಿಷಯ ಕುರಿತಂತೆ ಹೇಳುವ ಮಾತುಗಳನ್ನು ಕೇಳಬೇಕು: "ಶಂಕರ ಅವರು ನನಗಿಂತ ಸು. ಹತ್ತು ವರುಷ ಹಿರಿಯರು. ಅವರಲ್ಲಿ ಪರೋಪಕಾರದ ಮನೋಭಾವವಿದ್ದಿತು. ಯಾವುದನ್ನೇ ಆಗಲಿ; ತಮಗೇ ಬೇಕೆಂಬ ಸಂಕುಚಿತ ಮನಸ್ಸು ಅವರಲ್ಲಿ ಇರಲಿಲ್ಲ. ಆದುದರಿಂದಲೇ ಅವರು ತಮ್ಮಲ್ಲಿಗೆ ಹಾಡು ಕಲಿಯಲು ಬರುವವರಿಗೆ ಉದಾರ ಮನದಿಂದ ಹೇಳಿಕೊಡುತ್ತಿದ್ದರು. ಮನೆಯಲ್ಲಿ ಮಜ್ಜಿಗೆ ಕುಡಿಸಿ; ಮನ-ಹೊಟ್ಟೆ ತಂಪಾಗಿಸಿ; ಅವರಿಗೆ ತಮ್ಮಲ್ಲಿರುವ ಜ್ಞಾನವನ್ನು ನೀಡುತ್ತಿದ್ದರು. ಮೊದ-ಮೊದಲಿಗೆ ನಾನು ಹಾಡುಗಳನ್ನು ಕಟ್ಟುವುದಕ್ಕೆ ಆರಂಭ ಮಾಡಿದಾಗ, ಅವುಗಳನ್ನು ತಿದ್ದಿಕೊಟ್ಟು; ಹಾಡಿನ ಹಾದಿ ತೋರಿದವರು ಶಂಕರ".

ಶಂಕರರ ತಂದೆ ಲಕ್ಷ್ಮಣ ಪಂಚಾಳ, ಕಾಷ್ಠ ಕಲೆಯಲ್ಲಿ ಸಿದ್ಧಹಸ್ತರಾಗಿದ್ದರು. ಕಟ್ಟಿಗೆಯಲ್ಲಿ ಹಲವಾರು ನಮೂನೆಯ ಆಕೃತಿಗಳನ್ನು, ಗೊಂಬೆ-ಮೂರ್ತಿಗಳನ್ನು ಕೆತ್ತುತ್ತಿದ್ದರು. ಮನೆಗಳಿಗೆ ಬೇಕಾದ ದ್ವಾರವನ್ನು ಅವರು ಬಹುಸುಂದರವಾಗಿ ಮಾಡುತ್ತಿದ್ದರು. ಲಕ್ಷ್ಮಣ ಅವರ ಬಡಿಗತನದ ಕಾರ್ಯಕ್ಕೆ ಬಹು ಬೆಲೆಯಿದ್ದಿತು. ಲಕ್ಷ್ಮಣ ಅವರ ಹೆಂಡತಿ ಭಾಗ್ಯರತಿಬಾಯಿ.

ಈ ದಂಪತಿಗಳಿಗೆ ಕ್ರಿ.ಶ.ಸು. ೧೯೨೦ನೆಯ ವರ್ಷದಲ್ಲಿ ಶಂಕರರಾವ ಹುಟ್ಟಿದರು. ಆರಂಭದಲ್ಲಿ ಶಂಕರ ಅವರ ಶಿಕ್ಷಣವು ಖಾಸಗಿ ಶಾಲೆಯಲ್ಲಿ ನಡೆಯಿತು. ಮೋಡಿ; ಕನ್ನಡ, ಮರಾಠಿ ಭಾಷೆಗಳ ಜ್ಞಾನವು ಪ್ರಾಪ್ತವಾಯಿತು. ಒಂಬತ್ತನೆಯ ತರಗತಿಯವರೆಗೆ ಅವರು ಓದಿದರೆಂದು ಹೇಳಲಾಗುತ್ತದೆ. ಹರಿತ ಬುದ್ಧಿಯ ಶಂಕರರಾವ ಅವರು ಖಾಸಗಿಯಾಗಿ ಹಲವಾರು ಕನ್ನಡ ಗ್ರಂಥಗಳನ್ನು ಓದಿದರು. ಆಧ್ಯಾತ್ಮ ಶಾಸ್ತ್ರದ ಬಗೆಗೆ ಪರಿಚಯ ಮಾಡಿಕೊಂಡರು. ತಮ್ಮ ಬಡಿಗತನ ಕಾಯಕದ ಬಿಡುವಿನ ವೇಳೆಯಲ್ಲಿ ಅನುಭಾವಿಗಳ ಜೊತೆಗೆ ಕೂಡಿ ಹಲವಾರು ವಿಷಯಗಳ ಬಗೆಗೆ ಚರ್ಚೆ ಮಾಡುತ್ತಿದ್ದರು. ಅವರ ಅನುಭವ ಗೋಷ್ಠಿಗೆ ಶಿವ-ಪಾರ್ವತಿ ದೇವಾಲಯವು ಆಶ್ರಯದ ಸ್ಥಲವಾಗಿತ್ತು.

ಶಂಕರರಾವ ಅವರು ಗೃಹಸ್ಥರಾಗಿದ್ದರು. ಹೆಂಡತಿ ಲಕ್ಷ್ಮಿಬಾಯಿ. ಪತಿಯ ಕಾರ್ಯಗಳಿಗೆ ಅನುವರ್ತಿಯಾಗಿದ್ದವರು. ಈ ದಂಪತಿಗಳಿಗೆ ಒಟ್ಟು ಆರು ಜನ ಮಕ್ಕಳು. ಅವರಲ್ಲಿ ಒಬ್ಬನೇ ಗಂಡುಮಗ.

ಶಂಕರರಾವ ಅವರು ತಂದೆಯಂತೆ ಕುಶಲ ಕಲಾಕರ್ಮಿಗಳಾಗಿದ್ದು; ಕಟ್ಟಿಗೆಯಲ್ಲೂ ಅವರು ಕಾವ್ಯ ಕೆತ್ತುತ್ತಿದ್ದರು. ಅಂದರೆ ಕಲಾತ್ಮಕವಾದ ಚಿತ್ರಗಳನ್ನು ಕೆತ್ತುತಿದ್ದರು. ಹಾಗೆಯೆ ಭಜನೆ ಹಾಡುಗಳನ್ನು ಹಾಡುವುದು; ಸ್ವತಃ ಅವುಗಳನ್ನು ಬರೆಯುವುದು ಮಾಡುತ್ತಿದ್ದರು.

ಶಂಕರರಾವ ಅವರ ಆರಾಧ್ಯದೇವರು ಮಹಾದೇವ ಮತ್ತು ಹನುಮಾನ ದೇವರು. ಅವರು ದಿನನಿತ್ಯವೂ ಮಹಾದೇವನ ದರ್ಶನ ಮತ್ತು ಹನುಮಾನನ ದರ್ಶನಕ್ಕಾಗಿ ಹೋಗುತ್ತಿದ್ದರು. ಪ್ರತಿ ಶನಿವಾರ ಹನುಮಂತನಿಗೂ, ಪ್ರತಿ ಸೋಮವಾರ ಮಹಾದೇವರಿಗೂ ವಿಶೇಷ ಅಭಿಷೇಕ–ಪೂಜೆ ಸಲ್ಲಿಸುತ್ತಿದ್ದರು.

ಏಕಲಾರ ಗ್ರಾಮದ ಪಕ್ಕದಲ್ಲಿಯೇ ಶಿವ–ಪಾರ್ವತಿ ಬೆಟ್ಟವಿದೆ. ಅದರ ಮೇಲೆಯೇ ಮಹಾದೇವ ದೇವಾಲಯ ಮತ್ತು ಹನುಮಾನ ದೇವಾಲಯಗಳಿವೆ. ಶಿವ–ಪಾರ್ವತಿ ತೀರ್ಥದ ಗುಂಡವೂ ಅಲ್ಲಿದೆ. ಹಿಂದೆ ಏಕಲಾರ ಗ್ರಾಮವು ಅದೇ ಪರಿಸರದಲ್ಲಿದ್ದಿತೆಂಬುದಕ್ಕೆ ಇಂದಿಗೂ ಹಲವಾರು ಕಟ್ಟಡಗಳ ಅವಶೇಷಗಳು ನೋಡುವುದಕ್ಕೆ ದೊರಕುತ್ತವೆ. ಶಂಕರರಾವ ಅವರು ದೇವಾಲಯಗಳ ಶಾಂತ ಪರಿಸರದಲ್ಲಿ ಹೋಗಿ ಕುಳಿತುಕೊಳ್ಳುತ್ತಿದ್ದರು. ತಮಗೆ ಆಪ್ತರಾದವರನ್ನು ಕೂಡಿಸಿಕೊಂಡು ಭಜನೆ ಮಾಡುತ್ತಿದ್ದರು. ತಾವು ರಚಿಸಿದ ಹಾಡುಗಳನ್ನು ಹಾಡುತ್ತಿದ್ದರು. ಶಂಕರರಾವ ಪಂಚಾಳ ಅವರ ಕಿರಿಯಸೋದರ ವಾಮನ ಪಂಚಾಳ ಅವರಿಗೆ ಅಣ್ಣನ ಬಗೆಗೆ ಅತೀವ ಅಭಿಮಾನವಿದೆ. ಅವರು ತಮ್ಮ ಅಣ್ಣನವರನ್ನು ಕುರಿತು ಹೀಗೆ ಹೇಳುತ್ತಾರೆ: "ನಮ್ಮ ತಂದೆ ಲಕ್ಷ್ಮಣ ಅವರು ಸ್ವಲ್ಪ–ಸ್ವಲ್ಪ ಜ್ಯೋತಿಷ್ಯಶಾಸ್ತ್ರ ಬಲ್ಲವರಾಗಿದ್ದರು. ನಮ್ಮ ಅಣ್ಣನವರನ್ನು ಕುರಿತು ಅವರು ಭವಿಷ್ಯ ನುಡಿದಿದ್ದರು. ಅವನೊಬ್ಬ ದೊಡ್ಡ ಕವಿಯಾಗುತ್ತಾನೆಂದೂ ತಿಳಿಸಿದ್ದರು. ನಮ್ಮ ತಂದೆ ಅವರು ಅಣ್ಣನವರಿಗೆ ಬಹಳ ಪ್ರೀತಿಸುತ್ತಿದ್ದರು. ಹಾಡು ಹಾಡಿಸುತ್ತಿದ್ದರು. ಸುಮಧುರ ಕಂಠದಿಂದ ಅಣ್ಣ ಹಾಡು ಹಾಡುತ್ತಿದ್ದರು. ನಮ್ಮ ತಂದೆ ಹಾಡುಗಳನ್ನು ಕೇಳಿ ಬಹು ಹರುಷ ಪಡುತ್ತಿದ್ದರು. ನಮ್ಮ ಅಣ್ಣನವರಿಗೆ ಜನರು ಗೌರವದಿಂದ ಕಾಣುತ್ತಿದ್ದರು. ಅವರನ್ನು ಜನತೆ 'ಶಂಕರರಾವ ಕವಿಗಾರ' ಎಂದೇ ಕರೆಯುತ್ತಿದ್ದರು. ನಮ್ಮ ಅಣ್ಣನವರಲ್ಲಿ ಗರ್ವ ಇರಲಿಲ್ಲ. ಸರಳರಾಗಿದ್ದರು. ನನಗೂ ಹಾಡು ಹಾಡಲು ಕಲಿಸುತ್ತಿದ್ದರು. ಆದರೆ ನನ್ನ ಮಡ್ಡ ಬುದ್ಧಿಗೆ ಅವರ ಕಲೆ ಹತ್ತಲೆ ಇಲ್ಲ". ಶಂಕರರರಾವ ಪಂಚಾಳ ಅವರು ಹಲವಾರು ತತ್ತ್ವಪದಗಳನ್ನು ಬರೆದಿದ್ದಾರೆ. ಅವರ ತತ್ತ್ವಪದಗಳಿಗೆ 'ಮಹಾದೇವ' ಎಂಬ ಅಂಕಿತವನ್ನು ಹಾಕಿದ್ದಾರೆ.

ಅವರ ಎರಡು ತತ್ತ್ವಪದಗಳನ್ನು ಇಲ್ಲಿ ಕೊಡಲಾಗಿದೆ:

ಅಕ್ಕ ಕೇಳ ನನದೊಂದು ಮಾತ

ಅಕ್ಕ ಕೇಳವ್ವ ನನದೊಂದು ಮಾತ
ಚಿಕ್ಕವಳು ನಾನೆಂದು ಧಿಕ್ಕರಿಸಬ್ಯಾಡ ಪೂರ್ತ ॥ ಪ ॥

ಅಜ್ಞಾನದ ಬುದ್ಧಿ ನಿನಗ್ಯಾಕ ಬಂತು
ಸುಜ್ಞಾನದ ಹಾದಿ ನಿನಗ್ಯಾಕ ಸಿಗದಾಯ್ತು
ಕುಜ್ಞಾನದ ಕತ್ತಲಿಯಲಿ ನೀ ಬಿದ್ದಂಗಾಯ್ತು
ನಿಃ ಜ್ಞಾನದಿಂದ ಭವಜಾಲ ನೀನಗಾಯ್ತು ॥ ೧ ॥

ಅನುಭಾವದಿಂದ ಸಾಧನಿ ಮಾಡು ಪಕ್ಕಾ
ಅನುಭಾವದಿಂದ ನಿನಗ ಬರುತದ ಲೆಕ್ಕಾ
ಅನುಭಾವ ಬಿಟ್ಟು ತಿರುಗುತಿ ಯಾಕ?
ಅನುಭಾವದಿಂದ ಹರಿವದು ದುಕ್ಕ ॥ ೨ ॥

ತಿಳಿ ಭಾಳ ಇರಬೇಕು ಅಕ್ಕ
ತಿಳಿಬೇಕು ನಿನ್ನ ಅಂಗದ ಗುಣ ಪಕ್ಕಾ
ತಿಳಿಬೇಕು ನಿನ್ನಲ್ಲಿ ಭಕ್ತಿಯ ದಿಕ್ಕಾ
ತಿಳಿಬೇಕು ಒಳಗಿನ ಮನಸೀನ ಸೊಕ್ಕಾ ॥ ೩ ॥

ಸೊಕ್ಕೀನ ಹಂದಿಯಂಗ ತಿರುಗುತಿ ಯಾಕ ?
ಬೆಕ್ಕಿನಂಗ ಸಪ್ಪಳಿಲ್ಲದ ಬರುತಿದಿ ಯಾಕ ?
ಚಕ್ಕನೆ-ಚಂಗನೆ ಹಾರುತಿ ಯಾಕ ?
ದಿಕ್ಕಿಲ್ಲದೆ ಒಮ್ಮ ನೀ ಹೋಗುತಿ ಮಣ್ಣಾಗ ॥ ೪ ॥

ನಾಯಾಗಿ ಬೊಗಳುತಿ ಜನಕ
ಗಾಯಾಗಿ ಸತ್ತು ಹೋಗುತಿ ನರಕ
ಮಾಯಾಗಿ ಸಿಕ್ಕಿದಿ ನೀ ಸುಮಕ
ವಾಯದಲ್ಲಿ ಬಿದ್ದೇನು ಮನಕ ॥ ೫ ॥

ಮಂಗ ಮಾಯಾ ಮಾಡುತಿ ಜನಕ
ಅಂಗ ಭೋಗ ಬಿಡಬೇಕು ಕಡಿತನಕ
ಲಿಂಗದ ನೆನವಿರಬೇಕು ಮನಕ
ಭಂಗದ ಗುಣ ಬಿಡಬೇಕು ಯಕ್ಕಾ ॥ ೬ ॥

ದೇಶದೊಳಗ ಏಕಲಾರ ಪುರವ
ಈಶ ಮಹಾದೇವ ಗುಡ್ಡದ ಮ್ಯಾಲ ಮೆರೆವ
ಕೂಸಾಗಿ ಕೂಡೆಯವ್ವಾ ಅವನ ಪಾದಕ್ಕ
ಲೇಸಾಗಿ ಬದುಕು ಮಾಡವ್ವ ನಿಜ ಜಗಕ್ಕ ॥ ೭ ॥

ಯಾರು ದೊಡ್ಡವರು?

ದೊಡ್ಡವರಾರು ಈ ಜಗದೊಳಗಾ । ಮನುಜಾ
ದೊಡ್ಡವರಾರು ಹೇಳೋ? ॥ ಪ ॥

ಅಡ್ಡ ದಿಡ್ಡಿ ಬೀಳುತ ಪಡ್ಡೆನಂಗಾಡುತ
ಕಡ್ಡ–ಗುಡ್ಡ ಏರುತ
ಮಡ್ಡಾ ಮಾತನಾಡುತ
ಗಡ್ಡಾ ಬಿಟ್ಟು ತಿರುಗುವವರು ದೊಡ್ಡವರೇನು ? ॥ ೧ ॥

ನೀತಿ ಮಾತ ಹೇಳುತಾ
ಹೇತು ಅಲ್ಲೆ ಸಾರ್ರುತಾ
ಜಾತಿ ಭೇದ ಮಾಡುತಾ
ಕೋತಿಯಂಗ ಕುಣಿಯವರು ದೊಡ್ಡವರೇನು ? ॥ ೨ ॥

ತಲಿಮ್ಯಾಲ ಜಡಿ ಕಟ್ಟಿದವರು
ಹೊತಿನಂಗ ಗಡ್ಡ ಬಿಟ್ಟವರು
ಕಣ್ಣಮುಚ್ಚಿ ಜಪ ಮಾಡುವವರು
ಮಣ್ಣಿಗಾಗಿ ಧ್ಯಾನಿಸುವವರು ದೊಡ್ಡವರೇನು ? ॥ ೩ ॥

ಕಡ್ಡಿಗೆ ಗುಡ್ಡ ಮಾಡುವರು
ಸೊಡ್ಡು ಹೊಡೆದು ನಿಲ್ಲುವರು
ದೊಡ್ಡಿ ದೊಡ್ಡಿ ತಿರಗುವರು
ಮಡ್ಡಿಯಂತಹ ಮುಖದವರು ದೊಡ್ಡವರೇನು ? ॥ ೪ ॥

ಗುಡ್ಡದಂತ ಹೊಟ್ಟೆ ಬೆಳೆಸಿ
ಗುಡ್ಡದ ಮ್ಯಾಲೆ ಹೋಗಿ ನೆಲಸಿ
ಗುಡ್ಡದೇವರ ಭಕ್ತನೆನಿಸಿ
ಅಡ್ಡಾಡುವ ಮನುಜರೆಲ್ಲ ದೊಡ್ಡವರೇನು ? ॥ ೫ ॥

ದೇಶದೊಳಗ ಏಕಲಾರ
ವಾಸ ಮಾಡತಾನ ಮಹಾದೇವರಾ
ದಾಸನಾಗಿ ಪಾದಕ ಬಿದ್ದರಾ
ಲೇಸಿನಿಂದ ಅವನೆ ದೊಡ್ಡವರಾ ॥ ೬ ॥

(ಶರಣಯ್ಯ ಸ್ವಾಮಿ, ಮತ್ತು ಕವಿಯ ತಮ್ಮ ವಾಮನ ಅವರು ಈ ವಿವರಗಳನ್ನು ನೀಡಿದ್ದಾರೆ.)



ಶಂಕರರಾವ ಅವರ ಮನೆ (ಏಕಲಾರ).



ಮನೆಯ ಒಳಾಂಗಣ ನೋಟ.




ಶಂಕರರಾವ ದಂಪತಿಗಳು
ತಂದೆಯೊಡನೆ. (ತಂದೆ: ಲಕ್ಷ್ಮಣ).



ಶಂಕರಾವ ಅವರ
ಪತ್ನಿ ಲಕ್ಷ್ಮಿಬಾಯಿ.




ಶಂಕರರಾವ ಅವರ
ಸೊಸೆ-ಮೊಮ್ಮಕ್ಕಳು.




ಶಂಕರರಾವ ಅವರ ಆಧ್ಯಾತ್ಮ ಸಾಧನೆಗೆ ನೆಲೆಯಾಗಿದ್ದ ಶಿವ-
ಪಾರ್ವತಿ ದೇವಾಲಯ (ಏಕಲಾರ).



ಶಂಕರರಾವ.



ದೇವಾಲಯದ ಒಳಗಿರುವ ದರ್ಶನ ಮೂರ್ತಿಗಳು.



ಶಂಕರರಾವ ಅವರ ಆರಾಧ್ಯ ದೇವರು ಹನುಮಾನ ದೇವಾಲಯ (ಶಿವ-ಪಾರ್ವತಿ ಬೆಟ್ಟದ ಮೇಲಿದೆ).



ಶಂಕರರಾವ ಅವರ ತಮ್ಮ ವಾಮನ.

೯. ಹಾವಪ್ಪ ಕಾಂಬಳೆ (ಕ್ರಿ.ಶ.ಸು. ೧೯೨೦)

ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಬರುವ ಬೋರಗಿ ಗ್ರಾಮದ ದಲಿತರ ಕೇರಿಯಲ್ಲಿ ಹಾವಪ್ಪ ಕಾಂಬಳೆ ಅವರ ಮನೆಯನ್ನು ಹುಡುಕಿಕೊಂಡು ಹೋದಾಗ ನಮಗೆ ಮೊದಲ ಭೇಟಿಯಾದವರು ಅವರ ಹಿರಿಯ ಮಗ ಅರ್ಜುನ ಅವರು. ಅವರಿಗೆ ಈಗ ಸು. ೭೦ವರ್ಷ ವಯಸ್ಸು. ಅವರನ್ನು ನಾವು ಹಾವಪ್ಪಯೆಂದು ಭಾವಿಸಿದೆವು. ಆಗ ನಮ್ಮ ಜೊತೆಯಲ್ಲಿದ್ದವರು "ಸರ್, ಅವರು ಹಾವಪ್ಪ ಅಲ್ಲ; ಅವರ ಮಗ ಅರ್ಜುನ. ಬಹುಶಃ ಹಾವಪ್ಪ ಮನೆಯಲ್ಲಿ ಇರಲಿಕ್ಕಿಲ್ಲ; ಹೊಲಕ್ಕೆ ಹೋಗಿರಬೇಕು" ಎಂದರು. ತೊಂಬತ್ತು ವರುಷಗಳ ವಯಸ್ಸಿನಲ್ಲೂ ಹಾವಪ್ಪನವರು ಗಟ್ಟಿಮುಟ್ಟಾಗಿದ್ದು ಕೃಷಿಯ ಕೆಲಸಗಳನ್ನು ಮಾಡುತ್ತಾರೆಂಬ ಸಂಗತಿ ಆಶ್ಚರ್ಯದಾಯಕವಾದುದು; ಆದರೂ ಸತ್ಯವಾದುದು. ನಿಸರ್ಗದ ಆರೋಗ್ಯ ಪೂರ್ಣ ಪರಿಸರದಲ್ಲಿಯೇ ಮೈಯೊಡ್ಡಿ ಬೆಳೆದ ರೈತ ಮಕ್ಕಳ ಬಹಿರಂಗವೂ ಆರೋಗ್ಯಪೂರ್ಣವಾಗಿರುತ್ತದೆ; ಅಂತರಂಗವೂ ಆರೋಗ್ಯಪೂರ್ಣವಾಗಿರುತ್ತದೆ. ಹಾವಪ್ಪ ಕಾಂಬಳೆ ಅವರು ಇದಕ್ಕೊಂದು ಜೀವಂತ ಉದಾಹರಣೆ.

ಹಾವಪ್ಪನವರ ತಂದೆ ಮುಕ್ತಪ್ಪ, ತಾಯಿ ಲಕ್ಷ್ಮಿದೇವಿ. ಮುಕ್ತಪ್ಪನವರು ಒಕ್ಕಲುತನದ ವೃತ್ತಿಯನ್ನೇ ಅವಲಂಬಿಸಿ ದುಡಿಯುತ್ತ ಜೀವನ ಕಳೆದವರು; ಮಕ್ಕಳನ್ನು ಹಡೆದವರು; ಬೆಳೆಯಿಸಿದವರು. ಮುಕ್ತಪ್ಪನವರು ಹೆಸರಿಗೆ ತಕ್ಕಂತೆ ಮುಕ್ತ ವಾತಾವರಣದಲ್ಲಿಯೇ ಬದುಕಿ–ಬಾಳಿದರು. ಅರ್ಜುನ ಅವರು ತಮ್ಮ ಅಜ್ಜನ ಬಗೆಗೆ ಹೇಳುವ ಮಾತುಗಳು ಕೇಳಬೇಕು:

"ನಮ್ಮ ಮುತ್ತ್ಯಾ ಮುಕ್ತಪ್ಪ ಎಂಟು ಜೋಳದ ಚೀಲಗಳನ್ನು ಒಂದರ ಮೇಲೊಂದರಂತೆ ಬೆನ್ನು ಮೇಲೆ ಹೊತ್ತುಕೊಳ್ಳುತ್ತಿದ್ದರು. ಬೆನ್ನ ಮೇಲೆ ಮೂರು ನಾಲ್ಕು ಕ್ವಿಂಟಲ್ಲಿನ ಭಾರವನ್ನು ಏರಿಸಿಕೊಂಡು ದಂಡ ಹೊಡೆಯುತ್ತಿದ್ದರು. ಅಷ್ಟು ಗಟ್ಟಿ ಮನುಷ್ಯರು. ಅವರದು ನಮ್ಮಂಥ ಹೈಬ್ರಿಡ್ ಊಟವಲ್ಲ. ಮನೆಯಲ್ಲಿ ಹೈನು ಇದ್ದಿತು. ಕಟಿ ರೊಟ್ಟಿ; ಮಜ್ಜಿಗೆ ಅಥವಾ ಮೊಸರು ಇಲ್ಲವೆ ಹಾಲಿನಲ್ಲಿ ಹಾಕಿಕೊಂಡು ಕಲಿಸಿ ಹೊಡೆದು ಬಿಡುತ್ತಿದ್ದರು. ನಮ್ಮಂಗ ಅವರು ಚಹಾ ಕುಡಿಯುತ್ತಿರಲಿಲ್ಲ. ಬೇಸಿಗೆಯ ದಿನಗಳಲ್ಲಿ ತಿಳಿ ಮಜ್ಜಿಗೆ ಕುಡಿಯುತ್ತಿದ್ದರು. ಅವರು ಎಂದೂ ಜ್ವರ

ಬಂದು ಮಲಗಲಿಲ್ಲ, ದವಾಖಾನೆಗೆ ಹೋಗಲಿಲ್ಲ; ಔಷಧ ತಿನ್ನಲಿಲ್ಲ. ನಮ್ಮ ಮುತ್ತ್ಯಾ ಅವರ ಆರೋಗ್ಯವೇ ಇಂದು ನಮ್ಮ ಅಪ್ಪನಿಗೂ ಬಂದಿದೆ; ಹೆಚ್ಚು ಕಮ್ಮಿ ಅದು ನನಗೂ ಬಂದಿದೆ. ಆದರೆ ನಮ್ಮ ಮುತ್ತ್ಯಾ-ಅಪ್ಪಗ ಸಿಕ್ಕಂತ ಆಹಾರ ಇವತ್ತ ನಮಗ ಸಿಗತಾ ಇಲ್ಲ".

ಹಾವಪ್ಪನವರು ನಿರಕ್ಷರಿಗಳು. ಅವರಿಗೆ ಅಕ್ಷರ ಅಭ್ಯಾಸದ ಭಾಗ್ಯವು ಲಭಿಸಲೇ ಇಲ್ಲ. ಹಾವಪ್ಪನವರ ಹೆಂಡತಿ ಗ್ಯಾನಮ್ಮ. ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು; ಒಬ್ಬಳು ಹೆಣ್ಣುಮಗಳು. ಹಿರಿಯ ಮಗ ಅರ್ಜುನ; ಕಿರಿಯ ಮಗ ಕಾಶೀನಾಥ. ಎಲ್ಲರೂ ಕೃಷಿಕಾಯಕವನ್ನೆ ಮಾಡುವವರು.

ಮುಕ್ತಪ್ಪನವರಿಗೆ ಗಟ್ಟಿ ದೇಹದಂತೆ ಗಟ್ಟಿಯಾದ ಮಧುರಕಂಠ ಸಂಪತ್ತು ಇದ್ದಿತು. ಗೀಗೀ-ಲಾವಣಿ ಪದಗಳನ್ನು ಹಾಡುತ್ತಿದ್ದರು. ಬೇರೆ-ಬೇರೆ ಸ್ಥಳಗಳಲ್ಲಿ ನಡೆಯುತ್ತಿದ್ದ ಉತ್ಸವ-ಜಾತ್ರೆಗಳಿಗೆ ಹೋಗುತ್ತಿದ್ದರು. ಅಲ್ಲಿ ತಮ್ಮ ಹಾಡುಗಳನ್ನು ಹಾಡಿ ಜನತೆಯನ್ನು ರಂಜಿಸುತ್ತಿದ್ದರು.

ಹಾವಪ್ಪನವರಿಗೂ ಹಾಡುವ ಹವ್ಯಾಸ ಬೆಳೆಯಿತು. ಹಾಡುವುದರೊಂದಿಗೆ ಹಾಡು ಕಟ್ಟುವ ಶಕ್ತಿಯೂ ಜನ್ಮಜಾತವಾಗಿಯೇ ಬಂದಿತ್ತು. ಹಾವಪ್ಪನವರ ಆರಾಧ್ಯ ದೇವರು ಬೋರಗಿ ಗ್ರಾಮದ ಮುಕ್ತಮ್ ಭಾಷಾ. ದೇವರ ಅಂಕಿತದಲ್ಲಿ ಹಾವಪ್ಪನವರು ಹಲವಾರು ಮೋಹರಮ್ ಹಾಡುಗಳನ್ನು ಕಟ್ಟಿದ್ದಾರೆ. ಪ್ರತಿ ವರುಷ ಊರಲ್ಲಿ ನಡೆಯುವ ಮೋಹರಮ್ ಹಬ್ಬದಲ್ಲಿ ಅವರು ರಚಿಸಿದ ಹಾಡುಗಳನ್ನು ಹಾಡುತ್ತಾರೆ.

ಹಾವಪ್ಪ ಕಾಂಬಳೆ ಅವರಿಗೆ ಸಾಹಿತ್ಯ ಕೃಷಿಯ ವಿಷಯದಲ್ಲಿ ಯಾರೂ ಗುರುಗಳಿಲ್ಲ. ರೆಹಮಾನ ಸಾಹೇಬರ ಪ್ರಭಾವ ಸ್ವಲ್ಪ ಆಗಿದೆ. ಆದರೆ ಅವರು ಹೆಚ್ಚಾಗಿ ತಮ್ಮ ಸ್ವಪ್ರಯತ್ನದಿಂದಲೇ ಕಲಿತಿರುವುದಾಗಿ ಹೇಳುತ್ತಾರೆ. ಹಾವಪ್ಪನವರು ತಮ್ಮ ಹಾಡುಗಳಿಗೆ ಸ್ವನಾಮವನ್ನೇ ಅಂಕಿತವಾಗಿ ಇಟ್ಟುಕೊಂಡಿದ್ದಾರೆ.

ಹಾವಪ್ಪನವರು ಬರೆದ ಎರಡು ತತ್ತ್ವಪದಗಳನ್ನು ಇಲ್ಲಿ ನಿದರ್ಶನಕ್ಕಾಗಿ ಎತ್ತಿಕೊಳ್ಳಲಾಗಿದೆ:

ಒಳಗ ತೊಳಿಬೇಕಾ ಝುಳ ಝುಳಾ

ಒಳಗ ತೊಳಿಬೇಕಾ ಝುಳ ಝುಳಾ
ತೊಳಿದಾಂಗ ಕಂಚಿನ ಗಂಗಾಳ ॥ ಪ ॥

ಕಪ್ಪಿ ಮೊಸಳಿ ಮೀನ ಮಗರಿ
ಹುಪ್ಪಳಿ ಹುಳಾ ಜಲಚರಿ
ನೀರಿನಾಗ ಇರತಾವಲ್ಲ
ಮ್ಯಾಲಿನ ಮೈಲಾ ತಿಳಿತಾವಲ್ಲ ॥ ೧ ॥

ಕಲ್ಲಬಂಡಿ ನೀರಾಗಿದ್ದು
ಮ್ಯಾಲ ನೀರ ಹರಿಸಿಕೊಂಡು
ಮಿದುವಾಗದ ಹಂಗೆ ನಿಂತು
ಸವೆದು ಹೋಯ್ತು ಕುತ್ತು ಸತ್ತು ॥ ೨ ॥

ಒಳಗ ಹಾಸ ತುಂಬಿಟ್ಟುಕೊಂಡು
ಹೊರಗ ಚರ್ಮ ತೊಳೆದರೇನೋ
ಒಳಗ ಹಗೆತನ ಇಟ್ಟುಕೊಂಡು
ಸಾಬಣ ಹಚ್ಚಿ ಮ್ಯಾಲ ತಿಕ್ಕಿದರೇನೋ ॥ ೩ ॥

ಹೊಲ್ಲ ಹೊಲಸ ಕಸವ ಒಳಗೆ ಬಿದ್ದರೇನು ಪಶುವಾ?
ಖುಲ್ಲ ನಡತೆ ಬಿಡದೆ
ಬಲ್ಲಿದನಂತೆ ಮಡಿನೀರ ಮಿಂದಿ
ಒಳಗೆ ತೊಳೆಯ ಬೇಕಪ್ಪ ಸಂದಿ ॥ ೪ ॥

ಘಾಣ–ಘಾಣೆಂದು ಮೂಗ ಮುಚ್ಚಿದಿ
ಒಳಗೆಟ್ಟು ಘಾಣ ತುಂಬಿ ಇಟ್ಟಿದಿ
ಮಡಿ–ಮಡಿ ಅಂತ ಹಾರುತಿ
ಮೈಲಿಗಿ ರಾಡ್ಯಾಗ ಮುಳುಗಿ ಏಳುತಿ ॥ ೫ ॥

ಕೆಟ್ಟಿ ಜಲ್ಮ ಖೊಟ್ಟಿ ಜಲ್ಮ ದುಷ್ಟ ಜಲ್ಮ
ಬ್ರಷ್ಟ ಜಲ್ಮ ನಿಷ್ಟೆ ಇಲ್ಲದ ಕಷ್ಟ ಜಲ್ಮ
ಕಟ್ಟಿ ಕಳೆಯೋ ಜಲ್ಮದ ಮಲವ
ಬಿಟ್ಹೋಗುವುದು ಒಳಗಿನ ಕುಲವ ॥ ೬ ॥

ಕಾಶಿಗ್ಹೋಗಿ ಬಂದೀನಂತಿ
ಗಂಗಾನದಿ ನೀರ ತಂದೀನಂತಿ
ಪುಣ್ಯ ತೀರ್ಥ ಜಳಕ ಮಾಡುತಿ
ಒಳಗ ಕೊಟ್ಟ ಕೊಳಕ ನಾರುತಿ ॥ ೭ ॥

ಧರೆಯೊಳು ಮೆರೆವ ಬೋರಗಿ ಪುರವ
ಮುಕ್ತಂಭಾಷಾ ಹಾನೋ ದೊರೆಯ
ಅವನ ಪಾದ ಸೇರಿ ನೀನು
ಒಳಗ ಬೆಳಗಿ ಮುಕ್ತಿಯ ಪಡೆಯೋ ॥ ೮ ॥

ಮಾನವ ಜಲ್ಮದಾಗ ಏನೇನುಂಡಿ ?

ಮನುಷ್ಯ ಜಲ್ಮ ದೊಡ್ಡದೆಂದ ದೊಂಬಿ ದಾಸ
ಅನಿಸಿದಂತೆ ನುಡಿದನಾ ಕೂಸ
ಮಾನವ ಜಲ್ಮದಾಗ ನೀ ಬಂದಿ
ಏನೇನ ಉಂಡಿ; ಏನೇನ ಕಂಡಿ ? ॥ ಪ ॥

ನರ ಜನ್ಮ ದೇಹ ತೊಟ್ಟು ಬಂತು
ಗುರುವಿನ ಪಾದಕ ತಲಿಯಿಟ್ಟು
ಗುರುವಿನ ಹಸ್ತವ ಮುಟ್ಟಿ
ಹರಕರುಣ ಪಡೆಯಿತು ಪಾದವ ಮುಟ್ಟಿ ॥ ೧ ॥

ಗುರು ಕೊಟ್ಟ ಲಿಂಗವ
ಪೂಜಿಸಬೇಕಾದವರ ಅಂಗವ
ಜನ್ಮ ತೊಟ್ಟು ಬಂದೇನು
ಪೂಜಿಯ ಫಲವನು ಹೊಂದಿದೇನು ॥ ೨ ॥

ಸಂಗದೋಷ – ಸಂಗದಲಿ ಸತ್ಸಂಗ
ಅಂಗವ ಶರಣರ ಭಂಗವಿದೂರ
ಲಿಂಗ ರೂಪವು ಸಂದಿತು ಅಂಗಕೆ
ಸತ್ಸಂಗದಿಂದೆ ಅಂಗ ಲಿಂಗ ರೂಪಕೆ ॥ ೩ ॥


ಮಾನವ ಜಲ್ಮಕ ಪ್ರಸಾದ ಉಂಡೆ
ಮಾನವ ಜಲ್ಮಕ ಪ್ರಾದೋದಕ ಕುಡಿದೆ
ಮಾನವ ಜಲ್ಮಕ ವಿಭೂತಿ ಹಚ್ಚಿಕೊಂಡೆ
ಮಾನವ ಜಲ್ಮಕ ರುದ್ರಾಕ್ಷಿ ಹಾಕಿಕೊಂಡೆ ॥ ೪ ॥

ಮನುಷ್ಯರಾಗಿ ಅರಿವಿಗೆ ಬಂದೆ
ಬೋರಗಿ ಮುಕ್ತಂ ಭಾಷಾನ ಸಂದೆ
ಮಾನವ ಜಲ್ಮದಲಿ ಸವಿ ಸವಿ ಉಂಡೆ
ಅನುನಯ ಶಿವನ ಭವದಲಿ ಕಂಡೆ ॥ ೫ ॥

(ಈ ವಿವರಗಳನ್ನು ಕವಿಗಳ ಮಗ ಅರ್ಜುನ ಮತ್ತು ಕವಿಗಳು ನೀಡಿದ್ದಾರೆ.)




ಹಾವಪ್ಪ ಕಾಂಬಳೆ ಅವರ ಮನೆ (ಬೋರಗಿ).



ಹಾವಪ್ಪ ಕಾಂಬಳೆ ಅವರ ಮಗ ಅರ್ಜುನ.



ಹಾವಪ್ಪ ಕಾಂಬಳೆ ಅವರ ಭೂತಾಯಿಯ ಪೂಜೆಯ ನೆಲೆ.



ಹಾವಪ್ಪ ಕಾಂಬಳೆ ಅವರ ಆರಾಧ್ಯ ದೇವರು ಹನುಮಾನ ದೇವಾಲಯ.

೧೦. ಬಾಬಣ್ಣ ಹರಿಜನ (ಕ್ರಿ.ಶ.ಸು. ೧೯೨೨-೧೯೮೫)

ಬೀದರ ಜಿಲ್ಲೆ ಔರಾದ ತಾಲ್ಲೂಕಿನಲ್ಲಿ ಬರುವ ಶೆಂಬೆಳ್ಳಿ ಗ್ರಾಮವು ಬಾಬಣ್ಣನವರ ಸ್ವಗ್ರಾಮವಾಗಿದೆ. ಆ ಗ್ರಾಮದ ಮೇರೆಯೊಳಗೆ ಪ್ರವೇಶಿಸುತ್ತಲೇ ಬಾಬಣ್ಣನ ಹೆಸರು ಕೇಳಿದರೆ ಸಾಕು, ಒಬ್ಬ ಚಿಕ್ಕ ಹುಡುಗನೂ ಸಹ ಸೀದಾ ಅವರ ಮನೆಗೆ ಕರೆದುಕೊಂಡು ಹೋಗುತ್ತಾನೆ. ಅವರ ಮಗ ದಶರಥನನ್ನು ನೋಡಿದರೆ ಶರಣನನ್ನೇ ನೋಡಿದಂತಾಗುತ್ತದೆ. ಅವನ ಹಣೆಯ ಮೇಲೆ ಯಾವಾಗಲೂ ಮೂರು ಬೆರಳಿನ ವಿಭೂತಿಯು ಕಂಗೊಳಿಸುತ್ತಿರುತ್ತದೆ. ಅವರ ಮನೆಯ ಎಲ್ಲ ಸದಸ್ಯರಲ್ಲೂ ವೀರಶೈವ ಸಂಸ್ಕೃತಿಯ ಹೊಳಹು ಎದ್ದು ಕಾಣುತ್ತದೆ.

ಬಾಬಣ್ಣನವರ ತಂದೆ ಮರೆಪ್ಪ. ತಾಯಿ ಮರೆಮ್ಮ. ಈ ದಂಪತಿಗಳ ಹೊಟ್ಟೆಯಿಂದ ಬಾಬಣ್ಣನವರು ಕ್ರಿ.ಶ. ೧೯೨೨ರಂದು ಹುಟ್ಟಿಬಂದರು. ಬಾಬಣ್ಣನವರ ಅಜ್ಜನು ಅತ್ಯುತ್ತಮ ಹಾಡುಗಾರನೆಂದು ಹೆಸರು ಪಡೆದಿದ್ದನು. ತನ್ನ ಮೊಮ್ಮಗ ಬಾಬಣ್ಣನನ್ನು ತನ್ನೊಂದಿಗೆ ಹಾಡುವಲ್ಲಿಗೆ ಕರೆದುಕೊಂಡು ಹೋಗುತ್ತಿದ್ದನು. ಹೀಗಾಗಿ ಅಜ್ಜನ ಹಾಡುಗಾರಿಕೆಯ ಪರಿಣಾಮವು ಬಾಬಣ್ಣನವರ ಮೇಲೆ ಬಾಲ್ಯದಿಂದಲೇ ಆಯಿತು.

ಬಾಬಣ್ಣನವರಿಗೆ ತಕ್ಕಮಟ್ಟಿನ ಅಕ್ಷರಜ್ಞಾನವು ಇದ್ದಿತು. ಮೋಡಿಲಿಪಿ ಮತ್ತು ಕನ್ನಡದ ಭಾಷೆಯು ಅವರ ಬರಹದ ರೀತಿಯಾಗಿತ್ತು. ಬಾಬಣ್ಣನವರ ಮೇಲೆ ಅವರ ಅಜ್ಜನವರ ಪ್ರಭಾವವಾಗಿರುವಂತೆ, ಬೋರಗಿ ರೆಹಮಾನ ಸಾಹೇಬರ ಪ್ರಭಾವವೂ ಆಗಿದೆ. ರೆಹಮಾನ ಸಾಹೇಬರ ಸಂತ ವ್ಯಕ್ತಿತ್ವದಿಂದ ಆಕರ್ಷಿತರಾದ ಬಾಬಣ್ಣನವರು ಅವರ ಭಜನೆ ಸಂಘದಲ್ಲಿ ಸೇರಿ, ಹಲವಾರು ಸ್ಥಳಗಳಿಗೆ ಸಂಚಾರ ಕೈಗೊಂಡಿದ್ದುಂಟು.

ಬಾಬಣ್ಣನವರ ಸಂಸಾರಿಕ ಬದುಕಿಗೆ ಕೃಷಿಕಾಯಕವೇ ಆಧಾರ ಸ್ತಂಭವಾಗಿತ್ತು. ದನಗಳನ್ನು ಕಾಯುವ ಕೆಲಸವೂ ಅವರು ಮಾಡುತ್ತಿದ್ದರು. ಮುಂದೆ ಉಪ್ಪಾರ ಕೆಲಸ ಕೈಗೊಂಡರು. ಗಂಗಮ್ಮ ಅವರ ಪತ್ನಿ, ಇವರಿಗೆ ದಶರಥ ಎಂಬ ಒಬ್ಬ ಮಗನೂ, ಇಬ್ಬರು ಹೆಣ್ಣು ಮಕ್ಕಳೂ ಇದ್ದಾರೆ. ದಶರಥ ಅವರು ಹತ್ತನೆ ವರ್ಗ ತೇರ್ಗಡೆಯಾಗಿದ್ದಾರೆ. ಕಿರಾಣಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ತಮ್ಮ ತಂದೆಯವರ ಹಾಡುಗಳನ್ನು ಹಾಡುತ್ತಾರೆ. ದಶರಥ ಅವರ ಹೆಂಡತಿ ಜಳುಬಾಯಿ. ವೀರಶೈವ ಸಾಂಸ್ಕೃತಿಕ ವಾತಾವರಣವನ್ನು ಮನೆಯಲ್ಲಿ ನೆಲೆಸುವಂತೆ ಮಾಡಿದ್ದಾರೆ.

ಬಾಬಣ್ಣನವರ ಒಟ್ಟು ಮನೆತನವು ಭಾಲ್ಕಿಯ ಉರಿಲಿಂಗ ಪೆದ್ದಿಗಳ ಮಠಕ್ಕೆ ನಡೆದುಕೊಳ್ಳುತ್ತಿದ್ದಿತು. ಅವರ ಪರಿವಾರವು ಆ ಮಠದ ಕರಬಸಪ್ಪನವರಿಂದ ಶರಣ ದೀಕ್ಷೆ ಪಡೆದುಕೊಂಡಿತ್ತು. ಬಾಬಣ್ಣನವರು ಶುದ್ಧ ಶರಣ ಜೀವಿಗಳಾಗಿ ದಿನನಿತ್ಯ ಸ್ನಾನ-ಪೂಜೆಯಿಲ್ಲದೆ ಬಾಯಲ್ಲಿ ಏನೂ ಹಾಕುತ್ತಿರಲಿಲ್ಲ. ಅವರದು ಶುದ್ಧ ಶಾಖಾಹಾರಿ ಪರಿವಾರವಾಗಿದ್ದಿತು.

ಬಾಬಣ್ಣನವರು ಶರಣತತ್ತ್ವ ಅನುಸಂಧಾನಿಗಳಾಗಿ ಬಸವತತ್ತ್ವ ಪ್ರಚಾರಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ಅವರಲ್ಲಿ ಸರ್ವಧರ್ಮ ಸಮನ್ವಯದ ಭಾವನೆ ಸ್ಥಿರವಾಗಿದ್ದಿತು. ಉರಿಲಿಂಗಪೆದ್ದಿ ಶರಣ; ಗುರುಕರಬಸಪ್ಪನವರು, ಬಸವಣ್ಣವರು ಇವರನ್ನೆಲ್ಲ ನಂಬಿದ್ದ ಶಂಭಣ್ಣನವರು ಇಸ್ಲಾಂ ಖಾದ್ರಿಯನ್ನು ಭಕ್ತಿಯಿಂದ ಆರಾಧಿಸುತ್ತಿದ್ದರು. ಶೆಂಬೆಳ್ಳಿಯಲ್ಲಿ ಇಸ್ಲಾಂ ಖಾದ್ರಿಯ ದರ್ಗಾಯಿದೆ. ಅದಕ್ಕೆ ಅವರು ಆಗಾಗ ಹೋಗುತ್ತಿದ್ದರು.

ಬಾಬಣ್ಣನವರು ಒಂದೆಡೆಯಲ್ಲಿ ಬೋರಗಿ ರೆಹಮಾನ ಸಾಹೇಬರ ದರ್ಶನ ಮತ್ತು ಶೆಂಬೆಳ್ಳಿಯ ಇಸ್ಲಾಂ ಖಾದ್ರಿಯ ಬಗೆಗಿನ ಭಕ್ತಿ ಇವು- ಮೋಹರಮ್ ಹಾಡುಗಳ ರಚನೆಗೆ ಹೆಚ್ಚು ಪ್ರೇರಣೀಯ ಅಂಶಗಳಾದವು. ಅವರು ತಮ್ಮ ಮೂವತ್ತನೆಯ ವರುಷ ವಯಸ್ಸಿನಿಂದಲೇ ಮೋಹರಮ್ ಹಾಡುಗಳನ್ನು ಬರೆಯುವುದಕ್ಕೆ ಆರಂಭ ಮಾಡಿದರು.

ಒಂದು ದಿನ ಎಲ್ಲಿಂದಲೊ ಒಬ್ಬ ಸ್ವಾಮಿಗಳು ಬಂದರು. ಅವರಿಗಾಗಿ ಶೆಂಬೆಳ್ಳಿ ಹೊರವಲಯದಲ್ಲಿ ಗುಂಪಾವೊಂದನ್ನು ನಿರ್ಮಿಸಲಾಯಿತು. ಸ್ವಾಮಿಗಳು ಗುಂಪಾದಲ್ಲಿಯೆ ಇರತೊಡಗಿದರು. ಜನತೆ ಅವರನ್ನು "ಗುಂಪಾದ ಸ್ವಾಮಿ" ಯೆಂದು ಕರೆದು ಭಕ್ತಿಯಿಂದ ನಡೆದುಕೊಳ್ಳತೊಡಗಿದರು. ಬಾಬಣ್ಣನವರು ಗುಂಪಾದ ಸ್ವಾಮಿಗಳ ಸನ್ನಿಧಿಗೆ ಹೋದರು. ಅವರ ಮೇಲಿನ ಭಕ್ತಿಯ ಕಾರಣದಿಂದ, ದಿನನಿತ್ಯ ಗುಂಪಾಕ್ಕೆ ಹೋಗಿ ಭಜನೆ ಮಾಡತೊಡಗಿದರು. ಅನುಭಾವ ಗೋಷ್ಠಿಯಲ್ಲಿ ತಮಗೆ ಕಂಡ ವಿಷಯಗಳನ್ನು ಹೇಳತೊಡಗಿದರು. ಗುಂಪಾದ ಸ್ವಾಮಿಗಳು ಬಾಬಣ್ಣನವರಲ್ಲಿದ್ದ ಆಧ್ಯಾತ್ಮ ಶಕ್ತಿಯನ್ನು ಗುರುತಿಸಿದರು. ತಮ್ಮ ಅಂತಃಕರುಣೆಯಿಂದ ಅವರನ್ನು ಪ್ರೋತ್ಸಾಹಿಸಿದರು. ಬಾಬಣ್ಣನವರು ಗುಂಪಾದ ಸ್ವಾಮಿಗಳ ಪ್ರೇರಣೆಯಿಂದ ತತ್ತ್ವಪದಗಳನ್ನು ಬರೆಯುವುದಕ್ಕೆ ಆರಂಭ ಮಾಡಿದರು.

ಬಾಬಣ್ಣನವರು ಪಂಚಾಂಗ ನೋಡುತ್ತಿದ್ದರು. ಜನರಿಗೆ ಜ್ಯೋತಿಷ್ಯ ಹೇಳುತ್ತಿದ್ದರು, ಪ್ರವಚನ ಮಾಡುತ್ತಿದ್ದರು; ಪುರಾಣ ಓದುತ್ತಿದ್ದರು, ತತ್ತ್ವಪದಗಳನ್ನು ಹಾಡುತ್ತಿದ್ದರು. ಮೋಹರಮ್ ಹಬ್ಬದಲ್ಲಿ ಭಾಗವಹಿಸಿ ಕಾಲಿಗೆ ಗೆಜ್ಜೆಕಟ್ಟಿ ಮೋಹರಮ್ ಕುಣಿತವನ್ನು ಕುಣಿಯುತ್ತಿದ್ದರು. ಸುಶ್ರಾವ್ಯವಾಗಿ ಮೋಹರಮ್ ಹಾಡುಗಳನ್ನು ಹಾಡುತ್ತಿದ್ದರು.

ಬಾಬಣ್ಣನವರು ಶೆಂಬೆಳ್ಳಿ ಗ್ರಾಮದಲ್ಲಿ ಭವಾನಿ ಭಜನಾ ಸಂಘ ಎಂಬುದೊಂದು ಸಂಘ ಕಟ್ಟಿದರು. ಹಲವಾರು ಶಿಷ್ಯರನ್ನು ಸೇರಿಸಿಕೊಂಡರು. ಹಲವಾರು ಊರುಗಳಿಗೆ ಸಂಚಾರ ಮಾಡಿದರು. ಅಲ್ಲಿ ತಮ್ಮ ಹಾಡುಗಾರಿಕೆ – ಭಜನೆಯ ಕಲೆಯನ್ನು ಪ್ರದರ್ಶಿಸಿದರು. ಏಕತಾರಿ ನುಡಿಸುವುದು, ದಮಡಿ ಬಾರಿಸುವುದು, ನಾಟಕ ಕಲಿಸುವುದು, ನಟನೆ ಮಾಡುವುದು ಇವೆಲ್ಲ ಬಾಬಣ್ಣನವರ ಇತರ ಹವ್ಯಾಸಗಳಾಗಿದ್ದವು.

ಬಾಬಣ್ಣನವರು ತಾವು ರಚಿಸಿದ ತತ್ತ್ವಪದಗಳಿಗೆ "ಗುಂಪಾದಸ್ವಾಮಿ","ಕಾಶಿವಿಶ್ವನಾಥ" ಎಂಬ ಅಂಕಿತಗಳನ್ನು ಇರಿಸಿಕೊಂಡಿದ್ದಾರೆ. ಇಲ್ಲಿ ಅವರ ರಚನೆಯ ಎರಡು ಪದ್ಯಗಳನ್ನು ಕೊಡಲಾಗಿದೆ:

ಇರಲು ಬಂದಿಲ್ಲ ಕಾಯ

ಇರಲು ಬಂದಿಲ್ಲ ಈ ಕಾಯ
ಗುರು ಧ್ಯಾನ ಮಾಡಬೇಕು ಶಿವಾಯ ॥ ಪ ॥

ನಾಕು ದಿನದ ಈ ಕಾಯ
ತಿಳಿಬೇಕು ಇದರ ಆಯ
ಮುಸುಕ್ಯಾದ ಮ್ಯಾಲ ಮಾಯಾ
ನಸುಕಿನಾಂಗ ಮಬ್ಬಾದ ಛಾಯಾ ॥ ೧ ॥

ಪರಬ್ರಹ್ಮನಂಶಾದಿ ಬಂದಿ
ಮಾತೆ ಗರ್ಭದೊಳಗ ನೀನತಿ ನೊಂದಿ
ಪ್ರಾಯ ಹೋಗಿ ಮುಪ್ಪಾಗಿ ನಿಂದಿ
ಸಾಯ ಕಾಲಕ್ಕೆ ನೀನು ಶಿವರಾಯ ಅಂದಿ ॥ ೨ ॥

ಮಣ್ಣಿಂದ ತಯ್ಯಾರಾದ ಕಾಯ
ಮಣ್ಣಿಗೆ ಹೋಗುವುದು ತಿಳಿ ನೆಲೆಯ
ಕಣ್ಣಾಗ ಕಾಣುವುದು ನೋಡದರ ಪರಿಯ
ಬಣ್ಣ – ಬಣ್ಣಾಗಿ ಕಂಡೀತು ಅದರ ಮೈಯ ॥ ೩ ॥

ಕಾಯದ ಘಾಯ ಗುಣಮಾಡು
ಮಾಯಾದ ಗಾರಿಮುಚ್ಚಿ ಸಮಮಾಡು
ಬಾಹ್ಯದ ಜಂಜಡವ ದೂರಮಾಡು
ಅಂತರಂಗದ ಬೆಳಕೀಗಿ ಕಣ್ಣಿಡು ॥ ೪ ॥

ಧರೆಯೊಳಗ ಮೆರಿತಾದ ಶೆಂಬೆಳ್ಳಿ ಗ್ರಾಮ
ಗುಂಪಾದ ಸ್ವಾಮಿ ನೆಲೆಸಿದ ಧಾಮ
ಕಾಯ ಕೆಸರು ಕಳೆಯೋ
ಶಿವಾಲಯದ ಬೆಳಕಲ್ಲಿ ಉಳಿಯೋ ॥ ೫ ॥

ಆಗು ನಿರ್ಭಯ

ಆತ್ಮ ತಿಳಿದು ಆಗು ನಿರ್ಭಯ
ಹೋತು ತಮ್ಮ ಅಂಟಿದ ಮಾಯಾ ॥ ಪ ॥

ಪಂಚ ತತ್ತ್ವದಿಂದ ಆದ ದೇಹ
ಪಂಚ ಬಣ್ಣ ಅದರಾಗ ಹೇಯ
ಪಂಚಾರುತಿ, ಪಂಚನಾದ
ಪಂಚಲಿಂಗ – ಪಂಚ ಪ್ರಸಾದ ॥ ೧ ॥

ಕಣ್ಣು ಕಾಣತಾದ ಶಿವಲಿಂಗ
ಅಣ್ಣ ಕಿವಿಯಲ್ಲಾದ ಪ್ರಸಾದಲಿಂಗ
ನುಣ್ಣನ ಮೂಗಿನೊಳಗ ಆಚಾರಲಿಂಗ
ಠಣ್ ಠಣ್ ಗುಟ್ಟುವ ನಾಲಿಗೆ ಗುರುಲಿಂಗ ॥ ೨ ॥

ಮುಟ್ಟಿನಲ್ಲಿ ಜಂಗಮಲಿಂಗ
ಕತ್ತಿನಲ್ಲಿ ಸಂಗಮಲಿಂಗ
ತೊಟ್ಟು ಪಾದೋದಕದಲ್ಲಿ ತೀರ್ಥಲಿಂಗ
ಮುಟ್ಟಿ ನೋಡೋ ಆತ್ಮಲಿಂಗ ॥ ೩ ॥

ಇಷ್ಟಲಿಂಗ ಹಿಡಿದು ನೀನು
ಕಷ್ಟದಿಂದ ಕಡಿಯಕಾಗೋ
ಲಿಂಗ – ಅಂಗ ಬಿಂದು ದಾಟಿ
ಆತ್ಮ ಲಿಂಗ ಬೆರೆದು ನೋಡೋ ॥ ೪ ॥

ಆತ್ಮಲಿಂಗದಿಂದ ಜಯವು
ನಿನಗೆ ಇಲ್ಲಿ ಯಾರದು ಭಯವು
ನೆನವಿಗೆ ಬಂತು ನಿರ್ಭಯವು
ಜೀವನವೆಲ್ಲ ಶಿವಮಯವು ॥ ೫ ॥

ಮೆರಿಯುತಾದ ಶೆಂಬೆಳ್ಳಿ ಊರಾ
ಕಾಶಿ ವಿಶ್ವನಾಥನ ಭಕ್ತಿ ಸಾರಾ
ಈಶನ ನೆನಿಯುತಲಿ ನೀನು
ಆಗು ನಿರ್ಭಯ ಮನುಜಾ ॥ ೬ ॥

(ಈ ವಿವರಗಳನ್ನು ಕವಿಯ ಮಗ ದಶರಥ ಅವರು ನೀಡಿದ್ದಾರೆ.)

□



ಬಾಬಣ್ಣ ಹರಿಜನ ಅವರ ಮನೆ (ಶೆಂಬೆಳ್ಳಿ).



ಬಾಬಣ್ಣನವರ
ಛಾಯಾಚಿತ್ರ.



ಬಾಬಣ್ಣ ನವರ
ಧರ್ಮಪತ್ನಿ
ಗಂಗಮ್ಮನವರ
ಛಾಯಾ ಚಿತ್ರ.



ಬಾಬಣ್ಣ ನವರ ಸಧ್ಯದ ಪರಿವಾರ.



ಬಾಬಣ್ಣನವರಿಗೆ ಆರಾಧ್ಯ ಗುರುವಾಗಿದ್ದ ಗುಂಪಾ ಸ್ವಾಮಿ ನೆಲೆ ನಿಂತ ಗುಂಪಾ (ಶೆಂಬೆಳ್ಳಿ).



ಬಾಬಣ್ಣನವರು ನಡೆದುಕೊಳ್ಳುತ್ತಿದ್ದ ಇಸ್ಲಾಂ ಖಾದ್ರಿ ದರ್ಗಾ.

೧೧. ಸಿದ್ಧರಾಮಯ್ಯ ಸ್ವಾಮಿ (ಕ್ರಿ.ಶ.ಸು ೧೯೨೭)

ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಬರುವ ಕೌಠಾ (ಬಿ) ಗ್ರಾಮದಲ್ಲಿನ ಹಿರೇಮಠವು ಆ ಊರಿಗೆ– ಅದರ ಸುತ್ತ ಮುತ್ತಲಿನ ಪ್ರದೇಶಕ್ಕೆ ಶತಮಾನಗಳಿಂದಲೂ ಪರಿಚಿತವಾಗಿದೆ; ಪ್ರಸಿದ್ಧವೂ ಆಗಿದೆ. ಅದಕ್ಕೆ ಹಲವು ಕಾರಣಗಳಿವೆ: ಒಂದು ಅದೊಂದು ಹಿರೇಮಠವೆಂಬ ಕಾರಣದಿಂದ ಸಾಂಸ್ಕೃತಿಕ ನೆಲೆಯಾಗಿ ವೀರಶೈವ ಭಕ್ತರುಗಳಿಗೆ ಗೌರವದ ತಾಣವಾಗಿದೆ. ಇನ್ನೊಂದು ಆ ಮಠದ ಸಾಂಸ್ಕೃತಿಕ ಪರಂಪರೆಯನ್ನು ಉಜ್ವಲವಾಗಿಸುವುದಕ್ಕೆ ಶ್ರಮಿಸಿದ ಹಿರೇಮಠದ ರೇವಣಸಿದ್ಧಯ್ಯನವರಾಗಲಿ; ಸಧ್ಯ ಇರುವ ಸಿದ್ಧರಾಮಯ್ಯ ಹಿರೇಮಠ ಅವರಾಗಲಿ ಪ್ರಮುಖ ಕಾರಣರಾಗಿದ್ದಾರೆ.

ಸಿದ್ಧರಾಮಯ್ಯ ಸ್ವಾಮಿ ಅವರ ತಂದೆ ರೇವಣಸಿದ್ಧಯ್ಯನವರು ತ್ರಿಕಾಲ ಪೂಜಾನಿಷ್ಠರಾಗಿದ್ದರು; ಭಕ್ತರಿಗೆ ಮಾರ್ಗದರ್ಶಕರಾಗಿದ್ದರು. 'ಗುರು' ಎನ್ನುವ ಶಬ್ದಕ್ಕೆ ಸರಿಯಾದ ನಿರ್ವಚನ ಒದಗಿಸಿ ಕೊಡುವ ವ್ಯಕ್ತಿಗಳಾಗಿದ್ದರು. ಅವರು ಪುರಾಣ– ಪ್ರವಚನಗಳನ್ನು ಮಾಡುತ್ತಿದ್ದರು. ಭಕ್ತಿಪರವಾದ ಹಾಡುಗಳನ್ನು ಹಾಡುತ್ತಿದ್ದರು. ರೇವಣಸಿದ್ಧಯ್ಯನವರ ಹೆಂಡತಿ ಶರಣಮ್ಮನವರು. ಹೆಸರಿಗೆ ತಕ್ಕಂತೆ ಶರಣೆಯೇ ಆಗಿದ್ದರು.

ಮನೆಯಲ್ಲಿ ಆಧ್ಯಾತ್ಮಿಕ ವಾತಾವರಣ ಬೆಳೆಯಿಸಲು ಕಾರಣರಾಗಿದ್ದರು. ಮಠಕ್ಕೆ ಬರುವ ಭಕ್ತರುಗಳಿಗೆ ಅನ್ನಪೂರ್ಣೆಯಂತೆ ನಿಂತು ಪ್ರಸಾದ ದಾಸೋಹ ಮಾಡುತ್ತಿದ್ದರು.

ಈ ದಂಪತಿಗಳಿಗೆ ಮಗನಾಗಿ ಕ್ರಿ.ಶ. ೧೯೨೭ರ ವರ್ಷದಲ್ಲಿ ಸಿದ್ಧರಾಮಯ್ಯನವರು ಹುಟ್ಟಿದರು. ಸಿದ್ಧರಾಮಯ್ಯನವರು ಮೋಡಿ ಶಾಲೆಗೆ ಹೋದರು. ಮಹಾನುಭಾವಿಗಳ ಸತ್ಸಂಗದಲ್ಲಿ ಹಳಗನ್ನಡ, ನಡುಗನ್ನಡ; ಸಂಸ್ಕೃತ; ಮರಾಠಿ, ಹಿಂದಿ ಈ ಭಾಷೆಗಳಲ್ಲಿ ಸರಿಯಾದ ಪಾಂಡಿತ್ಯವನ್ನು ಪಡೆದುಕೊಂಡರು. ಕನ್ನಡ ಸಾಹಿತ್ಯ, ವಚನ ವಾಙ್ಮಯಗಳನ್ನು ಆಳವಾಗಿ ಅಧ್ಯಯನ ಮಾಡಿದರು.

ಹಿರೇಮಠದವರ ಮನೆತನಕ್ಕೆ ಕಂಗಟಿ ಸಿದ್ಧೇಶ್ವರರು ಮನೆಯ ದೇವರು. ಕಮಠಾಣಾದ ಗಚ್ಚಿನ ಮಠದ ಬಸವಲಿಂಗದೇವರು ಗುರುಗಳು. ರೇವಣಸಿದ್ಧಯ್ಯನವರು ತಮ್ಮ ಮಗನಿಗೆ ಮನೆಯ ದೇವರ ಹೆಸರನ್ನು ಇರಿಸುತ್ತ "ಸಿದ್ಧರಾಮಯ್ಯ" ಎಂದು ಕರೆದರು.

ಸಿದ್ಧರಾಮಯ್ಯ ಹಿರೇಮಠ ಅವರು ಶಾಂತ ಸ್ವಭಾವಿಗಳು. ಗಡ್ಡ–ಜಟಾಧಾರಿಗಳಾಗಿದ್ದಾರೆ. ನೋಡಿದ ಕೂಡಲೆ ಅವರ ಬಗೆಗೆ ಭಕ್ತರಲ್ಲಿ ಭಕ್ತಿ ಹುಟ್ಟುತ್ತದೆ. ಸಿದ್ಧರಾಮಯ್ಯನವರ ಸಹಧರ್ಮಿಣಿ ಲಕ್ಷ್ಮಿಬಾಯಿ ಅವರು. ಹಿರೇಮಠದ ಸಂಸ್ಕೃತಿಯ ದೀಪಕ್ಕೆ ಎಣ್ಣೆ ಎರೆದವರು, ಈ ದಂಪತಿಗಳಿಗೆ ಒಟ್ಟು ಐದು ಜನ ಮಕ್ಕಳು. ಅವರಲ್ಲಿ ಇಬ್ಬರು ಹೆಣ್ಣು – ಮೂವರು ಗಂಡು ಮಕ್ಕಳು. ಸಧ್ಯ ಸಿದ್ಧರಾಮಯ್ಯನವರು ಹಿರಿಯ ಮಗ ರೇವಣಸಿದ್ಧಯ್ಯ, ಸೊಸೆ ಪದ್ಮಾವತಿ ಅವರ ಆಶ್ರಯದಲ್ಲಿ ಜೀವಿಸುತ್ತಿದ್ದಾರೆ.

ಸಿದ್ಧರಾಮಯ್ಯನವರು ಸದಾಚಾರ ಸಂಪನ್ನರು. ತ್ರಿಕಾಲ ಸ್ನಾನ–ಪೂಜೆ ಅವರ ಬಿಡದ ನೇಮ. ಅವರು ಭಕ್ತರಿಗೆ ಲಿಂಗ ಧಾರಣ ಮಾಡಿದ್ದಾರೆ. ಹೆಚ್ಚಾಗಿ ಪುರಾಣ–ಪ್ರವಚನ ಮಾಡುತ್ತ ಸಂಚರಿಸುತ್ತಲಿರುತ್ತಾರೆ. ಊರಲ್ಲಿ ಇದ್ದರೆ ಅವರೆಂದೂ ಹೊಲಕ್ಕೆ ಹೋಗುವುದು ತಪ್ಪುವುದಿಲ್ಲ. ಕೃಷಿ ಕಾಯಕದ ಮೇಲ್ವಿಚಾರಣೆ ಮಾಡುತ್ತಾರೆ. ಬೆಳಗಿನ ಜಾವ ಪ್ರಾತಃರ್ವಿಧಿಗಳನ್ನು ಪೂರೈಸಿಕೊಂಡು ಹೊಲಕ್ಕೆ ಹೋಗುತ್ತಾರೆ. ಹೊಲದ ಬದಿಯಲ್ಲಿರುವ ನಾವದಗಿ ರೇವಪ್ಪಯ್ಯನವರ ಹೆಸರಿನಲ್ಲಿ ನಿರ್ಮಿಸಿದ ಚಿಕ್ಕದಾದ ಗದ್ದುಗೆಯ ಬಳಿ ಕುಳಿತುಕೊಳ್ಳುತ್ತಾರೆ. ಯೋಗ–ಧ್ಯಾನ ಮಾಡುತ್ತಾರೆ. ಸಾಹಿತ್ಯ ರಚನೆಯಲ್ಲಿ ತೊಡಗುತ್ತಾರೆ. ಬೆಳಗಿನ ಎಂಟು ಗಂಟೆಯವರೆಗೆ ಈ ಕಾರ್ಯವು ನಡೆದಿರುತ್ತದೆ.

ಸಿದ್ಧರಾಮಯ್ಯ ಸ್ವಾಮಿಗಳು ತಮ್ಮ ಇಪ್ಪತ್ತನೆಯ ವಯಸ್ಸಿನಿಂದ ಬರವಣಿಗೆ ಆರಂಭ ಮಾಡಿದ್ದಾರೆ. ಹಲವಾರು ಹಾಡುಗಳನ್ನು ರಚಿಸಿದ್ದಾರೆ. ಅವುಗಳಿಗೆ ತಮ್ಮ ಹೆಸರನ್ನೆ ಅಂಕಿತವಾಗಿಟ್ಟು ಕೊಂಡಿದ್ದಾರೆ. ಖ್ಯಾತ ತತ್ತ್ವಪದಕಾರ ಕೆಂಚಾ ಮಡಿವಾಳಪ್ಪನಂಥ ತತ್ತ್ವಪದಕಾರರ ಹಾಡುಗಳನ್ನು "ಶ್ರೀ ಸಿದ್ಧಲಿಂಗೇಶ್ವರ ಭಜನಾ" ಎಂಬ ಹೆಸರಿನಲ್ಲಿ ಸಿದ್ಧರಾಮಯ್ಯನವರು ಸಂಪಾದಿಸಿಕೊಟ್ಟಿದ್ದಾರೆ. ಹಲವು ಲಘುಕೃತಿಗಳನ್ನು ರಚಿಸಿದ್ದಾರೆ. ಸಮಾಜಕ್ಕೆ ಸುಜ್ಞಾನ ದಾಸೋಹ ಮಾಡುತ್ತ; ಜೀವಿತದ ಅವಧಿಯನ್ನು ಸಾರ್ಥಕವಾಗಿ ಕಳೆಯುತ್ತಿರುವ ಸಿದ್ಧರಾಮಯ್ಯನವರು ಎಂಬತ್ತುಮೂರರ ಹರೆಯದಲ್ಲೂ ಉತ್ಸಾಹದ ಬುಗ್ಗೆಯಂತಿದ್ದಾರೆ. ಅವರು ರಚಿಸಿರುವ ಎರಡು ತತ್ತ್ವಪದಗಳನ್ನಿಲ್ಲಿ ಉದಾಹರಣೆಗಾಗಿ ಕೊಡಲಾಗಿದೆ:

ಗುರುವಿನ ಮರತರ ಜನ್ಮ ವ್ಯರ್ಥ

ಮರವಿನೊಳಗ ಬಿದ್ದು ಗುರುವಿಗಿ
ಮರತರ ಜನ್ಮವು ಅನರ್ಥ
ನೀ ತಿಳಿದು ನೋಡು ತುರ್ತ ॥ ಪ ॥

ಅನಂತ ಯೋನಿ ತಿರುಗಿ ತಿರುಗಿ
ಮತ್ತ ಗಾಳಿ ಪಟವಾಯಿತು ಮರುಗಿ
ಆಗಬೇಕು ಗುರುವಿನ ಪುತ್ರ
ನೀಗ ಬೇಕು ಭವದ ಚಕ್ರ ॥ ೧ ॥

ಲಿಂಗದೊಳಗ ಸಕಲ ಜಗವು
ತುಂಬಿ ಕೊಂಡಿಹುದು ಲಿಂಗದ ಬೆಳಗು
ಯಾವುದು ಇಲ್ಲ ಜಗದೊಳಗಪ್ಪ
ತಿಳಿದರೆ ಎಲ್ಲ ಲಿಂಗದೊಳಗಪ್ಪ ॥ ೨ ॥

ಸಕಲ ಚರಾಚರ ಲಿಂಗದಿಂದೆ
ಸಕಲವೆಲ್ಲ ಉತ್ಪತ್ತಿ ಲಿಂಗದಿಂದೆ
ಅಕಳಂಕ ಗುರು ಹೇಳಿದ ಹೀಂಗೆ
ನಿಃಕಲ ವಸ್ತುವದುವೆ ಲಿಂಗ ॥ ೩ ॥

ಲಿಂಗದ ಅನುಭವ ತಿಳಿಯಬೇಕು
ಲಿಂಗದಲ್ಲಿ ಭಕ್ತಿಯಿಡಬೇಕು
ಅಂಗ-ಲಿಂಗ ಏಕಾಗಬೇಕು
ಜಗದ ಆಟ ಸಾಕಾಗಬೇಕು ॥ ೪ ॥

ಧರಿಯೊಳು ವಾಸುಳ್ಳ ಕೌಠಾ ಗ್ರಾಮವು
ಪರಶಿವನ ಭಜನೆ ಮಾಡುವ ಭಕ್ತರು ನೀವು
ನಿರುತದಿ ಹೇಳಿದ ಸಿದ್ಧರಾಮ ಅರಿತು
ಲಿಂಗದಿ ಕೂಡಿ ಲಿಂಗವಾಗಿರಿ ಬೆರೆತು ॥ ೫ ॥

ಏಸ ಜಲ್ಮ ತಿರುಗಿ ಹೇಸಕಿ ಇಲ್ಲದೆ ಬಂದಿ

ಏಸ ಜಲ್ಮವು ತಿರುಗಿ
ಹೇಸಗಿ ಇಲ್ಲದೆ ಬಂದಿದಿ ಮರುಗಿ ॥ ಪ ॥

ಅಂಗದ ಮ್ಯಾಲ ಲಿಂಗವುಳ್ಳವರು
ಭಂಗವಿಲ್ಲದ ಪರಮರು ಅವರು
ಸಂಗವಿರಬೇಕು ಶಿವಭಕ್ತರದು
ಲಿಂಗ ಸಂಗದ ಶಿವಶರಣರು ॥ ೧ ॥

ಲೋಕದ ಕರ್ತರು ಅವರೆಲ್ಲ
ನೇಕದಿ ಅವರ ಬಿಟ್ಟರ ಯಾರಿಲ್ಲ
ಲೋಕೇಕದಲಿ ಮೇಲವರು
ಸಾಕು–ಬೇಕುಗಳ ಬಿಟ್ಟವರು ॥ ೨ ॥

ಲಿಂಗಸಂಗತನಾಗಿರಬೇಕಪ್ಪಾ
ಲಿಂಗದ ಗುಣಗಳ ಹಿಂಗಬೇಕಪ್ಪ
ಅಷ್ಟಾವರಣವ ತಿಳಿದಿರಬೇಕಪ್ಪ
ಲಿಂಗವಂತರೆಂದು ಅವರ ಕರಿಬೇಕಪ್ಪ ॥ ೩ ॥

ಹಾಲ ಹರವಿಯ ಮ್ಯಾಲ
ಮಜ್ಜಿಗಿ ಹರವಿ ಇದ್ದಂಗ
ಹಾಂಗಿದ್ದರ ಏನು ಬಂತು ಅಂಗಾ
ದೇಹದ ಮ್ಯಾಲಿನ ಲಿಂಗ ಭಂಗಾ ॥ ೪ ॥

ಆತ್ಮದ ಒಳಗಿನ ಲಿಂಗ ಇರುತಾದ
ಹಾಲಿನೊಳಗಿನ ತುಪ್ಪ ಇರುವಂಗ
ತಿಳಿ ನೀನೋ ಇದರ ಸಂಗ
ತಿಳಿಬೇಕು ಬಾಹ್ಯ ಅಂತರಂಗ ॥ ೫ ॥

ಗುರುಹಸ್ತ ಮಸ್ತಕ ಸಂಯೋಗದಿಂದ
ಅರವಿನ ಬೆಳಕ ಆದ ಆನಂದ
ಮಿಗಿಲಾದ ಕೌಟಗಿ ಚಂದ
ಸಿದ್ಧರಾಮಯ್ಯನವರ ವಾಕ್ಯದಿಂದ ॥ ೬ ॥

ಕರದೊಳು ಅಮೃತವಿರಲು

ಕರದೊಳಗೆ ಅಮೃತವಿರಲು
ಹರಿವಿಯೇತಕೆ ಹುಳಿಯಂಬಲಿಗೆ ?

ಕೊರಗಿ ಮರುಗಿ ಬೀಳುತೇಕೆ
ಗುರುವಿನ ಮೊರೆ ಹೋಗಬೇಕ ॥ ಪ ॥

ವರ ಇಷ್ಟಲಿಂಗದಲ್ಲಿ
ಸಿರಿ ಇಹುದು : ಸುರನಿಹನು
ಭರದಿಂದ ಸಿದ್ಧಿಸಲು
ಗುರುಕರಣ ನಿನಗಹುದು ॥ ೧ ॥

ಬಿಡು ಬಾಹ್ಯದ ಹಂಬಲಾ
ಇಡು ಲಿಂಗದಲಿ ಮನವಲಾ
ಕೊಡು ತನುವು ಜಂಗಮಕೆ
ಗಡ ಬಡಿಸದಿರು ಭವಕೆ ॥ ೨ ॥


ಕಾಡುತ ಕೇಡಿಗೆ ಕೂಡಲು ಬಾರದು
ನೋಡುತ ನೇಮದಿ ಲಿಂಗ ಮರೆಯ ಬಾರದು
ದೃಢ ಚಿತ್ತದಿಂದ ಚಿನ್ಮಯನನು ನೆನೆ
ಬಿಡುವುದು ಬಂಧನದ ಬೇನೆ ॥ ೩ ॥

ಕಾಮದಾಸೆಯ ಬಿಟ್ಟು
ಪ್ರೇಮದಿಂದಲಿ ನೀನು
ವ್ಯೋಮಕೇಶನ ಜಪಿಸು
'ಓಂ'ಯೆಂಬೋ ಮಂತ್ರ ನುಡಿಸು ॥ ೪ ॥


ವಸುಧಿಗೆ ಅಧಿಕ ನಮ್ಮ ಕೌಠಾ ಗ್ರಾಮವು
ಶಿಶು ಸಿದ್ಧರಾಮಸ್ವಾಮಿ ಹೇಳಿದ ನುಡಿಯು

ಈಶನ ಭಕ್ತರು ಲಾಲಿಸಿ ಪಾಲಿಸಿರಿ
ಕ್ಲೇಷ–ರೋಷಗಳ ಭವಪಾಶ ನೀಗಿರಿ ॥ ೫ ॥

(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿರುವರು.)



ಸಿದ್ಧರಾಮಯ್ಯ ಸ್ವಾಮಿ ಅವರ ಮನೆ (ಕೌಠಾ–ಬಿ).



ಮನೆಯ ಒಳಾಂಗಣ ನೋಟ.




ಸಿದ್ಧರಾಮಯ್ಯನವರು.

ತತ್ತ್ವಪದಕಾರ
ಸಿದ್ಧರಾಮಯ್ಯನವರು.






ಸಿದ್ಧರಾಮಯ್ಯನವರು ತತ್ತ್ವಪದ ಹಾಡುತ್ತಿರುವುದು.




ಏಕನಾದದೊಂದಿಗೆ ಸಿದ್ಧರಾಮಯ್ಯನವರು.

ಸಿದ್ಧರಾಮಯ್ಯನವರ
ತಂದೆ
ರೇವಣಸಿದ್ಧಯ್ಯನವರು.





ಸಿದ್ಧರಾಮಯ್ಯನವರ
ಹಿರಿಯ ಮಗ
ರೇವಣಸಿದ್ಧಯ್ಯ-ಸೊಸೆ
ಪದ್ಮಾವತಿ.



ಸಿದ್ಧರಾಮಯ್ಯನವರ ಸಾಹಿತ್ಯ ಸಾಧನೆಗೆ ಸಾಧಕವಾದ ರೇವಪ್ಪಯ್ಯನವರ ಗದ್ದುಗೆ ಸ್ಥಲ (ಕೌಠಾ-ಬಿ).



ಸಿದ್ಧರಾಮಯ್ಯನವರ ಕೃಷಿ ಕಾಯಕದ ಹೊಲ.



ಸಿದ್ಧರಾಮಯ್ಯ ದಂಪತಿಗಳು (ಪತ್ನಿ: ಲಕ್ಷ್ಮಿಬಾಯಿ).

೧೨. ಶರಣಯ್ಯ ಸ್ವಾಮಿ (ಕ್ರಿ.ಶ.ಸು. ೧೯೩೦)

ಬೀದರ ಜಿಲ್ಲೆ ಔರಾದ ತಾಲ್ಲೂಕಿನಲ್ಲಿ ಬರುವ ಏಕಲಾರ ಗ್ರಾಮವು ತತ್ತ್ವಪದಗಳ ಝೇಂಕಾರದಿಂದ ಕೂಡಿದ ಸ್ಥಲದಂತೆ ಭಾಸವಾಗುತ್ತದೆ. ಇಲ್ಲಿ ಇಬ್ಬರು ತತ್ತ್ವಪದಕಾರರು ಆಗಿ ಹೋಗಿದ್ದಾರೆ. ಅವರಲ್ಲಿ ಶರಣಯ್ಯ ಸ್ವಾಮಿ ಅವರು ಒಬ್ಬರು.

ಶರಣಯ್ಯ ಸ್ವಾಮಿ ಅವರ ಮನೆತನವನ್ನು ಜನರು "ಎಡೂರೆ ಮನೆತನ"ವೆಂದು ಗುರುತಿಸುತ್ತಾರೆ. 'ಎಡೂರೆ' ಎಂಬುದು 'ಎರಡೂರೆ' ಎಂಬುದರ ಅಪಭ್ರಂಶೀಕರಣ. ಈ ಮನೆತನಕ್ಕೆ ಎರಡು ಊರುಗಳಲ್ಲಿ ಜಂಗಮತ್ವದ ಅಧಿಕಾರವಿದ್ದಿತಂತೆ. ಆದುದರಿಂದ ಭಕ್ತರು ಅವರ ಹಿರಿಯರನ್ನು "ಎರಡೂರುಗಳ ಅಯ್ಯನವರು" ಎಂದು ಕರೆದರು. ಬರು ಬರುತ್ತ ಅದು "ಎಡೂರೆ ಅಯ್ಯ" ಅಥವಾ "ಎಡೂರೆ ಸ್ವಾಮಿ" ಎಂದಾಯಿತು.

ಎಡೂರೆ ಮನೆತನದ ಯಜಮಾನ ಸಿದ್ಧರಾಮಯ್ಯನವರು ನಿಷ್ಠಾವಂತ ಜಂಗಮರು. ಪುರೋಹಿತ ಕಾಯಕದಿಂದ ಜೀವನ ನಿರ್ವಹಣೆ ಮಾಡುತ್ತಿದ್ದವರು. ಹಾಗೆಯೇ ಸ್ವತಃ ಹೊಲದಲ್ಲಿ ಕೃಷಿ ಕಾಯಕ ಮಾಡುತ್ತಿದ್ದರು. ಅವರ ಹೆಂಡತಿ ಕಾಶೀಬಾಯಿ ಅವರು ಭೂಮಿ ತಾಯಿಯ ಅವತಾರವೇ ಆಗಿದ್ದರು. ಅವರಿಗೆ ಕೃಷಿಯ ಎಲ್ಲ ಕೆಲಸಗಳು ಬರುತ್ತಿದ್ದವು. ಹೊಲದಲ್ಲಿ ಕೆಲಸ ಮಾಡುವ ಆಳುಗಳೊಂದಿಗೆ ಅವರೂ ಕೆಲಸ ಮಾಡುತ್ತಿದ್ದರು.

ಸಾಂಸ್ಕೃತಿಕ ವ್ಯಕ್ತಿತ್ವ ಮತ್ತು ಶ್ರಮಿಕ ಮನೋಭಾವದ ದಂಪತಿಗಳ ಮಗನಾಗಿ ಶರಣಯ್ಯ ಸ್ವಾಮಿ ಅವರು ಕ್ರಿ.ಶ.ಸು. ೧೯೩೦ರ ವರ್ಷದಲ್ಲಿ ಜನಿಸಿದರು. ಸಿದ್ರಾಮಯ್ಯನವರು ಪ್ರಜ್ಞಾವಂತ ಸ್ವಾಮಿಗಳಾಗಿದ್ದರು. ಶರಣಯ್ಯನವರಿಗೆ ಅಕ್ಷರಭ್ಯಾಸ ಭಾಗ್ಯವು ಲಭಿಸಲಿಲ್ಲ. ಇಂದು ಅವರು ನಿರಕ್ಷರಿಗಳು. ಆದರೆ ಅವರಲ್ಲಿನ ಅನುಭವ ಸಂಪತ್ತು ಅಕ್ಷರ ಜೀವಿಗಳನ್ನು ಬೆರಗುಗೊಳಿಸುತ್ತದೆ. ಅದು ಶರಣಯ್ಯನವರು ಲೋಕಶಾಲೆಯಲ್ಲಿ ಕಲಿತ ಶಿಕ್ಷಣದಿಂದ ಸಿದ್ಧಿಸಿಕೊಂಡಿದ್ದೆನ್ನಬೇಕು. ಹೆಂಡತಿ ಪಾರ್ವತಿ ಅವರು. ಶರಣಯ್ಯ ಸ್ವಾಮಿ ಅವರ ಬದುಕಿನ ಬಂಡಿಗೆ ಹೆಗಲು ಕೊಟ್ಟವರು. ಶರಣಯ್ಯನವರು ಜಂಗಮ ವೃತ್ತಿಗಿಂತಲೂ, ರೈತ ವೃತ್ತಿಗೆ ಹೆಚ್ಚು ಮಹತ್ವ ನೀಡಿದರು. ಅವರಿಗೆ ಪೂಜೆ ಮಾಡುತ್ತ ಹೊತ್ತುಗಳೆಯುವದರಲ್ಲಿ ಅಷ್ಟಾಗಿ ನಂಬುಗೆ ಇಲ್ಲ,

ಹೀಗೆಂದು ಅವರು ನಾಸ್ತಿಕ ಮನದವರಲ್ಲ. ಬರೀ ಪೂಜೆಗಿಂತಲೂ ಕಾಯಕ ಪೂಜೆಗೆ ಅವರ ಬದುಕಿನಲ್ಲಿ ಹೆಚ್ಚಿನ ಮಹತ್ವವಿದೆ. ಈ ಕಾರಣದಿಂದಲೆ ಎಂಬತ್ತರ ವಯಸ್ಸಿನಲ್ಲೂ ಅವರು ಮನೆಯಲ್ಲಿ ಕುಳಿತುಕೊಳ್ಳುವುದಿಲ್ಲ. ಹೊಲಕ್ಕೆ ಹೋಗುತ್ತಾರೆ. ತಮ್ಮ ಕೈಲಾದ ಕೃಷಿ ಕಾರ್ಯಗಳನ್ನು ಮಾಡುತ್ತಾರೆ. ದನ–ಕರುಗಳಿಗೆ ಹುಲ್ಲು ಹೊತ್ತು ತರುತ್ತಾರೆ.

ಶರಣಯ್ಯ ಸ್ವಾಮಿಗಳಿಗೆ ನಾಲ್ಕು ಜನ ಗಂಡು–ಮೂವರು ಹೆಣ್ಣುಮಕ್ಕಳು. ಅವರ ಮಕ್ಕಳಲ್ಲಿ ಒಬ್ಬರಾಗಿರುವ ರಾಜುಸ್ವಾಮಿ ಹೋಟೆಲ್ಲ ಉದ್ಯೋಗ ಮಾಡಿಕೊಂಡು ಗ್ರಾಮದಲ್ಲಿದ್ದಾನೆ. ಅವನ ಹೆಂಡತಿ ರಾಜೇಶ್ವರಿ. ಮಗ–ಸೊಸೆಯರ ಆಶ್ರಯದಲ್ಲಿಂದು ಶರಣಯ್ಯ ಸ್ವಾಮಿಗಳು ಉದ್ಯೋಗ ಶೀಲರಾಗಿ ಜೀವಿಸುತ್ತಲಿದ್ದಾರೆ.

ಶರಣಯ್ಯ ಸ್ವಾಮಿಗಳ ಮನೆತನದ ದೇವರು ಸಿಂಗಣಾಪುರದ ಮಹಾದೇವ .ಪ್ರತಿ ವರುಷ ಅವರ ಮನೆತನದ ಹಿರಿಯರು ಸಿಂಗಣಾಪುರಕ್ಕೆ ಹೋಗಿ ದೇವರ ದರ್ಶನ ಪಡೆದುಕೊಂಡು ಮರಳುತ್ತಿದ್ದರಂತೆ. ಶರಣಯ್ಯಸ್ವಾಮಿ ಅವರು ಹಿರಿಯರಂತೆ ಪ್ರತಿ ವರುಷವೂ ಅಲ್ಲಿಗೆ ಹೋದರು, ಆದರೆ ಅವರಿಗೆ ವರ್ಷಕ್ಕೊಮ್ಮೆ ದೇವರ ದರ್ಶನ ಮಾಡುವುದರಿಂದ ತೃಪ್ತಿಯೆನಿಸಲಿಲ್ಲ. ಮಹಾದೇವನ ದರ್ಶನ ತಮಗೆ ದಿನವೂ ಆಗಬೇಕೆಂದು ಹಂಬಲಿಸಿದರು. ತಮ್ಮ ಈ ಹಂಬಲವನ್ನು ಶರಣ–ಅನುಭಾವಿಗಳ ಎದುರಿನಲ್ಲಿ ಇಟ್ಟರು. ಅವರು ಸಿಂಗಣಾಪೂರದಿಂದ ಮಹಾದೇವನನ್ನು ತಂದು ಸ್ಥಾಪಿಸುವಂತೆ ಸಲಹೆ ನೀಡಿದರು. ಅದರಂತೆ ಶರಣಯ್ಯನವರು ಸಿಂಗಣಾಪುರದಿಂದ ಒಂದು ಲಿಂಗವನ್ನು ತಂದು ತಮ್ಮ ಮನೆಯಲ್ಲಿಯೇ ಪ್ರತಿಷ್ಠಾಪನೆ ಮಾಡಿದರು. "ಸಿಂಗಣಾಪುರದ ಮಹಾದೇವ" ಎಂದು ಭಕ್ತಿಯಿಂದ ಪೂಜೆ ಸಲ್ಲಿಸ ತೊಡಗಿದರು.

ಶರಣಯ್ಯನವರು ಇಂದು ತಮ್ಮ ಹೊಲದಲ್ಲಿ ವೀರಶೆಟ್ಟಿ ಶರಣರ ಸಮಾಧಿ ದೇವಾಲಯ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದಾರೆ. ವೀರಶೆಟ್ಟಿ ಶರಣರು ಪವಾಡ ಪುರುಷರಾಗಿದ್ದರು. ಅವರ ಪ್ರಭಾವಕ್ಕೆ ಒಳಗಾದ ಶರಣಯ್ಯ ಸ್ವಾಮಿಗಳು ತಮ್ಮ ಆಧ್ಯಾತ್ಮದ ಹಾದಿಯನ್ನು ಸ್ಪಷ್ಟವಾಗಿ ಕಂಡುಕೊಂಡರು.

ಶರಣಯ್ಯ ಸ್ವಾಮಿಗಳಿಗಿಂತಲೂ ವಯಸ್ಸಿನಲ್ಲಿ ಹಿರಿಯರಾಗಿದ್ದ ಶಂಕರರಾವ ಪಂಚಾಳ ಅವರು ಖ್ಯಾತ ತತ್ತ್ವಪದಕಾರರಾಗಿದ್ದರು. ಸ್ವಾಮಿ ಅವರು ಅವರ ಸಂಪರ್ಕದಲ್ಲಿ ಹಾಡುವುದು, ಪದ್ಯ ರಚನೆ ಮಾಡುವುದು ಕಲಿತರು. ಆದುದರಿಂದ ಶರಣಯ್ಯನವರು ಶಂಕರರಾವ ಅವರನ್ನು "ಗುರು" ಎಂದು ತಿಳಿಯುತ್ತಾರೆ.

ಶರಣಯ್ಯ ಸ್ವಾಮಿಗಳು ಒಳ್ಳೆಯ ಹಾಡುಗಾರರೂ: ತತ್ತ್ವಪದಕಾರರೂ ಆಗಿದ್ದು "ಕೂಡಲ ಸಂಗಮ"; "ಅವರಾದಿ ಅಮರೇಶ್ವರ", "ಹಳೆಯಂಬರ ವೀರಭದ್ರ" ಈ ಅಂಕಿತಗಳನ್ನು ಇರಿಸಿಕೊಂಡು ಹಲವಾರು ತತ್ತ್ವಪದಗಳನ್ನು ರಚಿಸಿದ್ದಾರೆ. ಅವರು

ಕಟ್ಟಿದ ಹಾಡುಗಳನ್ನು ಅವರ ಶಿಷ್ಯರು ಅಕ್ಷರಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ.

ಶರಣಯ್ಯನವರಿಗೆ ನಾವದಗಿ ರೇವಪ್ಪಯ್ಯನವರಲ್ಲೂ ಅಪಾರವಾದ ಭಕ್ತಿಯಿದ್ದಿತು. ಅವರು ಚಿಕ್ಕವರಿದ್ದಾಗ ರೇವಪ್ಪಯ್ಯನವರನ್ನು ಕಂಡಂತೆ ಹೇಳುತ್ತಾರೆ.

ಶರಣಯ್ಯನವರು ರಚಿಸಿದ ಎರಡು ಪದ್ಯಗಳನ್ನು ಇಲ್ಲಿ ಕೊಡಲಾಗಿದೆ:

ಮನದ ಮದವ ಮುರಿಯೊ

ಮನದ ಮದವ ಮುರಿಯೋ । ತಮ್ಮಾ
ಅನುನಯದಿ ಶಿವನನು ಅರಿಯೋ ॥ ಪ ॥

ಮಾಡು ಮನವ ಸಾಧನ
ಮಾಡು ಮನವ ಶೋಧನ
ಮಾಡು ಮನದ ಛೇಧನ
ಮಾಡು ಮನದ ಮನನ ॥ ೧ ॥

ಮನದ ಆಕಾರವ ತಿಳಿ
ಅದರ ವಿಕಾರವ ಅಳಿ
ಪದರ ಪದರ ನೀ ಬಿಡಿಸಿ ಕಳಿ
ಸದರ ಶಿವನೆ ನೀನೆ ತಿಳಿ ॥ ೨ ॥

ಮನದಾಗ ಮದದ ಮಲ ತುಂಬ್ಯಾದ
ಅದರಾಗ ಕೊಳಕ ರಾಡಿ ತುಂಬ್ಯಾದ
ಚದುರ ನೀನು ಹ್ಯಾಂಗ ಆದಿ ಮೂಳ
ವದುರುತಿ ತಿಳಿಯದೆ ಮನದ ಆಳ ॥ ೩ ॥

ಮನವೆಂಬುದು ಹಿಟ್ಟಿನ ಮುದ್ದೋ
ನಾದು–ನಾದು ನೀ ಹದ ಮಾಡೋ
ಕಾದ ಹಂಚಿನ ಮ್ಯಾಲ ರೊಟ್ಟಿಯ ಹಾಕೋ
ನಾದ ಬಿಂದು ಕಳಾ ಮೀರಿ ನಿಲ್ಲಿಸೋ ॥ ೪ ॥
ಮನದ ಮದವ ಮುರಿಯೋ । ನೋಡು

ಅವರಾದಿ ಅಮರೇಶ್ವರನ ಅರಿಯೋ
ಕೂಡಲ ಸಂಗಮನ ಕೂಡೋ ತಮ್ಮಾ
ಬಿಡಲು ಬ್ಯಾಡ ಅವನ ಪಾದವ ಒಮ್ಮಾ ॥ ೫ ॥

ಯಾವ ಊರೀಗೆ ಬಂದೆ ತಿಳಿವಲ್ದು

ಇದು ಯಾವ ಊರೋ ತಮ್ಮಾ । ನಾ
ಯಾವ ಊರಿಗೆ ಬಂದೆ ತಿಳಿವಲ್ದು ॥ ಪ ॥

ಸುತ್ತ – ಮುತ್ತಾ ಕಟ್ಟ್ಯಾರೆ ಕಲ್ಲಿನ ಕೋಟಿ
ನಡು ಮಧ್ಯ ಇಟ್ಟಾರೆ ಎತ್ತರ ಮೇಟಿ
ಕಂದಕ – ಕಂದಕ ನಿಡುದಾರಿ ದಾಟಿ
ಯಾವ ಊರಿಗೆ ಬಂದೆ ತಿಳಿವಲ್ದು ॥ ೧ ॥

ಒಂಬತ್ತು ಬಾಗಿಲಾವ ಈ ಊರಿಗವ್ವ
ಎಂಬತ್ತು ನಾಲ್ಕು ಲಕ್ಷ ದಾಟಿ ಬಂದೆನವ್ವ
ಐದು ಮಂದೀಯ ಬಲ್ಯಾಗ ಬಿದ್ದೆನವ್ವ
ಆರು ಮಂದೀ ನನಗ ಹಿಡಿದು ಎಳದಾರವ್ವ ॥ ೨ ॥


ಊರ ಒಳಗ ಹೊಲಸ ತುಂಬ್ಯಾದವ್ವ
ನಾರತಾದ ಏನ ಹೇಳಲಿ ಕೆಟ್ಟ ವಾಸವ್ವ
ರಕುತದ ಹೊಂಡ, ಕೀವುದ ಗುಂಡ
ಮಾಂಸ ಮಜ್ಜದ ಕಿಲುಬಿನ ಭಾಂಡ ॥ ೩ ॥

ಎಲ್ಲ ದಾರಿಗಳ ಕಸ ಗುಡಿಸಬೇಕು
ಖುಲ್ಲರೆಲ್ಲರ ಕೊಲ್ಲಿ ಹಾಕಬೇಕು
ಬಲ್ಲ–ಬಲ್ಲವರ ಮಲ್ಲ ಕಾಳಗ ಮಾಡಬೇಕು
ನಿಲ್ಲಲಾರದೆ ನಾ ಮುಂದೋಡಬೇಕು ॥ ೪ ॥
ಧರೆಯೊಳು ಏಕಲೂರು ಊರಾ

ಮೆರೆವನು ಕೂಡಲ ಸಂಗಮ ಪೂರಾ
ಅರಿಯಿರಿ ಊರಿನ ನೆಲೆಯೋರಾ
ಇರುವದಂತಾಗ ಸುಖದಿಂದ ಜೋರಾ ॥ ೫ ॥

(ಈ ವಿವರಗಳನ್ನು ಸ್ವತಃ ಕವಿಗಳೇ ಕೊಟ್ಟಿರುವರು.)

□



ಶರಣಯ್ಯ ಸ್ವಾಮಿ ಅವರ ಮನೆ (ಏಕಲಾರ).



ಮನೆಯ
ಒಳಾಂಗಣ ದೃಶ್ಯ.




ಶರಣಯ್ಯ ಸ್ವಾಮಿ.



ಶರಣಯ್ಯ ಸ್ವಾಮಿಗಳ ಪತ್ನಿ ಪಾರ್ವತಿ.



ಶರಣಯ್ಯನವರು ತಮ್ಮ ಮನೆಯಲ್ಲಿ ಸಂಸ್ಥಾಪಿಸಿದ ಸಿಂಗಣಾಪುರದ ಮಹಾದೇವ ದೇವರು.



ಶರಣಯ್ಯ ಸ್ವಾಮಿಗಳ ಮಗ ರಾಜು–ಸೊಸೆ ರಾಜೇಶ್ವರಿ ಹಾಗು ಮೊಮ್ಮಕ್ಕಳು.



ಶರಣಯ್ಯ ಸ್ವಾಮಿಗಳು ಕೃಷಿ ಮಾಡುತ್ತಿರುವ ಹೊಲ.




ಶರಣಯ್ಯ ಸ್ವಾಮಿಗಳು ಹೊಲದಲ್ಲಿ ನಿರ್ಮಿಸಿರುವ ವೀರಶೆಟ್ಟಿ ಶರಣರ ಗುಡಿ.



ಶರಣಯ್ಯ ಸ್ವಾಮಿಗಳ ಆರಾಧ್ಯ ದೇವರು ಶಿವ-ಪಾರ್ವತಿ ಬೆಟ್ಟದ ಮೇಲಿನ ಕೆರೆ. (ಏಕಲಾರ).



ಶರಣಯ್ಯ ಸ್ವಾಮಿಗಳ ಸಾಧನೆಗಾಗಿ ಸನ್ಮಾನ (ಬೀದರ).



ಶರಣಯ್ಯ ಸ್ವಾಮಿ ದಂಪತಿಗಳು.

೧೩. ಗಣಪತಿ ಹಿಪ್ಪಳಿಗೆ (ಕ್ರಿ.ಶ.ಸು. ೧೯೩೪)

ಬೀದರ ಜಿಲ್ಲೆ; ಅವರಾದ ತಾಲ್ಲೂಕಿನ ಹೆಡಗಾಪುರ ಗ್ರಾಮದ ಗಣಪತಿ ಅವರಿಗೆ ವಯಸ್ಸೇನೋ ಎಪ್ಪತ್ತಾರು. ಆದರೆ ಅವರ ಬದುಕಿನ ಚಟುವಟಿಕೆಗಳು ನೋಡಿದರೆ ಇನ್ನೂ ತರುಣರೇ ಎಂಬಂತೆ ಕಾಣುತ್ತಾರೆ. ಅವರಿಗೆ ತಮ್ಮ ಊರಿನ ಕವಿ ಪರಂಪರೆಯ ಪರಿಚಯ ಹೊರಗಿನವರಿಗೆ ಉಂಟಾಗಲೆಂಬ ಹಂಬಲವಿದೆ. ಅದಕ್ಕಾಗಿ ಅವರು ತಮ್ಮ ಊರಿನ ಕವಿಗಳ ಪರಿಚಯವನ್ನು ಅತ್ಯಂತ ಪ್ರಾಂಜಲ ಮನದಿಂದ ಹೇಳುವುದಕ್ಕೆ ಮುಂದೆ ಬಂದರು. ಅದರೊಂದಿಗೆ ತಾವೂ ಕವಿಗಳಾಗಿ, ಕಾವ್ಯ ಕಟ್ಟುವುದರ ಬಗೆಗೂ ಹೇಳಿಕೊಂಡಿದ್ದಾರೆ.

ವೀರಶೈವ ಮನೆತನದ ಗಣಪತಿ ಅವರದು ಬಡತನದ ಕುಟುಂಬ-ಚಿಕ್ಕದಾದ ಮನೆ. ಪತ್ನಿಯೊಂದಿಗೆ ಒಬ್ಬರೆ ಬದುಕುತ್ತಿದ್ದಾರೆ. ಇಂದು ಬಹುಶಃ ಅವರೊಂದಿಗೆ ಯಾವ ಮಕ್ಕಳೂ ಇಲ್ಲ. ಅವರಿಗೆ ಯಾವ ಮಗನ ಆಶ್ರಯವೂ ದಕ್ಕಿಲ್ಲ. ಆದರೂ ಧೃತಿಗೆಡದಂತೆ ಗಣಪತಿ ದಂಪತಿಗಳು ಜೀವನ ಶ್ರದ್ಧೆ ಮತ್ತು ಪ್ರೀತಿಯಿಂದಲೇ ಬದುಕುತ್ತಲಿದ್ದಾರೆ.

ಈರಪ್ಪ ಹಿಪ್ಪಳಿಗೆ ಗಣಪತಿ ಅವರ ತಂದೆ; ಕೃಷಿಕ. ಶಿವಮ್ಮ ಅವರ ಹೆಂಡತಿ. ರೈತಾಪಿ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದ ಗಟ್ಟಿ ಮಹಿಳೆ. ಚವತಿಯ ದಿನ ಹುಟ್ಟಿದ ಕಾರಣಕ್ಕಾಗಿ ಕವಿಗಳಿಗೆ ಅವರ ತಂದೆಯವರು 'ಗಣಪತಿ'ಯೆಂಬ ಹೆಸರನ್ನು ಇರಿಸಿದರು. ಜನನದ ವರ್ಷವು ಕ್ರಿ.ಶ.ಸು. ೧೯೩೪.

ಗಣಪತಿ ಅವರು ಓದಿದ್ದು ಐದನೆಯ ತರಗತಿ. ಅಕ್ಷರ ಜ್ಞಾನದೊಂದಿಗೆ ಅವರಲ್ಲಿ ಅಹಿಕ ಬದುಕಿನ ಜ್ಞಾನವು ಸಾಕಷ್ಟಿದೆ. ಅದನ್ನು ಅವರು ಎಂದೂ ಅನಾಯಸವಾಗಿ ಬರುವ ದುಡ್ಡನ್ನಾಗಿ ಮಾರ್ಪಡಿಸಿಕೊಳ್ಳಲು ಹೋದವರಲ್ಲ. ವಚನ ಸಾಹಿತ್ಯದ ಅಧ್ಯಯನವಿದೆ. ಕನ್ನಡದ ಹಲವಾರು ತತ್ತ್ವಪದಕಾರರ ಹಾಡುಗಳನ್ನು ಅವರು ಓದಿದ್ದಾರೆ. ಕಂಠಪಾಠ ಮಾಡಿಕೊಂಡಿದ್ದಾರೆ. ಸ್ವತಃ ಹಾಡುತ್ತಾರೆ. ಗಣಪತಿ ಅವರಿಗೆ ಸಂಗೀತದ ಜ್ಞಾನವೂ ಇದೆ. ಸಂಗೀತದ ಪಾಠವನ್ನು ಹೇಳಿಕೊಡುತ್ತಲೇ ಅದರ ಹಿನ್ನೆಲೆಯಲ್ಲಿ ಹಾಡುವ ಕಲೆಯನ್ನು ಗಣಪತಿ ಅವರು ಕಲಿಸಿಕೊಡುತ್ತಾರೆ.

ಗಣಪತಿ ಅವರ ಪತ್ನಿ ಕಲಾವತಿ. ಈ ದಂಪತಿಗಳಿಗೆ ಒಟ್ಟು ನಾಲ್ಕು ಜನ ಮಕ್ಕಳು. ಅವರಲ್ಲಿ ಇಬ್ಬರು ಹೆಣ್ಣು–ಇಬ್ಬರು ಗಂಡು ಮಕ್ಕಳು. ಹೆಡಗಾಪುರ ಸಂಸ್ಥಾನ ಮಠದ ಶಿವಲಿಂಗ ಶಿವಾಚಾರ್ಯರು ಗಣಪತಿ ಅವರ ಮನೆಯ ಗುರುಗಳು. ಅವರ ಪೂರ್ವಜರು ಹೊನ್ನಿಕೇರಿ ಸಿದ್ಧೇಶ್ವರರನ್ನು ಮನೆತನದ ಆರಾಧ್ಯ ದೇವರೆಂದು ಪಾಲಿಸುತ್ತ ಬಂದಿದ್ದಾರೆ. ಗಣಪತಿ ಅವರಾದರೂ ಸಿದ್ಧೇಶ್ವರರಲ್ಲಿ ಅಪಾರ ಭಕ್ತಿಯುಳ್ಳವರಾಗಿದ್ದಾರೆ.

ಗಣಪತಿ ಅವರ ವೃತ್ತಿ ಕೃಷಿಕಾಯಕ. ಪ್ರವೃತ್ತಿಯು ಜನತೆಗೆ ಅಥವಾ ಆಸಕ್ತರಿಗೆ ಭಜನೆಯ ಹಾಡುಗಳನ್ನು ಕಲಿಸುವುದು, ಹಾಡುಗಳಿಗೆ ಸಂಗೀತದ ರಾಗ ಪ್ರಸ್ತಾರ ಹಾಕಿ ಸಂಗೀತದ ಪಾಠ ಹೇಳುವುದು, ಈ ಕಾರ್ಯವನ್ನು ಗಣಪತಿ ಅವರು ಸಂಜೆಯ ಹೊತ್ತಿನಲ್ಲಿ ಮಾಡುತ್ತಾರೆ. ಅವರಲ್ಲಿಗೆ ಹಾಡು ಕಲಿಯಲು ಹಲವಾರು ಊರಿನಿಂದ ಜನರು ಬರುತ್ತಾರೆ. ಗಣಪತಿ ಅವರು ಒಂದು ಭಜನೆಯ ಸಂಘವನ್ನು ಕಟ್ಟಿಕೊಂಡಿದ್ದಾರೆ. ಭಜನೆಯ ಸಂಘದೊಂದಿಗೆ ಆಗಾಗ ಅವರು ಊರಿನ ಗಡಿಯನ್ನು ದಾಟಿ, ಬೇರೆ ಊರುಗಳಿಗೆ ಹೋಗುವುದುಂಟು.

ಗಣಪತಿ ಅವರು ಹಲವಾರು ಭಜನೆ ಮತ್ತು ತತ್ತ್ವಪದಗಳನ್ನು ಬರೆದಿದ್ದಾರೆ. ಅವರು ಮಾಡುವ ಭಜನೆಗಳಲ್ಲಿ ಅವರ ಅನುಯಾಯಿಗಳು ಆ ಹಾಡುಗಳನ್ನು ಹಾಡುತ್ತಾರೆ. ಗಣಪತಿ ಅವರನ್ನು ನೋಡಿದರೆ "ಅವರು ಕವಿಯಂತೆ" ಕಾಣುವುದೇ ಇಲ್ಲ. ಮಸಕಾದ ಬಿಳಿಯ ಅಂಗಿ; ಅದೇ ಬಣ್ಣದ ಟೊಪ್ಪಿಗೆ; ಒರಟಾದ ಧೋತರಿನಲ್ಲಿ ಅವರ ಕಾವ್ಯವ್ಯಕ್ತಿತ್ವವು ಅಡಗಿಕೊಂಡಿರುವುದು ಬಹು ಸಂಖ್ಯಾತರು ಗುರುತಿಸುವುದಕ್ಕೆ ಹೋಗುವುದೇ ಇಲ್ಲ. ಆರ್ಥಿಕ ಮುಗ್ಗಟ್ಟಿನಿಂದ ಅವರು ಆ ರೀತಿಯ ವೇಷ ಧರಿಸಿದರೂ; ಅವರ ಒಳಗಡೆ ಶ್ರೀಮಂತವಾದ ಮನಸ್ಸು ಇದೆ; ಹೃದಯ ಇದೆ. ಕಲ್ಪನೆಯ ಶಕ್ತಿಯಿದೆ; ಆಶು ಕವಿತ್ವದ ಶಕ್ತಿಯನ್ನು ಬಳಸಿಕೊಂಡು ಆಗಿಂದಾಗಲೇ ಹಾಡು ಕಟ್ಟುತ್ತಾರೆ.

ಗಣಪತಿ ಅವರು ದೈವೀ ಶ್ರದ್ಧೆಯುಳ್ಳವರಾದುದರಿಂದ ಅದನ್ನು ಅವರು ತಮ್ಮ ಕಾವ್ಯ ರಚನೆಯಲ್ಲೂ ಎಚ್ಚರದಿಂದಲೇ ಕಾಯ್ದುಕೊಂಡು ಬಂದಿದ್ದಾರೆ. ತಮ್ಮ ತತ್ತ್ವಪದಗಳಿಗೆ ಅವರು 'ಸಿದ್ಧೇಶ್ವರ', 'ಸಂಗಮೇಶ್ವರ' 'ಶಿವಲಿಂಗೇಶ್ವರ' ಎಂಬಂತಹ ಅಂಕಿತಗಳನ್ನು ಇಟ್ಟುಕೊಂಡಿದ್ದಾರೆ. ಅವುಗಳಲ್ಲಿ ಅವರು ನಂಬಿದ ಮನೆಯ ದೇವರೂ ಇದ್ದಾನೆ; ಮನೆತನದ ಗುರುಗಳೂ ಇದ್ದಾರೆ. ಗಣಪತಿ ರಚಿಸಿದ ಎರಡು ಹಾಡುಗಳನ್ನು ಇಲ್ಲಿ ಉದ್ಧರಿಸಲಾಗಿದೆ:

ವೇದದ ಮಾತ್ಯಾಕೋ

ವೇದದ ಮಾತ್ಯಾಕೋ ತಮ್ಮಾ
ಸ್ವಾದ ಸವಿ ಸುಖವೆಲ್ಲ ಲಿಂಗದಲ್ಲಿರುವಾಗ ॥ ಪ ॥

ನಾಕು ವೇದಗಳಿಗೆ ನಿಲುಕದ ಪರವಸ್ತು
ಆರು ಶಾಸ್ತ್ರಗಳನತಿಗಳೆದ ಪರವಸ್ತು
ಸಾರುತಿರುವ ನಾದ – ಬಿಂದು ಕಲಾವಸ್ತು
ತೋರುತಿರುವದು ಅತಿಶಯದ ಘನವಸ್ತು ॥ ೧ ॥

ವೇದವ ಓದಿದರ ತಿಳಿಲಿಲ್ಲ
ಅದರ ಸಾರವ ಸವಿದರ ಸಿಗಲಿಲ್ಲ
ಪದರ–ಪದರಿನಲ್ಲಿ ಲಿಂಗದ ಅನುಭವ
ಚದುರ ನೀ ತಿಳಿದು ನಿಗೋ ಈ ಭವವ ॥ ೨ ॥

ವೇದದ ಮಾತದೋ ಗಾದೆಯ ಗೂಡೋ
ನಾದದ ಓಂಕಾರ ಶಂಕರನ ನೋಡೋ
ಬಿಂದುವಿನ ಒಳಗೆ ಚಿತ್ತವನು ಇಡೋ
ಕಲಾತೀತನಾಗಿ ಲಿಂಗವನು ನೋಡೋ ॥ ೩ ॥

ಮಾತೀನ ಜಾಲವು ವೇದದ ನಿಲವು
ತೂತಿನ ಸಂಸಾರ ಕ್ಷಣ ಭಂಗುರವು
ನೋಟ–ನೋಟ ಅಂದಿ ಭ್ರಾಂತಿಗೆ ಬಿದ್ದಿ
ಯಾತರ ಹಂಗಿಲ್ಲ ಲಿಂಗದ ಸಿದ್ಧಿ ॥ ೪ ॥

ಪರಕೆ ಪರವಾದ ಘನಕೆ ಮಹಾ ಘನವಾದ
ಸ್ಥಿರಕೆ ಸ್ಥಿರವಾದ ಚರಕ್ಕೆ ಚರವಾದ
ಹರಸಿ ಶಿವನು ಶಿವನೆ ಲಿಂಗನು
ಆಗಲಿಕ್ಕೆ ಅವನ ನಿತ್ಯದ ಸಂಗವು ॥ ೫ ॥

ಮಲದ ಹೊಲಸು ನೀನು ತೊಳೆಯೊ
ಸದಮಲವೆಂಬ ನೀರಿನಿಂದ ಮೈಯ್ಯ ನೀ ತೊಳೆಯೊ
ಶಿವಭಕ್ತಿಯ ಬೆಳೆಯ ನೀನು ಬೆಳೆಯೊ
ಮದ-ಮತ್ಸರದ ಕಳೆಯನ್ನು ಕಿತ್ತೀ ನೀ ತೆಗೆಯೊ ॥ ೬ ॥

ಧರೆಯೊಳು ಮೆರೆಯುವ ಹೆಡಗಾಪುರ ಗ್ರಾಮ
ಪರಕೆ ಪರವಾದ ನಿಜಲಿಂಗ ಧಾಮ
ಗುರುವರ ಶಿವಲಿಂಗ ಹೇಳಿದ ನೇಮ
ಅಂತು ಬಿಡು ನೀ ವೇದದ ಹಮ್ಮಾ ॥ ೭ ॥

ಮಾಡು ಮಹಾತ್ಮರ ಸಂಗ

ಮಾಡು ಮಾಡು ಮಹಾತ್ಮರ ಸಂಗ
ಮಾಡಲ್ದೆ ಆದಿ ನೀ ಹುಚ್ಚ ಮಂಗ ॥ ಪ ॥

ಬತ್ತೀಸ ಗುಣಗಳು ಕಳಿಬೇಕೋ
ಛತ್ತೀಸ ಗುಣಗಳು ತಿಳಿಬೇಕೋ
ತೆತ್ತೀಸದೇವರುಗಳ ಹಂಗ ಹರಿಬೇಕೋ
ಚಿತ್ತ ಶುದ್ಧನಾಗಿ ಸತ್ಸಂಗ ಮಾಡಬೇಕೋ ॥ ೧ ॥

ಹೊತ್ರಾಳಿ ಸೂರ್ಯ ಬಂದ ಮುಗಿಲೇರಿ
ಚಿದಾಕಾಶದೊಳಗ ನೋಡು ಮೇಲೇರಿ
ಸುದರ್ಶನ ಕಂಡು ಹಿಡಿ ಮುರಾರಿ
ಚದುರ ಮತದಿಂದ ಭವವಾಯ್ತು ಪರಿಹಾರಿ ॥ ೨ ॥


ಕಾಲ ಕರ್ಮದೂರೋ । ತಮ್ಮಾ
ನೇಮ ನಿತ್ಯ ಬ್ಯಾಡೋ
ಶರಣ-ಮಹಾತ್ಮರ ಪಾದಕ ಸಾರಿದರ
ಅನುಭವ ಸರಿ ನೋಡೋ ॥ ೩ ॥

ಒಲೆಯ ಬೆಂಕಿಯೊಳಿಟ್ಟ ಕಟ್ಟಿಗೆ ಪರಿಯಂತೆ
ತಿಳಿಯದಾಯ್ತೋ ರುಹೋ ಕಾಷ್ಟದ
ಹಾಲಿನೊಳಡಗಿದ ಸಕ್ಕರೆ ಪರಿಯಂತೆ
ಸತ್ಸಂಗದ ಫಲವೋ ॥ ೪ ॥


ಮಹಾತ್ಮರು ಮಹಾಂತರು
ಶಾಂತರು ಸಿದ್ಧರು
ಸಾಧ್ಯರು ವೇದ್ಯರು ಭವದೂರ ವಂದ್ಯರು
ಅವರ ಜೊತೆಯ ಕೂಡೋ ॥ ೫ ॥

ವಸುಧಿಗೆ ಅಧಿಕವಾದ ಹೆಡಗಾಪುರವು
ಈಶ ಸಿದ್ಧೇಶ್ವರರ ಭಕ್ತಿಯ ನಿಲಯವು
ಕಾಸ–ಲೇಸುಗಳ ಸಂಹರಿಸುವ ಸತ್ಸಂಗವು
ಲೇಸದಿ ನೀ ಮಾಡೋ ಮಾಹಾತ್ಮರ ಜೊತೆ ಗೂಡೊ ॥ ೬ ॥

(ಸ್ವತಃ ಕವಿಗಳೇ ಈ ವಿವರಗಳನ್ನು ಕೊಟ್ಟಿದ್ದಾರೆ.)



ಗಣಪತಿ ಹಿಪ್ಪಳಿಗೆ ಅವರ ಮನೆ (ಹೆಡಗಾಪುರ).



ಗಣಪತಿ ಹಿಪ್ಪಳಿಗೆ.



ಗಣಪತಿ ಹಿಪ್ಪಳಿಗೆ ದಂಪತಿಗಳು (ಪತ್ನಿ ಕಲಾವತಿ).



ಗಣಪತಿ ಹಿಪ್ಪಳಿಗೆ ಅವರ ಆರಾಧ್ಯ ದೇವರು ಹನುಮಾನ ದೇವಾಲಯ.

೧೪. ಬಾಬುರಾವ ವಾಗ್ಮರೆ (ಕ್ರಿ.ಶ.ಸು. ೧೯೩೫)

ಹಿಪ್ಪಳಗಾಂವ ಗ್ರಾಮದ ಹೊರವಲಯದಲ್ಲಿ ಗೊಂದಲಿಗೇರ ವಂಶದ ಬಾಬುರಾವ ವಾಗ್ಮರೆ ಶ್ರೇಷ್ಠ ಕಲಾವಿದ; ಹಾಡುಗಾರ ಮತ್ತು ತತ್ತ್ವಪದಕಾರರಾಗಿದ್ದಾರೆ. ಎಪ್ಪತ್ತೈದು ವರುಷಗಳ ವಯಸ್ಸಿನಲ್ಲಿರುವ ಬಾಬುರಾವ ಹುರುಪಿನ ಜೀವ. ಹಾಡುವುದು ಎಂದರೆ ಸಾಕು, ಅವರು ಒಮ್ಮೆಲೆ ಮುಪ್ಪಿನಿಂದ ಯೌವ್ವನಾವಸ್ಥೆಗೆ ಜಿಗಿದು ಬಿಡುತ್ತಾರೆ. ಅವರ ಕಂಠಶ್ರೀಯಿಂದ ಹೊಮ್ಮಿ ಬರುವ ಹಾಡು ಕೇಳುಗರನ್ನು ಸಮ್ಮೋಹನಗೊಳಿಸುತ್ತದೆ. ಅವರು ತುಂತುಣಿ ಬಾರಿಸುತ್ತ, ಹಾರ್ಮೋನಿಯಂ ನುಡಿಸುತ್ತ; ಏಕನಾದ ಮೀಟುತ್ತ ಹಾಡುತ್ತಾರೆ.

ಹಿಪ್ಪಳಗಾಂವ ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಬರುವ ಚಿಕ್ಕ ಗ್ರಾಮವಾಗಿದೆ. ಗೊಂದಳಿ ಸಮಾಜದ ಷಟ್‌ವಾದಿ ಬಾಬುರಾವ ಅವರ ತಂದೆ. ತಾಯಿ ನರಸಾಬಾಯಿ. ಈ ದಂಪತಿಗಳಿಗೆ ಮಗನಾಗಿ ಬಾಬು ಅವರು ಕ್ರಿ.ಶ. ೧೯೩೫ರಲ್ಲಿ ಜನಿಸಿದರು.

ಷಟ್‌ವಾದಿಯು ಹಾಡುಗಾರಿಕೆಯಲ್ಲಿ ಹಿರಿಯ ಕಲಾವಿದನಾಗಿದ್ದನು. ಅವನು ಗೊಂದಲಿಗರ ಆಟಗಳನ್ನು ಆಡಿಸುತ್ತಿದ್ದನು. ಗೊಂದಲ ಹಾಕುವ ಸಂಪ್ರದಾಯ ಸರಿಯಾಗಿ ತಿಳಿದಿತ್ತು. ಮನೆತನದ ಇದೇ ಉದ್ಯೋಗವನ್ನು ನಿರ್ವಹಿಸುತ್ತಲೆ ಷಟ್‌ವಾದಿಯು ಬದುಕು ನಿರ್ವಹಿಸುತ್ತಿದ್ದನು. ಷಟ್‌ವಾದಿಯನ್ನು "ಆಟದ ಮಾಸ್ತರ" ಎಂದು ಜನರು ಕರೆಯುತ್ತಿದ್ದರು. ಆಟ ಆಡಿಸುವಲ್ಲಿಗೆ ಅವನು ತನ್ನ ಮಗ ಬಾಬುರಾವ ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದನು. ಆಟದಲ್ಲಿ ಬಾಲಪಾತ್ರಗಳಿದ್ದರೆ; ಒಂದನ್ನು ಬಾಬುರಾವನಿಗೆ ಕೊಡುತ್ತಿದ್ದನು. ಹೀಗೆ ಬಾಲ್ಯದಲ್ಲಿಯೇ ಬಾಬುರಾವ ಅವರಿಗೆ ಕಲೆಯ ಸಂಸ್ಕಾರವು ದೊರಕುವಂತಾಯಿತು.

ಬಾಬುರಾವ ಮರಾಠಿ ಶಾಲೆಗೆ ಹೋದರು. ಅಲ್ಲಿ ಮೋಡಿ–ಮರಾಠಿ ಭಾಷೆಗಳನ್ನು ಕಲಿತರು. ಐದನೆಯ ತರಗತಿಯವರೆಗೆ ಅವರ ಶಿಕ್ಷಣ ಮುನ್ನಡೆಯಿತು. ಶಾಲೆಯಲ್ಲಿ ಲಕ್ಷ್ಮಣಪ್ಪ ಬೇಲೂರು ಎಂಬ ಹೆಸರಿನ ಕನ್ನಡ ಪಂಡಿತರಾದ ಶಿಕ್ಷಕರೊಬ್ಬರು ಇದ್ದರು. ಅವರು ಬಾಬುರಾವ ಅವರ ಪ್ರತಿಭಾವಂತಿಕೆಯನ್ನು ಗುರುತಿಸಿ. "ಈ ಹುಡುಗನು ಕನ್ನಡದ ಕಲಾವಿದನಾಗಬೇಕು" ಎಂದು ಬಯಸಿ; ತಮ್ಮ ಮನೆಗೆ ಕರೆಯಿಸಿಕೊಂಡು

ಕೆಲವು ವರ್ಷಗಳ ಕಾಲ ಕನ್ನಡದ ಪಾಠ ಹೇಳಿದರು. ಹೀಗಾಗಿ ಬಾಬುರಾವ ಅವರು ಮರಾಠಿ; ಹಿಂದಿಯೊಂದಿಗೆ ಕನ್ನಡವು ಕಲಿಯುವಂತಾಯಿತು. ಇಂದು ಬಾಬುರಾವ ಅವರು ಲಕ್ಷ್ಮಣಪ್ಪ ಅವರ ಬಗೆಗೆ ಹೀಗೆ ನೆನಪಿಸಿಕೊಳ್ಳುತ್ತಾರೆ: "ನಮ್ಮ ಮನೆಯಲ್ಲಿ ನಮ್ಮ ಹಿರಿಯರು ಕನ್ನಡವೂ ಮಾತಾಡುತ್ತಿದ್ದರು; ಮರಾಠಿ ಹೆಚ್ಚು ಬಳಕೆ ಮಾಡುತ್ತಿದ್ದರು. ಅಂದು ನಾನು ಹುಡುಗನಾಗಿದ್ದಾಗ ನನಗೆ ಕನ್ನಡ ಮಾತನಾಡುವುದಕ್ಕೆ ಬರುತ್ತಿದ್ದಿತು. ತಿಳಿಯುತ್ತಿದ್ದಿತು. ಆದರೆ ಓದುವುದಕ್ಕೆ – ಬರೆಯುವುದಕ್ಕೆ ಬರುತ್ತಿರಲಿಲ್ಲ. ಈ ಅಭಾವವನ್ನು ನಮ್ಮ ಮಾಸ್ತರ ಅವರು ನಿವಾರಿಸಿ ಬಿಟ್ಟರು. ಲಕ್ಷ್ಮಣಪ್ಪ ಬೇಲೂರ ಅವರು ಅಂತಃಕರಣ ಹೃದಯದವರು. ವಿದ್ಯಾರ್ಥಿಗಳನ್ನು ಬಹಳ ಹಚ್ಚಿಕೊಳ್ಳುತ್ತಿದ್ದರು. ತಮ್ಮ ಹೊಟ್ಟೆಯ ಮಕ್ಕಳಂತೆ ಪ್ರೀತಿ ಮಾಡುತ್ತಿದ್ದರು. ನನ್ನನ್ನು ಅವರು ತಮ್ಮ ಮಗನಂತೆ ಕಂಡರು. ನಾನು ಶಾಲೆ ಬಿಟ್ಟ ಮೇಲೆ ಅವರ ಮನೆಗೆ ಹೋಗುತ್ತಿದ್ದೆ, ಮೊದಲಿಗೆ ತಿನ್ನಲು ಏನಾದರೂ ಒಂದಿಷ್ಟು ಕೊಡುತ್ತಿದ್ದರು. ಅನಂತರ ಪಾಠ ಪ್ರಾರಂಭ ಮಾಡುತ್ತಿದ್ದರು. ಎರಡು ವರುಷಗಳ ಅವಧಿಯಲ್ಲಿ ನಾನು ಕನ್ನಡವನ್ನು ಚೆನ್ನಾಗಿ ಕಲಿತುಕೊಂಡೆನು. ಅದರಿಂದ ನಮ್ಮ ಮಾಸ್ತರರಿಗೆ ಬಹಳ ಸಂತೋಷವಾಯಿತು".

ಬಾಬುರಾವ ಅವರ ದಾಂಪತ್ಯ ಜೀವನವು ಅತ್ಯಂತ ಸಮರಸದ ಜೀವನ. ಅವರ ಪತ್ನಿ ಕೊಂಡಾಬಾಯಿ ಅವರು ಪತಿಯ ಕಲಾ ಸೇವೆಯಲ್ಲಿ ಭಾಗಿಯಾಗುತ್ತಾ ಬಂದವರು. ನಾವು ಹೋದಾಗ ಅವರಿಂದ ಅವರದೆ ಒಂದು ಹಾಡು ಹಾಡಿಸಿದೆವು. ಆಗ ಬಾಬುರಾವ ಅವರು ವಯಸ್ಸಿನ ಕಾರಣದಿಂದ ಹಾಡಿನ ಸಾಲುಗಳು ಹಿಂದೆ–ಮುಂದೆ ಮಾಡಿ ಹಾಡಿದರು. ಆಗ ಅಲ್ಲಿಯೇ ಇದ್ದ ಕೊಂಡಾಬಾಯಿ ಅವರು ಅದನ್ನು ಸರಿಪಡಿಸಿ ಹಾಡಿ ತೋರಿಸಿದರು. ಕೊಂಡಾಬಾಯಿ ಅವರಿಗೆ ಇಂದು ಅರವತ್ತೆಂಟರ ವಯಸ್ಸು. ಪತಿಯ ಬಾಳ ಹಾದಿಯಲ್ಲಿ ಬಾಳ ಸಂಗಾತಿಯಾಗುವುದರೊಂದಿಗೆ ಅವರ ಕಲೆಯ ಸಂಗಾತಿಯಾಗಿಯೂ ನಡೆದು ಬಂದಿದ್ದಾರೆ. ಈ ದಂಪತಿಗಳಿಗೆ ಇಬ್ಬರು ಹೆಣ್ಣು ಮಕ್ಕಳು ಮಾತ್ರ ಇದ್ದಾರೆ.

ಬಾಬುರಾವ ದಂಪತಿಗಳು ದೈವೀ ಭಕ್ತರು. ಅವರ ಮನೆಯ ಆರಾಧ್ಯ ದೇವತೆ ಅಂಬಾಭವಾನಿ. ಬಾಬುರಾವ ಅವರು ಹಲವಾರು ಗೊಂದಲದ ಪದ್ಯಗಳನ್ನು ಬರೆದಿದ್ದಾರೆ. ದೇವಿ ಸ್ತುತಿ ಪರವಾದ ಪದ್ಯಗಳನ್ನು ಬರೆದಿದ್ದಾರೆ. ಹೀಗೆ ರಚಿಸುತ್ತಲೆ ಅವರ ಲೇಖನಿಯಿಂದ ಹಲವು ತತ್ತ್ವಪದಗಳೂ ಮೂಡಿಬಂದಿವೆ. ಅವರು ತಮ್ಮ ತತ್ತ್ವಪದಗಳಿಗೆ ಸ್ವನಾಮ ಮುದ್ರೆ ಹಾಕಿದ್ದಾರೆ. ಕೆಲವೆಡೆಗಳಲ್ಲಿ ಭವಾನಿಯನ್ನು ಸ್ಮರಿಸಿದ್ದಾರೆ. ಬಾಬುರಾವ ಅವರಿಗೆ ಹಲವಾರು ಮಾನ–ಸನ್ಮಾನಗಳು ದೊರಕಿವೆ. ಬೀದರ ಜಿಲ್ಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಮಾರಂಭದಲ್ಲಿ ಅವರನ್ನು ಜಿಲ್ಲಾಧಿಕಾರಿಗಳು

ಸನ್ಮಾನಿಸಿದ್ದಾರೆ. ಬೀದರ ಜಿಲ್ಲಾ ಜಾನಪದ ಸಾಹಿತ್ಯ ಸಮ್ಮೇಳನದಲ್ಲಿ ಅವರನ್ನು ಗೌರವಿಸಲಾಗಿದೆ. ಬೀದರ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಾಬುರಾವ ಅವರನ್ನು ಗೌರವಿಸಿದೆ. ಅವರ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ಎಂತಹ ಗುರುವು

ಎಂತಹ ಗುರುವು ನನಗೆ ತೋರಿದ
ಶಾಂತ ಮೂರುತಿವೀತನೆ ॥ ಪ ॥

ಮನದ ನೆನವು ಒಬ್ಬಳ ಮಾಡಿ
ನಿಜದಿ ನಿಲಿಸಂತ ಹೇಳಿದನು
ಮನದ ಕರ್ಮ ಕಡಿದು ಹಾಕಿ
ಸ್ಥಿರವಾಗಿಸೆಂದು ಬೋಧಿಸಿದನು ॥ ೧ ॥

ಉನ್ಮನಿ ಸ್ಥಳದ ಬೆಳಕಿನಲ್ಲಿ
ಕಾಲದ ಕತ್ತಲಿ ಹರಿದನು
ದೋಷ–ಪಾಶ ಕಳೆದನು
ಭ್ರಾಂತಿ ಜಾಲ ಜರಿದನು ॥ ೨ ॥

ಬದೀಲಿ ಬಾಯೆಂದು ಕರೆದು ಎನ್ನನು
ಮೇಲ ಕೀಲವ ತೋರಿದನು
ಬ್ರಹ್ಮ ರಂಧ್ರದ ಬೆಳಕಿನಲ್ಲಿ
ಜಲ್ಮ ಕೀಲವ ತೋರಿದನು ॥ ೩ ॥

ಕಾಲ – ಶೂಲವ ಗೆಲಿದನು
ಮ್ಯಾಲ ಏರಿಸಿ ನಿಲಿಸಿದನು
ಲೀಲಾ ತೋರುತ ಮುಂದೆ ಬಂದನು
ಎಂತಹ ಗುರುವು ಎನಗೆ ತೋರಿದನು ॥ ೪ ॥

ಸಮರ್ಥ ಗುರುವಿನ ಪಾದ ಹಿಡಿದರೆ
ಮರ್ತ್ಯವು ಕಡಿಗೆ ಹೋಗುವುದು
ಕರ್ತ ಗುರು ಮಹಿಮೆ ಹಾಡಿದರೆ
ಮಾಯಾ ಜಾಲ ಸುಟ್ಟು ಬಿಡುವುದು ॥ ೫ ॥

ಧರಿಯೊಳು ಮೆರೆಯುವ ಹಿಪ್ಪಳಗಾಂವ
ಮೆರೆವ ಅಂಬಾಭವಾನಿ ಕಾವ
ಅರಿಯಬೇಕ್ರಿ ಗುರುವಿನ ಕೀಲ
ಆಗುತಾದ ಜೀವನ ಸೇಲ ॥ ೬ ॥

ಬೇಗ ಎಚ್ಚರಾಗು

ತಮ್ಮಾ ಬೇಗದಿಂದಲಿ ಎಚ್ಚರಾಗು
ಒಮ್ಮಾ ಬಂದೀದಿ ಜನ್ಮದ ಜಂಜಡ ನೀಗು ॥ ಪ ॥

ಮನುಷ್ಯ ಜನ್ಮವ ಸಿಗುತದ ಒಮ್ಮೆ
ದಿನವೆಲ್ಲ ಮಲಗಿದರ ಹ್ಯಾಂಗೋ ಸುಮ್ಮಾ
ಎದ್ದೇಳ ಬೇಕಪ್ಪಾ ತಮ್ಮಾ
ಜಲ್ಮದ ಜಾತಕ ತಿಳಿದು ನೋಡ ಬೇಕೊಮ್ಮಾ ॥ ೧ ॥

ತಾಯಿ ಗರ್ಭದಾಗ ಬೆಂದಿ
ಮಾಯಿಗೆ ಸಿಲುಕೀನೀ ಅಂದಿ
ನೀನು ಯಾರ ಧ್ಯಾನ ಮಾಡಿದಿ ಅವಾಗ
ಯಾರು ಕಳವ್ಯಾರ ಭೂಮೀಗಿ ನಿನಗ ॥ ೨ ॥


ಮರತು ಕುಂತಿ ಭವದೊಳಗ
ಮಾಯಾ – ಮೋಹದ ಪಂಜರದೊಳಗ
ಇದಿಮಾಯಿ ಬರುತಾದೋ ಹಾದ್ಯಾಗ
ನಿನಗ ನುಂಗಿ ಹಾಕೋತಾದ ಹೊಟ್ಯಾಗ ॥ ೩ ॥

ಒಳ್ಳೆಯ ಪ್ರಾಯ ಅಂದಿ
ಹೊಲಸಿನಾಗ ಬಿದ್ದಿ ನೀ ಕೆಟ್ಟ ಹಂದಿ
ಗಂಜಳವನು ತಿಂದಿ
ಶಿವರುಚಿ ತಿಳಿದಿಲ್ಲ ಅಂತಂದಿ ॥ ೪ ॥

ಎಚ್ಚರಾಗದರೊಳಗ
ಮತ್ತ ಕತ್ತಲ ಕವಿತಾದ
ಎದ್ದೇಳು ಹುಚ್ಚ ಮಂಗ
ಬಿದ್ದೀದ್ಯಾಕ ಹೀಂಗ? ॥ ೫ ॥

ಧರಿಯೊಳು ಹಿಪ್ಪಳಗಾಂವ
ಅಂಬಾಭವಾನಿ ಹಾಳವ್ವ
ನಿದ್ದಿಲೇ ಏಳವ್ವ
ಶುದ್ಧಿಲೇ ಪಾದವ ಹೊಂದವ್ವ ॥ ೬ ॥

(ಈ ವಿವರಗಳನ್ನು ಸ್ವತಃ ಕವಿಯೇ ನೀಡಿದ್ದಾರೆ.)




ಬಾಬುರಾವ ವಾಗ್ಮರೆ ಅವರ ಮನೆ (ಹಿಪ್ಪಳಗಾಂವ).



ಬಾಬುರಾವ.




ತತ್ತ್ವಪದ ಹಾಡುತ್ತಿರುವ ಬಾಬುರಾವ



ಬಾಬುರಾವ ದಂಪತಿಗಳು (ಪತ್ನಿ ಕೊಂಡಾಬಾಯಿ).



ಬಾಬುರಾವ ದಂಪತಿಗಳು ತಮ್ಮ ಮೊಮ್ಮಕ್ಕಳೊಂದಿಗೆ.



ಬಾಬುರಾವ ಅವರ ಆರಾಧ್ಯ ದೇವತೆ ಭವಾನಿ ಮಂದಿರ (ಹಿಪ್ಪಳಗಾಂವ).

೧೫. ನಾಗಪ್ಪ ಬಾಳಪ್ಪ (ಕ್ರಿ.ಶ.ಸು ೧೯೩೫–೨೦೦೯)

ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಬರುವ ತುಳಜಾಪುರ ಗ್ರಾಮವು ಪ್ರಸಿದ್ಧವಾಗಿರುವುದು ಅಲ್ಲಿನ ಅಂಬಾಭವಾನಿಯ ಮಂದಿರ ಮತ್ತು ಅಂಬಾಭವಾನಿಯ ಭಕ್ತರಾಗಿ ತತ್ತ್ವಪದಗಳನ್ನು ಬರೆದು; ಹಾಡಿ ಇಂದು ಭೌತಿಕವಾಗಿ ಇಲ್ಲವಾಗಿರುವ ನಾಗಪ್ಪ ಬಾಳಪ್ಪ ಅವರಿಂದ.

ಇಂದು ತುಳಜಾಪುರ ಗ್ರಾಮದಲ್ಲಿ ಅವರ ವಂಶಸ್ಥರು, ಅದರಲ್ಲೂ ಅವರ ಎರಡನೆಯ ಮಗ ಜಗನ್ನಾಥನು ತನ್ನ ಸಂಸಾರದೊಂದಿಗೆ ಬದುಕುತ್ತಿರುವನು. ನಾಗಪ್ಪನವರ ಆಗಿನ ಪರಿಸ್ಥಿತಿಯಾಗಲಿ ಅಥವಾ ಈಗಿನ ಪರಿಸ್ಥಿತಿಯಾಗಲಿ, ಆರ್ಥಿಕ ದೃಷ್ಟಿಯಿಂದ ಬಡತನದ ಸ್ಥಿತಿಯೆಂದು ಹೇಳಬಹುದು.

ದಲಿತ ಕುಟುಂಬದ ಬಾಳಪ್ಪ ಪರಿಜನ ಅವರು ಕೃಷಿ ಕೆಲಸ, ಕೂಲಿಯಾದಿಗಳನ್ನು ನಂಬಿ ಜೀವನ ಸಾಗಿಸುತ್ತಿದ್ದರು. ಬಾಳಪ್ಪನವರಿಗೆ ಶಕ್ತಿ ದೇವತೆಯಲ್ಲಿ ನಂಬುಗೆ. ಊರಿನ ಆರಾಧ್ಯ ದೇವತೆ ಅಂಬಾಭವಾನಿಯನ್ನು ಅವರು ಭಕ್ತಿ ಭಾವದಿಂದ ನಡೆದುಕೊಳ್ಳುತ್ತಿದ್ದರು. ಅಂಬಾಭವಾನಿ ಭಜನೆ ಮಾಡುತ್ತಿದ್ದರು. ಪ್ರತಿ ಶುಕ್ರವಾರ ಅವರು ದೇವಿ ಹೆಸರಿನಲ್ಲಿ ಉಪವಾಸ ಮಾಡುತ್ತಿದ್ದರು. ಈ ದೈವೀ ಭಕ್ತಿಯು ಮುಂದಿನ ತಲೆಮಾರಿಗೂ ವರ್ಗವಾಯಿತು.

ನಾಗಪ್ಪನವರ ತಂದೆಯ ದೈವೀ ಭಕ್ತಿಯು ನಾಗಪ್ಪನವರಲ್ಲಿ ವಿಸ್ತೃತವಾಯಿತೆನ್ನಬೇಕು.

ನಾಗಪ್ಪನ ತಾಯಿ ಶಿವಮ್ಮ. ಅವಳಿಗೂ ದೇವಿಯಲ್ಲಿ ಭಕ್ತಿ. ಮಹಾನವಮಿಯ ಸಂದರ್ಭದಲ್ಲಿ ಅವಳು ಒಂಬತ್ತು ದಿನಗಳ ಕಾಲ ಉಪವಾಸವೇ ಇದ್ದು ದೇವಿಯ ದೀಪದ ಆಚರಣೆ ನಡೆಸುತ್ತಿದ್ದಳು. ಏನೆಲ್ಲ ಭಕ್ತಿಯಿಂದ ನಡೆದುಕೊಂಡರೂ ದೇವಿ ಬಾಳಪ್ಪನವರ ಕುಟುಂಬವನ್ನು ಆರ್ಥಿಕವಾಗಿ ಮೇಲೆತ್ತಲೇ ಇಲ್ಲ. ಈ ಕೊರಗು ಅವರನ್ನು ಕಾಡಲಿಲ್ಲ, ಅವರ ದೃಷ್ಟಿಯಲ್ಲಿ ದೈವೀಭಕ್ತಿಯೆಂಬುದು ಹೊಲದಲ್ಲಿ ಮಾಡುವ ಕೂಲಿ ಕೆಲಸವಾಗಿರಲಿಲ್ಲ. ಈ ಮಾತನ್ನು ಇಂದು ಅವರ ಸಂತತಿಯವರಾದ ಜಗನ್ನಾಥ ಹೇಳುತ್ತಾರೆ. ಮುಗ್ಧ ಭಕ್ತರು; ಮುಗ್ಧ ಭಕ್ತಿ, ಅದರಲ್ಲಿಯೇ ಅವರಿಗೆ ಹೆಚ್ಚಿನ ನೆಮ್ಮದಿ, ಶಾಂತಿ, ಸಮಾಧಾನ. ಇಂತಹ ಕುಟುಂಬದಲ್ಲಿ ನಾಗಪ್ಪನವರು ಕ್ರಿ.ಶ. ೧೯೩೫ರ ವರ್ಷದಲ್ಲಿ ಹುಟ್ಟಿದರು.

ನಾಗಪ್ಪನವರು ಶಾಲೆಗೆ ಹೋದುದು ಆಕಸ್ಮಿಕವೆ, ಮೊದಲಿಗೆ ದನ ಕಾಯಲು ಹೋಗುತ್ತಿದ್ದರು. ಊರಿನ ಶಾಲೆಯ ಮಾಸ್ತರ ನರಸಪ್ಪ ಎಂಬುವರು ಹುಡುಗನಲ್ಲಿಯ ಚುರುಕು ಬುದ್ಧಿಯನ್ನು ಗಮನಿಸಿ, ತಂದೆ ಬಾಳಪ್ಪನ ಮನವೊಲಿಸಿ ಶಾಲೆಯ ಅಂಗಳಕ್ಕೆ ಕರೆತಂದರು. ನಾಗಪ್ಪನವರು ಆರನೆಯ ತರಗತಿಯವರೆಗೆ ಓದಿದರು. ಮರಾಠಿ, ಕನ್ನಡ, ಹಿಂದಿ ಭಾಷೆಗಳನ್ನು ಸರಿಯಾಗಿಯೆ ಕಲಿತುಕೊಂಡರು.

ನಾಗಪ್ಪನವರು ಕನ್ನಡದ ಪದಗಳನ್ನು ಹಾಡಲು ಆರಂಭಮಾಡಿದರು. ಪಾಂಡುರಂಗ ವಿಠ್ಠಲನ ಅಭಂಗಗಳನ್ನು ಹಾಡುತ್ತಿದ್ದರು. ಶಿವಭಜನೆಯಲ್ಲಿ ಅವರದು ಎತ್ತಿದ ಕೈ.

ನಾಗಪ್ಪನವರದು ಒಂದು ರೀತಿಯಲ್ಲಿ ದೊಡ್ಡ ಕುಟುಂಬವೇ ಆಗಿದ್ದಿತು. ಹೆಂಡತಿ ದೊಂಡಾಬಾಯಿ ಗಂಡನೊಡನೆ ಹೊಲದ ಕೆಲಸಕ್ಕೆ ಹೋಗುತ್ತಿದ್ದಳು. ಮೂವರು ಗಂಡು–ಇಬ್ಬರು ಹೆಣ್ಣು ಮಕ್ಕಳು. ಮೊದಮೊದಲಿಗೆ ನಾಗಪ್ಪನವರು ಕೂಲಿ–ಕೃಷಿಯ ಕೆಲಸಗಳನ್ನು ಮಾಡಲೆಂದು ಹೋಗುತ್ತಿದ್ದರು. ದಿನ ಕಳೆದಂತೆ ಅವರು ಭಜನೆ–ಹಾಡುಗಾರಿಕೆಯ ಪ್ರವೃತ್ತಿಯಲ್ಲಿ ಹೆಚ್ಚಾಗಿ ಮುಳುಗಿ ಹೋದರು. ಬೇರೆ–ಬೇರೆ ಗ್ರಾಮಗಳಿಂದ ಅವರಿಗೆ ಕರೆಗಳು ಬರತೊಡಗಿದವು. ಹೀಗಾಗಿ ಅವರಿಗೆ ಕೆಲಸಕ್ಕೆ ಹೋಗುವ ಅವಕಾಶ ಸಿಕ್ಕದಾಯಿತು. ಭಜನೆಯಿಂದ ಬಂದ ಉತ್ಪನ್ನದಲ್ಲಿಯೇ ಜೀವನದ ನಿರ್ವಹಣೆ ನಡೆಸತೊಡಗಿದರು. ಕೀರ್ತಿಯೆನೋ ಸಾಕಷ್ಟು ಬರತೊಡಗಿತು. ಆರ್ಥಿಕ ಸ್ಥಿತಿಯು ಅಷ್ಟಕ್ಕಷ್ಟೇ ಉಳಿಯಿತು. ಆದರೂ ನಾಗಪ್ಪನವರು ಹಣಕ್ಕೆ ಆಶೆ ಮಾಡಿದವರಲ್ಲ "ದೇವಿ ಎಷ್ಟು ಕೊಡುತ್ತಾಳೋ ಅಷ್ಟೆ ಸಾಕು" ಎನ್ನುತ್ತಿದ್ದರು.

ನಾಗಪ್ಪನವರಿಗೆ ಹಲವಾರು ಕಡೆಗಳಲ್ಲಿ ಸನ್ಮಾನಗಳು ಜರುಗಿವೆ. ಮಠ–ಮಾನ್ಯದವರು ಕರೆದು ಗೌರವಿಸಿದ್ದಾರೆ. "ಅವನೊಬ್ಬ ಅತ್ಯುತ್ತಮ ಕಲಾವಿದ, ಹಾಡುಗಾರ, ಕವಿಯೆಂಬ" ಹೆಗ್ಗಳಿಕೆ ಜನತೆಯ ನಾಲಿಗೆಯ ನುಡಿಯಾಗಿ ಇಂದಿಗೂ ನಿಂತುಕೊಂಡಿದೆ. ಕರ್ನಾಟಕ ಸರಕಾರವು ಕಲಾವಿದರಿಗೆ ಕೊಡುವ ಮಾಶಾಸನವು ನೀಡುತ್ತಿದ್ದಿತು. ಏಳುವರೆ ದಶಕಗಳ ಕಲಾ ಬದುಕನ್ನು ಸಾರ್ಥಕವಾಗಿ ಬದುಕಿದ ನಾಗಪ್ಪ ದಿ:೩೦.೧೦.೨೦೦೯ರಂದು ಇಹಲೋಕ ತ್ಯಜಿಸಿದರು. ನಾಗಪ್ಪನವರು ರಚಿಸಿದ ಹಾಡುಗಳ ಸಾಹಿತ್ಯ ಇಂದು ಜನರ ಮನದ ಮೇಲೆ ತನ್ನ ಪರಿಣಾಮವನ್ನು ಬೀರುತ್ತ ನಿಂತುಕೊಂಡಿದೆ. ಅವರು ಹಲವಾರು ತತ್ತ್ವಪದಗಳನ್ನು ರಚಿಸಿದರು. ಇಲ್ಲಿ ಎರಡು ತತ್ತ್ವಪದಗಳನ್ನು ಕೊಡಲಾಗಿದೆ:

ಜಲ್ದಿ ಮಾಡಬೇಕಾ ಬಾಜಾರ

ಜಲ್ದಿ ಮಾಡಬೇಕಾ ಬಾಜಾರ
ಜರೆದು ಹೋಗಬ್ಯಾಡ ಸಂಸಾರ ॥ ಪ ॥

ಹೊಳ್ಳಿ ನೋಡಬ್ಯಾಡ ಮಳ್ಳನಂಗ
ನೆಳ್ಳ ನೋಡಿ ಅಂಜಬ್ಯಾಡ ಮಂಗಾ
ಕಳ್ಳನಂಗ ಕಂಡೀತ ಕಂಬ
ಹಗ್ಗಕ ನೀ ಹಾವಂದಿ ಭಂಗಾ ॥ ೧ ॥

ಹೊತ್ತ ನೆತ್ತಿಯ ಮ್ಯಾಲ ಬಂದಾದ
ನಿನ್ನ ಕಾಲಾನ ಬಿಸಲ ದೂರ ಸರದಾದ
ಯಾವಾಗ ಸೂರ್ಯ ಮುಳಗತಾನ ಗೊತ್ತಿಲ್ಲ
ನೀ ಬೇಗ ವ್ಯಾಪಾರ ಮುಗಿಸು ಬರ್ತಾದ ಕತ್ತಲಾ ॥ ೨ ॥

ನೆಗಡಿ ಬಂದಿತಂದಿ ತಮ್ಮಾ
ಗೊಂಗಡಿಯಾಕ ತಂದಿ
ಹೊಚ್ಚುಗೊಂಡಿ ಮಕ್ಕೊಳಕೆ ಜಾಗಿಲ್ಲಣ್ಣಾ
ಮುಗಿಸು ಬ್ಯಾಗ ಖರೀದಿಯಣ್ಣಾ ॥ ೩ ॥

ಏನೇನು ಖರೀದಿ ಮಾಡಬೇಕಂತಿ
ಕೈಯಾಗ ಎಟ್ಟು ರೊಕ್ಕ ಐತಿ ?
ರೊಕ್ಕ ನೋಡಿ ನೀ ಯಾಪಾರ ಮಾಡು
ಹೊತ್ತ – ಹೊತ್ತಿಗಿ ನೀ ಸಂತಿಯ ಮಾಡು ॥ ೪ ॥

ದುರಳರು ಐದು ಮಂದಿ ಮಹಾಬೆರಕಿ
ಮರಳ ಮಾಡುವರು ನಿನ್ನ ಕೆದಕಿ
ಕರೆವರು ಬಾಯೆಂದು ಸನಿಹಕ್ಕ
ಮರಳಾಗಬ್ಯಾಡ ಅವರ ವಚನಕ್ಕ ॥ ೫ ॥

ಧರಿಯೊಳು ಮೆರಿತಾದ ತುಳಜಾಪುರ ಗ್ರಾಮ
ಮೆರೆವಳು ತಾಯಿ ಅಂಬಾಭವಾನಿಯಮ್ಮ
ಕ್ಷೇಮದಿ ಮಾರ ಹೋಗು ತಮ್ಮಾ
ಪಾದಕ ತಲಿಬಾಗೋ ಒಮ್ಮಾ ॥ ೬ ॥

ಅಡಗಿ ಮಾಡಿದೆ ಗುರುವೀಗಿ

ಅಡಗಿ ಮಾಡಿದೆ ನಮ್ಮ ಗುರುವೀನ ಊಟಕ್ಕ
ಮಡಕಿಯಲಿ ಮಡಿಮಾಡಿ ಇಟ್ಟೇನ ಅಷ್ಟಕ್ಕ ॥ ಪ ॥

ಕುಂಬಾರ ಮಾಡಿದ ಮಣ್ಣೀನ ಮಡಕಿ
ಅಂಬರದ ಮ್ಯಾಲ ಇಲ್ಲವ್ವ ಸಮ ಅದಕ
ಅದರಾಗ ಇಟ್ಟಾನ ಏನೇನೋ ಇಚಾರ
ಎಂಥ ಚಂದ ಮಾಡ್ಯಾನ ಚಿತ್ತಾರದ ಕುಸರ ॥ ೧ ॥

ದೇಹದ ಮಡಿಕ್ಯಾಗ ಮಡಿಗ್ಯಾನ ಶಿವನು
ಪಂಚ ತತ್ತ್ವಗಳು ಅದರಲ್ಲೆ ಇಟ್ಟಿರುವನು
ಸದು ವಸ್ತುವಿನ ಅಡಗಿಯನು ಮಾಡುತಲಿ
ಮೋದದಲ್ಲಿ ಗುರುರಾಯಗ ನೀಡುತಲಿ ॥ ೨ ॥

ಪಿಂಡದ ಗಡಗಿ, ಬ್ರಹ್ಮಾಂಡದ ಅಡಗಿ
ಮಂಡಲದ ಗಡಗಿ ಅದರಾಗ ಚಿತ್ಪಿಂಡವ ಅಡಗಿ
ತನ್ಮಾತ್ರಿ ಅಲ್ಲಿ, ಚಿನ್ಮಾತ್ರಿ ಅಲ್ಲಿ
ಚಿದ್ರಸವ ಕೂಡಿಸಿ ಮಾಡೀನಿ ಅಡಗಿ ॥ ೩ ॥


ದೇಶದೊಳಗ ಲೇಸುಳ್ಳ ತುಳಜಾಪುರ
ತಾಯಿ ಅಂಬಾಭವಾನಿ ನೆಲಸ್ಯಾಳೋ ಭರಪೂರ
ಕಾಯದ ನೇವಿದ್ಯ ಅರ್ಪಿಸಣ್ಣ ಪಾರಾ
ಅಡಗಿ ಮಾಡಿ ಉಣಿಸು ಗುರುವೀಗಿ ಧೀರಾ ॥ ೪ ॥


(ಕವಿಗಳ ಮಗ ಜಗನ್ನಾಥ ಅವರು ಈ ವಿವರಗಳನ್ನು ನೀಡಿದ್ದಾರೆ.)



ನಾಗಪ್ಪ
ಅವರ ಮನೆ
(ತುಳಜಾಪುರ).

ನಾಗಪ್ಪನವರು ತಮ್ಮ
ಮೊಮ್ಮಕ್ಕಳೊಂದಿಗೆ.





ನಾಗಪ್ಪನವರು ಪೂಜಿಸುತ್ತಿದ್ದ
ದೇವಿ ಸ್ಥಳ.



ನಾಗಪ್ಪನವರ ಪತ್ನಿ
ದೊಂಡಾಬಾಯಿ.




ನಾಗಪ್ಪನವರ ಮಗ
ಜಗನ್ನಾಥ.




ಗುಡ್ಡದ ಮೇಲಿನ ಅಂಬಾಭವಾನಿ ದೇವಾಲಯದ ನೋಟ (ನಾಗಪ್ಪನವರ ಆರಾಧ್ಯ ದೇವರು).



ಅಂಬಾಭವಾನಿ ದೇವಾಲಯ (ತುಳಜಾಪುರ).



ಅಂಬಾಭವಾನಿ ದರ್ಶನ ಪ್ರತಿಮೆ.



ದೇವಾಲಯದ ಒಳಾಂಗಣ ನೋಟ.

೧೬. ವಿಠ್ಠಲ ಪೂಳೆ (ಕ್ರಿ.ಶ.ಸು. ೧೯೪೦)

ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಬರುವ ಜಿರಗಾ(ಬಿ) ಗ್ರಾಮವು ವಿಠ್ಠಲ ಪೂಳೆ ಅವರ ಸ್ವಗ್ರಾಮವಾಗಿದೆ. ಈಗ ವಿಠ್ಠಲ ಅವರಿಗೆ ಎಪ್ಪತ್ತರ ವಯಸ್ಸು. ಅವರು ತಮ್ಮ ವಯಸ್ಸನ್ನು ಮೀರಿನಿಂತು ಗ್ರಾಮದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಲಿದ್ದಾರೆ.

ವಿಠ್ಠಲ ಅವರ ತಂದೆ ನರಸಪ್ಪ. ತಾಯಿ ಪೀರವ್ವ. ಈ ದಂಪತಿಗಳಿಗೆ ವಿಠ್ಠಲ ಮಗನಾಗಿ ಕ್ರಿ.ಶ.ಸು. ೧೯೪೦ರಲ್ಲಿ ಜನಿಸಿದರು. ಅವರಿಗೆ ಬಾಲ್ಯದಲ್ಲಿ ಶಾಲೆಗೆ ಹೋಗುವ ಅವಕಾಶ ದೊರೆಯಲಿಲ್ಲ. ಆದರೆ ಹಿರಿಯರ ಸತ್ಸಂಗದಲ್ಲಿ ಒಂದಿಷ್ಟು ಅಕ್ಷರಭ್ಯಾಸ ಮಾಡಿದರು. ಹೀಗಾಗಿ ಅವರು ತಕ್ಕ ಮಟ್ಟಿಗೆ ಕನ್ನಡ ಓದುತ್ತಾರೆ ಮತ್ತು ಬರೆಯ ಬಲ್ಲವರಾಗಿದ್ದಾರೆ. ಈ ಬಗೆಗೆ ಅವರೆ ಹೇಳುವ ಮಾತುಗಳನ್ನು ಕೇಳಬೆಕು: "ನಾನು ಹದಿನೈದು–ಹದಿನಾರುವರ್ಷ ವಯಸ್ಸಿನ ವರೆಗೂ ದನಗಳನ್ನು ಕಾಯುತ್ತ ದಿನಗಳನ್ನು ಕಳೆದೆನು; ನಮ್ಮ ತಂದೆಯೊಂದಿಗೆ ಹೊಲದ ಕೆಲಸಕ್ಕೆ ಹೋಗುತ್ತಿದ್ದೆನು. ಅಲ್ಲಿ ನಮ್ಮ ತಂದೆ ನನಗೆ ದನಗಳನ್ನು ನೋಡಿಕೊಳ್ಳಲು ಹಚ್ಚುತ್ತಿದ್ದರು. ಒಂದು ಸಲ ಊರಿಗೆ ಶ್ರೀ ಮಂಡಲದಿಂದ ತಿಪ್ಪಣ್ಣಪ್ಪನೆಂಬ ಸತ್ಪುರುಷರು ಬಂದರು. ಅವರು ನನ್ನ ಕಣ್ಣಿನಲ್ಲಿ ಪರಮ ಸತ್ಪುರುಷರೆ ಆಗಿದ್ದರು. ಅವರು ಭಕ್ತಿಯ ಗೀತೆಗಳನ್ನು ಅತ್ಯಂತ ತನ್ಮಯರಾಗಿ ಹಾಡುತ್ತಿದ್ದರು. ಅವರ ಹಾಡು ಕೇಳಿದರೆ ಜನತೆ ಭಕ್ತಿಯಿಂದ ತಲೆದೂಗುತ್ತಿದ್ದರು. ಅಂತಹ ಹಾಡುಗಾರಿಕೆ ಮತ್ತು ಭಕ್ತಿ. ನಾನು ತಿಪ್ಪಣ್ಣಪ್ಪನವರಿಂದ ಆಕರ್ಷಿತನಾದೆನು. ಅವರ ಪಾದಗಳ ಮೇಲೆ ಹೋಗಿ ತಲೆಯಿಟ್ಟು ನಮಸ್ಕರಿಸಿದೆನು. ತಿಪ್ಪಣ್ಣಪ್ಪ ಅವರು ನನ್ನ ತಲೆಯ ಮೇಲೆ ಕೈ ಇಟ್ಟರು. ನಾನು ಅವರನ್ನು ಕುರಿತು ಹಾಡು ಕಲಿಸುವಂತೆ ಕೇಳಿದೆನು. ಅದಕ್ಕೆ ಅವರು "ನೀನು ಶಿಷ್ಯನಾಗುತ್ತಿಯ" ಎಂದು ಕೇಳಿದರು. "ಆಗಲಿ, ನಾನು ನಿಮ್ಮ ಶಿಷ್ಯನಾಗುತ್ತೇನೆ" ಎಂದೆನು. ಅಂದಿನಿಂದ ಅವರು ನನಗೆ ಗುರುಗಳಾದರು. ನಾನು ಅವರಿಗೆ ಪರಮ ಶಿಷ್ಯನಾದೆನು. ಹಲವಾರು ವರ್ಷಗಳ ಕಾಲ ಅವರ ಸೇವೆಯಲ್ಲಿ ನನ್ನ ಬದುಕು ಕಳೆದು ಪಾವನನಾಗಿದ್ದೇನೆ. ಅವರ ದಯೆಯಿಂದ ನನಗೆ ಕನ್ನಡ ಓದುವುದಕ್ಕೆ; ಬರೆಯುವುದಕ್ಕೆ ಬರತೊಡಗಿತು. ಅವರ ಬಳಿಯಲ್ಲಿ ನಿಜಗುಣರ ಶಾಸ್ತ್ರದ ಪುಸ್ತಕಗಳಿದ್ದವು.

ತಮ್ಮ ಸುತ್ತ-ಮುತ್ತಲು ಕುಳಿತ ಭಕ್ತರಿಗೆ ಅವುಗಳನ್ನು ಓದಿ ಹೇಳುತ್ತಿದ್ದರು. ನಿಜಗುಣರ ಹಾಡುಗಳನ್ನು ತಿಪ್ಪಣ್ಣನವರು ಹಾಡುತ್ತಿದ್ದರು. ಅವುಗಳಲ್ಲಿ ಕೆಲವು ಹಾಡುಗಳನ್ನು ನಾನು ಕಲಿತುಕೊಂಡೆನು. ನನಗೂ ಹಾಡುವ ಸಾಮರ್ಥ್ಯವು ಗುರುವಿನ ಅಂತಃಕರಣದಿಂದ ಪ್ರಾಪ್ತವಾಯಿತು. ನಂತರ ಸ್ವತಃ ನಾನೇ ಹಾಡುಗಳನ್ನು ಬರೆಯುವುದಕ್ಕೆ ಆರಂಭ ಮಾಡಿದೆನು. ಈಗ ಜನರು ನನಗೆ 'ಕವಿಗಾರ' ಎಂದು ಕರೆಯುತ್ತಾರೆ. ಹಾಗೆ ಜನರು ಕರೆದಾಗಲೆಲ್ಲ ನನಗೆ ಗುರುವಿನ ಉಪಕಾರದ ಸ್ಮರಣೆ ಬರುತ್ತದೆ".

ವಿಠ್ಠಲ ಅವರು ಬಡತನದಿಂದಲೇ ಇಂದು ಬದುಕುತ್ತಿದ್ದಾರೆ. ಅವರ ಹೆಂಡತಿ ಶಿವಗೆಮ್ಮ. ಈ ದಂಪತಿಗಳಿಗೆ ಒಟ್ಟು ಮೂರು ಜನ ಮಕ್ಕಳು. ಅವರಲ್ಲಿ ಎರಡು ಗಂಡು ಮತ್ತು ಒಬ್ಬಳು ಹೆಣ್ಣು ಮಗಳು. ಮನೆಯ ದೇವರು ಅಂಬಾಭವಾನಿ.

ವಿಠ್ಠಲ ಅವರು ದೈವೀ ಭಕ್ತರು. ತಮ್ಮ ಮನೆಯ ದೇವರು ಮತ್ತು ಶಿವನನ್ನು ನಂಬುತ್ತಾರೆ. ತಮ್ಮ ಹಾಡುಗಳಿಗೆ ಈ ಎರಡೂ ಅಂಕಿತಗಳನ್ನು ಇರಿಸಿ ಕೊಂಡಿದ್ದಾರೆ.

ವಿಠ್ಠಲ ಅವರು ತತ್ತ್ವಪದಗಳ ರಚನೆಯೊಂದಿಗೆ ಇನ್ನೂ ಹಲವು ಪ್ರಕಾರದ ಹಾಡುಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಮೋಹರಮ್ ಹಾಡುಗಳು; ಕೋಲಾಟದ ಪದಗಳು; ಡಪ್ಪಿನಾಟದ ಹಾಡುಗಳು, ಗೀಗೀ ಹಾಡುಗಳು ಪ್ರಮುಖವಾದವುಗಳಾಗಿವೆ.

ವಿಠ್ಠಲ ಅವರು ಸ್ವತಃ ನಟರಾಗಿ ತಾರುಣ್ಯದಲ್ಲಿ ಹಲವಾರು ಬಯಲಾಟ; ಡಪ್ಪಿನಾಟಗಳನ್ನು ಮಾಡಿದ್ದಾರೆ. ಅವರು ಆಟಗಳನ್ನು ಕಲಿಸುವ ಮಾಸ್ತರರೂ ಆಗಿದ್ದಾರೆ. ಡಪ್ಪಿನಾಟಗಳನ್ನು ಅವರು ಕಲಿಸಿದ್ದುಂಟು.

ವಿಠ್ಠಲ ಅವರು ತಮ್ಮ ಬದುಕಿನ ನಿರ್ವಹಣೆಗಾಗಿ ಕೂಲಿ ಕೆಲಸವನ್ನೇ ನಂಬಿದ್ದಾರೆ. ದೊಡ್ಡ ಕುಟುಂಬವನ್ನು ತೂಗಿಸುವಲ್ಲಿ ಅವರಿಗೆ ಆಗಾಗ ತೊಂದರೆಗಳು ಎದುರಾಗುತ್ತವೆ. ಬಂದ ತೊಂದರೆಗಳನ್ನು ಅವರು ಕಲೆಯ ಆಸ್ವಾದನೆಯಲ್ಲಿ ತೊಡಗಿ ಮರೆಯುತ್ತಾರೆ.

ವಿಠ್ಠಲ ಅವರು ತಮ್ಮ ಬವಣೆಯ ಬದುಕಿನ ನಡುವೆಯೂ ಪ್ರತಿಭೆಯನ್ನು ಜೀವಂತವಾಗಿ ಉಳಿಸಿಕೊಂಡಿದ್ದಾರೆ. ಆಗಾಗ ತಮಗೆ ತೋಚಿದ ಹಾಡುಗಳನ್ನು ಬರೆಯುತ್ತಲಿರುತ್ತಾರೆ. ಅವರ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ಹೊಂಟೆಲ್ಲೊ ಒಂಟಿ

ಹೊಂಟೆಲ್ಲೊ ಒಬ್ಬಾವ
ಬಂದೆಲ್ಲೊ ಒಬ್ಬಾವ
ನಿನ ಹಿಂದ ಯಾರು ಬಂದಾರು ಜೀವಾ ? ॥ ಪ ॥

ಹೊಡದಾಡಿ ಗಳಿಸಿದಾ ರೊಕ್ಕಾ
ಹಗಲ ರಾತ್ರಿ ಮಾಡಿದಿ ಲೆಕ್ಕಾ
ಗಡಗ್ಯಾಗ ಹಾಕಿ ಮುಚ್ಚಿಟ್ಟಿ ಪಕ್ಕಾ
ಅಡವೀಗಿ ನಡದಾಗ ಬಂತೇನ ಯಕ್ಕಾ ? ॥ ೧ ॥

ನಂದು – ನಿಂದು ಅಂತ ಅಂದಿ
ನಿನ್ನ ಸುತ್ತ – ಮುತ್ತಲಿನ ಜನ ನನ್ನದೆ ಅಂದಿ
ಅಕಡಿ – ಇಕಾಡಿ ಬಂದಾರಿ ಹೊಡದಿ
ಪೂರಾ ನಾಕು ಎಕರೆ ಭೂಮಿ ನನ್ನದೆ ಅಂದಿ ॥ ೨ ॥

ಮೂರಾ ಅಂತಸ್ತದಾ ಮನೆಯ ಕಟ್ಟೀದಿ
ಮೂರಾ ಬಟ್ಟೆ ಆಗಿ ಬಿಟ್ಟು ಹೊಂಟೀದಿ
ಯಾರು ಬರತಾರೋ ನಿನ ಹಿಂದ ಮೂಳಾ
ಮೂರಾ ಅಂತಸ್ತಿನ ಮನಿ ಬಂತೇನು ಹೇಳಾ ॥ ೩ ॥

ಯಾರೀಗಿ ಯಾರಿಲ್ಲ ಜೀವಾ
ಯಾರು ಜೀವಕ್ಕೆ ಜೋಡಿಲ್ಲ ನೋಡಾ
ಯಾರೀಗಿ ಮೇಳಿಲ್ಲ ತಮ್ಮಾ
ನೀ ಲೆಕ್ಕಾ ಹಾಕಿ ನೋಡು ಮನದಾಗ ಒಮ್ಮಾ ॥ ೪ ॥

ಧರಿಯೊಳು ಜಿರಗಾ ಊರಾ
ಮೆರೆವ ದೇವನು ಇರುತಾನ ಸೇಲಾ
ಅವನೆ ನಮಗ ಹಿಂದಾ – ಮುಂದಾ
ಅವನಿಗೆ ಬಿಟ್ಟರ ಗತಿ ಇಲ್ಲಂದಾ ॥ ೫ ॥

ಔರಾದ ತಾಲ್ಲೂಕ \ ೧೩೩

ಮುಳ್ಳೊಂದು ನಟ್ಟಿತ್ತಾ

ಮುಳ್ಳೊಂದು ನಟ್ಟಿತ್ತಲ್ಲಾ
ಕಳ್ಳ ಮಿಳ್ಳೆ ತಿರುಗಿದೆನಲ್ಲಾ ॥ ಪ ॥

ಕೆಟ್ಟ ಕಾಡದಾರ‍್ಯಾಗ
ಅಗಸಗಿತ್ತಿ ದಾರ‍್ಯಾಗ
ಬರಿಗಾಲದಿಂದ ಜೋರ
ನಡೆದು ಮುಳ್ಳ ಮುರಿಸಿಕೊಂಡೆ ॥ ೧ ॥


ಮುಳ್ಳ ಅಂದರ ಮುಳ್ಳ ತಂಗಿ
ಮಳ್ಳ ಬಬ್ಬಲಿ ಮುಳ್ಳ ತಂಗಿ
ಕಾಲ ಸೇರಿ ಬ್ಯಾನಿ ಊರಿ
ಮಾರಿ ಬಡಕೊಂಡು ಅಳುವಂಗಾಯ್ತು ॥ ೨ ॥

ಚೆಟ್ಟಿಮುಳ್ಳ ಕೊಟ್ಟಿ ಮುಳ್ಳ
ಲೊಟ್ಟಿ ಮುಳ್ಳ ಗಟ್ಟಿಮುಳ್ಳ
ತಟ್ ತಟ ಕಾಲ ಹರಿತಿತ್ತು
ವಟವಟ ಜೀವ ವಟಗುಟ್ಟಿತ್ತು ॥ ೩ ॥


ಕಾಲ ಕೊಳೆತು ಹೋಯ್ತು
ಕಿಂವಾ ಆಗಿ ಹೋಯ್ತು
ಬಾತು ಅದು ಹೊಲಸು ನಾತು
ತೂತಾಯ್ತು ಘಾತಾಯ್ತು ॥ ೪ ॥

ಧರಿಯೊಳು ಮುಳ್ಳಿಲ್ಲದ ಜಿರಗಾ ಊರಾ
ಅಂಬಾ ಭವಾನಿ ಗುಡಿಯ ಹಾದಿ ಅಪಾರ
ಆ ಹಾದ್ಯಾಗ ನಡೆಯ ಬೇಕಪ್ಪ
ಮುಳ್ಳಿನ ಬಾಧಿ ನೀಗಬೇಕಪ್ಪಾ ॥ ೫ ॥

(ಈ ವಿವರಗಳನ್ನು ಸ್ವತಃ ಕವಿಗಳೇ ಕೊಟ್ಟಿರುವರು.)



ವಿಠ್ಠಲ ಪೂಲೆ ಅವರ ಮನೆ (ಜೀರ್ಗಾ-ಬಿ).



ವಿಠ್ಠಲ ಪೂಲೆ.



ವಿಠ್ಠಲ ಪೂಲೆ ಅವರ ಪರಿವಾರ.



ವಿಠ್ಠಲ ಪೂಲೆ ಅವರ ಹೆಂಡತಿ ಸೂಗಮ್ಮ.

೧೭. ಶಿವರಾಮ ಭೂತಾಳೆ (ಕ್ರಿ.ಶ.ಸು. ೧೯೪೦)

ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಬರುವ ಕೊಳ್ಳೂರು ಗ್ರಾಮವು ಶಿವರಾಮ ಭೂತಾಳೆ ಅವರ ಸ್ವಗ್ರಾಮವಾಗಿದೆ. ಸಧ್ಯ ಎಪ್ಪತ್ತು ವರುಷಗಳ ವಯಸ್ಸಿನಲ್ಲಿರುವ ಶಿವರಾಮ ಅವರು ಸ್ವತಃ ಹೊಲದ ಕೆಲಸಗಳನ್ನು ಮಾಡುತ್ತಾರೆ. ಹೊಲಕ್ಕೆ ಬೆಳಗಿನಲ್ಲಿಯೆ ಎದ್ದು ಹೋಗುತ್ತಾರೆ. ಅವರಲ್ಲಿ ಇನ್ನೂ ಬತ್ತದ ಜೀವನೋತ್ಸಾಹವಿದೆ. ಅವರನ್ನು ಮಾತನಾಡಿಸಿದಾಗ ಅವರು ಹೀಗೆ ಹೇಳಿದರು: "ಸರ್ ವಯಸ್ಸಾಯಿತು; ವಯಸ್ಸಾಯಿತು ಅಂತಾರ, ನನಗ ತಿಳಿದಂಗ ದೇಹದಾಗಿನ ಶಕ್ತಿ ಯಾವಾಗಾ ಕುಂದಿ ಹೋಗ್ತಾದ ಆವಾಗೆ ವಯಸ್ಸಾದಂಗ. ಹಿನಾ ನನ್ನ ಕೈ–ಕಾಲು ಆಡತಾವ; ನಡಿತಾವು. ಅಂದಾಗ ಅವಕ ಹತ್ತಿ ಇಡಬಾರದು, ಅವುಗಳಿಗೆ ದುಡಿಲಕ್ಕ ಹಚ್ಚಬೇಕು. ಅಂದಾಗೆ ಮನುಷ್ಯ ಆರಾಮಾಗಿ ಇರ್ತಾದ್ರಿ. ಇಲ್ಲಾ ಅಂದ್ರ ಮೂಲಿ ಗುಂಪಾಗಿ ಬಿಳ್ತಾದ್ರಿ. ನಾನು ನಸಿಕಿನಾಗೆ ಎಳ್ತೀನ್ರಿ, ಹೆಂಡಿಕಸಾ ಮಾಡ್ತೀನ್ರಿ, ನಾಕೈದು ಕೊಡಾ ನೀರ ತರತೀನ್ರಿ, ಮೈ ಮ್ಯಾಲ ಎರಡು ಚರಗಿ ಹಾಕೋತೀನ್ರಿ, ಏನಾದರೂ ಒಂದಿಷ್ಟು ಪದರಾಗ ಕಟಗೊಂಡು ಅಡವಿ ಕಡೀಗಿ ನಡೀತಿನ್ರಿ".

ಶಿವರಾಮ ಭೂತಾಳೆ ಅವರದು ಚಿಕ್ಕದಾದ ಪತ್ರಾದ ಮನೆ. ಅದನ್ನು ನೋಡಿದರೆ ಅವರ ಕುಟುಂಬದ ಆರ್ಥಿಕ ಮುಗ್ಗಟ್ಟು ಯಾರಿಗಾದರೂ ಅರ್ಥವಾಗುತ್ತದೆ. ಆದರೂ ಬಡತನದ ಬಗೆಗೆ ಅವರಿಗೆ ಖೇದವಿಲ್ಲ. ಇದ್ದುದರಲ್ಲಿ ಕಾಲು ಚಾಚಿಕೊಂಡು ಬದುಕುತ್ತಲಿದ್ದಾರೆ. ಶಿವರಾಮ ಭೂತಾಳೆಯವರಲ್ಲಿ ಹಾಡು ಕಟ್ಟುವ ವಿಶಿಷ್ಟವಾದ ಶಕ್ತಿ ಇರುವುದರಿಂದ ನಮ್ಮಂಥವರು ಅವರನ್ನು ಹುಡುಕಿಕೊಂಡು ಹೋಗುತ್ತೇವಲ್ಲ; ಅದು ಅತ್ಯಂತ ದೊಡ್ಡದು. ಕೊಳ್ಳೂರಿನ ಯಾವ ಶ್ರೀಮಂತನೂ ಬೇಕಾಗಿಲ್ಲ, ಆದರೆ ನಾವು ಕಾತರದಿಂದ ಭೇಟಿಯಾಗಲು ಬಯಸಿದ್ದು ಶಿವರಾಮ ಅವರನ್ನು. ನಿಜವಾದ ಅರ್ಥದಲ್ಲಿ ಅವರೆ ಶ್ರೀಮಂತರು. ಈ ಮಾತುಗಳನ್ನು ಅವರಿಗೆ ತಿಳಿಸಿದಾಗ ಮುಖದ ಮೇಲಿನ ಗೆರೆಗಳು ಮಾಯವಾಗಿ ಅವುಗಳಲ್ಲಿ ಹರುಷವು ತುಂಬಿಕೊಳ್ಳುತ್ತದೆ. ನಗೆ ಕಾಣಿಸಿಕೊಳ್ಳುತ್ತದೆ. "ಏನೋ ಯಪ್ಪಾ ಅದೆಲ್ಲ ಆ ಪರಮಾತ್ಮನ ಆಟಾ" ಎಂಬಂತಹ ಮಾತುಗಳು ಅವರ ಮುಖದಿಂದ ಹೊರ ಬೀಳುತ್ತವೆ.

ಶಿವರಾಮ ಅವರ ತಂದೆ ಬಾಬು ಅವರು ಇದೇ ಸ್ಥಿತಿಯಲ್ಲಿಯೆ ಬದುಕಿದರು. ದಲಿತವರ್ಗ (ಮಾದಿಗರು)ದ ಬವಣೆಗಳನ್ನು ಅನುಭವಿಸಿದರು. ನಾಗಮ್ಮ ಶಿವರಾಮ ಅವರ ತಾಯಿ. ಗಂಡನ ಒಕ್ಕಲುತನದ ಕಾರ್ಯಗಳಲ್ಲಿ ಕೈಗೂಡಿಸಿ ದುಡಿದರು.

ಶಿವರಾಮ ನಿರಕ್ಷರಿ. ಆದರೂ ಅವರ ಭಾಷೆಗೆ ಶಿಷ್ಟತೆಯ ಲೇಪ ಇದೆ. ಅಕ್ಷರಗಳನ್ನು ಬರೆಯುವಂತಹ; ಓದುವಂತಹ ಅವಕಾಶವು ದೊರಕಲಿಲ್ಲ. ಇಂದು ಯಾವುದೇ ವಿಷಯವಿರಲಿ, ಅದನ್ನು ಶಿವರಾಮ ಕಂಠಪಾಠದ ಸಹಾಯದಿಂದಲೆ ಒಪ್ಪಿಸಿ ಬಿಡುತ್ತಾರೆ. ಅವರ ನೆನಪಿನ ಚೀಲದಲ್ಲಿ ಹಲವಾರು ಹಾಡುಗಳನ್ನು ಕಟ್ಟಿ ತುಂಬಿಟ್ಟುಕೊಂಡಿದ್ದಾರೆ.

ಶಿವರಾಮ ಅವರ ಹೆಂಡತಿ ಗುಂಡಮ್ಮ. ಅವರಿಗೆ ಮೂವರು ಗಂಡು ಮಕ್ಕಳು. ಶರಣಪ್ಪ–ಅಶೋಕ–ವಿಜಯ ಕುಮಾರ ಎಂದು ಹೆಸರಿಟ್ಟದ್ದಾರೆ.

ಶಿವರಾಮ ಅವರು ಕೃಷಿಯ ಕಾರ್ಯದೊಂದಿಗೆ ಆಯುರ್ವೇದದ ಔಷಧ ಕೊಡುವ ಕೆಲಸ ಮಾಡುತ್ತಾರೆ. ಹಲವಾರು ರೋಗಗಳಿಗೆ ಅವರು ಔಷಧ ಕೊಡುತ್ತಾರೆ. ಅದರಿಂದ ಅವರು ಯಾವುದೇ ಫಲವನ್ನು ನಿರೀಕ್ಷಿಸಿಲ್ಲ, ಔಷಧ ತೆಗೆದುಕೊಳ್ಳಲು ಬಂದವರು ಏನಾದರೂ ಒಂದಿಷ್ಟು ಕೊಟ್ಟರೆ ಸಂತಸದಿಂದ ಸ್ವೀಕರಿಸುತ್ತಾರೆ. ಅವರು ಹೆಣ್ಣು ಮಕ್ಕಳ ರೋಗಗಳಿಗೆ ಔಷಧ ಕೊಡುವಲ್ಲಿ ಸಿದ್ಧ ಹಸ್ತರು. ಮುಟ್ಟುರೋಗ, ಬಿಳಿಸೆರಗು ನಿಲ್ಲಿಸುವಿಕೆ ಇಂತಹ ರೋಗಗಳಿಗೆ ಅವರು ಕೊಡುವ ಔಷಧವು 'ಹುಸಿ ಹೋಗದ ಮದ್ದು' ಎಂದು ಜನರು ಕೊಂಡಾಡುತ್ತಾರೆ. ಅವರ ಹೆಂಡತಿ ಗುಂಡಮ್ಮನವರು ಹೆಣ್ಣುಮಕ್ಕಳ ಬಾಣತನದ ಕೆಲಸ ಮಾಡುತ್ತಾರೆ. ಹೆಣ್ಣುಮಕ್ಕಳು ಪ್ರಸವವೇದನೆಯಿಂದ ಬಳಲುತ್ತಿದ್ದರೆ, ಅವರು ಅಲ್ಲಿಗೆ ಹೋಗಿ ಸರಳವಾಗಿ ಪ್ರಸವವಾಗುವಂತೆ ಮಾಡುತ್ತಾಳೆ.

ಶಿವರಾಮ ಅವರಿಗೆ ದೇವರಲ್ಲಿ ಅತೀವ ಶ್ರದ್ಧೆಯಿದೆ. ಅವರು ಶಕ್ತಿದೇವತೆಯನ್ನು ಆರಾಧಿಸುತ್ತಾರೆ. ಅದರಲ್ಲೂ ಲಕ್ಷ್ಮಿಯನ್ನು ಅವರು ತಮ್ಮ ಆರಾಧ್ಯ ದೇವರೆಂದು ಭಾವಿಸಿಕೊಂಡಿದ್ದಾರೆ. ಗ್ರಾಮದೇವತೆ ಲಕ್ಷ್ಮಿಯ ದರುಶನಕ್ಕೆ ಹೋಗುತ್ತಾರೆ. ಅಲ್ಲಿ ನಡೆಯುವ ಭಜನೆಯಾದಿಗಳಲ್ಲಿ ಭಾಗವಹಿಸಿ ಹಾಡುತ್ತಾರೆ.

ಶಿವರಾಮ ಅವರನ್ನು ಜನತೆ ಹೆಚ್ಚಾಗಿ ಗುರುತಿಸುವುದು "ಕೋಲಿನ ಮಾಸ್ತರ" ಎಂದು. ಅವರು ಕೋಲಾಟ ಕಲಿಸುತ್ತಾರೆ. ಕೋಲಾಟದ ಹಾಡುಗಳನ್ನು ಸ್ವತಃ ರಚಿಸುತ್ತಾರೆ. ದೊಡ್ಡಾಟಗಳನ್ನು ಮಾಡಿಸುತ್ತಾರೆ. ಅವುಗಳಿಗೆ ಬೇಕಾದ ಹಾಡುಗಳನ್ನು ಬರೆದು ಸೇರಿಸುತ್ತಾರೆ. ಕತೆ ಹೇಳುವುದು, ಪ್ರವಚನ ಮಾಡುವುದು ಅವರ ಇತರ ಹವ್ಯಾಸಗಳಾಗಿವೆ. ಊರಲ್ಲಿ ಯಾರಾದರೂ ತೀರಿ ಕೊಂಡರೆ, ರಾತ್ರಿ ಭಜನೆ ಮಾಡುವುದಕ್ಕಾಗಿ ಶಿವರಾಮ ಅಲ್ಲಿ ಹಾಜರಾಗುತ್ತಾರೆ. ಸ್ವತಃ ನಿಂತು ಭಜನೆಯ ಸದಸ್ಯರನ್ನು ಕೂಡಿಸಿಕೊಂಡು ಭಜನೆ ನಡೆಸುತ್ತಾರೆ.

ಶಿವರಾಮ ಅವರು ಇಲ್ಲಿಯವರೆಗೆ ಹಲವಾರು ಹಾಡುಗಳನ್ನು ಕಟ್ಟಿದ್ದಾರೆ, ಹಾಡಿದ್ದಾರೆ. ಕೋಲಾಟದ ಪದಗಳು, ದೊಡ್ಡಾಟದ ಹಾಡುಗಳು, ತತ್ತ್ವಪದಗಳು ಮುಂತಾದ ಪ್ರಕಾರದ ಹಾಡುಗಳು ಅವರ ರಚನೆಯಲ್ಲಿ ಕಂಡು ಬರುತ್ತವೆ. ಹಾಡುಗಳಿಗೆ ಶಿವರಾಮ ಅವರು ತಮ್ಮ ಹೆಸರನ್ನೆ ಮುದ್ರೆಯಾಗಿಸಿ ಕೊಂಡಿದ್ದಾರೆ.

ಅವರು ಕಟ್ಟಿದ ಹಾಡುಗಳಲ್ಲಿ ಎರಡನ್ನು ಇಲ್ಲಿ ಕೊಡಲಾಗಿದೆ:

ಶಿವನಾಮದ ಮಗನ ತೂಗವ್ವ

ನಾಲಗೆಯ ಮಂಚದೊಳಗ
ಭಲೆ ಶಿವನಾಮದ ಮಗನ
ಮಲಗಿಸಿ ಜೋಗುಳ ಹಾಡವ್ವ
ನಾಲಗೆಯ ತೊಟ್ಟಿಲದೊಳಗಿಟ್ಟು ತೂಗವ್ವ ॥ ಪ ॥

ಸಿದ್ಧ ಪುರುಷರು ಎಲ್ಲ ಶಿವನಾಮ ಬಿಟ್ಟು
ಬದ್ಧರಾಗಿ ಹೋದರು ಕೆಟ್ಟು
ಬುದ್ಧಿ ವಂತರು ಎಲ್ಲ ಶಿವನಾಮ ನುಡಿಯದೆ
ಬುದ್ದುಗಳಾಗಿ ಹೋದರು ದಿಕ್ಕೆಟ್ಟು ॥ ೧ ॥

ಭವದ ಬಾಧೆಗೆ ಶಿವನ ನಾಮದ ಮದ್ದನ್ನಿಕ್ಕು
ಭವದಿಂದ ಬಿಡುಗಡೆ ಆಗು ಮನುಜಾ
ಮನದಿಂದ ಶಿವನಾಮ ಬಿಡದಂತೆ ಧ್ಯಾನಿಸು
ದಿನದಿನದಿ ಧ್ಯಾನದಲಿ ಮನವನು ಮುಳುಗಿಸು ॥ ೨ ॥

ದಿಕ್ಕಿಲ್ಲದವರೀಗಿ ದಿಕ್ಕಾದ ಶಿವನಾಮ
ಸೊಕ್ಕಿಲ್ಲದವರೀಗಿ ಸಲುವ್ಯಾದ ಶಿವನಾಮ
ಮಿಕ್ಕಿಮೀರಿದವರೀಗಿ ಮಣಸ್ಯಾದ ಶಿವನಾಮ
ಚಕ್ಕನೆ ನುಡಿದಾರ ಗೆಲಿಸ್ಯಾದ ಶಿವನಾಮ ॥ ೩ ॥

ಶಿವಶಿವ ಎಂದು ನುಡಿಯುತಲಿರು
ಶಿವರಾಮನ ಭಜನೆಯ ಮಾಡುತಲಿರು

ಧರಿಯೊಳು ಕೊಳ್ಳೂರ ಊರಾಗೆ ಇರು
ಎಲ್ಲೆ ಇದ್ದರೂ ಶಿವನಾಮ ನುಡಿಯುತಲಿರು ॥ ೪ ॥

ಮಾಯದ ನಿದ್ದಿ

ಮಾಯಾದ ನಿದ್ದಿ ಬಲು ಜೋರ
ಅರುವಿಂದಲಿ ನೀ ಕಡಿಗಿ ಬಾರಾ ॥ ಪ ॥

ಹೊರಗ ಕೊರೆವ ಚಳಿಯಪ್ಪ
ಒಳಗ ಬೆಚ್ಚಗ ಮಲಗಿದಿಯಪ್ಪ
ಒಳಗ ಎಚ್ಚರಾಗದು ಬಿಟ್ಟು
ಮಾಯಾದ ನಿದ್ದೀಗಿ ಸಿಕ್ಕಿದಿಯಪ್ಪ ॥ ೧ ॥

ಎಟ್ಟು ಕೂಗುದ್ರನೂ ಏಳಲೊಲ್ಲಿ
ಕಣ್ಣು ತೆರೆದು ನೋಡಲೊಲ್ಲಿ
ಗುರುಕಿ ಹೊಡ್ಯಾದು ಬಿಡುವಲ್ಲಿ
ಬೆರಕಿ ಮಾಯದ ನಿದ್ದಿ ಮಾಡುತಲ್ಲಿ ॥ ೨ ॥

ಸವಿಯ ಸಕ್ಕರಿಯಂತ ನಿದ್ದಿ
ಮರುವಿನಾಗ ಮಲಗೇ ಇದ್ದಿ
ಹಗಲ ಸೂರ್‍ಯಾ ಮ್ಯಾಲ ಏರಿದ
ಬಿದ್ದ ಬೆಳಕ ನೋಡದೆ ಇದ್ದಿ ॥ ೩ ॥


ಗಾಡ ಗಂಭೀರ ನಾದದೊಳಗ
ಹೊರಗಿನದೇನೂ ಕೇಳದಾದಿ
ಒಳಗ ತಿಳಿದು ನೋಡದೆ ಹ್ವಾದಿ
ಹೊಳ್ಳಿ ಹೊಳ್ಳಿ ಹಂಗೆ ಮಲಕೊಂಡಿ ॥ ೪ ॥

ಮಾಯಾದ ನಿದ್ದಿ ಮೋಹದ ನಿದ್ದಿ
ಯಾವ ಜನ್ಮದ ಕರ್ಮದ ನಿದ್ದಿ

ಆರು ಗುಣಕ ತಳಕ ನಿದ್ದಿ
ಮೂರು ಗುಣಕ ಮಲಕ ನಿದ್ದಿ ॥ ೫ ॥

ಧರೆಯ ಮ್ಯಾಲದ ಕೊಳ್ಳೂರು ಊರಾ
ಶಿವರಾಮ ಹೇಳ್ಯಾನ ಕವಿಗಾರಾ
ನಿದ್ದಿ ಮಾಡಬ್ಯಾಡ ಅಂತಾನ
ಖುದ್ದು ಎದ್ದು ಬೆಳಕ ನೋಡು ಅಂತಾನ ॥ ೬ ॥

(ಸ್ವತಃ ಕವಿ ಮತ್ತು ಅವರ ಮಗ ಅಶೋಕ ಅವರು ಈ ವಿವರಗಳನ್ನು ನೀಡಿದ್ದಾರೆ.)



ಶಿವರಾಮ ಭೂತಾಳೆ ಅವರ ಮನೆ (ಕೊಳ್ಳೂರು).



ಶಿವರಾಮ ಭೂತಾಳೆ.

ಶಿವರಾಮ ಭೂತಾಳೆ ಅವರ ಪತ್ನಿ
ಗುಂಡಮ್ಮ.






ಶಿವರಾಮ ಭೂತಾಳೆ ಅವರ ಮಗ ಅಶೋಕ.



ಶಿವರಾಮರ ಅಕ್ಕ ಲಕ್ಷ್ಮಿಬಾಯಿ ಅವರೊಂದಿಗೆ ಅಶೋಕ.



ಶಿವರಾಮ ಅವರ ಆರಾಧ್ಯ ದೇವತೆ ಲಕ್ಷ್ಮಿ ಗುಡಿ (ಕೊಳ್ಳೂರು).



ಲಕ್ಷ್ಮಿಗುಡಿಯ ಇನ್ನೊಂದು ನೋಟ.

೧೮. ನಾಗನಾಥ (ಕ್ರಿ.ಶ.ಸು. ೧೯೪೦–೨೦೦೫)

ಬೀದರ ಜಿಲ್ಲೆಯ ಅವರಾದ ತಾಲ್ಲೂಕಿನಲ್ಲಿ ಬರುವ ಗ್ರಾಮ ರಕ್ಷಾಳ. ಇಲ್ಲಿನ ದಲಿತ ಕುಟುಂಬದಲ್ಲಿ ಹುಟ್ಟಿದವರು ನಾಗನಾಥ ಅವರು. ತಮ್ಮ ಗ್ರಾಮದ ಹೆಸರನ್ನು ಅವರು ತಮ್ಮ ಕವಿತ್ವ ಶಕ್ತಿಯ ಮೂಲಕ ನಾಡಿನ ತುಂಬೆಲ್ಲ ಹರಡುವಂತೆ ಮಾಡಿದ್ದಾರೆ. ಇಂದು ಕವಿಗಳು ಭೌತಿಕವಾಗಿ ಬದುಕಿಲ್ಲ. ಆದರೆ ಅವರ ಹಾಡುಗಳು ನಾಗನಾಥ ಅವರ ಹೆಸರನ್ನು ಜನರ ಮನದಲ್ಲಿ ಉಳಿಯುವಂತೆ ಮಾಡಿವೆ.

ನಾಗನಾಥ ಅವರ ತಂದೆ ಹುಲೆಪ್ಪನವರು. ನಿರಕ್ಷರಿಗಳು. ತಮ್ಮ ಪಾಲಿನ ಕೆಲಸವನ್ನು ಮಾಡಿಕೊಂಡು ಬದುಕನ್ನು ನಿಭಾಯಿಸುತ್ತಿದ್ದ ಒಬ್ಬ ಸಾದಾ ಜೀವಿ ಅವರಾಗಿದ್ದರು. ಅವರಲ್ಲಿ ದೈವೀ ಭಕ್ತಿಯಿದ್ದಿತು. "ಬದುಕಿನಲ್ಲಿ ಬರುವ ಆಗುಹೋಗುಗಳಿಗೆ ಆ ದೇವನೇ ಕಾರಣ" ಎಂದು ನಂಬುತ್ತಿದ್ದರು. ತಮ್ಮ ನಂಬುಗೆಯನ್ನು ಕೇರಿಯವರಿಗೂ ಹೇಳುತ್ತಿದ್ದರು.

ಹುಲೆಪ್ಪನವರ ಹೆಂಡತಿ ಕಾಯಕ ಜೀವಿ. ಪತಿಯೊಡನೆ ಹೊಲದಲ್ಲಿ ಕೂಲಿಮಾಡಿ ಮಕ್ಕಳನ್ನು ಸಾಕುತ್ತಿದ್ದಳು. ಈ ದಂಪತಿಗಳಿಗೆ ಕ್ರಿ.ಶ.ಸು. ೧೯೪೦ರಲ್ಲಿ ನಾಗನಾಥ ಅವರು ಜನಿಸಿದರು. ಹುಟ್ಟಿದ ತಮ್ಮ ಮಗನಿಗೆ ಹುಲೆಪ್ಪನವರು ಇಟ್ಟ ಹೆಸರು 'ನಾಗಪ್ಪ'ಯೆಂದು. ನಾಗಪ್ಪ ಕವಿಯಾಗಿ ಬೆಳೆಯುತ್ತ ಜನರ ಬಾಯಲ್ಲಿ 'ನಾಗನಾಥ ಕವಿ'ಯೆಂಬ ಖ್ಯಾತಿಯನ್ನು ಹೊಂದಿದರು.

ನಾಗನಾಥ ಅವರಿಗೆ ಹೆಚ್ಚಿನ ಶಿಕ್ಷಣ ದೊರಕಲಿಲ್ಲ. ಕನ್ನಡವನ್ನು ಬರೆಯಲು–ಓದಲು ಕಲಿತರು. ಒಂದನೆ–ಎರಡನೆಯವರೆಗಿನ ಶಿಕ್ಷಣವು ಅವರ ಪಾಲಿಗೆ ದಕ್ಕಿತು. ಅದನ್ನೇ ಮುಂದೆ ನಾಗಪ್ಪನವರು ಬೆಳೆಯಿಸಿಕೊಂಡರು.

ನಾಗಪ್ಪನವರು ಇಪ್ಪತ್ತರ ಹರೆಯಕ್ಕೆ ಗೃಹಸ್ಥ ಬದುಕನ್ನು ಅಂಗೀಕರಿಸಿದರು. ಅವರ ಪತ್ನಿ ಕಾಶೀಬಾಯಿ. ಈ ದಂಪತಿಗಳಿಗೆ ವಿಲಾಸ–ರಾಜು ಎಂಬ ಇಬ್ಬರು ಗಂಡು ಮಕ್ಕಳು; ಜ್ಯೋತಿ ಎಂಬ ಒಬ್ಬ ಮಗಳು ಹುಟ್ಟಿದರು.

ನಾಗಪ್ಪನವರು ಸಂಸಾರದ ಸಾಗುವಿಕೆಗಾಗಿ ಕೃಷಿ ಕಾಯಕವನ್ನೇ ಅವಲಂಬಿಸಿಕೊಂಡು ಹೊರಟರು. ಅವರು ಜನ್ಮಜಾತ ಪ್ರತಿಭಾವಂತರಾಗಿದ್ದರು.

ಮೊದಲಿಗೆ ಅವರ ಒಲವು ಭಜನೆಯೆಡೆಗೆ ಹರಿಯಿತು. ಗ್ರಾಮದಲ್ಲಿ ನಡೆಯುವ ಭಜನೆಗಳಲ್ಲಿ ಭಾಗವಹಿಸತೊಡಗಿದರು. ಹಿಮ್ಮೇಳದಲ್ಲಿ ಹಾಡುತ್ತಲೇ ಕೆಲವು ದಿನಗಳಲ್ಲಿಯೇ ಮುಮ್ಮೇಳದಲ್ಲಿ ನಿಂತು ಹಾಡುವ ಶಕ್ತಿಯನ್ನು ಅವರು ಸಾಧಿಸಿಕೊಂಡರು. ಅವರಿಗೆ ಒಳ್ಳೆಯ ಕಂಠ ಇದ್ದಿತು. ಇಂಪಾಗಿ ಹಾಡುತ್ತಿದ್ದರು. ಹಾಡುವ ಹಾಡುಗಳನ್ನು ನಾಗಪ್ಪನವರು ಮೊದಲಿಗೆ ಕೊಳಲಿನಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದರು. ಅದು ಅವರಿಗೆ ಸಾಧ್ಯವಾಗಲಿಲ್ಲ. ಅದಕ್ಕೆ ಬದಲಾಗಿ 'ಶಯನಾಯ' ವಾದ್ಯವು ಹೆಚ್ಚು ಸಹಕಾರಿಯಾಯಿತು. ಅದನ್ನು ಬಾರಿಸುತ್ತ, ಅಭ್ಯಾಸಮಾಡಿ, ಕೆಲವು ತಿಂಗಳುಗಳಲ್ಲಿಯೇ ಅತ್ಯುತ್ತಮವಾಗಿ ಶಯನಾಯ ಊದುವ ಕಲೆಯನ್ನು ಕರಗತವಾಗಿಸಿಕೊಂಡರು. ಭಜನೆಯ ಹಾಡುಗಳನ್ನು ಶಯನಾಯವಾದ್ಯದ ಮೂಲಕ ಬಾರಿಸುವುದಕ್ಕೆ ತೊಡಗಿದರು.

ನಾಗಪ್ಪನವರಿಗೆ ನಟನೆಯಲ್ಲಿಯೂ ನೆಲೆಯಿದ್ದಿತು. ಮೊದ-ಮೊದಲು ಅವರು ಊರಿನಲ್ಲಿ ನಡೆವ ನಾಟಕಗಳಲ್ಲಿ ಸಣ್ಣಪಾತ್ರಗಳನ್ನು ಅಭಿನಯಿಸ ತೊಡಗಿದರು. ಬರುಬರುತ್ತ ದೊಡ್ಡ ಪಾತ್ರಗಳಲ್ಲಿ ಕಾಣಿಸಿಕೊಳ್ಳ ತೊಡಗಿದರು. ಹೀಗೆ ಅಭಿನಯ ಮಾಡುತ್ತಲೇ ಕೆಲವು ವರ್ಷಗಳಲ್ಲಿ ನಾಗಪ್ಪನವರು "ನಾಟಕ ಕಲಿಸುವ ಮಾಸ್ತರ" ಎಂಬ ಹೆಸರನ್ನು ಹೊಂದಿದರು. ಅವರು ಬೀದರ ಜಿಲ್ಲೆಯಲ್ಲಿ ಹಲವಾರು ನಾಟಕಗಳನ್ನು ಕಲಿಸಿದರು. ಆಡಿಸಿದರು.

ನಾಗಪ್ಪ ರಕ್ಷಾಳ ಅವರ ಗುರು ರಾಮಣ್ಣ. ಇವರು ಕವಿಗಳಿಗೆ ಬೆನ್ನು ಹಿಂದಿನ ಬಲವಾಗಿ ನಿಂತು ಮುನ್ನೆಡಿಸಿದರು. ಭಜನೆಕಾರ, ಹಾಡುಗಾರ, ಶಯನಾಯ ವಾದಕ, ನಾಟಕ ಮಾಸ್ತರ ಹೀಗೆ ಬಹುಮುಖಿಗಳ ಸಾಧನೆಯಲ್ಲಿ ತೊಡಗಿದ ನಾಗನಾಥ ಅವರು ಸ್ವತಃ ಪದ್ಯಗಳನ್ನು ಬರೆಯುವುದಕ್ಕೆ ತೊಡಗಿದರು. ಅವರ ರಚನೆಯಲ್ಲಿ ಹಲವಾರು ಭಜನೆ-ಮೋಹರಮ್-ನಾಟಕದ ಹಾಡುಗಳೊಂದಿಗೆ ತತ್ತ್ವಪದಗಳೂ ಸೇರ್ಪಡೆಗೊಂಡಿವೆ.

ನಾಗಪ್ಪನವರು ಹೆಚ್ಚು ಆಯುಷ್ಯ ಪಡೆದು ಬಂದಿರಲಿಲ್ಲ. ಅವರು ಕ್ರಿ.ಶ. ೨೦೦೫ರಲ್ಲಿ ಲಿಂಗೈಕ್ಯರಾದರು. ಸ್ವನಾಮ ಮುದ್ರಿಕೆಯ ಒಂದು ತತ್ತ್ವಪದವನ್ನು ಇಲ್ಲಿ ಕೊಡಲಾಗಿದೆ:

ಥೇರ

ನೋಡತೇನ ಥೇರ ಹೊಂಟಾದ
ಸದ್ಗುರುವಿನ ಮುಂದ
ನೋಡತೇನ ಥೇರ ಹೊಂಟಾದ ॥ ಪ ॥


ಪಂಚ ಅಂತಸ್ತದ ಈ ಥೇರಾ
ನವ ಕಿಡಕಿ ಅವ ಅದಕ ಪೂರಾ
ಯಾವ ಬಣ್ಣದ ಕಾಗದ ಕೋರಾ
ಠಾವ-ಠಾವದಲ್ಲಿ ಅದಕ್ಕ ಮ್ಯಾಲ ಹಚ್ಯಾರ ॥ ೧ ॥

ಏಳು ಹಗ್ಗಗಳ ಕಟ್ಟಲಿಬೇಕು
ಬಾಳ ಜೋಕಿಲಿಂದ ಎಳಿಯಲುಬೇಕು
ಒಳಗ ಮೂರು ಮಂದಿ ಕುಂತಿರಬೇಕು
ತೆಳಗ ಇಳುದು ಅವರು ಹೊರಬರಬೇಕು ॥ ೨ ॥


ಹಚ್ಚಿದರದಕ್ಕ ಬಣ್ಣದ ಚಿತ್ತಾರ
ಚುಚ್ಚಿದರದಕ ಆರರ ಮೋರಾ
ಸ್ವಚ್ಛ ಮನಸ್ಸಿಲಿಂದ ಜೇ ಹೊಡಿ ಹರಹರಾ
ಫಾಜಗಟ್ಟಿಗೆ ಮುಟ್ಟುವುದು ಥೇರಾ ॥ ೩ ॥

ತಲಿಯ ಮ್ಯಾಲದ ಬಂಗಾರದ ಕಳಸಾ
ಕಣ್ಣಿಟ್ಟು ನೋಡೋ ಕಾಣುತಾದ ಹೊಳಪಾ
ಸಣ್ಣ ನಾಗಣ್ಣ ಹೇಳ್ಯಾನ ವಾರ್ತಾ
ಮಣ್ಣಗೂಡಿ ಹೋಗದರಾಗ ತಿಳಿಬೇಕ ಪೂರ್ತಾ ॥ ೪ ॥

(ಈ ವಿವರಗಳನ್ನು ನೀಡಿದವರು ಪ್ರೊ. ಗ್ಯಾನೋಬಾ ರಕ್ಷಾಳ.)




ನಾಗನಾಥ ಅವರ ಮನೆ (ರಕ್ಷಾಳ).



ನಾಗನಾಥ ಅವರು ತಮ್ಮ ಗುರುಗಳಾದ ರಾಮಣ್ಣನವರೊಂದಿಗೆ (ಗುರು ಬಲಕ್ಕೆ).



ನಾಗನಾಥ ಅವರ ಹೆಂಡತಿ ಕಾಶೀಬಾಯಿ.



ನಾಗನಾಥ ಅವರ ಮನೆ ದೇವರು ಲಕ್ಷ್ಮಿ (ರಕ್ವಾಳ).

೧೯. ಗುಂಡಪ್ಪ ದಾಬಕೆ (ಕ್ರಿ.ಶ.ಸು. ೧೯೪೩–೧೯೯೮)

ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಬರುವ ಜೊನ್ನಿಕೇರಿ ಗ್ರಾಮವು ಗುಂಡಪ್ಪ ದಾಬಕೆ ಅವರ ಸ್ವಗ್ರಾಮವಾಗಿದೆ. ವೀರಶೈವ ಮನೆತನದ ಗುಂಡಪ್ಪನವರು ವೀರಶೈವ ಸಂಸ್ಕೃತಿಯ ಪ್ರಸಾರಕ್ಕಾಗಿ ಹಲವಾರು ಸಾಮಾಜಿಕ ಕಾರ್ಯಗಳನ್ನು ಕೈ ಕೊಂಡರು.

ಗುಂಡಪ್ಪನವರ ತಂದೆ ಶಿವರಾಯ ಅವರು ಕಟ್ಟಾ ಧಾರ್ಮಿಕ ಪ್ರವೃತ್ತಿಯವರು. ಊರಿನ ಯಾವುದೇ ಧಾರ್ಮಿಕ – ಸಾಮಾಜಿಕ ಕಾರ್ಯಗಳಿದ್ದರೂ ಅಲ್ಲಿ ಶಿವರಾಯ ಅವರು ಹೋಗುತ್ತಿದ್ದರು. ಅವುಗಳನ್ನು ಸರಾಗವಾಗಿ ಸಾಗುವಂತೆ ಸಹಾಯ ಮಾಡುತ್ತಿದ್ದರು. ಹೀಗಾಗಿ ಜನರು ಅವರನ್ನು ಗೌರವದಿಂದ ಕಾಣುತ್ತಿದ್ದರು. ಶಿವರಾಯ ಅವರು ಪರೋಪಕಾರಿಗಳಾಗಿದ್ದರು. ಕೃಷಿಕಾಯಕ ಅವರ ಮನೆತನದ ಉದ್ಯೋಗವಾಗಿತ್ತು. ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದ ಮನೆತನ ಅದಾಗಿತ್ತು.

ಶಿವರಾಯನವರ ಹೆಂಡತಿ ರತ್ನಮ್ಮನವರು. ಅವಿಭಕ್ತಿಯ ಕುಟುಂಬವನ್ನು ಸರಿಯಾಗಿ ತೂಗಿಸಿಕೊಂಡು ಹೋಗುವ ತೂಕದ ಮಹಿಳೆ ಅವರಾಗಿದ್ದರು. ಮನೆಗೆ ಬರು–ಹೋಗುವವರ ಉಪಚಾರಾದಿಗಳ ಕಾರ್ಯವು ನಿರಾತಂಕವಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದರು.

ಈ ದಂಪತಿಗಳಿಗೆ ಮಗನಾಗಿ ಹುಟ್ಟಿದವರು ಗುಂಡಪ್ಪನವರು. ಅವರ ಜನನದ ವರ್ಷ ಕ್ರಿ.ಶ. ೧೯೪೩. ಗುಂಡಪ್ಪನವರು ಮೋಡಿ ಶಾಲೆಯಲ್ಲಿ ಓದಿದರು. ಕನ್ನಡವನ್ನು ಸ್ವಪ್ರಯತ್ನದಿಂದ ಸರಿಯಾಗಿ ಕಲಿತುಕೊಂಡರು. ಸಂಸ್ಕೃತ ಭಾಷೆಯ ಜ್ಞಾನವನ್ನು ಮಾಡಿಕೊಂಡರು. ಹಿಂದಿ ಭಾಷೆಯ ಮೇಲೆ ಪ್ರಭುತ್ವ ಸಾಧಿಸಿದರು. ಹೀಗೆ ಹಲವು ಮೂಲಗಳಿಂದ ಹಲವು ಪ್ರಕಾರದ ಜ್ಞಾನವನ್ನು ಸಂಗ್ರಹಿಸಿದ ಗುಂಡಪ್ಪನವರು ಮುಂದೆ ಊರಿನ ಮಕ್ಕಳಿಗಾಗಿ ಖಾಸಗಿ ಶಾಲೆಯೊಂದನ್ನು ತೆರೆದರು.

ಗುಂಡಪ್ಪನವರು ಶಿಕ್ಷಕರಾಗಿ ಖಾಸಗಿ ಶಾಲೆಯನ್ನು ನಡೆಯಿಸತೊಡಗಿದರು. ಗ್ರಾಮದ ಜನತೆಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ತಿಳಿಸಿ ಹೇಳಿದರು. ಶಿಕ್ಷಕ ವೃತ್ತಿಯ ಬಿಡುವಿನ ವೇಳೆಯಲ್ಲಿ ಅವರು ಕೃಷಿ ಕಾರ್ಯಗಳನ್ನು ನೋಡಿಕೊಳ್ಳಲು ಹೊಲಕ್ಕೆ ಹೋಗುತ್ತಿದ್ದರು.

ಗುಂಡಪ್ಪನವರು ಸದ್ಗೃಹಸ್ಥರಾಗಿದ್ದರು. ಅವರ ಪತ್ನಿ ಸುಶೀಲಬಾಯಿ ಅವರು. ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು. ರಾಜಪ್ಪ, ದತ್ತಾತ್ರೇಯ ಅವರೆ ಗುಂಡಪ್ಪನವರ ಮಕ್ಕಳಾಗಿದ್ದಾರೆ. ಗುಂಡಪ್ಪನವರು ತಂಬಲೂರು ಸ್ವಾಮಿಗಳವರಲ್ಲಿ ಭಕ್ತಿಯುಳ್ಳವರಾಗಿದ್ದರು.

ಜೊನ್ನಿಕೇರಿಯಲ್ಲಿ ಪತ್ರಿ ಸ್ವಾಮಿ ಮಠವೊಂದಿದೆ. ಅದು ಗ್ರಾಮ ಮತ್ತು ಅದರ ಸುತ್ತ-ಮುತ್ತಲಿನ ಜನತೆಯ ಭಕ್ತಿಯ ಕೇಂದ್ರವಾಗಿದೆ. ಗುಂಡಪ್ಪ ದಾಬಕೆ ಅವರು ಊರಿನವರ ಸಹಕಾರದೊಂದಿಗೆ ನಿಂತು ಪತ್ರಿ ಸ್ವಾಮಿ ಮಠವನ್ನು ಬೆಳೆಯಿಸಿದರು. ಸ್ವಾಮಿಗಳಿಗೆ ಸರಿಯಾದ ವಾಸ್ತವ್ಯ ಒದಗಿಸಿಕೊಟ್ಟರು. ಪತ್ರಿ ಸ್ವಾಮಿಗಳು ಮಹಾಪವಾಡ ಪುರುಷರೂ, ಶಿವಯೋಗಿಗಳೂ ಆಗಿದ್ದರು. ಹಲವಾರು ಕಡೆಗಳಲ್ಲಿ ಅನುಷ್ಠಾನ ಮಾಡಿದರು. ಹಳೆಯಂಬರದ ಹತ್ತಿರ ಗಾಯಮುಖಿಯೆಂಬಲ್ಲಿ ಅನುಷ್ಠಾನ ಗೈದು ಕೊನೆಗೆ ಅವರು ಜೊನ್ನಿಕೇರಿಯಲ್ಲಿ ಬಂದು ಶಾಶ್ವತವಾಗಿ ನೆಲೆಸಿದರು. ಅವರು ಜೀವಂತ ಸಮಾಧಿ ಹೊಂದಿರುವರೆಂದು ಭಕ್ತರು ಹೇಳುತ್ತಾರೆ. ಇಂದು ಜೊನ್ನಿಕೇರಿಯಲ್ಲಿ ಪತ್ರಿ ಸ್ವಾಮಿಗಳ ಸಮಾಧಿ-ಮಠಗಳನ್ನು ಕಾಣಬಹುದಾಗಿದೆ. ಅವರು ಈ ಗ್ರಾಮದಲ್ಲಿ ಉಳಿದು ಪತ್ರಿವನ ಬೆಳೆಯಿಸಿ; ಅದರಲ್ಲಿ ವಾಸ ಮಾಡುತ್ತಿದ್ದ ಕಾರಣದಿಂದ ಭಕ್ತರು ಅವರನ್ನು "ಪತ್ರಿಸ್ವಾಮಿ" ಯೆಂತಲೇ ಕರೆದರು.

ಗುಂಡಪ್ಪ ದಾಬಕೆ ಅವರು ಪತ್ರಿ ಸ್ವಾಮಿಗಳ ಜಾತ್ರೆಯ ಆಚರಣೆಗೆ ಶ್ರೀಕಾರ ಹಾಕಿದರು. ಇಂದು ಪತ್ರಿ ಸ್ವಾಮಿ ಮಠವು ಬೃಹತ್ ಪ್ರಮಾಣದ ಶಿಲ್ಪವಾಗಿ ಕಟ್ಟುತ್ತಲಿದ್ದಾರೆ.

ಗುಂಡಪ್ಪ ದಾಬಕೆ ಅವರಿಗೆ ಮೊದಲಿನಿಂದಲೂ ಭಜನೆಯಲ್ಲಿ ಆಸಕ್ತಿಯಿದ್ದಿತು. ಊರಿನಲ್ಲಿ ಹಬ್ಬ-ಉತ್ಸವ-ಶ್ರಾವಣ ಮಾಸದ ಸಂದರ್ಭದಲ್ಲಿ ಭಜನೆಯ ಕಾರ್ಯಕ್ರಮ ನಡೆಸುತ್ತಿದ್ದರು. ಪತ್ರಿ ಸ್ವಾಮಿಗಳ ಮಠದಲ್ಲಿ ಭಜನೆ ನಡೆಸುವವರು ಗುಂಡಪ್ಪನವರೆ. ಹೀಗಾಗಿ ಅವರು ಭಜನೆ ಪದಗಳನ್ನು ಹಾಡತೊಡಗಿದರು. ಹಾಗೆಯೆ ಸ್ವಂತ ರಚನೆ ಮಾಡತೊಡಗಿದರು.

ಅದೇ ಊರಿನ ಮಾನಪ್ಪ ಬಡಿಗೇರ ಅವರು ಖ್ಯಾತ ತತ್ತ್ವಪದಕಾರರಾಗಿದ್ದರು. ಅವರಿಗೆ ಹಲವಾರು ಜನ ಶಿಷ್ಯರಿದ್ದರು. ಅವರಲ್ಲಿ ಗುಂಡಪ್ಪನವರೂ ಒಬ್ಬರು. ಅವರಿಂದ ತತ್ತ್ವಪದಗಳ ರಚನೆಯ ಕೀಲಗಳನ್ನು ಹೇಳಿಸಿಕೊಂಡರು. ಸಾಹಿತ್ಯ ಕೃಷಿಗೆ ಅವರನ್ನು ಗುರುವಾಗಿ ಸ್ವೀಕರಿಸಿದರು.

ಗುಂಡಪ್ಪ ದಾಬಕೆ ಅವರು ಹಲವಾರು ಭಜನೆ-ತತ್ತ್ವಪದಗಳನ್ನಲ್ಲದೆ; ಹಂತಿ; ಲಾವಣಿ, ಮಂಗಳಾರತಿ, ಕರ್ಪುರದಾರತಿ ಹಾಡುಗಳನ್ನು ಬರೆದಿದ್ದಾರೆ. ಅವರು ಬರೆದ ಹಾಡುಗಳಿಗೆ ಸ್ವನಾಮವನ್ನೇ ಮುದ್ರೆಯಾಗಿ ಬಳಸಲಾಗಿದೆ. ಗುಂಡಪ್ಪನವರು

ದಿ.೧೬.೦೮.೧೯೯೮ರಂದು ಲಿಂಗೈಕ್ಯರಾದರು. ಅವರು ಬರೆದ ಎರಡು ಹಾಡುಗಳನ್ನು ಇಲ್ಲಿ ಉದ್ಧರಿಸಲಾಗಿದೆ:

ನಿಮ್ಮ ಕರುಣೆಗಾಗಿ ನಾ ಬಂದೆನು

ತಂಬಲೂರ ಗುರುವೆ
ಪತ್ರಿ ಸ್ವಾಮಿ ಹರನೆ
ನಿಮ್ಮ ಕರುಣೆಗಾಗಿ ನಾ ಬಂದೆನು ॥ ಪ ॥

ನಿಮ್ಮ ದಯೆ ಪಡೆಯಲೆಂದು
ಪ್ರೇಮವನು ಗಳಿಸಲೆಂದು
ನಾ ಬಂದೆ ಗುರುವೆ
ಓ ಕಲ್ಪತರುವೆ ॥ ೧ ॥

ಬೇರೆಯವರ ಸಂಪತ್ತು ಕಣ್ಣಿಂದ ನೋಡಿ
ಮರವೆಯಲಿ ಮುಳುಗುತ್ತ ಅದಕ್ಕಾಗಿ ಕೂಡಿ
ಮರಳು ಮೋಹದಲಿ ಬಿದ್ದೆ
ಗುರುವೆ ನಿನ್ನ ಪಾದವ ಕಂಡೆದ್ದೆ ॥ ೨ ॥

ರಕ್ಷಿಸೋ ಬೇಗದಲಿ
ಶಿಕ್ಷಿಸೋ ಬೇಗದಲಿ
ಕೆಟ್ಟ ಬುದ್ಧಿಯ ಸುಟ್ಟು
ಶ್ರೇಷ್ಠನ ಮಾಡು ಗುರುವೆ ॥ ೩ ॥

ಪರರ ನಿಂದೆಯ ಮಾಡಿದೆ
ಪರರ ನಿಂದೆಯ ಕೇಳಿದೆ
ಹಾಸ್ಯವನು ಮಾಡಿದೆನು
ಹಿತದವರ ದೂಡಿದೆನು ॥ ೪ ॥

ಮಗುವಿನ ಮನವ ನೋಡದೆ
ಮುಗುದನೆಂದು ತಿಳಿದು
ಗುಂಡನು ಬೇಡುತಿಹನು
ಕರುಣೆ ದೋರೋ ಗುರುವೆ ॥ ೫ ॥

ಶಿವ ನಿಮ್ಮ ಮಹಿಮೆ ಹೊಗಳಲಸಾಧ್ಯ

ಶಿವನೆ ನಿಮ್ಮ ಹಿರಿಮೆ ಹೊಗಳಲು ಸಾಧ್ಯವಿಲ್ಲ
ಮಾರಹರ ನೀನೆ ತಿಳಿವೆ ನಿನ್ನ ಮಹಿಮೆಯ ಕೀಲ॥ ಪ ॥

ಭಾಗ್ಯನಿಧಿ ನೀನಯ್ಯ ಪರುಷದ ಖಣಿಯೆ
ತಂದೆ ತಾಯಿ ನೀನಯ್ಯ ಬಂಧು ಬಳಗ ಎಣೆಯೆ?
ನಿಮ್ಮ ಕರುಣೆಯಾಂತಲ್ಲಿ ಭವವಿಲ್ಲ
ನಿಮ್ಮ ದೃಷ್ಟಿ ಬಿದ್ದಲ್ಲಿ ಭಯವಿಲ್ಲ ॥ ೧ ॥

ಹುಟ್ಟು - ಸಾವುಗಳಿಂದ ಕಷ್ಟ ಪಡುತಿಹ ಜನರು
ಕಷ್ಟದಲ್ಲಿ ಬಿದ್ದು ಹೊರಳಾಡುತಿಹರು
ಗಟ್ಟಿಗ ಸ್ಥಲ ನೀನೇ ದಯ ದೋರು
ಖೊಟ್ಟಿ ಜನ್ಮದ ಬಲೆಯು ಹರಿದು ಹಾಕು ॥ ೨ ॥

ಎಲ್ಲಿ ನೋಡಿದರೂ ನಿನ್ನದೆ ಬೆಳಕಿಹುದು
ಎಲ್ಲಿ ನೋಡಿದರೂ ನೀನೆ ತುಂಬಿರುವಿ
ಎಲ್ಲಿ ಎಲ್ಲಿ ಹೋದರೂ ನಿನ್ನ ನಾಮವಿಹುದು
ನನ್ನಲ್ಲಿ ನೀನೇ ತುಂಬಿಕೊಂಡಿರುವಿ ॥ ೩ ॥

ಏಳು ಬಣ್ಣಗಳು ಕಾಣಿಸುವಂತೆ ಮಾಡು
ಉನ್ಮನಿಯ ಗ್ರಾಮದಲಿ ನೆಲೆಸುವಂತೆ ಮಾಡು
ಸುಸುಮ್ನವನು ಎಚ್ಚರಿಸುವಂತೆ ಮಾಡು
ನಾನು ಕೂಡುವೆನು ನಿಮ್ಮೊಳಗು ಕಾಪಾಡು ॥ ೪ ॥

ಧರೆಯೊಳು ಮೆರೆಯುವ ಜೊನ್ನಿಕೇರಿ ಗ್ರಾಮವು
ಗುರುಪುತ್ರ ಗುಂಡಪ್ಪನವರ ಧರ್ಮ ನೇಮವು
ವರದ ಮುಕ್ತಿಯ ನೀಡು ಓ ಶಿವನೆ ಎನಗೆ
ಪರದ ಲೋಕದ ಹಾದಿ ತೋರಯ್ಯ ಹರನೆ ॥ ೫ ॥

(ಈ ವಿವರಗಳನ್ನು ಗುಂಡಪ್ಪ ದಾಬಕೆ ಅವರ ಮಗ ರಾಜಪ್ಪನವರು ನೀಡಿದ್ದಾರೆ.)

▯




ಗುಂಡಪ್ಪ ದಾಬಕೆ ಅವರ ಮನೆ (ಜೊನ್ನಿಕೇರಿ).



ಗುಂಡಪ್ಪ ದಾಬಕೆ.



ಗುಂಡಪ್ಪ ದಾಬಕೆ ಅವರ
ಪತ್ನಿ ಸುಶೀಲಾಬಾಯಿ.



ಗುಂಡಪ್ಪ ದಾಬಕೆ ಅವರ ಛಾಯಾ ಚಿತ್ರ.




ಗುಂಡಪ್ಪ ದಾಬಕೆ ಅವರ ಮಗ ರಾಜಪ್ಪ



ಗುಂಡಪ್ಪ ದಾಬಕೆ ಅವರ ಸೊಸೆ–ಮೊಮ್ಮಕ್ಕಳು.



ಗುಂಡಪ್ಪ ದಾಬಕೆ ಅವರ ಗುರು ಪತ್ರಿ ಸ್ವಾಮಿಳ ಸಮಾಧಿ.



ಪತ್ರಿ ಸ್ವಾಮಿಗಳ ಮಠ (ನಿರ್ಮಾಣ ಹಂತದಲ್ಲಿದೆ).

೨೦. ಚೆನ್ನಪ್ಪ ಯರನಳ್ಳಿ (ಕ್ರಿ.ಶ.ಸು. ೧೯೪೪)

ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಬರುವ ಹೆಡಗಾಪುರ ಗ್ರಾಮವು ಚೆನ್ನಪ್ಪ ಯರನಳ್ಳಿ ಅವರ ಸ್ವಗ್ರಾಮವಾಗಿದೆ. ಅರವತ್ತಾರು ವರುಷಗಳ ವಯಸ್ಸಿನಲ್ಲೂ ಅವರು ತುಂಬು ಉತ್ಸಾಹದಿಂದ ದೈನಂದಿನ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಆರೋಗ್ಯ ಪೂರ್ಣವಾದ ದೇಹದಲ್ಲಿನ ಆರೋಗ್ಯ ಪೂರ್ಣವಾದ ಮನಸ್ಸು ಇಂದಿಗೂ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿದೆ.

ಯರನಳ್ಳಿ ಮನೆತನದ ಶರಣಪ್ಪನವರು ವೀರಶೈವ ಸಂಸ್ಕೃತಿ ಸಂಪನ್ನರು. ಕೃಷಿಕಾಯಕದಿಂದ ಮನೆತನದ ಆರ್ಥಿಕ ಸ್ಥಿತಿಯನ್ನು ಉತ್ತಮಗತಿಯಲ್ಲಿ ಕಾಯ್ದುಕೊಂಡು ಬದುಕಿದವರು. ಶರಣಪ್ಪನವರ ಹೆಂಡತಿ ನೀಲಮ್ಮನವರು. ಶರಣ ಸ್ವಭಾವಿ, ಮನೆಗೆ ಬಂದವರಿಗೆಲ್ಲ ಅನ್ನ-ನೀರು ಇತ್ತು ಕಳುಹಿಸುವ ದಾನಗುಣ ಹೊಂದಿದವರು. ಹೊಲದಲ್ಲಿ ಇರುವಾಗ ಯಾರೇ ಬಡ ಬಗ್ಗರು ಬಂದು ಏನೇ ಬೇಡಿದರೂ ಇದ್ದುದರಲ್ಲಿ ಒಂದಿಷ್ಟು ಕೊಟ್ಟು ಕಳುಹಿಸುತ್ತಿದ್ದರು.

ಇಂತಹ ದಂಪತಿಗಳ ಮಗನೆ ಚೆನ್ನಪ್ಪನವರು. ಜನನದ ವರ್ಷ ಕ್ರಿ.ಶ. ೧೯೪೪. ಶರಣಪ್ಪನವರು ತಮ್ಮ ಮಕ್ಕಳಿಗೆ ಆದಷ್ಟು ಒಳ್ಳೆಯ ಸಂಸ್ಕಾರವನ್ನು ನೀಡಿದರು. ಅಕ್ಷರಭ್ಯಾಸಕ್ಕೆಂದು ಶಾಲೆಗೂ ಹಾಕಿದರು. ಚೆನ್ನಪ್ಪನವರು ಎಸ್.ಎಸ್.ಎಲ್.ಸಿ.ವರೆಗೆ ಓದಿದರು. ಶಿಕ್ಷಣ ಪೂರೈಸಿದ ವರ್ಷದ ಅವಧಿಯಲ್ಲಿಯೇ ಚನ್ನಪ್ಪನವರು ಭಾರತದ ಸೇನೆಯಲ್ಲಿ ಸೇರ್ಪಡೆಗೊಂಡರು. ಭಾರತಮ್ಮನ ಸೇವೆಗಾಗಿ ಅವರ ತರುಣ ಮನಸ್ಸು ತಹ ತಹಿಸುತ್ತಿದ್ದಿತು.

ಮಾತೃ ಭೂಮಿಯ ಋಣವನ್ನು ತೀರಿಸುವುದಕ್ಕಾಗಿ ಅವರು ಕಾಶ್ಮೀರ ಗಡಿಯಲ್ಲಿ ಸೇವೆ ಸಲ್ಲಿಸಿದರು. ಚಿಕ್ಕ ಪುಟ್ಟ ದಾಳಿಗಳನ್ನು ಅವರು ಎದುರಿಸಿದ್ದುಂಟು. ಕೆಲವು ವರ್ಷಗಳ ಸೈನಿಕ ಸೇವೆಯ ನಂತರ, ಮರಳಿ ಜನ್ಮ ಗ್ರಾಮಕ್ಕೆ ಬಂದು ನೆಲೆ ನಿಂತರು. ಮನೆತನದ ಉದ್ಯೋಗ ಕೃಷಿಯಲ್ಲಿ ತೊಡಗಿದರು.

ಚೆನ್ನಪ್ಪ ಕವಿಗಳದು ಸಂತೃಪ್ತ ಮತ್ತು ಸುಖದ ಸಂಸಾರ. ಅವರ ಹೆಂಡತಿ ತೇಜಮ್ಮನವರು. ಈ ದಂಪತಿಗಳಿಗೆ ಒಬ್ಬ ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳಿದ್ದಾರೆ.

ಚೆನ್ನಪ್ಪನವರದು ಸಮಾಜ ಸೇವಕನ ಮನಸ್ಸು. ಸೈನ್ಯದಲ್ಲಿ ಸೇವೆಗೈದು ಬಂದಿರುವ ಅನುಭವವು ಈಗ ಅವರಿಗೆ ಸಾಕಷ್ಟು ಸಹಾಯಕವಾಗಿದೆ. ಊರಿನಲ್ಲಿ ಯಾವುದೇ ಸಾಮಾಜಿಕ ಕಾರ್ಯವು ನಡೆದರೂ ಅಲ್ಲಿ ಚೆನ್ನಪ್ಪನವರು ಭಾಗವಹಿಸುತ್ತಾರೆ. ಕೈಲಾದ ಕೆಲಸ ಮಾಡುತ್ತಾರೆ. ಚೆನ್ನಪ್ಪನವರಲ್ಲಿ ಆಧ್ಯಾತ್ಮಿಕ ಹೃದಯವಿದೆ. ಅವರು ಹೆಡಗಾಪುರದಲ್ಲಿರುವ ಶಿವಲಿಂಗೇಶ್ವರ ಸಂಸ್ಥಾನಮಠಕ್ಕೆ ಅನನ್ಯಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಏಕೆಂದರೆ ಆ ಮಠದ ಸ್ವಾಮಿಗಳೇ ಚೆನ್ನಪ್ಪನವರ ಮನೆತನದ ಗುರುಗಳಾಗಿದ್ದಾರೆ. ಸಧ್ಯ ಸಂಸ್ಥಾನ ಮಠದ ಅಧಿಪತಿಗಳಾಗಿ ಶ್ರೀ.ಷ.ಬ್ರ.ಶಿವಲಿಂಗ ಶಿವಾಚಾರ್ಯರು ಇದ್ದಾರೆ. ಅವರು ಮಿತಭಾಷಿಗಳು, ಸದಾಚಾರ ಶೀಲರು; ಭಕ್ತರ ಉದ್ಧಾರದ ಬಗೆಗೆ ಕಳಕಳಿವುಳ್ಳವರೂ ಆಗಿದ್ದಾರೆ. ಚೆನ್ನಪ್ಪನವರಿಗೆ ಶಿವಲಿಂಗ ಶಿವಾಚಾರ್ಯರನ್ನು ಕಾಣುವುದೆಂದರೆ ಸಾಕ್ಷಾತ್ ದೇವರನ್ನೇ ಕಂಡಷ್ಟು ಆನಂದವಾಗುತ್ತದಂತೆ. ಊರಿಗೆ ಹೊಸಬರು ಯಾರೇ ಬರಲಿ, ಅವರನ್ನು ಕರೆದುಕೊಂಡು ಚೆನ್ನಪ್ಪನವರು ಮಠಕ್ಕೆ ಹೋಗುತ್ತಾರೆ. ಪ್ರಸಾದ ಮಾಡಿಸುತ್ತಾರೆ. ಶಿವಲಿಂಗ ಶಿವಾಚಾರ್ಯರ ಬಳಿಗೆ ಕರೆದೊಯ್ದು, ದರ್ಶನಾಶೀರ್ವಾದ ಮಾಡಿಸಿ, ಕಳುಹಿಸಿ ಕೊಡುತ್ತಾರೆ. ಚೆನ್ನಪ್ಪನವರ ಬಗೆಗೆ ಶಿವಲಿಂಗ ಶಿವಾಚಾರ್ಯರಿಗೂ ಅತೀವ ಪ್ರೇಮವಿದೆ. ಅವರು ಚೆನ್ನಪ್ಪನವರ ಬಗೆಗೆ ಹೇಳುವ ಮಾತುಗಳಲ್ಲಿ ಆ ಪ್ರೇಮವು ತುಂಬಿನಿಂತು ಕೊಂಡಿದೆ: "ಯರನಳ್ಳಿ ಮನೆತನವು ಈ ಊರಲ್ಲಿ ಶೀಲಸಂಪನ್ನ ಮನೆತನ. ಹಿಂದಿನಿಂದಲೂ ಅವರ ಹಿರಿಯರು ಗುರು-ಲಿಂಗ-ಜಂಗಮರಲ್ಲಿ ಭಕ್ತಿಯನಿಟ್ಟುಕೊಂಡು ಬಂದವರು. ಚೆನ್ನಪ್ಪನವರು ಆ ಪರಂಪರೆಯನ್ನು ಇಂದು ಜೀವಂತವಾಗಿ ಉಳಿಸಿಕೊಂಡು ಬರುತ್ತಲಿದ್ದಾರೆ. ಅವರು ಭಕ್ತಿವಂತ ಮನದ ಕವಿಗಳು, ಕನ್ನಡ ಮತ್ತು ಹಿಂದಿ ಎರಡು ಭಾಷೆಗಳಲ್ಲಿ ಹಾಡುಗಳನ್ನು ಬರೆದಿದ್ದಾರೆ. ಅವರು ನಮ್ಮ ಮಠದ ಶಿಷ್ಯರೆಂದು ಹೇಳಿಕೊಳ್ಳುವುದಕ್ಕೆ ಹೆಮ್ಮೆಯೆನಿಸುತ್ತದೆ".

ಚೆನ್ನಪ್ಪನವರ ಮನೆಯದೇವರು ಬೀದರ ತಾಲ್ಲೂಕಿನ ಹೊನ್ನಿಕೇರಿ ಸಿದ್ಧೇಶ್ವರರು. ದೇವರ ದರ್ಶನಕ್ಕಾಗಿ ಆಗಾಗ ಹೋಗಿ ಬರುತ್ತಾರೆ. ಅಲ್ಲಿನ ಕಾರ್ಯಗಳಿಗೆ ತಮ್ಮ ಕೈಲಾದ ಸಹಾಯ-ಸಹಕಾರ ನೀಡುತ್ತಾರೆ.

ಚೆನ್ನಪ್ಪನವರು ತಮ್ಮ ಊರಿನವರೇ ಆಗಿರುವ ಸಿದ್ಧರಾಮ ಮುಕರಂಬಿ ಅವರ ಬಗೆಗೆ ಗೌರವದ ಭಾವವುಳ್ಳವರಾಗಿದ್ದಾರೆ. ಅವರ ಪ್ರಭಾವದಿಂದಲೇ ತಮಗೆ ಕಾವ್ಯ ರಚನಾಕಲೆ ಸಿದ್ಧಿಸಿತೆಂಬ ವಿನಯದ ಮಾತು ಅವರು ಹೇಳುತ್ತಾರೆ.

ಚೆನ್ನಪ್ಪನವರು ಹಲವಾರು ಭಜನೆ-ತತ್ತ್ವಪದಗಳನ್ನು ಬರೆದಿದ್ದಾರೆ. ಹಾಗೆಯೇ ದೇಶಭಕ್ತಿ ಗೀತೆಗಳನ್ನು ಕನ್ನಡ ಮತ್ತು ಹಿಂದಿಯಲ್ಲಿ ರಚನೆ ಮಾಡಿದ್ದಾರೆ. ಅವರು ತಮ್ಮ ತತ್ತ್ವಪದಗಳಿಗೆ "ಶಿವಲಿಂಗೇಶ್ವರ"ವೆಂಬ ಅಂಕಿತವನ್ನು ಇರಿಸಿಕೊಂಡಿದ್ದಾರೆ.

ಅಂಕಿತವು ಅವರ ಗುರುವಿನ ಹೆಸರನ್ನು ಪ್ರತಿನಿಧಿಸುತ್ತದೆ. ಚೆನ್ನಪ್ಪ ಕವಿಗಳಿಂದ ರಚಿತವಾಗಿರುವ ಕೆಲವು ಪದ್ಯಗಳನ್ನು ಇಲ್ಲಿ ಉದ್ಧರಿಸಲಾಗಿದೆ:

ದುಡಿದು ದಣದಿತ್ತ ಜೀವ

ದುಡಿದು ದುಡಿದು ದಣಿದಿತ್ತ ಈ ಜೀವ
ಮಾಟ ಮಾಡಿ ಮುಪ್ಪಾಯಿತು ಕಾಯಾ ॥ ಪ ॥

ನೋಡಿ ನೋಡಿ ಹೋಯಿತು ಕಣ್ಣಿನ ಜ್ಯೋತಿಯು
ಆಡುತ ಸುಳ್ಳುಗಳಿಂದ ಸವೆಯಿತು ನಾಲಿಗೆಯು
ಕೂಡಿ ದುರ್ಜನರ ಸಂಗದಲಿ ಕಳೆಯಿತು ಆಯುಷ್ಯವು
ಕಾಡಾಟ ಹೆಚ್ಚಾಯಿತು ಮಾಯಿಯ ಭಯವು ।೧॥

ನಡೆದು ನಡೆದು ಹೋದವು ಕಾಲುಗಳು ಸವೆದು
ಹಿಡಿದು ಹಿಡಿದು ಹೋದವು ಕೈಗಳು ಬಸವಳಿದು
ತಡಕಿ ತಡಕಿ ಹೋಯಿತು ಟೊಂಕದ ಕೀಲು
ಮಾಡಿ ಚಿಂತೆಯಿಂದಲಿ ಹೋಯಿತು ಬುದ್ಧಿಯ ಜ್ಞಾನವು ॥ ೨ ॥

ಹೆಂಡರ – ಮಕ್ಕಳ ಕೂಡಿ ಬಾಳ ಮಾಡಿಲ್ಲ
ಬಂಧು–ಬಳಗದ ಸಂಬಂಧ ತಿಳಿದಿಲ್ಲ
ಹಗಲು–ರಾತ್ರಿ ಹೋರಾಡುವುದು ತಪ್ಪಲಿಲ್ಲ
ಹಬ್ಬ–ಸಂಭ್ರಮದ ಸುಖ ಎಂದೂ ಕಾಣಲಿಲ್ಲ ॥ ೩ ॥

ಸಂಸಾರದ ದುಃಖವು ಹೋಗಲಿಲ್ಲ
ಭವ ಸಾಗರದ ಮ್ಯಾಲೆ ಏಳಲೇ ಇಲ್ಲ
ಶಿವಲಿಂಗ ಗುರುವಿನ ಕೂಡಲೇ ಇಲ್ಲ
ಜವನ ದಾಳಿಯಿಂದ ಬಿಡುಗಡೆಯಿಲ್ಲ ॥ ೪ ॥

ನಿನ್ನೊಳು ನೀ ತಿಳಿದಾಗ ಶಿವಯೋಗಿ

ಮಡದಿ ಮಕ್ಕಳ ಪ್ರಪಂಚಕ್ಕಾಗಿ
ದುಡಿದು ದುಡಿದು ನೀ ಸವೆದು ಹೋದಿ ॥ ಪ ॥

ಎಲ್ಲ ನನ್ನದೆ ಅಂದು ಕೋಣನಾದಿ
ಖುಲ್ಲ ನೀ ಬಿಟ್ಟು ಹೋಗುವಾಗ ಯಾರೂ ಇಲ್ಲ ಗೂಗಿ
ಹೊರಗ ನೋಡಬ್ಯಾಡ ಒಳಗ ಇಳಿ ಬೇಗಿ
ನಿನ್ನೊಳಗ ನೀ ತಿಳಿದಾಗ ಶಿವಯೋಗಿ ॥ ೧ ॥

ಕೋತಿಯಂಗ ಕುಣಿದಾಡಬೇಡ
ನೀತಿ ಮಾರ್ಗ ಹಿಡಿಯಲೇ ಮಡ್ಡಾ
ಕುಣಿಯಬ್ಯಾಡ ರಂಗೋಲಿ ತೀಡಿ
ಢೊಂಗಿ ಉಪಚಾರ ಮಧ್ಯದಿ ನೀಡಿ ॥ ೨ ॥

ತಾಯಿ ತಂದೀನ ಮರಿಯ ಬ್ಯಾಡ
ಗುರು–ಹಿರಿಯರ ಜರಿಯಬ್ಯಾಡ
ಅರುವ್ಹಿಡಿದು ಕಾಯಕ ಮಾಡ
ಶಿವಲಿಂಗನ ಪಾದಕ ಕೂಡ ॥ ೩ ॥

ಸಂಗಡ ಯಾರೂ ಬರಲಿಲ್ಲ

ಯಾರೂ ಬರುವ್ರುದಿಲ್ಲಾ ಸಂಗಡ
ಯಾರೂ ಬರುವ್ರುದಿಲ್ಲಾ ॥ ಪ ॥

ಹೆಂಡರು–ಮಕ್ಕಳು ಹೆರವರು ಕಾಣೋ
ನಿನ್ನ ಸಂಗಡ ಬರುವದಿಲ್ಲೋ ಅಜ್ಞಾನಿ
ನೀನೊಬ್ಬನೆ ಬಂದಿಯಲ್ಲಾ
ಅನುವಿನ ಜ್ಞಾನ ತಿಳಿಯಲಿಲ್ಲ ॥ ೧ ॥
ನೀ ಬರುವಾಗ ಪೂರಾ ಬತ್ತಲೆ ಬಂದಿ


ನಿನ್ನ ಬೆನ್ನ ಹಿಂದ ಬರೆ ಕತ್ತಲೆ ತಂದಿ
ನಿನ್ನ ಸತಿ-ಸುತರು ಉಂಡುಟ್ಟು ಮೆರೆವರು
ನೀ ಕೆಟ್ಟು ಹೋದಾಗ ನಿನ್ನ ಜರೆವರು ॥ ೨ ॥

ಶಿವ ಶಿವ ಎನ್ನುತ ಶಿವಧ್ಯಾನವ ಮಾಡೋ
ಭವದ ಸಂಸಾರ ಸುಳ್ಳೆಂದು ದೂಡೋ
ಯಾರೂ ನಿನ್ನವರಲ್ಲ ಇದು ಸತ್ಯ ನೋಡೋ
ಗುರು ಶಿವಲಿಂಗನ ಸನ್ನಿಧಿಯ ಕೂಡೋ ॥ ೩ ॥

(ಈ ವಿವರಗಳನ್ನು ಸ್ವತಃ ಕವಿಗಳೇ ಕೊಟ್ಟಿರುವರು.)



ಚೆನ್ನಪ್ಪ ಯರನಳ್ಳಿ ಅವರ ಮನೆ (ಹೆಡಗಾಪುರ).



ಚೆನ್ನಪ್ಪ ಯರನಳ್ಳಿ.



ಚೆನ್ನಪ್ಪನವರ ಧರ್ಮಪತ್ನಿ
ತೇಜಮ್ಮ.




ತತ್ತ್ವಪದಕಾರ ಚೆನ್ನಪ್ಪನವರು.




ಚೆನ್ನಪ್ಪನವರ ತಂದೆ ಶರಣಪ್ಪನವರು



ಚೆನ್ನಪ್ಪನವರ ತಾಯಿ ನೀಲಮ್ಮ.



ಚೆನ್ನಪ್ಪ ದಂಪತಿಗಳು.



ಚೆನ್ನಪ್ಪ ಅವರ ಪರಿವಾರ.



ಚೆನ್ನಪ್ಪನವರ ಗುರುಗಳಾದ ಶ್ರೀ ಶೀವಲಿಂಗೇಶ್ವರ ಸಂಸ್ಥಾನ ಮಠ (ಹೆಡಗಾಪುರ).



ಗುರುಗಳಾದ ಶಿವಲಿಂಗ ಶಿವಾಚಾರ್ಯರು.

೨೧. ರತ್ನಪ್ಪ ಮಾನಕಾರಿ (ಕ್ರಿ.ಶ.ಸು. ೧೯೪೫)

ಬೀದರ ಜಿಲ್ಲೆಯ ಔರಾದ ತಾಲ್ಲೂಕಿನ ಜೀರ್ಗಾ(ಕೆ) ಗ್ರಾಮವು ರತ್ನಪ್ಪನವರ ಸ್ವಗ್ರಾಮವಾಗಿದೆ. ದಲಿತ (ಮಾದಾರ) ಕುಟುಂಬದಲ್ಲಿ ಹುಟ್ಟಿ, ಕಾವ್ಯ ಶಕ್ತಿಯನ್ನು ಪಡೆದು, ಸಾಂಸ್ಕೃತಿಕ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವ ರತ್ನಪ್ಪನವರ ಸಾಧನೆ ನಿಜಕ್ಕೂ ಸ್ತುತ್ಯವಾದುದು.

ರತ್ನಪ್ಪನವರ ತಂದೆ ಫಾಳೆಪ್ಪನವರು ದೈವೀ ಭಕ್ತರು. ಕೃಷಿಕಾಯಕ-ಕೂಲಿಯಿಂದ ತಮ್ಮ ಬದುಕನ್ನು ನಡೆಸುತ್ತಿದ್ದರು. ಅವರದು ಬಡತನದ ಸಂಸಾರ. ಆದರೆ ಮನಸ್ಸು ಬಡತನದಾಗಿರಲಿಲ್ಲ. ತಮ್ಮಲ್ಲಿದ್ದ ಶ್ರೀಮಂತವಾದ ಮನದ ಅಂಶಗಳನ್ನೇ ಫಾಳೆಪ್ಪನವರು ತಮ್ಮ ಮಗ ರತ್ನಪ್ಪನವರಿಗೆ ನೀಡಿದರು. ತುಳಜಮ್ಮನವರು ತಾಯಿಯಾಗಿ ಶ್ರಮದ ಸಂಸ್ಕೃತಿಯನ್ನು ಜೋಗುಳದೊಂದಿಗೆ ಹಾಡಿ; ಎದೆಯ ಧಾರೆಯೊಂದಿಗೆ ಉಣಿಸಿದರು.

ಫಾಳೆಪ್ಪ-ತುಳಜಮ್ಮ ದಂಪತಿಗಳಿಗೆ ಒಟ್ಟು ನಾಲ್ಕು ಜನ ಮಕ್ಕಳು. ಅವರಲ್ಲಿ ರತ್ನಪ್ಪನವರು ಮೂರನೆಯವರು. ಅವರಿಗೆ ಮಾಣಿಕ, ಏಶಪ್ಪ ಎಂಬ ಇಬ್ಬರು ಅಣ್ಣಂದಿರು; ತೇಜಮ್ಮ ಎಂಬುವರೊಬ್ಬರು ತಂಗಿ. ಈ ದೊಡ್ಡ ಸಂಸಾರವನ್ನು ಫಾಳೆಪ್ಪನವರು ದೇವರ ಮೇಲೆ ಭಾರಹಾಕಿ , ಪ್ರಾಮಾಣಿಕತೆಯಿಂದ ದುಡಿಯುತ್ತ ಸರಿದೂಗಿಸಿದರು.

ರತ್ನಪ್ಪನು ಕ್ರಿ.ಶ. ೧೯೪೫ರ ವರ್ಷದಲ್ಲಿ ಜನಿಸಿದರು. ಆಗ ಜೀರ್ಗಾ ಗ್ರಾಮವು ಅತ್ಯಂತ ಹಿಂದುಳಿದ ಮತ್ತು ಚಿಕ್ಕ ಗ್ರಾಮವಾಗಿತ್ತು. ಹತ್ತಿರದ ಶೆಂಬೆಳ್ಳಿಯಲ್ಲಿ ಪ್ರಾಥಮಿಕ ಶಾಲೆಯಿದ್ದಿತು. ರತ್ನಪ್ಪನವರು ಅಲ್ಲಿನ ಪ್ರಾಥಮಿಕ ಶಾಲೆಯಲ್ಲಿ ಐದನೆಯ ವರ್ಗದವರೆಗೆ ಕನ್ನಡದ ಶಿಕ್ಷಣ ಪಡೆದರು. ಅಷ್ಟಕ್ಕೆ ಶಿಕ್ಷಣ ಬಿಟ್ಟು; ಸಂಸಾರಕ್ಕೆ ಕಾಲಿರಿಸಿದರು.

ರತ್ನಪ್ಪನವರ ಹೆಂಡತಿ ಪಾರಮ್ಮ. ಈ ದಂಪತಿಗಳಿಗೆ ಲಕ್ಷ್ಮಿ ಎಂಬ ಒಬ್ಬಳೇ ಮಗಳಿದ್ದಾಳೆ. ರತ್ನಪ್ಪನವರಾದರೂ ಕೂಲಿ ಕೆಲಸವನ್ನೇ ಮಾಡುತ್ತಾರೆ. ಭಜನೆ-ಹಾಡುಗಾರಿಕೆಗಳಂತಹ ಕಾರ್ಯಕ್ರಮಗಳಿಗೆ ಕರೆ ಬಂದಾಗ ಊರು-ಊರುಗಳಿಗೆ ಓಡಾಡುತ್ತಾರೆ. ರತ್ನಪ್ಪನಲ್ಲಿ ಭಕ್ತಿಯ ಮನವಿದೆ; ಆಧ್ಯಾತ್ಮದ ಬಗೆಗೆ ಆಸಕ್ತಿಯಿದೆ. ಅವರು ನಂಬಿದ ದೇವರುಗಳಲ್ಲಿ ಧಾರ್ಮಿಕ ಸಮನ್ವಯತೆಯಿದೆ. ಶೆಂಬೆಳ್ಳಿಯ ಇಸ್ಲಾಂ

ಖಾದ್ರಿಯನ್ನು ನಂಬಿದಂತೆ ಜೀರ್ಗಾ ಗ್ರಾಮದ ಹನುಮಾನ ದೇವರನ್ನು ಅವರು ನಂಬಿದ್ದಾರೆ. ಉಭಯರ ಅಂಕಿತಗಳನ್ನು ತಮ್ಮ ಹಾಡುಗಳಿಗೆ ಇರಿಸಿಕೊಂಡಿದ್ದಾರೆ. ಆಂಧ್ರ ಪ್ರದೇಶದ ಎಂಬುಲವಾಡ ಗ್ರಾಮದ ಸಿದ್ರಾಮಪ್ಪ ಎಂಬುವರಿಂದ ದೀಕ್ಷೆ ಸ್ವೀಕರಿಸಿದ್ದಾರೆ.

ರತ್ನಪ್ಪನವರು ಚಿಕ್ಕಂದಿನಿಂದಲೇ ಹಾಡು ಹಾಡುವ ಹವ್ಯಾಸವನ್ನು ಬೆಳೆಯಿಸಿಕೊಂಡು ಬಂದವರು. ಇಂತಹ ಹವ್ಯಾಸದ ಅಂಕುರಕ್ಕೆ ಕಾರಣರಾದವರು ರತ್ನಪ್ಪನವರ ಸೋದರಮಾವ ಪರಬಣ್ಣ. ಇವರ ಮೂಲ ಗ್ರಾಮವು ಭಾಲ್ಕಿ ತಾಲ್ಲೂಕಿನ ಕೋಟಿಗ್ಯಾಳ. ಅಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು.

ಪರಬಣ್ಣನವರ ಜೀವನವು ಅಲ್ಲಿ ಸರಿಯಾಗಿ ನಡೆಯದೆ ಹೋದಕಾರಣ ಸ್ವಗ್ರಾಮವನ್ನು ಬಿಟ್ಟು ಅವರು ಜೀರ್ಗಾದಲ್ಲಿ ಬಂದು ನೆಲೆಸಿದರು. ಪರಬಣ್ಣ ಒಳ್ಳೆಯ ಹಾಡುಗಾರನಾಗಿದ್ದರು; ಸುಮಧುರವಾದ ಕಂಠದಿಂದ ಹಾಡು ಹಾಡುತ್ತಿದ್ದರು. ಸೋದರ ಮಾವನ ಹಾಡುಗಳು ಬಾಲಕ ರತ್ನಪ್ಪನವರ ಮನವನ್ನು ಆಕರ್ಷಿಸಿದವು. ತಮಗೂ ಹಾಡು ಕಲಿಸುವಂತೆ ಮಾವನವರನ್ನು ಕಾಡ ತೊಡಗಿದರು. ಪರಬಣ್ಣನವರು ಸೋದರಳಿಯನಿಗೆ ಹಾಡು ಹೇಳಿಕೊಟ್ಟರು. ರತ್ನಪ್ಪ ಕಲಿಸಿದ ಹಾಡುಗಳಲ್ಲಿ ಒಂದನ್ನು ಸರಿಯಾಗಿ ಕಂಠಪಾಠ ಮಾಡಿದರು.

ಒಂದು ಸಲ ಮೋಹರಮ್ ಸಮಾರಂಭದಲ್ಲಿ ರತ್ನಪ್ಪನವರು ತಮಗೆ ತಿಳಿದಿದ್ದ ಹಾಡನ್ನೇ ಹಾಡುತ್ತಾರೆ. ಆಗ ಅಲ್ಲಿದ್ದ ಬಾಬಣ್ಣನವರು ತರುಣ ರತ್ನಪ್ಪನವರಿಗೆ ಹಾಡಿನ ಮೂಲಕ ಸವಾಲು ಹಾಕುತ್ತಾರೆ. ಆಗ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ರತ್ನಪ್ಪನವರು ಸೋಲುತ್ತಾರೆ. ಅಂದಿನಿಂದ ಅವರು ಶೆಂಬೆಳ್ಳಿ ಬಾಬಣ್ಣನವರ ಶಿಷ್ಯರಾಗುತ್ತಾರೆ. ಬಾಬಣ್ಣನವರು ತರುಣ ರತ್ನಪ್ಪನವರನ್ನು ಅತ್ಯಂತ ಪ್ರೀತಿಯಿಂದ ಶಿಷ್ಯನನ್ನಾಗಿ ಸ್ವೀಕರಿಸುತ್ತಾರೆ. ಹಾಡುಗಳನ್ನು ಕಲಿಸುತ್ತಾರೆ. ತಮ್ಮೊಂದಿಗೆ ಹಲವಾರು ಸ್ಥಳಗಳಿಗೆ ಕರೆದುಕೊಂಡು ಹೋಗುತ್ತಾರೆ.

ರತ್ನಪ್ಪನವರಲ್ಲಿ ಹಾಡುವ ಕಲೆ ಬೆಳೆದಂತೆ, ಆಶುಕವಿತ್ವದ ಕಲೆಯೂ ಬೆಳೆಯುತ್ತದೆ. ಹಾಡುಗಳನ್ನು ಕಟ್ಟುವುದಕ್ಕೆ ಆರಂಭಿಸುತ್ತಾರೆ. ರತ್ನಪ್ಪನವರು ಆಮಂತ್ರಣದ ಮೇರೆಗೆ ಮೋಹರಮ್, ಭಜನೆ ಕಾರ್ಯಕ್ರಮಗಳಿಗೆ ಹೋಗುತ್ತಾರೆ. ಅವರೊಂದು ಸಂಘವನ್ನು ಕಟ್ಟಿದ್ದಾರೆ. ಸಂಘದೊಡನೆ ಈ ವರೆಗೂ ಹಲವಾರು ಗ್ರಾಮಗಳನ್ನು ಸಂಚರಿಸಿ ತಮ್ಮ ಹಾಡುಗಾರಿಕೆಯ ಕಲೆಯನ್ನು ಪರಿಚಯಿಸಿದ್ದಾರೆ. ಒಳ್ಳೆಯ ಹಾಡುಗಾರ-ಕವಿಯೆಂಬ ಖ್ಯಾತಿಯನ್ನು ಸಂಪಾದಿಸಿದ್ದಾರೆ. ಹಲವಾರು ಮಾನ-ಸನ್ಮಾನಗಳನ್ನು ಪಡೆದಿದ್ದಾರೆ.

ರತ್ನಪ್ಪನವರು ಪುರಾಣ-ಪ್ರವಚನಗಳಲ್ಲಿ ಗತಿವುಳ್ಳವರಾಗಿದ್ದಾರೆ. ಹಲವಾರು ಆಕರ

ಗ್ರಂಥಗಳನ್ನು ಓದಿ ಕೊಂಡಿದ್ದಾರೆ. ಶರಣರ ವಚನಗಳನ್ನು ಸರಿಯಾಗಿ ತಿಳಿದು ಕೊಂಡಿದ್ದಾರೆ.

ರತ್ನಪ್ಪನವರ ಸಾಹಿತ್ಯದಲ್ಲಿ ಇಂದು ಮೋಹರಮ್ ಹಾಡುಗಳು, ಜೋಗುಳದ ಹಾಡುಗಳು, ತತ್ತ್ವಪದಗಳು, ಸಾಕ್ಷರತಾ ಹಾಡುಗಳು ಕಂಡು ಬರುತ್ತವೆ. ಗುರುಬಾಬಣ್ಣನವರ ಹೆಸರನ್ನೆ ತಮ್ಮ ಹಾಡುಗಳಿಗೆ ಅಂಕಿತವಾಗಿಟ್ಟು ಕೊಂಡಿದ್ದಾರೆ. ಅವರ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ಮನಸ್ಸಿಗೆ ಮಾಡು ಬೋಧ

ಬಾಯಿಲೆ ಓದಿದರ ಏನಾಯ್ತೋ ವೇದಾ
ತನ್ನ ಮನಸ್ಸಿಗೆ ಮಾಡಿಲ್ಲ ಬೋಧಾ ॥ ಪ ॥

ಚೋರ ಮಂಟಪದಲ್ಲಿ ಕುಳಿತು
ಬೋರೆಂದು ಕೂಗಿದರೇನು ಒಳಿತು
ಆರು–ಮೂರೆಂದು ಹೇಳಿದರೆ ತಿಳೀತು
ಸಹಸ್ರಾರ ಕಮಲದೊಳಗ ಹೊಳಿತು ॥ ೧ ॥

ಬಾಯಿಲೊಂದು ಮಾತಾಡುತ್ತ
ಮನದೊಳಗೊಂದು ಚಿಂತಿಸುತ್ತ
ಒಳಗ –ಹೊರಗ ಒಂದಾಗದ
ಬಾಯಿಲೆ ಓದಿದರೆ ಏನಾಗುವುದೋ ವೇದಾ ॥ ೨ ॥

ತಿಳಿದು ಗುರುವಾಗಬೆಕು
ಮರೆದರೆ ಪಶುವಾಗುತಿ ಜೋಕೆ
ತಿಳಿದು–ಅಳಿದು ಉಳಿದು ಕೂಡಬೇಕು
ಸದ್ಗುರುವಿನ ದಯವೊಂದಿರಬೇಕು ॥ ೩ ॥

ಕಾಮನ ಕೂಟಕ ಕರಣಗಳ ಚಾಚಿ
ನಾಸಿಕ ಮುರದು ಮಾತಾಡುತಿ ನೀಚ

ನೇಮದ ಗುರುವಿನ ವಿರತಿ
ಕಾಮಕ್ಕ ಬಿದ್ದರ ಬಿಡದಪ್ಪ ಭ್ರಾಂತಿ ॥ ೪ ॥

ಸಣ್ಣ ಶೆಂಬೆಳ್ಳಿ ಊರಾಗ
ಜೀರ್ಗ್ಯಾದ ಹುಡಗ ಬಡಕಡುಗ
ಗುರು ಬಾಬಣ್ಣ ಕೇಳ್ಯಾರ ವಾದ
ಬರೆ ಬಾಯಿಲೆ ಓದಿದರ ಹ್ಯಾಂಗಪ್ಪ ವೇದ ॥ ೫ ॥

ಪುಣ್ಯ ಗಳಿಸಲಿಲ್ಲ

ಪುಣ್ಯಾ ಗಳಿಸಲಿಲ್ಲ ಮನವೆ
ಪಾಪದಿ ಉಳಿದೆಲ್ಲ ॥ ಪ ॥

ಮೋಹದೊಳಗ ಮಿಡುಕಿದಿ
ಮಡದಿಯ ಕಡು ತುಡುಕಿದಿ
ಮಕ್ಕಳ ಕಕ್ಕುಲತೆಗೆ ದುಡುಕಿದಿ
ಮರಣವ ಗೆಲಲಿಲ್ಲ ॥ ೧ ॥

ಗುರುವ ಪೂಜಿಸಲಿಲ್ಲ ಮನವೆ
ಅರುವಿಲೆ ನಡಿಲಿಲ್ಲ
ಮೂರು ಕಾಲದಲಿ ನೆನಿಲಿಲ್ಲ
ಆರು ಗುಣಗಳ ಬಿಡಲಿಲ್ಲ ॥ ೨ ॥

ಹಿಂದೆ-ಮುಂದೆ ತಿಳಿಯಾದೆ
ಭವ ಬಂಧನಕೆ ಬಲಿಯಾದೆ
ನೊಂದು ಬೆಂದು ನೀ ಹ್ವಾದೆ
ಗೆದೆಯಲಿಲ್ಲ ಮರವಿನ ಬಾಧೆ ॥ ೩ ॥

ತನ್ನ ಮನಕೆ ತಿಳಿಯಬೇಕು
ಮನದ ಕನಿಷ್ಟವ ಬಿಡಬೇಕು

ಮನಕೆ ಬೋಧೆಯ ಹೇಳಬೇಕು
ವೇದದ ಭೇದವ ತಿಳಿಬೇಕು ॥ ೪ ॥

ಧರಿಯೊಳಗ ಮೆರೆವ ಊರಾ ಜೀರಗಾ
ಗುರು ಬಾಬಣ್ಣ ಹೇಳ್ಯಾನ ತತ್ತ್ವದ ಸಾರಾ
ಪುಣ್ಯಾವ ಅಡಗ್ಯಾದ ಪೂರಾ
ಪಾಪದ ಸೋಂಕಿಲ್ಲ ಜರಾ ॥ ೫ ॥

(ಸ್ವತಃ ಕವಿಗಳೇ ಈ ವಿವರಗಳನ್ನು ನೀಡಿದ್ದಾರೆ.)



ರತ್ನಪ್ಪ ಮಾನಕಾರಿ ಅವರ ಮನೆ (ಜೀರ್ಗಾ. ಕೆ)



ರತ್ನಪ್ಪ ಮಾನಕಾರಿ.




ರತ್ನಪ್ಪ ಮಾನಕಾರಿ ಅವರು ಕುಟಂಬದ ಸದಸ್ಯರೊಂದಿಗೆ.



ರತ್ನಪ್ಪ ಮಾನಕಾರಿ ಅವರ ಸಾಹಿತ್ಯ ನಿರ್ಮಿತಿಯ ಸ್ಥಲ.



ರತ್ನಪ್ಪ ಮಾನಕಾರಿ ಅವರ ಆರಾಧ್ಯ ದೇವರು ಹನುಮಪ್ಪನ ದೇವಾಲಯ (ಜೀರ್ಗಾ-ಕೆ).



ರತ್ನಪ್ಪ ಮಾನಕಾರಿ ಅವರ ಆರಾಧ್ಯ ದೇವರು ಇಸ್ಮಾಯಿಲ್ ಖಾದ್ರಿ ದರ್ಶನ ಮಜಾರು.

೨೨. ಬಸಪ್ಪ ಮೂರ್ತೆಲಿ (ಕ್ರಿ.ಶ.ಸು. ೧೯೪೫)

ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಬರುವ ಗ್ರಾಮ ಉಜ್ಜನಿಯೆಂಬುದು ಸಾಹಿತ್ಯಿಕವಾಗಿ ಪ್ರಸಿದ್ಧಿ ಪಡೆದುದು ಅಲ್ಲಿನ ತತ್ತ್ವಪದಕಾರ – ಹಾಡುಗಾರನಾಗಿರುವ ಬಸಪ್ಪ ಮೂರ್ತೆಲಿ ಅವರಿಂದ. ಅವರಿಗೆ "ಬಸಪ್ಪ ಸೂರ್ಯವಂಶಿ" ಎಂತಲೂ ಕರೆಯುತ್ತಾರೆ.

ಬಸಪ್ಪನವರ ತಂದೆ ಬಾಳಪ್ಪ. ದಲಿತ (ಮಾದರ) ಕುಟುಂಬದ ಬಡ ವ್ಯಕ್ತಿ. ಕೃಷಿ ಕೆಲಸದಿಂದ ಉಪಜೀವನ ಮಾಡುತ್ತಿದ್ದವನು. ಅವನ ಹೆಂಡತಿ ಲಾಲವ್ವ. ಗಂಡನೊಡನೆ ಕೂಲಿ ಕೆಲಸ ಮಾಡಲು ಹೋಗುತ್ತಿದ್ದಳು. ಬಾಳಪ್ಪ–ಲಾಲವ್ವ ಉಭಯರೂ ಹಾಡುಗಾರರಾಗಿದ್ದರು. ಲಾಲವ್ವನು ಹೆಣ್ಣು ಮಕ್ಕಳ ಹಾಡುಗಳನ್ನು ಹಾಡುತ್ತಿದ್ದಳು. ಮಗ ಬಸಪ್ಪ ತಾಯಿಯ ಹಾಡುಗಳನ್ನು ಕಿರಿಯ ವಯದಿಂದಲೇ ಕೇಳುತ್ತ ಬಂದನು. ಹಾಗೆಯೇ ತಂದೆಯೊಂದಿಗೆ ಭಜನೆಗೆ ಹೋದ ಕಾರಣದಿಂದ ತಂದೆಯ ಹಾಡಿನೊಂದಿಗೆ ಬೇರೆಯವರ ಹಾಡುಗಳೂ ಬಸಪ್ಪನವರ ಕಿವಿಗಳ ಮೇಲೆ ಬಿದ್ದವು. ಬಾಲ್ಯದಲ್ಲಿಯೆ ಬಸಪ್ಪನಿಗೆ ಹಾಡುಗಾರನಾಗಬೇಕೆಂಬ ಹಂಬಲವು ಜಾಗ್ರತವಾಯಿತು. ತನ್ನದೆ ಆದ ರೀತಿಯಲ್ಲಿ ಹಾಡಲು ಆರಂಭ ಮಾಡಿದನು.

ಬಸಪ್ಪನು ತಂದೆಯೊಡನೆ ಎಲ್ಲಿಗಾದರೂ ಹೋದರೆ ಅಲ್ಲಿ ಜನರು ಅವನನ್ನು "ಬಾಳಪ್ಪನ ಬಾಲ" ಎಂದು ಕರೆಯುತ್ತಿದ್ದರು.

ಬಸಪ್ಪನು ಶಾಲೆಗೆ ಹೋಗಲಿಲ್ಲ, ನಿರಕ್ಷರಿಯಾಗಿ ಬೆಳೆದನು. ಬಾಲ್ಯದಲ್ಲಿ ದನಗಳನ್ನು ಕಾಯಲು ಅಡವಿಗೆ ಹೋಗುತ್ತಿದ್ದನು. ತನ್ನ ಸರಿಕರಾದ ಹುಡುಗರ ಎದುರಿನಲ್ಲಿ ತಾನು ಕಲಿತಿದ್ದ ಹಾಡುಗಳನ್ನು ಹಾಡುತ್ತಿದ್ದನು. ದನ ಕಾಯುತ್ತಲೇ ಭಜನೆಯ ಹಾಡುಗಳ ತಾಲೀಮ ಮಾಡುತ್ತಿದ್ದನು. ಬಾಳಪ್ಪ–ಲಾಲಮ್ಮನವರು ಮಗನ ಹಾಡುಗಾರಿಕೆಗೆ ಉತ್ತೇಜನ ನೀಡಿದರು. ಲಾಲವ್ವ ಮಗನ ಹಾಡು ಕೇಳಿ ಪೆಂಡಖಜೂರಿ ಕೊಡಿಸುತ್ತಿದ್ದಳಂತೆ.

ಬಸಪ್ಪನು ಸಂಸಾರಸ್ಥನಾದಾಗ ನೀಲಮ್ಮನನ್ನು ಪತ್ನಿಯಾಗಿ ಕೈ ಹಿಡಿದರು. ಬಸಪ್ಪ ದಂಪತಿಗಳಿಗೆ ಈಗ ಎರಡು ಗಂಡು ಮತ್ತು ನಾಲ್ಕು ಜನ ಹೆಣ್ಣುಮಕ್ಕಳಿದ್ದಾರೆ. ಬಸಪ್ಪನವರು ಕೃಷಿಕಾಯಕ ಮಾಡುತ್ತಾರೆ. ಶ್ರಮಜೀವಿ. ಹೊಲದಲ್ಲಿ ಶ್ರದ್ಧೆಯಿಂದ

ದುಡಿಯುತ್ತಾರೆ. ಒಂದು ತುಕಡಿ ಹೊಲವಿದೆ. ಅವರು ಯಾವಾಗಲೂ ಹೊಲದಲ್ಲಿ ಒಂದಿಲ್ಲ ಒಂದು ಕೆಲಸ ಮಾಡುತ್ತಲೇ ಇರುತ್ತಾರೆ. ಮನೆಯಲ್ಲಿ ಸುಮ್ಮನೆ ಕೂಡುವುದಿಲ್ಲ. ಹೊಲದಲ್ಲಿಯೆ ಕುಳಿತು ಕೃಷಿಕಾರ್ಯದ ಬಿಡುವಿನ ವೇಳೆಯಲ್ಲಿ ಹಾಡುಗಳನ್ನು ಕಟ್ಟುತ್ತಿರುತ್ತಾರೆ.

ಉಜ್ಜನಿ ಗ್ರಾಮದಲ್ಲಿ ಕಂತಯ್ಯ ಸ್ವಾಮಿಗಳೆಂಬುವರು ವಯೋವೃದ್ಧರೂ; ಜ್ಞಾನವೃದ್ಧರೂ ಇದ್ದರು. ಅವರು ಶಾಸ್ತ್ರ, ಜ್ಯೋತಿಷ್ಯಗಳಲ್ಲಿ ಪಾಂಡಿತ್ಯವನ್ನು ಪಡೆದವರಾಗಿದ್ದರು. ಸಂಗೀತಕಲೆ ಬಲ್ಲವರಾಗಿದ್ದರು. ಹೀಗಾಗಿ ಹಾರ್ಮೋನಿಯಂ ನುಡಿಸುತ್ತ ಹಾಡುತ್ತಿದ್ದರು. ಬಸಪ್ಪ ತನ್ನ ಹೊಲಕ್ಕೆ ಹೋಗುವಾಗ, ಬರುವಾಗ ಯಾವಾಗಲೋ ಒಮ್ಮೆ ಕಂತಯ್ಯ ಸ್ವಾಮಿಗಳ ಹಾಡು ಕಿವಿಯ ಮೇಲೆ ಬೀಳುತ್ತಿದ್ದಿತು. ಅದರಿಂದ ಹಾಡು ಕಲಿಯಬೇಕೆಂಬ ಬಯಕೆ ಮೂಡಿತು. ಒಂದು ದಿನ ಬಸಪ್ಪ ಕಂತಯ್ಯ ಸ್ವಾಮಿ ಅವರಲ್ಲಿಗೆ ಹೋಗಿ "ತನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕು" ಎಂದು ಬೇಡಿದನು. ಕಂತಯ್ಯ ಸ್ವಾಮಿಗಳು ಬಸಪ್ಪನ ಹಾಡುಗಳನ್ನು ಕೇಳದೆ ಇರಲಿಲ್ಲ. ಅವನಲ್ಲಿ ಕಲೆಗೆ ಬೇಕಾದ ಪ್ರತಿಭೆಯಿದೆಯೆಂಬುದನ್ನು ಅವರು ಕಂಡುಕೊಂಡಿದ್ದರು. ಹೀಗಾಗಿ ಕಂತಯ್ಯನವರು "ಆಗಲಿ"ಯೆಂದರು. ಬಸಪ್ಪನವರಿಗೆ ಹಿಡಿಸಲಾರದಷ್ಟು ಹಿಗ್ಗಾಯಿತು. ಕಂತಯ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ ರಾಗಬದ್ಧವಾಗಿ ಹಾಡುಗಳನ್ನು ಹಾಡುವುದಕ್ಕೆ ಕಲಿತರು. ಹಾಡುಗಳನ್ನು ಹಾಡುತ್ತ, ಹಾಡುತ್ತ ಸ್ವತಃ ಹಾಡುಗಳನ್ನು ಕಟ್ಟುವುದಕ್ಕೂ ಬಸಪ್ಪನವರು ಆರಂಭಿಸಿದರು. ಕಾಲಕ್ರಮೇಣ ಹಾಡುಗಾರ ಬಸಪ್ಪ, ಕವಿಗಾರ ಬಸಪ್ಪಯೆಂದು ಕರೆಯಿಸಿಕೊಳ್ಳ ತೊಡಗಿದರು.

ಬಸಪ್ಪನವರು ಈಗ ದಲಿತವರ್ಗದಿಂದ ಮತಾಂತರಗೊಂಡು ಕ್ರೈಸ್ತ ಧರ್ಮದ ಅನುಯಾಯಿಯಾಗಿದ್ದಾರೆ. ಆದರೂ ಅವರು ದರ್ಗಾಕ್ಕೆ ನಡೆದುಕೊಳ್ಳುತ್ತಾರೆ. ಇತರ ದೇವರುಗಳಿಗೆ ಕೈ ಮುಗಿಯುತ್ತಾರೆ. ತನ್ಮೂಲಕ ಅವರು ತಮ್ಮಲ್ಲಿರುವ ಧಾರ್ಮಿಕ ಸಮನ್ವಯತೆಯನ್ನು ಪ್ರಕಟ ಪಡಿಸುತ್ತಾರೆ.

ಬಸಪ್ಪನವರಿಗೆ ಹಲವಾರು ಮಾನ-ಸನ್ಮಾನಗಳು ಲಭ್ಯವಾಗಿವೆ. ಔರಾದ ಉತ್ಸವದಲ್ಲಿ ಅವರಿಗೆ ಸನ್ಮಾನ ಮಾಡಲಾಗಿದೆ. ಬೀದರ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಬಸಪ್ಪನವರನ್ನು ಸನ್ಮಾನಿಸಿದ್ದಾರೆ. ಆಂಧ್ರ ಪ್ರದೇಶದ ನಾರಾಯಣಖೇಡ ತಾಲ್ಲೂಕಿನ ನಾಗನಪಲ್ಲಿ ಎಂಬಲ್ಲಿ ಬಸಪ್ಪನವರನ್ನು ಶ್ರೇಷ್ಠ ಹಾಡುಗಾರ, ಕವಿಗಾರನೆಂದು ಗೌರವಿಸಿದ್ದಾರೆ.

ಬಸಪ್ಪನವರು ಹಲವಾರು ಪ್ರಕಾರದ ಹಾಡುಗಳನ್ನು ರಚಿಸಿದ್ದಾರೆ. ಅವರು ರಚಿಸಿದ ಮೋಹರಮ್ ಹಾಡುಗಳು ಅತ್ಯಂತ ಪ್ರಸಿದ್ಧವಾಗಿವೆ. ಹಾಗೆ ಅವರು ಹಲವಾರು

ಗೀಗೀ ಹಾಡುಗಳನ್ನು ಬರೆದಿದ್ದಾರೆ. ಕೆಲವು ತತ್ತ್ವಪದಗಳನ್ನು ಕಟ್ಟಿದ್ದಾರೆ. ಅವರು ಕಟ್ಟಿದ ತತ್ತ್ವದ ಹಾಡುಗಳಿಗೆ ತಮ್ಮ ಹೆಸರನ್ನೇ ಮುದ್ರೆಯಾಗಿ ಇರಿಸಿಕೊಂಡಿದ್ದಾರೆ. ಇಲ್ಲಿ ಬಸಪ್ಪನವರ ಎರಡು ಹಾಡುಗಳನ್ನು ಉದಾಹರಣೆಗಾಗಿ ಕೊಡಲಾಗಿದೆ:

ಮನಸ ಬಿಡಬ್ಯಾಡರಿ

ಹಗ್ಗ ಹಾಕಿ ಜೊಗ್ಗಿ ಹಿಡಿರಿ
ಮನಸ ಬಿಡ ಬ್ಯಾಡರಿ ॥ ಪ ॥

ಅವರ್ದು – ಇವರ್ದು ಹೇಳಿದ ಮಾತು ಕೇಳಬ್ಯಾಡರಿ
ಸಂಸಾರ ಸಾಗರ ಇದು ಮಾಯಿಬಾಜಾರರಿ
ಲಗು–ಬಗಿ ಮಾಡಬೇಕ್ರಿ ವ್ಯಾಪಾರರಿ
ತಡ ಮಾಡಿದ್ರ ಎಲ್ಲ ಹೋಗತಾದರಿ ॥ ೧ ॥

ಆರ–ಮೂರ ಒಂಬತ್ತು ಮಂದಿ ಅಣ್ಣ – ತಮ್ಮದೇರ
ಅವರ ಬೆನ್ನ ಹತ್ತಿ ನೀವು ತಿರಗ ಬ್ಯಾಡರಿ
ತಿರುಗಿದರ ನೀವು ಕೆಟ್ಟು ಹೋಗುತೀರಿ
ಮರಗದು ಮಾತ್ರ ಖಾತ್ರಿ ಅದ ನೀವು ತಿಳಕೋರಿ ॥ ೨ ॥

ಬಂಧು – ಬಳಗ ಹೆಮ್ಮೀಲಿ ನಂದು ಅಂದೀರಿ
ಶಿವ ಕರೆದ ಕಾಲಕ್ಕ ಅವರು ಒಬ್ಬರಿಲ್ಲರಿ
ನಿನಗ ನೀನೆ ಒಬ್ಬ ಎಂದಾವರಿ
ನಿನಗ ನೀನೆ ಒಬ್ಬ ಹೋಗಬೇಕರಿ ॥ ೩ ॥

ದೇಶದೊಳಗ ವಾಸುಳ್ಳ ಉಜ್ಜನಿ ಗ್ರಾಮ
ಬಸಪ್ಪ ಕವಿಗಾರ ಹೇಳ್ಯಾನ ನೇಮ
ಹಗ್ಗ ಹಾಕಿ ನಿಮ್ಮ ಮನಸ ಜೊಗ್ಗಿ ಹಿಡೀರಿ
ಕಗ್ಗನಾಗಿ ಆಕಡಿ ಇಕಡಿ ತಿರಗಬ್ಯಾಡರಿ ॥ ೪ ॥

ಮೂಢನಿಗೆ ಕೇಡಿಲ್ಲ

ಮೂಢನಿಗೆ ಕೇಡಿಲ್ಲ
ಕೋಡಾವ ಇರಿಯಲಿಕ ॥ ಪ ॥

ಅಜ್ಞಾನದ ಕೋಡ ಇರಿಯಲು ಬ್ಯಾಡ
ತಿಳಿದೇನೋ ಮೂಢ, ತಿಳಿವಲ್ದು ದಡ್ಡ
ಮೂಢತನದಿಂದಲಿ ಗಾಡ ಕತ್ತಲಿ ಪೆದ್ದ
ನಿದ್ದ್ಯಾಗ ಸುದ್ದಿ ಹೇಳಿದಂಗ ನೋಡ ॥ ೧ ॥

ಹಾಲ ಹರವಿ ತಂದು ಎದುರಿಟ್ಟಾರ
ಹುಳಿಯ ಹೆಂಡಕ ನೀನು ಹರಿಯತಿ ಯಾಕ ?
ಘಮ ಘಮ ಊದಬತ್ತಿ ಹಚ್ಚಿದ್ದಾರ
ಬಚ್ಚಲ ರೊಜ್ಜಿನ ವಾಸನೀಗಿ ಮೂಗ್ಯಾಕ ಕೊಟ್ಟಿ ? ॥ ೨ ॥

ಅಮೃತದ ಅನ್ನ ತಾಟಿನಲ್ಲಿರುವಾಗ
ಹಳಿಸಿದ ಅನ್ನಕ್ಕ ಆಶಿಯಾಕ ಮಾಡುತಿ ?
ಕಲ್ಪವೃಕ್ಷ ನಿನ್ನ ಹಂತ್ಯಾಕ ಬೆಳದಾದ
ಕಾಡು ಮರವ ಹುಡುಕಿ ಹೈರಾಣ್ಯಾಕಾಗುತಿ ? ॥ ೩ ॥

ಮೂಢನಿಗೆ ಕೇಡಿಲ್ಲ ಕೇಡಾದರೂ ತಿಳ್ಯಾದಿಲ್ಲ
ಮೂಢ ಮತಿಯಂಡಲೆತ ಅತಿ ಕೇಡವಣ್ಣಾ
ಕಾಡುತಾವ ಮನಕ ತನುಕ
ಬಿಡಾಡಿ ಆಗುತಿ ಯಾಕ ? ॥ ೪ ॥

ಗಾಢ ಕತ್ತಲಿ ಮನಿಯು
ಮೋಡ ಕವಿದ ಜಗವು
ನೋಡ ನೋಡುತಲೆ ಗುಡಗ ಮಿಂಚ
ತಿಳದಿಲ್ಲೊ ತಮ್ಮಾ ಯಾರೀಗಿ ಇದರ ಅಂತ ॥ ೫ ॥


ನೇಟಾಗಿ ನಡೆ ತಮ್ಮಾ
ಬೂಟಾಟಿಕಿ ಬಿಡು ತಮ್ಮಾ
ಮೂಢತನ ನಂಬುದು ಬಿಟ್ಟು ಬಿಡು ಒಮ್ಮಾ
ಕೇಡಿಲ್ಲ – ಪಾಡಿಲ್ಲ ಇದ್ದು ಬಿಡು ಸುಮ್ಮಾ ॥ ೬ ॥

ಧರಿಯೊಳಗ ಮೆರೆಯುವ ಉಜ್ಜನಿ
ಬಸವ ಕವಿಗಾರ ನಡಿಸ್ಯಾನ ಹಾಡಿನ ಮೇಜೋನೀ
ಉಣ್ಣ ಬರ್‍ರಿ ಎಲ್ಲರೂ ಅಣ್ಣಾಗಳಿರಾ
ಮಣಿ ಬರ್‍ರಿ ಗುರುವಿನ ಪಾದಗಳಿಗಾ ॥ ೭ ॥

(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿದ್ದಾರೆ.)



ಬಸಪ್ಪ ಮೂರ್ತೆಲಿ ಅವರ ಮನೆ (ಉಜ್ಜನಿ).




ಬಸಪ್ಪ ಮೂರ್ತೆಲಿ



ತಾರುಣ್ಯದಲ್ಲಿದ್ದ ಬಸಪ್ಪ ದಂಪತಿಗಳು ತಮ್ಮ ಮಗನೊಂದಿಗೆ.



ಬಸಪ್ಪನವರ ಪತ್ನಿ ನೀಲಮ್ಮ



ಬಸಪ್ಪನವರ ಕರುಳ ಕುಡಿಗಳು.



ಕೃಷಿಕಾಯಕ ನಿರತ ಬಸಪ್ಪನವರು.



ಬಸಪ್ಪನವರ ಕೃಷಿಕಾಯಕದ ಹೊಲ.

ಬಸಪ್ಪನವರು
ಹಾಡುತ್ತಿರುವುದು.



ಕನ್ನಡ ಮತ್ತು
ಸಂಸ್ಕೃತಿ
ಇಲಾಖೆ
ಕಾರ್ಯಕ್ರಮದಲ್ಲಿ
ಬಸಪ್ಪನವರ
ಹಾಡುಗಾರಿಕೆ
(ಬೀದರ).






ಸಾಂಸ್ಕೃತಿಕ
ಕಾರ್ಯಕ್ರಮ
ನಡೆಸಿಕೊಡುತ್ತಿರುವ
ಬಸಪ್ಪನವರು
(ಬೀದರ).



ಬಸಪ್ಪನವರು ಸಮಾರಂಭವೊಂದರಲ್ಲಿ ಮಾತನಾಡುತ್ತಿರುವುದು (ಬೀದರ).



ಉಜ್ಜನಿ ಯುವಮೇಳದಲ್ಲಿ ಬಸಪ್ಪನವರು ಹಾಡುತ್ತಿರುವುದು (ಉಜ್ಜನಿ).

೨೩. ಝುರೆಪ್ಪ ಬಂಗಾರೆ (ಕ್ರಿ.ಶ.ಸು. ೧೯೪೭)

ಸುಮಾರು ಅರವತ್ತು ನಾಲ್ಕು ವರುಷಗಳ ವಯಸ್ಸಿನ ಝುರೆಪ್ಪನವರು ಬಸವಣ್ಣನವರ ತತ್ತ್ವವನ್ನು ಕಟ್ಟಾ ಅನುಸರಿಸುತ್ತಿರುವ ಶರಣ ಜೀವಿಗಳಾಗಿದ್ದಾರೆ. ಬೀದರ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಬರುವ ನಾಗೂರ (ಎಂ) ಗ್ರಾಮವು ಝುರೆಪ್ಪನವರ ಸ್ವಗ್ರಾಮವಾಗಿದೆ.

ದಲಿತ ಕುಟುಂಬದ ಮಲ್ಲಪ್ಪನವರು ಬಸವಾದಿಶರಣರ ತತ್ತ್ವಗಳಲ್ಲಿ ನಂಬಿಕೆಯಿಟ್ಟು ಬದುಕುತ್ತಿದ್ದವರಾಗಿದ್ದರು. ಅವರು ಕಲಿತವರಲ್ಲ. ಆದರೆ ಬಲ್ಲವರಿಂದ ಶರಣರ ವಿಚಾರಗಳನ್ನು ಕೇಳಿ ತಿಳಿದುಕೊಂಡವರಾಗಿದ್ದರು. ಪುರಾಣ–ಪ್ರವಚನಗಳಿದ್ದಲ್ಲಿಗೆ ಹೋಗಿ ಅವುಗಳನ್ನು ಆಸಕ್ತಿಯಿಂದ ಕೇಳುತ್ತಿದ್ದರು. ತಮ್ಮ ಹಂಬಲವನ್ನೇ ಮಗ ಝುರೆಪ್ಪನಿಗೆ ನೀಡಿದರು.

ಝುರೆಪ್ಪನವರ ತಾಯಿ ಮರೆಮ್ಮ. ಈ ದಂಪತಿಗಳು ಕೃಷಿ ಕಾಯಕ ಮಾಡುತ್ತಿದ್ದರು. ಶ್ರಮ ಜೀವಿಗಳು. ಕೂಲಿ–ಕೃಷಿ ಕಾರ್ಯಗಳಿಂದ ಬಂದ ಫಲದಲ್ಲಿ ಹರುಷದಿಂದ ತೃಪ್ತಿಗೊಂಡು ಬದುಕುತ್ತಿದ್ದರು. ಶರಣ ಪರಂಪರೆಯಲ್ಲಿ ವಿಶ್ವಾಸವಿಟ್ಟಿದ್ದ ಮಲ್ಲಪ್ಪನವರು ಭಾಲ್ಕಿಯ ಉರಿಲಿಂಗ ಪೆದ್ದಿ ಮಠದ ಸ್ವಾಮಿಗಳಿಂದ ದೀಕ್ಷೆ ಸ್ವೀಕರಿಸಿದ್ದರು. ಮುಂದೆ ಮಗ ಝುರೆಪ್ಪನವರೂ ರೇವಣಸಿದ್ಧಪ್ಪನವರಿಂದ ಗುರುದೀಕ್ಷೆ ಪಡೆದುಕೊಂಡು ಶರಣಮಾರ್ಗದ ಪಥಿಕರಾದರು. ಮಲ್ಲಪ್ಪನವರಿಗೆ ಒಟ್ಟು ನಾಲ್ಕು ಜನ ಮಕ್ಕಳು. ಅವರಲ್ಲಿ ಝುರೆಪ್ಪ ಕೊನೆಯವರು. ಝುರೆಪ್ಪನವರು ಹೆಚ್ಚು ಕಲಿಯಲಿಲ್ಲ. ಕನ್ನಡದಲ್ಲಿ ಏಳನೆಯ ತರಗತಿಯವರೆಗೆ ಓದಿದ್ದಾರೆ. ಹೆಂಡತಿ ಕಮಲಮ್ಮ. ಈ ದಂಪತಿಗಳಿಗೆ ಒಟ್ಟು ಆರು ಜನ ಮಕ್ಕಳು. ಅವರಲ್ಲಿ ಒಬ್ಬ ಮಗ ಮತ್ತು ಐದು ಹೆಣ್ಣುಮಕ್ಕಳು. ಝುರೆಪ್ಪನವರ ಮಗ ಸೈನ್ಯದಲ್ಲಿ ಸೇರಿ, ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ್ದಾನೆ. ಅವನ ಹೆಸರು ಜಗನ್ನಾಥ. ಸುಜ್ಞಾನಿದೇವಿ, ಶಾಂತಮ್ಮ, ಭಾಗ್ಯವತಿ, ಚಿನ್ನಮ್ಮ, ಸತ್ಯಮ್ಮ ಹೆಣ್ಣುಮಕ್ಕಳು.

ಝುರೆಪ್ಪನವರು ಉಪಜೀವನಕ್ಕಾಗಿ ತಂದೆಯಂತೆ ಕೂಲಿ ಮತ್ತು ಒಕ್ಕಲುತನದ ಕೆಲಸಗಳನ್ನು ಅವಲಂಬಿಸಿದರು. ಈಗಲೂ ಅವರು ಕೂಲಿ ಕೆಲಸ ಮಾಡಲು ಹೋಗುತ್ತಾರೆ. ಝುರೆಪ್ಪನವರಿಗೆ ಹಾಡು ರಚನೆಯಲ್ಲಿ ಆಸಕ್ತಿ ಮೂಡಿಸಿದವರು ಶೆಂಬೆಳ್ಳಿ

ಬಾಬಣ್ಣನವರು. ಅವರು ಶರಣಜೀವಿಗಳಾಗಿದ್ದರು. ಬಸವಾದಿ ಶರಣರ ಸಂಸ್ಕೃತಿಯನ್ನು ಅವರು ಬದುಕಿನಲ್ಲಿ ಅನುಸಂಧಾನ ಮಾಡುತ್ತಿದ್ದರು. ಹೀಗಾಗಿ ಬಾಬಣ್ಣನವರ ಸಂಪರ್ಕದಿಂದ ಝುರೆಪ್ಪನವರು ಶರಣ ಸಂಸ್ಕೃತಿಯೆಡೆಗೆ ವಾಲುವಂತಾಯಿತು. ಬಾಬಣ್ಣನವರ ಹಾಡು ಕಟ್ಟುವ ಶಕ್ತಿಯ ಪ್ರಭಾವಕ್ಕೂ ಝುರೆಪ್ಪ ಒಳಗಾದರು. ಹೀಗಾಗಿ ಸಾಹಿತ್ಯ ಮತ್ತು ಸಂಸ್ಕೃತಿಯ ಗುರುವಾಗಿ ಬಾಬಣ್ಣನವರು ನಿಂತುಕೊಳ್ಳುತ್ತಾರೆ.

ಝುರೆಪ್ಪನವರು ಇನ್ನೂ ಹೆಚ್ಚಿನ ಪ್ರಭಾವಕ್ಕೆ ಒಳಗಾದುದು ಜೊನ್ನಿಕೇರಿ ಮೋನಪ್ಪನವರ ಬದುಕಿನಿಂದ. ಅವರು ಕಟ್ಟಾ ಆಧ್ಯಾತ್ಮ ಜೀವಿಗಳಾಗಿದ್ದರು: ತತ್ತ್ವಪದಗಳನ್ನು ರಚಿಸಿ ಹಾಡುತ್ತಿದ್ದರು. ಸಂತಬದುಕನ್ನು ನಡೆಸುತ್ತಿದ್ದರು. ಅವರ ನಡತೆಯು ಶರಣ ತತ್ತ್ವಗಳ ಕಮ್ಮಟದಂತೆ ಕಾಣುತ್ತಿದ್ದಿತು. ಹೀಗಾಗಿ ಝುರೆಪ್ಪನವರು ಮೋನಪ್ಪನವರ ಪ್ರಭಾವದಿಂದ ಆಧ್ಯಾತ್ಮ ಜೀವರಾಗಲು ಸಾಧ್ಯವಾಯಿತು. ಭಾಲ್ಕಿಯ ಚೆನ್ನಬಸವ ಪಟ್ಟದದೇವರು ಝುರೆಪ್ಪನವರಿಗೆ ವಿಧಿವತ್ತಾಗಿ ಲಿಂಗದೀಕ್ಷೆ ಪೂರೈಸಿದರು.

ಝುರೆಪ್ಪನವರ ಆಧ್ಯಾತ್ಮದ ಬದುಕು ಶಿಸ್ತಿನದು. ಅವರು ಏಕದೇವೋಪಾಸಕರು. ಲಿಂಗವನ್ನು ಬಿಟ್ಟು ಅನ್ಯ ದೇವರಿಗೆ ಕೈ ಮುಗಿಯುವುದಿಲ್ಲ; ತಲೆ ಬಾಗುವುದಿಲ್ಲ. ಬಸವಣ್ಣನವರ ವಚನಗಳನ್ನು ಅವರು ಸರಿಯಾಗಿ ಓದಿಕೊಂಡಿದ್ದಾರೆ. ಆದಷ್ಟು ವಚನಸಾರದ ಪ್ರಕಾರ ನಡೆಯಬೇಕೆಂಬುದು ಅವರ ಬದುಕಿನ ಧ್ಯೇಯವಾಗಿದೆ. ಜನತೆಗೆ ಝುರೆಪ್ಪನವರು ಅದನ್ನೆ ಹೇಳುತ್ತಾರೆ. ದಿನ ನಿತ್ಯ ಅವರು ಎರಡು ಹೊತ್ತು ಜಳಕ ಮಾಡುತ್ತಾರೆ. ಇಷ್ಟಲಿಂಗ ಪೂಜೆ ಪೂರೈಸಿ; ಊಟ ಮಾಡುತ್ತಾರೆ. ಅವರಿಗೆ ಷಡಕ್ಷರ ಮಂತ್ರದ ಮೇಲೆ ಅತೀವ ವಿಶ್ವಾಸ. ಅದನ್ನು ಅವರು ದಿನ ನಿತ್ಯವೂ ಒಂದು ಕಾಪಿಯಲ್ಲಿ ಬರೆಯುತ್ತಾರೆ, ಹೀಗೆ ಬರೆದ ಸಂಖ್ಯೆಯು ಲಕ್ಷಗಳ ಗಡಿದಾಟಿದೆ.

ಝುರೆಪ್ಪನವರು ಹಾಡು ರಚಿಸುತ್ತಿದ್ದಂತೆ ಒಳ್ಳೆಯ ಹಾಡುಗಾರರೂ ಆಗಿದ್ದಾರೆ. ಏಕತಾರಿ ಮೀಟುತ್ತ ಅವರು ಸೊಗಸಾಗಿ ತತ್ತ್ವಪದಗಳನ್ನು ಹಾಡುತ್ತಾರೆ. ಝುರೆಪ್ಪನವರು ಹಲವಾರು ಮೋಹರಮ್ ಹಾಡುಗಳನ್ನು ಬರೆದಿದ್ದಾರೆ. ಅವರು ಕೆಲವು ಹಾಡುಗಳಿಗೆ ಸ್ವನಾಮ ಅಂಕಿತವೂ; ಮತ್ತೆ ಕೆಲವು ಹಾಡುಗಳಿಗೆ ಗುರುಮೋನಪ್ಪನ ಅಂಕಿತವೂ ಹಾಕಿದ್ದಾರೆ.

ಮೋನಪ್ಪನನ್ನು ಸ್ಮರಿಸುವಾಗ ಆ ಅಂಕಿತವು "ಮೌನಾಧೀನ" ಎಂಬುದಾಗಿ ಬರುತ್ತದೆ.

ಝುರೆಪ್ಪನವರ ರಚನೆಯ ಎರಡು ಹಾಡುಗಳನ್ನು ಇಲ್ಲಿ ಉದ್ಧರಿಸಲಾಗಿದೆ:

ಬಸವಣ್ಣನೆಂದರೆ ಮರಣಿಲ್ಲ

ಬಸವಣ್ಣ ಶರಣ । ನಿನ ನಾಮ ಜಗದೊಳಗ
ಒಸೆದು ನುಡಿದರ ಜೀವಿಗಳಿಗೆ ಮರಣಿಲ್ಲ ॥ ಪ ॥

ಬಸವನೆ ನಮ್ಮ ತಂದೆ ತಾಯಿ
ಬಸವನು ನಮ್ಮ ಬಂಧು – ಬಳಗ
ಬಸವನು ನಮಗೆ ಕಾರ್ಯ–ಕಾರಣ
ಬಸವನೆಂದರೆ ಇಲ್ಲ ಮರಣ ॥ ೧ ॥

ಬಸವಣ್ಣ ಭಕ್ತರಿಗೆ ಭಾಗ್ಯದ ನಿಧಿ
ಬಸವಣ್ಣ ಭಕ್ತರಿಗೆ ಕಾಮಧೇನು
ಬಸವಣ್ಣ ಭಕ್ತರಿಗೆ ಕಲ್ಪವೃಕ್ಷವಣ್ಣಾ
ಬಸವನೆಂದರೆ ಇಲ್ಲ ಜಗಕೆ ಮರಣ ॥ ೨ ॥

ಬಸವಣ್ಣ ನಿಮ್ಮ ಹೆಸರು ಅಧಿಕವಯ್ಯಾ
ಆದಿ ಮೂಲಕೆ ತಿಳಿದಿಲ್ಲವಯ್ಯಾ
ಸದ್ಭಕ್ತರಿಗೆ ಕೊಟ್ಟ ನಿಧಿ ನಿಧಾನ
ನಿನ್ನ ಹೆಸರು ನುಡಿದರೆ ಇಲ್ಲ ಜನನ ॥ ೩ ॥

ಗುರು–ಲಿಂಗ–ಜಂಗಮ ನೀನೆ ಆದಿ
ಗುರು–ಲಿಂಗ–ಜಂಗಮವ ಪೂಜಿಸಿ ಭವಗೆದ್ದಿ
ಗುರು–ಲಿಂಗ–ಜಂಗಮರ ದಾಸೋಹ ಮಾಡಿದಿ
ಗುರು–ಲಿಂಗ–ಜಂಗಮ ಪ್ರಾಣಿ ಎನಿಸಿದೆ ॥ ೪ ॥

ಗುರು ಬಸವ ಜಂಗಮರ ಶಿಶುವ
ಅರುವಿನ ಅವತಾರದ ಮೂರ್ತಿ
ಆಧಾರನು ಜಗಕ್ಕೆ ನೀನೆ ಅಣ್ಣಾ
ಅಣ್ಣ ಬಸವಣ್ಣನೆಂದರೆ ಇಲ್ಲ ಮರಣ ॥ ೫ ॥

ಔರಾದ ತಾಲ್ಲೂಕ \ ೧೮೯

ದೇಶದೊಳಗ ಲೇಸಾದ ನಾಗೂರು
ಈಶ ಮೌನಾಧೀನನ ನೆಲೆಯೂರು
ಈಶ ಬಸವೇಶನ ತವರೂರು
ಬಸವ ಪರುಷಾಧಿಕ್ಯ ಮೇರು ॥ ೬ ॥

ಭಕ್ತಿಯಿಂದ ಮುಕ್ತಿ

ಭಕ್ತಿ ಮಾಡಿ ಮುಕ್ತಿಯ ಪಡೆಯೊ
ಭಕ್ತ ಶರಣರ ಪಾದವ ಪಿಡಿಯೊ ॥ ಪ ॥

ಭಕ್ತಿಯದು ಮುಕ್ತಿಯ ಸಿಡಿಯೋ
ಭಕ್ತಿಯು ಜ್ಞಾನದ ಮ್ಯಾಲಿನ ಸಿಡಿಯೋ
ಭಕ್ತಿ ಜ್ಞಾನ ವೈರಾಗ್ಯ ಮೂರು
ಮುಕ್ತಿ ಮನೆಗೆ ಬಾಗಿಲು ಮೂರು ॥ ೧ ॥

ಶ್ರವಣ ಮನನ ಮಾಡೋ
ನಿಜ ಧ್ಯಾಸದಲ್ಲಿ ನೀ ಕೂಡೋ
ವಿವೇಕದಿಂದ ನೋಡೋ
ಶಾಂತಿ ಸೈರಣೆಯಿಂದ ನಡೆಯೋ ॥ ೨ ॥

ಗುರುವಿನ ವಚನವು ಮೀರಲು ಬೇಡ
ಹಿರಿಯರ ಅನುಭವ ಹಾರಲು ಬೇಡ
ಕಳ್ಳರ ಹಾದಿ ಹಿಡಿಯಲು ಬೇಡ
ಸುಳ್ಳರ ಮಾತು ನಂಬಲು ಬೇಡ ॥ ೩ ॥

ತನು ಶುದ್ಧಾಗಿ ನೀ ನಡೆಯೋ
ಮನ ಶುದ್ಧಾಗಿ ನೀ ನಡೆಯೋ
ಮಾತು ಶುದ್ಧಾಗಿ ನೀ ನುಡಿಯೋ
ಮೂರು ಶುದ್ಧಾಗಿ ಮೋಕ್ಷವ ಪಡಿಯೋ ॥ ೪ ॥

ಧರಿಯೊಳು ಮೆರೆಯುವ ನಾಗೂರು
ಗುರು ಮೌನಾಧೀನನ ವಚನದ ಮೇರು
ಕರ್ಮದ ನಾಶನ ನೋಡು
ಗುರುವಿನ ಭಕ್ತಿಯ ಮುಕ್ತಿಯ ಬೇಡು ॥ ೫ ॥


(ಈ ವಿವರಗಳನ್ನು ಝುರೆಪ್ಪನವರ ತಮ್ಮನ ಮಗ ಬಸವರಾಜ ಅವರು ನೀಡಿದ್ದಾರೆ)



ಝುರೆಪ್ಪ ಬಂಗಾರೆ ಅವರ ಮನೆ (ನಾಗೂರ–ಎಂ).



ಝುರೆಪ್ಪ ಬಂಗಾರೆ



ಝುರೆಪ್ಪ ಬಂಗಾರೆ ಅವರ ವಂಶದ ಸದಸ್ಯರು.

೨೪. ವಿಠ್ಠಲರಾವ ಮಾಸ್ತರ (ಕ್ರಿ.ಶ.ಸು. ೧೯೪೮)

ಬೀದರ ಜಿಲ್ಲೆಯ ಅವರಾದ ತಾಲ್ಲೂಕಿನಲ್ಲಿ ಬರುವ ಲಾದಾ ಗ್ರಾಮವು ವಿಠ್ಠಲರಾವ ಅವರ ಸ್ವಗ್ರಾಮವಾಗಿದೆ. ಈ ಗ್ರಾಮದ ಎರಡನೆಯ ತತ್ತ್ವಪದಕಾರರಾಗಿ ವಿಠ್ಠಲರಾವಅವರು ನಿಂತುಕೊಳ್ಳುತ್ತಾರೆ. ಶಿವರಾಯ ಮುಚಳಂಬಿ ಅವರು ಈ ಪರಿಸರದಲ್ಲಿ ತತ್ತ್ವಪದಗಳ ಝೇಂಕಾರ ಮೊಳಗಿಸಿ ಮಾಯವಾಗುತ್ತಿದ್ದಂತೆ, ಆ ಪರಂಪರೆಯನ್ನು ಮತ್ತೆ ಉಜ್ವಲವಾಗಿಸುತ್ತ ಏಕತಾರಿ ಹಿಡಿದು ನಿಂತವರು ವಿಠ್ಠಲರಾವ ಅವರು.

ದಲಿತ ಕುಟುಂಬದಲ್ಲಿ ಜನಿಸಿದರಾದರೂ ತಮ್ಮ ಮನೆತನಕ್ಕೆ ಅಂಟಿಕೊಂಡು ಬಂದಿದ್ದ "ಯೋಗಿ" ಎಂಬ ಹೆಸರನ್ನು ಅನ್ವರ್ಥಕವಾಗುವಂತೆ ವಿಠ್ಠಲರಾವ ಅವರು ಬದುಕುತ್ತಲಿದ್ದಾರೆ. ಅವರನ್ನು ಜನತೆ ಇಂದು "ವಿಠ್ಠಲರಾವ ಯೋಗಿ ಮಾಸ್ತರ" ಎಂದೇ ಕರೆಯುತ್ತಾರೆ. ಅವರ ಮನೆಯಲ್ಲಿ ಪರಿಪೂರ್ಣ ವೀರಶೈವ ಸಂಸ್ಕೃತಿಯ ಅನುಸಂಧಾನವಿದೆ. ಎಲ್ಲರ ಕೊರಳಿನಲ್ಲಿ ಇಷ್ಟಲಿಂಗ, ಹಣೆಯ ಮೇಲೆ ವಿಭೂತಿ. ವಿಠ್ಠಲರಾವ ಅವರನ್ನು ನೋಡಿದರೆ ಹನ್ನೆರಡನೆಯ ಶತಮಾನದಲ್ಲಿ ಅದೇ ಗ್ರಾಮದಲ್ಲಿ ಆಗಿ ಹೋದ 'ಲದ್ದಿ ಸೋಮಣ್ಣ'ಶರಣರನ್ನು ನೋಡಿದಂತಾಗುತ್ತದೆ. ವಿಠ್ಠಲರಾವ ಅವರ ಬದುಕು ಬರೀ ಶರಣಲಾಂಛನಗಳಿಂದ ಕೂಡಿಲ್ಲ. ಶರಣಸಂಸ್ಕೃತಿಯ ಸಾರ–ಸಾರಾಯವನ್ನೊಳಗೊಂಡಿರುವ ಜೀವನವಾಗಿ ಅನುಕರಣೀಯವೆನಿಸುತ್ತದೆ.

ವಿಠ್ಠಲರಾವ ಅವರ ತಂದೆ ಹೊನ್ನಪ್ಪ ಯೋಗಿ ಅವರು. ತಾಯಿ ಸಿದ್ಧಮ್ಮ. ಈ ದಂಪತಿಗಳ ಉದರದಿಂದ ವಿಠ್ಠಲರಾವ ಅವರು ದಿ.೧.೧.೧೯೪೮ರಂದು ಜನಿಸಿದರು. ಹೊನ್ನಪ್ಪಯೋಗಿ ಅವರು ಸಾತ್ವಿಕರು. ಸದಾಚಾರ ಸಂಪನ್ನರು. ಶರಣ ಸಂಸ್ಕೃತಿಯ ಪರಿಪಾಲಕರಾಗಿದ್ದರು. ತಮ್ಮ ಆಚರಣೀಯವಾದ ಸಂಸ್ಕಾರವನ್ನೇ ತಮ್ಮ ಮಕ್ಕಳಿಗೂ ಬಳುವಳಿಯಾಗಿ ನೀಡಿದರು.

ವಿಠ್ಠಲರಾವ ಅವರು ಪಿ.ಯು.ಸಿವರೆಗೆ ಶಿಕ್ಷಣ ಪಡೆದರು. ಶಿಕ್ಷಕತರಬೇತಿ ಪೂರ್ಣಗೊಳಿಸಿದರು. ಕ್ರಿ.ಶ. ೧೯೭೫ರಲ್ಲಿ ಅವರು ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗೆ ಸೇರ್ಪಡೆಗೊಂಡರು.

ವಿಠ್ಠಲರಾವ ಅವರು ಅತ್ಯುತ್ತಮ ಶಿಕ್ಷಕರಾಗಿ ಮಕ್ಕಳನ್ನು ಸರಿಯಾದ ರೀತಿಯಲ್ಲಿ ತರಬೇತುಗೊಳಿಸುವ ಕಾರ್ಯ ಮಾಡಿದರು. ಅವರು ತಮ್ಮ ಸೇವಾವಧಿಯಲ್ಲಿ ಎಂದೂ ಕರ್ತವ್ಯ ಚ್ಯುತರಾದವರಲ್ಲ. ಅವರ ಪ್ರಕಾರ ಶಿಕ್ಷಣ ಸೇವೆಯೆಂದರೆ ದೈವೀ ಆರಾಧನೆಯಾಗಿತ್ತು.

ಅದನ್ನು ಅತ್ಯಂತ ಶ್ರದ್ಧೆಯಿಂದ, ಪವಿತ್ರ ಭಾವದಿಂದ ಮುನ್ನಡೆಸಿಕೊಂಡು ಹೋದರು. ಶಿಕ್ಷಕ ವೃತ್ತಿಯಲ್ಲಿ ಅವರು ಮುಖ್ಯ ಗುರುಗಳಾಗಿಯೂ ಬಡ್ತಿ ಪಡೆದು ಕಾರ್ಯ ಮಾಡಿದರು. ಅವರು ಸೇವೆ ಮಾಡಿದ ಸ್ಥಳಗಳಲ್ಲಿ ಇಂದಿಗೂ ಜನರು ವಿಠ್ಠಲರಾವ ಅವರ ಸೇವೆಯನ್ನು ಶ್ಲಾಘಿಸುತ್ತಾರೆ. ಕ್ರಿ.ಶ. ೨೦೦೦ ವರ್ಷದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯು ಅವರಿಗೆ "ಅತ್ಯುತ್ತಮ ಶಿಕ್ಷಕ" ಪ್ರಶಸ್ತಿ ನೀಡಿ ಗೌರವಿಸಿತು.

ಒಟ್ಟು ಮೂವತ್ತೊಂದು ವರ್ಷಗಳ ಶಿಕ್ಷಣಸೇವೆ ಸಲ್ಲಿಸಿದ ವಿಠ್ಠಲರಾವ ಅವರು ದಿ.೨೮.೨.೨೦೦೦ರಂದು ಸೇವೆಯಿಂದ ನಿವೃತ್ತರಾದರು. ಅವರು ನಾಲ್ಕುಗೋಡೆಯ ಶಾಲೆಯಿಂದ ಹೊರಬಂದು ಲೋಕವ್ಯಾಪ್ತಿಯ ವಿದ್ಯಾಲಯದ ಶಿಕ್ಷಕರಾಗಿ ನಿಂತು ಕಾರ್ಯ ನಿರ್ವಹಿಸುತ್ತಿದ್ದಾರೆ. ಅನಕ್ಷರಸ್ಥರಿಗೆ ಅಕ್ಷರಜ್ಞಾನ ನೀಡುವುದು, ರೈತರಿಗೆ ಕೃಷಿ ಚಟುವಟಿಕೆಗಳಲ್ಲಿ ಸರಿಯಾದ ಮಾರ್ಗದರ್ಶನ ಮಾಡುವುದು, ಹಳ್ಳಿಯ ಜನರಿಗೆ ಇಂದು ಸರಕಾರ ನೀಡುತ್ತಿರುವ ಸೌಲಭ್ಯಗಳ ಬಗೆಗೆ ತಿಳಿಸಿ ಕೊಡುವುದು ಇಂತಹ ಕಾರ್ಯಗಳಲ್ಲಿ ವಿಠ್ಠಲರಾವ ಅವರು ತೊಡಗಿಸಿಕೊಂಡಿದ್ದಾರೆ.

ವಿಠ್ಠಲರಾವ ಅವರು ತಮ್ಮ ಸಂಸ್ಕಾರವನ್ನು ತಮ್ಮ ಮಕ್ಕಳಿಗೆ ನೀಡಿದ್ದಾರೆ. ಅವರಿಗೆ ನಾಲ್ಕು ಜನ ಹೆಣ್ಣುಮಕ್ಕಳು ಮತ್ತು ಇಬ್ಬರು ಗಂಡುಮಕ್ಕಳು. ಎಲ್ಲಾ ಮಕ್ಕಳಿಗೂ ಉನ್ನತ ಶಿಕ್ಷಣ ನೀಡಿದ್ದಾರೆ. ಅವರೆಲ್ಲ ಇಂದು ಸುಸಂಸ್ಕೃತರಾಗಿ ಉತ್ತಮ ಹುದ್ದೆಗಳಲ್ಲಿದ್ದಾರೆ. ತನ್ಮೂಲಕ ಸಮಾಜದ ಸೇವೆ ಮಾಡುತ್ತಲಿದ್ದಾರೆ.

ವಿಠ್ಠಲರಾವ ಅವರು ಬಿಡುವಿನ ವೇಳೆಯಲ್ಲಿ ಕತೆ–ಕವನ ರಚಿಸುವುದು, ಹಾಡುವುದು, ಆಧ್ಯಾತ್ಮ ಗೋಷ್ಠಿಯಲ್ಲಿ ಭಾಗವಹಿಸುವುದು ಇಂತಹ ಸಾರ್ಥಕ ಹವ್ಯಾಸಗಳಲ್ಲಿ ತೊಡಗುತ್ತಾರೆ. ಅವರದು ಮೂಲತಃ ಆಧ್ಯಾತ್ಮದ ಮನಸ್ಸಿದೆ. ದೈವೀ ಭಕ್ತರಾಗಿದ್ದಾರೆ.

ಸಾಹಿತ್ಯದ ದಿಶೆಯಲ್ಲಿ ವಿಠ್ಠಲರಾವ ಅವರಿಗೆ ಮಾರ್ಗದರ್ಶನ ನೀಡಿದವರು; ನೀಡುತ್ತಲಿರುವವರು ಚಂದ್ರಪ್ಪ ಮಾಸ್ತರ ಹೆಬ್ಬಾಳ ಅವರು. ಚಂದ್ರಪ್ಪನವರು ಶಿಕ್ಷಕರಾಗಿ ನಿವೃತ್ತಿ ಹೊಂದಿದ್ದಾರೆ. ಅವರೂ ಸಾಹಿತಿಗಳೂ, ತತ್ತ್ವಪದಕಾರರೂ ಆಗಿದ್ದಾರೆ.

ಇಂದು ವಿಠ್ಠಲರಾವ ಮಾಸ್ತರ ಅವರು ತಮ್ಮ ವಿಶ್ರಾಂತ ಬದುಕನ್ನು ಸಾಹಿತ್ಯ, ಸಮಾಜ, ಆಧ್ಯಾತ್ಮ ಕಾರ್ಯಗಳಲ್ಲಿ ತೊಡಗಿಸಿ ಬದುಕುತ್ತಲಿದ್ದಾರೆ. ಅವರು ಬರೆದ ಹಲವಾರು ಪದ್ಯಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದ್ಧರಿಸಲಾಗಿದೆ. 'ಬಸವ' ಎಂಬುದು ಅವರ ಹಾಡುಗಳ ಅಂಕಿತವಾಗಿದೆ.

ಸೇವೆಗಾಗಿ ಬಾಳು

ಸೇವೆಗಾಗಿ ಬಾಳದ ನಿನ್ನ ಬಾಳೇಕೆ ?
ಬಾಳಿನಲ್ಲಿ ಅತಿ ಆಶೆಯ ನಿನಗೇಕೆ ? ॥ ಪ ॥

ಹೆಣ್ಣು-ಹೊನ್ನು ಮಣ್ಣಿನ ಆಶೆಯ ಮಾಡುವದೇತಕೆ ?
ಜ್ಞಾನವಿಲ್ಲದೆ ನೀನು ಬದುಕುವುದೇತಕೆ ?
ಅಜ್ಞಾನದಿಂದ ಕಣ್ಣು ಕಾಣದೆ ಬದುಕುವುದೇತಕೆ ?
ಸುಜ್ಞಾನಿಗಳ ಆದರಿಸದ ಜೀವವೇತಕೆ ? ॥ ೧ ॥

ಹೆತ್ತವರ ಸೇವೆ ಮಾಡದ ಜೀವನವೇತಕೆ ?
ಗುರು ಹಿರಿಯರಿಗೆ ವಂದಿಸದ ಬಾಳುವೆಯೇತಕೆ ?
ಗುರು ಪಾದಕೆ ಸಿರವ ಬಾಗದ ಇರುವೇತಕೆ ?
ವರಶಿವನ ನೆನೆಯದ ಜನ್ಮವೇತಕೆ ? ॥ ೨ ॥

ಕಾಯಕ ವಂಚಿತರಾಗಿ ಬದುಕುವುದೇತಕೆ ?
ಪರಹಿತವ ಬಯಸದ ಜೀವನವೇತಕೆ ?
ಹೆರರ ನಿಂದೆಯ ಮಾಡುವ ಬಾಳು ಏತಕೆ ?
ಪರರ ಪಾವನವನು ಸಾಧಿಸದ ಸಾಧನೆ ಏತಕೆ ? ॥ ೩ ॥

ಪಾಮರರ ಸಂಗವ ನೀ ಮಾಡುವದೇತಕೆ ?
ಪಂಡಿತರ ಸಂಗವ ನೀ ತೊರದೆಯೇತಕೆ ?
ಸದ್ಗುರುವನು ಹೊಂದದ ಬದುಕೇತಕೆ ?
ಸಾಕು ಈ ಜನ್ಮದಲಿ ಭಾಲ್ಕಿಯ ಬಸವನ ಪಾದದ ಬಯಕೆ ॥ ೪ ॥

ಜೀವನ-ಜೋಕಾಲಿ

ಜನ್ಮ ತಾಳಿದೆ ತಾಯಿಯ ಉದರದಲಿ ।
ಭಾರತ ಮಾತೆಯ ಮಡಿಲಲ್ಲಿ ।

ಶಿಸು ಕೌಮಾರ್ಯ ಯವ್ವನದಲ್ಲಿ ।
ಕಳೆದವು ದಿನಗಳು ಅನುದಿನದಲ್ಲಿ ॥ ೧ ॥

ಮನಬುದ್ಧಿ, ಚಿತ್ತ, ಅಹಂಕಾರದಲ್ಲಿ ।
ಹೊನ್ನು, ಮಣ್ಣು, ಹೆಣ್ಣಿನ ಆಮಿಷದಲ್ಲಿ ।
ಮುಳಿಗ್ಯಾಡಿ ಮನ ಹೇಸಿ ಸಂಸಾರದಲ್ಲಿ ।
ನಿಜ ಅರಿಯಲಿಲ್ಲ ಜೀವನದಲ್ಲಿ ॥ ೨ ॥

ಜಿಗಿಯುತ್ತಿದೆ ಜೀವನ ಜೋಕಾಲಿ ।
ಶರೀರ ಶಕ್ತಿ ಆಗುತ್ತಿದೆ ಖಾಲಿ ।
ಸಮಯ ಮಾಡ ಬೇಡ ನೀನು ಗೇಲಿ ।
ದಾಟು ಮನವೇ ಭವದ ಬೇಲಿ ॥ ೩ ॥

ಆತ್ಮ ಶಕ್ತಿಯನು ತಿಳಿ ಮನವೇ ।
ಶಾಶ್ವತ ಸತ್ವ ಹೊಂದು ಮನವೇ ।
ಶಾಂತಿಯ ಆನಂದ ಉಣು ಮನವೇ ।
ನಮಿಸುವೆ ಯೋಗಿ ಎಲೆ ಮನವೇ ॥ ೪ ॥

ಇಂದ್ರಿಯಗಳ ವ್ಯಸನ ಬಿಡು ಮನವೇ ।
ಭಾಲ್ಕಿಯ ಬಸವನ ನೆನಿ ಮನವೇ ।
ದೇಹವು ಸ್ಥಿರವಲ್ಲ ತಿಳಿ ಮನವೇ ।
ಮುಕ್ತಿಯು ಹೊಂದು ಎಲೇ ಮನವೇ ॥ ೫ ॥

ಪಂಚಾಕ್ಷರ

ಪಂಚ ಭೂತ ಪಂಚಾಕ್ಷರ ।
ಇರುವುದು ಜೀವನ ಸಾರಾ ।
ನಿಸರ್ಗವೇ ಸಾಕ್ಷ್ಯಾಧಾರ ।
ಪಂಚಾಕ್ಷರ ಅನುಭವ ಸಾರ ॥ ೧ ॥

ಆಧಾರ ಚಕ್ರದಲ್ಲಿ ।
ನಕಾರ ಪ್ರಣಮ ಅಲ್ಲಿ ।
ಪೃಥ್ವಿ ತತ್ತ್ವ ಇದರಲ್ಲಿ ।
ಸಹನ ಶೀಲತೆ ಗುಣ ಅದರಲ್ಲಿ ॥ ೨ ॥

ಸ್ವಾದಿಷ್ಠಾನ ಚಕ್ರದಲ್ಲಿ ।
ಮಕಾರ ಪ್ರಣಮ ಅಲ್ಲಿ ।
ಆಪ ತತ್ತ್ವ ಇದರಲ್ಲಿ ।
ಸ್ವಾದುತ್ವ ಗುಣಧರ್ಮಲ್ಲಿ ॥ ೩ ॥

ಮಣಿಪೂರ ಚಕ್ರದಲ್ಲಿ ।
ಶಿಕಾರ ಪ್ರಣಮ ಅಲ್ಲಿ ।
ಅಗ್ನಿ ತತ್ತ್ವ ನೋಡಲ್ಲಿ ।
ಸರ್ವ ಭೂಷಣ ಗುಣ ಇದರಲ್ಲಿ ॥ ೪ ॥

ಅನಾಹತ ಚಕ್ರದಲ್ಲಿ ।
ಮಕಾರ ಪ್ರಣಮ ಅಲ್ಲಿ ।
ವಾಯು ತತ್ತ್ವ ಇದರಲ್ಲಿ ।
ನಿರ್ಮಲತ್ವಗುಣ ಅದರಲ್ಲಿ ॥ ೫ ॥

ವಿಶುದ್ಧಿ ಚಕ್ರದಲ್ಲಿ ।
ಯಕಾರ ಪ್ರಣಮ ಅಲ್ಲಿ ।
ಆಕಾಶ ತತ್ತ್ವ ನೋಡಲ್ಲಿ ।
ವಿಶಾಲತ್ವ ಗುಣ ಅದರಲ್ಲಿ ॥ ೬ ॥

ಐದುಗುಣ ಐದಕ್ಷರಕ ।
ಮಾಡು ನೀನು ಸ್ವಾಧೀನ ಪೂರಾ ।
ಮಮ ಮಂತ್ರ ನಿನಗಾಧಾರ ।
ಆಗುವುದು ಆತ್ಮ ವಿಚಾರ ॥ ೭ ॥

ಧರಿಯೊಳು ಭಾಲ್ಕಿಯ ಪುರ ।
ಸದ್ಗುರು ಬಸವ ಧೀರ ।
ಯೋಗಿ ಮಾಡಿದ ನಮಸ್ಕಾರ ।
ಜೀವನ ಸಾರ್ಥಕ ಆಯಿತು ಪೂರಾ ॥ ೮ ॥

ಮನಸ್ಸು ಮತ್ತು ದಶೇಂದ್ರಿಯಗಳು

ಮಾನವ ಜನ್ಮ ಹಿರಿದಣ್ಣಾ ।
ಇದರ ಲಾಭ ನೀ ಪಡಿಯಣ್ಣಾ ।
ಹತ್ತು ಇಂದ್ರಿಯಗಳ ದೇಹವಣ್ಣಾ ।
ಇವುಗಳ ಮೇಲೆ ಮನೋರಾಜಣ್ಣಾ ॥ ೧ ॥

ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗಣ್ಣಾ ।
ಜ್ಞಾನೇಂದ್ರಿಯಗಳು ನೀ ತಿಳಿಯಣ್ಣಾ ।
ಶಬ್ದ, ಸ್ಪರ್ಶ, ರೂಪ, ರಸ, ಗಂಧಣ್ಣಾ ।
ಜ್ಞಾನೇಂದ್ರಿಯಗಳ ಕಾರ್ಯ ನೋಡಣ್ಣಾ ॥ ೨ ॥

ವಾಕ, ಪಾಣಿ, ಪಾದ, ಗುಹ್ಯ, ಗುದವಣ್ಣಾ ।
ಕರ್ಮೇಂದ್ರಿಯಗಳು ತಿಳಿಯಣ್ಣಾ ।
ಮನೋರಾಜನಿಗಿಬ್ಬರೂ ಮಡದಿಯರಣ್ಣಾ ।
ಪ್ರವೃತ್ತಿ, ನಿವೃತ್ತಿ ಎಂದು ಹೆಸರಣ್ಣಾ ॥ ೩ ॥

ಪ್ರವೃತ್ತಿಯ ಹಿರೇಮಗ ಮೋಹವಣ್ಣಾ ।
ನಿವೃತ್ತಿಯ ಜೇಷ್ಠಪುತ್ರ ವಿವೇಕವಣ್ಣಾ ।
ಸವತೇರ ಮತ್ಸರ ಹಗಲಿರುಳಣ್ಣಾ ।
ಮಕ್ಕಳ ಹಗೆತನ ಕಡೆತನಕಣ್ಣಾ ॥ ೪ ॥

ಮೊಹ, ವಿವೇಕದ ಯುದ್ಧವಣ್ಣಾ ।
ನಡೆಯುವುದು ಕಾಳಗ ಸರ್ವರಲಿಯಣ್ಣಾ ।
ಬಸವನ ಪಾದಕ ನಮಿಸಿದಿರಣ್ಣಾ ।
ವಿಠ್ಠಲ ಯೋಗಿ ಶಿಕ್ಷಕರಣ್ಣಾ ॥ ೫ ॥

ಏಕೆ ?

ಸೇವೆಗಾಗಿ ಬಾಳದ ನಿನ್ನ ಬಾಳೇಕೆ ?
ಬಾಳಿನಲಿ ಅತಿ ಆಸೆಯ ನಿನಗೇಕೆ ?
ಹೆಣ್ಣು, ಹೊನ್ನು, ಮಣ್ಣಿನ ಆಸೆ ಮಾಡುವುದೇಕೆ ?
ಜ್ಞಾನವಿಲ್ಲದೆ ನೀ ಬದುಕುವುದೇಕೆ ? ॥ ೧ ॥

ಹೆತ್ತವರ ಸೇವೆ ಮಾಡದ ಜೀವನ ಏಕೆ ?
ಗುರು ಹಿರಿಯರಿಗೆ ವಂದಿಸದೆ ಬಾಳುವುದೇಕೆ ?
ಕಾಯಕ ವಂಚಿತರಾಗಿ ಬದುಕುವುದೇಕೆ ?
ಪರಹಿತ ಬಯಸದ ಜೀವನ ಏಕೆ ? ॥ ೨ ॥

ಪಾಮರರಸಂಗ ನೀ ಮಾಡುವುದೇಕೆ ?
ಪಂಡಿತರಸಂಗ ನೀ ತೊರೆಯುವುದೇಕೆ ?
ಸದ್ಗುರುವ ಪಡೆಯದ ಜೀವನ ಏಕೆ ?
ಭಾಲ್ಕಿಯ ಬಸವನ ಪಾದದ ಬಯಕೆ ॥ ೩ ॥

(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿದ್ದಾರೆ.)



ವಿಠ್ಠಲರಾವ ಯೋಗಿ
ಮಾಸ್ತರ.




ವಿಠ್ಠಲರಾವ ಯೋಗಿ ಮಾಸ್ತರ ಅವರ ಮನೆ (ಲಾದಾ).



ವಿಠ್ಠಲರಾವ ಅವರು ತತ್ತ್ವಪದ ಹಾಡುತ್ತಿರುವುದು.



ವಿಠ್ಠಲರಾವ
ಯೋಗಿ
ದಂಪತಿಗಳು.



ವಿಠ್ಠಲರಾವ ಅವರ ತಂದೆ ಹೊನ್ನಪ್ಪ



ವಿಠ್ಠಲರಾವ ಯೋಗಿ ಅವರ ತಾಯಿ
ಸಿದ್ಧಮ್ಮ.

೨೫. ನಾಗಪ್ಪ ಕಾಶೆಂಪೂರ (ಕ್ರಿ.ಶ.ಸು. ೧೯೫೦)

ಬೀದರ ಜಿಲ್ಲೆ ಔರಾದ ತಾಲ್ಲೂಕಿನಲ್ಲಿ ಬರುವ ಬೋರಗಿ ಗ್ರಾಮವು ನಾಗಪ್ಪನವರ ಸ್ವಗ್ರಾಮವಾಗಿದೆ. ಅವರ ಮನೆತನದ ಹೆಸರು "ಕಾಶೆಂಪೂರ" ಎಂಬುದಾಗಿದೆ. ಬಹುಶಃ ನಾಗಪ್ಪನವರ ಪೂರ್ವಜರು ಬೀದರ ಜಿಲ್ಲೆಯ ಕಾಶೆಂಪೂರ ಗ್ರಾಮದಿಂದ ಬಂದು ಬೋರಗಿಯಲ್ಲಿ ನೆಲೆಸಿರುವ ಸಾಧ್ಯತೆಯಿದೆ. ಆದರೆ ಇಂದು ಈ ವಿಷಯ ಕುರಿತಂತೆ ನಾಗಪ್ಪನವರು ಏನನ್ನೂ ಖಚಿತವಾಗಿ ಹೇಳುವುದಿಲ್ಲ.

ದಲಿತ ಕುಟುಂಬದಲ್ಲಿ ಹುಟ್ಟಿದ ಶಂಭಪ್ಪ ಕಾಶೆಂಪೂರ ಅವರು ನಾಗಪ್ಪನವರಿಗೆ ಜನ್ಮ ನೀಡಿದ ತಂದೆ. ಅವರ ತಾಯಿ ಗುಜ್ಜಮ್ಮ. ನಾಗಪ್ಪನವರ ಜನನದ ವರ್ಷ ಕ್ರಿ.ಶ.ಸು. ೧೯೫೦. ಶಂಭಪ್ಪ ಅವರು ಬಡವರು. ಕೂಲಿ-ಕೃಷಿ ಕಾಯಕದಿಂದ ಉಪಜೀವನ ನಡೆಸುತ್ತಿದ್ದರು. ತಮಗೆ ದತ್ತವಾಗಿ ಬಂದುದನ್ನೇ ಶಂಭಪ್ಪ ಅವರು ತಮ್ಮ ಸಂತತಿಗೆ ನೀಡಿದರು.

ನಾಗಪ್ಪ ಕಾಂಶೆಪೂರ ಅವರು ಶಾಲೆಗೆ ಹೋಗಲಿಲ್ಲ; ಅಕ್ಷರಗಳ ಪರಿಚಯವಾಗಲಿಲ್ಲ. ಆದರೆ ಆಶುಕವಿಗಳ ಸಂಗದಲ್ಲಿ ಅವರು ಸಹಜ ಕವಿತ್ವದ ಸಿದ್ಧಿಯನ್ನು ಪಡೆದುಕೊಂಡರು. ನಾಗಪ್ಪನವರು ಕೃಷಿ ಕಾಯಕವನ್ನು ತಮ್ಮ ಉಪ ಜೀವನದ ಸಾಧನವೆಂದು ಹಿಡಿದುಕೊಂಡರು. ಶ್ರಮವಹಿಸಿ ದುಡಿಯುವುದನ್ನೆ ರೂಢಿಸಿಕೊಂಡರು. ಕೈ ಕೆಸರಾಯಿತು. ಒಂದಿಷ್ಟು ಆರ್ಥಿಕ ಪರಿಸ್ಥಿತಿ ಮೊದಲಿಗಿಂತಲೂ ಸುಧಾರಿಸಿತೆನ್ನಬೇಕು. ಬಾಯಿ ಮೊಸರಾಯಿತು.

ನಾಗಪ್ಪನ ಸಂಸಾರಿಕ ಜೀವನದಲ್ಲಿ ಹೆಂಡತಿಯಲ್ಲಮ್ಮ ಒಂದು ಗಂಡು, ಎರಡು ಹೆಣ್ಣು ಮಕ್ಕಳನ್ನು ನೀಡಿದಳು. ಗಂಡನೊಡನೆ ಕೂಲಿ ಮಾಡುವುದಕ್ಕಾಗಿ ಯಲ್ಲಮ್ಮ ಹೋಗುತ್ತಾರೆ. ಇಬ್ಬರಿಂದ ಬರುವ ಕೂಲಿಯ ಫಲದಲ್ಲಿ ಮನೆಯನ್ನು ನಡೆಸಿಕೊಂಡು ಜೀವಿಸುತ್ತಿದ್ದಾರೆ. ನಾಗಪ್ಪನಿಗೆ ಭಕ್ತಿಯ ಹುಚ್ಚು; ಭಜನೆಯ ಹುಚ್ಚು. ಸಾಧು-ಸಂತರ ಸತ್ಸಂಗ ಇದ್ದಲ್ಲಿಗೆ ಹೋಗುತ್ತಾರೆ; ಭಜನೆ ಮಾಡುತ್ತಾರೆ; ಹಾಡು ಹಾಡುವುದನ್ನು ರೂಡಿಸಿಕೊಂಡು, ಹಾಡ ತೊಡಗಿದರು. ನಾಗಪ್ಪನವರ ಹಾಡಿನ ಮೋಡಿಗೆ ಜನತೆ ತಲೆದೂಗ ತೊಡಗಿತು. ಹಾಡುಗಳನ್ನು ಹಾಡುತ್ತಲೇ ನಾಗಪ್ಪನವರು ಹಾಡುಗಳನ್ನು ಕಟ್ಟುವುದಕ್ಕೆ ಆರಂಭ ಮಾಡಿದರು.

ನಾಗಪ್ಪನವರಿಗೆ ಹಿಂದೂ ದೇವರುಗಳಲ್ಲಿ ಇರುವಷ್ಟೆ ಭಕ್ತಿ, ಮುಸ್ಲೀಮ್ ದೇವರುಗಳಲ್ಲಿಯೂ ಇದೆ. ಅವರು ಮುಕತುಮ್ ಮಲ್ಲಿಕ ದೇವರನ್ನು ಆರಾಧ್ಯ ದೇವರನ್ನಾಗಿ ಮಾಡಿಕೊಂಡಿದ್ದಾರೆ. ಮುಕತುಮ್ ಮಲ್ಲಿಕ್ ದೇವರ ದರ್ಗಾದ ಪಕ್ಕದಲ್ಲಿಯೇ ಮುಕತುಮ್ ಭಾಷಾನ ಕೆರೆಯಿದೆ, ನಾಗಪ್ಪನವರು ಪ್ರತಿ ಶುಕ್ರವಾರ ದರ್ಗಾಕ್ಕೆ ಹೋಗುತ್ತಾರೆ. ಹೂ–ಲೋಭಾನ–ಸಕ್ಕರೆ ಅರ್ಪಿಸುತ್ತಾರೆ. ತಮ್ಮ ಭಕ್ತಿಯನ್ನು ಸಲ್ಲಿಸಿ, ಹೊಲಕ್ಕೆ ಹೋಗುತ್ತಾರೆ.

ಮೋಹರಮ್ ಹಾಡುಗಳನ್ನು ಅವರು ಮೊದಲಿಗೆ ಕಟ್ಟುವುದಕ್ಕೆ ಆರಂಭ ಮಾಡಿದರು. ಹೀಗಾಗಿ ಮುಸ್ಲೀಮ್ ಬಾಂಧವರು ನಾಗಪ್ಪನನ್ನು ಮೋಹರಮ್ ಹಬ್ಬದ ಸಂದರ್ಭದಲ್ಲಿ ಕರೆದು ಅವರಿಗೆ ಹಾಡು ಹಾಡುವುದಕ್ಕೆ ಅವಕಾಶ ಮಾಡಿಕೊಟ್ಟರು. ಇಂದು ನಾಗಪ್ಪ ಅವರು ಪ್ರತಿ ವರ್ಷವೂ ಮೋಹರಮ್ ಸಂದರ್ಭದಲ್ಲಿ ಸಕ್ರೀಯವಾಗಿ ಭಾಗವಹಿಸಿ; ತಮ್ಮ ಹಾಡಿನ ಸೇವೆಯನ್ನು ಸಲ್ಲಿಸುತ್ತಾರೆ. ಸುತ್ತ–ಮುತ್ತಲಿನ ಗ್ರಾಮಗಳಿಗೂ ಹಾಡಲೆಂದು ಹೋಗುತ್ತಾರೆ.

ನಾಗಪ್ಪ ಕಾಶೆಂಪೂರ ಅವರು ಮೋಹರಮ್ ಹಾಡುಗಳೊಂದಿಗೆ ಹಲವಾರು ತತ್ತ್ವದ ಪದಗಳನ್ನು ಕಟ್ಟಿದ್ದಾರೆ. ಅವರ ಶಿಷ್ಯರಿಗೆ ಅವುಗಳನ್ನು ಕಲಿಸಿಕೊಟ್ಟಿದ್ದಾರೆ. ಅವರಿಂದ ಹಾಡಿಸಿ ಆನಂದಗೊಳ್ಳುತ್ತಾರೆ.

ನಾಗಪ್ಪನವರು ತಮ್ಮ ಹಾಡುಗಳಿಗೆ ಸ್ವನಾಮವನ್ನೇ ಮುದ್ರೆಯಾಗಿಟ್ಟುಕೊಂಡಿದ್ದಾರೆ. ನಾಗಪ್ಪನವರು ತಮ್ಮ ಹಾಡು ಕಟ್ಟುವ ಕಲೆಯನ್ನು ಕುರಿತು ಹೀಗೆ ಹೇಳುತ್ತಾರೆ: "ನಮ್ಮ ತಂದೆ ಶಂಭಪ್ಪನವರು ಕವಿಗಾರರಾಗಿರಲಿಲ್ಲ. ಆದರೂ ಅವರಲ್ಲಿಗೆ ಹಲವು ಜನ ಹಿರಿಯ ಕವಿಗಳು ಬರುತ್ತಿದ್ದರು. ಈಗ ನನಗೆ ಅವರ ಹೆಸರು ಸರಿಯಾಗಿ ನೆನಪಿಲ್ಲ. ಬೋರಗಿ ರೆಹಮಾನ ಸಾಬರಿಗೂ ನಮ್ಮ ತಂದೆಯವರಿಗೂ ನಿಕಟ ಪರಿಚಯವಿದ್ದಿತು. ನನಗೆ ಕವಿಗಳ ತಂದೆಯವರ ನಿಕಟ ಪರಿಚಯವಿದ್ದಿತು. ನಾನು ಕವಿಗಳ ಹಾಡುಗಾರಿಕೆಯನ್ನೆ ಕೇಳಿ ಪ್ರಭಾವಿತನಾದೆನು. ಅವರಂತೆ ಹಾಡುಗಳನ್ನು ಬರೆಯಬೇಕೆಂಬ ಹಂಬಲವು ತಾರುಣ್ಯದಲ್ಲಿಯೇ ಮೂಡಿತು. ಆಗ ನಾನು ಕಟ್ಟಿದ್ದು ಮೋಹರಮ್ ಹಾಡುಗಳನ್ನು. ತತ್ತ್ವಪದಗಳನ್ನು ಬರೆದಿರಲಿಲ್ಲ. ಇತ್ತೀಚೆಗೆ ಸು. ಐದಾರು ವರ್ಷಗಳಿಂದ ತತ್ತ್ವಪದಗಳನ್ನು ಕಟ್ಟುತ್ತಿದ್ದೇನೆ. ನನಗೆ ತಿಳಿದಂತೆ ಅವು ಹೊರಗಿನಿಂದ ಬರುವುದಿಲ್ಲ. ಒಳಗಿರುವ ಆತ್ಮದಿಂದಲೇ ಹುಟ್ಟಿ ಬರಬೇಕು. ಆತ್ಮದ ಸಿದ್ಧಿ ಸಾಧಿತವಾಗಿರಬೇಕು. ಈಗ ನನಗೆ ತತ್ತ್ವಪದಗಳ ಕಟ್ಟುವಿಕೆ ಸಾಧ್ಯವಾಗಿದೆ. ಆಗಾಗ ಹಾಡುಗಳನ್ನು ಕಟ್ಟುತ್ತೇನೆ".

ನಾಗಪ್ಪ ಅವರು ಬರೆದ ಎರಡು ತತ್ತ್ವಪದಗಳನ್ನು ಇಲ್ಲಿ ಕೊಡಲಾಗಿದೆ:

ಬದ್ಧ ದೇಹಾದೊಳಗ ಹದ್ದ ಮೀರಿದ ಜೀವಾ

ಬದ್ಧ ದೇಹಾದೊಳಗ ಹದ್ದ ಮೀರಿದ ಜೀವಾ
ಒದ್ದಾಡುತಾದೋ ವಿಲಿವಿಲಿ ॥ ಪ ॥

ಐದು ಇಂದ್ರಿಯ ಭಾದೆ
ಮೂರು ಗುಣಗಳ ಭಾದೆ
ಆರು–ಮೂರು ನೀಗಿಲ್ಲವಂದೆ
ಯಾರು ತಿಳಿಯಲಿದರ ಧಂದೆ ॥ ೧ ॥

ಅಂತರಂಗದ ಗುಡಿಯೋ
ಅದಕ ಒಂಬತ್ತು ಕಿಡಕಿಗಳ ತಡಿಯೋ
ಒಳಗ ಕುಂತಾನ ಲಿಂಗಪ್ಪ ದೇವನು
ಆಗ–ಈಗ ಅನಬ್ಯಾಡ ನಂಬು ಅವನನು ॥ ೨ ॥

ಹೊಲಿಸಿನೊಳಗಿನಾ ಹುಳವಾದಿ
ಕನಸು ಮನಸಿನಾಗ ಕಳೆದುಹ್ವಾದಿ
ಮಾನ–ಅನುಮಾನ ಎಲ್ಲ ನಿಂದೆ ಅಂದಿ
ಹಾನಿಯಾಗುವದು ತಿಳಿದಿಲ್ಲ ಕುಂದಿ ॥ ೩ ॥

ಮದದ ಮಲಕ ಹಾಕಿ ಹಗ್ಗ ಹೊಸದಿ
ಬದುವ ಬಂದಾರಿ ಬೆಳೆಸಿ; ಬೇಲಿ ಹಚ್ಚಿದಿ
ಒಳಗ ಬರಲಿಲ್ಲ ಈಶನ ಗುಣವ
ನುಗ್ಗಿ ಬಂದಾವು ಪಶುಗಣವ ॥ ೪ ॥

ದೇಹಾದ ತ್ವಾಟದಾಗ ಕಂಟಿ–ಕಮರಿ
ಮೋಹಾದ ಬೆಳಿ–ಮುಳ್ಳಿನ ಗರಿ
ಪರಿ–ಪರಿಲಿಂದ ಕಸ ತೆಗೆಯಬೇಕು ಮರಿ
ಅಂತರಂಗದ ಹೊಲ ಹಸನಾಗಬೇಕು ಅರಿ ॥ ೫ ॥

ಧರಿಯೊಳಗ ಬೋರಗಿ ಊರಾ
ಮರವಿನೊಳಗ ಬಿದ್ದೆ ನಾಗಪ್ಪ ಪೋರ
ಗುರುವಿನ ಮೊರೆ ಹೊಕ್ಕ ಧೀರಾ
ಬದ್ಧ ದೇಹಾದ ಜಾಲವ ಹರಿದಂತ ವೀರಾ ॥ ೬ ॥

ಕತ್ತಲಿ ಮನ್ಯಾಗ ಹಂಗ್ಯಾಕ ಕುಂತಿ ?

ಕತ್ತಲಿ ಮನ್ಯಾಗ ಹಂಗ್ಯಾಕ ಕುಂತಿ
ಒಳಗ ದೀಪಾ ಹಚ್ಚವ್ವ ತಂಗಿ ॥ ಪ ॥

ಭಾವದ ಭಕ್ತಿಯ ಎಣ್ಣೆಯ ಹಾಕು
ಹೇವನಿಲ್ಲದ ಮನದ ಬತ್ತಿಯ ಬೇಕು
ಬಂದ ಕುಡಿಯನ್ನೆಲ್ಲ ಕಡಿತಿರಬೇಕು
ದೀಪ ಚಂದಾಗಿ ಉರಿಯಲು ಬೇಕು ॥ ೧ ॥

ಕತ್ತಲ್ಯಾಗ ಕುಂತಾರ ತೇಳಾರ ಬರತಾವ
ಬಾವುಲಿ ಬಡಿತಾವ ಬಂದು ಮುಖಕ
ದ್ವಾಮಿ–ತೊಗುಣಿಗೋಳು ಕಡಿತಾವ ತಂಗಿ
ಮುಂದಿನ ಮಸಕಾದು ಕಾಣದು ತಂಗಿ ॥ ೨ ॥

ಕತ್ತಲಿ ಮನ್ಯಾಗ ಬೆಳಕಿಲ್ಲ ಥಳಕಿಲ್ಲ
ಕಾಣುವ ಕಣ್ಣ ಕುರುಡಾಗಿ ತಂಗಿ
ನೋಡುವ ದಿಟ್ಟಿ ಮಂಕಾಗಿ
ಕಾಡುತಾವ ಒಳಗ ತೊಗಣಿ ॥ ೩ ॥

ಗುರುರಾಯ ಬಂದಾನ
ಚಿಮಣಿಯ ತಂದಾನ
ಲಿಂಗದ ಚಿಮಣಿಯ
ಕೈಯ್ಯಾಗ ಇಟ್ಟಾನ ॥ ೪ ॥

ಲಿಂಗದ ಚಿಮಣೀಗಿ
ಅಂಗದ ಮನಿ ಬೆಳಕಾಗಿ
ಸಂದಿಗೊಂದ್ಯಲ್ಲ ಹೊಳಪಾಗಿ
ತಂಗೆವ್ವ ಚಂದ ಚಂದಾನ ಬದುಕಾಗಿ ॥ ೫ ॥

ಧರಿಯೊಳಗ ಮೆರಿತಾದ ಬೋರಗಿ ಗ್ರಾಮ
ಮರಿಮಗ ನಾಗಪ್ಪ ಹಾನಪ್ಪ ಗುಲಾಮ
ಗುರುವೀಗಿ ಮಾಡ್ಯಾನ ದಿನದಿನ ಸಲಾಮ
ಮರೆಯಬ್ಯಾಡರಿ ನೀವು ಬಲು ಕ್ಷೇಮ ॥ ೬ ॥


(ಸ್ವತಃ ಕವಿಗಳೇ ಈ ವಿವರಗಳನ್ನು ನೀಡಿದ್ದಾರೆ.)




ನಾಗಪ್ಪ ಕಾಶೆಂಪೂರ ಅವರ ಮನೆ (ಬೋರಗಿ).



ನಾಗಪ್ಪನವರ ಹೆಂಡತಿ
ಮಲ್ಲಮ್ಮ ತಮ್ಮ
ಮಕ್ಕಳೊಂದಿಗೆ.



ನಾಗಪ್ಪನವರ ಕೃಷಿಯ ಹೊಲ.



ನಾಗಪ್ಪ ಕಾಶೆಂಪೂರ.

೨೬. ಕಂತೆಪ್ಪ ಹುಸೇನಿ (ಕ್ರಿ.ಶ.ಸು. ೧೯೫೨)

ಬೀದರ ಜಿಲ್ಲೆ ಔರಾದ ತಾಲ್ಲೂಕಿನಲ್ಲಿ ಬರುವ ಶೆಂಬೆಳ್ಳಿಗೆ ನಾವು ಹೋದುದು ಬಾಬಣ್ಣನವರ ವಿವರಗಳನ್ನು ಶೋಧಿಸುವುದಕ್ಕಾಗಿ. ಹಾಗೆ ಶೋಧಿಸುವ ಸಂದರ್ಭದಲ್ಲಿ ಬಾಬಣ್ಣನವರ ಮಗ ದಶರಥ ಅವರು ನಮಗೆ ಕಂತೆಪ್ಪನ ಪರಿಚಯ ಮಾಡಿಕೊಟ್ಟರು. ದಲಿತ ಕುಟುಂಬದಲ್ಲಿ ಹುಟ್ಟಿದ ಕಂತೆಪ್ಪನವರ ಮನೆಯೆಂದರೆ ನಾಲ್ಕು ತಗಡಿನ ಪತ್ರಾ ಹಾಕಿದ ಒಂದು ಕೋಣೆ. ಅದರಲ್ಲಿಯೇ ಅವರ ಎಲ್ಲ ಸಂಸಾರ. ಕಂತೆಪ್ಪನವರನ್ನು ನೋಡಿದರೆ ಬಡತನವೆ ಮೈವೆತ್ತು ಎದುರು ಬಂದು ನಿಂತಂತೆ ಕಾಣುತ್ತದೆ. ಶಾಂತ ಸ್ವಭಾವ. ಹೆಚ್ಚು ಮಾತನಾಡುವುದಿಲ್ಲ. ಆದರೆ ದೊಡ್ಡ ಪ್ರತಿಭಾವಂತ. ಕೆಸರಿನಲ್ಲಿ ಹುಟ್ಟಿದ ಕಮಲದಂತೆ ಅವರ ಸ್ಥಿತಿ. ಬಹು ಸಂಖ್ಯಾತ ದಲಿತ ತತ್ತ್ವಪದಕಾರರ ಹಣೆಬರಹ ಹೀಗೇ ಇದೆ.

ಕಂತೆಪ್ಪನವರ ತಂದೆ ಅರ್ಜುನ ಬದುಕಿದ್ದು ಹೀಗೆಯೇ. ಅವರ ತಾಯಿ ಕಲಾವತಿ, ಕಲಾವಂತ ಮಗನನ್ನು ಪಡೆದು ಆ ತಾಯಿ ತನ್ನ ಹೆಸರಿನ ಸಾರ್ಥಕತೆ ಮಾಡಿಕೊಂಡಳು. ಅರ್ಜುನ – ಕಲಾವತಿ ದಂಪತಿಗಳು ಹೊಲದಲ್ಲಿ ದುಡಿದು ಉಪಜೀವನ ನಡೆಸಿದರು. ಮಕ್ಕಳನ್ನು ಸಾಕಿ ಸಲಹಿದರು. ತಮಗಿದ್ದುದನ್ನೇ ತಮ್ಮ ಮಕ್ಕಳಿಗೆ ಬಿಟ್ಟು ಹೋದರು. ಕಂತೆಪ್ಪ ಎಂಟನೆಯ ತರಗತಿಯವರೆಗೆ ಓದಿದ್ದಾನೆ. ಕನ್ನಡ ಸರಿಯಾಗಿ ಬರೆಯಲು, ಓದಲು ಬರುತ್ತದೆ. ಹೆಂಡತಿ ಪಾರ್ವತಿ. ಈ ದಂಪತಿಗಳಿಗೆ ಒಟ್ಟು ನಾಲ್ಕು ಜನ ಮಕ್ಕಳು. ಎರಡು ಹೆಣ್ಣು, ಎರಡು ಗಂಡು.

ಕಂತೆಪ್ಪನವರು ಬಾಬಣ್ಣನವರ ಶಿಷ್ಯರಾದುದರಿಂದ ಬಸವಣ್ಣನವರ ತತ್ತ್ವದ ಅನುಸಂಧಾನ ಅವರ ಬದುಕಿನಲ್ಲಿ ಕಾಣಬಹುದಾಗಿದೆ. ಭಾಲ್ಕಿಯ ಉರಿಲಿಂಗ ಪೆದ್ದಿ ಮಠದ ಸ್ವಾಮಿಗಳವರಿಂದ ವೀರಶೈವ ದೀಕ್ಷೆಯನ್ನು ಕಂತೆಪ್ಪನವರು ಪಡೆದುಕೊಂಡಿದ್ದಾರೆ. ಧರ್ಮದ ಗುರುಗಳು ಉರಿಲಿಂಗ ಪೆದ್ದಿ ಮಠದ ಸ್ವಾಮಿಗಳಾದರೆ; ಸಾಹಿತ್ಯದ ಗುರುಗಳು ಬಾಬಣ್ಣನವರು.

ಕಂತೆಪ್ಪನವರು ಬಾಬಣ್ಣನವರ ಭಜನಾ ಸಂಘದ ಸದಸ್ಯರಾಗಿ ಹಲವಾರು ಊರುಗಳನ್ನು ತಿರುಗಿದ್ದಾರೆ. ಶಾಸ್ತ್ರೀಯ ಲಯ–ಶ್ರುತಿಗಳ ಪರಿಚಯವು ಅವರಿಗೆ ಇದ್ದೇ ಇದೆ. ಹಾಡಲು ಕುಳಿತರೆ ತಾಳ ತಪ್ಪುವುದಿಲ್ಲ. ಮೇಳದ ಹೊರಗೆ ನಿಲ್ಲುವುದಿಲ್ಲ.

ಬಾಬಣ್ಣನವರು ಹಲವಾರು ಶಿಷ್ಯರುಗಳ ಶಕ್ತಿ ಗುರುತಿಸಿದಂತೆ ಕಂತೆಪ್ಪನವರಲ್ಲಿರುವ ಕಾವ್ಯ ಶಕ್ತಿಯನ್ನು ಗುರುತಿಸಿದರು. ಹಾಡು ಹಾಡಲು ಮತ್ತು ಬರೆಯಲು ಪ್ರೋತ್ಸಾಹಿಸಿದರು. ಹೀಗಾಗಿ ಕಂತೆಪ್ಪನವರಿಗೆ ಹಲವಾರು ಹಾಡುಗಳು ಬರೆಯುವುದಕ್ಕೆ ಸಾಧ್ಯವಾಯಿತು.

ಕಂತೆಪ್ಪನವರು ಬಾಬಣ್ಣನವರನ್ನು ಕುರಿತು ಆಡುವ ಕೃತಜ್ಞತೆಯ ಮಾತುಗಳನ್ನು ಕೇಳಬೇಕು: "ಬಾಬಣ್ಣನವರು ನಮ್ಮ ಕೇರಿಗಷ್ಟೇ ಅಲ್ಲ ; ಊರಿಗೇ ಬಹುದೊಡ್ಡ ಶರಣರಾಗಿದ್ದರು. ಅವರನ್ನು ಎಲ್ಲ ಜಾತಿಯ ಜನರೂ ಗೌರವದಿಂದ ಕಾಣುತ್ತಿದ್ದರು. ಸೂರ್ಯೋದಯವಾಗುತ್ತಲೇ ಅವರು ಮನೆಯಿಂದ ಹೊರಗಾಗುತ್ತಿದ್ದರು. ಬಸವಣ್ಣನವರಂತೆ ಎದೆಯ ಮೇಲೆ ಕರಡಿಗೆ ಕಾಣುತ್ತಿತ್ತು. ಹಣೆಯ ಮೇಲೆ ವಿಭೂತಿ ಯಾವಾಗಲೂ ಇರುತ್ತಿದ್ದಿತು. ವಿಭೂತಿ ಇಲ್ಲದ ಹಣೆ ನಾವು ಒಮ್ಮೆಯೂ ಕಾಣಲಿಲ್ಲ. ಬಾಬಣ್ಣನವರು ದೊಡ್ಡ ಮನದವರು. ತಮಗಿಂತ ಕಿರಿಯರನ್ನು ಅತ್ಯಂತ ಪ್ರೀತಿಯಿಂದ ನೋಡುತ್ತಿದ್ದರು. ತಾವೊಬ್ಬರೆ ಕವಿಗಳಾಗಿ ಬೆಳೆದರೆ ಆಗದು; ತಮ್ಮೊಂದಿಗೆ ತಮ್ಮ ಶಿಷ್ಯ ಬಳಗವೂ ಒಳ್ಳೆಯ ಕವಿಗಳಾಗಿ ಊರಿನ ಹೆಸರು ಹರಡಲಿಯೆಂಬುದು ಅವರ ಧೋರಣೆಯಾಗಿತ್ತು. ಆದುದರಿಂದ ನಮಗೆ ಒಂದೇ ಸವನೆ ಹಾಡುವಂತೆ ದುಂಬಾಲು ಬೀಳುತ್ತಿದ್ದರು. ಬರೆದ ಹಾಡುಗಳನ್ನು ಪರಿಶೀಲನೆ ಮಾಡುತ್ತಿದ್ದರು, ಅಲ್ಲಲ್ಲಿನ ಕೆಲವು ಶಬ್ದಗಳನ್ನು ತಿದ್ದುತ್ತಿದ್ದರು. ಹೀಗಾಗಿ ನನಗೆ ಕಾವ್ಯದ ಕಲೆ ಸರಿಯಾಗಿ ಕರಗತವಾದಂತಾಯಿತು. ಆರ್ಥಿಕ ದೃಷ್ಟಿಯಿಂದ ದಟ್ಟ ದರಿದ್ರನಾಗಿದ್ದ ನನಗೆ ಸಾಹಿತ್ಯಿಕ ದೃಷ್ಟಿಯಿಂದ ಬಾಬಣ್ಣನವರು ತಮ್ಮಲ್ಲಿರುವ ಜ್ಞಾನದ ರೊಕ್ಕವನ್ನು ಕೊಟ್ಟು ಶ್ರೀಮಂತನನ್ನಾಗಿ ಮಾಡಿದ್ದಾರೆ. ಅವರು ನನಗೆ ಹಿರಿಯರು; ಗುರುಗಳು, ಆದುದರಿಂದ ನನ್ನ ಹಾಡುಗಳನ್ನೆಲ್ಲ ಅವರಿಗೇ ಸಲ್ಲಿಸಿದ್ದೇನೆ".

ಕಂತೆಪ್ಪನವರು ಹಲವಾರು ಮೋಹರಮ್ ಹಾಡುಗಳನ್ನು ಬರೆದಿದ್ದಾರೆ; ಲಾವಣಿ-ಗೀಗೀ ಪದಗಳನ್ನಲ್ಲದೆ, ತತ್ತ್ವಪದಗಳನ್ನೂ ಬರೆದಿದ್ದಾರೆ. ಅವರು ಬರೆದ ತತ್ತ್ವಪದಗಳಿಗೆ "ಬಸವಣ್ಣ", "ಅಂಬೇಡ್ಕರ" ಎಂಬ ಅಂಕಿತ ಹಾಕಿದ್ದಾರೆ. ಕಂತೆಪ್ಪನವರು ಬರೆದ ಎರಡು ಹಾಡುಗಳನ್ನು ಇಲ್ಲಿ ಉದಾಹರಣೆಗಾಗಿ ಕೊಡಲಾಗಿದೆ:

ಶಿವ ಹರ ಶಂಕರ ನೀನೆ

ಶಿವ ಶಿವಹರ ಶಂಕರ ನೀನೆ
ಭವ ಹರ ಶಂಕರ ನೀನೆ ॥ ಪ ॥

ಜಗದಲಿ ಬಂದೆ ದುಕ್ಕದಿ ಬೆಂದೆ
ಪರಿಹರಿಸೋ ತಂದೆ
ಭವದಾಟ ಇದರ ಕಾಟ
ಪರಿಹರಿಸೋ ಎಂದೆ ॥ ೧ ॥

ಜಲ್ಮ ಮರಣ ಭಯ ದೂರ ಮಾಡೋ
ನಿನ್ನ ಪಾದಕ ಹೊಂದಿಸಿಕೊಂಡು ಸುಖ ನೀಡೋ
ಬಡತನ – ಸಿರಿತನ ಸ್ಥಿರವಲ್ಲ
ಎಡವಿದಲ್ಲಿ ಅದು ಸಿಗದಿಲ್ಲ ॥ ೨ ॥

ಓಡ್ಯಾಡ ಬ್ಯಾಡ ಮನ ಬಂದಕಡೆ ಎಂದೆ
ಅದು ನಿಂತಿಲ್ಲ ಒಂದು ಕಡೆ ತಂದೆ
ಲಿಂಗದ ಮ್ಯಾಲ ಇಲ್ಲ ಅದರ ಧ್ಯಾನ
ಅಂಗದ ಗುಣ ಹೊಂದ್ಯಾದ ಸ್ವಾನ ॥ ೩ ॥

ಭಜನೆಯಲ್ಲಿ ಶಿವಹರ ಇರುವನು
ಭಜನಿಯ ನೀ ಮಾಡೋ
ಭಜನಿಯ ಮಾಡುತ ನಗಬಾರದಪ್ಪ
ಅದು ಬೆಂಕಿಯ ಕುಂಡ ತಿಳಿಯಪ್ಪ ॥ ೪ ॥

ಶಿವನನು ನೀ ತಿಳಿಯದೆ ಹೋದರ
ಕೋಳಿ ಕತ್ತಿಗಿಂತ ಅತಾತ ಆಗುತಿ
ಜಗದ ಕಾಡಿನ ಹಾದಿ ಹಿಡಿಬ್ಯಾಡ
ಮುಳ್ಳಿನ ಮ್ಯಾಲ ನಡಿಬ್ಯಾಡ ॥ ೫ ॥

ನಿರ್ಮಲ ಮನಸ್ಸು ಮಾಡು
ಅದರಾಗ ಶಿವನ ಗೂಡು
ಮಾಯ–ಮೋಹ ದೂಡು
ಶಿವನಾಮ ಬಿಡಲಾರದೆ ಪಾಡು ॥ ೬ ॥

ಧರಿಯೊಳು ಮೆರೆಯುವ ಶೆಂಬೆಳ್ಳಿ ಗ್ರಾಮದಲಿ
ಪರಮ ಮೂರುತಿ ಬಸವಣ್ಣ ಹಾನರಿ
ಅವನ ಪಾದಕ ಶರಣಾಗರಿ
ಆಗಲೆ ನಿಮಗ ಶಿವ ಸಿಗುತಾನರಿ ॥ ೭ ॥

ಅಲಾಯಿ ಆಡಂಬಾ ಅಂತಾನ

ಹುಸೇನಿ ಪೀರಾ ಕರಿತಾನ
ಅಲಾಯಿ ಆಡಂಬಾ ಅಂತಾನ ॥ ಪ ॥

ಹೆಜ್ಜಿಗಿ ಹೆಜ್ಜಿ ಹಾಕಂತಾನ
ಪೈತ್ರಿಯ ಹಾಡಾ ಹಾಡ್ಯಾನ
ನಡು ಹಾ ಹಾ ಅನು ಅಂದಾನ
ಗಡುವಿನತಾನ ನಡಿಯಂತ ಹೇಳ್ಯಾನ ॥ ೧ ॥

ಹುಸೇನಿ ಪೀರಾ ಗುರು ಗಂಭೀರಾ
ಈಶನು ಅವನೆ ತಿಳಿಯೊ ಪಾರಾ
ಶಿವ ಅಂತಿ; ಅಲ್ಲಾ ಅಂತಿ
ಎರಡು ಭೇದ ಯಾಕ ಮಾಡುತಿ ॥ ೨ ॥

ಚತ್ತೀಸ್ ಕೋಟಿ ದೇವತ ವಳಗ
ಬತ್ತೀಸ್ ಗುಣಗಳು ಕುಳಿವಳಗ
ಪಸ್ತೀಸ್ ಅದರಾಗ ಕಳಿಬ್ಯಾಗ
ಉಳಿತಾವ ವನತೀಸ್ ಆಗ ॥ ೩ ॥

ಹುಜುರಿಗಿ ಹುಜಾರ ಹಾಕೋ
ಶೆಂಬೆಳ್ಳಿ ಗ್ರಾಮ ಜ್ವಾಕೋ
ಬಸವಣ್ಣ ದೇವತಾಕೋ
ಸಲಾಮ ಕರೋ ಉಸಕೋ ॥ ೪ ॥

(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿದ್ದಾರೆ.)

□



ಕಂಠೆಪ್ಪ ಹುಸೇನಿ ಅವರ ಮನೆ (ಶೆಂಬೆಳ್ಳಿ).



ಕಂಠೆಪ್ಪ ಹುಸೇನಿ.



ಕಂತೆಪ್ಪ ಹುಸೇನಿ ದಂಪತಿಗಳು (ಪತ್ನಿ ಪಾರ್ವತಿ).



ಕಂತೆಪ್ಪನವರ ಪರಿವಾರ.

೨೭. ನಾಗನಾಥರಾವ ಕೋಟೆ (ಕ್ರಿ.ಶ.ಸು. ೧೯೬೦)

ಬೀದರ ಜಿಲ್ಲೆಯ ಔರಾದ ತಾಲ್ಲೂಕಿನ ಜೆರ್ಗ್ಯಾ(ಬಿ) ಗ್ರಾಮದ ನಿವಾಸಿಯಾಗಿರುವ ನಾಗನಾಥರಾವ ಕೋಟೆ ಅವರು ಐವತ್ತೊಂದು ವರುಷಗಳ ವಯಸ್ಸಿನವರು. ಆಚಾರ ಶೀಲರಾದ ನಾಗನಾಥ ದಂಪತಿಗಳು ವೀರಶೈವ ಸಂಸ್ಕೃತಿಯ ಪರಿಪಾಲಕರು. ಅವರದು ಬಹು ಮುಖವ್ಯಕ್ತಿತ್ವ, ಬಹುಶ್ರುತ ಜ್ಞಾನ.

ಗುಂಡಪ್ಪ ಕೋಟೆಯುವರು ನಾಗನಾಥ ಅವರ ತಂದೆ. ಅವರು ಸಂಗೀತಗಾರರಾಗಿದ್ದು; ಒಳ್ಳೆಯ ಹಾಡುಗಾರರೂ ಆಗಿದ್ದರು. ಹಲವಾರು ಸಂಗೀತ ವಾದ್ಯಗಳನ್ನು ನುಡಿಸುತ್ತಿದ್ದರು. ಹಾಡುಗಳಿಗೆ ರಾಗ ಸಂಯೋಜನೆ ಮಾಡುತ್ತಿದ್ದರು. ಭಜನೆಗಳಿಗೆ ಹೋಗುತ್ತಿದ್ದರು. ಅವರ ಸುತ್ತಲು ಯಾವಾಗಲೂ ಭಜನೆ ಮಾಡುವವರು ಇರುತ್ತಿದ್ದರು. ಬೇರೆ ಊರುಗಳಿಂದ ಕರೆ ಬಂದಾಗಲೂ ಅವರು ತಮ್ಮ ಭಜನೆಯ ಬಳಗದವರೊಂದಿಗೆ ಅಲ್ಲಿಗೆ ಹೋಗುತ್ತಿದ್ದರು. ತಂದೆಯವರ ಈ ಪ್ರಭಾವವು ನಾಗನಾಥ ಅವರ ಮೇಲೆ ಆಗದೆ ಹೋಗಲಿಲ್ಲ. ಗುಂಡಪ್ಪ ಕೋಟೆ ಅವರ ಹೆಂಡತಿ ಗುಂಡಮ್ಮನವರು. ಪತಿಯ ಸಂಗೀತ – ಹಾಡುಗಾರಿಕೆಯ ಬಗೆಗೆ ಅಭಿಮಾನ ಇಟ್ಟುಕೊಂಡಿದ್ದ ಗೃಹಿಣಿಯಾಗಿದ್ದರು.

ನಾಗನಾಥ ಕೋಟೆ ಅವರಿಗೆ ಬಾಲ್ಯದಲ್ಲಿಯೇ ಸಂಗೀತ–ಹಾಡುಗಾರಿಕೆ ಕಲೆಗಳು ತಮ್ಮತ್ತ ಸೆಳೆದುಕೊಂಡವು. ಅವರು ಊರಿನ ಕನ್ನಡ ಶಾಲೆಗೆ ಹೋದರು. ನಾಲ್ಕನೆಯ ತರಗತಿಯವರೆಗೆ ಓದಿದರು. ಅವರಿಗೆ ನಾಲ್ಕು ಗೋಡೆಗಳ ನಡುವಿನ ಶಿಕ್ಷಣದಕ್ಕಿಂತಲೂ ಹೊರಗಡೆಯಲ್ಲಿ ಜನರ ನಡುವೆ ಹೊಂದುವ ಅನುಭವದ ಶಿಕ್ಷಣವು ಹೆಚ್ಚಾಗಿ ಆಕರ್ಷಿಸಿತು. ಹಾಡುವುದು–ಭಜನೆ ಮಾಡುವುದು, ಹಾಡುಕಟ್ಟುವುದು, ಅನುಭವದ ನುಡಿಗಳನ್ನು ಕೇಳುವುದು ಹೆಚ್ಚು ಪ್ರಿಯವೆನಿಸಿತು. ಶಾಲೆಯ ಒಳಾಂಗಣದಿಂದ ಹೊರಗೆ ಬಂದರು. ಲೋಕರಂಗಕ್ಕೆ ಧುಮುಕಿದರು.

ನಾಗನಾಥ ಕೋಟೆ ಅವರು ಸಾರಸಂಸಾರಿಗಳು. ಅವರ ಹೆಂಡತಿ ಸತ್ಯವತಿ, ಅವರಿಗೂ ಹಾಡುಗಾರಿಕೆಯ ಕಲೆ ಸಾಧಿತವಾಗಿದೆ. ಪತಿಯ ರಚನೆಗಳನ್ನು ಕರಣಮಧುರವೆನಿಸುವಂತೆ ಹಾಡುತ್ತಾರೆ. ಸಂದರ್ಭ ದೊರೆತಾಗ ತಮ್ಮ ಪತಿಗೆ ಹಾಡುಗಳನ್ನು ನೆನಪಿಸಿಕೊಟ್ಟು ಸಹಾಯವಾಗುತ್ತಾರೆ.

ನಾಗನಾಥ ಕೋಟೆ ಅವರ ಮನೆತನದ ಗುರುಗಳು ಹೆಡಗಾಪುರದ ಸಂಸ್ಥಾನ ಮಠದ ಶಿವಲಿಂಗ ಶಿವಾಚಾರ್ಯರು. ಮನೆಯ ಆರಾಧ್ಯದೇವರು ವೀರಭದ್ರ ದೇವರು.

ಕೋಟೆ ಅವರಿಗೆ ಒಟ್ಟು ಮೂರು ಜನ ಮಕ್ಕಳು. ಇಬ್ಬರು ಗಂಡು-ಒಬ್ಬಳು ಹೆಣ್ಣು ಮಗಳು. ನಾಗನಾಥ ಕೋಟೆ ಅವರ ಕಾಯಕ ಕೃಷಿ. ಅವರು ಹೊಲಕ್ಕೆ ಹೋಗುತ್ತಾರೆ. ಸ್ವತಃ ಹೊಲದ ಕೆಲಸಗಳನ್ನು ಮಾಡುತ್ತಾರೆ. ಭೂಮಿ ತಾಯಿಯ ಮಡಿಲಿನಲ್ಲಿ ಭೂತಾಯಿ ಸೇವೆ ಮಾಡುತ್ತಲೇ ಸಾಹಿತ್ಯ ಮಾತೆಯ ಸೇವೆಯೂ ಮಾಡುತ್ತಿದ್ದಾರೆ.

ನಾಗನಾಥ ಅವರು ನುರಿತ ಸಂಗೀತಗಾರರಾಗಿದ್ದಾರೆ. ಹಲವಾರು ಆಸಕ್ತರಿಗೆ ಸಂಗೀತವನ್ನು ಹೇಳಿಕೊಟ್ಟಿದ್ದಾರೆ; ಹೇಳಿ ಕೋಡುತ್ತಲಿದ್ದಾರೆ. ಹಾಡುಗಳಿಗೆ ರಾಗ ಸಂಯೋಜನೆ ಮಾಡಿ ಅವರು ಭಕ್ತಿಗೀತೆಗಳನ್ನು ಹಾಡುತ್ತಾರೆ. ಆ ಮೂಲಕ ಜನರ ಹೃದಯದಲ್ಲಿ ಭಕ್ತಿಯ ಬೆಳಕನ್ನು ಚೆಲ್ಲುತ್ತಾರೆ. ಅವರಲ್ಲಿನ ಕವಿಯು ಇಂತಹ ಸಂದರ್ಭದಲ್ಲಿಯೇ ಎಚ್ಚರಗೊಳ್ಳುತ್ತಾನೆ; ಲೇಖನಿ ಹಿಡಿದು ಹಾಡುಗಳನ್ನು ಬರೆಯುತ್ತಾರೆ. ಅವರಿಗೆ ಈ ಪ್ರೇರಣೆ "ಯರನಳ್ಳಿ ಮುತ್ಯಾ ದಿಗಂಬರ ಮಾಣಿಕೇಶ್ವರರಿಂದ ದೊರಕುತ್ತದೆಂದು" ಹೇಳುತ್ತಾರೆ. ಅವರ ಈ ಮಾತುಗಳನ್ನು ಕೇಳಬೇಕು: "ನಾನು ಎಂದೂ ನನ್ನನ್ನು ಕವಿಯೆಂದು ಕರೆದುಕೊಂಡಿಲ್ಲ. ಜನರು ನನ್ನನ್ನು ಹಾಗೆ ಕರೆಯುತ್ತಾರೆ. ನನಗೆ ಆಧ್ಯಾತ್ಮದಲ್ಲಿ ಹಂಬಲವಿದೆ. ದಿಗಂಬರ ಮಾಣಿಕೇಶ್ವರರನ್ನು ಸ್ಮರಿಸುತ್ತೇನೆ. ಒಮ್ಮೆಲೆ ಒಳಗೆ ಬೆಳಕು ಮೂಡಿದಂತಾಗುತ್ತದೆ. ಆಗ ನನಗೆ ಸುಮ್ಮನೆ ಇರುವುದಕ್ಕೆ ಆಗುವುದಿಲ್ಲ. ಪೆನ್ನು ತೆಗೆದುಕೊಳ್ಳುತ್ತೇನೆ. ಏನೇನೋ ಬರೆಯುತ್ತೇನೆ. ಮತ್ತು ಅದನ್ನು ಮರಳಿ ನಾನು ಓದುತ್ತೇನೆ. ನನ್ನ ಹೆಂಡತಿಗೆ ತೋರಿಸುತ್ತೇನೆ. ಅವಳು 'ಇದೊಂದು ಒಳ್ಳೆಯ ಹಾಡು ಬರೆದಿದ್ದೀರಿ' ಎನ್ನುತ್ತಾಳೆ. ಹೀಗೆ ಹಾಡುಗಳ ರಚನಾ ಯಾತ್ರೆಯು ಸಾಗಿದೆ. ಆಗಾಗ ಬರೆಯುತ್ತಿರುತ್ತೇನೆ. ನಿಸರ್ಗ ಮಡಿಲು ನನಗೆ ಹೆಚ್ಚು ಆಪ್ಯಾಯಮಾನ, ಹೊಲಕ್ಕೆ ಹೋದಾಗ ಗಿಡದ ಕೆಳಗೆ ಕುಳಿತು ಬರವಣಿಗೆಯ ಕಾರ್ಯ ಮಾಡುತ್ತೇನೆ. ನನಗೆ ಬರೆಯಲೇಬೇಕೆಂಬ ಹಠವಿಲ್ಲ. ಮಾಣಿಕೇಶ್ವರ ಪ್ರಭು ಬರೆಯಿಸಿದಾಗ ಮಾತ್ರ ಬರೆಯದೆ ಇರಲಾರೆನು".

ನಾಗನಾಥರಾವ ಕೋಟೆ ಅವರು ಸರಳ - ಸಜ್ಜನರು. ಅತಿಥಿ ಅಭ್ಯಾಗತರನ್ನು ಆದರದಿಂದ ಸತ್ಕರಿಸುವ ಸಂಸ್ಕೃತಿಯುಳ್ಳವರಾಗಿದ್ದಾರೆ. ಅವರ ಸಜ್ಜನಿಕೆಯು ಎಂಥವರನ್ನೂ ಆಕರ್ಷಿಸುತ್ತದೆ.

ನಾಗನಾಥರಾವ ಕೋಟೆ ಅವರ ರಚನೆಯಲ್ಲಿಂದು ಹಲವಾರು ಪ್ರಕಾರದ ಹಾಡುಗಳು ಇವೆ. ಅವುಗಳಲ್ಲಿ ತತ್ತ್ವಪದಗಳೂ ಇವೆ. ತತ್ತ್ವ ಪದಗಳಿಗೆ ನಾಗನಾಥ

ಅವರು "ದಿಗಂಬರ ಮಾಣಿಕೇಶ್ವರ" ಎಂಬ ಅಂಕಿತ ಹಾಕಿದ್ದಾರೆ. ಇಲ್ಲಿ ಅವರ ರಚನೆಯ ಎರಡು ಹಾಡುಗಳನ್ನು ಕೊಡಲಾಗಿದೆ:

ದತ್ತ ದಿಗಂಬರ ಮಾಡೋ ಉದ್ಧಾರ

ದತ್ತ ದಿಗಂಬರನೆ ಅನಂತ ಕರುಣಾಕರನೆ
ಮಾಡೋ ಎನಗೆ ಉದ್ಧಾರ ॥ ಪ ॥

ದಿಗಂಬರನೆ ನಿಜರೂಪಧಾರನೆ
ದಿಕ್ಕಿನ ಅಂಬರ ಧರಿಸಿದವನೆ
ಮಾಡು ಎನಗೆ ಉದ್ಧಾರ
ಕಾಯೋ ತಂದೆ ಸಕಲ ಭಕ್ತರಾ ॥ ೧ ॥

ನಾನಾ ಜಲ್ಮಗಳ ತಿರುಗಿ ನಾ ಬಂದೆ
ಭವದ ಬೆಂಕಿಯಲ್ಲಿ ಸುಡುತನೊಂದೆ
ಮಾನವ ಜಲ್ಮವು ಸ್ಥಿರವಿಲ್ಲವೆಂದೆ
ಕೊನೆಗೆ ಆಗಬೇಕು ಎನಗೆ ನೀನೇ ತಂದೆ ॥ ೨ ॥

ಹೇಸಕಿ ವಾಸನಿ ಬಲಿಯೊಳಗ
ಮೋಸದ ಕೆಸರಿನ ಮಡಿಯೊಳಗ
ಘಾಷಿಯಾಗುತ ಬಿದ್ದೆನು ದಿನ ಪೂರಾ
ಲೇಸದಿ ಎತ್ತೋ ಕರುಣಾಕರಾ ॥ ೩ ॥

ಚರ್ಮದ ಹೊದಿಕ್ಯಾಗ ಕಳೆದು ಹೋದೆ
ಕೀವುದ ಕುಳಿಯಾಗ ಮುಳುಗಿ ಹೋದೆ
ಎಲುಬಿನ ಹಂದರದಾಗ ಸಿಲುಕಿ ಹೋದೆ
ಇದಕ್ಕಾಗಿ ನಾನು ನಿನ್ನ ನಂಬಿದೆ ॥ ೪ ॥

ಭವ ಹರನೆ ದಿಗಂಬರನೆ
ದತ್ತನೆ ಹೆತ್ತವನೆ
ಸತ್ವ ಗುಣದವನೆ
ಸತ್ತವರಿಗೆ ಸಂಜೀವನೆ ॥ ೫ ॥

ನಿನ್ನ ಪೂಜೆಯು ಎನಗೆ ಮೋಕ್ಷವು
ನಿನ್ನ ಧ್ಯಾನವು ಮುಕ್ತಿಯ ಮಂತ್ರವು
ದಿಗಂಬರ ಮಾಡೋ ಉದ್ಧಾರ
ದಿಗಂಬರ ಮಾಣಿಕ ಪ್ರಭು ನಿಜಹರಾ ॥ ೬ ॥

ಎದುರಿದ್ದ ಗುರು

ಎದುರಿದ್ದನು ಗುರು ಮತ್ತ್ಯಾಕ ಹುಡುಕುತಿ
ಸದರಿನಲ್ಲಿ ನಿನ್ನ ನೋಡುತ ಇರುತಾನ ॥ ಪ ॥


ತಾಯಿಯಾಗಿ ನನಗ ಜೋಗುಳ ಹಾಡ್ಯಾನ
ತಂದಿಯಾಗಿ ನನಗ ಕೈ ಹಿಡಿದು ನಡಸ್ಯಾನ
ಬಂಧುವಾಗಿ ನನಗ ಎಡರು ಕಳದಾನ
ನಿಂದು ನಿಂದು ನನಗ ದಾರಿ ತೋರ್‍ಯಾನ ॥ ೧ ॥

ಕಾಲನ ತುಳದಾನ ಮೀರಿ ತಾ ನಿಂತಾನ
ಕಾಲ – ಕರ್ಮಗಳ ದೂರವ ಮಾಡ್ಯಾನ
ಲೋಲ ಶ್ರೀ ಗುರುರಾಯ ಕಾಯುತಾನ
ದತ್ತ ದಿಗಂಬರ ಅವನೆ ಹಾನಾ ॥ ೨ ॥

ಭರರ ಗಾಳ್ಯಾಗಿ ಬರುತಾನ ಗುರುದೇವ
ಬಿಸಲಾಗಿ ಒಮ್ಮೊಮ್ಮೆ ಬೀಳತಾನ ಮೈಮ್ಯಾಲ
ಚಳಿಯಾಗಿ ನಡುಗಿಸುತಾನ ಗಡಗಡ
ಏನಾದರೂ ನಂಬಿದರ ಗುರು ನಮ್ಮ ಕೈ ಬಿಡ ॥ ೩ ॥

ಎದುರಿಗ್ಹಾನ ಮಾಣಿಕ ದಿಗಂಬರ
ನೆದುರಿಟ್ಟು ನೋಡು ಕಾಣುತಾನ ಹರ
ಮಣಿದು ಮಾಡು ಪಾದಕ ನಮನ
ಬಿಡಬ್ಯಾಡ ಎಂದಿಗೂ ಅವನ ಧ್ಯಾನ ॥ ೪ ॥


(ಈ ವಿವರಗಳನ್ನು ಸ್ವತಃ ಕವಿಗಳೆ ಕೊಟ್ಟಿದ್ದಾರೆ.) ❑ ❑ ❑



ನಾಗನಾಥರಾವ
ಕೋಟೆ.



ನಾಗನಾಥರಾವ
ಅವರ ತಾಯಿ
ಗುಂಡಮ್ಮ.



ನಾಗನಾಥರಾವ ಕೋಟೆ ದಂಪತಿಗಳು (ಪತ್ನಿ : ಸತ್ಯವತಿ).




ನಾಗನಾಥರಾವ ಕೋಟೆ ಅವರ ಮನೆ (ಜೀರ್ಗಾ-ಬಿ).



ನಾಗನಾಥರಾವ ಅವರ ತಂದೆ ಗುಂಡಪ್ಪ.



ನಾಗನಾಥ ಕೋಟೆ ಅವರ ಆರಾಧ್ಯ ದೇವರು ದಿಗಂಬರ ಮಾಣಿಕೇಶ್ವರ (ಲಾದಾ).



ದಿಗಂಬರ ಮಾಣಿಕೇಶ್ವರ ದೇವಾಲಯ (ಲಾದಾ).

ಬಸವಕಲ್ಯಾಣ ತಾಲ್ಲೂಕ

೧. ಲಾಡ್ ಮದನ್ ಶಹಾ (ಕ್ರಿ.ಶ. ಸು. ೧೭೬೧-೧೮೫೧)

ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ಗ್ರಾಮ ಲಾಡವಂತಿಯು ಇಂದು ಅತ್ಯಂತ ಪರಿಚಿತ ಗ್ರಾಮವಾಗಿರುವುದು ಅಲ್ಲಿನ ಸಯ್ಯದ್ ಮೋದಿನ್‌ಶಹಾ ವಲಿಯ ದರ್ಗಾದ ಕಾರಣದಿಂದ. ಈತನು ಮಹಾಪವಾಡ ಪುರುಷನೂ, ಸಂತನೂ ಆಗಿದ್ದನು. ಈ ಸಂತನ ಹಿಂದಿನ ಆಧ್ಯಾತ್ಮದ ಬೆಳಕೆ ಲಾಡ್ ಮದನ್‌ಶಹಾ ವಲಿ. ಈ ಹೆಸರು ಹಳ್ಳಿಯ ಜನರ ಬಾಯಲ್ಲಿ "ಲಾಡ್ ಮೋದಿನ ಶಹಾ"- ಎಂತಲೂ ಆಗಿದೆ. ಅಂದಿನ ಕಾಲ ಮಾನದ ಸಂದರ್ಭದಿಂದ ನೋಡಿದರೆ ಈ ವ್ಯಕ್ತಿ ಒಂದು ಅದ್ಭುತ ಕನ್ನಡದ ಶಕ್ತಿಯಂತೆ ಕಂಡು ಬರುತ್ತಾನೆ. ಏಕೆಂದರೆ ನೈಜಾಮ ರಾಜ್ಯದಲ್ಲಿ ಕನ್ನಡದ ಪ್ರದೇಶವೆಲ್ಲಾ ಉರ್ದುಮಯವೇ ಆಗಿದ್ದಿತು. ಕನ್ನಡಕ್ಕೆ ಕೇಳುವವರಿಲ್ಲದಂತಹ ಸ್ಥಿತಿ ಮೂಡಿತ್ತು. ಆ ಸಮಯದಲ್ಲಿ ಲಾಡ್ ಮದನ್ ಶಹಾನು ಕವಿಯಾಗಿ ಕನ್ನಡದಲ್ಲಿ ಹಾಡುಗಳನ್ನು ರಚನೆ ಮಾಡುವುದರ ಮೂಲಕ ಅದನ್ನು 'ಉರ್ದು ಲಿಪಿ'ಯ ಹಿಂದೆ ಅಡಗಿಸಿಟ್ಟು ಪೋಷಿಸಿದುದು ಅತ್ಯಂತ ಮಹತ್ವದ ಸಂಗತಿ.

ಲಾಡನ್ ಶಹಾ ಮತ್ತು ಅವನ ಸಹೋದರ ಮದನ್ ಶಹಾ ಇವರಿಬ್ಬರ ಸಮನ್ವಯದ ಸಂಕೇತದಂತಿದೆ "ಲಾಡ್ ಮದನ್ ಶಹಾ" ಎಂಬುದು. ಲಾಡನ್ ಶಹಾ ಅಣ್ಣ, ಮದನ್ ಶಹಾ ತಮ್ಮ, ಅಣ್ಣ-ತಮ್ಮಂದಿರು ಅನ್ಯೋನ್ಯ ಸಂಬಂಧ ಹೊಂದಿದವರಾಗಿದ್ದರು. "ಎರಡು ದೇಹ, ಒಂದೇ ಜೀವ"" – ಎನ್ನುವಂತೆ ಅವರು ಬದುಕಿದ್ದರು. ಲಾಡನ್ ಶಹಾ ತನ್ನ ತಮ್ಮನ ಮೇಲಿನ ಪ್ರೇಮದ ಸಂಕೇತವಾಗಿ ತನ್ನನ್ನು "ಲಾಡ್ ಮದನ್ ಶಹಾ"- ಎಂದು ಕರೆದುಕೊಂಡಿದ್ದಾನೆ.

ಲಾಡನ್ ಮತ್ತು ಮದನ್‌ಶಹಾ ಸಹೋದರರು ಮೂಲತಃ ಕಲಬುರ್ಗಿಯವರೆಂದು ಹೇಳಲಾಗುತ್ತದೆ. ಸಯ್ಯದ್ ಮನೆತನದ ಅವರ ಪೂರ್ವಜನರು ಬಂದಾನವಾಜರೊಂದಿಗೆ ಸಂಪರ್ಕ ಹೊಂದಿದವರಾಗಿದ್ದರೆಂಬ ಪ್ರತೀತಿ ಇದೆ. ಹೀಗಾಗಿ ಅದಕ್ಕೆ ಆಧ್ಯಾತ್ಮದ ಹಿನ್ನೆಲೆ ಹಿಂದಿನಿಂದಲೂ ಇದ್ದಿತು. ಲಾಡನ್ ಶಹಾ ಮತ್ತು ಮದನ್ ಶಹಾ ಅವರ ತಂದೆ-ತಾಯಿಗಳ ಹೆಸರು ತಿಳಿದು ಬರುವುದಿಲ್ಲ. ಅವರು ತಾರುಣ್ಯದಲ್ಲಿಯೇ ಮನೆ ಬಿಟ್ಟು ಸಂಚರಿಸುತ್ತ ಇಂದಿನ ಲಾಡವಂತಿ ಗ್ರಾಮದ ಸ್ಥಳಕ್ಕೆ ಬಂದರು. ಅಣ್ಣ ಲಾಡನ್ ಶಹಾ ಸಂತ ಸ್ವಭಾವದ ವ್ಯಕ್ತಿಯಾಗಿ, ಭಕ್ತರ ಉದ್ಧಾರಕ್ಕಾಗಿ

ತನ್ನ ಬದುಕನ್ನು ಮೀಸಲಿಡುವ ನಿರ್ಧಾರ ಮಾಡಿದನು. ಹೀಗಾಗಿ ಅವನು ಆಜನ್ಮ ಬ್ರಹ್ಮಚಾರಿಯಾಗಿ ಉಳಿಯುವ ನಿರ್ಣಯ ಕೈಗೊಂಡನು. ಮದನ್ ಶಹಾನಿಗೆ ಮದುವೆ ಮಾಡಿಸಿ, ಸಂಸಾರ ಜೀವನ ನಿರ್ವಹಿಸುವಂತೆ ಆದೇಶ ಮಾಡಿದನು. ಇಂದು ಮದನ ಶಹಾನ ವಂಶವು ಬೆಳೆದು ಅವರ ಸಂತತಿಯ ಬಳ್ಳಿ ಲಾಡವಂತಿಯಲ್ಲಿ ಕಾಣುವಂತಾಗಿದೆ.

ಲಾಡನ್ ಶಹಾನ ಸಂತ ಬದುಕಿನಲ್ಲಿ ಹಲವಾರು ಪವಾಡಗಳು ನಡೆಯತೊಡಗಿದವು. ಲಾಡವಂತಿಯ ಪ್ರದೇಶದ ಜನರು ಸಂತನ ಸನ್ನಿಧಿಗೆ ದರ್ಶನಕ್ಕಾಗಿ ಬರತೊಡಗಿದರು. ತಮ್ಮ ಭೌತಿಕ ಸಮಸ್ಯೆಗಳನ್ನು ಲಾಡನ್‌ಶಹಾ ವಲಿಯ ಸನ್ನಿಧಿಯಲ್ಲಿ ಅರಿಕೆ ಮಾಡಿಕೊಂಡು ಸಂತನಿಂದ ಪರಿಹಾರ ಕಾಣತೊಡಗಿದರು. ದಿನದಿಂದ ದಿನಕ್ಕೆ ಭಕ್ತರ ಸಂಖ್ಯೆ ಬೆಳೆಯತೊಡಗಿತು. ಲಾಡನ್ ಶಹಾ, ಮದನ್ ಶಹಾ ಸಹೋದರ ಸಾಧಕರಿಗಾಗಿ ಭಕ್ತರು ಆಶ್ರಮ ಕಟ್ಟಿಸಿಕೊಡಲು ಮುಂದಾದರು. ಹಲವಾರು ಭಕ್ತರು ಸ್ವ ಇಚ್ಛೆಯಿಂದ ಭೂಮಿ ದತ್ತಿಯಾಗಿ ಕೊಟ್ಟರು. ಸು. ೨೫೦ ಎಕರೆಯಷ್ಟು ಭೂಮಿ ಸಂತರ ಸನ್ನಿಧಿಗೆ ಸಂದಾಯವಾದಂತಾಯಿತು. ಲಾಡನ್ ಶಹಾ ನೆಲೆನಿಂತ ಸ್ಥಳದಲ್ಲಿಯೇ ಇಂದಿನ ಲಾಡವಂತಿ ಗ್ರಾಮವು ಹುಟ್ಟಿಕೊಂಡು ಬೆಳೆಯತೊಡಗಿತು. ಜನತೆಯು ಆ ಗ್ರಾಮಕ್ಕೆ ಮೊದಲು 'ಯುತಿ' –ಎಂಬ ಹೆಸರಿನಿಂದ ಕರೆದರು. ಯುತಿ ಗ್ರಾಮದಲ್ಲಿಯೇ ಲಾಡನ್ ಶಹಾ–ಮದನ್‌ಶಹಾ ಸಹೋದರರು ಉಳಿದುಕೊಂಡರು. ಸಂತನ ಇಚ್ಛೆಯಂತೆ ಅದು ಲಾಡನ್ ಶಹಾ ಹೆಸರಿನಿಂದಲೇ 'ಲಾಡವಂತಿ' ಗ್ರಾಮವಾಗಿ ಧನ್ಯತೆಯನ್ನು ಹೊಂದಿತು.

ಕ್ರಿ.ಶ. ಸು. ೧೯೦೭ರಲ್ಲಿ ಬದುಕಿದ್ದ ಲಾಡನ್ ಶಹಾನ ವಂಶ ಪರಂಪರೆಯ ಸಂತನೆ ಆಗಿದ್ದ ಸಯ್ಯದ್ ಮೋದಿನ್ ಶಹಾವಲಿಯು ಲಾಡನ್ ಶಹಾನ ಆಧ್ಯಾತ್ಮದ ಬೆಳಗು ಇನ್ನಷ್ಟು ಬೆಳಗುವಂತೆ ಮಾಡಿದ ಸಂತನಾಗಿದ್ದಾನೆ.

ಲಾಡನ್ ಶಹಾನು ಕ್ರಿ.ಶ. ಸು. ೧೭೬೧ರಲ್ಲಿ ಜನಿಸಿ ಕ್ರಿ.ಶ. ಸು. ೧೮೫೧ರಲ್ಲಿ ಜೀವಂತ ಸಮಾಧಿ ತೆಗೆದುಕೊಂಡಂತೆ ತಿಳಿದುಬರುತ್ತದೆ. ತೊಂಬತ್ತು ವರುಷಗಳ ಅವರ ಸಂತ ಬದುಕು ಸಮಾಜದ ಸೇವೆಗಾಗಿಯೇ ಸವೆಯಿತು.

ಲಾಡನ್ ಶಹಾ ಅವರು ಅಂದು ತಮ್ಮ ಆಧ್ಯಾತ್ಮ ಶಕ್ತಿಯಿಂದ ಭಕ್ತರ ರೋಗಗಳನ್ನು ಗುಣಪಡಿಸಿದರು: ಸಂತಾನ ಭಾಗ್ಯ ಕರುಣಿಸಿದರು. ಕುರಡರಿಗೆ ಕಣ್ಣುಗಳು ಬರುವಂತೆ ಮಾಡಿದರು. ಭಕ್ತರಿಗೆ ಕಾಡುತ್ತಿದ್ದ ಭೂತ ಪ್ರೇತ–ಪಿಶಾಚಿಗಳ ಬಾಧೆಯನ್ನು ನಿವಾರಿಸಿದರು. ಕ್ರಿ.ಶ. ಸು. ೧೮೫೧ರ ಸುಮಾರಿಗೆ ಅವರು ಲೋಕ ಬದುಕಿನಿಂದ ದೂರವಿರಲು ಸಂಕಲ್ಪ ಮಾಡಿದರು. ತಮ್ಮ ಈ ಇಚ್ಛೆಯನ್ನು ಭಕ್ತರಿಗೆ ತಿಳಿಸಿದರು. ತಮಗಾಗಿ

ಸಮಾಧಿಗುಹೆಯೊಂದನ್ನು ನಿರ್ಮಿಸುವಂತೆ ಹೇಳಿದರು. ಭಕ್ತರಿಗೆ ಬಹು ದುಃಖವಾಯಿತು. ಆದರೂ ಸಂತನ ಮಾತು ಮೀರುವಂತಿರಲಿಲ್ಲ. ಕೆಲವು ಕಾಲದಲ್ಲಿಯೇ ಭಕ್ತರೆಲ್ಲ ಕೂಡಿ ಸಮಾಧಿಯೊಂದನ್ನು ನಿರ್ಮಿಸಿದರು. ಸಂತನು ಆ ಗುಹೆಯನ್ನು ಪ್ರವೇಶ ಮಾಡಿದನು. ಒಳಗಡೆ ಒಂದು ಬಿಂದಿಗೆ ನೀರು ಮಾತ್ರ ಇಡುವಂತೆ ಹೇಳಿದನು. ಕಲ್ಲಿನ ಬಂಡೆಯಿಂದ ಗುಹೆಯ ಬಾಗಿಲು ಮುಚ್ಚಲಾಯಿತು. ಆರು ತಿಂಗಳುಗಳ ಕಾಲ ಲಾಡನ್ ಶಹಾನು ಅದೇ ಗುಹೆಯಲ್ಲಿ ಅನ್ನ-ನೀರಿಲ್ಲದೆ ಉಪವಾಸ ವ್ರತದಿಂದಲೇ ಆಧ್ಯಾತ್ಮದ ತಪಸ್ಸು ಮಾಡಿದನು.

ಆರು ತಿಂಗಳುಗಳ ನಂತರದಲ್ಲಿ ಭಕ್ತರು ಬಂಡೆ ತೆಗೆದು ನೋಡಿದರು. ಸಂತನು ಜೀವಂತವಾಗಿಯೇ ಇದ್ದನು. ಆರು ತಿಂಗಳುಗಳ ಹಿಂದೆ ಹಚ್ಚಿದ್ದ ದೀಪವು ಹಾಗೆ ಉರಿಯುತ್ತಿದ್ದಿತು. ಲಾಡ್ ಮದನ್ ಶಹಾನು ಅಂದಿನ ದಿನ ಭಕ್ತರನ್ನು ಕುರಿತು "ಇಂದೆಂದೂ ಗುಹೆಯ ಬಾಗಿಲು ತೆಗೆಯಬಾರದು" ಎಂದು ಆಜ್ಞೆ ಮಾಡಿ, ಮತ್ತೆ ಧ್ಯಾನಸ್ಥನಾದನು. ಭಕ್ತರು ಮತ್ತೆ ಗುಹೆಯ ಬಾಗಿಲು ಮುಚ್ಚಿದರು. ಲಾಡನ್ ಶಹಾನು ಜೀವಂತ ಸಮಾಧಿ ತೆಗೆದುಕೊಂಡರೆಂದು ಹೇಳಲಾಗುತ್ತದೆ. ಇಂದು ಲಾಡವಂತಿಯಲ್ಲಿ ಸಂತನ ಸಮಾಧಿಯು ವಿರಾಜಮಾನವಾಗಿದೆ. ಯುಗಾದಿ ಪಾಡ್ಯದ ದಿನದಂದು ಲಾಡನ್ ಶಹಾನು ಜೀವಂತ ಸಮಾಧಿ ಹೊಂದಿದ ಕಾರಣದಿಂದ ಪ್ರತಿ ವರುಷವೂ ಅದೇ ದಿನದಂದು ಸಂತನ ಪುಣ್ಯತಿಥಿಯನ್ನು "ಉರುಸ್" ಮಾದರಿಯಲ್ಲಿ ಆಚರಿಸಲಾಗುತ್ತದೆ.

ಇಂದು ಹನ್ನೊಂದನೆಯ ತಲೆಯವರೆಂದು ಹೇಳಿಕೊಳ್ಳುವ ಸಯ್ಯದ್ ಮೈನೋದ್ದೀನ್ ಶಹಾ ಅವರು ದರ್ಗಾದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದಾರೆ. ಅವರದು ಬಹು ದೊಡ್ಡ ಕೂಡು ಕುಟುಂಬ. ಸಯ್ಯದ್ ಮೈನೋದ್ದೀನ್ ಶಹಾ ಅವರಿಗೆ ಈಗ ಎಂಬತ್ತೆರಡರ ಪ್ರಾಯ. ಮದನ್ ಶಹಾನ ವಂಶದ ಕುಡಿಯೇ ಇಂದಿರುವ ಸಯ್ಯದ್ ಮೈನೋದ್ದೀನ್ ಶಹಾ ಅವರು.

ಇಂದು ಅವರು ಜನರಿಗೆ ಕಾಡುತ್ತಿರುವ ರೋಗ-ರುಜಿನಗಳನ್ನು ವಾಸಿ ಮಾಡುತ್ತಾರೆ. ಲಕ್ವಾರೋಗಕ್ಕೆ ಮದ್ದು ನೀಡುತ್ತಾರೆ. ಹಾವು ಕಡಿದವರ ವಿಷವನ್ನು ಇಳಿಸಿ: ಅವರನ್ನು ಗುಣಮುಖರನ್ನಾಗಿ ಮಾಡುತ್ತಾರೆ. ಸಾತ್ವಿಕರಾದ ಸಯ್ಯದ್ ಮೈನೋದ್ದೀನ್ ಶಹಾ ಅವರಲ್ಲಿ ಹಿಂದಿನ ಸಂತರ ಸತ್ವವು ಸಮನ್ವಿತಗೊಂಡಿದೆ.

ಲಾಡನ್ ಶಹಾ ಅವರು ಸಂತರಾಗಿ ತಮ್ಮ ಬೋಧೆಯನ್ನು ತತ್ತ್ವಪದಗಳ ಮುಖಾಂತರ ಭಕ್ತರಿಗೆ ನೀಡಿದ್ದಾರೆ. ಅವರಿಗೆ ಕನ್ನಡ-ಮರಾಠಿ-ಮೋಡಿ-ಉರ್ದು-ಫಾರ್ಸಿ ಭಾಷೆಗಳು ಬರುತ್ತಿದ್ದವು. ಅವರ ಹಾಡುಗಳಲ್ಲಿನ ಉಲ್ಲೇಖಗಳು ನೋಡಿದರೆ

ಲಾಡನ್ ಶಹಾ ಅವರು ವೇದ-ಆಗಮ-ಪುರಾಣಗಳನ್ನು ಅಧ್ಯಯನ ಮಾಡಿದವರಾಗಿದ್ದರೆಂಬುದು ತಿಳಿದುಬರುತ್ತದೆ.

ಅವರು ತತ್ತ್ವಪದಗಳೊಂದಿಗೆ ಹಲವಾರು ಲಾವಣಿ-ಗೀಗೀ ಪದಗಳನ್ನು ರಚಿಸಿದ್ದಾರೆ. ಅವರ ಒಟ್ಟು ಹಾಡುಗಳಲ್ಲಿ ಬಹು ಸಂಖ್ಯಾತ ರಚನೆಗಳು ಮರಾಠಿ-ಉರ್ದು ಭಾಷೆಯಲ್ಲಿವೆ. ಕೆಲವೇ ಕೆಲವು ಕನ್ನಡದ ತತ್ತ್ವಪದಗಳನ್ನು ಅವರು ಉರ್ದು ಲಿಪಿಯಲ್ಲಿ ಬರೆದಿರುವರು. ಲಾಡನ್ ಶಹಾ ಅವರು ತಮ್ಮ ತತ್ತ್ವಪದಗಳಿಗೆ ಅಂಕಿತವಾಗಿ ತಮ್ಮ ಮತ್ತು ತಮ್ಮ ಕಿರಿಯ ಸಹೋದರನ ಹೆಸರನ್ನು ಇರಿಸಿಕೊಂಡಿದ್ದಾರೆ. ಅವರು ರಚಿಸಿದ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ.

ಆತ್ಮದ ಮರ್ಮ ತಿಳಿದಿಲ್ಲ

ದೇಹದೊಳಗ ಆತ್ಮ ಅಂತಿ
ಮೋಹದ ಕುಳಿವಳಗ ಕುಂತಿ ॥ ಪ ॥

ಸೃಷ್ಟಿ ಹ್ಯಾಂಗಿತ್ತು ಮೊದಲ?
ನೀರೆ ನೀರಿತ್ತು ಎಲ್ಲ
ಯಾರು ಮಾಡಿದರು ಇದರ ಸಕೀಲ
ಚಾರ ಚಾಂದಗ ಇದು ತಿಳಿಲಿಲ್ಲ ॥ ೧ ॥

ಅದರ ಹಿಂದ ಇದ್ದನಲ್ಲಾ
ನದರಿಗೆ ಕಾಣದಂಗ ಅಲ್ಲಾ
ಸದರ ಬಾಜಾರ ಖುಲ್ಲಾ
ಕರದಿಟ್ಟು ನೋಡು ನಿನ್ನೊಳಗೆಲ್ಲಾ ॥ ೨ ॥

ಭೂಮಿ ಸುತ್ತಾ ಮುತ್ತಾ ಸಮುದ್ರ
ನೇಮಿಟ್ಟು ತೈಗಿರಿ ಚೌದಾರತ್ನದ ಪಂಜರ
ಒಮ್ಮೆ ತಿಳಿದು ನೊಡು ಧರ್ಮದ ಸಾರಾ
ನೆಮ್ಮಿಗಿಲೆ ಪಡಕೋತಿ ರತ್ನದ ಹಾರ ॥ ೩ ॥
ಭೂಮಿ ಮ್ಯಾಲ ಲಾಡವಂತಿ ಊರಾ

ಪ್ರೇಮದಿಂದ ಹಾಡಿದಾರೊ ಲಾಡನ್ ಶಾ ಮದನಶಾ ಶೂರಾ
ಧರ್ಮ-ಕರ್ಮಕ್ಕಿಲ್ಲಾ ದೂರಾ
ಮರ್ಮ ತಿಳಿಲಿಲ್ಲಾ ಆತ್ಮ ಹ್ಯಾಂಗಂತ ಪೂರಾ ॥ ೪ ॥

ಮೋಹದ ಜಾಲ ಅಳಿ

ದೇಹದ ನೆಲಿ ನೀ ತಿಳಿಯಪ್ಪ
ಮೋಹದ ಜಾಲವ ಅಳಿಯಪ್ಪ ॥ ಪ ॥

ಆದಿಶಕ್ತಿ ಇದ್ದಿಲ್ಲ ಮೊದಲ
ನಾದ ಒಂದು ಇತ್ತು ಓಂಕಾರ ಲೀಲ
ಆಧಾರ ಚಕ್ರದ ಸಕೀಲ
ಸಾಧ್ಯ ಆಗುತಾದ ಮಣಿಪುರ ಏರಿದ ಮ್ಯಾಲ ॥ ೧ ॥

ಎಷ್ಟು ಬಾಗಿಲ ದೇಹದ ಮನೀಗಿ
ಎಷ್ಟು ಕಿಡಕಿಗಳು ಗ್ವಾಡೀಯ ಮರೀಗಿ
ಎಷ್ಟು ಖೋಲಿಗಳು ಅಂಗಳದ ವರಿಗಿ
ಎಷ್ಟು ಜಲ್ಮಗಳು ಬಂದಿ ನೀ ತಿರುಗಿ ॥ ೨ ॥

ನಾನೂ ಇರಲಿಲ್ಲ ನೀನೂ ಇರಲಿಲ್ಲ
ಏನೂ ಇರಲಿಲ್ಲ ಮೊದ-ಮೊದಲ
ನೀನು ಬಂದಾಗ ನಾನು ಬಂದೆನಲ್ಲ
ಖೂನ ತಿಳಿವಲ್ದು ನಿನಗ ನೆಲಿ ಇಲ್ಲ ॥ ೩ ॥

ಲಾಡವಂತಿ ಗ್ರಾಮ ಅದ ಸೇಲಾ
ಲಾಡನಶಾ ಮದನಶಾ ಸೋದರರು ಮ್ಯಾಲ
ಹಾಡಿದಾರೋ ತತ್ತ್ವದ ಪದ ಅನುತ ಅಲ್ಲಾ
ಕೂಡಿದ ಜನ ಹಾಡ ಕೇಳಿ ಆಗಿದಾರೋ ಲೋಲ ॥ ೪ ॥

(ಸಯ್ಯದ್ ಮೈನೋದ್ದೀನ್ ಶಹಾ ಅವರು ಈ ವಿವರಗಳನ್ನು ನೀಡಿದ್ದಾರೆ)

مویہ جالا اڑی


ویہد تکی نی تیرہ ی پیاؔ
موہہ جالو اڑی پیا ॥ پ ॥

آدی شکتی اِدِ لّا مود للا
تادا ونیدو اِدّو دوفکار لیلد
آدھار چکر د سیکیلا
سادھیا آگو تاد مستی نُخُر اسریہ میالا ॥ ۱ ॥


ییلو باگلو دیپاد منی گی
ییلو کولاگ گلو گواٹی یا فریگے
ییلو کولو کَراد انگُشٹ د دری گی
ییلو جلم گرد لکدی نی ترو گی ॥ ۲ ॥

تاؤ اِرلی لّا میتو اِرلی لّا
امیتو اِرلی لّا مود مود للا
میتو میلا گ تاؤ سینرے تلّا
کونا تلی ولیر تینگ ھے لی اِلّا ॥ ۳ ॥


لاڈ منی کَرا ما اد سیلا
اِرڈن شاہ مدن شاہ سرورو میالا
پاڈی نالو تمو پیا اڑت اللہ
سو ڈی جنا ہاڈ کیلی آگی بارہ لولم ॥ ۴ ॥




(ಉರ್ದು ಲಿಪಿಯ ಮರೆಯಲ್ಲಿ ಕನ್ನಡ ತತ್ತ್ವ ಪದಗಳು)




ಲಾಡ್ ಮದನ್ ಶಹಾನ ಸಮಾಧಿಯ ಮೇಲೆ ನಿರ್ಮಿಸಿದ ಸ್ಮಾರಕ (ಲಾಡವಂತಿ).



ಲಾಡ್ ಮದನ್ ಶಹಾವಲಿಯ ಸಮಾಧಿ (ಲಾಡವಂತಿ)



ಲಾಡ್ ಮದನ್ ಶಹಾವಲಿ ವಾಸಿಸುತ್ತಿದ್ದ ಮನೆ (ಲಾಡವಂತಿ)



ಲಾಡ್ ಮದನ್ ಶಹಾವಲಿಯ ವಂಶಸ್ಥ ಸಯ್ಯದ್ ಮೋದಿನ್ ಶಹಾವಲಿಯ
ಸಮಾಧಿ ಮಂದಿರ (ಲಾಡವಂತಿ)




ಸಯ್ಯದ್ ಮೋದಿನ್ ಶಹಾವಲಿಯ ಸಮಾಧಿ (ಲಾಡವಂತಿ)




ಲಾಡ್ ಮದನ್ ಶಹಾವಲಿಯ ವಂಶಸ್ಥರು ವಾಸಿವಾಗಿರುವ ಮನೆ (ಲಾಡವಂತಿ).




ಲಾಡ್ ಮದನ್ ಶಹಾವಲಿಯ ವಂಶಸ್ಥ ಪರಿವಾರ



ಲಾಡ್ ಮದನ್ ಶಹಾವಲಿಯ ವಂಶಸ್ಥರಾಗಿ ಸಧ್ಯ ಇರುವ ಶ್ರೀ ಸೈಯ್ಯದ್ ಮೈನೋದ್ದೀನ ಶಹಾ ಅವರು ಲಾಡ್ ಮದನ್ ಶಹಾವಲಿಯ ತತ್ವ ಪದಗಳನ್ನು ವಾಚಿಸುತ್ತಿರುವದು.



ಸೈಯ್ಯದ್ ಮೈನೋದ್ದೀನಶಹಾ ಅವರು ಹಾವಿನ ವಿಷ
ಇಳಿಸಲು ನೆಲೆಯಾಗಿಸಿಕೊಂಡಿರುವ ಬೇವಿನ ಮರ.



ಸೈಯ್ಯದ್ ಮೈನೋದ್ದೀನಶಹಾ ಅವರು ಭಕ್ತರಿಗೆ ದರ್ಶನ
ನೀಡಲು ಕುಳಿತಿರುವದು.

೨. ಭದ್ರಪ್ಪ ಪಾಟೀಲ (ಕ್ರಿ.ಶ.ಸು.೧೮೫೫-೧೯೩೫)

ಕೊಳ್ಳೂರು ಗ್ರಾಮವು ಬೀದರ ಜಿಲ್ಲೆಯ ತತ್ತ್ವಪದ ಸಾಹಿತ್ಯಕ್ಕೆ ಹಲವು ಜನ ಕವಿಗಳನ್ನು ನೀಡಿ ಕೃತಾರ್ಥವಾಗಿದೆ. ಇದಕ್ಕೆ "ಕೊಹಿನೂರು"ಎಂತಲೂ ಕರೆಯಲಾಗುತ್ತದೆ. ಇದು ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ಸ್ಥಳ. ಈ ಗ್ರಾಮದ ಮಾಲೀಗೌಡರ ಮನೆತನಕ್ಕೆ ಸಂಬಂಧಪಟ್ಟವರು ಭದ್ರಪ್ಪ ಪಾಟೀಲರು.

ಭದ್ರಪ್ಪ ಪಾಟೀಲರ ತಂದೆ ಸಾಯಿಬಣ್ಣಪ್ಪ ಪಾಟೀಲರು ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳು. ಧರ್ಮವಂತರು. ಬಡ-ದುರ್ಬಲರನ್ನು ದಯೆಯಿಂದ ನೋಡುತ್ತಿದ್ದು ಕರುಣೆಯ ಭಾವದವರಾಗಿದ್ದರು. ಗೌಡರಿಗೆ ತಕ್ಕ ಸತಿಯಾಗಿದ್ದರು ಮಾದೇವಿ (ನೀಲವ್ವ). ಈ ತಾಯಿಯು ಅಪ್ಪಟ ದೈವ ಭಕ್ತಳಾಗಿದ್ದಳು. ಬೀದರ ತಾಲ್ಲೂಕಿನಲ್ಲಿ ಬರುವ ಬಾವಗಿ ಗ್ರಾಮದ ಭದ್ರೇಶ್ವರರನ್ನು ನಡೆದುಕೊಳ್ಳುತ್ತಿದ್ದರು. ಈ ದಂಪತಿಗಳಿಗೆ ಬಹಳಕಾಲ ಸಂತತಿಯಾಗಲಿಲ್ಲ. ದಂಪತಿಗಳು ಒಂದು ಸಲ ತಮ್ಮ ಆರಾಧ್ಯ ದೇವರಾಗಿದ್ದ ಬಾವಗಿ ಭದ್ರೇಶ್ವರನ ದರ್ಶನಕ್ಕೆ ಹೋದರು. ದೇವರ ಸನ್ನಿಧಿಯಲ್ಲಿ ತಮ್ಮ ಮೊರೆಯನ್ನು ಇರಿಸಿದರು. ಮರಳಿ ಬರುವಾಗ ಆ ಕ್ಷೇತ್ರದಲ್ಲಿರುವ ಒಂದು ಕಲ್ಲನ್ನು ತಂದು 'ಭದ್ರೇಶ್ವರ'ಎಂಬ ಭಾವದಿಂದ ತಮ್ಮ ಮನೆಯ ಪರಿಸರದಲ್ಲಿನ ಹುಣಸೆ ಮರದಡಿಯಲ್ಲಿ ಇರಿಸಿ ಪೂಜೆ ಮಾಡತೊಡಗಿದರು. ಕೆಲವು ತಿಂಗಳುಗಳ ಹಿಂದೆ ಆ ಕಲ್ಲು ಚೆನ್ನಮಲ್ಲೇಶ್ವರ ಮಠದ ಗುಡಿಯಲ್ಲಿ ಇರಿಸಿದ್ದರಂತೆ, ಮಠದ ಜೀರ್ಣೋದ್ದಾರ ಸಮಯದಲ್ಲಿ ಅದು ಎಲ್ಲಿ ಹೋಯಿತೊ; ಇಂದು ಅದು ನಮಗೆ ದೊರಕಿಲ್ಲ.

ಸಾಯಿಬಣ್ಣಪ್ಪ ದಂಪತಿಗಳಿಗೆ ಮುಂದೆ ಗಂಡು ಸಂತಾನವಾಯಿತು. ಭದ್ರೇಶ್ವರನ ಕರುಣೆಯಿಂದ ಹುಟ್ಟಿದ ಮಗನಾದುದರಿಂದ ತಂದೆ-ತಾಯಿಗಳು ಮಗುವನ್ನು 'ಭದ್ರಪ್ಪ'ನೆಂದು ನಾಮಕರಣ ಮಾಡಿ ಹರುಷದಾಳಿದರು.

ಸಾಯಿಬಣ್ಣಪ್ಪನವರು ತಮ್ಮ ಮಗನಿಗೆ ಶಿಕ್ಷಣಕೊಡಿಸಲು ಹಂಬಲಿಸಿದರು. ಕನ್ನಡ ಶಾಲೆಗಳಿರಲಿಲ್ಲ. ಅನಿವಾರ್ಯವಾಗಿ ಮೋಡಿ ಶಾಲೆಗೆ ಕಳುಹಿಸಿದರು. ಮೂರು-ನಾಲ್ಕನೆಯ ತರಗತಿಯವರೆಗೆ ಭದ್ರಪ್ಪನವರು ಮೋಡಿಯನ್ನೇ ಶಿಕ್ಷಣದ ಮಾಧ್ಯಮವಾಗಿ ಅಭ್ಯಾಸ ಮಾಡಿದರು. ಉರ್ದುವನ್ನು ಪರಿಸರದ ಪ್ರಭಾವದಿಂದ ಕಲಿತುಕೊಂಡರು. ಈ ಪ್ರದೇಶದ ಮಕ್ಕಳು ಅಕ್ಷರವನ್ನು ಕಲಿಯಲೆಂಬ ಭಾವದಿಂದ ತಮ್ಮ ಮನೆಯಲ್ಲಿ

ಒಂದು ಖಾಸಗಿ ಶಾಲೆ ಆರಂಭಿಸಿದರು. ಅದಕ್ಕೆ ತಾವೇ ಗುರುಗಳಾಗಿ ನಿಂತುಕೊಂಡರು. ತಾನು ಕಲಿತುದನ್ನೇ ಮಕ್ಕಳಿಗೆ ಕಲಿಸಿಕೊಟ್ಟರು. ಕೊಹಿನೂರು ಹುಸನಾ ನಂತಹ ಕವಿಗಳು ಅಂದು ಭದ್ರಪ್ಪನವರ ವಿದ್ಯಾರ್ಥಿಯಾಗಿ ಶಿಕ್ಷಣ ಕಲಿತರೆಂಬುದು ಹಿರಿಮೆಯ ಸಂಗತಿ. ಈ ಕಾರಣದಿಂದಲೇ ಕವಿ ಹುಸೇನಿ ಮಾಸ್ತರರು ತಮ್ಮ ತತ್ತ್ವಪದಗಳಲ್ಲಿ ತಮ್ಮ ಗುರು ಭದ್ರಪ್ಪನವರ ಸ್ಮರಣೆಮಾಡುವುದು ಮರೆತಿಲ್ಲ: "ಭದ್ರಪ್ಪ ಗುರು ಹೇಳ್ಯಾನ ಹುಸನ ಕಲ್ತು ಮ್ಯಾಡ್ಯಾನರಿ ಗವಯಿ" ಎಂದು ತುಂಬು ಮನದಿಂದ ಹಾಡಿದ್ದಾನೆ. ಶಾಲೆ ಕಲಿಸುವ ಕಾರಣದಿಂದ ಜನರ ಬಾಯಲ್ಲಿ ಭದ್ರಪ್ಪ ಗೌಡರು "ಭದ್ರಪ್ಪ ಮಾಸ್ತರ" ಆದರು. ಅವರು ಪಂಡಿತರು ಮತ್ತು ಪ್ರತಿಭಾವಂತರು. ಜೊತೆಗೆ ತಂದೆ-ತಾಯಿಗಳಂತೆ ಪರಮ ದೈವೀ ಭಕ್ತರು. ಬಾವಗಿ ಭದ್ರೇಶ್ವರನಲ್ಲಿ ಅವರ ಭಕ್ತಿ ನೆಲೆಯೂರಿತ್ತು.

ಭದ್ರಪ್ಪನವರ ಸಂಸಾರಿಕ ಬದುಕಿನಲ್ಲಿ ಮೂವರು ಪತ್ನಿಯರು ಬಂದು ಹೋದರು. ಪತ್ನಿಯರ ಅಕಾಲಿಕ ಮರಣದಿಂದ ಈ 'ಬಹುಪತ್ನಿತ್ವ' ಅನಿವಾರ್ಯತೆಗೆ ಗೌಡರು ಒಳಗಾಗಬೇಕಾಯಿತು. ಮೊದಲ ಪತ್ನಿ ನೀಲಮ್ಮನವರು; ಎರಡನೆಯವರು ಸಿದ್ಧಮ್ಮ, ಮೂರನೆಯವರು ಸುಮಂಗಲಮ್ಮ. ಇವರ ಹೊಟ್ಟೆಯಲ್ಲಿ ರತ್ನವ್ವಳೆಂಬ ಮಗಳು ಹುಟ್ಟಿದಳು. ಆದರೆ ಅವಳೂ ಬೇಗನೆ ತೀರಿಕೊಂಡಳಂತೆ.

ಭದ್ರಪ್ಪನವರ ಮನೆತನದ ಗುರುಗಳು ಭದ್ರಯ್ಯನವರು. ಭದ್ರಪ್ಪಗೌಡರು ತಂದೆಯಂತೆ ಸಮಾಜದಲ್ಲಿ ಗೌರವವುಳ್ಳ ವ್ಯಕ್ತಿಯಾಗಿದ್ದರು. ಗ್ರಾಮ ಮತ್ತು ಅದರ ಸುತ್ತಲಿನ ಗ್ರಾಮಗಳ ಜನತೆಯು ಗೌಡರಲ್ಲಿ ವಿಶ್ವಾಸವಿರಿಸಿತ್ತು. ತಮಗೆ ಬಂದ ಸಮಸ್ಯೆಗಳನ್ನು ಗೌಡರಲ್ಲಿಗೆ ಬಂದು ಪರಿಹಾರ ಮಾಡಿಕೊಳ್ಳುತ್ತಿದ್ದರು. ಗೌಡರು ಹೇಳಿದ ಮಾತು ಯಾರೂ ಮೀರುತ್ತಿರಲಿಲ್ಲ.

ಗೌಡರು ದೀರ್ಘಕಾಲದ ಆರೋಗ್ಯ ಭಾಗ್ಯ ಪಡೆದುಕೊಂಡು ಬರಲಿಲ್ಲ. ಅವರು ತಮ್ಮ ಇಪ್ಪತ್ತೈದನೆಯ ವಯಸ್ಸಿಗೆ ಲಕ್ವಾ ಹೊಡೆತಕ್ಕೆ ಬಲಿಯಾಗಿ ದೈಹಿಕವಾಗಿ ದುರ್ಬಲರಾದರು. ಹೀಗಾಗಿ ಹೆಚ್ಚು ನಡೆದಾಡುವುದು; ಬರೆಯುವುದು ಅವರಿಗೆ ಸಾಧ್ಯವಾಗಲಿಲ್ಲ. ಆದರೂ ಅವರು ತಮ್ಮ ಹವ್ಯಾಸವು ಬಿಟ್ಟವರಲ್ಲ. ತಮ್ಮ ಸ್ನೇಹಿತ ಕರಬಸಪ್ಪ ಮಾಹಾಜನ ಅವರನ್ನು ಜೊತೆಗೆ ಕೂಡಿಸಿಕೊಂಡು ಗೌಡರು ತಮ್ಮ ಸಾಹಿತ್ಯಿಕ ಕೃಷಿಯನ್ನು ಮುಂದುವರೆಸಿದರು.

ಅವರು ಹಲವಾರು ಬಯಲಾಟಗಳನ್ನು ಬರೆದರು. ಅವುಗಳನ್ನು ಊರಲ್ಲಿ ಪ್ರದರ್ಶನ ಮಾಡಿಸಿದರು. ಅವರ ಲೇಖನಿಯಿಂದ ಹಲವಾರು ಪದ್ಯಗಳು ರಚನೆಗೊಂಡವು. ಕರಿಬಸಪ್ಪನವರು ಭದ್ರಪ್ಪನವರ ಪದ್ಯಗಳನ್ನು ಮೋಡಿಲಿಪಿಯಲ್ಲಿ ಬರೆದಿಡುತ್ತಿದ್ದರು. ಅವುಗಳನ್ನು ಕಂಠಪಾಠ ಮಾಡಿ ಸುಶ್ರಾವ್ಯವಾಗಿ ಹಾಡುತ್ತಿದ್ದರು.

ಮೋಹರಮ್ ಹಾಡುಗಳಿಗೂ ಅವರು ತಮ್ಮ ಆರಾಧ್ಯ ದೇವರಾದ ಬಾವಗಿ ಭದ್ರೇಶ್ವರರ ನಾಮವನ್ನೇ ಅಂಕಿತವಾಗಿ ಬಳಸಿದರು.

ಹೆಚ್ಚು ಕಾಲ ದೈಹಿಕ ದೌರ್ಬಲ್ಯದಿಂದ ಒಂದೇ ಸ್ಥಳದಲ್ಲಿ ಕುಳಿತುಕೊಳ್ಳಬೇಕಾಗುತ್ತಿದ್ದಿತು. ಇಂತಹ ಸಮಯದಲ್ಲಿ ತಮ್ಮ ಸ್ನೇಹಿತರನ್ನು ಕರೆಯಿಸಿ ಹಾಡು ಹಾಡಿಸುತ್ತಿದ್ದರು. ಬಯಲಾಟದ ದೃಶ್ಯಗಳನ್ನು ಅಭಿನಯಿಸಿ ತೋರುವಂತೆ ಹೇಳುತ್ತಿದ್ದರು. ಯಾರೂ ಬಾರದೆ ಇದ್ದಾಗ ಹಲವಾರು ಆಧ್ಯಾತ್ಮಿಕ ಗ್ರಂಥಗಳನ್ನು ತರಿಸಿಕೊಂಡು ಓದುತ್ತ ಕುಳಿತುಬಿಡುತ್ತಿದ್ದರು. ಲಕ್ವಾದ ಅಂಟು ಭದ್ರಪ್ಪ ಗೌಡರನ್ನು ಸದೃಢರನ್ನಾಗಲು ಬಿಡಲೇ ಇಲ್ಲ. ಅವರು ಕುಂಟುತ್ತಲೇ ನಡೆಯುತ್ತಿದ್ದರು. ಏಳಬೇಕಾದರೆ ಗೋಡೆ ಹಿಡಿದು ಏಳುತ್ತಿದ್ದರು. ಕ್ರಿ.ಶ. ೧೯೩೯ರ ದಿನ ಹೀಗೆ ಮನೆಯಲ್ಲಿ ಏಳುತ್ತಿರುವಾಗ ಕುಸಿದು ಬಿದ್ದರು. ಅವರ ಪ್ರಾಣಪಕ್ಷಿ ಹಾರಿಹೋಯಿತು. ಆದರೆ ಭದ್ರಪ್ಪನವರ ಬರೆದ ಹಾಡುಗಳು ಜನತೆಯ ಮನ–ಹೃದಯಗಳಲ್ಲಿ ಇಂದಿಗೂ ಧ್ವನಿಗೊಡುತ್ತಲೇ ಇವೆ. ಇಂದು ಅವರ ವಂಶಸ್ಥರು ಕೊಹಿನೂರು ಗ್ರಾಮದಲ್ಲಿದ್ದಾರೆ. ಅವರ್‍ಯಾರಿಗೂ ಭದ್ರಪ್ಪನವರ ಸಾಹಿತ್ಯದ ಬಗೆಗೆ ಅಷ್ಟು ಪರಿಚಯವೂ ಇಲ್ಲ; ಅವರಲ್ಲಿ ಕಾಪಿಟ್ಟುಕೊಂಡಿಲ್ಲ, "ಅದು ಎಂದೋ ಕಾಲಗರ್ಭ ಸೇರಿದೆ" ಎನ್ನುತ್ತಾರೆ. ಅವರು ರಚಿಸಿದ ಬಾವಗಿ ಭದ್ರೇಶ್ವರ ನಾಮ ಸ್ತೋತ್ರ ಪದ್ಯವು, ಆಂಧ್ರ ಪ್ರದೇಶದ ತಾಂಡೂರಿನ ಭದ್ರೇಶ್ವರ ಟ್ರಸ್ಟಿನ ಸದಸ್ಯರ ಸಂಬಂಧಿಯಾಗಿರುವ ಶ್ರೀ ಬಿಚಿರಡ್ಡಿ ಪಾಟೀಲರು ಒದಗಿಸಿಕೊಟ್ಟಿದ್ದಾರೆ. ಅದನ್ನೊಂದು ಮಾತ್ರ ಇಲ್ಲಿ ದಾಖಲೆಗಾಗಿ ನೀಡಲಾಗಿದೆ:

ಭದ್ರೇಶ್ವರ ಸ್ತೋತ್ರ

ಭದ್ರಾಕಾರನು ಭವ ವಿದೂರನು
ಭದ್ರರೂಪನು ಭದ್ರೇಶನು ॥ ಪ ॥

ನಮಿಸುವೆ ಭದ್ರನೆ
ಪಾಹಿ ಭದ್ರನೆ
ರುದ್ರ ರೂಪನೆ
ಭದ್ರ ದೇವನೆ ॥ ೧ ॥

ಪಾಪ ವಿದೂರನೆ
ಪಾವನ ಮೂರ್ತಿಯೆ

ಚರಣಕ್ಕೆರಗುವೆನು
ಭದ್ರ ದೇವನೆ ॥ ೨ ॥


ಗತಿ ಮತಿಯು ನೀನೆ
ಸುಖ ಹಿತನು ನೀನೆ
ಬಂಧು ಬಳಗವೆಲ್ಲ ನೀನೆ
ಮತಿ ನೀಡು ಸಲಹು ಭದ್ರನೆ ॥ ೩ ॥

ವಂದೇ ವಂದೇ ಭದ್ರಂ ವಂದೇ
ವಂದೇ ವಂದೇ ಮಂಗಳಂ ವಂದೇ
ವಂದೇ ವಂದೇ ರುದ್ರರೂಪಂ ವಂದೇ
ವಂದೇ ವಂದೇ ಭದ್ರೇಶಂ ॥ ೪ ॥

(ಈ ವಿವರಗಳನ್ನು ನೀಡಿದವರು ಮಾಧವರಾವ ಶರಣಪ್ಪ ಮಾಲೀಪಾಟೀಲರು.)



ಭದ್ರಪ್ಪನವರ ಮನೆ (ಕೊಹಿನೂರು)



ಭದ್ರಪ್ಪನವರ ಗುರುಗಳಾಗಿದ್ದ ಚನ್ನಮಲ್ಲೇಶ್ವರ ಮಠ (ಕೊಹಿನೂರು)



ಭದ್ರೇಶ್ವರರು ವಾಸ ಮಾಡುತ್ತಿದ್ದ ಸ್ಥಳ (ಬಾವಗಿ)



ಭದ್ರೇಶ್ವರರು ನಡೆಸುತ್ತಿದ್ದ ದಾಸೋಹಕ್ಕೆ ಆಶ್ರಯವಾದ ಮನೆ (ಬಾವಗಿ)




ಭದ್ರೇಶ್ವರರು ಇಷ್ಟಲಿಂಗಾರ್ಚನೆ ಮಾಡುತ್ತಿದ್ದ ಸ್ಥಳ (ಬಾವಗಿ)



ಭದ್ರೇಶ್ವರರ ನಡೆಸುತ್ತಿದ್ದ ದಾಸೋಹದ ಸ್ಥಳ (ಬಾವಗಿ)




ಭದ್ರೇಶ್ವರರು ನೀರನ್ನು ತುಪ್ಪವಾಗಿಸಿದ ಬಾವಿ (ಬಾವಗಿ).




ಬಾವಗಿ ಭದ್ರೇಶ್ವರ ಛಾಯಾ ಚಿತ್ರ.




ಭದ್ರೇಶ್ವರರ ಸಮಾಧಿ ದೇವಾಲಯ (ಬಾವಗಿ).



ಭದ್ರೇಶ್ವರರ ದರ್ಶನ ಮೂರ್ತಿ (ಬಾವಗಿ).



ಭದ್ರಪ್ಪ ಪಾಟೀಲರ ಅಣ್ಣನ ಮಗ ಮಾಧವರಾವ ಪಾಟೀಲರು
(ಕೊಹಿನೂರು)



ಭದ್ರೇಶ್ವರ ಪುರಾಣದ ಹಸ್ತಪ್ರತಿಯ ಒಂದು ಓಲೆ

೩. ರಾಣಪ್ಪ ಜಮಾದಾರ (ಕ್ರಿ.ಶ.ಸು. ೧೮೮೯–೧೯೬೪)

ಜನಸಂಖ್ಯೆ ಮತ್ತು ವಿಸ್ತೀರ್ಣದ ದೃಷ್ಟಿಯಿಂದ ಚಿಕ್ಕ ಗ್ರಾಮವೆಂದೇ ಕರೆಯಿಸಿಕೊಳ್ಳುತ್ತಿರುವ ಖಾನಾಪೂರ(ಬಿ) ಹಳ್ಳಿಯು ತನ್ನ ಒಡಲಿನಲ್ಲಿ ಇಬ್ಬರು ತತ್ತ್ವಪದಕಾರರನ್ನು ಹೊಂದಿರುವುದು ಸಾಂಸ್ಕೃತಿಕ ಚರಿತ್ರೆಯ ದೃಷ್ಟಿಯಿಂದ ಮಹತ್ವದ ವಿಚಾರವೆನಿಸಿಕೊಳ್ಳುತ್ತದೆ. ಉಭಯ ಕವಿಗಳಲ್ಲಿ ಕಬ್ಬಲಿಗ ಜನಾಂಗದಲ್ಲಿ ಜನಿಸಿದ ರಾಣಪ್ಪ ಜಮಾದಾರ ಒಬ್ಬರು.

ರಾಣಪ್ಪನವರ ತಂದೆ ಸಾಯಬಣ್ಣ ಕೃಷಿಕ. ಆತನ ಹೆಂಡತಿ ಗೌರವ್ವ (ನರಸವ್ವ). ಕೂಲಿ–ಒಕ್ಕಲುತನ ಮಾಡುತ್ತ ಈ ದಂಪತಿಗಳು ತಮ್ಮ ಸಂಸಾರವನ್ನು ನಿರ್ವಹಿಸುತ್ತಿದ್ದವರು. ರಾಣಪ್ಪನವರು ಹಿರಿಯ ಮಗನಾಗಿ ಕ್ರಿ.ಶ. ೧೮೮೯ರಲ್ಲಿ ಹುಟ್ಟಿ ಬಂದರು. ರಾಣಪ್ಪನವರ ಕಿರಿಯ ಸಹೋದರ ಹಣಮಂತ.

ತಂದೆ ಸಾಯಬಣ್ಣ ನಿರಕ್ಷರ ಜೀವಿ. ಆದರೂ ಬಾಲಕ ರಾಣಪ್ಪನ ಚುರುಕು ಬುದ್ಧಿಯನ್ನು ಗುರುತಿಸಿ ದೊರಕಿದ ಶಿಕ್ಷಣವನ್ನೇ ಕೊಡಲು ಹಂಬಲಿಸಿದನು. ಮೋಡಿ ಭಾಷೆಯಲ್ಲಿ ಖಾಸಗಿ ಶಾಲೆಯಿಂದ ಮೂರು ಅಥವಾ ನಾಲ್ಕನೆಯ ವರ್ಗದ ಶಿಕ್ಷಣವನ್ನು ಪಡೆದದ್ದಾಯಿತು. ಸ್ವಪ್ರಯತ್ನದಿಂದ ಹಿಂದಿ–ಮರಾಠಿ ಭಾಷೆಗಳನ್ನು ಕಲಿತುಕೊಂಡರು. ಮಾತೃಭಾಷೆ ಕನ್ನಡದಲ್ಲಿ ವರ್ಣಗಳನ್ನು ಮೂಡಿಸಲು ಯತ್ನಿಸಿ ಸಫಲರಾದರು. ಈ ಒಟ್ಟು ಶಿಕ್ಷಣವು ರಾಣಪ್ಪನವರಿಗೆ ಗೌಡಕಿ ನಿರ್ವಹಿಸಲು ಪೂರಕವಾದಂತೆ, ಸಾಹಿತ್ಯ ಕೃಷಿಗೂ ಪೂರಕವಾಯಿತು. ಕಲಬುರ್ಗಿ ಜಿಲ್ಲೆ, ಆಳಂದ ತಾಲ್ಲೂಕಿನಲ್ಲಿ ಬರುವ ಸಿರಿಚಂದ ಗ್ರಾಮದ ಗೌಡಕಿ ವತನವು ರಾಣಪ್ಪನ ಮನೆತನಕ್ಕೆ ಸೇರಿದ್ದಿತು. ಹೀಗಾಗಿ ರಾಣಪ್ಪನಿಗೆ ಗೌಡಕಿಯ ಅಧಿಕಾರವು ದತ್ತವಾಗುವಂತಾಯಿತು.

ರಾಣಪ್ಪ ಭೌತಿಕಗಿಂತಲೂ ಆಧ್ಯಾತ್ಮದತ್ತ ಹೆಚ್ಚು ಒಲವು ಹೊಂದಿದ ವ್ಯಕ್ತಿಯಾಗಿ ಬೆಳೆದ. ಸಂಸಾರ ಜೀವನದಲ್ಲಿದ್ದರೂ, ವೈರಾಗ್ಯದ ಸಾಧುವಿನಂತೆ ಹಿತ–ಮಿತ ಬದುಕನ್ನೆ ಅವರು ನಡೆಸುತ್ತಿದ್ದರು.

ಅಹಿಕವಾದ ಯಾವುದೇ ಪ್ರಲೋಭನೆಗಳಿಗೆ ಅತಿಯಾಗಿ ಸಿಕ್ಕು ಹಾಕಿಕೊಂಡವರಲ್ಲ. ಹೆಂಡತಿ ಶಿವಮ್ಮನಾಗಲಿ, ಈ ತಾಯಿ ನೀಡಿದ ಮೂವರು ಸಂತಾನಗಳಾಗಲಿ, ಇವು

ಯಾವವೂ ರಾಣಪ್ಪನವರ ಸಾಧಕ ಬದುಕಿಗೆ ಆತಂಕಗಳಾಗಲಿಲ್ಲ. ರಾಣಪ್ಪನ ಆಧ್ಯಾತ್ಮಿಕ ಮನಸ್ಸು ಆಗಾಗ ಅವನನ್ನು ಹಾರಕೂಡದ ಚೆನ್ನಬಸವರ ಮಠಕ್ಕೂ, ಘೋಡವಾಡಿಯ ಇಸ್ಮಾಯಿಲ್ ಖಾದ್ರಿಯ ದರ್ಗಾಕ್ಕೂ ಕರೆದುಕೊಂಡು ಹೋಗುತ್ತಿದ್ದಿತು. ಅಲ್ಲಲ್ಲಿ ಬೇಟಿಯಾಗುತ್ತಿದ್ದ ಸಾಧು-ಸಂತ-ಅನುಭಾವಿಗಳ ಸಂಗದಿಂದ ರಾಣಪ್ಪನವರ ಅಂತರಂಗವು ಆಧ್ಯಾತ್ಮಿಕತೆಯ ಆನಂದದಿಂದಲೇ ತುಂಬಿಕೊಳ್ಳುವಂತಾಯಿತು. ಶಿವಜ್ಞಾನದ ಹಸಿವು ಹೊಟ್ಟೆಯ ಹಸಿವಿನಗಿಂತಲೂ ಹೆಚ್ಚಾಗತೊಡಗಿತ್ತು. ಆಧ್ಯಾತ್ಮಿಕ ಗ್ರಂಥಗಳು ರಾಣಪ್ಪನವರ ಮನಸ್ಸನ್ನು ಸೆಳೆದುಕೊಳ್ಳತೊಡಗಿದವು. ಆದಷ್ಟು ಅಂತಹ ಗ್ರಂಥಗಳನ್ನು ಅವರು ದೊರಕಿಸಿಕೊಂಡು ಓದ ತೊಡಗಿದರು. ಶರಣರ ವಚನಗಳನ್ನು ಮನನಿಸಿದರು; ತತ್ತ್ವದ ಹಾಡುಗಳನ್ನು ಹಾಡಿದರು. ಶಿವ ಭಜನೆ-ಹರಿಭಜನೆಯಾದಿಗಳಂತಹ ಭಜನೆ - ಸತ್ಸಂಗಗಳಿಗೆ ಹೋಗತೊಡಗಿದರು. ಇವೆಲ್ಲದರ ಪರಿಣಾಮವಾಗಿ ರಾಣಪ್ಪನವರಲ್ಲಿ ಒಬ್ಬ ಆಧ್ಯಾತ್ಮಿ ಸಾಧಕನು ಹುಟ್ಟಿಕೊಂಡಂತೆ ಒಬ್ಬ ತತ್ತ್ವಪದಕಾರನೂ ಹುಟ್ಟಿಕೊಳ್ಳ ತೊಡಗಿದನು. ರಾಣಪ್ಪನವರ ಲೇಖನಿಯಿಂದ ತತ್ತ್ವ ಭರಿತ ಹಾಡುಗಳು ಮೂಡುವುದಕ್ಕೆ ಆರಂಭವಾದವು.

ರಾಣಪ್ಪನವರು ತಮ್ಮ ಕಲೆಗಳನ್ನು ಬೇರೆಯವರಿಗೂ ಕಲಿಸಿಕೊಡುತ್ತಿದ್ದರು. ಹೀಗಾಗಿ ಖಾನಾಪುರ ಮತ್ತು ಅದರ ಹೊರಗೆ ಅವರ ಅಪಾರ ಶಿಷ್ಯ ಬಳಗ ಬೆಳೆಯಿತು. ಅವರಿಗೆ ರಾಣಪ್ಪನವರು "ರಾಣಪ್ಪ ಮಾಸ್ತರ" ಆದರು. ಯಾವುದೇ ಪ್ರಕಾರದ ಹಾಡಾಗಿರಲಿ ಅದನ್ನು ಮಧುರವಾಗಿ ಹಾಡುತ್ತಿದ್ದರು. ಡಪ್ಪು-ಪಿಟೀಲುಗಳನ್ನು ನುಡಿಸುತ್ತಿದ್ದರು. ಮಹಾಭಾರತದಲ್ಲಿನ ಕತೆಗಳನ್ನು ಆಧರಿಸಿ ತಾವೇ ರಚಿಸಿದ ನಾಟಕಗಳನ್ನು ಆಡಿಸುತ್ತಿದ್ದರು. ಚಿತ್ರಾಂಗದಾ, ಬಭ್ರುವಾಹನ ಕಾಳಗ, ವೀರ ಅಭಿಮನ್ಯು ಇಂತಹ ನಾಟಕಗಳನ್ನು ಅವರು ರಚಿಸಿದರೆಂದು ಹೇಳಲಾಗುತ್ತದೆ. ರಾಣಪ್ಪನವರ ಹಿರಿಯ ಮಗ ರಾಮಣ್ಣನವರು ತಮ್ಮ ತಂದೆಯವರ ಬಗೆಗೆ ಹೇಳುವ ಮಾತುಗಳನ್ನು ಕೇಳಬೇಕು: "ನಮ್ಮ ತಂದೆ ಅವರು ಭಾಳ ಪಂಡಿತರಿದ್ದರು. ಪಂಚಾಂಗ ನೋಡುತ್ತಿದ್ದರು. ದೂರ-ದೂರದಿಂದ ಪಂಚಾಂಗ ಕೇಳುವುದಕ್ಕಾಗಿ ಜನರು ಬರುತ್ತಿದ್ದರು. ಅವರು ಸಂಗೀತಗಾರರಾಗಿದ್ದರು. ಆರಂಭದಲ್ಲಿ ಒಂದಿಷ್ಟು ಒಕ್ಕಲುತನವೇನೋ ಮಾಡಿದರು, ಆದರೆ ಕಾಲಾಂತರದಲ್ಲಿ ಅದನ್ನು ಬಿಟ್ಟು ಭಜನೆ ಮಾಡುವುದು, ಸಂಗೀತ ಕಲಿಸುವುದು, ನಾಟಕ ಆಡಿಸುವುದು, ಸಾಧು-ಸಂತರೊಡನೆ ಸತ್ಸಂಗ ಮಾಡುವುದು ಇಂತಹ ಕೆಲಸಗಳಲ್ಲಿಯೇ ಕಾಲ ಕಳೆಯ ತೊಡಗಿದರು. ಅವರೊಂದು ಭಜನಾ ಮಂಡಳಿ ಕಟ್ಟಿದ್ದರು. ಅದು ಹಣಮಂತ ದೇವರ ಭಜನಾ ಮಂಡಳಿ. ಅದನ್ನು ತೆಗೆದುಕೊಂಡು ಆಗಾಗ ಊರಿಂದ ಊರಿಗೆ ಭಜನೆ ಮಾಡಲು ಹೋಗುತ್ತಿದ್ದರು. ನಮ್ಮಪ್ಪೊಳ್ಳೆಯ ನಾಟಕ ಕಲಾವಿದರೂ ಆಗಿದ್ದರು. ತಾವು ರಚಿಸಿದ ನಾಟಕಗಳಲ್ಲಿ ಕೆಲವೊಮ್ಮೆ ಪಾತ್ರಗಳನ್ನು ಹಾಕುತ್ತಿದ್ದರು. ನಾವು ಬಾಲಕರಿದ್ದಾಗ ನನ್ನ ತಮ್ಮ ಗೋವಿಂದನೊಂದಿಗೆ ನನ್ನನ್ನೂ

ಭಜನೆಗೆ ಕರೆದುಕೊಂಡು ಹೋಗುತ್ತಿದ್ದರು. ನಮ್ಮ ತಂದೆ ಅವರಲ್ಲಿ ಆಗಿಂದಾಗಲೇ ಹಾಡು ಕಟ್ಟಿ ಹಾಡುವ ಅದ್ಭುತ ಶಕ್ತಿಯಿದ್ದಿತ್ತು. ಸವಾಲ-ಜವಾಬ್‌ಗಳಲ್ಲಿ ನಮ್ಮ ತಂದೆಯವರನ್ನು ಸೋಲಿಸಿದ ಕವಿಗಳು ಯಾರೂ ಇರಲಿಲ್ಲ".

ಇಂದು ರಾಮಣ್ಣನವರು ಈ ಮಾತುಗಳನ್ನು ಅತ್ಯಂತ ಹೆಮ್ಮೆಯಿಂದಲೇ ಹೇಳುತ್ತಾರೆ.

ರಾಣಪ್ಪನವರು ಹಲವಾರು ಪ್ರಕಾರದ ಹಾಡುಗಳನ್ನು ರಚಿಸಿದ್ದಾರೆ. ಮೋಹರಮ್ ಹಾಡುಗಳು, ಗೀಗೀ ಹಾಡುಗಳು, ಕೋಲಾಟದ ಹಾಡುಗಳು, ಜೋಗುಳ ಪದಗಳು ಇತ್ಯಾದಿ. ಅವುಗಳಲ್ಲಿ ತತ್ತ್ವಪದ ಪ್ರಕಾರದ ಸಂಖ್ಯೆ ದೊಡ್ಡದಾಗಿದೆ. ರಾಣಪ್ಪನವರು ತಮ್ಮ ತತ್ತ್ವಪದಗಳಿಗೆ ತಮ್ಮ ಆರಾಧ್ಯ ದೇವರಾದ "ಮಹಾದೇವನ" ನಾಮವನ್ನು ಅಂಕಿತವಾಗಿ ಬಳಕೆ ಮಾಡಿಕೊಂಡಿದ್ದಾರೆ. "ಈಶ" ಎಂಬುದು ಕೆಲವು ಹಾಡುಗಳಲ್ಲಿ ಅದಕ್ಕೆ ಪರ್ಯಾಯ ಅಂಕಿತವಾಗಿ ಪ್ರಯೋಗಗೊಂಡಿದೆ. ಮತ್ತೆ ಹಲವು ತತ್ತ್ವಪದಗಳಲ್ಲಿ "ದಾಸರಾಣಪ್ಪ", "ಕವಿರಾಣಪ್ಪ" ಎಂಬ ಮುದ್ರೆ ಕಂಡುಬರುತ್ತದೆ.

ರಾಣಪ್ಪನವರು ಶತಾಯುಷಿಯಾಗಿ ಬದುಕಿ ಕ್ರಿ.ಶ. ೧೯೯೪ರಲ್ಲಿ ಕೈಲಾಸವಾಸಿಗಳಾದರು. ರಾಣಪ್ಪನವರ ಕೆಲವು ತತ್ತ್ವಪದಗಳನ್ನು ಇಲ್ಲಿ ಉದಾಹರಣೆಗಾಗಿ ಕೊಡಲಾಗಿದೆ:

ನಿನ್ನ ನಿಜದ ಖೂನ

ನಿನ್ನ ನಿಜದ ಖೂನ ನಿನ್ನಲ್ಲೆ ತಿಳಿ
ಅನ್ಯ ಜಾಗ ಹುಡುಕದ್ಯಾಕೋ ॥ ಪ ॥

ಮಾನ್ಯ ಶ್ರೀ ಗುರುವಿನ ಪಾದ ಹಿಡಿಕೋ
ಜ್ಞಾನ ಮುಕ್ತಿ ನೀ ಅವನಿಂದಲೇ ಪಡಕೋ ॥ ಅ.ಪ ॥

ಹೇಸಿ ಗುಣದ ಆಶಿ ಬಿಡದೆ
ಕಾಶಿಗೆ ಹೋಗದ್ಯಾಕೋ
ಮೊದಲು ನಿನ್ನ ಮನಸ್ಸಿನ ಮೈಲಿಗೆ ತೊಳಕೋ
ದಾಸನಾಗಿ ನೀ ಈಶನಲ್ಲಿ ದುಡಿಕೋ ॥ ೧ ॥

ಖೊಟ್ಟಿ ಗುಣ ಹೊಟ್ಯಾಗಿಟ್ಟು ಸೃಷ್ಟಿ ತಿರುಗಿದರ
ಶಿವ ಹ್ಯಾಂಗ ಸಿಗಬೇಕೋ
ಕಣ್ಣಿಲ್ಲದೆ ಕನ್ನಡಿ ನೋಡದ್ಯಾಕೋ
ಜ್ಞಾನದ ಕಣ್ತೆರೆದು ನಿನ್ನನೀ ನೋಡಿಕೋ ॥ ೨ ॥

ಕಾಶಿ ರಾಮೇಶ್ವರ ದೇಶ ತಿರುಗಿದರಿಲ್ಲ
ಈಶನ ಇಲ್ಲೇ ಹುಡಕೋ
ಹೇಸಿ ಸಂಸಾರದ ಬಿದ್ದದಪ್ಪ ತೊಳಕೋ
ಬಿಟ್ಟೇನಂದರ ಬಿಡಲಾರದು ಸಾಯತನಕೋ ॥ ೩ ॥

ದೇಶಕ್ಕಧಿಕವಾದ ವಾಸುಳ್ಳ ಖಾನಾಪುರ
ಸೇವೆ ಮಾಡಿ ಶಿವ ಮಂದಿರ ಸೇರಿಕೋ
ಈಶಕೊಟ್ಟ ಭಜನಿ ಹುಡಗರು ಹಾಡದಕೋ ॥ ೪ ॥

(ಉಲ್ಲೇಖ: ಬೀದರ ಜಿಲ್ಲೆ ಅನುಭಾವಿ ಕವಿಗಳು. ಪು.೧೫೩)

ನಿನ್ನೊಳಗದ ಮಾಯಿ


ಮಾಯಿ ಮಾಯಿ ಅಂತಿ ಬಲು ಬಾಯಿ ಬಿಡುತಿ
ಮಾಯಿ ಹೊರಗಿಲ್ಲೋ । ತಮ್ಮಾ
ನಿನ್ನೊಳಗದ ॥ ಪ ॥

ಭಂಡರಂಡ್ಯೇರೆಂದು ಹೆಂಗಸರಗಿ ನೀ ಬೈತಿ
ಹೆಣ್ಣು ಮಾಯಲ್ಲೋ । ತಮ್ಮಾ
ಒಳಗಿನ ಆಶೀ ಮಾಯೋ ॥ ೧ ॥


ಲೋಭಕ್ಕ ಮೂಲಂತ ದುಡ್ಡೀಗಿ ನೀ ಬೈತಿ
ದುಡ್ಡ ಮಾಯಲ್ಲೋ । ತಮ್ಮಾ

ಒಳಗಿನ ದುರಾಶೆ ಮಾಯೋ ॥ ೨ ॥
ಮಮಕಾರ ಮೂಲಂತ ಮಣ್ಣೀಗಿ ನೀ ಬೈತಿ
ಮಣ್ಣಲ್ಲ ಮಾಯ । ತಮ್ಮಾ
ನಿನ್ನ ಒಳಗಿನ ಅಹಂಕಾರ ಕಡುಮಾಯೋ ॥ ೩ ॥
ದೇಶಕ್ಕಧಿಕವಾದ ಲೇಸುಳ್ಳ ಖಾನಾಪುರ
ಈಶಾ ನೆಲಸ್ಯಾನೋ । ತಮ್ಮಾ
ಅಲ್ಲಿಲ್ಲ ಮಾಯೆಯ ಸುಮ್ಮಾ
ನೀ ನೋಡು ಮನಸಿಲೇ ಒಮ್ಮಾ ॥ ೪ ॥

(ಇಲ್ಲಿನ ವಿವರಗಳನ್ನು ನೀಡಿದವರು ರಾಣಪ್ಪನವರು ಹಿರಿಯ ಮಗ ರಾಮಣ್ಣ.)



ರಾಣಪ್ಪ ಜಮಾದಾರ ಅವರ ಪರಿವಾರ ವರ್ಗ



ರಾಣಪ್ಪ ಜಮಾದಾರ ಅವರ ಮನೆ (ಖಾನಾಪುರ-ಬಿ)



ರಾಣಪ್ಪ ಜಮಾದಾರ ಅವರ ಆರಾಧ್ಯ ದೇವರು ಮಾಹಾದೇವನ ಮಂದಿರ
(ಖಾನಾಪೂರ-ಬಿ)

೪. ಶೇಖ್ ಮಹಮ್ಮದ ಶಿಲಾರಸಾಬ (ಕ್ರಿ.ಶ.ಸು. ೧೮೯೦–೧೯೮೦)

ಗೋಕುಳ ಗ್ರಾಮಕ್ಕೆ ಹೋದವರು ಎರಡು ಶಕ್ತಿಗಳಿಗೆ ಭೇಟಿ ಕೊಡಲೇಬೇಕು. ಒಂದು ಆ ಊರಿನ ಆರಾಧ್ಯ ದೇವರು ವೀರಭದ್ರನ ದೇವಾಲಯ. ಇನ್ನೊಂದು ವೀರಭದ್ರನನ್ನು ತನ್ನ ಆರಾಧ್ಯ ದೇವರನ್ನಾಗಿಸಿಕೊಂಡು ಹಲವಾರು ಪ್ರಕಾರದ ಪದ್ಯಗಳನ್ನು ಬರೆದಿರುವ ಮುಸ್ಲೀಮ ಕವಿ ಮಹಮ್ಮದ ಶಿಲಾರ ಸಾಬನ ಮನೆ.

ಗೋಕುಳ ಚಿಕ್ಕ ಊರು. ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುತ್ತದೆ. ಈ ಊರಿನಲ್ಲಿದ್ದ ಫಕೀರ ಸಾಬ–ವಜಿರ್ಮಾ ದಂಪತಿಗಳಿಗೆ ಶಿಲಾರ ಸಾಬನು ಮಗನಾಗಿ ಜನಿಸಿದರು. ಶಿಲಾರ್ ಸಾಬನ ಮನೆತನದ ಹೆಸರು 'ಶೇಖ್' ಎಂಬುದಾಗಿದೆ. ಶಿಲಾರ್ ಸಾಬರ ಜನದ ವರ್ಷ ಕ್ರಿ.ಶ. ೧೮೯೦.

ಶಿಲಾರ್‌ಸಾಬರು ನಿರಕ್ಷರಿಗಳು. ಓದು–ಬರಹ ಕಲೆಯಲು ಶಾಲೆಗೆ ಹೋದವರಲ್ಲ. ತಂದೆಯೊಡನೆ ಕೃಷಿ ಕಾಯಕದ ಸಂಸ್ಕಾರದಲ್ಲಿಯೇ ಪಳಗಿದರು. ಫಕೀರ ಸಾಬರದು ಬಡತನದ ಕುಟುಂಬ. ಫಾತಿಮಾಬಿ, ಮಸ್ತಾನಬಿ, ರುಕುಂಬಿ ಎಂಬ ಮೂವರು ಹೆಣ್ಣುಮಕ್ಕಳು. ಶಿಲಾರ ಎಂಬುವನೊಬ್ಬ ಗಂಡುಮಗ. ತನ್ನ ಅಲ್ಪ ಹೊಲದೊಂದಿಗೆ ಬೇರೆಯವರ ಹೊಲವನ್ನು ಗೇಣಿಯಿಂದ ಮಾಡುತ್ತ, ಪ್ರಾಮಾಣಿಕ ದುಡಿಮೆಯಿಂದ ಫಕೀರ ಸಾಬನು ಬದುಕುತ್ತಿದ್ದನು. ತನ್ನ ಬದುಕಿನ ರೀತಿಯನ್ನೇ ತಮ್ಮ ಮಕ್ಕಳಿಗೂ ಕಲಿಸಿದನು.

ದೊಡ್ಡವನಾಗುತ್ತ ನಡೆದಂತೆ ಶಿಲಾರ ಸಾಬರು ಕೃಷಿಕಾಯಕಕ್ಕೆ ತೊಡಗಿದರು. ಮೊದಲಿಗೆ ದನಗಳನ್ನು ಕಾಯುವ ಕೆಲಸ ನಿರ್ವಹಿಸತೊಡಗಿದರು. ತಂದೆಯಿಂದ ದತ್ತವಾಗಿ ಬಂದ ತುಕಡಿ ಭೂಮಿಯಲ್ಲಿ ಒಕ್ಕಲುತನ ಆರಂಭಿಸಿದರು. ಶಿಲಾರ ಸಾಬರಿಗೆ ಇಬ್ಬರು ಪತ್ನಿಯರು; ಒಬ್ಬರು ಫತ್ರುಮಾ, ಇನ್ನೊಬ್ಬರು ಮೌಲನ್‌ಬಿ. ಇಬ್ಬರು ಹೆಂಡತಿಯರಿಗೆ ಒಟ್ಟು ಏಳುಜನ ಮಕ್ಕಳು. ಅವರಲ್ಲಿ ಮೂರು ಜನ ಗಂಡು ಮಕ್ಕಳು, ನಾಲ್ಕು ಜನ ಹೆಣ್ಣುಮಕ್ಕಳು.

ಶಿಲಾರ ಸಾಬರು ಕಾಲಕಳೆದಂತೆ ವಿಚಿತ್ರ ವ್ಯಕ್ತಿಯಾಗಿ ಬೆಳೆಯ ತೊಡಗಿದರು. ಪ್ರಪಂಚದಲ್ಲಿದ್ದ ಆಸಕ್ತಿ ಕಡಿಮೆಯಾದಂತೆ ಕಾಣತೊಡಗಿತು. ತಲೆಯ ಮೇಲೆ ಕಟ್ಟಿದ್ದ

ರುಮಾಲಿನ ಚುಂಗವು ಹಿಂಬಡದವರೆಗೆ ಇಳಿಬಿದ್ದು, ನೆಲದ ಮೇಲೆ ಎಳೆದಾಡುತ್ತಿತ್ತು. ಊರಿನ ಕೆಲವು ಗೆಳೆಯರನ್ನು ಕೂಡಿಸಿಕೊಂಡು ಭಜನೆ–ಆಧ್ಯಾತ್ಮದಂತಹ ಗುಂಗಿನಲ್ಲಿ ಮುಳುಗಿಬಿಟ್ಟರು. ಗೋಕುಳ ಗ್ರಾಮದ ಪಿಂಜಾರ ಮನೆತನದ ನಬಿಸಾಬನು ಶಿಲಾರರನ್ನು ಹುಚ್ಚರೆಂದು ಭಾವಿಸಲಿಲ್ಲ. ಅವರಲ್ಲಿರುವ ಗಾಯಕ ಮತ್ತು ಕವಿಯನ್ನು ಕಂಡುಕೊಂಡರು. ಶಿಲಾರ ಸಾಬರು ಮೊದ–ಮೊದಲಿಗೆ ಗೀಗೀ ಪದಗಳನ್ನು ಹಾಡುತ್ತಿದ್ದರು; ಭಜನೆ ಮಾಡುತ್ತಿದ್ದರು, ಡಪ್ಪುಬಾರಿಸುತ್ತಿದ್ದರು. ಗುರುಗಳಾದ ನಬಿಸಾಬರಿಂದಲೇ ಕೆಲವು ಹಾಡುಗಳನ್ನು ಕಲಿತುಕೊಂಡು ಹಾಡುತ್ತಿದ್ದರು.

ಮುಂದೆ ಶಿಲಾರ ಸಾಬರಲ್ಲಿರುವ ಕವಿಯು ಪ್ರಕಟಗೊಳ್ಳತೊಡಗಿದನು. ಹಾಡು ಹಾಡುತ್ತಲೇ ತಮ್ಮದೇ ಆದ ರೀತಿಯಲ್ಲಿ ಹಾಡುಗಳನ್ನು ಕಟ್ಟ ತೊಡಗಿದರು. ಅವರಲ್ಲಿ ಅದ್ಭುತವಾದ ಆಶುಕವಿತ್ವದ ಶಕ್ತಿಯಿದ್ದಿತು. ಕೆಲಸಮಯದಲ್ಲಿಯೇ ಶಿಲಾರ ಸಾಬರಿಂದ ಕುಟ್ಟುವ, ಬೀಸುವ ಹಾಡುಗಳು, ಭಜನೆ ಹಾಡುಗಳು; ಮೋಹರಮ್ ಪದಗಳು, ಗೀಗೀ ಪದಗಳು ಅಲ್ಲದೆ ಹಲವಾರು ತತ್ತ್ವಪದಗಳು ಹೊರ ಬಂದವು; ಬರತೊಡಗಿದವು.

ಶಿಲಾರ ಸಾಬರು ಕೆಲವು ಗೆಳೆಯರನ್ನು ಹೊಂದಿದ್ದರು. ಅವರು ಶಿಲಾರರು ಹಾಡುವಾಗ ತಮಗೆ ಬರುತ್ತಿದ್ದ ಮೋಡಿ ಲಿಪಿಯಲ್ಲಿ ಬರೆದುಕೊಳ್ಳುತ್ತಿದ್ದರು. ಗೋಕುಳದ ಬಸವಂತಗಿರಿ ಎಂಬುವರ ತೋಟದಲ್ಲಿ ಹೋಗಿ ಶಿಲಾರರು ತಮ್ಮ ಶಿಷ್ಯರೊಡನೆ ಕುಳಿತು ಪದ್ಯ ಕಟ್ಟುತ್ತಿದ್ದರಂತೆ. ಅಲ್ಲಿ ಸಿಂದಿ ಬನವಿದ್ದಿತು. ಜನರು "ಶಿಲಾರ ಸಾಬ ಸಿಂದಿ ಕುಡಿಯುತ್ತಾನೆಂದು" ಹೇಳುತ್ತಿದ್ದರಂತೆ.

ಶಿಲಾರ ಸಾಬರು ಲೋಕದ ಕಣ್ಣಿಗೆ ಮರುಳರಂತೆ ಕಂಡರೂ ಅಂತರಂಗದಲ್ಲಿ ಸಂತರಾಗಿದ್ದರು, ತಾತ್ವಿಕ ಕವಿಯಾಗಿದ್ದರು. ತಮ್ಮಲ್ಲಿಗೆ ಬರುವವರಿಗೆ ಆಗಾಗ ಭವಿಷ್ಯ ಹೇಳುತ್ತಿದ್ದರು. ಅವರಿಗೆ ನೆಲದ ಮೇಲೆ ಉರುಳಾಡುವಾಗ ಪ್ರತಿಭೆ ಬರುತ್ತಿದ್ದಿತಂತೆ. ಹೀಗಾಗಿ ಅವರು ಹಾಡುಗಳು ಹೊರಗೆ ಬರುವಾಗ ನೆಲದ ಮೇಲೆ ಒಂದೇ ಸವನೆ ಉರಳಾಡುತ್ತಿದ್ದರಂತೆ. ಕೆಲಸಮಯದ ನಂತರ ಎದ್ದು ಕುಳಿತು ಹಾಡಲು ಆರಂಭ ಮಾಡುತ್ತಿದ್ದರು. ಶಿಲಾರ ಸಾಬರಿಗೆ ಹುಣ್ಣಿಮೆಯ ದಿನಗಳು ಹಾಡುಕಟ್ಟಲು ಪ್ರಶಸ್ತವಾದ ದಿನಗಳಾಗಿದ್ದವು. ರಾತ್ರಿಯ ಬೆಳದಿಂಗಳಿನ ಸೊಬಗನ್ನು ಅನುಭವಿಸುತ್ತ; ತಮಗೆ ತೋಚಿದ್ದನ್ನು ಹಾಡುತ್ತಿದ್ದರು. ರಾತ್ರಿಯ ಆ ನಿಶ್ಯಬ್ದ ವಾತಾವರಣದಲ್ಲಿ ಶಿಲಾರರ ಪದ್ಯಗಳು ಕೇಳುಗರ ಮನದಲ್ಲಿ ಅನಿರ್ವಚನೀಯವಾದ ಸವಿ ಅನುಭವದ ತರಂಗಗಳನ್ನು ಎಬ್ಬಿಸುತ್ತಿದ್ದವು.

ಶಿಲಾರ ಸಾಬರು ಮೋಹರಮ್ ಹಾಡುಗಳಿಗೆ ತಮ್ಮ ಹೆಸರನ್ನೇ ಅಂಕಿತವಾಗಿಟ್ಟುಕೊಂಡರು. ಹಾಗೆಯೇ ವೀರಭದ್ರನನ್ನೂ ಸ್ಮರಿಸಿದರು. ಈ ಪದ್ಯ ಭಾಗದಲ್ಲಿ ಅದನ್ನು ಗಮನಿಸಬಹುದು:

"ತಿಳಿದಷ್ಟು ಹೇಳುವೆ ವರ್ತಮಾನ
ಕಾದಂಬರಿ ಅಲ್ಲ ಇದು ಬರೆ ವಚನ
ಗೋಕುಳ ವೀರಭದ್ರ ಪಸನ್ನ
ಆತನ ದಯವಿರಲಿ ಅಂತಃಕರಣ
ಹುಡುಗರಿಗೆ ಮತಿಕೊಟ್ಟು ಪರಿಪೂರಣ
ಶಿಲಾರ್‌ಸಾಬ ಹೇಳಿದ ಕವಿರತನ"
(ಬೀದರ ಜಿಲ್ಲೆಯ ಅನುಭಾವಿ ಕವಿಗಳು. ಪು.೧೫೭)

ಶಿಲಾರ ಸಾಬರು ತತ್ತ್ವಪದಗಳನ್ನು ವೀರಭದ್ರದೇವನ ಅಂಕಿತದಲ್ಲಿಯೇ ಬರೆದಿದ್ದಾರೆ. ಅವರ ಹೆಚ್ಚಿನ ಹಾಡುಗಳು ದೊರೆಯುವುದಿಲ್ಲ. ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ಸಿಂದಿಯ ಮತ್ತು

ಸಿಂದಿಯ ಕುಡಿತಿನಂತ
ಸಿಟ್ಟಾಗತಿ ಯಾಕೋ ತಮ್ಮಾ
ಸಿಂದಿಯ ಮಬ್ಬ ಮಬ್ಬಲ್ಲ ॥ ಪ ॥

ಹಣದ ಮಬ್ಬೇರಿದವರ ಇಳಿಸುವವರು ಯಾರು?
ಹೆಣ್ಣಿನ ಮತ್ತೇರಿದವರ ಇಳಿಸುವವರಾರು?
ಮಣ್ಣಿನ ಮಬ್ಬೇರಿದರ ಇಳಿಸುವವರಾರು?
ಸಿಂದಿಯ ಮತ್ತು ಮತ್ತಲ್ಲ ॥ ೧ ॥

ಅಧಿಕಾರ ಮದದಿಂದ ಏನು ಸುಖಾ ಹೇಳು?
ಜಾತಿಯ ಮದದಿಂದ ಏನು ಸುಖಾ ಹೇಳು?
ಅಹಂಕಾರ ಮತ್ತಿನಲಿ ಜಗಹೊಯ್ತು ಕೇಳು
ಸಿಂದಿಯ ಮತ್ತು ಮತ್ತಲ್ಲ ॥ ೨ ॥

ಸಿಂದಿಯ ಕುಡಿದಾವ ಜೋಲಿ ಹೊಡೆದಾನು
ತನ್ನ ತಾನೆ ತಾನು ಮಬ್ಬಾಗಿ ಮಲಗ್ಯಾನು
ಹೊನ್ನು ಹೆಣ್ಣು ಮಣ್ಣೀನ ಸಿಂದಿಯು
ಮೂರು ಲೋಕಾ ಎಲ್ಲ ಹಾಳ ಮಾಡಿತಣ್ಣಾ ॥ ೩ ॥

ಸಿಂದಿ ಸಿಂದಿ ಅಂತ ಕೇಡ ನುಡಿಯಲು ಬ್ಯಾಡ್ರಿ
ಸಿಂದಿ ಕುಡುಕ ಶಿಲಾರನ ಕೆಕ್ಕರಿಸಿ ನೋಡಬ್ಯಾಡ್ರಿ
ಧರೆಯೊಳು ವಾಸುಳ್ಳ ಗೋಕುಳ ಊರಾಗ
ಹಾನ ವೀರಭದ್ರ ಅವನ ಪಾದಕ್ಕ ಕೂಡ್ರಿ ॥ ೪ ॥

ಮನುಷ್ಯ ಜನ್ಮ

ಮನುಷ್ಯ ಜನ್ಮಕೆ ಬಂದೀರಿ ಯಣ್ಣಾ
ತಿಳುವಿಲೆ ನಡಿಬೇಕೋ ॥ ಪ ॥

ಒಳಗೊಂದು ನುಡಿ
ಹೊರಗೊಂದು ನುಡಿ ಯಾಕ ಬೇಕೋ ?
ಒಳಗ–ಹೊರಗ ಶುದ್ಧನಾಗಿ
ಬದುಕ ಬೇಕೋ ॥ ೧ ॥

ಸತ್ಯ ವಚನ ನಿತ್ಯದಿಂದಲಿ ಹೇಳತಿರಬೇಕೋ
ಮಿಥ್ಯ ಮಾಟ–ಕೂಟ ಗೋಜ ಯಾಕ ಬೇಕೋ ?
ಸತ್ಯ ಶರಣರ ಸಂಗದಲ್ಲಿ ವಾಸ ಮಾಡೋ
ನಿತ್ಯನಾದ ಗುರುವಿನ ಪಾದದೊಳಗ ಕೂಡೋ ॥ ೨ ॥


ನಂದು–ನಿಂದು ಅಂಬುದೆಲ್ಲ ಯಾವ ದಂಧಿ ?
ನಂದು ಎಂದೇ ಭವದಾಗ ನೊಂದು ಬಂದಿ
ಅಂದು ಅಂದಿಗೆ ವೀರಭದ್ರನ ಸಂದು
ಹುಟ್ಟು ಬಾರದ ಮೋಕ್ಷವ ಹೊಂದು ॥ ೩ ॥

(ಶಿಲಾರ ಸಾಬರ ಮಗ ಬಾಬುಮಿಯಾ ಈ ವಿವರಗಳನ್ನು ಒದಗಿಸಿ ಕೊಟ್ಟವರು.)


▯




ಶೇಖ್ ಮಹಮ್ಮದ ಶಿಲಾರ ಸಾಬರ ಮನೆ (ಗೋಕುಳ)



ಶಿಲಾರ ಸಾಬರ ಪತ್ನಿ ಫತ್ರುಮಾ.



ಬಾಬು ಮಿಯಾ ಅವರ ಪರಿವಾರ.



ಶಿಲಾರ ಸಾಬರ ಮಗ ಬಾಬು ಮಿಯಾ.



ಶಿಲಾರ ಸಾಬರ ಆರಾಧ್ಯ
ದೇವರು ವೀರಭದ್ರನ ದರ್ಶನ ಮೂರ್ತಿ (ಗೋಕುಳ)



ವೀರಭದ್ರ ದೇವರ ಮಂದಿರ (ಗೋಕುಳ).

೫. ಹುಸನಾಸಾಬ ಲದಾಫ್ (ಕ್ರಿ.ಶ. ಸು. ೧೮೯೨-೧೯೫೨)

ಕೊಹಿನೂರು-ಸಿರಗಾಪುರಗಳೆರಡರ ಕೀರ್ತಿಯನ್ನು ನಾಡಿನಲ್ಲಿ ಪಸರಿಸಲು ಕಾರಣನಾದ ವ್ಯಕ್ತಿ ಹುಸನಾಸಾಬ ಲದಾಫ್ ಅವರು. ಉಭಯ ಗ್ರಾಮಗಳು ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ನೆಲೆಗಳೇ ಆಗಿವೆ.

ಜನತೆ ಅವರನ್ನು "ಹುಸನಾ ಮಾಸ್ತರ", "ಕೊಳ್ಳೂರು ಹುಸನಾ", "ಹುಸನಾ ಶಾಯೇರ್", "ಹುಸನಾಕವಿ", "ಹುಸನಾ ಗವಾಯಿ" ಎಂಬ ಹಲವಾರು ನಾಮಗಳಿಂದ ಕರೆದರು; ಗುರುತಿಸಿದರು, ಗೌರವಿಸಿದರು.

ಹುಸನಾ ಸಾಬರು ಕ್ರಿ.ಶ. ೧೮೯೨ರಂದು ಕೊಹಿನೂರಿನ ಲದಾಫ್ ಮನೆತನದಲ್ಲಿ ಹುಟ್ಟಿದರು. ಲಾಲಸಾಬ ಹುಸನಾ ಅವರ ತಂದೆ. ಇಮಾಂಬಿ ಎಂಬುವರು ಅವರ ತಾಯಿ. ಮನೆತನದ ಉದ್ಯೋಗ ಒಕ್ಕಲುತನವಾಗಿತ್ತು. ಲಾಲ ಸಾಬರು ಒಳ್ಳೆಯ ಕೃಷಿಕರಾಗಿದ್ದರು. ಶ್ರಮಪಟ್ಟು ಹೊಲದಲ್ಲಿ ದುಡಿದು ಬದುಕಿನ ನಿರ್ವಹಣೆಗೆ ಬೇಕಾದ ಸ್ವತ್ತನ್ನು ಅರ್ಜಿಸುತ್ತಿದ್ದರು.

ಕೊಹಿನೂರಿನ ಭದ್ರಪ್ಪನವರ ಮರಾಠಿ ಶಾಲೆಯಲ್ಲಿ ಹುಸನಾ ಸಾಬರ ಶಿಕ್ಷಣ ನಡೆಯಿತು. ಹೀಗಾಗಿ ಭದ್ರಪ್ಪನವರು ಅವರಿಗೆ ಶಿಕ್ಷಾಗುರುಗಳೂ ಆದರು. ಮುಂದೆ ಸಾಹಿತ್ಯದ ಗುರುಗಳೂ ಆದರು. ಹುಸನಾ ಅವರು ನಾಲ್ಕನೇ ತರಗತಿಯವರೆಗೆ ಮೋಡಿಯನ್ನೇ ಓದಿ, ಅಕ್ಷರಭ್ಯಾಸದ ನೆಲೆಯನ್ನು ಪಡೆದುಕೊಂಡರು. ಈ ಹಂತಕ್ಕೆ ಬರಲು ಹುಸನಾ ಮಾಸ್ತರರಿಗೆ ಇನ್ನೊಂದು ಶಕ್ತಿ ಬೆನ್ನಬಲವಾಯಿತು. ಅದು ಕೊಹಿನೂರು ಗ್ರಾಮದ ಗುರುಸ್ಥಲ ಮಠದ ಭದ್ರಯ್ಯ ಸ್ವಾಮಿ ಅವರ ಮಾರ್ಗದರ್ಶನ. ಆಗ ಹುಸನಾ ಅವರಿಗೆ ಕೇವಲ ಎಂಟು ವರುಷ ವಯಸ್ಸು. ತನ್ನ ಸಮವಯಸ್ಕರೊಂದಿಗೆ ಕೂಡಿ ಅವರು ಭದ್ರಯ್ಯ ಸ್ವಾಮಿ ಅವರ ಕಿರಾಣಿ ಅಂಗಡಿಯ ಎದುರಿನ ಬಯಲಿನಲ್ಲಿ ಆಟವಾಡುತ್ತಿದ್ದರು. ಬಯಲಾಟದ ಹಾಡುಗಳನ್ನು ಹಾಡುತ್ತ ಕುಣಿಯುತ್ತಿದ್ದರು. ಮಕ್ಕಳ ಆಟವನ್ನು ಅದರಲ್ಲೂ ಹುಸನಾ ಬಾಲಕನ ಹಾಡುಗಾರಿಕೆಯ ಪ್ರತಿಭೆಯನ್ನು ಗುರುತಿಸಿದ ಭದ್ರಯ್ಯ ಸ್ವಾಮಿಗಳು, ಲಾಲಸಾಬರನ್ನು ಕರೆಯಿಸಿ ಹುಸನಾನನ್ನು ಶಿಕ್ಷಣ ಕೊಡಿಸಲು ತಿಳಿಸಿದರು. ಬಡತನದಲ್ಲಿದ್ದ ಲಾಲ ಸಾಬರಿಗೆ ಅದು ಅಸಾಧ್ಯವೆನಿಸಿತು. ಆಗ ಭದ್ರಯ್ಯಸ್ವಾಮಿಗಳು ಹುಸನಾನ ಜವಾಬ್ದಾರಿಯನ್ನು ವಹಿಸಿಕೊಂಡು, ಅವನನ್ನು

ಭದ್ರಪ್ಪ ಗೌಡರು ಮತ್ತು ಅವರ ಗೆಳೆಯರಾಗಿದ್ದ ಕರಬಸಪ್ಪ ಮಹಾಜನ ಅವರ ಕೈಗೆ ಒಪ್ಪಿಸಿದರು. ಹೀಗೆ ಹುಸನಾ ಸಾಹೇಬರ ಶಿಕ್ಷಣಕ್ಕಾಗಿ ಭದ್ರಪ್ಪ ಗೌಡರ ಪಾಠಶಾಲೆಯ ಆಶ್ರಯದೊರಕಿತು. ಉರ್ದು, ಕನ್ನಡ, ಹಿಂದಿ, ಮರಾಠಿ ಭಾಷೆಗಳನ್ನು ಬಲ್ಲವರಾದರು.

ಹುಸನಾ ಸಾಬರು ತಮ್ಮ ಸಂಸಾರ ನಿರ್ವಹಣೆಗಾಗಿ ಒಕ್ಕಲುತನವನ್ನೇ ಅವಲಂಬಿಸಿದರು. ಇವರ ಹೆಂಡತಿ ಚಾಂದಬಿ. ಮಸ್ತಾಕ ಸಾಬ, ಗುಲಾಬ ಸಾಬ ಎಂಬ ಗಂಡು ಮಕ್ಕಳು, ಬಿಸಮಿಲ್ಲಾ, ರೋಶನ್‌ಬಿ ಎಂಬಿಬ್ಬರು ಹೆಣ್ಣುಮಕ್ಕಳು ಹುಸನಾ ದಂಪತಿಗಳಿಗೆ ಹುಟ್ಟಿದರು.

ಆಳಂದದ ಲಾಡ್ಲೇಮಶಾಕ್ ಅವರ ಮನೆತನದ ದೇವರು. ಕೊಹಿನೂರು ಪಹಾಡ್‌ನಲ್ಲಿರುವ ಜಿಂದಾಮದರ್ ದೇವರ ಪರಮ ಭಕ್ತರೂ ಆಗಿದ್ದ ಹುಸನಾ ಸಾಬರು ಅದೇ ಗ್ರಾಮದ ಚೆನ್ನಮಲ್ಲೇಶ್ವರನನ್ನೂ ನಂಬಿದ್ದರು. ಹೀಗೆ ಅವರಿಗೆ ಹಿಂದೂ–ಮುಸಲ್ಮಾನ ದೇವರುಗಳಾಗಲಿ; ಸಂತ–ಸತ್ಪುರುಷರಾಗಲಿ ಅವರಲ್ಲಿ ಯಾವುದೇ ಭೇದವಿರಲಿಲ್ಲ. ಸಮಾನರೂಪದಲ್ಲಿಯೇ ಅವರನ್ನೆಲ್ಲಾ ಗೌರವಿಸುತ್ತಿದ್ದರು. ಹಾರಕೂಡ ಚೆನ್ನಬಸವ ಶಿವಾಚಾರ್ಯರಲ್ಲೂ ಹುಸನಾ ಅವರಿಗೆ ಅಪ್ರತಿಮ ಭಕ್ತಿಯಿದ್ದಿತು. ಆದುದರಿಂದಲೇ ಶಿವಯೋಗಿಗಳನ್ನು ಕುರಿತು ಅವರು ಭಕ್ತಿಯಿಂದ ಹಾಡಿದ್ದಾರೆ. ಚೆನ್ನಬಸವ ಶಿವಯೋಗಿಗಳಿಂದಲೇ ಹುಸನಾಸಾಬರು ಇಷ್ಟಲಿಂಗ ದೀಕ್ಷೆಯನ್ನು ಪಡೆದುಕೊಂಡರು.

ಏಳನೆಯ ವಯಸ್ಸಿನಲ್ಲಿಯೇ ಹುಸನಾಸಾಬರಿಗೆ ಹಾಡುವ ಶಕ್ತಿ ಸಿದ್ಧಿಸಿತ್ತು. ಮೊದಲಿಗೆ ತಮ್ಮ ಗುರುಗಳಾದ ಭದ್ರಪ್ಪನವರ ಹಾಡುಗಳನ್ನು ಹಾಡುವುದಕ್ಕೆ ಆರಂಭಿಸಿದರು. ಒಂದು ಸಲ ಕೊಹಿನೂರು ಗ್ರಾಮದ ಹಿರಿಯರೆಲ್ಲ ಕೂಡಿ ಒಂದು ಸಭೆ ಮಾಡಿದರು. ಅದರಲ್ಲಿ ಬಾಲಕ ಹುಸನಾ ಹಾಡಬೇಕೆಂದು ನಿರ್ಧರಿಸಲಾಯಿತು. ಹಿರಿಯರ ನಿಶ್ಚಯದಂತೆ ಅಂದು ಹುಸನಾ ಎಲ್ಲ ಜನಕ್ಕೆ ಕಾಣಲೆಂದು ಒಂಟೆಯ ಮೇಲೆ ನಿಂತು ತಾನು ಕಲಿತ ಹಾಡುಗಳನ್ನು ಹಾಡಿ, ನೆರೆದ ಜನಸ್ತೋಮಕ್ಕೆ ಮಂತ್ರ ಮುಗ್ಧರನ್ನಾಗಿಸಿದರು.

ಹಾಡು–ಹಾಡುತ್ತಲೆ ಹುಸನಾ ಸಾಬರು ಕವಿಯಾಗಿ ಬೆಳೆಯತೊಡಗಿದರು. ಸ್ವತಃ ಹಾಡುಗಳನ್ನು ರಚಿಸಿತೊಡಗಿದರು. ಅವರ ಹಾಡುಗಳ ಝೇಂಕಾರವು ಕೇವಲ ಕನ್ನಡ ನೆಲದಲ್ಲಿಯಷ್ಟೇ ಅಲ್ಲ; ಆಂಧ್ರ, ಮಹಾರಾಷ್ಟ್ರಗಳ ನೆಲೆಯಲ್ಲೂ ಪ್ರತಿಧ್ವನಿಗೊಟ್ಟಿತು. ಹಲವಾರು ಊರುಗಳಿಗೆ ಸಂಚಾರ ಮಾಡಿ, ಅವರು ತಮ್ಮ ಹಾಡಿನ ಸಭೆಯನ್ನು ಏರ್ಪಡಿಸಿದರು. ಅವರು ಭಜನೆಯ ಸಂದರ್ಭದಲ್ಲಿ ಸವಾಲ್–ಜವಾಬ ಹಾಕುವುದು ಒಪ್ಪುತ್ತಿರಲಿಲ್ಲ. ಭಜನೆಯೆಂದರೆ ದೇವರಿಗೆ ಅರ್ಪಿಸುವ ಪ್ರಾರ್ಥನೆ. ಆದುದರಿಂದ ಎಲ್ಲರೂ ನಿರಹಂಕಾರ ಭಾವದಿಂದ ಭಕ್ತಿ ತುಂಬಿದ ಮನದಿಂದ ಅದರಲ್ಲಿ ಭಾಗಿಗಳಾಗಬೇಕೆಂಬದು ಅವರ ಆಶಯವಾಗಿತ್ತು.

ಹುಸನಾ ಮಾಸ್ತರರು ಸಾಕಷ್ಟು ಪ್ರಸಿದ್ಧಿ ಪಡೆದರು. ಶಿಷ್ಯರುಗಳನ್ನು ಸಂಪಾದಿಸಿದರು. ವೀರಶೈವ-ಶರಣ ಸಂಸ್ಕೃತಿಯ ಪ್ರಸಾರಕ್ಕಾಗಿ ಸಂಚರಿಸಿದರು. ಅವರು ಹಲವಾರು ಹಾಡುಗಳನ್ನು ರಚಿಸಿದರು. ಕೆಲವು ತತ್ತ್ವಪದಗಳಿಗೆ ತಮ್ಮ ನಾಮವನ್ನು ಅಂಕಿತ ಹಾಕುವುದರೊಂದಿಗೆ ಮತ್ತೆ ಕೆಲವು ಪದಗಳಿಗೆ "ಜಿಂದಾಮದರ" ಎಂಬ ಅಂಕಿತವನ್ನು ಹಾಕಿದ್ದಾರೆ.

ಹುಸನಾ ಸಾಬರು ತಮ್ಮ ಜೀವಿತದ ಕೊನೆಯ ಭಾಗವನ್ನು ಸಿರಗಾಪುರದಲ್ಲಿ ಕಳೆದರು. ಈ ಗ್ರಾಮಕ್ಕೆ ಬರುವುದಕ್ಕೆ ಒದಗಿ ಬಂದ ಕಾರಣವನ್ನು ಜನರು ಎರಡು ಬಗೆಯಲ್ಲಿ ತಿಳಿಸುತ್ತಾರೆ. ಸಿರಗಾಪುರದ ಜನರು "ನಮ್ಮ ಊರಿನಲ್ಲಿ ಶ್ರೇಷ್ಠ ಮುಲ್ಲಾ ಇರಲಿಲ್ಲ; ಆದುದರಿಂದ ನಮಗೆ ಒಬ್ಬ ಮುಲ್ಲಾ ಬೇಕೆಂದು" ನಿರ್ಧರಿಸಿ ಹುಸನಾ ಸಾಬರನ್ನು ಕರೆ ತಂದರೆಂದು ಹೇಳಲಾಗುತ್ತದೆ. ಇನ್ನೊಂದು ಹೇಳಿಕೆ ಬೇರೆ ಇದೆ: ಹುಸನಾ ಸಾಬರು ತಮ್ಮ ಹಾಡುಗಾರಿಕೆಯಿಂದ ಸಾಕಷ್ಟು ಬೆಳ್ಳಿ-ಬಂಗಾರ ಸಂಗ್ರಹಿಸಿದರಂತೆ; ಅದರಿಂದ ಕೊಹಿನೂರಿನಲ್ಲಿ ಒಂದಿಷ್ಟು ಹೊಲವನ್ನು ಖರೀದಿಸಿದರು. ಅದರ ನೊಂದಣಿ ಮಾಡಿಕೊಳ್ಳಬೇಕು ಎನ್ನುವಾಗಲೇ ರಜಾಕಾರರ ಹಾವಳಿ ಆರಂಭವಾಯಿತು. ನೊಂದಣಿ ಕಾರ್ಯ ಅಷ್ಟಕ್ಕೆ ನಿಂತಿತು. ಹೊಲದ ಮಾಲಿಕನಿಗೆ ಎಲ್ಲ ಹಣವು ಕೊಟ್ಟದ್ದಾಗಿತ್ತು. ಮುಂದೆ ರಜಾಕಾರರ ಹಾವಳಿ ತಣ್ಣಗಾಯಿತು. ವಾತಾವರಣ ಶಾಂತವಾಯಿತು. ಆಗ ಹೊಲದ ಮಾಲಿಕನಿಗೆ ಹುಸನಾ ಸಾಬರು ಹೊಲದ ನೊಂದಣಿಗಾಗಿ ಕೇಳಿದರಂತೆ, ಆಗ ಹೊಲದ ಮಾಲಿಕನು ನೊಂದಣಿ ನಿರಾಕರಿಸಿ "ನೀನು ನನಗೆ ಹಣವೇ ಕೊಟ್ಟಿಲ್ಲ" ಎಂದನಂತೆ. ಹಣವೂ ಹೋಯಿತು, ಹೊಲವು ಸಿಗಲಿಲ್ಲ. ಇದರಿಂದ ಬೇಸರಗೊಂಡ ಹುಸನಾ ಸಾಬರು ಕೊಹಿನೂರು ಗ್ರಾಮಬಿಟ್ಟು ಸಿರಗಾಪುರದಲ್ಲಿ ಬಂದು ನೆಲೆಸಿದರಂತೆ. ಸಿರಗಾಪುರ ಗ್ರಾಮದ ಧರ್ಮರಾಯ ಬಿರಾದರ ಅವರು ಅವರಿಗೆ ಆಶ್ರಯದಾತರು. ಅವರ ಬಟ್ಟೆ ಅಂಗಡಿಯಲ್ಲಿ ಹುಸನಾ ಸಾಬರು ಟೇಲರಿಂಗ್ ವೃತ್ತಿ ಮಾಡಿಕೊಂಡು ಜೀವಿಸತೊಡಗಿದರು.

ಕ್ರಿ.ಶ. ೧೯೫೨ರಲ್ಲಿ ಹುಸನಾ ಸಾಬರು ಇಹಲೋಕ ಯಾತ್ರೆ ಪೂರೈಸಿದರು. ಅವರ ಸಮಾಧಿ ಸಿರಗಾಪುರದಲ್ಲಿದೆ. ಹುಸನಾ ಸಾಬರು ಹಲವಾರು ಕಲೆಗಳಲ್ಲಿ ಬಲ್ಲವರಾಗಿದ್ದರು. ಹಾರ್ಮೋನಿಯಂ, ತಬಲಾ, ದಮಡಿ, ಏಕತಾರಿ, ಪಿಟೀಲು, ಸಾರಂಗ ಮುಂತಾದ ಸಂಗೀತ ವಾದ್ಯಗಳನ್ನು ಸಮರ್ಥವಾಗಿ ನುಡಿಸುತ್ತಿದ್ದರು. ಹುಸನಾ ಸಾಬರು ಇಂದಿಲ್ಲ. ಅವರು ರಚಿಸಿಕೊಟ್ಟು ಹೋಗಿರುವ ತತ್ತ್ವಪದ, ಮೋಹರಮ್ ಹಾಡುಗಳು, ಡೊಳ್ಳಿನಪದ, ಗೀಗೀ ಪದಗಳು, ಬಯಲಾಟ, ಬಯಲಾಟದ ಪದಗಳು ಇವುಗಳಲ್ಲಿ ಉಳಿದುಕೊಂಡಿದ್ದಾರೆ. ಅವರ ಹಾಡುಗಳಲ್ಲಿ ನಾಡು-ದೇಶದ ಪ್ರೇಮವಿದೆ;

ರಾಷ್ಟ್ರ ಭಕ್ತಿಯಿದೆ, ರಾಷ್ಟ್ರ ಪ್ರೇಮಿಗಳ ಬಗೆಗೆ ಗೌರವವಿದೆ, ವೀರಶೈವ ಸಂಸ್ಕೃತಿಯ ಬಗೆಗಿನ ಹಿರಿಮೆ ಒಡೆದು ಕಾಣುತ್ತದೆ.

ಹುಸನಾ ಸಾಬರ ಎರಡು ತತ್ತ್ವಪದಗಳನ್ನು ನಿದರ್ಶನಕ್ಕಾಗಿ ಕೊಡಲಾಗಿದೆ:

ತಿಳಿನೀರಿಗಿಂತ ತಿಳಿ

ತಿಳಿನೀರಿಗಿಂತ ತಿಳಿಯ ಹಾರಕೂಡ ಮುತ್ತ್ಯಾನ ತಿಳಿದವ
ಓಂ ಸೋಂ ಸೂತ್ರದ ಒಲಿಸಿ ನೇತ್ರಿಯಾದವರು
ಪೀರನ ಪಂಜಿ ಪವಿತ್ರವೆಂದು ತ್ರಿಶೂಲ ಪಿಡಿದವರು
ನವದ್ವಾರದ ಮುಂದ ನವಿಲಿನ ಪಂಕ ನರ್ತನ ನುಡಿಸುವರು
ಕಾಮ ಕ್ರೋಧ ಮದ ಮೋಹ ಸುಡಲಿಕ ಊದವನಿಟ್ಟವರು ॥ ೧ ॥

ಪರಪೀಡಿ ಎಂಬ ಪದ್ಯವ ಮಾಡಿ ಪಟಾಕಿ ಎತ್ತಿದವರು
ಇಷ್ಟ, ಪ್ರಾಣ, ಭಾವ ಮೂರು ಒಟ್ಟಿಲೆ ದೃಷ್ಟಿಯನಿಟ್ಟವರು
ಬಾರ ಮಂದೀಗ ಬಾರ ಜ್ಯೋತಿರ್ಲಿಂಗ ಕಸಿಕಟ್ಟಿರುವರು
ಊಘಂತ ಊದಿದ ಸುಟ್ಟಿದ ಬೀಡಿ ಕಿಸಿಯೊಳಗಿಟ್ಟವರು
ಆರು ಮೂರು ಮುವತ್ತಾರು ಕಂಗಳ ಮಧ್ಯದಿ ತೋರುವರು ॥ ೨ ॥

ಕುಲಾಚಾರ ಕುಶಲತ್ವದ ಸಂಗತ ಕುಲುಕುಲು ನಗುವರು
ಇಪ್ಪತ್ತೊಂದು ಸಾವಿರ ಆರುನೂರು ಜಪಮಣಿ ಎಣಿಸುವರು
ತನುಮನವ ಮೊದಲೆ ಒಪ್ಪಿಸಿ ನಿರಾಶಿಯಾದವರು
ದಶನಾದ ಪೈಕಿ ಒಂಬತ್ತನೆ ನಾದ ನಗಾರಿ ನುಡಿಸುವರು
ಒಂದೇ ಮನಸಿನಿಂದ ಒಂಬತ್ತು ಲಿಂಗದ ಪೂಜೆಯ ಮುಗಿಸುವರು ॥ ೩ ॥

ಕಿರೀಟ ಕುಂಡಲ ತ್ರಿಮುಂಡ್ರಧಾರಿ ವಿಭೂತಿ ಧರಿಸುವರು
ಹಾಲುಗಡಗ ಬಿಟ್ಟು ಹಾಲಕುಡದ ಮೂಲಮಂತ್ರ ತೋರಿಸುವರು
ಹಾಳು ಬಿದ್ದ ಹಾರಕೂಡ ಗ್ರಾಮಕ ಜೀವ ತುಂಬಿಸಿದವರು
ಅನುಭವ ಮಂಟಪ ಗೋತ್ರದಲ್ಲಿ ಉನ್ಮನಿ ಸೇರಿದವರು
'ಕೊಳ್ಳೂರು ಹುಸನ' ಕೃಪಾಪಡಿದು ಹೀಂಗ ಹಾಡಿದ ಅನುಭವಿಕರು॥ ೪ ॥

(ಕಲ್ಯಾಣ ನಾಡಿನ ಪರಂಜ್ಯೋತಿ. ಪು.೩೨೨)

ಬಡತಾನದಾಗ ಬಡಿವ್ಯಾರ

ಬಡತನದಾಗ ಬಡಿವ್ಯಾರ । ನಮ್ಮೂರ
ಈ ಊರ ಹೆಸರ ಕಾಯಾಪೂರ ॥ ಪ ॥

ಒಳಗ ಹಾರ ಐದು ಮಂದಿ ಗೌಡರ
ಪರಬ್ರಹ್ಮವಸ್ತು ಒಬ್ಬನೇ ಸರಕಾರ
ಬಡತಾನದಾಗ ಬಡಿವ್ಯಾರ । ನಮ್ಮೂರ ॥ ೧ ॥

ಈ ಊರ ಹೆಸರ ಕಾಯಾಪೂರ
ಹತ್ತು ಮಂದಿ ಸುತ್ತ ಸುಳಿವವರ
ಸಪ್ತ ವ್ಯಸನ ಜತ್ತಾಗಿ ಇರುವವರ
ಬಡತಾನದಾಗ ಬಡಿವ್ಯಾರ । ನಮ್ಮೂರ ॥ ೨ ॥

ಈ ಊರ ಹೆಸರ ಕಾಯಾಪೂರ
ಊರ ಅವಾರ ಪೋಣೆಂದೋನವಾರ
ಒಂಬತ್ತು ಖಿಡಕಿಗಳು ಕಟ್ಟಿ ನವದ್ವಾರ
ಬಡತಾನದಾಗ ಬಡಿವ್ಯಾರ । ನಮ್ಮೂರ ॥ ೩ ॥

ಈ ಊರ ಹೆಸರ ಕಾಯಾಪೂರ
ಏಕವೀಸ ಸ್ವರ್ಗ ಒಳಗ ಭರಪೂರ
ಎಂಟು ಮಂದಿ ಕಾವಲುದಾರ ಅದಾರ
ಬಡತಾನದಾಗ ಬಡಿವ್ಯಾರ । ನಮ್ಮೂರ ॥ ೪ ॥

ಈ ಊರ ಹೆಸರ ಕಾಯಾಪೂರ
ಪಾಡಕೊಳ್ಳೂರ ಪಶ್ಚಿಮಕ ಜಿಂದಾಮದಾರ
ಕೂಡಲೂರ ಸೀಮಿಧಾಟಿ ನಡೀರಿ ಭರಾದರ
ಬಡತಾನದಾಗ ಬಡಿವ್ಯಾರ । ನಮ್ಮೂರ ॥ ೫ ॥

(ಕೊಳ್ಳೂರ ಹುಸನಾ ಸಾಹೇಬ. ಪು.೦೮)

ಬ್ರಹ್ಮ ಬರೆದಿದ ಲೇಖ

ಸುಖ ದುಃಖ ಸಂಭ್ರಮಕ
ಈ ಶರೀರಕ, ಬ್ರಹ್ಮ ಬರೆದಿದ ಲೇಖ ॥ ಪ ॥

ಸ್ವಾರ್ಥ ನಿಸ್ವಾರ್ಥ ಹಿಡಿ ಅರ್ಥ ಗುರ್ತ
ಬ್ರಹ್ಮೀಯ ಭ್ರಾಂತೆ ಕನಸಿನ ಪರಿಯಂತೆ
ಸ್ವಾದಬೇಕು ಶಾಂತಿ ಲೀನ ಠಾವಿನಂತೆ ಉದ್ಧಾರಕ ॥ ೧ ॥

ಅವಿಚಾರ ಪರದಿ ಎಂದ ನೀ ಹರದಿ
ಒಡಲೊಳು ಉಕ್ಕಿ ಕಡಲಕ್ಕೆ ಕೊಡು ನೀ ಧಕ್ಕಿ
ಸರ್ವಕ ತೇಜ ಆನಂದ ಬೀಜ ಜನ್ಮಕ ॥ ೨ ॥

ತತ್ವದ ಮಸಿಯು ಅಲ್ಲ ಹುಸಿಯು
ಶಿವನಾಮ ಸ್ಮರಣ ಶಾಶ್ವತ ಪೂರ್ಣ
ಆಗಿ ತ್ಯಾಗಿ ಅನಿಸೋ ಯೋಗಿ ಧಾರ್ಮಿಕ ॥ ೩ ॥

ಗುರು ಚರಿತ್ರ ಪರಮ ಪವಿತ್ರ
ಓದಿದವ ಪುತ್ರ ಸಂಚಿತ ಸೂತ್ರ
ಆಗತಾದ ಹಸನ ಹೇಳ್ಯಾನ ಹುಸನ ಆತ್ಮಕ ॥ ೪ ॥

(ಅದೇ. ಪು.೨೪)

ಒಡಗೂಡಲಾಕ ಒಡೆಯನು ಬೇಕ

ಒಡಗೂಡಲಾಕ ಒಡೆಯನು ಬೇಕ
ಶಿವಶರಣರ ನುಡಿ ನುಡಿ ಸಾಕ ॥ ಪ ॥

ಭವ ದಾಟಲಾಕ ಭಾವಶುದ್ಧ ಇರಬೇಕ
ಜನನ–ಮರಣವನ್ನು ತಪ್ಪಿಸಬೇಕ ॥ ೧ ॥

ಸಂಶಯ ಪಾತಕ ಸುತ್ತುವುದು ಸೂತಕ
ಹಮ್ಮ-ಬಿಮ್ಮುಗಳನ್ನು ಬಿಟ್ಟು ಸುಮ್ಮನಿರಬೇಕ ॥ ೨ ॥

ಬಸವ ಬಸವ ಓಂ ಶ್ರೀ ಗುರು ಬಸವ
ಬಸವನ ನಾಮ ನುಡಿದ ಹುಸನಾ ಶಿಶುವ ॥ ೩ ॥

(ಸಿರಗಾಪುರದಲ್ಲಿರುವ ಅವನ ವಂಶಸ್ಥರು ಈ ವಿವರಗಳನ್ನು ನೀಡಿದ್ದಾರೆ.)




ಹುಸನಾ ಮಾಸ್ತರ ಅವರು ವಾಸಿಸುತ್ತಿದ್ದ ಮನೆ (ಸಿರಗಾಪುರ).




ಸಿರಗಾಪೂರದಲ್ಲಿ ನೆಲೆಸಿರುವ ಹುಸನಾ
ಮಾಸ್ತರರ ವಂಶಬಳ್ಳಿ.



ಹುಸನಾ ಮಾಸ್ತರರ ಆರಾಧ್ಯ ದೇವರು ಜಿಂದಾಮದರ್ ದರ್ಗಾ
(ಕೊಹಿನೂರು).



ಜಿಂದಾಮದರ ದರ್ಗಾದ ಒಳಾಂಗಣ ನೋಟ.




ಜಿಂದಾಮದರ ದರ್ಗಾದ ಹೊರಾಂಗಣ ನೋಟ.




ಜಿಂದಾಮದರ ದರ್ಗಾದ ದೂರದ ನೋಟ.



ಹುಸನಾ ಮಾಸ್ತರರ
ಮನೆಯ ದೇವರು ಲಾಡ್ಲೇ ಮಶಾಕ್ ದರ್ಗಾದ ಪ್ರವೇಶದ್ವಾರ (ಆಳಂದ).



ಲಾಡ್ಲೇ ಮಶಾಕ್ ಅವರ ದರ್ಶನ ಮಜಾರು



ಲಾಡ್ಲೇ ಮಶಾಕ್ ದರ್ಗಾ (ಆಳಂದ)

೬. ರಾಮಜಿ ಜಮಾದಾರ (ಕ್ರಿ.ಶ. ಸು ೧೮೭೨-೧೯೬೦)

ಖಾನಾಪುರ(ಕೆ) ಗ್ರಾಮವು ವಿಚಿತ್ರ ಪರಿಸರದ ಗ್ರಾಮ. ಈ ಊರನ್ನು ಪ್ರವೇಶ ಮಾಡಿದರೆ ಕಿವಿಗಳ ಮೇಲೆ ಮೂರು ಭಾಷೆಗಳ ಧ್ವನಿಗಳು ಬೀಳುತ್ತವೆ: ಕನ್ನಡ, ಮರಾಠಿ ಮತ್ತು ತೆಲಗು. ಇಂತಹ ಪರಿಸರದಲ್ಲಿ ಕೋಳಿ ಮನೆತನದಲ್ಲಿ ಜನಿಸಿದ ರಾಮಜಿ ಎಂಬ ವ್ಯಕ್ತಿಯು ತತ್ತ್ವಪದಗಳನ್ನು ಕಟ್ಟುವುದರ ಮೂಲಕ ಕನ್ನಡವನ್ನು ಉಳಿಸುವುದರೊಂದಿಗೆ, ಅದರ ಪ್ರಸಾರ ಕಾರ್ಯದಲ್ಲಿ ಪ್ರಯತ್ನಶೀಲನಾದುದು ಅತ್ಯಂತ ಸ್ತುತ್ಯರ್ಹ ಸಂಗತಿ. ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ನೆಲೆಯಾದರೂ ಇದೊಂದು ಗಡಿಗ್ರಾಮ. ಹೀಗಾಗಿ ಇಲ್ಲಿ ವೈವಿಧ್ಯ ಭಾಷಾ ಸಂಸ್ಕೃತಿಯ ಸಂಗಮವಿರುವುದನ್ನು ಕಾಣಬಹುದು.

ರಾಮಜಿಯ ತಂದೆ ಬಾಳು ಜಮಾದಾರ. ಅವನು ಊರಿನ ಗೌಡ-ಕುಲಕರ್ಣಿಗಳ ಕೈಯಲ್ಲಿ ಜಮಾದಾರಿಕೆಯ ವೃತ್ತಿಯನ್ನು ನಿರ್ವಹಿಸುತ್ತಿದ್ದನು. ತನಗಿದ್ದ ತುಕಡಿ ಭೂಮಿಯಲ್ಲಿ ಕೃಷಿ ಕಾಯಕವನ್ನು ಮಾಡುತ್ತ ಉಪಜೀವನ ನಡೆಸುತ್ತಿದ್ದ ಸಾದಾ ಮನುಷ್ಯ. ಬಾಳುನ ಹೆಂಡತಿ ಪುತಳಾಬಾಯಿ. ಮುಗ್ಧ, ಹಳ್ಳಿಯ ಸೊಗಡನ್ನು ಮೈಗೊಂಡ ಹದಿಬದೆ. ಗಂಡನೊಡನೆ ಹೊಲದ ಕೆಲಸದಲ್ಲಿ ಮೈಮುರಿದು ದುಡಿಯುತ್ತಿದ್ದ ಗಟ್ಟಿಗಿತ್ತಿ. ಈ ದಂಪತಿಗಳಿಗೆ ರಾಮಜಿಯವರು ಮಗನಾಗಿ ಹುಟ್ಟಿದ್ದು ಕ್ರಿ.ಶ.ಸು. ೧೮೭೨ರಲ್ಲಿ.

ತಂದೆಯಂತೆ ರಾಮಜಿಯಾದರೂ ಯಾವುದೇ ಶಾಲೆಗೆ ಶಿಕ್ಷಣಕ್ಕಾಗಿ ಹೋಗಲಿಲ್ಲ. ಅಂತಹ ಅನುಕೂಲಸ್ಥ ಪರಿಸರವೂ ಇರಲಿಲ್ಲ. ಹೀಗಾಗಿ ಹಳ್ಳಿಯ ದನಕಾಯುವ ಹುಡುಗನಾಗಿಯೆ ಬೆಳೆಯುತ್ತ ರಾಮಜಿ ಅವರು ನಿಸರ್ಗದ ಸಹಜ ಒಡನಾಟದಿಂದ ಅಪೂರ್ವ ಕಲ್ಪನಾ ಶಕ್ತಿಯನ್ನು ರೂಢಿಸಿಕೊಂಡರು.

ತಂದೆಯ ಮರಣಾನಂತರದಲ್ಲಿ ಜಮಾದಾರಿಕೆಯ ವೃತ್ತಿಯನ್ನು ಹೆಗಲಿಗೆ ಏರಿಸಿಕೊಂಡು ನಡೆಸುತ್ತ; ಒಕ್ಕಲುತನದಲ್ಲೂ ಒಂದು ಕೈಯನ್ನು ಇಟ್ಟು ದುಡಿದರು. ರಾಮಜಿಯವರ ಹೆಂಡತಿ ಧೊಂಡೊಬಾಯಿ. ಬಾಳಪ್ಪ ಮತ್ತು ರಾವಣ ಎಂಬ ಇಬ್ಬರು ಮಕ್ಕಳು.

ರಾಮಜಿಯವರಲ್ಲಿ ಅದಮ್ಯವಾದ ದೈವೀ ಭಕ್ತಿಯಿದ್ದಿತು. ಅವರ ದೈವೀ ಭಕ್ತಿಯಲ್ಲಿ ಜನಾಂಗಿಕ ಸಾಮರಸ್ಯವೆಂಬುದು ಸಹಜವಾಗಿಯೇ ಕೂಡಿಕೊಂಡು ಬಂದಿತ್ತು. ಅದಕ್ಕೆ ಯಾವುದೇ ಪ್ರೇರಣೆಯು ಇರಲಿಲ್ಲ; ಯಾವುದೇ ಒತ್ತಾಸೆ ಇರಲಿಲ್ಲ. ತಮ್ಮ ದೇವರ ಮೇಲೆ ಎಷ್ಟು ಭಕ್ತಿ ಇದ್ದಿತೋ ಅಷ್ಟೇ ಭಕ್ತಿ ಊರಿನ ದೇವರಾದ ದವಲ್‌ಮಲಿಕ್ ಸಾಬನ ಮೇಲೂ ಇದ್ದಿತು. ಅವರ ದೃಷ್ಟಿಯಲ್ಲಿ ಹಿಂದೂ–ಮುಸ್ಲೀಮರೆಂಬ ಭೇದವಿರಲಿಲ್ಲ. ರಾಮಾಯಣದ ರಾಮನಷ್ಟೇ ಅವರಿಗೆ ರಾವಣನೂ ಪೂಜನೀಯ ವ್ಯಕ್ತಿಯೇ ಆಗಿದ್ದುದು ವಿಶೇಷ. ಆದುದರಿಂದಲೇ ತಮ್ಮ ಒಬ್ಬ ಮಗನಿಗೆ 'ರಾವಣ' ಎಂದು ನಾಮಕರಣ ಮಾಡಿದರು. ಹಳ್ಳಿಯ ಮನಸ್ಸುಗಳು ದೋಷಗಳನ್ನು ಆರಿಸುವುದಿಲ್ಲ. ಒಳ್ಳೆಯ ಗುಣಗಳಿಗೆ ಮನಸ್ಸು ಕೊಡುತ್ತವೆ. ಅಂತಹ ಹಳ್ಳಿಯ ಮನದ ಸ್ವಭಾವ ರಾಮಜಿಯಲ್ಲಿದ್ದಿತ್ತು.

ದಿನನಿತ್ಯವೂ ಹಣಮಂತ ದೇವರ ಗುಡಿಯಲ್ಲಿ ದೀಪ ಬೆಳಗಿಸುವ ಕಾರ್ಯವೂ ರಾಮಜಿಯವರದಾಗಿತ್ತು. ಹಬ್ಬ–ಉತ್ಸವಾದಿಗಳ ಸಂದರ್ಭದಲ್ಲಿ ಅವರು ಗುಡಿಗೂ ಹೋಗುತ್ತಿದ್ದರು. ದರ್ಗಾಕ್ಕೂ ಹೋಗುತ್ತಿದ್ದರು. ವರ್ಷದಲ್ಲಿ ಎರಡು ಮೂರು ಸಲ ಘೋಡವಾಡಿಗೆ ಹೋಗಿ ಅಲ್ಲಿನ ಇಸ್ಮಾಯಿಲ್ ಖಾದ್ರಿಯ ದರ್ಶನ ಹೊಂದಿ ಬರುತ್ತಿದ್ದರು.

ಮೋಹರಮ್ ಹಬ್ಬದ ಆಚರಣೆಯ ಸಂದರ್ಭದಲ್ಲಿ ರಾಮಜಿಯವರು ಮುಸ್ಲೀಮ ಬಾಂಧವರೊಂದಿಗೆ ಕೂಡಿ ಹಬ್ಬವನ್ನು ಆಚರಿಸುತ್ತಿದ್ದರು. ಸ್ವತಃ ದೌಲ್‌ಮಲ್ಲಿಕ್‌ಸಾಬ ಮತ್ತು ಇಸ್ಮಾಯಿಲ್ ಖಾದ್ರಿ ದೇವರ ಅಂಕಿತದಲ್ಲಿ ಮೋಹರಮ್ ಹಾಡುಗಳನ್ನು ರಚಿಸಿ, ಹಾಡುತ್ತಿದ್ದರು. ಹೀಗಾಗಿ ರಾಮಜಿ ಅವರ ರಚನೆಯಲ್ಲಿ ನೂರಾರು ಮೋಹರಮ್ ಹಾಡುಗಳೂ ಇರುವುದನ್ನು ಜನರು ಗುರುತಿಸುತ್ತಾರೆ. ಕೆಲವರು ಇಂದಿಗೂ ಅವುಗಳನ್ನು ಹಾಡುತ್ತಾರೆ. ಅವರು ಸ್ವತಃ ಅಲಾವಿ ಪೀರನನ್ನು ಹಿಡಿದು ಕುಣಿಯುತ್ತಿದ್ದರು.

ಆ ಸಮಯದಲ್ಲಿ ರಾಮಜಿಯವರ ಮೈಯ್ಯಲ್ಲಿ ದೌಲ ಮಲ್ಲಿಕ್ ಸಾಬ ಬರುತ್ತಿದ್ದನೆಂದು ಜನರು ಭಾವಿಸುತ್ತಿದ್ದರು. ದೇವರು ಮೈಯ್ಯಲ್ಲಿ ಬಂದಾಗ ಅವರಿಗೆ ಬಾಹ್ಯದ ಪರಿವೆ ಇರುತ್ತಿರಲಿಲ್ಲ. ಆವೇಶದಿಂದ ಕುಣಿಯುತ್ತಿದ್ದರು. ಐದಾರು ಜನರು ಹಿಡಿದರೂ ಅವರಿಗೆ ಮಣಿಯುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಭಕ್ತರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ದೇವರ ಎದುರಿಗೆ ಬಂದು ನಿಂತುಕೊಳ್ಳುತ್ತಿದ್ದರು. ದೌಲ್‌ಮಲ್ಲಿಕ್ ಸಾಬನನ್ನು ತುಂಬಿಕೊಂಡು ರಾಮಜಿ ಅವರು ತಮ್ಮದೆ ಧಾಟಿಯಲ್ಲಿ ಭಕ್ತರುಗಳಿಗೆ 'ಹೇಳಿಕೆ'ಯನ್ನು ಹೇಳುತ್ತಿದ್ದರು.

ರಾಮಜಿಯವರಿಗೆ ಕನ್ನಡದೊಂದಿಗೆ ಮರಾಠಿ, ತೆಲಗು, ಉರ್ದು ಭಾಷೆಗಳು ಮಾತನಾಡುವುದಕ್ಕೆ ಬರುತ್ತಿದ್ದವು. ಅವರು ಮರಾಠಿ ಸಂತರ ಅಭಂಗಗಳನ್ನು ಮೈ ಮರೆಸುವಂತೆ ಹಾಡುತ್ತಿದ್ದರು. ಸಂತ ಭಜನೆಯನ್ನೂ ಮಾಡುತ್ತಿದ್ದರು. ಆದರೆ ಪರ

ಓಘದಲ್ಲಿ ಶರಣರ ಭಜನೆಯನ್ನೂ ಮರೆಯಲಿಲ್ಲ. ಪರಭಾಷೆಗಳ ಗದ್ದಲದಲ್ಲಿ ತಮ್ಮ ನೆಲದ–ನಾಲಿಗೆಯ ನುಡಿಯಾದ ಕನ್ನಡವನ್ನು ಕಳೆದುಕೊಳ್ಳಲಿಲ್ಲ. ಕನ್ನಡದಲ್ಲಿಯೇ ಮೋಹರಮ್ ಮತ್ತು ತತ್ತ್ವಪದಗಳನ್ನು ಹಾಡಿದುದು ಹೆಚ್ಚುಗಾರಿಕೆಯೂ ಹೌದು; ಮೆಚ್ಚುವಂತಹದ್ದೂ ಹೌದು.

ತೊಂಬತ್ತೆಂಟು ವರ್ಷಗಳ ದೀರ್ಘಕಾಲ ಬದುಕಿದ ರಾಮಜಿಯವರು ಕ್ರಿ.ಶ. ೧೯೯೦ರಲ್ಲಿ ಇಹಲೋಕವನ್ನು ತ್ಯಜಿಸಿದರು. ರಾಮಜಿಯವರು ರಚಿಸಿದ ಎರಡು ಪದಗಳನ್ನು ಕೊಡಲಾಗಿದೆ:

ಶರಣ ಬಸವಣ್ಣ

ಅಣ್ಣಾ ಶರಣ ಬಸವಣ್ಣ
ಅಣ್ಣಾ ಧರಗಿ ನೀ ಬಾರಣ್ಣಾ ॥ ಪ ॥

ಕಲ್ಯಾಣ ನಿನ್ನದು ನಾಡಣ್ಣ
ಕಲ್ಯಾಣ ಮಾಡಿದಿ ನೋಡಣ್ಣಾ
ಕಲ್ಯಾಣ ಕೂಗುತದ ಕೇಳಣ್ಣಾ
ಬಸವಣ್ಣ ಹುಟ್ಟಿ ಮತ್ತ ಬಾರಣ್ಣ ॥ ೧ ॥

ಮ್ಯಾಲ–ಕೀಳಾ ಕುಲ ತ್ಯೆಗೆದಣ್ಣಾ
ಜಾತಿ–ಗೀತಿ ಎಲ್ಲಾ ಅಳಿದಣ್ಣಾ
ಮನುಷ್ಯರೊಳಗ ನೀ ದೇವರಾಗಿ
ಮನಸ್ಸಿನೊಳಗ ನೀ ಉಳಿದೆಣ್ಣಾ ॥ ೨ ॥

ಶಿವನ ಭಕ್ತ ನೀ ಬಸವಣ್ಣಾ
ರಾಮಗ ಭಕ್ತನು ಹನುಮಣ್ಣಾ
ಅವನ ಪಾದಕ ನಾ ಹೊಂದಿದೆಣ್ಣಾ
ಮುಕ್ತಿಯ ಬೇಡುವೆ ಬಸವಣ್ಣಾ ॥ ೩ ॥

ಡಾಂಭಿಕ ಲೋಕ

ಡಾಂಭಿಕ ಲೋಕದಾಟ ನೋಡಣ್ಣ
ಕೇಳೋ ಜಾಣ ॥ ಪ ॥

ಸತ್ಯ–ಗಿತ್ಯಾ ಕರಗಿ ಹೊಯ್ತಣ್ಣಾ
ಈ ಲೋಕದೊಳಗ ಮಿತ್ಯದಾಟವೇ ಮೇಲೆ ಆಯ್ತಣ್ಣಾ
ನೀತಿ ನೆಲವ ಕಾಣದಾಯ್ತು
ರೀತಿ–ಗೀತಿ ಕೆಟ್ಟು ಹೋಯ್ತಣ್ಣಾ ॥ ೧ ॥


ಗಡ್ಡ–ಮೀಸಿ ಬಿಟ್ಟ ನೋಡಣ್ಣಾ
ತಲಿಯ ಮ್ಯಾಲೆ ಗುಡ್ಡ ಕೂದಲ ಜುಟ್ಟಾ ನೋಡಣ್ಣಾ
ಸಾಧುರಾಂಗ ಮ್ಯಾಲೆ ತೋರುತ
ಚೋದು ಗುಣಗಳ ತುಂಬಿಕೊಂಡರಣ್ಣಾ ॥ ೨ ॥

ಹಗಲು ಹೋಗಿ ಕತ್ತಲಾಯ್ತಣ್ಣಾ
ಈ ಭೂಮಿ ಮ್ಯಾಲ ಕತ್ತಲೆಲ್ಲ ಗಾಢವಾಯ್ತಣ್ಣಾ
ಕಣ್ಣ ಕಾಣದ ಕುರುಡ ನಾವಣ್ಣ
ಎಲ್ಲಿ ನೋಡಿದಲ್ಲಿ ಎಡವಿ–ಎಡವಿ ಬೀಳುತೇವಣ್ಣಾ ॥ ೩ ॥

ಮಂಗನಾಟ ನಡೆಯುತಾದಣ್ಣಾ
ಅಲ್ಲಿ ನೆರದವರೆಲ್ಲರು ಅಂಗ ಹೀನರ ಕೂಟ ಕಾಣಣ್ಣಾ
ತಾಳ–ಮೇಳವಿಲ್ಲ ನೋಡಣ್ಣಾ
ಗೋಳ ತುಂಬಿದ ಬಾಳ ಕಾಣಣ್ಣಾ ॥ ೪ ॥

ಯಾರೀಗ್ಯಾರು ಹೊಂದಿಕ್ಕಿಲ್ಲ್ಯಾಣ್ಣ ?
ಭಂಡಾಟ ನಡೆದು
ಡಂಭ ಲೋಕದ ಕೇಡು ನೋಡಣ್ಣಾ
ಕೃಪ ಮಾಡಬೇಕು ರಾಮ ಭಕ್ತ ಅವನೆ ಹನುಮಣ್ಣಾ ॥ ೫ ॥

(ಈ ವಿವರಗಳನ್ನು ನೀಡಿದವರು ರಾಮಜಿಯವರ ಸೊಸೆ ೭೫ ವರ್ಷಗಳ ವಯಸ್ಸಿನ ಲಕ್ಷ್ಮಿಬಾಯಿ ಅವರು.)



ರಾಮಜಿ ಜಮಾದಾರ ಅವರ ಮನೆ (ಖಾನಾಪುರ-ಕೆ).



ರಾಮಜಿ ಜಮಾದಾರ ಅವರ ಸೊಸೆ ಲಕ್ಷ್ಮಿಬಾಯಿ.



ರಾಮಜಿ ಜಮಾದಾರ ಅವರ ಆರಾಧ್ಯ ದೇವರು ಹನುಮಾನ
ದೇವಾಲಯ (ಖಾನಾಪುರ-ಕೆ).



ರಾಮಜಿ ಜಮಾದಾರ ಅವರ ಆರಾಧ್ಯ ದೇವರು ದೌಲಮಲಿಕ್
ದರ್ಗಾ. (ಖಾನಾಪುರ-ಕೆ).

೭. ಚೆನ್ನಯ್ಯ ಸ್ವಾಮಿ ಹೊಟಗಿಮಠ (ಕ್ರಿ.ಶ. ಸು. ೧೮೯೫–೧೯೭೦)

ಮೈಸೂರಿನವರೆಗೂ ಬಸವಕಲ್ಯಾಣದ ಕೀರ್ತಿ ಒಯ್ದು ಮುಟ್ಟಿಸುವುದಕ್ಕೆ ಕಾರಣರಾದ ವ್ಯಕ್ತಿ ಈ ಚೆನ್ನಯ್ಯ ಸ್ವಾಮಿ ಹೊಟಗಿಮಠ. ಈತನ ಪೂರ್ವಿಕರು ಇಂದು ಮಹಾರಾಷ್ಟ್ರದಲ್ಲಿ ಬರುವ ಹೊಟಗಿ (ಸೋಲಾಪುರ ಜಿಲ್ಲೆ) ಗ್ರಾಮದವರು. ಯಾವುದೋ ಕಾಲದಲ್ಲಿ ಅವರು ಹೊಟಗಿಯಲ್ಲಿನ ಮಠವನ್ನು ಬಿಟ್ಟು, ಬಸವಕಲ್ಯಾಣದ ಪರಿಸರಕ್ಕೆ ಬಂದು ಮಂಠಾಳ ಗ್ರಾಮದಲ್ಲಿ ನೆಲೆನಿಂತರು. ಹೀಗಾಗಿ ಚೆನ್ನಯ್ಯನವರ ಸ್ವಗ್ರಾಮವು ಮಂಠಾಳವಾಯಿತು. ಅವರ ಹೆಸರಿನ ಮುಂದೆ ಹಿಂದಿನ ಊರಿನ ಹೆಸರು “ಹೊಟಗಿಮಠ”ವೆಂದು ಉಳಿದುಕೊಂಡಿತು.

ಚೆನ್ನಯ್ಯನವರ ತಂದೆ ಮಠಸ್ಥರು. ಪುರೋಹಿತ ಕಾರ್ಯಗಳನ್ನು ನಡೆಸುತ್ತಿದ್ದರು. ಪುರಾಣ–ಪ್ರವಚನಗಳನ್ನು ಹೇಳುತ್ತಿದ್ದರು. ಜ್ಯೋತಿಷ್ಯಶಾಸ್ತ್ರದಲ್ಲಿ ಬಲ್ಲವರಾಗಿದ್ದರು. ಗುರು ಸ್ಥಾನದಲ್ಲಿ ನಿಂತುಕೊಂಡು ಭಕ್ತರಿಗೆ ನೀತಿಬೋಧೆ ಮಾಡುತ್ತಿದ್ದರು. ಕೆಲವೊಂದು ಸಲ ಭಕ್ತರಲ್ಲಿ ವಾದ–ವಿವಾದಗಳು ಮೂಡಿದಾಗ ನ್ಯಾಯಾಧೀಶರಂತೆ ನಿಂತು ಅವುಗಳನ್ನು ನಿಷ್ಪಕ್ಷಪಾತವಾಗಿ ಬಗೆಹರಿಸುತ್ತಿದ್ದರು. ಇಂಥವರ ಹೊಟ್ಟೆಯಲ್ಲಿ ಹುಟ್ಟಿದ ಚೆನ್ನಯ್ಯ ಸ್ವಾಮಿಗಳು ಬಹುಶ್ರುತ ವ್ಯಕ್ತಿತ್ವವುಳ್ಳವರಾಗಿದ್ದರು. ಕ್ರಿ.ಶ. ೧೮೯೫ರ ವರ್ಷದಲ್ಲಿ ಇವರ ಜನ್ಮವಾಯಿತು.

ಚೆನ್ನಯ್ಯಸ್ವಾಮಿ ಅವರ ಶಿಕ್ಷಣವು ಏಳನೆಯ ತರಗತಿಯವರೆಗೆ ಆಯಿತು. ಕನ್ನಡ, ಹಿಂದಿ, ಮರಾಠಿ, ಮೋಡಿ, ಸಂಸ್ಕೃತ ಭಾಷೆಗಳನ್ನು ಸರಿಯಾಗಿಯೇ ಕರಗತ ಮಾಡಿಕೊಂಡರು. ಚೆನ್ನಯ್ಯನವರಲ್ಲಿ ಆಧ್ಯಾತ್ಮಿಕ ಭಾವವೂ ಇದ್ದಿತು. ಈ ಭಾವನೆ ಹೆಚ್ಚು ಹೆಚ್ಚಾಗಿ ಬೆಳೆಯುವಂತೆ ಮಾಡಿದ್ದು ಮಂಠಾಳ ಗ್ರಾಮದ ವಿರಕ್ತಮಠವಾದ ಚೌಕಿಮಠ. ಇದು ಚೆನ್ನಯ್ಯನವರಿಗೆ ಆಧ್ಯಾತ್ಮ ಸಾಧನೆಗೆ ನೆಲೆಯಾಯಿತು. ಅಲ್ಲಿನ ಸ್ವಾಮಿಗಳು ಅವರಿಗೆ ಮಾರ್ಗದರ್ಶಕ ಗುರುಗಳೆನಿಸಿದರು.

ಚೆನ್ನಯ್ಯ ಸ್ವಾಮಿಗಳು ಸಂಸಾರಸ್ಥರು. ಅವರ ಹೆಂಡತಿ ರತ್ನಮ್ಮನವರು. ಈ ದಂಪತಿಗಳಿಗೆ ಮಕ್ಕಳಿರಲಿಲ್ಲ. ಬಡ ಬಗ್ಗರನ್ನು ಮಕ್ಕಳೆಂದು ತಿಳಿದು ಅವರಿಗೆ ತಮ್ಮ ಕೈಲಾದ ಸಹಾಯವನ್ನು ಚೆನ್ನಯ್ಯ ದಂಪತಿಗಳು ಮಾಡುತ್ತಿದ್ದರು. ಚೆನ್ನಯ್ಯನವರಿಗೆ ಇನ್ನೊಂದು ಬಗೆಯ ಮಕ್ಕಳಿದ್ದರು. ಅವು ಅವರು ರಚಿಸಿದ ಸಾಹಿತ್ಯ ಕೃತಿಗಳು.

ಸಾಹಿತ್ಯ ತಪಸ್ಸಿನಲ್ಲಿ ತೊಡಗಿದ ಅವರಿಗೆ ಸಂತತಿಯಿಲ್ಲೆಂಬ ಕೊರಗು ಕಾಣಲೇ ಇಲ್ಲ.

ಚೆನ್ನಯ್ಯ ಸ್ವಾಮಿ ಅವರು ಕಲಾವಿದರು; ಕಲಾ ರಸಿಕರು. ಅವರಿಗೆ ನಾಟಕಗಳನ್ನು ಆಡಿಸುವುದೆಂದರೆ ಪಂಚಪ್ರಾಣವಾಗಿತ್ತು. ತಮ್ಮ ಊರಿನಲ್ಲಿ ಕಲಾಸಕ್ತರನ್ನು ಕೂಡಿಸಿಕೊಂಡು ಅವರಿಗೆ ನಾಟಕ ಕಲಿಸಿದರು. ನಾಟಕವಾಡಿಸಿದರು. ಪ್ರತಿ ವರುಷ ತಪ್ಪದೆ ಅವರು ನಾಟಕ ಮಾಡಿಸುತ್ತಿದ್ದರು. ಭಕ್ತ ಮಾರ್ಕಂಡೇಯ, ಸತಿಸತ್ವ ಪರೀಕ್ಷೆ, ಭೂಕೈಲಾಸ ಅವರು ಮಾಡಿಸಿದ ನಾಟಕಗಳು ಅತ್ಯಂತ ಸ್ಮರಣೀಯ ನಾಟಕಗಳು.

ಮೊದ-ಮೊದಲು ಹವ್ಯಾಸಿಗಳಾಗಿ ನಾಟಕರಂಗಕ್ಕೆ ಇಳಿದು ಚೆನ್ನಯ್ಯನವರು ಬರು-ಬರುತ್ತ ವೃತ್ತಿರಂಗ ಭೂಮಿಯೆಡೆಗೆ ಒಲಿಯತೊಡಗಿದರು. ಮಂಠಾಳ ಗ್ರಾಮಬಿಟ್ಟು ದೊಡ್ಡ ದೊಡ್ಡ ನಾಟಕ ಕಂಪನಿಗಳಲ್ಲಿ ನಾಟಕ ಕಲಿಸತೊಡಗಿದರು. ಅವುಗಳಿಗಾಗಿ ನಾಟಕ ಬರೆಯ ತೊಡಗಿದರು. ಕನ್ನಡ ನಾಡಿನ ಅತ್ಯಂತ ಪ್ರಸಿದ್ಧ ನಾಟಕ ಕಂಪನಿಗಳಾದ ಓಬಳೇಶ್ವರ ನಾಟಕ ಕಂಪನಿ; ಮಾಸ್ತರ ಹಿರಣ್ಣಯ್ಯ ನಾಟಕ ಮಿತ್ರ ಮಂಡಳಿ ಇಂತಹ ವೃತ್ತಿ ಕಂಪನಿಗಳಲ್ಲಿ ಚೆನ್ನಯ್ಯನವರು ಹಲವು ಕಾಲ ಕೆಲಸ ಮಾಡಿದರು.

ಚೆನ್ನಯ್ಯನವರಿಗೆ ಸಂಗೀತದಲ್ಲಿಯೂ ತಜ್ಞತೆಯಿದ್ದಿತು. ಆಗಿನ ಕಂಪನಿ ನಾಟಕಗಳು ಸಂಗೀತ ಪ್ರಧಾನವಾಗಿರುತ್ತಿದ್ದವು. ಒಳ್ಳೆಯ ಹಾಡುಗಾರರು ಮತ್ತು ಸಂಗೀತಗಾರರಿಗೆ ಕಂಪನಿಗಳಲ್ಲಿ ಬಹುಬೇಡಿಕೆಯಿದ್ದಿತು. ಬೆಲೆಯೂ ಇದ್ದಿತು. ಇಂತಹ ಅವಕಾಶವನ್ನು ಪಡೆದು ಚೆನ್ನಯ್ಯನವರು ನಾಟಕ ಕಂಪನಿಗಳಲ್ಲಿ ಢಾಳವಾಗಿ ಮಿಂಚಿದರು. ಅವರಿಗೆ ಹಾಡುವ ಕಲೆಯೊಂದಿಗೆ ಸಂಗೀತ ಸಂಯೋಜನ ಕಲೆಯೂ ಕರಗತವಾಗಿದ್ದರಿಂದ ಕಂಪನಿ ನಾಟಕಗಳಿಗೆ ಅದು ಹೆಚ್ಚು ಪ್ರಯೋಜನವಾಯಿತು.

ಮೊದ ಮೊದಲು ಚೆನ್ನಯ್ಯನವರು ನಾಟಕಗಳಿಗಾಗಿಯೇ ಹಾಡುಗಳನ್ನು ಬರೆಯತೊಡಗಿದರು. ಹೀಗೆ ಬರೆಯುತ್ತ ಹೋದಂತೆ, ಅವರ ಕಾವ್ಯವಾಹಿನಿಗೆ ಬೇರೆ-ಬೇರೆ ಮುಖಗಳು ಮೂಡುವುದಕ್ಕೆ ಆರಂಭವಾದವು. ಅಂತಹ ಒಂದು ಪ್ರಮುಖ ಮುಖ ತತ್ತ್ವಪದ ಸಾಹಿತ್ಯದ ಮುಖ. ಚೆನ್ನಯ್ಯನವರ ಆಧ್ಯಾತ್ಮ ಮನಸ್ಸು ತತ್ತ್ವಗಳಿಗೆ ಪದ್ಯರೂಪ ನೀಡುವಲ್ಲಿ ಯಶಸ್ವಿಯಾಯಿತು. ಚೆನ್ನಯ್ಯನವರ ಬಹುಮುಖ ವ್ಯಕ್ತಿತ್ವಕ್ಕೆ ಹಲವು ಮಾನ ಸನ್ಮಾನಗಳು ದೊರಕಿದವು. ಅವರ ನಾಟಕ ನೋಡಿದ ಮೈಸೂರ ಒಡೆಯರು ಹರುಷಗೊಂಡು ತಮ್ಮ ಆಸ್ಥಾನದಲ್ಲಿ ಚೆನ್ನಯ್ಯನವರನ್ನು ಸನ್ಮಾನಿಸಿದರು. ಹೈದರಾಬಾದ ಕನ್ನಡ ಪ್ರದೇಶದ ಕಲೆಯ ಪತಾಕೆ ಚೆನ್ನಯ್ಯನವರು ದಕ್ಷಿಣ ಕರ್ನಾಟಕ ಭಾಗದಲ್ಲಿ ಅಂದು ಹಾರಿಸಿದುದು ವಿಶೇಷದ ಸಂಗತಿ.

೭೫ ವರ್ಷಗಳ ಸಾರ್ಥಕ ಬದುಕನ್ನು ಬದುಕಿದ್ದ ಚೆನ್ನಯ್ಯಸ್ವಾಮಿಗಳು ಕ್ರಿ.ಶ. ೧೯೭೦ರಲ್ಲಿ ಲಿಂಗೈಕ್ಯರಾದರು.

ಚೆನ್ನಯ್ಯ ಸ್ವಾಮಿ ಅವರು ರಚಿಸಿದ ನಾಟಕಗಳು ಉಪಲಬ್ಧವಿಲ್ಲ. ಅವರು ರಚಿಸಿದ ತತ್ತ್ವಪದಗಳಲ್ಲಿ ಹೆಚ್ಚಿನ ಸಂಖ್ಯೆಯವು ಕಾಲಗರ್ಭ ಸೇರಿ ಹೋಗಿವೆ. ದೊರೆತವುಗಳಲ್ಲಿ ಎರಡನ್ನು ಉಲ್ಲೇಖಿಸಲಾಗಿದೆ:

ಶರೀರವೆಂಬ ಹೊಲ

ಶರೀರವೆಂಬ ಹೊಲ ಹಸನವ ಮಾಡೋ
ನರಗುಣ ಕಂಟಿ ಕಡಿದು ಸಮನವ ಮಾಡೋ ॥ ಪ ॥

ಮನವೆಂಬ ಬಾವಿಗೆ ಗೋಡೆಯ ಕಟ್ಟೊ
ತನುವೆಂಬ ನೀರಿಗೆ ಕಾಲುವೆ ಬಿಟ್ಟೊ
ಭ್ರಾಂತಿಯ ನಟ್ಟು ಕಡಿದು ಸುಟ್ಟೊ
ಶಾಂತಿಯ ನೀರ ನೆಲಕೆಲ್ಲ ಬಿಟ್ಟೊ ॥ ೧ ॥

ಮೂರು ಮಲವೆಂಬ ಕಸವ ತೆಗೆಯೊ
ಆರು ಅರಿಯೆಂಬ ಕರಲವ ಬಗೆಯೊ
ಏಳು ವ್ಯಸನಗಳ ಜಾಲಿಯ ಮುಳ್ಳೊ
ಕಾಲಿಗೆ ಮುರಿಯದಂತೆ ಎಚ್ಚರದಿ ನಡೆಯೊ ॥ ೨ ॥

ಹೊಲದ ಬದುವಿಗೆ ಸಮತೆಯ ಬೇಲಿ
ಕಲಕಲ ಎನ್ನಲಿ ಸೈರಣೆ ನಾಲಿ
ವಿಚಾರದ ಸಲಿಕಿಲಿಂದ ಮಣ್ಣ ಬಗೆಯೊ
ಆಚಾರದ ಗುದ್ದಲಿಂದ ಗಾರೆಯ ಹೊಡೆಯೊ ॥ ೩ ॥

ನಿಷ್ಠೆಯ ಅಟ್ಟವು ಹಾಕಲು ಬೇಕೋ
ವಿಕಾರದ ಹಕ್ಕಿಯ ಅಟ್ಟಲು ಬೇಕೋ
ಸುನೀತಿಯ ಅರವಟ್ಟಿಗೆ ಇಟ್ಟಿರಬೇಕೋ
ಪುಣ್ಯದ ರೊಟ್ಟಿಯ ಬಿಚ್ಚಿಡಬೇಕೋ ॥ ೪ ॥

ದೇಶದೊಳಗ ನಮ್ಮ ವಾಸುಳ್ಳ ಮಂಠಾಳ
ಚೆನ್ನ ಈಶ ಹಾನ ಪರಮಾನಂದ

ಆತನ ಒಡೆತನಕ್ಕೆ ಹೊಲವ ಒಪ್ಪಿಸಂದ
ಯಾತರದು ಕುಂದ ಇಲ್ಲೆಂದ ॥ ೫ ॥

ಯಾಕೆ ಹಗರಣ

ಯಾಕೆ ಹಗರಣ ಮಾಡುವರಪ್ಪ
ಈ ಲೋಕದ ಜನರು ? ॥ ಪ ॥

ಕಾಕು ಸಂಸಾರದ ನೆಲೆಯನು ತಿಳಿಯದೆ
ಜೋಕು ಹೊಡೆಯುತ ನಡೆವರು
ಯಾಕೆ ಹಗರಣ ಮಾಡುವರು ?
ಈ ಲೋಕದ ಜನರು ॥ ೧ ॥

ಮೇಲಿಂದ ಕೆಳಗಿಟ್ಟು
ಕೆಳಗಿಂದ ಮ್ಯಾಲೊಯ್ದು
ಕಪ್ಪಗಿದ್ದುದು ಬಿಳಿದೆಂದು
ಬಿಳಿಯಿದ್ದುದು ಕಪ್ಪೆಂದು ॥ ೨ ॥

ಕುಂಟಿನ ಮಂಟಪ ಸೇರಿಸಿ
ತೊಂಟಿನ ಪಟ್ಟವ ಕಟ್ಟಿಸಿ
ಭಟ್ಟನ ಹೊಗಳುತನ ಬಯಸಿ
ಟೊಳ್ಳ ಹೊಟ್ಟಿ ಈ ಜನರು ॥ ೩ ॥

ಭುವಿಯೊಳಗೆ ಮೆರೆಯುವ ಮಂತಾಳ
ಚೆನ್ನನ ನೀ ತಿಳಿಯೋ ಮುತ್ತಾಳ
ಹಗರಣ–ಗಿಗರಣ ಬಿಡಬೇಕೋ
ಗುರು ಮಹಾತ್ಮನ ಪಾದವ ಹಿಡಿಬೇಕೋ ॥ ೪ ॥

(ಈ ವಿವರ ಕೊಟ್ಟವರು ಗುರುನಾಥ ಮಂತಾಳ.)

□ □ □ □ □ □ □ □



ಚೆನ್ನಯ್ಯ ಸ್ವಾಮಿ ಅವರು ವಾಸಿಸುತ್ತಿದ್ದ ಮನೆ (ಮಂಠಾಳ)



ಚೆನ್ನಯ್ಯ ಸ್ವಾಮಿ ಅವರ ಆಧ್ಯಾತ್ಮ ಸಾಧನೆಗೆ ನೆಲೆಯಾದ ವಿರಕ್ತಮಠ (ಮಂಠಾಳ)

೮. ಈರಂತಯ್ಯ ಮಠಪತಿ (ಕ್ರಿ.ಶ.ಸು. ೧೯೦೦-೧೯೯೦)

'ಲಿಂಗದ ಹಳ್ಳಿ' ಅತ್ಯಂತ ತತ್ತ್ವಪೂರ್ಣವಾದ ಹೆಸರು. ಹಿಂದೆ ಇದು ನಿಜವಾಗಿಯೂ "ತತ್ತ್ವಪೂರ್ಣ"ವಾದ ಹಳ್ಳಿಯೇ ಆಗಿರುವುದಕ್ಕೆ ಪುರಾವೆಗಳಿವೆ. ಬೀದರ ಜಿಲ್ಲೆ, ಬಸವಕಲ್ಯಾಣ ತಾಲ್ಲೂಕಿನ ಈ ಗ್ರಾಮವು ಈರಂತಯ್ಯ ಮಠಪತಿ ಅವರ ನೆಲೆ. "ವೀರಂತಯ್ಯ" ಎಂಬುದು ಗ್ರಾಮೀಣರ ಬಾಯಲ್ಲಿ 'ಈರಂತಯ್ಯ'ಎಂದಾಗಿದೆ.

ಕಲ್ಲಯ್ಯ ಮಠಪತಿ ಅವರು ಈರಂತಯ್ಯನವರ ತಂದೆ. 'ಹಿರಿಯತನ'ದ ವ್ಯಕ್ತಿತ್ವವುಳ್ಳವರು. ಜಂಗಮಾಚಾರಶೀಲರು. ಮಠದ ಸೇವಕರಾಗಿ ತಮ್ಮ ಕರ್ತವ್ಯಗಳನ್ನು ಗ್ರಾಮದ – ಸಮಾಜದ ಒಳತಿಗಾಗಿ ನಿರ್ವಹಿಸುತ್ತಿದ್ದವರು. ಜೊತೆಯಲ್ಲಿ ತಮ್ಮ ಭೂಮಿಯಲ್ಲಿ ಕೃಷಿಕಾಯಕವನ್ನು ಮಾಡುತ್ತಿದ್ದರು. ಶಿಷ್ಯರುಗಳ ಮನೆಗಳಲ್ಲಿ ಅವರ ಇಷ್ಟಾನುಸಾರಿಯಾಗಿ ಪೂಜೆಯಾದಿಗಳನ್ನು ನಡೆಸಿಕೊಡುತ್ತಿದ್ದರು. ಕಲ್ಲಯ್ಯನವರ ಪತ್ನಿ ಶಿವಮ್ಮನವರು. ಜಂಗಮ ಮನೆತನಕ್ಕೆ ಒಪ್ಪುವ ಸುಶೀಲ ಸಂಪನ್ನ ಮಹಿಳೆ.

ಈ ದಂಪತಿಗಳ ಮಡಿಲಿನಿಂದ ವೀರಂತಯ್ಯನವರು ಕ್ರಿ.ಶ. ೧೯೦೦ರಂದು ಹುಟ್ಟಿದರು. ಮಠದ ಶಾಲೆಯಲ್ಲಿ ತಮ್ಮ ಮಗನಿಗೆ ಕಲ್ಲಯ್ಯನವರು ಕಾಲಮಾನಕ್ಕೆ ಬೇಕಾದ ಶಿಕ್ಷಣ ಕೊಡಿಸಿದರು. ಬೆಳೆಯುತ್ತ ವೀರಂತಯ್ಯನವರು ತಂದೆಯ ಕಾಯಕ ಪರಂಪರೆಯನ್ನು ಬದುಕಿನ ನಿರ್ವಹಣೆಗಾಗಿ ವಹಿಸಿಕೊಂಡರು.

ವೀರಂತಯ್ಯನವರು ಪುರೋಹಿತ ವೃತ್ತಿಯನ್ನು ಮಾಡುತ್ತಿದ್ದರು. ಪತ್ನಿ ಮಹಾದೇವಮ್ಮನವರು. ಈ ದಂಪತಿಗಳಿಗೆ ಐದು ಮಂದಿ ಮಕ್ಕಳು. ಇವರಲ್ಲಿ ಸಧ್ಯ ಇರುವವರು ಕಲ್ಲಯ್ಯ ಸ್ವಾಮಿಗಳು. ಇವರ ವಯಸ್ಸು ಈಗ ಅರವತ್ತೈದು ವರುಷಗಳು. ವೀರಂತಯ್ಯನವರ ಸೊಸೆ ಕಸ್ತೂರಬಾಯಿ, ಕಲ್ಲಯ್ಯ ಸ್ವಾಮಿ ಅವರ ಹೆಂಡತಿ. ವೀರಂತಯ್ಯನವರ ಮೊಮ್ಮಕ್ಕಳು ಹೋಟೆಲ್‌ದಂತಹ ಕೆಲಸವನ್ನು ಮಾಡಿಕೊಂಡು ಉಪಜೀವನ ಮಾಡುತ್ತಿದ್ದಾರೆ.

ವೀರಂತಯ್ಯನವರ ಮನೆಯ ದೇವರು ರಟಕಲ್ಲಿನ ರೇವಣಸಿದ್ಧರು ಮತ್ತು ಹುಮನಾಬಾದಿನ ವೀರಭದ್ರ ದೇವರು. ಸದಲಾಪುರ ಹಿರೇಮಠದ ಚೆನ್ನಬಸವ ಸ್ವಾಮಿಗಳು ಅವರ ಮನೆತನದ ಗುರುಗಳು.

ಲಿಂಗದಳ್ಳಿಯ ಹೊರವಲಯದ ಗುಡ್ಡದ ಮೇಲೆ ಬಸವಣ್ಣ ದೇವರ ಗುಡಿಯಿದೆ. ಅದರ ನಿರ್ಮಾಣಕ್ಕೆ ಅದರದ್ದೆ ಆದ ಐತಿಹ್ಯವಿದೆ. ಆ ದೇವಾಲಯದ ಅರ್ಚಕ ವೃತ್ತಿಯು ಮಠಪತಿಯವರ ಮನೆತನಕ್ಕೆ ಸಂಬಂಧಪಟ್ಟಿದೆ.

ಮಠಪತಿ ಮನೆತನದ ಸಹೋದರರು ಸರದಿಯಂತೆ ಬಸವಣ್ಣ ದೇವರ ಪೂಜೆ–ಜಾತ್ರೆಯಾದಿಗಳನ್ನು ನಡೆಸಿಕೊಂಡು ಹೋಗುತ್ತಾರೆ. ಈರಂತಯ್ಯನವರು ಬಸವಣ್ಣ ದೇವರನ್ನು ತಮ್ಮ ಆರಾಧ್ಯ ದೇವರೆಂದು ನಂಬಿದವರು. ತಮ್ಮ ಜೀವನ ಪೂರ್ತಿಯೆಲ್ಲ ಬಸವಣ್ಣನವರನ್ನು ವೀರಂತಯ್ಯನವರು ಭಕ್ತಿಯಿಂದ ಅನುಸಂಧಾನಿಸಿದರು; ಉತ್ಸವಾದಿಗಳನ್ನು ಸಂಭ್ರಮದಿಂದ ನಡೆಸಿದರು.

ವೀರಂತಯ್ಯ ಮಠಪತಿ ಅವರ ಚಾರಿತ್ರ್ಯದ ಬಗೆಗೆ ಗ್ರಾಮದಲ್ಲಿ ಕೆಲವು ಒಡಕು ಧ್ವನಿಗಳು ಕೇಳಿಬರುತ್ತವೆ. ಮನುಷ್ಯನೆಂದ ಮೇಲೆ ದೌರ್ಬಲ್ಯಗಳಿರುವುದು ಸಹಜ. ಅದರಲ್ಲೂ ಕವಿಗಳಾದ ವೀರಂತಯ್ಯನವರ ಅತಿಶಯದ ರಸಿಕತೆ ಕೆಲವು ಜನತೆಗೆ ತಪ್ಪು ಭಾವನೆಯನ್ನುಂಟು ಮಾಡಿರಬೇಕು.

ಇಂದು ಭೌತಿಕವಾಗಿ ವೀರಂತಯ್ಯನವರು ಇಲ್ಲ. ಕ್ರಿ.ಶ. ೧೯೯೦ರಲ್ಲಿ ಅವರು ಲಿಂಗೈಕ್ಯರಾದರು. ಆದರೆ ಅವರು ರಚಿಸಿದ ತತ್ತ್ವಪದಗಳು ಜನತೆಯ ನಾಲಗೆಯ ಮೇಲೆ ಉಳಿದುಕೊಂಡಿವೆ. ತನ್ಮೂಲಕ ವೀರಂತಯ್ಯನವರನ್ನು ಯಾವತ್ತು ನೆನಪಿನಲ್ಲಿ ಉಳಿಯುವಂತೆ ಮಾಡಿವೆ. ಬಸವಣ್ಣನ ಹೆಸರೇ ಅವರ ತತ್ತ್ವಪದಗಳಿಗೆ ಮುದ್ರೆಯಾಗಿದೆ.

ವೀರಂತಯ್ಯನವರ ಎರಡು ತತ್ತ್ವಪದಗಳನ್ನು ಇಲ್ಲಿ ಕೊಡಲಾಗಿದೆ:

ಬೊಗಳುವ ನಾಯಿ

ನಾಯಿ ಅಂದಮ್ಯಾಲೆ ಬೊಗಳುತಾವಣ್ಣ
ನಾವ್ಯಾಕ ಚಿಂತಿಸಬೇಕಣ್ಣಾ? ॥ ಪ ॥

ಆನಿಯೆಂಬುದು ದೊಡ್ಡ ಪ್ರಾಣಿ
ಅದರ ಗಾತ್ರವೇನರಿಯದೆ ಬೊಗಳುವದು ಸುನಿ
ಹೀನ ಮನುಜನೆಂಬ ನಾಯಿ
ಸತ್ಯ ಸಜ್ಜನರ ಕಂಡರೆ ಬೊಗಳುವುದೋ ಬಾಯಿ ॥ ೧ ॥

ಮೃಷ್ಟಾನ್ನ ಅದಕ ರುಚಿಸದು
ಕೆಟ್ಟ ಹೊಲಿಸೀನ ಬಲೆಯೊಳಗ ಬಿದ್ದು ಹೊರಳಾಡುವುದು
ದುಷ್ಟರ ಕಂಡರೆ ಬಾಲ ಅಲ್ಲಾಡಿಸವುದು
ಶಿಷ್ಟರ ಕಂಡರೆ ಅಪವಾದ ಹೊರಿಸುವುದು ॥ ೨ ॥

ಹಾಲ–ಬಾನುಣ್ಣೆಂದರೆ ಒಲ್ಲಾದು
ಹೇಲಕೂಪದೊಳಗೆ ಅದು ಇರಾದು
ಅಲಲ ಗುಲ್ಲ ಮಾಡುವುದು
ಕಾಲ–ಲೀಲಾ ತಿಳಿಯದೆ ಸುಮ್ಮೆ ಬೊಗಳುವದು ॥ ೩ ॥

ನಿನಗೆಟ್ಟು ಇರುವದು ಅಸುವ
ಸುಮ್ನೆ ಬಾಯಿ ಬಿಟ್ಟು ಒದರುವಿ ಯಾಕೆಲಾ ಪಶುವಾ
ಮಾನಗೆಟ್ಟ ಮೂಖೋಡಿ ನೀನಾ
ಮಾನವಂತರದು ಖರೆ ನೀನು ಇಡಲಿಲ್ಲಾ ಖೂನಾ ॥ ೪ ॥

ಧರಿಯೊಳು ಲಿಂಗದಳ್ಳಿ ಗ್ರಾಮ
ಊರಿನೊಳಗ ಎಲ್ಲರದು ಬಸವಣ್ಣನ ನೇಮ
ಬೊಗಳುವ ನಾಯಿ ನೀನು ಚುಮ್ಮಾ
ಬಸವನ ಪಾದಕ ಹೊಂದಿರು ಯಲಾ ನಾಯಿ ಸುಮ್ಮಾ ॥ ೫ ॥

ಯಾಕ ಮಾಡ್ತಿ ಗಡಿಬಿಡಿ

ಯಾಕ ಮಾಡ್ತಿ ಗಡಿಬಿಡಿ
ಒಂದು ದಿನ ಬಿಟ್ಟು ಹೋತಿ ಗೋಡಾಗಾಡಿ ॥ ಪ ॥

ರೊಕ್ಕಗಳಿಸಿದೆಂದಿ ಹಗಲು–ರಾತ್ರಿ
ಲೆಕ್ಕಾ ಮಾಡೆ ಮಾಡಿದಿ
ಕಳ್ಳರು ಕನ್ನಾ ಹೊಡೆದು ರೊಕ್ಕಾ ಒಯ್ದರು
ಬಿಕ್ಕಿ ಅತ್ತಿ ಹುಚ್ಚ ಖೋಡಿ ॥ ೧ ॥


ಎಲ್ಲನಂದೇ ಅಂದಿ
ಎಂದಾನು ಸಾಯದಿಲ್ಲಂತ ತಿಳಕೊಂಡಿ
ಯಮ ಬಂದು ಎದುರ ನಿಂತ ನೋಡಿ
ಆವಾಗ ಗಲ್ಲಗಲ್ಲ ಬಡಕೊಂಡಿ ॥ ೨ ॥

ಗಡಿಬಿಡಿ ಗಮ್ಮತ ಸಂಸಾರ ಆಟ
ತಿಳಿಲಿಲ್ಲ ಒಂದಿನ ಅದರ ಮಾಟ
ಮುಳುಗಿ–ಮುಳುಗಿ ನೀ ಎದ್ದಿ ಮುಳುಗ್ಯಾಡಿ
ಗಳಗಳ ಅಳಲಕ ಏನಾಯ್ತು ಧಾಡಿ ? ॥ ೩ ॥

ತಿಳಕೋ ಬೇಕ ಈ ಜಲ್ಮಕ ಬಂದು
ಉಳಕೋ ಬೇಕ ಬಸವನ ಪಾದಕ ಹೊಂದು
ಬೆಳಕ ಕಂಡೀತು ಮುಂದು
ತಳಕ ಇಳದೀತು ಧುಂದು ॥ ೪ ॥

(ಕವಿಗಳ ಪತ್ನಿ ಎಪ್ಪತ್ತೈದು ವಯಸ್ಸಿನ ಮಹಾದೇವಮ್ಮನವರು ಈ ವಿವರಗಳನ್ನು ನೀಡಿದ್ದಾರೆ.)

□



ಈರಂತಯ್ಯನವರ ಮನೆ (ಲಿಂಗದಳ್ಳಿ)



ಈರಂತಯ್ಯನವರ ಪತ್ನಿ ಮಹಾದೇವಿ (ನಡುವೆ) ಅವರೊಂದಿಗೆ
ಸೊಸೆ–ಮೊಮ್ಮಗ



ಈರಂತಯ್ಯನವರ ಆರಾಧ್ಯ ಗೇವರು ಬಸವಣ್ಣ ದೇವಾಲಯ

(ಲಿಂಗದಳ್ಳಿ)



ಈರಂತಯ್ಯನವರ ಸಮಾಧಿ

೯. ಮಸ್ತ ಅಲಿಶಾ ಖಾದರಿ (ಕ್ರಿ.ಶ.ಸು. ೧೯೦೧-೨೦೦೯)

ಮಸ್ತ ಅಲಿಶಾ ಖಾದರಿ ಹಿಂದೂ-ಮುಸ್ಲೀಮ ಸಂಸ್ಕೃತಿಯ ಸಮನ್ವಯದ ಸಂಕೇತದಂತೆ ಇದ್ದಾರೆ. ವೀರಶೈವ ಧರ್ಮದ ಚಿಹ್ನೆಗಳಾಗಿರುವ ಇಷ್ಟಲಿಂಗ-ವಿಭೂತಿಯಾದಿಗಳನ್ನು ಧರಿಸುತ್ತಿದ್ದರಂತೆ; ಇಸ್ಲಾಂ ಸಂಸ್ಕೃತಿಯ ಪರವಾದ ದಾಡಿ, ಹಸಿರು ರುಮಾಲು ಇವುಗಳನ್ನೂ ಅವರು ಹೊಂದಿದ್ದರು.

ಮಸ್ತ ಅಲಿಶಾ ಖಾದರಿ ಅವರ ಮೂಲವಂಶಸ್ಥರ ನೆಲೆ ಧನ್ನೂರ(ಕೆ) ಗ್ರಾಮವಾಗಿತ್ತು. ಅಲ್ಲಿಂದ ಯಾವುದೋ ಕಾಲದಲ್ಲಿ ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ಮುಡಬಿ ಗ್ರಾಮದಲ್ಲಿ ಬಂದು ನೆಲೆಸಿದರು. ಆದುದರಿಂದ ಮಸ್ತ ಅಲಿಶಾ ಖಾದರಿ ಅವರ ಮನೆತನವನ್ನು ಜನರು ಇಂದಿಗೂ "ಧನ್ನೂರೆ" ಅವರ ಮನೆತನವೆಂದು ಗುರುತಿಸುತ್ತಾರೆ.

ಮಸ್ತ ಅಲಿಶಾ ಖಾದರಿ ಅವರ ತಂದೆ ಖಾಶೀಮ ಸಾಹೇಬರು ಅತ್ಯುತ್ತಮ ಆಶುಕವಿಗಳಾಗಿದ್ದರು. ತಾವು ಬರೆದ ಪದ್ಯಗಳನ್ನು ಕರ್ಣಾನಂದವಾಗುವಂತೆ ಹಾಡುತ್ತಿದ್ದರು. ಖಾಶೀಮ ಸಾಹೇಬರ ಹೆಂಡತಿ ಹಜುಮಾ. ಭಕ್ತಿ ಭಾವದ ಹೆಣ್ಣುಮಗಳಾಗಿದ್ದರು. ಈ ದಂಪತಿಗಳ ಉದರದಿಂದ ಮಸ್ತ ಅಲಿಶಾ ಅವರು ಕ್ರಿ.ಶ. ೧೯೦೧ರಂದು ಜನ್ಮತಾಳಿದರು.

ಮಸ್ತ ಅಲಿಶಾ ಖಾದರಿಯವರ ಶಿಕ್ಷಣವು ಸ್ವಗ್ರಾಮದಲ್ಲಿ ಮೂರನೆಯ ತರಗತಿಯವರೆಗೆ ಆಯಿತು. ಅಂದು ಅವರು ಮರಾಠಿ ಶಿಕ್ಷಣವನ್ನು ಹೊಂದಿದರು. ತೆಲಗು, ಕನ್ನಡ, ಮೋಡಿ, ಉರ್ದು ಭಾಷೆಗಳಲ್ಲಿ ಅವರಿಗೆ ಸರಿಯಾದ ಜ್ಞಾನವಿದ್ದಿತು.

ಮಸ್ತ ಅಲಿಶಾ ಖಾದರಿಯವರು ತಾರುಣ್ಯಕ್ಕೆ ಬಂದಾಗ ಸಂಸಾರಿಕ ಬದುಕಿಗೆ ಕಾಲಿರಿಸಿದರು. ಅವರ ಹೆಂಡತಿ ಹಸ್ಮತಬಿ. ಈ ದಂಪತಿಗಳಿಗೆ ಒಬ್ಬ ಗಂಡು ಮಗ ಬಾಬಾಮಿಯಾ ಮತ್ತೆ ಮೂವರು ಹೆಣ್ಣುಮಕ್ಕಳು ಜನಿಸಿದರು. ಚಾಂದಬಿ, ಖಾತನಬಿ, ಫತ್ರುಬಿ ಎಂಬುವರೆ ಆ ಹೆಣ್ಣುಮಕ್ಕಳು.

ಮಸ್ತ ಅಲಿಶಾ ಖಾದರಿಯವರಿಗೆ ದೇವರಲ್ಲಿ ಅಪಾರ ನಂಬುಗೆ ಇದ್ದಿತು. ಚಿಟಗುಪ್ಪಾದ ಕರೀಮುಲ್ಲಾ ಶಹಾ ಖಾದರಿ ಎಂಬುವರೆ ಅವರ ಗುರುಗಳಾಗಿದ್ದರು.

ಮಸ್ತ ಅಲಿಶಾ ಅವರು ಹಣಮಂತ ದೇವರಿಗೆ ನಡೆದುಕೊಳ್ಳುತ್ತಿದ್ದರು. ಅವರಲ್ಲಿ ಯಾವುದೇ ರೀತಿಯ ಭೇದ-ಭಾವಗಳಿಗೆ ಆಸ್ಪದವಿರಲಿಲ್ಲ. ಎಲ್ಲರೂ ಅವರ ದೃಷ್ಟಿಯಲ್ಲಿ ಅಲ್ಲಾನ ಮಕ್ಕಳೇ ಆಗಿದ್ದರು. ಈ ಭಾವನೆಯ ಅಭಿವ್ಯಕ್ತಿಯೆಂಬಂತೆ ಹೊರಬಿದ್ದಿದೆ ಈ ಹಾಡು:

"ಹರಿಹರ ಇಲ್ಲ; ಶಿವ ಬ್ಯಾರೆಇಲ್ಲ, ಇಷ್ಟು ತಿಳಿಸಲಿ ನಾನಾ ಹಾಹಾ ।
ಮಂದಿರ-ಮಜ್ಜಿದ್, ಮಜ್ಜಿದ್-ಮಂದಿರ । ಬ್ಯಾರೆ ಇಲ್ಲೊ ಏನ್ ಹಾಹಾ ।
ಖಾಲಿ ಮನ ಮಾಡ್ತಿರೋ ಕಲ್ಪನ । ಸೋಸಿ ನೋಡೋ ಬ್ಯಾರೆ ಎಲ್ಲಿಹಾನ ಹಾಹಾ
।ಮದೀನಾದೊಳಗೆ ಕುರಿ ಕಾಯುವ ರಸೂಲ । ಕೇಳೋ ತಮ್ಮ ನೀನ ಹಾಹಾ ।
ಗೋಕುಲದೊಳಗೆ ಗೋವು ಕಾಯುವ ಕೃಷ್ಣ । ಒಬ್ಬನೇ ಹಾನ ಹಾಹಾ ।
ಇಬ್ಬರಲ್ಲಿ ಭೇದ ಇಲ್ಲೋ ಏನ । ಸಬ್ಕೊ ಸನ್ಮತ್ತ ಕೊಟ್ಟ ಶಿವ ಒಬ್ಬನೇ ಹಾನ ಹಾಹಾ।
ಕಣಜಿ ಊರ ಹುಸೇನ ಪೀರ । ದೇವರಿಗೆ ಸಲಾಮ ಮಾಡುತಿ ಹಾ ಹಾ".

ಮಸ್ತ ಅಲಿಶಾ ಖಾದರಿ ಅವರು ಕಣಜಿ ಗ್ರಾಮದ ರೇವಣಯ್ಯನವರ ಮನೆಯಲ್ಲಿ ವಾಸ್ತವ್ಯ ಮಾಡಿದ ಸಂದರ್ಭದಲ್ಲಿ ಮೋಹರಮ್ ಹಬ್ಬವಿದ್ದಿತು. ಆಗ ಈ ಪದವನ್ನು ಅವರು ರಚಿಸಿ ಹಾಡಿದರು. ಗ್ರಾಮದ ಶಹಾ ಹುಸೇನ ಪಾಶಾನಲ್ಲಿಯೂ ಖಾದರಿ ಅವರಿಗೆ ಭಕ್ತಿಯಿದ್ದಿತ್ತು. ಮೋಹರಮ ಹಾಡುಗಳಿಗೆ ಆ ದೇವರ ಹೆಸರನ್ನು ಅಂಕಿತವಾಗಿರಿಸಿ ಕೊಂಡಿದ್ದಾರೆ.

ಮಸ್ತ ಅಲಿಶಾ ಖಾದರಿ ಅವರ ಬದುಕು ಲೋಕದವರಿಗೆ ವಿಚಿತ್ರವಾಗಿ ಕಂಡಿರುವುದು ಸಹಜ. ಮುಡಬಿ ಗ್ರಾಮದಲ್ಲಿ ಹಿರೇಮಠ ಮನೆತನದ ಆನಂದಯ್ಯ ಎಂಬ ಸ್ವಾಮಿಗಳಿದ್ದರು. ಅವರು ಕ್ರಿ.ಶ. ೧೯೩೦ರಲ್ಲಿಯೇ ಲಿಂಗೈಕ್ಯರಾದಂತೆ ತಿಳಿದು ಬರುತ್ತದೆ. ಅವರು ಸದಾಚಾರ ಶೀಲರು, ಆಧ್ಯಾತ್ಮ ಸಾಧಕರೂ ಆಗಿದ್ದರು. ಹಲವಾರು ಜನ ಶಿಷ್ಯರನ್ನು ಪಡೆದುಕೊಂಡಿದ್ದರು. ಮಸ್ತ ಅಲಿಶಾ ಅವರ ಮೇಲೆ ಆನಂದಯ್ಯನವರ ಪ್ರಭಾವವಾಯಿತು. ಖಾದರಿ ಅವರು ಆನಂದಯ್ಯನವರ ಗುರುತ್ವವನ್ನು ಸ್ವೀಕರಿಸಿ ಅವರ ಪರಮ ಶಿಷ್ಯರಾದರು. ಆನಂದಯ್ಯನವರಿಂದಲೇ ಲಿಂಗದೀಕ್ಷೆಯನ್ನು ಪಡೆದುಕೊಂಡರು. ಇದರಿಂದ ಮಸ್ತ ಅಲಿಶಾ ಖಾದ್ರಿಯವರ ಬದುಕಿನಲ್ಲಿ ಪರಿವರ್ತನೆ ಕಾಣಿಸಿಕೊಂಡಿತು. ಟೊಂಕದಲ್ಲಿ ಉಡದಾರ ಕಟ್ಟಿಕೊಂಡರು. ದಿನನಿತ್ಯ ಎರಡು ಸಲ ಸ್ನಾನಮಾಡಿ ಇಷ್ಟಲಿಂಗ ಪೂಜೆ ಮಾಡತೊಡಗಿದರು. ಯಾವಾಗಲೂ ಹಣೆಯಮೇಲೆ ವಿಭೂತಿ ಧರಿಸಿಯೇ ಹೊರಗೆ ಬರುತ್ತಿದ್ದರು. ಗುರು ಆನಂದಯ್ಯನವರ ಪ್ರೋತ್ಸಾಹದಿಂದ ಖಾದರಿ ಅವರು ಶರಣರ ವಚನಗಳನ್ನು; ದಾಸರ ಕೀರ್ತನೆಯಾದಿಗಳನ್ನು ಅಭ್ಯಾಸ ಮಾಡಿದರು.

ಶರಣ ಸಂಸ್ಕೃತಿಯನ್ನು ಕರಗತವಾಗಿಸಿಕೊಂಡರು. ಮಸ್ತ ಅಲಿಶಾ ಖಾದರಿ ಅವರ ಈ ಜೀವನದ ಪರಿಯು ಸಂಪ್ರದಾಯಶೀಲರಾದ ಮುಸ್ಲಿಮರಿಗೆ ಹಿಡಿಸಲಿಲ್ಲ, ಅವರೆಲ್ಲ ಸೇರಿಕೊಂಡು ಬಹಿಷ್ಕಾರ ಹಾಕುವ ಬೆದರಿಕೆ ಒಡ್ಡಿದರು. ಮನನೋಯುವಂತೆ ಮಾತನಾಡಿದರು. ಆಗ ಖಾದರಿ ಅವರಿಗೆ ಮುಡಬಿ ಗ್ರಾಮದ ಸಂಗವು ಸಾಕಾಯಿತು. ಮನೆ–ಹೆಂಡತಿ–ಮಕ್ಕಳು–ಬಂಧು–ಬಾಂಧವರನೆಲ್ಲ ಬಿಟ್ಟು ಊರೂರು ತಿರುಗುತ್ತ ಸಂಚಾರಿಯಾಗಿ ಹೊರಟರು. ಬೀದರ ತಾಲ್ಲೂಕಿನ ಖಾನಾಪುರ ಗ್ರಾಮದ ಮೈಲಾರ ಮಲ್ಲಯ್ಯನ ದೇವಸ್ಥಾನದ ಪರಿಸರದಲ್ಲಿ ಕೆಲವು ಕಾಲ ಅನುಷ್ಠಾನ ಮಾಡಿದರು. ಭಾಲ್ಕಿ ತಾಲ್ಲೂಕಿನ ಕಣಜಿ ಗ್ರಾಮದ ರೇವಣಯ್ಯ ಸ್ವಾಮಿ ಅವರ ಮನೆಯಲ್ಲಿ ಕೆಲವು ಕಾಲ ವಾಸ್ತವ್ಯ ಮಾಡಿ; ಅಲ್ಲಿ ಅವರೊಡನೆ ಆಧ್ಯಾತ್ಮ ಚರ್ಚೆ ಮಾಡಿದರು. ಇದರಿಂದ ಖಾದರಿಯವರಿಗೆ ಆ ಗ್ರಾಮದಲ್ಲಿ ಹಲವಾರು ಜನರು ಶಿಷ್ಯರಾದರು. ಸ್ವತಃ ಖಾದರಿ ಅವರೆ ಕನ್ನಡ ನಾಡು–ಆಂಧ್ರ ಪ್ರದೇಶಗಳಲ್ಲಿ ಸಂಚರಿಸಿ; ತಮ್ಮ ಸಂಪರ್ಕಕ್ಕೆ ಬಂದ ಜನತೆಗೆ ಇಷ್ಟಲಿಂಗ ಧಾರಣೆ ಮಾಡಿದರು.

ಭಕ್ತರಿಗೆ ಭವಿಷ್ಯ ಹೇಳುತ್ತಿದ್ದರು; ಪಂಚಾಂಗ ನೋಡುತ್ತಿದ್ದರು. ಜಾಡ್ಯಗಳ ನಿವಾರಣೆಗಾಗಿ ಚೀಟಿಗಳನ್ನು ಕಟ್ಟುತ್ತಿದ್ದರು. ಮಸ್ತ ಅಲಿಶಾ ಅವರ ಹಸ್ತ ಸ್ಪರ್ಶದಿಂದ ಹಲವಾರು ಭಕ್ತರು ದೈಹಿಕ ಜಾಡ್ಯದೊಂದಿಗೆ ಮಾನಸಿಕ ಜಾಡ್ಯಗಳನ್ನು ನೀಗಿಕೊಂಡಂತೆ ತಿಳಿದು ಬರುತ್ತದೆ.

ಹಲವಾರು ಕ್ಷೇತ್ರಗಳನ್ನು ಸಂಚರಿಸಿ; ಅಲ್ಲಲ್ಲಿ ಸತ್ಸಂಗಮಾಡಿ; ಹಲವಾರು ಶಿಷ್ಯರನ್ನು ಹೊಂದಿ, ಕೊನೆಗೆ ತಮ್ಮ ಸ್ವಗ್ರಾಮಕ್ಕೆ ಮರಳಿದ ಖಾದರಿ ಅವರು ಜೀವನಾಂತ್ಯದವರೆಗೂ ಮುಡಬಿ ಗ್ರಾಮದಲ್ಲಿಯೇ ತಮ್ಮ ಸಂತ ಬದುಕನ್ನು ಕಳೆದರು. ಅವರು ಯಾವುದೇ ಮಕ್ಕಳು–ಬಂಧುಗಳಲ್ಲಿ ಉಳಿಯಲಿಲ್ಲ. ಬೇರೆಯಾಗಿಯೇ ನೆಲೆಸಿ ಆಧ್ಯಾತ್ಮ ಚಿಂತನೆ–ಸಾಹಿತ್ಯ ಕೃಷಿಯಲ್ಲಿ ತಮ್ಮ ಬದುಕನ್ನು ವಿನಿಯೋಗಿಸಿದರು. ಕ್ರಿ.ಶ. ೨೦೦೯ರಲ್ಲಿ ಅವರು ಪೈಗಂಬರವಾಸಿಗಳಾದರು. ೧೦೮ ವರ್ಷಗಳ ದೀರ್ಘ ಬದುಕಿನಲ್ಲಿ ಖಾದರಿ ಅವರು ಅಸಂಖ್ಯಾತ ಶಿಷ್ಯರನ್ನು ಹೊಂದುವುದರೊಂದಿಗೆ ವಿಪುಲವಾಗಿ ಪದ್ಯ ಸಾಹಿತ್ಯ ಕೃಷಿ ಮಾಡಿದ್ದಾರೆ.

ಮಸ್ತ ಅಲಿಶಾ ಖಾದರಿ ಅವರು ರಚಿಸಿದ ಒಟ್ಟು ಸಾಹಿತ್ಯವನ್ನು ತತ್ತ್ವಪದಗಳು, ಮೋಹರಮ್ ಹಾಡುಗಳು, ಹಂತಿಪದಗಳು, ಜೋಗುಳ ಪದಗಳು, ಸೋಬಾನೆ ಹಾಡುಗಳು ಮತ್ತು ನಾಟಕಗಳು ಎಂದು ವಿಭಾಗಿಸಿಕೊಳ್ಳಬಹುದಾಗಿದೆ.

ಮಸ್ತ ಅಲಿಶಾ ಖಾದರಿ ಅವರು ತಮ್ಮ ಗುರುಗಳಾದ ಆನಂದಯ್ಯನವರ ಹೆಸರನ್ನೆ ತಮ್ಮ ತತ್ತ್ವಪದಗಳಿಗೆ ಮುದ್ರಿಕೆಯಾಗಿ ಇರಿಸಿಕೊಂಡಿರುವರು. ಅವರ ಎರಡು ತತ್ತ್ವಪದಗಳನ್ನು ಇಲ್ಲಿ ಕೊಡಲಾಗಿದೆ:

ಗುರು ಮಠ

ಗುರುಪಾದ ಕಂಡೀನಿ ಮಠ ಒಂದು ನೋಡಿನಿ
ಮಠ ಆಗೋ ವಿಸ್ತಾರ ಗುರು ಮುಖದಿ ಕೇಳೀನಿ ॥ ಪ ॥

ಚತುರಾಯದ ಮಠ ಅಣ್ಣಾ ಚೌಕಾಶಿ ಮಾಡೀನಿ
ಅಷ್ಟ ಮೂಲಿ ಎಷ್ಟು ಚದುರ ಕಸರಿಲ್ಲದೆ ಕಂಡೀನಿ
ಕಟ್ಟಿದರು ಯಾರೆಂದು ಗುರು ಮುಖದಿ ಕೇಳಿನಿ ॥ ೧ ॥

ಕೆಳಗಿಲ್ಲ ಮೇಲಿಲ್ಲ ಒಳಗಿಲ್ಲ ಹೊರಗಿಲ್ಲ
ಪಾಯ ಹಾಕಿ ಕಟ್ಟಿಲ್ಲ ಕಲ್ಲು ಕೆಸರವು ಇಲ್ಲ
ಪುಷ್ಪದ ಕೊಡೆಯಂತೆ ಕಣ್ಣೇಲಿ ಕಂಡೀನಿ ॥ ೨ ॥

ಮಠದ ವಿಸ್ತಾರವೆಲ್ಲ ಕೇಳಿರಿ ಸಿಲ್‌ಸಿಲಾ
ಮುನ್ನೂರಾ ಲಕ್ಷದ ಐವತ್ತು ಬಾಗಿಲ
ಜಗದೊಳಗ ಖಿಡಕಿ ಕಮಾನ ತೆಗುದಾರ ಸಿಲ್‌ಸಿಲಾ ॥ ೩ ॥

ಒಂದೊಂದು ಬಾಗಿಲಕ ಮುತ್ತ ಹವಳ ಕಡಿಮಿಲ್ಲ
ಚತ್ತಿಸ ಕೋಟಿ ದೇವರು ಸ್ಥಾನ ಮಾನ ಬಿಟ್ಟಿಲ್ಲ
ಮಠದಾನ ಸನ್ಯಾಸಿಗೆ ಪೂಜೆ ಇಲ್ಲ ಪಾಠ ಇಲ್ಲ ॥ ೪ ॥

ಕೆಳಗ ಮ್ಯಾಲ ಹುಡಿಕೆಲ್ಲಾ ದೃಷ್ಟಿ ಬಲಳೀನಿ ಡೋಲ
ಐದು ಬಣ್ಣ ಬ್ಯಾರೆ ಬ್ಯಾರೆ ಹೋಗೊದಲ್ಲ ಬರದಲ್ಲ
ಬಂದವಂಗ ಕೈಕಾಲ ಕಣ್ಣಿಲ್ಲ ಬಾಯಿಲ್ಲ ॥ ೫ ॥

ಮಡಿಲಿಂದ ನೋಡಿದರ ಕಸ ಇಲ್ಲ ಕಡ್ಡಿಲ್ಲ
ಯಶಸ್ವಿ ಕೊಡುವಂಥದ್ದು ಝುಂಡಾ ಒಂದು ಇತ್ತಲ್ಲ
ಕಾವಿ ಎದ್ದಿ ನೀಲಿವರ್ಣ ಶಂಭೋರು ಅಂಕಿ ಇತ್ತಲ್ಲಾ ॥ ೬ ॥

ಆ ಮಠದ ವಿಸ್ತಾರ ಕಂಡವರಿಗೆ ಮರಣಿಲ್ಲ
ಬಸವ ಜ್ಯೋತಿ ಈ ಮಠಕಂಡು ಹೇಳಿದರಲ್ಲ
ಮುಡಬಿ ಮಠದ ಆನಂದಯ್ಯನ ಮಗ ತಿಳಿಸಿದರಲ್ಲ ॥ ೭ ॥

(ಬೀದರ ಜಿಲ್ಲೆಯ ಅನುಭಾವಿ ಕವಿಗಳು. ಪು.೧೭೦-೭೧)

ಪಶು ಆದಿ

ನಿದ್ರಿ, ಆಹಾರ ಮೈಥುನದೊಳಗ
ನಿನ್ನ ಆಯುಷ್ಯ ರಾಶಿಯ ತುಂಬಿಟ್ಟಿ ದಿನಕೊಳಗ ॥ ಪ ॥

ಸಿದ್ದಿ ಮಾಡುತಾವು ಪ್ರಾಣಿ ಹದಿಲ್ಲದ
ನಿದ್ದ್ಯಾಗ ಬಿದ್ದು ನೀ ವದ್ದ್ಯಾಡಿದರ
ಸುದ್ದಿ ಹ್ಯಾಂಗ ತಿಳದಿತು ದೇವರದ
ಶುದ್ಧ ಹ್ಯಾಂಗ ಆಗುತಿ ಖುದ್ದ ॥ ೧ ॥


ತಿನ್ನುವದಕ್ಕಾಗೆ ಹುಟ್ಟ್ಯವಪ್ಪ ಪಶುಗಳೆಲ್ಲ
ತಿನ್ನುವದರಾಗೆ ಕಳಿದ್ಹೋಯ್ತು ಅವುಗಳ ಜೀವನೆಲ್ಲಾ
ತಿನ್ನುವದಕ್ಕಾಗಿ ನೀ ಹುಟ್ಟಿದಿ ಅಂದರ
ಚೆನ್ನನಾಗೋ ಹಾದಿ ನಿನಗೆ ಸಿಗಲೇ ಇಲ್ಲಾ ॥ ೨ ॥

ಹೊಲ್ಲ ಹೊಲಸಿನಾಗ ನೀ ಹುಟ್ಟಿ
ಹೊಲಸಿನ ತೂತಿಗಿ ನೀ ಬಾಯಿ ಬಿಟ್ಟಿ
ಮೈಥುನದಲ್ಲಿ ಬಿದ್ದು ನೀ ಮರ್ತಿ
ಅದಕ್ಕಾಗಿ ಶಿವನ ನೆಲೆ ಹತ್ತಲಿಲ್ಲ ಪೂರ್ತಿ ॥ ೩ ॥

ಈಶಾನಿಂದ ನೀ ಬಂದಿ
ಭವ ಚಕ್ರಕ ಸಿಕ್ಕಿ ನೀ ಪಶುವಾಗಿ ನಿಂದಿ
ಹಿಂದ-ಮುಂದ ಅರಿತಿಲ್ಲ ಹೊಂದಿ
ಮುಂದಾದರೂ ತಿಳಕೋ ಗುರುಪಾದಕ ಹೊಂದಿ ॥ ೪ ॥

ದೇಶದೊಳಗ ಲೇಸ ಮುಡಬಿ ಗ್ರಾಮ
ನನಗ ದೊರಕ್ಯಾದ ಆನಂದಯ್ಯನ ಪ್ರೇಮ
ನೀವು ಮಾಡರಿ ಗುರುಪಿನ ದ್ಯಾನ
ಮುಕ್ತಿ ಪಡೀರಿ ನಿಮ್ಮಲ್ಲಿ ಶಿವ ಹಾನ ॥ ೫ ॥

(ಈ ವಿವರಗಳನ್ನು ಕೊಟ್ಟವರು ಮಸ್ತ ಅಲಿಶಾ ಖಾದರಿಯವರ ವಂಶಸ್ಥರು, ಮುಡಬಿ.)




ಮಸ್ತ ಅಲಿಶಾ ಖಾದರಿ ಅವರ ಮನೆ (ಮುಡಬಿ).



ಮಸ್ತ ಅಲಿಶಾ ಖಾದರಿ ಅವರ ಪರಿವಾರ




ಮಸ್ತ ಆಲಿಶಾ ಖಾದರಿ.



ಮಸ್ತ ಆಲಿಶಾ ಖಾದರಿ ಅವರ ಆರಾಧ್ಯ ದೇವರಾದ ಶಹಾ ಹುಸೇನರ ಮಜಾರು (ಮುಡಬಿ).



ಮಸ್ತ ಅಲಿಶಾ ಖಾದರಿ ಅವರ ಆರಾಧ್ಯ ದೇವರು
ಹನುಮಾನ ದೇವಾಲಯ.



ಮಸ್ತ ಅಲಿಶಾ ಖಾದರಿ ಅವರ ಗುರುಗಳಾದ ಶ್ರೀ ಆನಂದಯ್ಯ
ಅವರ ಮನೆ (ಮುಡಬಿ)



ಆನಂದಯ್ಯನವರ ಸಮಾಧಿಯ ಒಂದು ನೋಟ



ಆನಂದಯ್ಯನವರ ಸಮಾಧಿ



ಮಸ್ತ ಅಲಿಶಾ ಖಾದ್ರಿ
ಅವರ ಸಮಾಧಿ



ಮಸ್ತ ಅಲಿಶಾ ಖಾದರಿ ಅವರು ತಪಸ್ಸು ಮಾಡಿದ ಮೈಲಾರ ಮಲ್ಲಯ್ಯನ ಮಂದಿರದ ಮಹಾದ್ವಾರ (ಮೈಲಾರ).




ಮೈಲಾರ ಮಲ್ಲಯ್ಯನ ದೇವಾಲಯದ ಒಳಾಂಗಣ ನೋಟ.



ಮೈಲಾರ ಮಲ್ಲಯ್ಯ ದೇವರ ದರ್ಶನ ಮೂರ್ತಿ.



ಮಸ್ತ ಅಲಿಶಾ ಖಾದರಿ ವಾಸಿಸುತ್ತಿದ್ದ ರೇವಣಯ್ಯ ಸ್ವಾಮಿ ಅವರ ಮನೆ
(ಕಣಜಿ)



ರೇವಣಯ್ಯ ಸ್ವಾಮಿ ಅವರ ಪತ್ನಿ ಲಕ್ಷ್ಮಿಬಾಯಿ.

೧೦. ಗುಂಡಪ್ಪ ಹರಿಜನ (ಕ್ರಿ.ಶ. ಸು. ೧೯೧೧-೨೦೦೧)

ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ಧನ್ನೂರ(ಕೆ) ವಾಡಿ ಗ್ರಾಮವು ಒಂದು ಚಿಕ್ಕ ಊರು. ಅದಕ್ಕೆ ಉಜ್ವಲವಾದ ಐತಿಹಾಸಿಕ ಹಿನ್ನೆಲೆ ಹೊಂದುವ ಭಾಗ್ಯವು ದಕ್ಕದೆ ಹೋದರೂ ತತ್ತ್ವಪದ ಸಾಹಿತ್ಯ ಚರಿತ್ರೆಯಲ್ಲಿ ಅದರ ಹೆಸರು ದಾಖಲುಗೊಳ್ಳುವಂತಾಗುತ್ತದೆ. ಇದಕ್ಕೆ ಕಾರಣರಾದ ವ್ಯಕ್ತಿ ಆ ಗ್ರಾಮದ ತತ್ತ್ವಪದ ಕವಿ ಗುಂಡಪ್ಪ ಹರಿಜನ ಅವರು.

ಬಡಕುಟುಂಬದ ಮನೆತನದಲ್ಲಿ ಹುಟ್ಟಿಬಂದ ಗುಂಡಪ್ಪನವರು ಬದುಕಿನುದ್ದಕ್ಕೂ ಪತ್ನಿ ಶಿವಮ್ಮನೊಂದಿಗೆ ಆರ್ಥಿಕ ದೃಷ್ಟಿಯಿಂದ ಬಡವರಾಗಿಯೇ ಬದುಕಿದವರು. ಆದರೆ ಅವರ ಹೃದಯ ಶ್ರೀಮಂತಿಕೆಯ ಎದುರಿನಲ್ಲಿ ಭೌತಿಕವಾದ ಶ್ರೀಮಂತಿಕೆ ಗೌಣವಾಗಿಯೆ ಕಂಡಿತು. ಝುರೆಪ್ಪ, ಶಂಕರ, ಶರಣಪ್ಪ, ಪ್ರಹ್ಲಾದ ಗುಂಡಪ್ಪನವರ ವಂಶದ ಸಂತಾನಗಳು. ಉಪಜೀವನಕ್ಕಾಗಿ ಕೃಷಿ ಕಾಯಕವನ್ನೇ ನಂಬಿದರು. ಬೇರೆಯವರ ಹೊಲದಲ್ಲಿ ಕೂಲಿ ಕೆಲಸ ಮಾಡುತ್ತ, ಹೊಲದ ಕಳೆಯನ್ನು ಕಳೆಯುತ್ತಲೇ ತಮ್ಮ ಮನದ ಕಳೆಯನ್ನು ಕಳೆದುಕೊಂಡವರು. ಜನತೆಯ ಮನದ ಕಳೆಯನ್ನು ಕಳೆದು ಹಾಕಲು ತತ್ತ್ವಪದ ಸಾಹಿತ್ಯವನ್ನು ಕಟ್ಟಿದವರು; ತಾವು ಕಟ್ಟಿದ ಪದಗಳನ್ನು ಹಾಡಿದವರು.

ಗುಂಡಪ್ಪನವರು ಹಿಂದೂವಾಗಿ ಹಲವಾರು ಹಿಂದೂ ದೇವರುಗಳಲ್ಲಿ ಭಕ್ತಿ ಹೊಂದಿದಂತೆ, ಇಸ್ಲಾಂ ದೇವರು ಲಾಲ ಹೈದರಿಯಲ್ಲಿಯೂ ಭಕ್ತಿ ಹೊಂದಿದ್ದು ಮಹತ್ವದ ಮತ್ತು ವಿಶೇಷ ಸಂಗತಿ. ಗುಂಡಪ್ಪನವರು ತಮ್ಮ ಬದುಕಿನುದ್ದಕ್ಕೂ ತಮ್ಮ ಆರಾಧ್ಯ ದೇವರೆಂದು ಲಾಲ ಹೈದರಿಯನ್ನೇ ನಂಬಿದರು. ಅವನ ಹೆಸರಿನಲ್ಲಿಯೇ ಹಲವಾರು ಮೋಹರಮ್-ತತ್ತ್ವಪದಗಳನ್ನು ಕಟ್ಟಿದರು.

ಮುಗ್ಧ ಮನಸ್ಸಿನ ಗುಂಡಪ್ಪನವರು ಮಗುವಿನಂತಹ ಸ್ವಭಾವದವರು. ಯಾವುದೇ ಏಚು-ಪೇಚು ಅರಿಯದವರು. ತಮ್ಮ ಕಾಯಕದಲ್ಲಿ ನಿಷ್ಠರಾಗಿ ತೊಡಗಿಕೊಂಡು ಬದುಕಿದವರು. ಅವರು ಮಾಡುವ ಕೆಲಸದಲ್ಲಿ ಅಪ್ಪಟ ಪ್ರಾಮಾಣಿಕತೆ ಇರುತಿದ್ದಿತು. ಒಂದು ಸಲ ಎಂದಿನಂತೆ ಅವರು ಬೇರೆಯವರ ಹೊಲಕ್ಕೆ ಕೆಲಸಕ್ಕೆಂದು ಹೋದರು. ಮಧ್ಯಾಹ್ನದವರೆಗೂ ಕಳೆ ಆರಿಸುವ ಕೆಲಸ ಮಾಡಿದರು. ಊಟದ ಸಮಯದ

ಹೊತ್ತಿಗೆ ಧಾರಾಕಾರವಾದ ಮಳೆ ಸುರಿಯಲಾರಂಭಿಸಿತು. ಅಲ್ಲಿಗೆ ಕೆಲಸವೂ ನಿಂತಂತಾಯಿತು. ಹೊಲದ ಮಾಲಿಕನು ಕೂಲಿಯವರನ್ನು ಮನೆಗೆ ಹೋಗಲು ತಿಳಿಸಿದನು. ಅದರಂತೆ ಎಲ್ಲರೂ ಮನೆಗೆ ಹೋದರು. ಮುಂದೆ ಕೂಲಿಕೊಡುವಾಗ ಹೊಲದ ಯಜಮಾನನು ಮಳೆ ಬಂದ ದಿನವನ್ನು ಒಳ ಗೊಂಡಂತೆ ಎಲ್ಲ ದಿನಗಳಿಗಾಗಿ ಪೂರ್ಣ ಕೂಲಿಯನ್ನೇ ಕೊಟ್ಟರು. ಆದರೆ ಗುಂಡಪ್ಪನವರು ಆ ದಿನದ ಪೂರ್ಣ ಕೂಲಿಯನ್ನು ಸ್ವೀಕರಿಸಲಿಲ್ಲ. ಹೊಲದ ಒಡೆಯನನ್ನು ಕುರಿತು ಗುಂಡಪ್ಪನವರು "ಮಾಲಕರೆ ನಾನು ಆ ದಿನ ಮಾಡಿದ್ದು ಅರ್ಧದಿನದ ಕೆಲಸ. ಅದಕ್ಕಾಗಿ ಪೂರ್ಣದಿನದ ಕೂಲಿ ಹೊಂದುವುದು ಕಾಯಕದ ತತ್ತ್ವಕ್ಕೆ ವಿರೋಧವಾದುದು, ಆದುದರಿಂದ ನನಗೆ ಇಷ್ಟೆ ಹಣ ಸಾಕು" ಎಂದು ಹೇಳಿದರು.

ಬಡತನವಿದ್ದರೂ ಅವರು ಬೇರೆಯವರ ಹಣಕ್ಕೆ ಆಶೆ ಪಡಲಿಲ್ಲ. ಪುಕ್ಕಟ್ಟೆ ಸಿಕ್ಕುವುದನ್ನು ಕಬಳಿಸಲು ಕನಸಿನಲ್ಲಿಯೂ ಯೋಚಿಸಲಿಲ್ಲ. ದೇವರು ಕೊಟ್ಟುದರಲ್ಲಿಯೇ ತೃಪ್ತಿಯಿಂದ ಬದುಕನ್ನು ಕಳೆದರು. ಗುಂಡಪ್ಪನವರ ಇಂತಹ ಗುಣಗಳಿಂದಾಗಿ ಜನತೆ ಅವರನ್ನು ಅತ್ಯಂತ ಪ್ರೀತಿಯಿಂದ ಕಾಣುತ್ತಿದ್ದರು. "ಗುಂಡಪ್ಪನೆಂದರೆ ಅವನೊಬ್ಬ ಶರಣ" ಎಂತಲೇ ಜನರು ತಿಳಿಯುತ್ತಿದ್ದರು. ಆದರೆ "ತಾನು ಶರಣ" ಎಂಬ ಭಾವ ಮಾತ್ರ ಗುಂಡಪ್ಪನವರಲ್ಲಿ ಇರಲಿಲ್ಲ. ಯಾರಾದರೂ ಅವರನ್ನು "ಶರಣರೆ ಬರ್ರಿ" ಎಂದು ಕರೆದರೆ ಅತ್ಯಂತ ಸಂಕೋಚ ಭಾವದಿಂದ "ಯಪ್ಪಾ ನನಗ್ಯಾಕ ಆ ಪುಣ್ಯಾತ್ಮರ ಹೆಸರಿನಿಂದ ಕರಿತೀರಿ? ನಾನು ಎಲ್ಲಿ? ಆ ಅಪ್ಪ ಬಸವಣ್ಣನಂತಹ ಶರಣರೆಲ್ಲಿ? ಅವರ ಪಾದಕ ಹತ್ತಿದ ಮಣ್ಣಾಗ ಪುಣ್ಯಾನು ನನಗ ಇಲ್ಲ" ಎನ್ನುತ್ತಿದ್ದರು.

ಕಾಯಕ ನಿಷ್ಠೆ, ಸಹಬಾಳ್ವೆ, ಪ್ರಾಮಾಣಿಕತೆ, ನಿರಹಂಕಾರ ಇಂತಹ ಗುಣಗಳ ಕಲಿಕೆಗೆಂದು ಯಾವ ಗುರುಗಳಲ್ಲಿಯೂ ಹೋಗಲಿಲ್ಲ, ಯಾವ ಶಾಲೆ-ಮಠಗಳ ಮೆಟ್ಟಿಲೂ ಹತ್ತಲಿಲ್ಲ, ಜೀವನದ ವಿದ್ಯಾಲಯವೇ ಅವರಿಗೆ ಎಲ್ಲವನ್ನು ಕಲಿಸಿತೆನ್ನಬೇಕು.

ನಿರಕ್ಷರಿಗಳಾದ ಗುಂಡಪ್ಪನವರಿಗೆ ಓದು-ಬರಹಗಳ ಸಂಬಂಧ ದೂರ-ದೂರ. ಆದರೆ ಭಜನೆಯನ್ನು ಮಾಡುತ್ತ, ಸಾಧು-ಸಂತರ ಸತ್ಸಂಗದಲ್ಲಿ ಬಿಡುವಿನ ಕಾಲವನ್ನು ಕಳೆಯುತ್ತ ಇದ್ದ ಅವರಿಗೆ ಅನುಭಾವದ ಪದಗಳ ಕಟ್ಟುವಿಕೆ ಜನ್ಮ ಜಾತವಾಗಿಯೇ ಬಂದಿತೆನ್ನಬೇಕು. ಮೊದಲಿಗೆ ಅವರು ಮೋಹರಮ್ ಪದಗಳನ್ನು ಕಟ್ಟಿ ಹಾಡಲು ಪ್ರಾರಂಭಿಸಿದರು. ಗ್ರಾಮದಲ್ಲಿ ಮೋಹರಮ್ ಆಚರಣೆಯ ಸಂದರ್ಭವು ಗುಂಡಪ್ಪನವರ ಹಾಡುಗಾರಿಕೆಯಿಲ್ಲದೆ ಸಾಂಗವಾಗುತ್ತಿರಲಿಲ್ಲ. ಬೇರೆ ಊರಿನವರೂ ಅವರನ್ನು ಮೋಹರಮ್ ಹಾಡುಗಳನ್ನು ಹಾಡಲು ಕರೆದುಕೊಂಡು ಹೋಗುತ್ತಿದ್ದರು. ಮೋಹರಮ್ ಹಾಡುಗಳನ್ನು ಕಟ್ಟುತ್ತ; ಹಾಡುತ್ತಲೇ ಅವರು ತತ್ತ್ವಪದಗಳನ್ನು ಕಟ್ಟತೊಡಗಿದರು. ಭಜನೆಯಲ್ಲಿ ಹಾಡತೊಡಗಿದರು. ಗ್ರಾಮದ ದೇವರಾದ ಲಾಲ ಹೈದರಿಯನ್ನೇ ತಮ್ಮೆಲ್ಲ ಹಾಡುಗಳಲ್ಲಿ ಭಕ್ತಿಯಿಂದ ಸ್ಮರಿಸಿದ್ದಾರೆ.

ಒಂಬತ್ತು ದಶಕಗಳಕಾಲ ಜೀವಿಸಿದ್ದ ಗುಂಡಪ್ಪ ಹರಿಜನ ಅವರು ಕ್ರಿ.ಶ. ೨೦೦೧ರಲ್ಲಿ ಭೌತ ದೇಹವನ್ನು ತ್ಯಜಿಸಿದರು. ಗುಂಡಪ್ಪನವರು ರಚಿಸಿದ ಎರಡು ತತ್ತ್ವಪದಗಳನ್ನು ಉದಾಹರಣೆಗಾಗಿ ನೀಡಲಾಗಿದೆ.

ಯಾರು ಶ್ರೀಮಂತರು ?

ಸಿರಿಮಂತ ಸಿರಿಮಂತೆಂದು
ಬರಿಬಾಯಿ ಬಿಡುತೀರಿ
ಖರೆ ಸಿರಿಮಂತ್ಯಾರೋ ಭೂಮ್ಯಾಗ ? ॥ ಪ ॥

ತಾಯೀಗಿ ರಕ್ಷಣಿ ಮಾಡುವನು ಸಿರಿಮಂತ
ತಂದೀಗಿ ಪೂಜೆ ಮಾಡುವನು ಸಿರಿಮಂತ
ಗುರುವೀಗಿ ಅಂಜಿ ನಡೆವನು ಸಿರಿಮಂತ
ಹಿರಿಯರಿಗಿ ಬಾಗಿ ಇರುವವನು ಸಿರಿಮಂತ ॥ ೧ ॥

ದಾನಾ–ಧರ್ಮಾ ಮಾಡುವನೆ ಸಿರಿಮಂತ
ಧ್ಯಾನಾ–ಮೌನ ಇದ್ದವನೆ ಸಿರಿಮಂತ
ಹೀನ ವಾಸನಿ ಗುಣ ಬಿಟ್ಟವನೆ ಸಿರಿಮಂತ
ಸ್ವಾನಾ ಬುದ್ಧಿಯ ಬಿಟ್ಟು ಬಂದವನೆ ಸಿರಿಮಂತ ॥ ೨ ॥

ಮಾನವಂತರಿಗಂಜಿ ನಡಿವವನೆ ಸಿರಿಮಂತ
ಕಾಮ–ಕ್ರೋಧಗಳು ಬಿಟ್ಟವನೆ ಸಿರಿಮಂತ
ನಂಬೀಗಿ ದ್ರೋಹಾ ಮಾಡದವ ಸಿರಿಮಂತ
ನೀಚ ಬುದ್ಧಿಯನು ಬಿಟ್ಟವನು ಸಿರಿಮಂತ ॥ ೩ ॥

ವಾದಕ್ಕ ವಾದವ ಮಾಡದವ ಸಿರಿಮಂತ
ಶಿವಕೊಟ್ಟ ಬದುಕಿನಲಿ ಇರುವವನು ಸಿರಿಮಂತ
ಬ್ಯಾರೆವರ ಸ್ವತ್ತೀಗಿ ಆಶಿಸದವ ಸಿರಿಮಂತ
ಚಂದಾಗಿ–ವಂದಾಗಿ ನಡೆವವನೆ ಸಿರಿಮಂತ ॥ ೪ ॥
ಭೂಮ್ಯಾಗ ಧನ್ನೂರ ವಾಡಿನೇ ಸಿರಿಮಂತ

ಹಾಡಾ ಹಾಡವರೆಲ್ಲ ಭಾರೀನೆ ಸಿರಿಮಂತ
ಲಾಲ ಹೈದರಿ ದೇವರು ಹಾನಪ್ಪ ಸಿರಿಮಂತ
ಅವನ ಪಾದಕ್ಹೊಂದಿ ನೀ ಆಗು ಸಿರಿಮಂತ ॥ ೫ ॥

ಯಾರು ಬಡವ ?

ಬಡವ ಯಾರ ತಾಯಪ್ಪಾ ಈ
ಭೂಮ್ಯಾಗ ಬಡವ ಯಾರ ತಾಯಪ್ಪಾ ? ॥ ಪ ॥

ಗುರುವೀನ ನಿಂದಾ ಮಾಡುವನೆ ಬಡವಾ
ಹಿರಿಯರಿಗಿ ಮೌನಾ ಕೂಡುವವನೆ ಬಡವಾ
ಶರಣರಿಗಿ ಅಂಜಿ ನಡೆಯುವವನೆ ಬಡವಾ
ಹರಧ್ಯಾನ ಮಾಡದವನು ಕೆಟ್ಟ ಕಡು ಬಡವಾ ॥ ೧ ॥

ದುರಾಸಿ ಮನದೊಳಗ ಇದ್ದವ ಬಡವಾ
ಪರಸತಿಯನು ಬೇಡಿ ಮರಗುವವನು ಬಡವಾ
ಖರೆ-ಸುಳ್ಳಿನ ಭೇದ ತಿಳಿಯದವ ಬಡವಾ
ಮರಣಕ್ಕೆ ಅಂಜಿ ಬದಕವನೆ ಬಡವಾ ॥ ೨ ॥

ಕಾಲನ ಲೀಲಾ ತಿಳಿಯದವ ಬಡವಾ
ಮೇಲಾದ ಪದವನು ಕಾಣದವ ಬಡವಾ
ಖುಲ್ಲ ತನದಲಿ ಗುಲ್ಲ ಮಾಡುವನು ಬಡವಾ
ಲಾಲ ಹೈದರಿ ದೇವರ ನಂಬದವ ಬಡವಾ ॥ ೩ ॥

(ಈ ವಿವರಗಳನ್ನು ನೀಡಿದವರು ಗ್ರಾಮ ಪಂಚಾಯತಿ ಸದಸ್ಯರಾದ ಸಂಜು ಕುಮಾರ. ಜಿ. ಹಲಸೆ (ವ.೪೦). ಧನ್ನೂರ ವಾಡಿ-ಕೆ.)

▯



ಗುಂಡಪ್ಪ ಹರಿಜನ ಅವರ ಮನೆ (ಧನ್ನೂರವಾಡಿ–ಕೆ).



ಗುಂಡಪ್ಪನವರ ಆರಾಧ್ಯ ದೇವರು ಲಾಲಹೈದರಿ ದರ್ಗಾ (ಧನ್ನೂರವಾಡಿ–ಕೆ).

೧೧. ಬಸವಣ್ಣಪ್ಪ ಸಿಂಪಿ (ಕ್ರಿ.ಶ.ಸು. ೧೯೧೪–೧೯೭೪)

ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಹಾರಕೂಡ ಗ್ರಾಮದ ಇನ್ನೊಬ್ಬ ತತ್ತ್ವಪದಕಾರ ಬಸವಣ್ಣಪ್ಪ ಸಿಂಪಿ ಅವರು. ಅವರ ತಂದೆ ಬಂಡೆಪ್ಪಶೀಲವಂತ ಅವರು ಆಸ್ತಿಕ ಮನದ ವ್ಯಕ್ತಿ. ಸಿಂಪಿಗ ಕಾಯಕದೊಂದಿಗೆ ಒಕ್ಕಲುತನದ ಕೆಲಸಗಳನ್ನು ಮಾಡುತ್ತಿದ್ದರು. ಬಸವಣ್ಣಪ್ಪನವರ ತಾಯಿ ಬಂಗಾರೆವ್ವನವರು. ಹೆಣ್ಣುಮಕ್ಕಳ ಹಾಡುಗಳನ್ನು ಮಧುರ ಕಂಠದಿಂದ ಹಾಡುತ್ತಿದ್ದರು. ಊರಿನವರ ಮನೆಗಳಲ್ಲಿ ನಡೆಯುತ್ತಿದ್ದ ಮದುವೆ ಮುಂತಾದ ಕಾರ್ಯಕ್ರಮಗಳಲ್ಲಿ ಬಂಗಾರೆವ್ವನವರು ಹಾಡುವುದಕ್ಕಾಗಿ ಭಾಗವಹಿಸುತ್ತಿದ್ದರು. ಜನತೆ ಅವರನ್ನು ಆತ್ಮೀಯ ಭಾವದಿಂದ ಕರೆಸುತ್ತಿದ್ದರು.

ಬಸವಣ್ಣಪ್ಪ ಸಿಂಪಿ ಅವರ ಮೇಲೆ ತಾಯಿ ಅವರ ಪ್ರಭಾವವಾಯಿತು. ಚಿಕ್ಕ ಬಾಲಕನಾಗಿದ್ದಾಗ ಅವನು ತಾಯಿಯೊಂದಿಗೆ ಹೋಗುತ್ತಿದ್ದನು. ತಾಯಿ ಬಂಗಾರೆವ್ವ ಹಾಡುತ್ತಿದ್ದರೆ ಬಾಲಕ ಬಸವಣ್ಣಪ್ಪ ತಾಯಿಯ ತೊಡೆಯ ಮೇಲೆ ಮಲಗಿ ಹಾಡುಗಳನ್ನು ಕೇಳುತ್ತ ನಿದ್ದೆ ಹೋಗುತ್ತಿದ್ದನು.

ಬಸವಣ್ಣಪ್ಪನವರು ಹೆಚ್ಚಾಗಿ ಓದಿದವರಲ್ಲ, ಸ್ವಾನುಭಾವ ಮತ್ತು ಸ್ವಪ್ರಯತ್ನದಿಂದಲೇ ಮರಾಠಿ–ಮೋಡಿಯಾದಿ ಭಾಷೆಗಳನ್ನು ಕಲಿತುಕೊಂಡರು. ಕನ್ನಡದ ಅಕ್ಷರಗಳನ್ನು ಪರಿಚಯಿಸಿಕೊಂಡರು. ಬಸವಣ್ಣಪ್ಪನವರು ಅತ್ಯಂತ ಪ್ರಾಮಾಣಿಕ ವ್ಯಕ್ತಿಗಳಾಗಿದ್ದರು. ಹೊಲಿಗೆ ಕಾಯಕವನ್ನು ಅವರು ಅತ್ಯಂತ ಶ್ರದ್ಧೆಯಿಂದ ನಿರ್ವಹಿಸುತ್ತಿದ್ದರು. ಹೊಲಿಗೆಗೆ ಹಾಕುತ್ತಿದ್ದ ಬಟ್ಟೆಯಲ್ಲಿ ಸ್ವಲ್ಪ ಉಳಿದರೂ ಅದನ್ನು ತಿರುಗಿ ಗಿರಾಕಿಗಳಿಗೆ ಕೊಡುತ್ತಿದ್ದರು. ಹೀಗಾಗಿ ಜನರು ಬಸವಣ್ಣಪ್ಪನವರನ್ನು "ಶರಣ ಸಿಂಪಿಗ"ನೆಂದು ಕರೆಯುತ್ತಿದ್ದರು. ಬಸವಣ್ಣಪ್ಪನವರ ಹೆಂಡತಿ ಗಂಗಮ್ಮನವರು. ಪತಿಗೆ ತಕ್ಕಸತಿ. ಅವರು ಗಂಡನ ಹೊಲಿಗೆ ಕಾಯಕದಲ್ಲಿ ಸಹಾಯ ಮಾಡುತ್ತಿದ್ದರು. ಅಂಗಿ–ಕುಪ್ಪಸಗಳಿಗೆ ಗುಂಡಿ ಹಚ್ಚುವುದು; ತೂತುಗಳಿಗೆ ಹೊಲಿಗೆ ಹಾಕುವುದು ಇಂತಹ ಸಣ್ಣ–ಪುಟ್ಟ ಕೆಲಸಗಳನ್ನು ಅವರು ಮಾಡುತ್ತಿದ್ದರು. ಈ ದಂಪತಿಗಳಿಗೆ ಒಬ್ಬನೆ ಮಗ. ಅವನ ಹೆಸರು ಮಾದಾರಾಯ. ಹಾರಕೂಡದಲ್ಲಿರುವ ಅವರ ಮೊಮ್ಮಕ್ಕಳು ಇಂದು ಸಿಂಪಿಗ ವೃತ್ತಿಯನ್ನೇ ಅವಲಂಬಿಸಿಕೊಂಡು ಜೀವನ ನಿರ್ವಹಿಸುತ್ತಲಿದ್ದಾರೆ.

ಬಸವಣ್ಣಪ್ಪನವರಿಗೆ ಹಾರಕೂಡ ಹಿರೇಮಠದ ಬಗ್ಗೆ ಅತೀವ ಭಕ್ತಿಯಿದ್ದಿತು. ದಿನದಲ್ಲಿ ಅವರು ಒಂದು ಸಲವಾದರೂ ಚೆನ್ನ ಬಸವ ಶ್ರೀಗಳವರ ದರ್ಶನ ಪಡೆಯದೆ ಇರುತ್ತಿರಲಿಲ್ಲ. ಚೆನ್ನಬಸವ ಶಿವಯೋಗಿಗಳಿಗೂ ಬಸವಣ್ಣಪ್ಪನೆಂದರೆ ಅಕ್ಕರತೆಯಿತ್ತು. ಬಸವಣ್ಣಪ್ಪನವರು ಬಂದಾಗಲೆಲ್ಲ ಶಿವಯೋಗಿಗಳು ಹಸನ್ಮುಖರಾಗಿ ಆಶೀರ್ವಾದ ಮಾಡುತ್ತಿದ್ದರು. ಶ್ರೀ ಗಳಲ್ಲಿರುವ ಭಕ್ತಿಯ ದ್ಯೋತಕವಾಗಿಯೇ ಬಸವಣ್ಣಪ್ಪನವರು ಹಲವಾರು ಪದ್ಯಗಳನ್ನು ಚೆನ್ನಬಸವ ಶಿವಯೋಗಿಗಳನ್ನು ಕುರಿತಾಗಿ ರಚಿಸಿದ್ದಾರೆ. ಅವುಗಳಲ್ಲಿ ಶಿವಯೋಗಿಗಳ ಶಿವಯೋಗ ವ್ಯಕ್ತಿತ್ವವನ್ನು ಸ್ಮರಿಸಿದ್ದಾರೆ.

ಕಾಯಕದ ಬಿಡುವಿನ ಸಮಯದಲ್ಲಿ ಬಸವಣಪ್ಪನವರು ಮಠ ಹಾಗೂ ಊರಲ್ಲಿ ನಡೆಯುವ ಇತರ ಸ್ಥಳಗಳಲ್ಲಿನ ಭಜನೆ ಕಾರ್ಯಕ್ರಮಗಳಿಗೆ ಹೋಗುತ್ತಿದ್ದರು. ಭಕ್ತಿಯ ಗೀತೆಗಳನ್ನು ಸೊಗಸಾಗಿ ಹಾಡುತ್ತಿದ್ದರು. ಹೀಗೆ ಹಾಡುತ್ತಲೇ ಅವರು ಸ್ವತಃ ಹಾಡುಗಳನ್ನು ರಚಿಸತೊಡಗಿದರು.

ಬಸವಣ್ಣಪ್ಪನವರ ಗುರುಗಳು ಜಂಬಗಿ ಶರಣರು. ಅವರ ಮಾರ್ಗದರ್ಶನದಿಂದಲೇ ಬಸವಣ್ಣಪ್ಪನವರೊಬ್ಬರು ಉತ್ತಮ ತತ್ತ್ವಪದಕಾರರಾಗುವುದಕ್ಕೆ ಸಾಧ್ಯವಾಯಿತು. ಬಸವಣ್ಣಪ್ಪನವರು ತಾವು ರಚಿಸಿರುವ ಹಾಡುಗ೨೭ಳಲ್ಲಿ 'ಜಂಬಗಿ ಶರಣ' ಎಂಬ ಅಂಕಿತದೊಂದಿಗೆ ತಮ್ಮ ನಾಮ ಮತ್ತು ಕೆಲವೆಡೆಗಳಲ್ಲಿ ಚೆನ್ನಬಸವ ಶಿವಯೋಗಿಗಳ ನಾಮದ ಮುದ್ರೆಗಳನ್ನು ಬಳಕೆ ಮಾಡಿದ್ದಾರೆ. ಹೆಚ್ಚಾಗಿ ಅವರು ಬಳಕೆ ಮಾಡಿರುವ ಅಂಕಿತವು **"ಗುರುಪುತ್ರ ಬಸವಣ್ಣಪ್ಪ"** ಎಂಬುದಾಗಿದೆ.

ಬಸವಣ್ಣಪ್ಪನವರ ಪದ್ಯಗಳು ಸರಳವಾಗಿವೆ; ಸುಂದರವಾಗಿವೆ. ತತ್ತ್ವ ಗರ್ಭಿತವಾಗಿವೆ; ಅರ್ಥಪೂರ್ಣವೂ ಆಗಿವೆ. ಅವರು ತಮ್ಮ ಮನೆಯ ಮಹಡಿಯಲ್ಲಿ ಕುಳಿತು ಹಾಡುಗಳನ್ನು ಬರೆಯುತ್ತಿದ್ದರು. ಬರೆದಾದ ಮೇಲೆ ಒಂದು ಸಲ ರಾಗಬದ್ಧವಾಗಿ ಎತ್ತರದ ಧ್ವನಿಯಲ್ಲಿ ಹಾಡಿ ಅನುಭವಿಸುತ್ತಿದ್ದರು; ಆನಂದಿಸುತ್ತಿದ್ದರು.

ಬಸವಣ್ಣಪ್ಪನವರು ಹಲವಾರು ಹಾಡುಗಳನ್ನು ಬರೆದು ಕೃತಾರ್ಥರಾಗಿದ್ದಾರೆ. ಲಾವಣಿ–ಗೀಗೀ–ಕೋಲಾಟ; ಹಂತಿ ಇಂತಹ ಪ್ರಕಾರಗಳು ಅವರ ಸಾಹಿತ್ಯ ಪ್ರಕಾರಗಳಲ್ಲಿ ಕಂಡು ಬರುತ್ತವೆ. ಅವರು ಎಲ್ಲಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ರಚಿಸಿದ್ದು ತತ್ತ್ವಪದಗಳನ್ನು. ಬದುಕಿನ ಉತ್ತರಾರ್ಧದಲ್ಲಿ ಅವರು ಸಂಪೂರ್ಣ ಅಂತರ್ಮುಖಿಯಾಗಿ ಆಧ್ಯಾತ್ಮದ ಕಡೆಗೆ ವಾಲಿದರು. ಆಗ ರಚಿಸಿದ ಹಾಡುಗಳು ಅತ್ಯಂತ ತತ್ತ್ವ ಗರ್ಭಿತವಾಗಿ ಮೂಡಿಬಂದಿವೆ.

ಬಸವಣ್ಣಪ್ಪನವರು ಕ್ರಿ.ಶ. ೧೯೭೪ರಲ್ಲಿ ಇಹಲೋಕದ ಬದುಕನ್ನು ಪೂರ್ಣಗೊಳಿಸಿದರು. ಅರವತ್ತು ನಾಲ್ಕು ವರ್ಷಗಳ ಸೀದಾ–ಸಾದಾ ಜೀವನದಲ್ಲಿ

ಅವರು ರಚಿಸಿದ ಹಾಡುಗಳೂ ನಿರಾಡಂಬರದಿಂದ ಕೂಡಿದವುಗಳಾಗಿವೆ. ಹಾಡುವ ಮತ್ತು ಕೇಳುವ ಮನಗಳಿಗೆ ಆನಂದವನ್ನುಂಟು ಮಾಡುತ್ತವೆ. ಅವರು ರಚಿಸಿದ ಎರಡು ತತ್ತ್ವಪದಗಳನ್ನು ಇಲ್ಲಿ ನಿದರ್ಶನಕ್ಕಾಗಿ ದಾಖಲಿಸಲಾಗಿದೆ:

ಹುಡುಕುವ ವಸ್ತು ಇಲ್ಲೆ ಐತಿ

ನೇತಿ ನೇತಿ ಅನುತ ಎಲ್ಲಿಗೆ ಹೋತಿ
ಇಲ್ಲೆ ಐತಿ ನೀ ಹುಡುಕುವ ವಸ್ತು ॥ ಪ ॥

ಕಾಶಿ ಕೇದಾರ ಶ್ರೀಶೈಲಕ್ಹೋದರ ಅಲ್ಲಿ ಎಲ್ಲೂ ಇಲ್ಲ
ಲೇಸಿನಿಂದಲೆ ಋಷಿಕೇಶಕ ಹೋದರ ಅಲ್ಲಿ ಎಲ್ಲೂ ಇಲ್ಲ
ಘಾಷಿಗೊಂಡು ನೀ ಯಾತ್ರೆ ಮಾಡಿದರ ಅಲ್ಲಿ ಎಲ್ಲೂ ಇಲ್ಲ
ಮೋಸ ಮಾಡಿ ನೀ ಗಂಗಿ ಮಿಂದರ ಅಲ್ಲಿ ಎಲ್ಲೂ ಇಲ್ಲ ॥ ೧ ॥

ರಾಮ ನಾಮ ಪಠಿಸಿದರಿಲ್ಲ
ರಹೀಮ ನಾಮ ಕೂಗಿದರಿಲ್ಲ
ಶಿವ ಶಿವ ಎಂದರ ಶಿವ ಸಿಗಲಿಲ್ಲ
ಭವ ಬಂಧನ ನಿನಗ ಬಿಡಲಿಲ್ಲ ॥ ೨ ॥

ನೂರು ಯಜ್ಞ ಮಾಡಿದರಿಲ್ಲ
ಆರು ಶಾಸ್ತ್ರ ಓದಿದರಿಲ್ಲ
ಮೂರು ಜ್ಞಾನಕ ನಿಲುಕಿಲ್ಲ
ಪಾರು ಗಾಣದ ವಸ್ತು ಅದು ತಿಳಿ ಖುಲ್ಲಾ ॥ ೩ ॥

ನೇತಿಗೆ ಅದು ನೆಲುಕಿಲ್ಲ
ಐತಿಗೆ ಅದು ಕಂಡಿಲ್ಲ
ನೇತಿ–ಐತಿಗಳ ನಡುವೆಯೂ ಇಲ್ಲ
ಖ್ಯಾತಿ–ಪ್ರಖ್ಯಾತಿಗದು ಮೊದಲಿಲ್ಲ ॥ ೪ ॥

ಧರೆಯೊಳಗ ಹಾರಕೂಡ ಮೇಲ
ಹೇಳುವ ಗುರುಪುತ್ರ ಬಸವಣ್ಣ ಕೀಲ
ಮುಳುಗಿ ನೋಡು ನಿನ್ನೊಳಗೆಲ್ಲ
ಅಂತರಂಗದಲ್ಲಿ ಶಿವ ಹಾನಲ್ಲ ॥ ೫ ॥

ಕುರುವಿನಿಂದ ಅರಿವು

ಕುರುವಿಂದ ಅರಿವು ದೊರಿತಾದೋ ತಮ್ಮಾ
ಕುರುವ್ಹಿಡಿದು ಪೂಜಿಸು ಒಮ್ಮಾ ॥ ಪ ॥

ಹರಿಹರ ಸುರರೆಲ್ಲ
ಧೀರ ಮನು ಮುನಿಯೆಲ್ಲ
ಕುರು ಹಿಡಿದು ಪೂಜಿಸಿದರೊ ಅಣ್ಣಾ
ವರ ಇಷ್ಟಲಿಂಗವು ಕುರುಹಿನ ರೂಪಣ್ಣಾ ॥ ೧ ॥


ಗುರುಕೊಟ್ಟ ಕರುವದು
ಮರೆಯಲು ಬಾರದು
ತೆರೆದು ನೋಡು ಬೇಕು ಕಣ್ಣಾ
ಅರಿವು ಮೂಡುತಾದಣ್ಣಾ ॥ ೨ ॥

ಇಷ್ಟ–ಪ್ರಾಣ–ಭಾವ ಅದರೊಳಗ ನೋಡಣ್ಣಾ
ಗುರು–ಲಿಂಗ–ಜಂಗಮ ಅದರೊಳಗ ಕಾಣಣ್ಣ
ಪರಿಣಾಮ–ಪ್ರಸಾದದಲ್ಲಿಯೆ ಸವಿಯಣ್ಣಾ
ಕುರುವಿಂದ ಅರುವು ಪಡೆಯಣ್ಣಾ ॥ ೩ ॥

ನಿನ್ನ ರೂಪಿನ ಕುರುವು
ಚಿನ್ಮಯ ವಸ್ತುಗದು ಕುರುಹು
ನಿನ್ನ ನೀಗಿಸುವದಕ್ಕೆ ಪರವಸ್ತುವಹುದು
ಚೆನ್ನಾಗಿ ಅರಿ ತಮ್ಮ ಕಷ್ಟ ನೀಗುವುದು ॥ ೪ ॥

ವಸುಧಿಯೊಳಗ ಆದ ಹಾರಕೂಡ ಗ್ರಾಮ
ಶಿಶುವಾಗಿ ಹೇಳ್ಯಾನ ಗುರುಪುತ್ರ ಬಸವಣ್ಣ
ಕುರು ಹಿಡಿದು ಅರಿವು ಕಾಣಿರಣ್ಣಾ
ಕುರುವಿನಲ್ಲಿಯೇ ಶಿವ ಹಾನಣ್ಣಾ ॥ ೫ ॥

▯



ಬಸವಣ್ಣಪ್ಪ ಸಿಂಪಿ ಅವರ ಮನೆ ಮತ್ತು ವಂಶದ ಸಂತತಿಗಳು.
(ಹಾರಕೂಡ).

೧೨. ಗೌರವ್ವ ಕಾಡಾದಿ (ಕ್ರಿ.ಶ.ಸು. ೧೯೨೨–೨೦೧೧)

ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ಹುಲಸೂರ ಗ್ರಾಮದ ಕಾಡಾದಿ ಮನೆತನದ ಗೌರವ್ವನವರೊಂದು ಹಾಡುಗಳ ಕಣಜದಂತಿದ್ದರು. ಅವರು ಬದುಕಿರುವಾಗ ಐದು ನೂರಕ್ಕೂ ಮೇಲ್ಪಟ್ಟ ಸಂಖ್ಯೆಯ ಜನಪದ –ಭಜನೆ – ಹೆಣ್ಣುಮಕ್ಕಳ – ತತ್ತ್ವಪದಗಳನ್ನು ಮುಖದ್ಗತವಾಗಿ ಹಾಡುತ್ತಿದ್ದರು. ತಮ್ಮೊಂದಿಗೆ ನೂರಾರು ಹೆಣ್ಣುಮಕ್ಕಳಿಗೆ ಹಾಡುವುದನ್ನು ಕಲಿಸಿದರು. ಗೌರವ್ವ ಕಾಡಾದಿ ಅವರು ಪ್ರಸಿದ್ಧ ಹಾಡುಗಾರ್ತಿಯಾಗಿದ್ದಂತೆ, ಕವಯಿತ್ರಿಯೂ ಆಗಿದ್ದರು. ಅಕ್ಷರ ಜ್ಞಾನವಿಲ್ಲದ ಅವರು ಸ್ವತಃ ಹಾಡುಗಳನ್ನು ಕಟ್ಟಿ ಹಾಡಿ; ಬೇರೆ ಹೆಣ್ಣುಮಕ್ಕಳಿಗೆ ಅವುಗಳನ್ನು ಕಲಿಸುತ್ತಿದ್ದರು.

ಶರಣ ಬದುಕಿನ ಗೌರವ್ವನವರು ತಮ್ಮ ಸಾಹಿತ್ಯ ಬದುಕಿನಿಂದ ತವರು ಮನೆ–ಪತಿಯ ಮನೆಗಳೆರಡನ್ನೂ ಬೆಳಗುವುದರೊಂದಿಗೆ ತಾವು ನೆಲೆನಿಂತ ಸಮಾಜವನ್ನು ಬೆಳೆಗಿದರು.

ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಮೂರ್ಖಂಡಿಯೆಂಬುದು ಗೌರವ್ವನವರಿಗೆ ಜನ್ಮ ನೀಡಿದ ಗ್ರಾಮವಾಗಿದೆ. ಅವರ ತಂದೆ ಧನ್ನೂರೆ ಮನೆತನದ ಬಸವಲಿಂಗಪ್ಪನವರು. ತಾಯಿ ಬಸವಲಿಂಗಮ್ಮ. ಈ ದಂಪತಿಗಳಿಗೆ ಮಗಳಾಗಿ ಗೌರವ್ವನವರು ಕ್ರಿ.ಶ.ಸು. ೧೯೨೨ರಂದು ಜನ್ಮ ತಾಳಿದರು. ಸುಸಂಸ್ಕೃತ ಶರಣಜೀವಿಗಳಾಗಿದ್ದ ತಂದೆ ತಾಯಿಗಳ ಮಾರ್ಗದರ್ಶನದಲ್ಲಿ ಸಂಸ್ಕಾರಗೊಳ್ಳುತ್ತ ಬೆಳೆದ ಗೌರಮ್ಮನವರು ಅಕ್ಷರಭ್ಯಾಸವಿಲ್ಲದಿದ್ದರೂ ಸುಸಂಸ್ಕೃತಿಯ ಮೂರ್ತಿಯಾಗಿ ರೂಪತಳೆದರು. ಗೌರವ್ವನವರ ಅಕ್ಕನವರಾದ ನನ್ನೆವ್ವನವರು ಒಳ್ಳೆಯ ಹಾಡುಗಾರ್ತಿಯಾಗಿದ್ದರು. ತಮ್ಮ ಕಿರಿಯ ಸಹೋದರಿ ಗೌರವ್ವನವರಿಗೆ ತಮ್ಮ ಹವ್ಯಾಸದ ನಂಟನ್ನು ಅಂಟಿಸಿದರು. ಹೀಗಾಗಿ ಗೌರವ್ವನವರು ತಮ್ಮ ಒಂಬತ್ತರ ವಯದಿಂದಲೇ ಮಧುರವಾಗಿ ಹಾಡುವುದಕ್ಕೆ ಆರಂಭಿಸಿದರು.

ವಿವಾಹದ ವಯಸ್ಸಿಗೆ ಬಂದ ಗೌರವ್ವನವರನ್ನು ಬಸವಕಲ್ಯಾಣ ತಾಲ್ಲೂಕಿನ ಹುಲಸೂರ ಗ್ರಾಮದ ಕಾಡಾದಿ ಅವರ ಮನೆತನಕ್ಕೆ ಮದುವೆ ಮಾಡಿಕೊಡಲಾಯಿತು.

ಕಾಡಾದಿ ಮನೆತನವು ನೂರಾರು ವರುಷಗಳಿಂದಲೂ ಶ್ರೀಮಂತಿಕೆಯ ಮನೆತನವಾಗಿ ಬೆಳೆದುಕೊಂಡು ಬಂದುದು. ಅದರ ಹಿರಿಯರು ಭೌತಿಕತೆಯಿಂದ ಶ್ರೀಮಂತರಾಗಿದ್ದಂತೆ ಸಾಂಸ್ಕೃತಿಕವಾಗಿಯೂ ಶ್ರೀಮಂತರಾಗಿದ್ದರು. ಕಾಡಾದಿ ಮನೆತನದ ಹಿರಿಯ ರುದ್ರಪ್ಪನವರು. ಅವರ ಕೊನೆಯ ಮಗ ಮನ್ಮಥಪ್ಪನವರ ಸತಿಯಾಗಿ ಗೌರವ್ವನವರು ಒಟ್ಟು ಕುಟುಂಬವನ್ನು ಬೆಳಗುವ ದೀಪವಾದರು.

ಮನ್ಮಥಪ್ಪ ಕಾಡಾದಿ ಅವರು ನಾಲ್ಕು ಅಂಗಡಿಗಳ ವ್ಯಾಪಾರ ನೋಡಿಕೊಳ್ಳುತ್ತಿದ್ದರು. ಕಿರಾಣಿ–ಭುಸಾದ ಅಂಗಡಿಯಲ್ಲದೆ, ಅಡತಿಯ ಅಂಗಡಿ ವ್ಯವಹಾರಗಳು ಅತ್ಯಂತ ಸಮೃದ್ಧವಾಗಿ ನಡೆಯುತ್ತಿದ್ದವು. ಅದಕ್ಕೆಲ್ಲ ಕಾರಣ ಮನ್ಮಥಪ್ಪನವರ ಕಾಯಕ ನಿಷ್ಠೆ. ಕಾಡಾದಿ ಮನೆತನವು ಗ್ರಾಮದಲ್ಲಿಯಲ್ಲದೆ; ಬಸವಕಲ್ಯಾಣ ತಾಲ್ಲೂಕಿನಲ್ಲಿಯೇ ಪ್ರಸಿದ್ಧಿ ಹೊಂದಿದ ಮನೆತನವಾಗಿತ್ತು. ಬೀದರಿನ ಮಲ್ಲಿಕಾರ್ಜುನ ಸ್ವಾಮಿಗಳು ಮನೆತನದ ಗುರುಗಳು. ಈ ಮನೆತನದ ಹಿರಿಯರು ಬಸವಣ್ಣನವರನ್ನೇ ಮನೆಯ ದೇವರನ್ನಾಗಿಸಿಕೊಂಡು ಬಂದವರು. ಇಂದು ಕಾಡಾದಿ ಮನೆತನದ ಐವತ್ತು ಕುಟುಂಬಗಳು ಬೀದರ ಜಿಲ್ಲೆಯ ವ್ಯಾಪ್ತಿಯಲ್ಲಿ ನೆಲೆಗೊಂಡಿವೆ.

ಕಾಡಾದಿ ಗೌರವ್ವ–ಮನ್ಮಥಪ್ಪ ದಂಪತಿಗಳಿಗೆ ಒಟ್ಟು ಆರು ಜನ ಮಕ್ಕಳು. ಅವರಲ್ಲಿ ಮಲ್ಲಿಕಾರ್ಜುನಪ್ಪ, ವೀರಭದ್ರಪ್ಪ, ವಿಶ್ವನಾಥ, ವಿದ್ಯಾಸಾಗರ–ಇವರು ನಾಲ್ಕುಜನ ಗಂಡು ಮಕ್ಕಳು. ಶ್ಯಾಮಲಾ–ಪ್ರಭಾವತಿ ಎಂಬುವ ಇಬ್ಬರು ಹೆಣ್ಣು ಮಕ್ಕಳು.

ಹಿರಿಯ ಮಗ ಮಲ್ಲಿಕಾರ್ಜುನಪ್ಪನವರು ಕೆ.ಇ.ಬಿಯಲ್ಲಿ ಸುಪರಿಡೆಂಟ್ ಇಂಜಿನಿಯರ್ ಆಗಿ ಸೇವೆಸಲ್ಲಿಸಿದರು. ವೀರಭದ್ರಪ್ಪನವರು ರೆವಿನ್ಯೂ ಇಲಾಖೆಯಲ್ಲಿ ಇನ್‌ಸ್ಪೆಕ್ಟರ್ ಆಗಿ ಕಾರ್ಯನಿರ್ವಹಿಸಿದರು. ವಿಶ್ವನಾಥ ಅವರು ಪಿ.ಡಬ್ಲ್ಯೂ.ಡಿಯಲ್ಲಿ ಇಂಜಿನಿಯರ್ ಆಗಿ ಕಾರ್ಯನಿರ್ವಹಿಸಿದರೆ, ವಿದ್ಯಾಸಾಗರ ಅವರು ವೈದ್ಯರಾಗಿ ಸೇವೆ ಸಲ್ಲಿಸುತ್ತಲಿದ್ದಾರೆ. ಕಾಡಾದಿ ಗೌರವ್ವನವರ ವಂಶದ ಬಳ್ಳಿಯು ಮಕ್ಕಳಿಂದ ಮೊಮ್ಮಕ್ಕಳು, ಮರಿಮೊಮ್ಮಕ್ಕಳ ಪರ್ಯಂತ ಕೊನರಿ ಹಬ್ಬಿದೆ.

ಗೌರವ್ವನವರು ಸದ್ಗೃಹಿಣಿ ಮತ್ತು ಸದಾಚಾರ ಸಂಪನ್ನೆಯಾಗಿದ್ದರು. ಅವರು ದಿನನಿತ್ಯ ಎರಡು ಸಲ ಇಷ್ಟಲಿಂಗಾರ್ಚನೆ ಮಾಡುತ್ತಿದ್ದರು. ಗುರು–ಲಿಂಗ–ಜಂಗಮಪ್ರೇಮಿಯಾಗಿದ್ದು; ಶರಣಸಂಸ್ಕೃತಿಯ ಮೌಲ್ಯಗಳ ಪರಿಪಾಲನೆ ಮಾಡುತ್ತಿದ್ದರು. ಗೌರವ್ವನವರ ಕಾರ್ಯಕ್ಕೆ ಅವರ ಪತಿ ಮನ್ಮಥಪ್ಪನವರು ಬೆನ್ನುಬಲವಾಗಿದ್ದರು.

ಗೌರವ್ವನವರು ಇಲ್ಲದೆ ಹೆಣ್ಣುಮಕ್ಕಳ ಸಮಾರಂಭಗಳು ನಡೆಯುತ್ತಿರಲಿಲ್ಲ. ಅವರು ಅಲ್ಲಿಗೆ ಹೋಗಿ ತಮ್ಮ ಸಿರಿಕಂಠದಿಂದ ಆಯಾ ಸಂದರ್ಭಕ್ಕೆ ಬೇಕಾದ ಹಾಡುಗಳನ್ನು ಹಾಡುತ್ತಿದ್ದರು. ಅವರಲ್ಲಿ ತಾವು ಶ್ರೀಮಂತರೆಂಬ ಅಹಂಕಾರವಿರಲಿಲ್ಲ; ಎಂಥ ಬಡತನದ

ಮನೆಯಿದ್ದರೂ ಗೌರವ್ವನವರು ಅಲ್ಲಿಗೆ ಹಸನ್ಮುಖದಿಂದ ಹೋಗುತ್ತಿದ್ದರು. ಅವರ ಕಾರ್ಯಕ್ರಮಗಳಲ್ಲಿ ಬೆರೆಯುತ್ತಿದ್ದರು. ಕಾರ್ಯಕ್ರಮಕ್ಕಾಗಿ ಹಾಡುಗಳನ್ನು ಹಾಡಿ; ಸಮಾರಂಭದ ಕಳೆಯನ್ನು ಹೆಚ್ಚಿಸುತ್ತಿದ್ದರು. ಗೌರವ್ವನವರು ತಮ್ಮ ಬದುಕಿನ ಐವತ್ತು ವರುಷಗಳ ಕಾಲ ಹಾಡುಗಳನ್ನು ಹಾಡುವುದರಲ್ಲಿಯೇ ಆನಂದವನ್ನು ಅನುಭವಿಸಿದ್ದಾರೆ. ಹಾಡುತ್ತಲೇ ಅವರು ಹಾಡುಗಳನ್ನು ಕಟ್ಟುವುದಕ್ಕೆ ಆರಂಭಿಸಿದ್ದು. ಇಂದು ಅವರು ಹಾಡಿದ ಸಾವಿರಾರು ಹಾಡುಗಳು ಜನರ ಬಾಯಲ್ಲಿ ಉಳಿದುಕೊಂಡಿವೆ. ಹಾಗೆಯೇ ಅವರು ಕಟ್ಟಿದ ನೂರಾರು ಹಾಡುಗಳು ಬೀದರ ಪ್ರದೇಶದ ಹೆಣ್ಣು ಮಕ್ಕಳ ನಾಲಿಗೆಯ ಮೇಲೆ ನಲಿದಾಡುತ್ತಲಿವೆ.

ಕ್ರಿ.ಶ. ೨೦೦೭ರಲ್ಲಿ ಪ್ರಕಾಶನಗೊಂಡಿರುವ "ಅವ್ವ ಕಾಡಾದಿ ಗೌರವ್ವ ಹಾಡಿದ ಹಾಡು" ಎಂಬ ಹಾಡಿನ ಸಂಪುಟದಲ್ಲಿ ಗೌರವ್ವನವರ ಸ್ವಯಂ ರಚನೆಯ ಹಾಡುಗಳೂ ಸೇರಿಕೊಂಡಿವೆ.

ಗೌರವ್ವನವರ ಸಾಹಿತ್ಯ ಸೇವೆ ಮತ್ತು ಹಾಡುಗಾರಿಕೆಯ ಸಾಧನೆಗಾಗಿ ಕ್ರಿ.ಶ ೨೦೦೮ರ ಸಾಲಿನ ಕರ್ನಾಟಕ ಸರಕಾರದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ ಸಂದಾಯವಾಗಿದೆ. ಹಲವಾರು ಮಠ-ಮಾನ್ಯ-ಸಂಘ ಸಂಸ್ಥೆಗಳು ಗೌರವ್ವನವರನ್ನು ಸನ್ಮಾನಿಸಿ, ತಮ್ಮ ಕೃತಜ್ಞತೆಯನ್ನು ಸೂಚಿಸಿವೆ.

ಪತಿಯ ಲಿಂಗೈಕ್ಯದ ನಂತರ ಗೌರವ್ವ ಕಾಡಾದಿ ಅವರು ತಮ್ಮ ಉತ್ತರಾರ್ಧದ ಬದುಕನ್ನು ಕಲಬುರ್ಗಿಯ ತಮ್ಮ ಹಿರಿಯ ಮಗ ಮಲ್ಲಿಕಾರ್ಜುನಪ್ಪನವರ ಮನೆಯಲ್ಲಿಯೇ ಕಳೆದರು.

ಗೌರವ್ವನವರು ತತ್ತ್ವಪದಕಾರ್ತಿಯಾಗಿ, ಹಾಡುಗಾರ್ತಿಯಾಗಿ, ಶರಣಸಾಧಕಿಯಾಗಿ, ದಿ.೧೨.೦೧.೨೦೧೧ ರಂದು ಲಿಂಗೈಕ್ಯರಾದರು. ಅವರ ಸಮಾಧಿ ಹುಲುಸೂರು ಗ್ರಾಮದಲ್ಲಿಯೇ ಮಾಡಲಾಗಿದೆ. ಗೌರವ್ವನವರು ರಚಿಸಿದ ಹಲವಾರು ತತ್ತ್ವಪದಗಳಲ್ಲಿ ಎರಡನ್ನು ಇಲ್ಲಿ ಉದ್ಧರಿಸಲಾಗಿದೆ:

ಇಂಥಾ ಮಾನವ ಜನ್ಮ

ಇಂಥಾ ಮಾನವ ಜನುಮ ಪಡೆದು ಬಂದೀರಪ್ಪ
ಇಂಥಾ ಮಾನವ ಜನುಮ ಸಿಕ್ಕೀತೇನಪ್ಪ ॥ ಪ ॥

ಸಂತರ ಸಂಗವಿಲ್ಲ ಕಂತುಹರನ ಧ್ಯಾನವಿಲ್ಲ
ಭ್ರಾಂತಿ ಸಂಸಾರಕ ಬಿದ್ದು ಕೆಡುತಿದ್ದೀರಪ್ಪ ॥ ೧ ॥

ಹರದೇರ ಮೋಹಕ್ಕಾಗಿ ದುಡ್ಡಿನ ಆಶೆಗಾಗಿ
ಬರಿದೆ ನಿದ್ರಿಯ ಮಾಡಿ ಕೆಟ್ಟಿರಪ್ಪ ॥ ೨ ॥

ಅರುಣ ಉದಯವಾಗದ ಮುನ್ನ
ಗುರುಧ್ಯಾನ ಮಾಡಿದರೆ
ಪರಮಾನಂದ ಪ್ರಾಪ್ತಿಯಾಗುವುದು ತಿಳಿರಯ್ಯ ॥ ೩ ॥

ಕಾಲು ಕೈ ಮಣ್ಣು ಮೂಗು ಮೇಲೆ ನಾಲಗೆ ಇರಲು
ಕಾಳಹರನ ಭಜನೆ ನೀನು ಮರೆತಿಯಪ್ಪಾ
ಕಾಳಯಮನರು ಬಂದು ನಿಮ್ಮನು
ಕಾಲ ಪಿಡಿದು ಒಯ್ಯುವಾಗ
ತಾಳು ತಾಳೆಂದರೆ ಹ್ಯಾಂಗ ತಾಳುವರಯ್ಯ ॥ ೪ ॥

ಹಣವಿದ್ದಾಗಲೇ ಭಕ್ತಿ ಗುಣವಿದ್ದಾಗಲೇ ಭಕ್ತಿ
ಗುಣವಿದ್ದಾಗಲೇ ಶೀಲ
ನೆನವಿದ್ದಾಗಲೇ ಮುಕ್ತಿ ಪಡೆಯಬೇಕಯ್ಯ ॥ ೫ ॥

ಹಿಂದಿನ ಜನ್ಮದೊಳು ಮಾಡಿದ ಪುಣ್ಯಕ
ಇಂದು ನರಜನ್ಮಕ ಬಂದಿರುವಿರಯ್ಯ
ಇಂದಿನ ಜನ್ಮದೊಳು ನಿಂದೆ ಮಾಡಿದರೆ
ಮುಂದಿನ ಜನ್ಮಕ ಹಂದಿಯಾಗಿರಪ್ಪರಯ್ಯ ॥ ೬ ॥

ಎಂಭತ್ತನಾಲ್ಕು ಲಕ್ಷಯೋನಿ ತಿರುಗಿ ತಿರುಗಿ
ನರಜನ್ಮಕೆ ಬಂದಿರುವಿರಯ್ಯ

ಧರೆಯೊಳು ಷಟ್‌ಸ್ಥಲ ಮಂತ್ರ
ನೀವು ನಿತ್ಯ ಜಪಿಸಿರಯ್ಯ ॥ ೭ ॥

(ಅವ್ವ ಕಾಡಾದಿ ಗೌರವ್ವ ಹಾಡಿದ ಹಾಡು. ಪು.೫೪–೫೫)

ನಾವು ಬಣಜಿಗೇರು

ನಾವು ಬಣಜಿಗೇರು ಶಿವಶಿವಾ
ನಮಗಿಲ್ಲ ಮನಿ ಮಾರ
ಬ್ರಹ್ಮವೆಂಬ ಹೊಲವ ಮಾಡಿ ಅದರಾಗ ಧೈರ್ಯದ ನೇಗಿಲವ ಹೂಡಿ

ಹವಳವೆಂಬ ಎತ್ತು ಹಾರಿ ಹೋಯಿತ್ತು
ಖುಲ್ಲನೆಂಬ ಎತ್ತು ಕೂಡಿ ಬಿತ್ತು ॥ ಪ ॥

ಬ್ರಹ್ಮನೆಂದು ಹೊಲದಾಗ
ಅದರಾಗ ಧೈರ್ಯ ಮಟ್ಟ ಹೂಡಿ
ಓಂನೆಂದು ಗೂಡು ಮುರಿದು
ಸೋಮನೆಂಬ ಶಂಖ ಹೊಡೆದು
ಓಂ ಸೋಂ ಎರಡು ತಿಳಿಯಿರಿ ನೀವು ॥ ೧ ॥

ಸಂಗಯ್ಯನೆಂದರೆ ಸಾವಿರ ಬಾಕಿ
ಲಿಂಗಯ್ಯನೆಂದರೆ ನೂರು ಬಾಕಿ
ಇನ್ನೊಂದು ಬಾಕಿ ಏನು ಮಾಡಿ ಕಳಿಯಲಿ
ಈ ರಾಶಿಯೊಂದು ಧರಿಹಾಕಿ ಕಳಕೋರಪ್ಪ
ನೀವು ಮಾಡಿದ ಹಿಂದಿನ ಬಾಕಿ ॥ ೨ ॥

(ಅದೇ.ಪು.೫೭)

(ಈ ವಿವರಗಳನ್ನು ಕೊಟ್ಟವರು ಗೌರವ್ವನವರ ಮಗ ಶ್ರೀ ಮಲ್ಲಿಕಾರ್ಜುನಪ್ಪ).
□



ಕಾಡಾದಿ ಗೌರವ್ವನವರು ವಾಸಿಸುತ್ತಿದ್ದ ಮನೆ (ಕಲಬುರ್ಗಿ).



ಮಧ್ಯವಯಸ್ಸಿನಲ್ಲಿನ
ಗೌರವ್ವನವರು



ಗೌರವ್ವನವರ ಪತಿ
ಮನ್ಮಥಪ್ಪ ಕಾಡಾದಿ



ಪರಿಪಕ್ವ ವಯಸ್ಸಿನ ಗೌರವ್ವನವರು



ಇಷ್ಟಲಿಂಗಪೂಜಾ ನಿರತ ಗೌರವ್ವನವರು.



ಕಾಡಾದಿ ಗೌರವ್ವನವರ ತುಂಬು ಪರಿವಾರ.




ಕಾಡಾದಿ ಗೌರವ್ವನವರು ತಮ್ಮ ಸೊಸೆಯರೊಂದಿಗೆ
ಹಾಡು ಹಾಡುತ್ತ ಧಾನ್ಯಗಳನ್ನು ಕುಟ್ಟುತ್ತಿರುವ ನೋಟ.



ಕಾಡಾದಿ ಗೌರವ್ವನವರ ಹಿರಿಯ ಮಗ ಮಲ್ಲಿಕಾರ್ಜುನಪ್ಪ-ಸೊಸೆ ಸರಸ್ವತಿ
ದಂಪತಿಗಳು



ಕರ್ನಾಟಕದ ಮುಖ್ಯ ಮಂತ್ರಿಗಳಾಗಿದ್ದ ಶ್ರೀ.ಬಿ.ಎಸ್.ಯಡಿಯೂರಪ್ಪನವರು ಗೌರವ್ವ ಕಾಡಾದಿ ಅವರಿಗೆ ಕ್ರಿ.ಶ. 2008ನೇ ಸಾಲಿನ ಜನಪದ – ಯಕ್ಷಗಾನ ಅಕಾಡೆಮಿ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸುತ್ತಿರುವುದು.



ಹೈದರಾಬಾದು ಕನ್ನಡ ಪ್ರಾಧಿಕಾರದ ಕಾರ್ಯದರ್ಶಿಗಳಾಗಿದ್ದ ಶ್ರೀಮತಿ ಡಾ.ಶಾಲಿನಿ ರಜನೀಶ ಅವರು ಗೌರವ್ವನವರನ್ನು ಗೌರವಿಸುತ್ತಿರುವುದು



ಕಾಡಾದಿ ಗೌರವ್ವನವರ ಗ್ರಂಥ ಬಿಡುಗಡೆ ಕಾರ್ಯಕ್ರಮದ ಒಂದು ನೋಟ (ಕಲಬುರ್ಗಿ).



ಕಾಡಾದಿ ಗೌರವ್ವನವರಿಗೆ ಬಸವ ಸಮಿತಿಯ ಸನ್ಮಾನ (ಕಲಬುರ್ಗಿ)

೧೩. ವಿರೂಪಾಕ್ಷಯ್ಯ ಮಠಪತಿ (ಕ್ರಿ.ಶ.ಸು. ೧೯೨೩)

ಬೀದರ ಜಿಲ್ಲೆಯ ಬಸವ ಕಲ್ಯಾಣ ತಾಲ್ಲೂಕಿನಲ್ಲಿ ಬರುವ ಗೋರ್ಟಾ(ಬಿ) ಗ್ರಾಮವು ಶ್ರೀ ವಿರೂಪಾಕ್ಷಯ್ಯ ಮಠಪತಿ ಅವರ ಸ್ವಗ್ರಾಮ ಮತ್ತು ಕಾರ್ಯಕ್ಷೇತ್ರ. ಇಲ್ಲಿನ ಮಠಪತಿಯವರ ಮನೆತನವು ಸದಾಚಾರ–ಸದ್ವಿಚಾರ–ಶೀಲ ಸಂಪನ್ನತೆಗೆ ಪ್ರತೀಕವಾಗಿ ಬೆಳೆದುಕೊಂಡು ಬಂದದ್ದು. ಮಠಪತಿ ಶಿವಲಿಂಗಯ್ಯನವರು ಜಂಗಮಾಚಾರ ನಿಷ್ಠರಾಗಿದ್ದವರು. ತಮ್ಮ ಮನೆಯನ್ನು ಅವರು ತಮ್ಮ ಕುಟುಂಬಕ್ಕಾಗಿಯೇ ಮೀಸಲಾಗಿಟ್ಟವರಲ್ಲ. ಭಕ್ತರು–ಚರ ಮೂರ್ತಿಗಳ ಅರ್ಚನ–ಅರ್ಪಣ–ಅನುಭಾವದ ಕಾರ್ಯಕ್ಕಾಗಿ ತೆರೆದಿಟ್ಟವರು. ಶಿವಲಿಂಗಯ್ಯನವರ ಪತ್ನಿ ಸಂಗಮ್ಮ ಪರೋಪಕಾರ ಮನೋಭಾವದ ಹೆಣ್ಣುಮಗಳು. ಮಠಪತಿಯವರ ಮನೆಯನ್ನು ದಾಸೋಹದ ಮನೆಯನ್ನಾಗಿ ಬೆಳಗಿಸಲು ತಮ್ಮ ಪತಿ ಶಿವಲಿಂಗಯ್ಯವರೊಂದಿಗೆ ಸಹಧರ್ಮಿಣಿಯಾಗಿ ನಿಂತುಕೊಂಡರು.

ಇಂತಹ ಸದ್ಗುಣ ಸಂಪನ್ನ ದಂಪತಿಗಳಾಗಿದ್ದ ಶಿವಲಿಂಗಯ್ಯ–ಸಂಗಮ್ಮ ದಂಪತಿಗಳ ಗರ್ಭದಿಂದ ಹುಟ್ಟಿ ಬಂದವರು ಮಠಪತಿ ವಿರೂಪಾಕ್ಷಯ್ಯನವರು. ಕ್ರಿ.ಶ. ೧೯೨೩ ಅವರ ಜನ್ಮದ ವರ್ಷ.

ತಂದೆ–ತಾಯಿಗಳ ಶಿವಗುಣಗಳನ್ನು ಮೈಗೊಂಡು ಬಂದ ವಿರೂಪಾಕ್ಷಯ್ಯನವರಿಗೆ ಮನೆಯು ಮೊದಲ ಶಿಕ್ಷಣದ ಸ್ಥಲವಾಯಿತು. ತಂದೆ–ತಾಯಿಗಳ ಕಣ್ಣರಿಕೆ ಮತ್ತು ಆರೈಕೆಯಲ್ಲಿ ವಿರೂಪಾಕ್ಷಯ್ಯನವರು ಸುಸಂಸ್ಕೃತ ಬಾಲಕನಾಗಿ ಬೆಳೆಯ ತೊಡಗಿದರು.

ವಿರೂಪಾಕ್ಷಯ್ಯನವರು ಹೆಚ್ಚು ಓದಿದವರಲ್ಲ. ಅಂದಿನ ಕಾಲದಲ್ಲಿ ಅಂತಹ ಅವಕಾಶವೂ ಅವರಿಗೆ ಸಿಕ್ಕಲಿಲ್ಲ. ಮನೆತನದ ಗುರುಗಳ ಸ್ಥಲವಾಗಿದ್ದ ಹಿರೇಮಠದಲ್ಲಿಯೇ ವಿದ್ಯಾಭ್ಯಾಸ ಮಾಡಿದರು. ಶೈಕ್ಷಣಿಕವಾಗಿ ಅವರು ಪೂರೈಸಿದ ವಿದ್ಯಾರ್ಹತೆ ಒಂದನೆಯ ವರ್ಗಕ್ಕೆ ಮುಗಿದಂತಾಯಿತು. ಶ್ರೀ ಹಾವಗೆಪ್ಪ ರಾಜೋಳೆ ಅವರ ಮೊದಲ ಗುರುಗಳು. ಮುಂದಿನ ದಿನಗಳಲ್ಲಿ ವಿರೂಪಾಕ್ಷಯ್ಯನವರಿಗೆ ಲೋಕವು ವಿದ್ಯಾಲಯವಾಯಿತು. ಶಿವಾಚಾರದಿಂದ ಕೂಡಿದ ಜೀವನವು ಸಂಸ್ಕೃತಿಯ ಆಲಯವೆನಿಸಿತು. ಸ್ವಪ್ರಯತ್ನದಿಂದಲೆ ಅವರು ಕನ್ನಡ ಭಾಷೆಯೊಂದಿಗೆ ಹಿಂದೀ; ಮರಾಠಿ ಭಾಷೆಗಳಲ್ಲಿ ಪಳಗಿದರು.

ಶರಣಜೀವಿಗಳಾಗಿರುವ ವಿರೂಪಾಕ್ಷಯ್ಯನವರ ಒಟ್ಟು ಜೀವನವು ಹಿತಮಿತದಿಂದ ಕೂಡಿದ್ದು, ಅವರ ದಾಂಪತ್ಯದ ಬದುಕು ಇದಕ್ಕೆ ಹೊರತಾದುದಲ್ಲ. ವಿರೂಪಾಕ್ಷಯ್ಯನವರ ಶರಣಜೀವನದಲ್ಲಿ ಸತಿಯಾಗಿ ಬಂದವರು ನೀಲಮ್ಮನವರು. ಪತಿಯ ಮನೋಭಾವವನ್ನು ಅರಿತು ನಡೆವ ಸತಿಯಾಗಿದ್ದವರು ಈ ತಾಯಿ.

ವಿರೂಪಾಕ್ಷಯ್ಯನವರ ದಾಂಪತ್ಯದ ಫಲವಾಗಿ ವಿಶ್ವನಾಥ, ರಾಜಶೇಖರ ಎಂಬ ಇಬ್ಬರು ಗಂಡು ಮಕ್ಕಳು. ಪ್ರಯಾಗಬಾಯಿ. ಶ್ರೀದೇವಿ. ಮಹಾನಂದ ಎಂಬ ಮೂವರು ಹೆಣ್ಣುಮಕ್ಕಳು ಜನಿಸಿ ಬಂದರು.

ಬದುಕಿನ ನಿರ್ವಹಣೆಗಾಗಿ 'ಮಠಪತಿ' ಕಾಯಕದೊಂದಿಗೆ ವೈದಿಕ (ಪುರೋಹಿತ) ವೃತ್ತಿಯನ್ನು ನಡೆಸಿಕೊಂಡು ಬಂದವರು. ಇವರು ಭಕ್ತರನ್ನು ಸುಲಿದುಕೊಳ್ಳುವ ಪುರೋಹಿತರಾಗಲಿಲ್ಲ. ಅವರಿಗೆ ಸರಿಯಾದ ಕ್ರಮದಲ್ಲಿ ದೈವೀ ಅನುಸಂಧಾನ ಮಾಡುವುದಕ್ಕೆ ಮಾರ್ಗದರ್ಶನ ನೀಡುವ ಪುರೋಹಿತರೆನಿಸಿದ್ದಾರೆ. ಬೀದರ ಜಿಲ್ಲೆಯಲ್ಲದೆ; ಅದರ ಹೊರಗಿನ ಭಾಗಗಳಲ್ಲಿಯೂ ವಿರೂಪಾಕ್ಷಯ್ಯನವರು ರುದ್ರಾಭಿಷೇಕಾದಿ ಪೂಜೆಯ ಕಾರ್ಯಗಳನ್ನು ನಡೆಯಿಸಿಕೊಡಲು ಭಕ್ತರ ಮನೆಗಳಿಗೆ ಹೋಗುತ್ತಾರೆ. ಸರಿಯಾದ ಕ್ರಮದಲ್ಲಿ ಭಕ್ತರಿಗೆ ಯಾವುದೇ ಭಾರವಾಗದಂತೆ ಪೂಜೆಯನ್ನು ಪೂರೈಸಿಕೊಡುತ್ತಾರೆ. ಭಕ್ತರು ಕೊಟ್ಟಿದ್ದನ್ನು ಅತ್ಯಂತ ಹರುಷದಿಂದ ಸ್ವೀಕರಿಸುತ್ತಾರೆ.

ವಿರೂಪಾಕ್ಷಯ್ಯನವರು ಶಾಸ್ತ್ರೋಕ್ತವಾಗಿ ರುದ್ರವನ್ನು ಓದುವ ಮತ್ತು ರುದ್ರಾಭಿಷೇಕ ಮಾಡುವ ಪದ್ಧತಿಯನ್ನು ಸುರೇಶ್ವರ ಶಿವಾಚಾರ್ಯರಿಂದ ಕಲಿತುಕೊಂಡರು. ಹಾಗೆಯೇ ತಾವು ಕಲಿತ ರುದ್ರದ ವಿಧಾನವನ್ನು ಅವರು ಇಲ್ಲಿಯವರೆಗೆ ಸು. ಎರಡು ನೂರು ವಿದ್ಯಾರ್ಥಿಗಳಿಗೆ ಕಲಿಸಿಕೊಟ್ಟಿದ್ದಾರೆ.

ವಿರೂಪಾಕ್ಷಯ್ಯನವರು ಸಂಗೀತದಲ್ಲಿ ಸಿದ್ಧಹಸ್ತರು. ಗೊರಟಾ ಹಿರೇಮಠದ ಸುರೇಶ್ವರ ಸ್ವಾಮಿಗಳಲ್ಲದೆ, ಮೇಹಕರ, "ಡೋಣಗಾಪುರದ ಶ್ರೀಗಳು (ಶ್ರೀ.ಷ.ಬ್ರ.. ರಾಚೋಟಿ ಶಿವಾಚಾರ್ಯರು) ಸಂಗೀತ-ತತ್ತ್ವಪದಗಳ ಹಾಡುಗಾರಿಕೆ; ರಚನೆ ಇತ್ಯಾದಿಗಳನ್ನು ಕಲಿಸಿದರು" ಎಂದು ವಿರೂಪಾಕ್ಷಯ್ಯನವರು ಅವರನ್ನೆಲ್ಲ ಭಕ್ತಿಯ ಮನದಿಂದ ಸ್ಮರಿಸಿಕೊಳ್ಳುತ್ತಾರೆ. ಅವರು ಸಂಗೀತದ ಸಹಯೋಗದೊಂದಿಗೆ ವಾಚಿಸುವ ರುದ್ರವಾಗಲಿ; ಹಾಡುವ ತತ್ತ್ವಪದಗಳಾಗಲಿ ಕೇಳಿದವರು ಸಮ್ಮೋಹಕತೆಗೆ ಒಳಗಾಗುತ್ತಾರೆ.

ನಾಟಕಕಲೆ ಇನ್ನೊಂದು ಅವರಿಗೆ ಒಲಿದು ಕಲೆ. ಹಲವಾರು ವರ್ಷಗಳ ಕಾಲ ವಿರೂಪಾಕ್ಷಯ್ಯನವರು ನಾಟಕಮಾಸ್ತರರಾಗಿ ಹಲವಾರು ನಾಟಕಗಳನ್ನು ಕಲಿಸಿದ್ದಾರೆ. ಅವುಗಳನ್ನು ಅತ್ಯಂತ ಯಶಸ್ವಿಯಾಗಿ ಪ್ರಯೋಗವಾಗುವಂತೆ ಮಾಡಿದ್ದಾರೆ. ಸ್ವತಃ

ನಟರೂ ಹೌದು. "ಪಾರ್ವತಿ ಸತ್ವಪರೀಕ್ಷೆ" ಎಂಬ ನಾಟಕವನ್ನು ಕಲಿಸುವುದರೊಂದಿಗೆ ಅದರಲ್ಲಿ ನಾರದನ ಪಾತ್ರವನ್ನು ಶ್ರೀಯುತರು ಅಭಿನಯಿಸಿದ್ದಾರೆ. ಹೊಸ ಸಂಸಾರ, ಗೌರಿಗೆದ್ದಳು, ದುಡ್ಡೇ ದೇವರು, ಅತ್ತೆ-ಸೊಸೆ, ದೈವ ಚಿತ್ತ, ಭಕ್ತ ಮಾರ್ಕಂಡೇಯ ಮುಂತಾದ ನಾಟಕಗಳು ಅವರು ಕಲಿಸಿದ ನಾಟಕಗಳಾಗಿವೆ. ಗಡಿಗೌಡಗಾಂವಿಯ ನೂರೊಂದಯ್ಯನವರು ವಿರೂಪಾಕ್ಷಯ್ಯನವರಿಗೆ ಕಲೆಗಳ ಅಧ್ಯಯನಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದವರೆಂದು ಹೇಳಲಾಗುತ್ತದೆ. ಅವರು ಮಠಪತಿ ಅವರ ಆತ್ಮೀಯರಲ್ಲಿ ಒಬ್ಬರಾಗಿದ್ದವರು.

ವಿರೂಪಾಕ್ಷಯ್ಯನವರು ಅನುಭಾವ ಜೀವಿಗಳು. ಹೋದಲ್ಲಿ ಸಂಗೀತ-ಭಜನೆ-ಅನುಭಾವಗೋಷ್ಠಿ ನಡೆಸುತ್ತಿದ್ದರು. ಊರಲ್ಲಿ ಇದ್ದಾಗಲಂತೂ ಅವರಿಗೆ ಗೋರಕ್ಷ ಮತ್ತು ಮಹಾದೇವನ ಮಂದಿರಗಳು ಅನುಭಾವ ಗೋಷ್ಠಿಯ ನೆಲೆಗಳಾಗುತ್ತಿದ್ದವು. ಒಮ್ಮೊಮ್ಮೆ ಹಿರೇಮಠಕ್ಕೂ ಹೋಗಿ ಗುರುಗಳ ಸಾನ್ನಿಧ್ಯದಲ್ಲಿ ತಮ್ಮ ಸೇವೆಯನ್ನು ಅರ್ಪಿಸುತ್ತಿದ್ದುದುಂಟು. ಮನೆಯ ದೇವರಾದ ರಟಕಲ್ಲಿನ ರೇವಣಸಿದ್ದೇಶ್ವರ ಗುಡ್ಡಕ್ಕೂ ಆಗಾಗ ಅವರು ಹೋಗಿ ಬರುತ್ತಿದ್ದರು.

ವಿರೂಪಾಕ್ಷಯ್ಯನವರ ಮನೆಯೊಂದು ಸಾಹಿತ್ಯದ ಸಂಗ್ರಹಾಲಯದಂತಿದೆ. ಅವರ ಮಕ್ಕಳಾದ ವಿಶ್ವನಾಥ, ರಾಜಶೇಖರ ತಂದೆಯ ಸಾಹಿತ್ಯ ಸಂಪತ್ತನ್ನು ರಕ್ಷಿಸಿಕೊಂಡು ಬರುತ್ತಿರುವುದರೊಂದಿಗೆ ಆ ಪರಂಪರೆಯನ್ನು ಮುಂದುವರೆಸುತ್ತಿದ್ದಾರೆ. ವಿರೂಪಾಕ್ಷಯ್ಯನವರು ಪುರಾಣ ಕಾವ್ಯ – ತತ್ತ್ವಪದ, ನಾಟಕ, ಕೋಲಾಟದ ಪದಗಳು, ಭುಲಾಯಿ ಹಾಡುಗಳು ಮುಂತಾಗಿ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಶ್ರೀ ರಾಚೋಟೇಶ್ವರರ ಪುರಾಣ, ಭಕ್ತಿ ಕುಸುಮಾಂಜಲಿ, ಗುರುಗಾನ ಶ್ರುತಿ, ಗುರುಗಾನ ಪ್ರಭೆ, ಹೈದರಾಬಾದ ಕರ್ನಾಟಕ ಜಲಿಯನ್ ವಾಲಾಬಾಗ ಗೊರಟಾ – ಹೀಗೆ ಹಲವಾರು ಕೃತಿಗಳು ಅವರಿಂದ ರಚನೆಗೊಂಡಿವೆ.

ವಿರೂಪಾಕ್ಷಯ್ಯನವರು ನೂರಾರು ತತ್ತ್ವಪದಗಳನ್ನು ಬರೆದಿರುವರು. ಕ್ರಿ.ಶ. ೨೦೦೭ರಲ್ಲಿ ಅವರು ರಚಿಸಿದ ತತ್ತ್ವಪದಗಳನ್ನು ಸಂಗ್ರಹಿಸಿ; "ಭಕ್ತಿ ಕುಸುಮಾಂಜಲಿ" ಎಂಬ ಹೆಸರಿನಿಂದ ಪ್ರಕಟಿಸಲಾಗಿದೆ.

ಎಂಬತ್ತೇಳು ವರ್ಷಗಳ ಹೊಸ್ತಿಲಿನಲ್ಲಿರುವ ಶ್ರೀ ವಿರೂಪಾಕ್ಷಯ್ಯ ಮಠಪತಿ ಅವರು ಇಂದು ಬಸವಕಲ್ಯಾಣದಲ್ಲಿ ವಾಸವಾಗಿದ್ದಾರೆ. ಅವರ ಯೋಗಕ್ಷೇಮವನ್ನು ಅಕ್ಕರೆಯಿಂದ ನೋಡಿಕೊಳ್ಳುತ್ತಿರುವವರು ಮಗಳು ಮಹಾನಂದ ಮತ್ತು ಅಳಿಯ ಶಿವಕುಮಾರ ಸ್ವಾಮಿ.

ವಿರೂಪಾಕ್ಷಯ್ಯನವರ ಲೇಖನಿಗೆ ಇನ್ನೂ ಬಿಡುವು ದೊರತಿಲ್ಲ. ಆಗಾಗ ತತ್ತ್ವಪದಗಳನ್ನು ಬರೆಯುತ್ತಲೇ ಇರುತ್ತಾರೆ. ಅವರು ರಚಿಸಿದ ಒಟ್ಟು ತತ್ತ್ವಪದಗಳಿಂದ

ಆಯ್ದ ಎರಡು ತತ್ತ್ವಪದಗಳನ್ನು ಇಲ್ಲಿ ಉದ್ಧರಿಸಲಾಗಿದೆ. 'ವಿರೂಪಾಕ್ಷ','ರಾಚೋಟೇಶ' ಎಂಬುವುಗಳು ಪದ್ಯಗಳ ಅಂಕಿತವಾಗಿವೆ.

ಯಾಕ ಚಿಂತಿ ಮಾಡುವೆ ಎಲೆ ಮನವೇ

ಯಾಕ ಚಿಂತಿ ಮಾಡುವೆ ಎಲೆ ಮನವೇ
ಗುರು ರಾಚೋಟೇಶ್ವರನ ನೆನೆ ಮನವೇ ॥ ಪ ॥

ಹುಟ್ಟು ಸಾವುಗಳ ಬಲೆಯಲಿ ಬಿದ್ದು
ಒದ್ದಾಡುವಿ ನೀ ಎಲೆ ಮನವೇ
ಹುಟ್ಟು ಸಾವುಗಳ ಬಾಧೆಯ ಕಳೆಯುವ
ಯೋಗಿವರ್ಯರ ಪಾದವ ಪೂಜಿಸು ಮನವೇ ॥ ೧ ॥

ಹೆಂಡರ ಮಕ್ಕಳ ಮೋಹದೊಳು ಸಿಲುಕಿ
ವ್ಯರ್ಥ ಕಾಲವನು ಕಳೆಯುವಿ ಮನವೆ
ಸಮರ್ಥ ಗುರುಗಳ ಪಾದವ ಹೊಂದಿ
ಮೋಕ್ಷದ ಮಾರ್ಗ ನೀ ತಿಳಿ ಮನವೇ ॥ ೨ ॥

ಯೋಗದಲ್ಲಿ ಮಹಾಯೋಗಿವರ್ಯರಾದ
ಬ್ರಹ್ಮಾನಂದ ತೇಜದಲ್ಲಿ ಮೆರೆವ
ಧರೆಯೊಳು ರಚೋಟೇಶನ ಕೃಪೆ ಪಡೆಯಿರೆಂದು
ವಿರೂಪಾಕ್ಷ ತಿಳಿಸ್ಯಾನ ಕರಮುಗಿದು ॥ ೩ ॥

ಸ್ಮರಿಸೋ

ಸ್ಮರಿಸೋ ಸದ್ಗುರು ಈಶನ
ಶ್ರೀ ಗುರುಪಾದಧೀಶನ ॥ ಪ ॥


ಅದರಿಂದ ನಿನ್ನಯ ಜನ್ಮ ಪಾವನ
ಅಖಂಡ ಅಮರತ್ವ ಸಾಧನ

ಕರುಣಿಸಿ ಕಾಪಾಡುವರು ನಿನ್ನ
ಮರೆಯದೆ ಮಾಡೋ ಗುರುವಿನ ಧ್ಯಾನಾ ॥ ೧ ॥


ಶಾಂತಿ ಸದ್ಗುಣ ಭರಿತ ಗುರುವರನಾ
ಬಂದ ಕಷ್ಟ ಗುರು ಪ್ರಸಾದವೆಂದೆನುತಾ
ಗುರುವೇ ನೀ ಸಿರಿಯೆಂದು ಧ್ಯಾನ ಗೈದವನಾ
ಗುರು ಕರುಣಿ ದೊರೆಯಲು ಗುರುವಾಗಿ ಮೆರೆವೆ ನಾ ॥ ೨ ॥

ಮುಂದಿಟ್ಟ ಅಡಿಯು ಹಿಂದಿಡದವನಾ
ಧೈರ್ಯಂ ಸರ್ವತ್ರ ಸಾಧನೆಂದವನಾ
ಗುರುವಿನ ಕರುಣವ ಪಡೆದುಕೊಂಡವನಾ
ಹರಸಿದೆ ಗೊರಟಿ ವಿರೂಪಾಕ್ಷನಾ ॥ ೩ ॥

(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿದ್ದಾರೆ)



ವಿರೂಪಾಕ್ಷಯ್ಯ ಮಠಪತಿ ಅವರ ಮನೆ (ಗೋರ್ಟಾ).



ವಿರೂಪಾಕ್ಷಯ್ಯನವರು.



ವಿರೂಪಾಕ್ಷಯ್ಯನವರ ಮಗ–ಸೊಸೆ–ಮೊಮ್ಮಕ್ಕಳು




ಎಡದಿಂದ ಬಲಕ್ಕೆ :– ಮಲ್ಲಯ್ಯ ಮಠ, ಶ್ರೀಮತಿ ಶ್ರೀದೇವಿ ಮಠ, ಶ್ರೀ ವಿರೂಪಾಕ್ಷಯ್ಯ, ಶ್ರೀಮತಿ ನೀಲಮ್ಮ; ಶ್ರೀಮತಿ ಮಹಾನಂದಾ, ಶ್ರೀಮತಿ ಶಕುಂತಲಾ, ಪ್ರೊ, ಸಿದ್ಧರಾಮಯ್ಯ, ಶ್ರೀ ವಿಶ್ವನಾಥಯ್ಯ, ಶ್ರೀ ರಾಜಶೇಖರ, ಶ್ರೀ ಷಣ್ಮುಖಯ್ಯ, ಶ್ರೀ ಶಿವಕುಮಾರ, ಶ್ರೀ ರುದ್ರಮಣಿ, ಕು ಗೌರಿ, ಕು.ಪಾರ್ವತಿ ಚಿ. ಪ್ರಮೋದ, ಚಿ. ರೇಣುಕ, ಶ್ರೀ ಶಿವರಾಜ, ಕು. ಭಾರತಿ, ಶ್ರೀ ಬಸವರಾಜ, ಕು.ಅನ್ನಪೂರ್ಣ, ಕು. ಗುರುದೇವಿ.




ವಿರೂಪಾಕ್ಷಯ್ಯನವರ ಅಧ್ಯಯನದ ಗ್ರಂಥಾಲಯ.




ವಿರೂಪಾಕ್ಷಯ್ಯನವರ ಮನೆತನದ ಆರಾಧ್ಯ ದೇವರು ರೇವಣಸಿದ್ಧೇಶ್ವರ
ಮಂದಿರದ ಮಹಾದ್ವಾರ (ರಟಕಲ್).



ರೇವಣಸಿದ್ಧೇಶ್ವರ ಮಂದಿರದ ಒಂದು ನೋಟ (ರಟಕಲ್).



ರೇವಣಸಿದ್ಧೇಶ್ವರ ಮಂದಿರದ ಒಳಾಂಗಣ ದೃಶ್ಯ.




ರೇವಣಸಿದ್ಧೇಶ್ವರ ದರ್ಶನಮೂರ್ತಿ




ಗೋರಟಾ (ಬಿ) ಗ್ರಾಮದ ಶ್ರೀ ಮಹಾದೇವ ಮಂದಿರದ ಸಭಾಮಂಟಪ



ಗೋರಕನಾಥ, ಗೋರಟಾ (ಬಿ)



ಗೋರಕನಾಥನ ಮಂದಿರದ ಒಳಾಂಗಣ ನೋಟ.



ವಿರೂಪಾಕ್ಷಯ್ಯನವರ ಆರಾಧ್ಯ ಗುರುಗಳ ಸ್ಥಲ ಹಿರೇಮಠ (ಗೋರ್ಟಾ).



ಸಿದ್ಧವೀರಸ್ವಾಮಿ ಸಾಲಿಮಠ,
ಬನಹಟ್ಟಿ.



ಷ.ಬ್ರ. ರಾಚೋಟಿ
ಶಿವಾಚಾರ್ಯರು,
ಮೇಹಕರ-ಡೋಣಗಾಪೂರ.



ಷ.ಬ್ರ.
ಗುರುಪಾದ
ಶಿವಾಚಾರ್ಯರು,
ವಿಮಲಖೇಡ



ಷ.ಬ್ರ. ರಾಜೇಶ್ವರ ಶಿವಾಚಾರ್ಯರು,
ಮೇಹಕರ-ಡೋಣಗಾಪೂರ



ಲಿಂ. ಶ್ರೀಮತಿ ಸಂಗಮ್ಮ
ಶಿವಲಿಂಗಯ್ಯ
ಮಠಪತಿ, ಗೋರಟಾ.



ಸುರೇಶ ಸ್ವಾಮಿಗಳು ಹಿರೇಮಠ,
ಗೋರಟಾ

೧೪. ಶಾಂತಣ್ಣ ಶೀಲವಂತ (ಕ್ರಿ.ಶ.ಸು. ೧೯೨೪–೧೯೮೮)

ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ಹಾರಕೂಡ ಗ್ರಾಮವು ಅಲ್ಲಿನ "ಸಂಸ್ಥಾನ ಹಿರೇಮಠ"ದಿಂದ ನಾಡಿನ ನಕಾಶೆಯಲ್ಲಿ ಗುರುತಿಸಿಕೊಳ್ಳುವಂತಾಗಿದೆ. ಶ್ರೀಮಠದ ಪರಂಪರೆಯಲ್ಲಿ ಪವಾಡಪುರುಷರೂ; ಮಹಾತಪಸ್ವಿಗಳೂ; ಶಿವಯೋಗಿಗಳು ಆಗಿದ್ದ ಶ್ರೀ ಚನ್ನಬಸವ ಶಿವಾಚಾರ್ಯರ ಕೃಪೆಯ ಬೆಳಗು ಈ ಪರಿಸರದಲ್ಲಿ ಹತ್ತು ಹಲವಾರು ಸಾಂಸ್ಕೃತಿಕ ಚೇತನಗಳ ವಿಕಾಸಕ್ಕೆ ಕಾರಣವಾಗಿದೆ. ಹೀಗಾಗಿ ಹಾರಕೂಡ ಗ್ರಾಮವು ಹಲವಾರು ತತ್ತ್ವಪದಕಾರರನ್ನು ನೀಡಿದೆ. ಅಂತಹ ತತ್ತ್ವಪದಕಾರರ ಪರಂಪರೆಯಲ್ಲಿ ಶಾಂತಣ್ಣ ಶೀಲವಂತ ಒಬ್ಬರು.

ಶಾಂತಣ್ಣನವರ ತಂದೆ ಶಿವಲಿಂಗಪ್ಪ ಶೀಲವಂತ. ತಾಯಿ ನೀಲಮ್ಮನವರು. ಶಿವಲಿಂಗಪ್ಪನವರು ಸದಾಚಾರಶೀಲರು; ಸಾತ್ವಿಕರು; ಹಿರೇಮಠದ ಪೂಜ್ಯರಲ್ಲಿ ಭಕ್ತಿವುಳ್ಳವರಾಗಿದ್ದರು. ಕೃಷಿಕಾಯಕದೊಂದಿಗೆ ಬೆಳ್ಳಿ–ಬಂಗಾರದ ಆಭರಣ ಇತ್ಯಾದಿ ವಸ್ತುಗಳ ತಯ್ಯಾರಿಕೆಯಂತಹ ಪತ್ತಾರಿಕೆಯ ಕಾಯಕ ಮಾಡುತ್ತಿದ್ದರು. ಮನೆತನದ ಪರಿಸ್ಥಿತಿಯು ಆರ್ಥಿಕವಾಗಿ ಸಾಧರಣವಾಗಿಯೆ ಇದ್ದಿತು.

ಶಾಂತಣ್ಣ ಶೀಲವಂತ ಅವರು ತಂದೆಯ ಗುಣಗಳನ್ನು ಅಳವಡಿಸಿಕೊಂಡು ಬೆಳೆದರು. ಕೃಷಿ ಕಾಯಕವನ್ನು ಜೀವನದ ನಡೆಗಾಗಿ ಹಿಡಿದರು. ನಂತರ ಶೀಲವಂತರ ಕಾಯಕ ಮುನ್ನಡೆಸಿಕೊಂಡು ಹೋದರು. ಆರ್ಥಿಕತೆಯ ಮುಗ್ಗಟ್ಟಿನಲ್ಲೂ ಸಂತೃಪ್ತ ಭಾವದಿಂದ ಬದುಕಿದರು. ಶಾಂತಪ್ಪನವರು ಶಾಲೆಗೆ ಹೋಗಲಿಲ್ಲ, ಅಕ್ಷರ ಜ್ಞಾನ ಹೊಂದಲಿಲ್ಲ. ಲೋಕದ ಅನುಭವದಿಂದಲೇ ಅವರು ಕಲಾವಿದರಾದರು. ಕವಿಗಳಾದರು. ಶಾಂತಣ್ಣನವರ ಪತ್ನಿ ನಾಗಮ್ಮನವರು. ಈ ದಂಪತಿಗಳಿಗೆ ಇಬ್ಬರು ಗಂಡುಮಕ್ಕಳು. ಹಿರಿಯ ಮಗ ಕಲ್ಯಾಣಿ, ಈಗ ಬದುಕಿಲ್ಲ. ಕಿರಿಯ ಮಗ ಶಿವಪುತ್ರ ತನ್ನ ಪತ್ನಿ ನೀಲಮ್ಮನೊಂದಿಗೆ ಹಾರಕೂಡ ಗ್ರಾಮದಲ್ಲಿ ವಾಸವಾಗಿದ್ದಾನೆ. ತಂದೆಯ ಕಲೆಯನ್ನು ಈತನು ಅಳವಡಿಸಿಕೊಂಡಿದ್ದಾನೆ. ತತ್ತ್ವಪದಗಳನ್ನು ಸುಶ್ರಾವ್ಯವಾಗಿ ಹಾಡುತ್ತಾನೆ. ಭಜನೆಗಳಲ್ಲಿ ಭಾಗವಹಿಸಿ; ತನ್ನ ಹಾಡುಗಾರಿಕೆಯ ಕಲೆಯನ್ನು ಬೆಳೆಯಿಸಿ ಕೊಳ್ಳುತ್ತಿದ್ದಾನೆ.

ಶಾಂತಣ್ಣನಿಗೆ ಕನ್ನಡದೊಂದಿಗೆ ಮರಾಠಿ, ಮೋಡಿ, ಹಿಂದಿ ಭಾಷೆಗಳು ಬರುತ್ತಿದ್ದವು. ತಾವು ಕಟ್ಟಿದ ಪದ್ಯಗಳನ್ನು ಹೇಳಿ ಬರೆಯಿಸುತ್ತಿದ್ದರು. ಕ್ರಿಶ. ೧೯೭೦ರಲ್ಲಿ ಶಾಂತಪ್ಪನವರು

ಆಕಸ್ಮಿಕ ಅಪಘಾತಕ್ಕೆ ಒಳಗಾಗಿ ಅಹಿಕ ಬದುಕಿನಲ್ಲಿ ಕಂಗೆಡುವಂತಾದರು. ಮನೆಯಲ್ಲಿ ಕುಳಿತಿರುವಾಗಲೇ ಸಿಡಿಲು ಬಂದು ಬಡಿದುದು ದೈವೀ ಇಚ್ಛೆಯೇ ಎನ್ನಬೇಕು. ಆದರೂ ಅವರು ಪ್ರಾಣಾಪಾಯದಿಂದ ಬದುಕಿ ಉಳಿದರು. ನಡೆಯಲು ಬಾರದಂತೆ ಕಾಲುಗಳು ಊನವಾದವು. ಕುಂಟುತ್ತ ಸವಕಾಶವಾಗಿ ಹೆಜ್ಜೆಯಿಡಬೇಕಾದ ಪರಿಸ್ಥಿತಿಯು ಬಂದೊದಗಿತು. ಆದರೂ ಅವರು ಧೃತಿಗೆಡಲಿಲ್ಲ. ಚೆನ್ನ ಬಸವ ಶಿವಯೋಗಿಗಳಲ್ಲಿ ಭಕ್ತಿಯಿಟ್ಟು ನಡೆದರು. ತಮ್ಮ ಸಾಗದ ಬದುಕಿಗಾಗಿ ಪ್ರಾರ್ಥಿಸಿದರು.

ದೈಹಿಕವಾದ ಊನತೆ ಒದಗಿದರೂ ಶಾಂತಣ್ಣ ಶೀಲವಂತ ಅವರಲ್ಲಿರುವ ಸಾಹಿತ್ಯದ ಆಸಕ್ತಿ ಕುಗ್ಗಲಿಲ್ಲ; ಕಡಿಮೆಯಾಗಲಿಲ್ಲ, ಮೊದ ಮೊದಲಿಗೆ ಅವರು ತತ್ತ್ವಪದಗಳನ್ನು ಹಾಡುತ್ತಿದ್ದರು. ಭಜನೆಯ ಮೇಳಗಳಲ್ಲಿ ಭಾಗವಹಿಸುತ್ತಿದ್ದರು. ಕಾಲಕ್ರಮೇಣ ಸ್ವತಃ ಪದ್ಯಗಳನ್ನು ಕಟ್ಟುವುದಕ್ಕೆ ಆರಂಭ ಮಾಡಿದರು. ಈ ದಿಶೆಯಲ್ಲಿ ಅವರಿಗೆ ಮಾರ್ಗದರ್ಶಕರೂ ಗುರುಗಳೂ ಆಗಿ ದೊರಕಿದವರು ಕಲಬುರ್ಗಿ ಜಿಲ್ಲೆ, ಆಳಂದ ತಾಲ್ಲೂಕಿನ ಜಂಬಗಿ ಶರಣರು. ಅವರ ಗರಡಿಯಲ್ಲಿ ಶಾಂತಣ್ಣ ಪಳಗಿದರು. ತಾವು ಕಟ್ಟಿದ್ದ ಹಾಡುಗಳನ್ನು ಗುರುಗಳಿಗೆ ತೋರಿಸಿದರು, ತಿದ್ದಿಸಿಕೊಂಡರು. ಅವರೆದುರಿನಲ್ಲಿ ಹಾಡಿ ಮೆಚ್ಚುಗೆ ಪಡೆದರು. ಶಾಂತಪ್ಪನವರು ನೂರಾರು ಹಾಡುಗಳನ್ನು ಕಟ್ಟಿದ್ದಾರೆ. ಅವುಗಳಲ್ಲಿ ಹಲವು ಪ್ರಕಾರಗಳು ಒಳಗೊಂಡಿವೆ. ಲಾವಣಿ, ಗೀಗೀ, ತತ್ತ್ವಪದಗಳೇ ಆ ಪ್ರಮುಖ ಪ್ರಕಾರಗಳಾಗಿವೆ.

ಶಾಂತಣ್ಣನವರು ತಾವು ರಚಿಸಿದ ಹಾಡುಗಳಿಗೆ "ಸಾಧು ಶರಣ" ಎಂಬ ಅಂಕಿತವನ್ನು ಹಾಕಿದ್ದಾರೆ. ಕೆಲವು ಹಾಡುಗಳಿಗೆ ಚೆನ್ನಬಸವ ಶಿವಯೋಗಿಗಳ ಮುದ್ರಿಕೆಯನ್ನು ಇರಿಸಿಕೊಂಡಿದ್ದಾರೆ.

ಶಾಂತಣ್ಣನವರ ಕವಿತ್ವ ಮತ್ತು ಹಾಡುಗಾರಿಕೆಗೆ ಮೆಚ್ಚಿ ಹಲವಾರು ಮಠ–ಮಾನ್ಯಗಳು ಸನ್ಮಾನಿಸಿವೆ, ಬಿರುದುಗಳನ್ನು ನೀಡಿ ಗೌರವಿಸಿವೆ.

ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಕ್ರಿ.ಶ. ೧೯೮೨ರಲ್ಲಿ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಹಾಗೆಯೆ ಕಲಾವಿದರಿಗೆ ನೀಡುವ ಪಿಂಚಣಿಯನ್ನು ಶಾಂತಣ್ಣನವರು ಸರಕಾರದಿಂದ ಪಡೆದುಕೊಂಡಿದ್ದಾರೆ.

ಶಾಂತಣ್ಣನವರು ಅರವತ್ತುನಾಲ್ಕು ವರುಷಗಳ ಕಾಲ ಬದುಕಿ ಕ್ರಿ.ಶ. ೧೯೮೮ರಲ್ಲಿ ವಿಧಿವಶರಾದರು. ಇಂದು ಅವರ ವಂಶಸ್ಥರು ಹಾರಕೂಡ ಗ್ರಾಮದಲ್ಲಿದ್ದಾರೆ.

ಅವರ ಎರಡು ರಚನೆಗಳನ್ನು ಇಲ್ಲಿ ಉದ್ಧರಿಸಲಾಗಿದೆ:

ಸಾವಿಲ್ಲದ ಹೆಂಡತಿ

ಗುರು ಲಿಂಗ ಜಂಗಮ ಗಂಡನಿಗೆ
ನೀರೆ ಸಾವಿಲ್ಲದ ಹೆಂಡತಿಯಾಗು ॥ ಪ ॥

ಕಾಮವಿಲ್ಲದೆ ಮಕ್ಕಳ ಹಡದಿರಬೇಕು
ನೇಮ ನಿತ್ಯಗಳ ನಡೆದಿರಬೇಕು
ಹೇಮದ ಆಶೆಯ ಅಳಿದಿರಬೆಕು
ನಾಮದ ಸೀಮೆಯ ದಾಟಿರಬೇಕು ॥ ೧ ॥

ಐದು ಜನರ ಹಂಗು ಹರಿದಿರಬೇಕು
ಮೂರು ಜನರ ಸಂಗ ತೊರೆದಿರಬೇಕು
ಏಳು ಜನರ ಮಾತು ಮೀರಿರಬೇಕು
ಆರು ಜನರ ಸ್ನೇಹ ದೂರಿರಬೇಕು ॥ ೨ ॥

ಕಾಯವಿಲ್ಲದೆ ಕೂಟ ಕೂಡಿರಬೇಕು
ಅಂಗದ ಸಂಗವ ಮಾಡಿರಬೇಕು
ಲಿಂಗದ ಭೋಗಕೆ ಸವೆಸಿರಬೇಕು
ತುಂಗ ಕುಚೆಯಾಗಿ ನೀ ಮೆರೆದಿರಬೇಕು ॥ ೩ ॥

ಮೂರು ಹಂಗುಗಳ ನೀನು ಬಿಟ್ಟಿರಬೇಕು
ಮೂರು ಮಂದಿಗೆ ಅಂಗ ಕೊಟ್ಟಿರಬೇಕು
ಕಾಯಾ ವಾಚಾ ಮನಸಾ ಶುದ್ಧದಲಿರಬೇಕು
ಬಾಹ್ಯಾದ ಗೊಡವಿಯ ತೊರೆದಿರಬೇಕು ॥ ೪ ॥

ದೇಹವು ಗುರುವಿಗೆ ನೀಡಿರಬೇಕು
ಮನವೊಂದು ಲಿಂಗಕ್ಕೆ ಹೊಂದಿರಬೇಕು
ಇಹದ ಭೋಗವೆಲ್ಲ ಜಂಗಮಕ್ಕೆ ಸಲ್ಲಿಸಿ
ಸಾಧು ಶರಣನ ಸಂಗದೊಳೋಲಾಡಬೇಕು ॥ ೫ ॥

ಬಸವ ಕಲ್ಯಾಣ ತಾಲ್ಲೂಕಾ / ೩೩೯

ಗುರುಪಿತನ ಮಾತು

ಗುರುಪಿತ ಬಾಯೆಂದು
ಗುಪಿತದಿ ಕರೆದೊಯ್ದು
ಹೇಳಿದನು ಮಾತೊಂದನಾ ॥ ಪ ॥

ಕರದೊಳಗ ಕರಕೊಂಡನು
ಕರದೊಳಗ ವರದ ಬೆಳಕನು ಇರಿಸಿದನು
ವರದ ನಿಷ್ಠೆಯಿಂದ ದಿಟ್ಟಿಸಿ ಬೆಳಕನು
ವರ ಮೋಕ್ಷ ಪಡೆಯೆಂದನು ॥ ೧ ॥

ನೀನು ನೀನಲ್ಲೆಂದನೋ
ನೀನು ನಿಜ ರೂಪೆಂದಾನೋ
ನೀನು ಭಕ್ತಿಲಿಂದೆ ಕರದಿಷ್ಟವನು
ಅನುದಿನ ಭಜಿಸೆಂದೆನು ॥ ೨ ॥

ಧ್ಯಾನಕ್ಕೆ ಧ್ಯಾನೆಂದನು ಸದ್ಗುರು ತಂದೆ
ಮಾನಕ್ಕೆ ಮನವೆಂದಾನೋ
ನಾನು–ನೀನು ಅಳಿವ ಬೋಧೆಯ ತಿಳುಹಿದೆ
ಶಿವನೆ ನೀನೆಂದಾನೋ ॥ ೩ ॥

ಇಮ್ಮನವ ಬಿಡು ಎಂದಾನೋ ಗುರುದೇವ
ಒಮ್ಮನದಿ ನಡೆಯೆಂದಾನೋ
ಹಮ್ಮು ಬಿಮ್ಮುಗಳ ಲಿಂಗಕ್ಕೆ ಅರ್ಪಿಸಿ
ಸುಮ್ಮನೆ ನೆನೆಯೆಂದಾನೋ ॥ ೪ ॥

ವಸುಧಿಯೊಳಗ ಹಾರಕೂಡವೋ
ಲೇಸು ಗುರುವಿನ ಸ್ಥಲವೋ
ಖಾಸ ಹೇಳಿದ ಸಾಧು ಶರಣನೋ
ಕೂಸ ಶಾಂತಣ್ಣನೋ ॥ ೫ ॥


(ಶಾಂತಣ್ಣನವರ ಕಿರಿಯ ಮಗ–ಸೊಸೆ–ಈ ವಿವರಗಳನ್ನು ನೀಡಿದ್ದಾರೆ.)



ಶಾಂತಣ್ಣ ಶೀಲವಂತ ಅವರ ಮನೆ (ಹಾರಕೂಡ).



ಶಾಂತಣ್ಣ ಶೀಲವಂತ ಅವರ ಛಾಯಾ ಚಿತ್ರ.




ಶಾಂತಣ್ಣನವರ ಮಗ ಶಿವಪುತ್ರ – ಸೊಸೆ ನೀಲಮ್ಮ – ಮೊಮ್ಮಗಳು



ಶಾಂತಣ್ಣನವರ ಆರಾಧ್ಯ ಗುರುಗಳು ಶ್ರೀ ಚೆನ್ನಬಸವೇಶ್ವರಶಿವಯೋಗಿಗಳ ಹಿರೇಮಠ (ಹಾರಕೂಡ)

ಶಾಂತಣ್ಣನವರ
ಸಮಾಧಿ (ಹಾರಕೂಡ)



೧೫. ಗಂಗಮ್ಮ ಅರಟಗಿ (ಕ್ರಿ.ಶ.ಸು. ೧೯೨೫)

ಇಂದು ಗಂಗಮ್ಮ ಅಜ್ಜಿಗೆ ಎಂಬತ್ತೈದರ ವಯಸ್ಸು. ದೇಹ – ಮನಸ್ಸುಗಳೆರಡೂ ಹಣ್ಣಾದ ಜೀವ. ಮನುಷ್ಯರ ಆಶ್ರಯ ತಪ್ಪಿದಾಗ ಆ ಜೀವಿಯು ಯಾರ ಆಶ್ರಯಕ್ಕೆ ಹೋಗಬೇಕು? ಅದಕ್ಕೆ ದೇವರ ಆಶ್ರಯವೊಂದೇ ಗತಿ. ಇಂತಹದ್ದೆ ಪರಿಸ್ಥಿತಿಯು ಗಂಗಮ್ಮ ಅಜ್ಜಿಗೆ ಬಂದು ಒದಗಿದೆ.

ಇಂದು ಅವಳು ಏಕಾಂಗಿಯಾಗಿ ತನ್ನ ಗತಜೀವನದ ಮೆಲಕು ಹಾಕುತ್ತ ರಾಜೇಶ್ವರ ಗ್ರಾಮದ ಹನುಮಂತ ದೇವರ ಸನ್ನಿಧಿಯನ್ನು ಆಶ್ರಯಿಸಿಕೊಂಡು ಜೀವಿಸುತ್ತಿದ್ದಾಳೆ.

ಅಜ್ಜಿ ಗಂಗಮ್ಮನವರ ತವರೂರು ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ಅರಟಗೆಯ ಗ್ರಾಮ. ತಂದೆ ಈರಯ್ಯ ಸ್ವಾಮಿ. ತಾಯಿ ನೀಲಮ್ಮ. ಜಂಗಮರ ಮನೆತನ. ಈರಯ್ಯ ಸ್ವಾಮಿ ಅಂತಹ ಸ್ಥಿತಿವಂತನೇನಾಗಿರಲಿಲ್ಲ. ಜಂಗಮರ ಭಿಕ್ಷಾವೃತ್ತಿಯನ್ನು ಕೈಗೊಂಡು; ಅಲ್ಲಲ್ಲಿ ನಡೆಯುವ ಪೂಜೆಯಾದಿಗಳನ್ನು ಮಾಡುತ್ತ ಜೀವನ ನಿರ್ವಹಿಸಿದವನು. ತನ್ನ ಮಕ್ಕಳನ್ನು, ಕುಟುಂಬವನ್ನು ಪೋಷಿಸಿದನು.

ಬಾಲ್ಯ ವಿವಾಹಗಳು ನಡೆಯುತ್ತಿದ್ದ ಅಂದಿನ ದಿನಗಳಲ್ಲಿ ಅಜ್ಜಿ ಗಂಗಮ್ಮನವರಿಗೆ ಅವರ ಹನ್ನೆರಡನೆಯ ವಯಸ್ಸಿನಲ್ಲಿಯೇ ಮದುವೆ ಮಾಡಲಾಯಿತು. ಅವರ ಪತಿ ರಾಜೇಶ್ವರ ಗ್ರಾಮದ ಮಡಿವಾಳಯ್ಯ ಸ್ವಾಮಿ. ಮದುವೆಯಾಗಿದ್ದಾಗ ಅವರ ವಯಸ್ಸು ಸು. ೨೫ ವರ್ಷಗಳು. ಹಾಲುಗಲ್ಲದ ಹಸುಳೆಯಾಗಿದ್ದ ಗಂಗಮ್ಮ ಗೃಹಿಣಿಯಾಗಿ ಪತಿಯ ಮನೆಯ ಜವಾಬ್ದಾರಿ ಹೊತ್ತುದು ಸರಳ ಮಾತಾಗಿರಲಿಲ್ಲ. ಆದರೂ ಹೇಗೋ ನಿಭಾಯಿಸಲೇ ಬೇಕಲ್ಲವೆ ? ಬರು-ಬರುತ್ತ ಪತಿಯ ಮನೆಯ ಪರಿಸರ ಒಗ್ಗಿತು. ಅರಟಗಿಯ ಗಂಗಮ್ಮ ರಾಜೇಶ್ವರದ ಗಂಗಮ್ಮನೆನಿಸಿದರು.

ಗಂಗಮ್ಮನವರ ದಾಂಪತ್ಯದ ಬದುಕು ಆರ್ಥಿಕವಾಗಿ ಸುಭದ್ರವಾಗಿರಲಿಲ್ಲ. ಮಡಿವಾಳಯ್ಯ ಸ್ವಾಮಿ ಅವರು ದಿನನಿತ್ಯ ಕೋರಾನ್ನ ಭಿಕ್ಷೆ ಮಾಡುತ್ತಿದ್ದರು. ಭಕ್ತರುಗಳ ಮನೆಯಲ್ಲಿ ವರದಾಶಂಕರ, ನವಗ್ರಹ ಪೂಜೆ, ರುದ್ರಾಭಿಷೇಕ ಇಂತಹ ಪುರೋಹಿತ

ಕಾರ್ಯಗಳನ್ನು ನೆರವೇರಿಸುತ್ತಿದ್ದರು. ಶ್ರಾವಣಮಾಸದಲ್ಲಿ ಭಕ್ತರುಗಳ ಮನೆಗೆ ಪತ್ರಿ ಹಾಕುತ್ತಿದ್ದರು. ಭಕ್ತರುಗಳ ಹೊಲಗಳಿಗೆ ರಾಶಿ ಸಂದರ್ಭದಲ್ಲಿ ಹೋಗಿ ಒಂದಿಷ್ಟು ದವಸ–ಧಾನ್ಯಗಳನ್ನು ಸಂಗ್ರಹಿಸುತ್ತಿದ್ದರು.

ಅಜ್ಜಿ ಗಂಗಮ್ಮನವರು ಹೊಲದ ಕೆಲಸಕ್ಕಾಗಿ ಹೋಗುತ್ತಿದ್ದರು. ಕಾಸಗಿ ಆಯುವುದು; ಕಸ ತೆಗೆಯುವುದು, ಪೈರುಗಳನ್ನು ಕೊಯ್ಯುವುದು ಇಂತಹ ಕೆಲಸಗಳನ್ನು ಗಂಗಮ್ಮನವರು ಹೊಲಗಳಲ್ಲಿ ಮಾಡುತ್ತಿದ್ದರು. ಕೂಲಿಯ ಹೆಣ್ಣುಮಕ್ಕಳ ಗುಂಪಿಗೆ ಗಂಗಮ್ಮನವರೆಂದರೆ ಅಚ್ಚು–ಮೆಚ್ಚು. ಏಕೆಂದರೆ ಉಳಿದ ಹೆಣ್ಣುಮಕ್ಕಳ ಕೆಲಸದ ಶ್ರಮವನ್ನು ನಿವಾರಿಸಲೆಂಬಂತೆ ಕೋಮಲವಾದ ಕಂಠದಿಂದ ಹಾಡುಗಳನ್ನು ಹಾಡುತ್ತಿದ್ದರು. ಅವರು ಹಾಡುವ ಹಾಡುಗಳಲ್ಲಿ ಹೆಚ್ಚಾಗಿ ಹೆಣ್ಣುಮಕ್ಕಳ ಹಾಡುಗಳಿರುತ್ತಿದ್ದವು. ಭಜನೆಯ ಹಾಡುಗಳೂ ಆಗಾಗ ಹೊರಬರುತ್ತಿದ್ದವು. ಅಜ್ಜಿಯ ಹಾಡುಗಳನ್ನು ಕೇಳುತ್ತ ಕೆಲಸ ಮಾಡುತ್ತಿದ್ದ ಹೆಣ್ಣುಮಕ್ಕಳಿಗೆ ಆಯಾಸವಾದುದು ಕಂಡು ಬರುತ್ತಿರಲಿಲ್ಲ. ಮಾಡುವ ಕೆಲಸವು ಹಗುರಾದಂತೆನಿಸುತ್ತಿತ್ತು.

ತಾಯಿ ನೀಲಮ್ಮನವರಿಂದ ಈ ಹಾಡುಗಾರಿಕೆಯ ಕಲೆ ಗಂಗಮ್ಮನವರಿಗೆ ಬಳುವಳಿಯಾಗಿ ಬಂದಿತ್ತು. ಅಜ್ಜಿಯವರು ತಮ್ಮ ತಾಯಿಯು ಹಾಡುವ ಎಷ್ಟೋ ಹಾಡುಗಳನ್ನು ಹಾಡುತ್ತಿದ್ದರು. ಆದುದರಿಂದ ಗಂಗಮ್ಮನವರಿಗೆ ತಾಯಿಯೇ ಗುರು. ಒಂದು ಸಲ ಹಾಡಿದ ಹಾಡು ಕೇಳಿಸಿಕೊಂಡರಾಯಿತು; ಅದು ಗಂಗಮ್ಮನವರಿಗೆ ಕಂಠಪಾಠವೇ ಆಗಿ ಬಿಡುತಿದ್ದಿತು. ಹೀಗಾಗಿ ಕಲಿಯುತ್ತ; ಕಲಿಯುತ್ತ ಅವರು "ಹಾಡಿನ ಕಣಜ"ವೇ ಆಗಿ ಬಿಟ್ಟರು. ಯಾವುದೇ ಮನೆಯಲ್ಲಿ ದೊಡ್ಡವರಾಗಲಿ; ಶೋಭಾನೆ ಕಾರಣವಿರಲಿ, ಕುಪ್ಪಸ ಮಾಡುವುದಿರಲಿ ಅಥವಾ ಮದುವೆಯಂತಹ ಸಮಾರಂಭವೇ ಇರಲಿ ಅಲ್ಲಿಂದ ಗಂಗಮ್ಮ ಅಜ್ಜಿಗೆ ಆಮಂತ್ರಣ ಬರುತ್ತಲಿತ್ತು. ಅಲ್ಲೆಲ್ಲ ಅಜ್ಜಿಯ ಹಾಡುಗಳು ಪ್ರತಿಧ್ವನಿಸುತ್ತಿದ್ದವು.

ಗಂಗಮ್ಮ ಅಜ್ಜಿಯ ಮನೆತನದ ದೇವರು ಕಟಕಲ್ ರೇವಣಸಿದ್ಧೇಶ್ವರರು. ಗುರುಗಳು ರಾಜೇಶ್ವರ ಗ್ರಾಮದ ಹಿರೇಮಠದ ಶಿವಾಚಾರ್ಯರು. ಒಂದು ಸಲ ಗಂಗಮ್ಮ ಅಜ್ಜಿ ತಮ್ಮ ಪತಿಯೊಡನೆ ಮನೆ ದೇವರ ದರ್ಶನಕ್ಕಾಗಿ ರಟಕಲ್ಲಿಗೆ ಹೋದರು. ಆಗ ಅವರಿಗೆ ಸು. ನಲವತ್ತರ ಪ್ರಾಯವಂತೆ, ರೇವಣಸಿದ್ಧೇಶ್ವರರ ಪೂಜೆಯ ಸಮಯದಲ್ಲಿ ಗಂಗಮ್ಮ ಅಜ್ಜಿ ತನ್ನ ಕಂಚಿನ ಕಂಠದಿಂದ ಮಂಗಳಾರತಿ ಪದ್ಯವೊಂದನ್ನು ಹಾಡಿದಳು. ಅಲ್ಲಿದ್ದ ಸ್ವಾಮಿಗಳು "ಏನಮ್ಮ ಇದು ಯಾರ ಹಾಡು?" ಎಂದು ಕೇಳಿದರಂತೆ. ಆಗ ಗಂಗಮ್ಮನವರು "ಅದು ನನಗೆ ತಿಳಿದಿಲ್ರಿಯಪ್ಪ; ನಮ್ಮ ಅವ್ವ ಹಾಡುತ್ತಿದ್ದಳು, ಅವಳಿಂದ ಕಲಿತು ಹಾಡಿದೆ" ಎಂದರು. ಅದಕ್ಕೆ ಅವರು "ನೀನು ಹಾಡುಗಳನ್ನು ಕಟ್ಟುತ್ತಿಯೇನು?" ಎಂದು ಕೇಳಿದರಂತೆ. ಗಂಗಮ್ಮನವರು "ಇಲ್ಲ ಸ್ವಾಮಿ; ಕಟ್ಟಿದವರ ಹಾಡುಗಳನ್ನು

ಕಲಿತು ಹಾಡುತ್ತೇನೆ" ಎಂದರು. ಸ್ವಾಮಿಗಳು ನಗುತ್ತ "ನೀನೂ ಹಾಡುಗಳನ್ನು ಕಟ್ಟುವ ಪ್ರಯತ್ನ ಮಾಡು, ರೇವಣಸಿದ್ಧನ ಆಶೀರ್ವಾದ ನಿನಗೆ ಸಂಪೂರ್ಣ ಇದೆ" ಎಂದರಂತೆ. ಸ್ವಾಮಿಗಳು ಹೇಳಿದ ಮಾತುಗಳು ಗಂಗಮ್ಮನವರ ಮನದಲ್ಲಿ ಹೊಯ್ದಾಡತೊಡಗಿದವು, ಆ ಸ್ವಾಮಿಗಳು ಯಾರೆಂಬುದು ಇಂದಿಗೂ ತಿಳಿದಿಲ್ಲವೆನ್ನುತ್ತಾರೆ ಅಜ್ಜಿ ಗಂಗಮ್ಮನವರು.

ಗಂಗಮ್ಮ ದಂಪತಿಗಳಿಗೆ ಇಬ್ಬರು ಮಕ್ಕಳು. ಒಬ್ಬ ಮಗ, ಒಬ್ಬಳು ಮಗಳು. ಮಗ ಕಲ್ಲಯ್ಯ ತಂದೆಯಂತೆ ಜಂಗಮ ವೃತ್ತಿಯನ್ನೇ ಅವಲಂಬಿಸಿದವನು. ತನ್ನ ಸಂಸಾರ ತಾನೇ ನಿರ್ವಹಿಸುವಲ್ಲಿ ಹೆಣಗಾಡುತ್ತಿರುವ ಆರ್ಥಿಕ ಪರಿಸ್ಥಿತಿ ಅವನದು. ಹೀಗಾಗಿ ತಾಯಿಯನ್ನು ಬಿಟ್ಟು ಬೇರೆ ಕಡೆಗೆ ಹೋಗಿ ವಾಸಿಸುತ್ತಿದ್ದಾನೆ.

ಗಂಗಮ್ಮನವರು ಸುಮಂಗಲಿ ಭಾಗ್ಯವು ದೀರ್ಘಕಾಲಕ್ಕಾಗಿ ಪಡೆದು ಬಂದಿರಲಿಲ್ಲ. ಪತಿ ಮಡಿವಾಳಯ್ಯನವರು ಬೇಗನೆ ವಿಧಿವಶರಾದರು. ಗಂಗಮ್ಮನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಆಶ್ರಯಕ್ಕೆ ಯಾರೂ ಇಲ್ಲದಂತಾಯಿತು. ಅಂದಿನಿಂದ ಹನುಮಂತ ದೇವರ ಸೇವೆ ಮಾಡುತ್ತ, ಅವನ ಸನ್ನಿಧಿಯನ್ನೇ ಆಶ್ರಯವೆಂದು ನಂಬಿ ಬದುಕತೊಡಗಿದರು.

ಅಜ್ಜಿಯ ಪರಿಸ್ಥಿತಿಯನ್ನು ತಿಳಿದ ಗ್ರಾಮದ ಜನರು ಹನುಮಂತ ದೇವರ ದೇವಾಲಯದ ಸಕಲ ಜವಾಬ್ದಾರಿಯೆಲ್ಲ ಗಂಗಮ್ಮನವರಿಗೆ ವಹಿಸಿದರು. ಅದಕ್ಕೆ ಪ್ರತಿಫಲವೆಂದು ವರ್ಷಕ್ಕೆ ಇಂತಿಷ್ಟು ಧನ-ಧ್ಯಾನ ಕೊಡುವ ವ್ಯವಸ್ಥೆ ಮಾಡಿದರು.

ನಿರಾಶ್ರಿತಳಾದ ಅಜ್ಜಿ ಗಂಗಮ್ಮನವರು ದೇವರ ಆಶ್ರಯದೊಂದಿಗೆ ಹಾಡುಗಾರಿಕೆ ಮತ್ತು ಹಾಡು ಕಟ್ಟುವ ಕಲೆಯ ಆಶ್ರಯವನ್ನು ಪಡೆದುಕೊಂಡರು. ಕೆಲವು ಪದ್ಯಗಳನ್ನು ಸ್ವತಃ ಕಟ್ಟಿದ್ದಾರೆ. ತಾವು ಕಟ್ಟಿದ ಪದ್ಯಗಳಿಗೆ "ಭಕ್ತಿಯ ಹಾಡುಗಳು" ಎಂದು ಹೇಳುತ್ತಾರೆ. ಅವುಗಳಿಗೆ ಗಂಗಮ್ಮ ಅಜ್ಜಿ "ರೇವಣಸಿದ್ಧನ" ಅಂಕಿತವನ್ನು ಇರಿಸಿಕೊಂಡಿದ್ದಾರೆ.

ಅಜ್ಜಿಯ ಎರಡು ಪದ್ಯಗಳನ್ನು ಇಲ್ಲಿ ಉದ್ಧರಿಸಲಾಗಿದೆ:

ಮಂಗಳಾರತಿ ರೇವಣಸಿದ್ಧನಿಗೆ

ಓಂ ಮಂಗಳಾ ನಿತ್ಯ ಶುಭಮಂಗಳಾ
ರಟಕಲ್ಲ ರೇವಣಸಿದ್ಧನಿಗೆ
ಮಂಗಳಾರತಿ ರೇವಣಸಿದ್ಧನಿಗೆ ॥ ಪ ॥

ವೀರಶೈವ ಧರ್ಮ ಸ್ಥಾಪನಿ ಮಾಡಿದವನೆ
ಜಂಗಮ ಒಡೆಯನೆ ರೇವಣಸಿದ್ಧನಿಗೆ
ಜೀವಿಗಳ ದುಃಖವನು ದೂರ ಮಾಡುವನಿಗೆ
ರಟಕಲ್ಲ ರೇವಣಸಿದ್ಧನಿಗೆ ॥ ೧ ॥

ನಂಬಿದ ಭಕ್ತರಿಗೆಲ್ಲ ಇಂಬಾದವಗೆ
ನಂಬದವರ ಗರ್ವ ಹರಣ ಮಾಡಿದವಗೆ
ಇಂಬಿನಿಂದಲಿ ಬಂದು ದರುಶನ ಮಾಡಿದರ
ಕುಂಭಿಯ ಪಾಪ ದೂರ ಮಾಡಿದವಗೆ ॥ ೨ ॥

ಧರಿಯೊಳು ಮೆರೆಯುವ ರಾಜೇಶ್ವರ ಗ್ರಾಮ
ರಟಕಲ್ಲ ರೇವಣಸಿದ್ಧನಿಗೆ ಪ್ರೇಮ
ಸಿದ್ಧನ ಪಾದವ ನೆನಿವುದೆ ನೇಮ
ಉದ್ಧಾರ ವಾಯಿತು ಜಗದ ಧಾಮ ॥ ೩ ॥


ಬೀಸುವ ಪದ

ಬೀಸೋಣ ಬಾ ಗೆಳತಿ
ಒಮ್ಮನದ ಜ್ವಾಳಾ । ಬೀಸೋಣ ಬಾ ಗೆಳತಿ ॥ ಪ ॥

ದೇಹಾದ ಕಲ್ಲಿನಾಗ
ಮನಸೆಂಬ ಗೂಟಾ ನೆಟ್ಟಸಿ
ಶಿವನಾಮದ ಜ್ವಾಳ
ಅದರ ಬಾಯಾಗ ತುಂಬುತಾ ॥ ೧ ॥

ಮದಗಳ ತಪರಿಯ ಸೋಸಿ ತಗಿಯಬೇಕು
ಮಿದುವಾದ ಹಿಟ್ಟನು ತುಂಬಿಟ್ಟುಕೊಳ್ಳಬೇಕು
'ಓಂ' 'ಸೋಂ' ಎಂಬ ಹಾಡುಗಳ ಹಾಡುತ
ಬೀಸೋಣ ಬಾ ಗೆಳತಿ ॥ ೨ ॥
ಧರಿಯೊಳು ಮೆರೆವ ರಟಕಲ್ಲ ರೇವಣಸಿದ್ಧ

ಬೇಡಿದ ವರಗಳ ನೀಡುವನವ್ವ
ನಾಡಾಡಿ ನಾವೆಲ್ಲ ಹಾಡುತ ಹೋಗಿ
ಸಿದ್ಧನ ಪಾದಕ್ಕ ನಮಿಸೋಣ ಬಾಗಿ ॥ ೩ ॥



ಗಂಗಮ್ಮ ಅರಟಗಿ
ಅವರ ಮನೆ
(ರಾಜೇಶ್ವರ)



ಗಂಗಮ್ಮ
ಅರಟಗಿ.



ಗಂಗಮ್ಮ ಅರಟಗಿ ಅವರು ಸೇವೆಮಾಡಿಕೊಂಡಿರುವ ಹನುಮಾನ ದೇವಾಲಯ (ರಾಜೇಶ್ವರ).



ಏಕಾಕಿ ಜೀವಿ ಗಂಗಮ್ಮ.

೧೬. ಆನಂದರಾವ ಮುಡಬಿ (ಕ್ರಿ.ಶ.ಸು ೧೯೨೬)

ಆನಂದರಾವ ಮುಡಬಿ ಅವರನ್ನು ಪ್ರತ್ಯಕ್ಷವಾಗಿ ನೋಡಿದರೆ ನಿಜಕ್ಕೂ ಹೃದಯದಲ್ಲಿ ಆನಂದದ ತರಂಗಗಳು ಏಳುತ್ತವೆ. ಎಂಟು ದಶಕಗಳ ಮೇಲ್ಪಟ್ಟ ವಯದ ಈ ಹಿರಿಯ ವ್ಯಕ್ತಿ ನಡೆದು ಬರುತ್ತಿದ್ದರೆ "ಉತ್ಸಾಹವೆ" ನಡೆದು ಬರುವಂತೆ ಕಾಣುತ್ತದೆ. ವೃದ್ಧಾಪ್ಯದಲ್ಲಿಯೂ ಜೀವನೋತ್ಸಾಹವು ಹೊರ ಹೊಮ್ಮಿ ಬರುತ್ತಿದೆಯೆಂಬಂತೆ ಅವರ ಬದುಕಿನ ಪದ್ಧತಿಯಿದೆ.

ಇಂದು ಆನಂದರಾವ ಮುಡಬಿ ಅವರು ನೆಲೆಸಿರುವ ಗ್ರಾಮ ಸಿರಗಾಪುರ. ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಸ್ಥಳ. ಇಲ್ಲಿ ಹಲವಾರು ಕವಿಗಳು ಆಗಿ ಹೋಗಿದ್ದಾರೆ. ಅಂತಹ ಕವಿಗಳಲ್ಲಿ ಅನಂದಪ್ಪನವರೂ ಒಬ್ಬರು.

ಆನಂದರಾವ ಅವರ ತಂದೆ ಸಿದ್ಧಪ್ಪ ಮುಡಬಿ. ತಾಯಿ ಶರಣಮ್ಮಾ. ಇವರು ಸಾತ್ವಿಕ ದಂಪತಿಗಳು. ದೇವರು–ಗುರು–ಹಿರಿಯರಲ್ಲಿ ಭಕ್ತಿಯುಳ್ಳವರು. ಸಿದ್ಧಪ್ಪನವರು ಕೃಷಿಕಾಯಕ ಮಾಡುತ್ತಿದ್ದರು. ಸಿದ್ಧಪ್ಪ ದಂಪತಿಗಳಿಗೆ ಒಟ್ಟು ಆರು ಜನ ಮಕ್ಕಳು. ಮೂರು ಜನ ಗಂಡು ಮತ್ತು ಮೂರು ಜನ ಹೆಣ್ಣುಮಕ್ಕಳು. ಇವರಲ್ಲಿ ಆನಂದರಾವ ಅವರು ಎರಡನೆಯ ಮಗನಾಗಿ ಜನ್ಮತಾಳಿದರು. ಮನೆತನದ ಭಾಷೆ ಅಪ್ಪಟ ಕನ್ನಡ. ಆದರೂ ಆನಂದರಾವ ಅವರಿಗೆ ಅಂದಿನ ಕಾಲದಲ್ಲಿ ಮಾತೃಭಾಷೆಯಾದ ಕನ್ನಡದಲ್ಲಿ ಶಿಕ್ಷಣ ಪಡೆಯುವ ಅವಕಾಶವು ದೊರಕಲಿಲ್ಲ. ಹೀಗೆಂದು ತಮ್ಮ ಮಗನನ್ನು ಸಂಪೂರ್ಣವಾಗಿ ಶಿಕ್ಷಣದಿಂದ ವಂಚಿತನನ್ನಾಗಿಸುವ ಮನಸ್ಸೂ ಸಿದ್ಧಪ್ಪನವರಿಗೆ ಇರಲಿಲ್ಲ. ಅಂದಿನ ಕಾಲದಲ್ಲಿ ಸಿರಗಾಪುರ ಗ್ರಾಮದಲ್ಲಿ ಯಾವುದೇ ಶಾಲೆಗಳಿರಲಿಲ್ಲ. ಹತ್ತಿರದ ಗ್ರಾಮ ಸರಜವಳಾಗದಲ್ಲಿ ಮರಾಠಿ ಮಾಧ್ಯಮದ ಶಾಲೆಯಿದ್ದಿತು. ಅದು ಖಾಸಗಿಯ ಶಾಲೆ.

ಸಿದ್ಧಪ್ಪನವರು ತಮ್ಮ ಮಗ ಆನಂದಪ್ಪನವರನ್ನು ಸರಜವಳಗಾದ ಮರಾಠಿ ಶಾಲೆಗೆ ಕಳುಹಿಸಿದರು. ಆ ಶಾಲೆಯಲ್ಲಿ ಗುಂಡೇರಾವ ಎಂಬ ಮಾಸ್ತರರಿದ್ದರು. ಮಕ್ಕಳನ್ನು ಅಕ್ಕರೆಯಿಂದ ಅಕ್ಷರಭ್ಯಾಸ ಮಾಡಿಸುತ್ತಿದ್ದರು. ಆನಂದರಾವ ಅವರು ಗುಂಡೇರಾವ ಮಾಸ್ತರರ ಪ್ರೀತಿಯ ಸವಿಯನ್ನು ಅನುಭವಿಸುತ್ತ ಮೂರನೆಯ ತರಗತಿಯವರೆಗೆ ಓದಿದರು. ಒಳಗಿನ ಕನ್ನಡದ ಮನಸ್ಸು ಪರಭಾಷೆಯಲ್ಲಿನ 'ಓದಿಗೆ

ಅಷ್ಟು ಒಗ್ಗದಾಯಿತು. ಆದುದರಿಂದ ಮೂರನೆಯ ತರಗತಿಗೆ ಶಿಕ್ಷಣವನ್ನು ಬಿಟ್ಟು ಮರಳಿ ಬಂದು ಸಿರಗಾಪುರದಲ್ಲಿ ಉಳಿದರು. ತಂದೆಯೊಡನೆ ಕೃಷಿಕಾರ್ಯಕದಲ್ಲಿ ಭಾಗಿಯಾಗುತ್ತ, ನಿಸರ್ಗದ ಮಡಿಲಿನಲ್ಲಿ ತಮ್ಮ ಒಳಗಿದ್ದ ಸುಪ್ತಪ್ರಭೆಯನ್ನು ಬೆಳೆಯಿಸಿಕೊಳ್ಳುವತ್ತ ಆನಂದರಾವ ಅವರು ತಮ್ಮ ಮನಸ್ಸು ಹರಿಸಿದರು.

ಆನಂದರಾವ ಅವರು ತಮ್ಮ ಸಮವಯಸ್ಕರಾದ ಹಲವಾರು ಗೆಳೆಯರನ್ನು ಕೂಡಿಸಿಕೊಂಡರು. ಪದ್ಯ ಹಾಡುವುದು; ಭಜನೆ ಮಾಡುವುದು; ನಾಟಕ–ಆಟಗಳನ್ನು ಆಡುವುದು; ಅವುಗಳಲ್ಲಿ ಪಾತ್ರ ವಹಿಸುವುದು ಇಂತಹ ಹವ್ಯಾಸಗಳನ್ನು ಆನಂದರಾವ ಮತ್ತು ಅವರ ಗೆಳೆಯರ ಗುಂಪು ಕ್ರಿಯಾರೂಪವಾಗಿಸತೊಡಗಿತು.

ಒಂದು ಸಲ ಸಿರಗಾಪುರಕ್ಕೆ ಮಹಾತಪಸ್ವಿಗಳಾದ ಷ.ಬ್ರ.ಶ್ರೀ ಚೆನ್ನಬಸವ ಶಿವಯೋಗಿಗಳು ದಯಮಾಡಿಸಿದರು. ಆನಂದರಾವ ಮತ್ತು ಗೆಳೆಯರು ಕೂಡಿಕೊಂಡು, ಗ್ರಾಮದ ಭಕ್ತರುಗಳ ಸಹಕಾರದೊಂದಿಗೆ ಪಲ್ಲಕ್ಕಿ ಉತ್ಸವದ ಕಾರ್ಯಕ್ರಮ ಹಮ್ಮಿಕೊಂಡರು. ಪೂಜ್ಯರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ, ಗ್ರಾಮದ ಸುತ್ತಲು ಪ್ರದಕ್ಷಿಣೆ ಹಾಕಿದರು. ಚೆನ್ನಬಸವ ಶಿವಯೋಗಿಗಳಿಗೆ ಸಿರಗಾಪುರದ ಭಕ್ತರ ಭಕ್ತಿಯ ಉತ್ಸಾಹ ಕಂಡು ಅತ್ಯಂತ ಹರುಷವಾಯಿತು. "ನಿಮ್ಮ ಊರು ನಿರಂತರವಾಗಿ ಸುಖ–ಶಾಂತಿ–ಸಮೃದ್ಧಿಯಿಂದ ಕೂಡಿರಲಿ" ಎಂದು ಆಶೀರ್ವದಿಸಿದರು. ಅಂದು ಆರಂಭವಾದ ಗ್ರಾಮ ಪ್ರದಕ್ಷಿಣೆಯ ಪಲ್ಲಕ್ಕಿ ಉತ್ಸವದ ಕಾರ್ಯವು ನಿರಂತರವಾಗಿ ನಡೆಯತೊಡಗಿತು. ಪೂಜ್ಯರ ಲಿಂಗೈಕ್ಯದ ನಂತರ ಅವರ ಛಾಯಚಿತ್ರವನ್ನು ಪಲ್ಲಕ್ಕಿಯಲ್ಲಿ ಇರಿಸಿ ಮೆರವಣಿಗೆ ಮಾಡತೊಡಗಿದರು. ಇಂದಿಗೂ ಅದು ನಡೆಯುತ್ತಲೇ ಇದೆ. ಇದಕ್ಕೆಲ್ಲ ಕಾರಣ ಆನಂದಪ್ಪನವರೆಂಬುದು ಇಲ್ಲಿ ಮುಖ್ಯವಾದ ಸಂಗತಿ.

ಆನಂದರಾವ ಅವರ ಅಂತರಂಗವು ಸಾಂಸ್ಕೃತಿಕ ಸತ್ವದಿಂದ ತುಂಬಿಕೊಂಡಿತ್ತು. ಆಧ್ಯಾತ್ಮವು ಅದರ ಅಂತಃ ಸಾರವಾಗಿತ್ತು. ಆನಂದಪ್ಪನವರಿಗೆ ಶರಣರು–ಸಾಧುಗಳು ಸತ್ಪುರುಷರು ಕಂಡರೆ ಅಪಾರ ಭಕ್ತಿ. ಆದುದರಿಂದಲೇ ಅವರ ಭಕ್ತಿಯ ಮನಸ್ಸು ಸಹಜವಾಗಿಯೇ ಹಾರಕೂಡ ಚೆನ್ನಬಸವ ಮತ್ತು ಲೆಂಗಟಿ ಕರಿಬಸವೇಶ್ವರರಲ್ಲಿ ಲೀನವಾಯಿತು. ಉಭಯ ಆಧ್ಯಾತ್ಮ ಶಕ್ತಿಗಳ ಪರಮ ಶಿಷ್ಯರಾಗಿ ಆನಂದರಾವ ಅವರು ಇಂದು ಬದುಕುತ್ತಕಲಿದ್ದಾರೆ.

ಆನಂದರಾವ ಅವರಲ್ಲಿ ಅಹಿಕ ಬದುಕಿನ ಬಗೆಗೆ ಹಿತಮಿತದ ಭಾವವಿದೆ. "ಉಂಡು ಉಪವಾಸಿ ಬಳಸಿಯೂ ಬ್ರಹ್ಮಚಾರಿಯಂತೆ" ಅವರು ಪ್ರಪಂಚವನ್ನು ಪರಿಪಾಲಿಸಿದರು. ಇಂದಿಗೂ ಅವರಲ್ಲಿ ಅಂತಹ ಭಾವವು ಎಚ್ಚರವಾಗಿರುವುದನ್ನು ಕಾಣುತ್ತೇವೆ. ಆನಂದರಾವ ಮುಡಬಿ ಅವರ ಧರ್ಮಪತ್ನಿ ಪಾರ್ವತಿ. ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು. ಕೊಹಿನೂರಿನಲ್ಲಿಯೂ ಹಿರಿಯರ ಆಸ್ತಿಯಿದ್ದಿತು. ಅದನ್ನು

ನೋಡಿಕೊಳ್ಳಲೆಂದು ಹಲವು ಕಾಲ ಆನಂದರಾವ ಅವರು ಕೊಹಿನೂರಿನಲ್ಲಿ ಹೋಗಿ ನೆಲೆಸಿದರು. ಅಲ್ಲಿಯೂ ತಮ್ಮ ಸಾಹಿತ್ಯಿಕ-ಸಾಂಸ್ಕೃತಿಕ ಕಾರ್ಯಗಳನ್ನು ಮುಂದುವರೆಸಿಕೊಂಡೇ ಹೋದರು.

ಒಂದು ಸಲ ಆನಂದರಾಯರ ಸಂಬಂಧಿಕರಾಗಿದ್ದ ಚೆನ್ನಪ್ಪ ಹುಸಕಿ ಎಂಬುವವರು ಅವರನ್ನು ಕುರಿತು "ನೀವು ಸಾಹಿತ್ಯ ಕೃಷಿಯಲ್ಲಿ ತೊಡಗಿರುವಿರಿ. ಪದ್ಯ ರಚನೆಯಂತೂ ಸರಿಯಾಗಿಯೇ ಒಲಿದಿದೆ. ಆದರೆ ಗುರುವಿನ ಕೃಪಾ ಮುದ್ರೆ ಇದಕ್ಕೆ ಬೀಳಬೇಕು. ಗುರುವಿನ ಕರುಣೆಯಿಲ್ಲದೆ ಏನು ಬರೆದರೇನು? ಹಾಡಿದರೇನು ? ವ್ಯರ್ಥ" ಎಂದು ಹೇಳಿದರು. ಲೆಂಗಟಿ ಕರಿಬಸವೇಶ್ವರರು ಚೆನ್ನಪ್ಪ ಹುಸಕಿ ಅವರ ಮನೆಗೆ ಆಗಾಗ ಬರುತ್ತಿದ್ದರು. ಆನಂದರಾವ ಅವರು ಕರಿಬಸವರಿಂದಲೇ "ಗುರೂಪದೇಶ"ವನ್ನು ಸ್ವೀಕರಿಸಿ ಗುರು ಪುತ್ರರಾದರು. ತಮಗಾದ ಗುರು ಕರುಣೆಯ ಪರಿಯನ್ನು ಆನಂದರಾಯರು ತತ್ತ್ವಪದವಾಗಿಸಿ ಹಾಡಿದ್ದಾರೆ. ಅದರ ಒಂದಿಷ್ಟು ಭಾಗ ನೋಡಬೇಕು:

"ಏನು ಹೇಳಲೆಮ್ಮ । ಶ್ರೀ ಗುರು ಕರಿಬಸವನ ಮಹಿಮೆ ॥ ಪ ॥
ರಮ್ಮಿಸಿ ಶೀಷ್ಯರನ್ನು ಕರೆದಿವರಮ್ಮ । ಪರಿ ಪರಿಯಿಂದ
ಬೋಧ ಹೇಳಿರುವರಮ್ಮ । ಇದ್ದಿದೇ ಸಿದ್ಧಮಾಡಿ
ತೋರಿಸಿದರಮ್ಮ । ಹಾರಿ ಹೋಯಿತು ಮೈಯಾನ ಜುಮ್ಮ".

ಗುರುವಿನ ಕೃಪೆಯಿಂದ ಆನಂದರಾವ ಅವರ ಬದುಕಿನಲ್ಲಿ ಪರಿವರ್ತನೆ ಉಂಟಾಯಿತು. ಅವರ ಹಲವು ಪವಾಡಗಳು ಆನಂದರಾವ ಅವರ ಅನುಭವಕ್ಕೆ ಬಂದವೆಂದು ಹೇಳುತ್ತಾರೆ.

ಹರೆಯದ ವಯಸ್ಸಿನಿಂದಲೇ ನಾಟಕ-ತತ್ತ್ವಪದಗಳ ರಚನೆಗೆ ಆರಂಭ ಮಾಡಿದ ಆನಂದರಾವ ಮುಡಬಿ ಅವರು ನೂರಾರು ತತ್ತ್ವಪದಗಳ ರಚನೆ ಮಾಡಿದ್ದಾರೆ. ಕನ್ನಡದ ಭಾಷೆ ಮತ್ತು ಮರಾಠಿ ಲಿಪಿ ಅವರ ಒಟ್ಟು ಬರಹದ ಮಾಧ್ಯಮ.

ಆನಂದರಾವ ಅವರ ಮೊಮ್ಮಗ ಚಿ. ಸಿದ್ಧಾರೂಢನು ಮರಾಠಿ ಲಿಪಿಯಲ್ಲಿರುವ ಹಾಡುಗಳನ್ನು ಕನ್ನಡದ ಅಕ್ಷರಗಳಲ್ಲಿ ಬರೆದಿರುವನು. "ಸಹೋದರ-ಸಹೋದರಿ" ಎಂಬ ಡಪ್ಪಿನಾಟ ಬರೆದು ಅದರಲ್ಲಿ ಪಾತ್ರವಹಿಸುವ ಮೂಲಕ ಅನಂದರಾವ ಅವರು ಕಲಾರಂಗಕ್ಕೆ ಕಾಲಿರಿಸಿದರು. ಹಲವಾರು ಸಣ್ಣಾಟ-ದೊಡ್ಡಾಟ-ನಾಟಕ ಬರೆದರು. ಅವುಗಳಲ್ಲಿ ಹಾಸ್ಯ ಪಾತ್ರವಹಿಸಿ, ಜನರನ್ನು ನಗಿಸಿದರು. ಸೌಭಾಗ್ಯ ಲಕ್ಷ್ಮೀ, ಪ್ರೇಮ ಬಂಧನ , ದಸರಾ, ಆದರ್ಶ ಪ್ರೇಮ-ಇವರು ಪಾತ್ರ ವಹಿಸಿದ ನಾಟಕಗಳು.

ಕೊಹಿನೂರು-ಸಿರಗಾಪುರದ ಹುಸನಾ ಮಾಸ್ತರರು ಮತ್ತು ಗುರು ಕರಿಬಸವೇಶ್ವರರ

ಗಾಢ ಪ್ರಭಾವವು ಆನಂದರಾಯರ ತತ್ತ್ವಪದಗಳ ಮೇಲೆ ಆಯಿತು. ಇಂದಿಗೂ ಅವರು ಆಗಾಗ ತತ್ತ್ವಪದಗಳನ್ನು ರಚಿಸುತ್ತಾರೆ. ಅವರ ನೂರೊಂದು ತತ್ತವಪದಗಳು "ಆನಂದಾನುಭವ ತತ್ತ್ವಪದಗಳು" ಎಂಬ ಹೆಸರಿನಲ್ಲಿ ಕ್ರಿ. ಶ. ೨೦೦೫ ರಲ್ಲಿ ಪ್ರಕಟವಾಗಿದೆ. ಅದೇ ಕೃತಿಯಲ್ಲಿನ ಆಯ್ದ ಕೆಲವು ಪದ್ಯಗಳನ್ನು ಇಲ್ಲಿ ಉದ್ಧರಿಸಲಾಗಿದೆ:

ಮೋಹವೆಂಬ ತೇಳು

ತುಪ್ಪದ ಕೊಡಕ ತೇಳ ಮೆತ್ಯಾದ ಹೊಡಿಲಾಕ ಬರಲಿಲ್ಲ
ತೇಳಿಗಿ ಹೊಡಿದರ ಕೊಡವು ಒಡೆದು ಹಾಳಾಗುವುದಲ್ಲ ॥ ಪ ॥

ತುಪ್ಪ ಚೆಲ್ಲಿ ಮಣ್ಣ ಪಾಲಾಗಿ ಹೋಗುವದಲ್ಲ
ಬಳೆದು ತಿಂದೆನಂದರ ಕೈಗೆ ಬರುವದಿಲ್ಲ
ಇದು ಹೆಂತಾದು ಬಂತೊ ಯಪ್ಪಾ ಮುಶಕೀಲ ॥ ೧ ॥

ಆನಂದಮಯಿ ಶರೀರ ನಾಶವಾಗುವದಿಲ್ಲ
ಮಾನವನಾಗಿ ಇರಬೇಕೆಂದರ ಇರುಗೊಡಲಿಲ್ಲ
ಮೋಹವೆಂಬ ತೇಳ ಮೆತ್ತಿದ್ದು ಬಿಡಲಿಲ್ಲ ॥ ೨ ॥

ಚಳಿಮಳಿ ಗಾಳಿ ತಾಪ ತಾಳಿದೆನಲ್ಲ
ಹೊಳಿ ಒಳಗ ಹುಳಿ ತೊಳದಾಂಗ ಆಯಿತಲ್ಲ
ಗೊಳ್ಳ ಸಂಸಾರ ಸುಳ್ಳು ಎಂದು ತಿಳಿಯಲಿಲ್ಲ ॥ ೩ ॥

ಮಿಥ್ಯ ಸಂಸಾರಕ ಸತ್ಯ ಎಂದು ಮೆತ್ತಿ ಕೊಂಡೆಲ್ಲ
ಕುಂಬಾರ ಮನೆಯಾನ ಕತ್ತಿಯಂತೆ ಮಣ್ಣು ಹೊತ್ತೆಲ್ಲ
ತಿಪ್ಪಿಮ್ಯಾಗಿನಿಂದ ಸಪ್ಪಿ ತಿಂದ್ಹಂಗ ಆಯಿತಲ್ಲ ॥ ೪ ॥

ಕಷ್ಟ ನೋಡಿ ಬಂದ ಓಡಿ ಗುರು ಮಾವುಲಿ
ತೇಳಿನ ಹಿಡಿದು ಕೊಂಡಿ ಕಡಿದು ಇಟ್ಟಿದ ಜೀವದಲ್ಲಿ
ಗುರುವಿನಕೃಪಾ ಮಾಡಿ ನೆನಪ ನುಡಿಯೋ ಬಾಯಲಿ ॥ ೫ ॥

ಮಹೇಂದ್ರ ಜಾಲಿ ಎಂಬುವ ಬಲಿ ಕಟ್ಟಿದ ಮಾಯದಲ್ಲಿ
ಹರನು ಮುನಿದರೆ ಗುರು ಕಾಯುವನು ತಿಳಿಯೊ ಹುಚ್ಚಪ್ಯಾಲಿ
ತಪ್ಪಿಸಿ ಬಿಟ್ಟಿದೆ ನಿನಗ ಬಂದ ಯಮಜೋಲಿ ॥ ೬ ॥

ದೇಶದೊಳಗ ಲೇಸ ಲೆಂಗಟಿ ಗುರುವಿನ ಸ್ಥಲ
ಸಿರಗಾಪುರದ ಆನಂದ ಆದ ಗುರುವಿನ ಬಾಲ
ಹೃದಯ ತೆರೆದು ಕವಿಯು ಬರೆದು ತೋರಿದನಲ್ಲ ॥ ೭ ॥

(ಆನಂದಾನುಭವ. ಪು. ೬–೭)

ನಾನ್ಯಾರೆಂಬುದು ಅರಿಯಲಿಲ್ಲ

ನಂದು ನಂದು ನಂದು ಎಂದು
ಬಡಿದಾಡಿ ಹೊಡದಾಡಿ ನೊಂದು
ಶ್ರೇಷ್ಠ ಮಾನವ ಜನಮಕ ಹಚ್ಚಿದಿ ಕುಂದು ॥ ಪ ॥

ಮೂರು ಗರ್ಭದಲ್ಲಿ ಉಳಿದು
ತಾಯಿ ಉಡಿಯೊಳು ಬೆಳೆದು
ಬಾಲ್ಯವನ್ನು ಕಳೆದು ಪ್ರಾಯದೊಳು ಇಳಿದು ॥ ೧ ॥

ಸತಿಸುತರ ಸೆರೆಯಲ್ಲಿ ಉಳಿದು
ಕಂಡ ಕಂಡವರ ಕಾಲನ್ನು ತುಳಿದು
ಭಂಡನಗಿ ಹಣವನ್ನು ಸೆಳೆದು
ರೊಕ್ಕಗಳಿಸಲಿಲ್ಲ ತಿಳಿದು ॥ ೨ ॥

ಗಳಿಸಿದು ಉಳಿಯಲಿಲ್ಲ
ಉಳಿಸಿದು ತಿಳಿಯಲಿಲ್ಲ
ಗುರುವಿನ ಪಾದ ತೊಳೆಯಲಿಲ್ಲ
ಮಾಡಿದ ಕರ್ಮ ಕಳೆಯಲಿಲ್ಲ ॥ ೩ ॥

ಕೈಯೊಳು ಕೋಲು ಹಿಡಿದೆಲ್ಲ
ಸೊಂಟ ಬಾಗಿ ನಡೆದೆಲ್ಲ ಕಿವಿಗಳು ಕೇಳಲಿಲ್ಲ
ಕಣ್ಣುಗಳು ಕಾಣಲಿಲ್ಲ ॥ ೪ ॥


ಕಾಯಕವು ಬರಲಿಲ್ಲ
ಸತಿಸುತರು ಸೇರಲಿಲ್ಲ
ಗಳಿಸಿದ್ದು ತೋರಲಿಲ್ಲ
ಚಿಂತೆಯು ತೀರಲಿಲ್ಲ ॥ ೫ ॥

ನ್ಯಾಯಕ್ಕ ಮೀರಿದೆಲ್ಲ
ಅನ್ಯಾಯಕ್ಕೆ ಸೇರದೆಲ್ಲ
ಪಶುವಾಗಿ ಮರೆದೆಲ್ಲ
ಶಿಶುವಾಗಿ ಇರಲಿಲ್ಲ ॥ ೬ ॥

ನಾನ್ಯಾರೆಂಬುದು ಅರಿಯಲಿಲ್ಲ
ಯಮಧೂತರನ್ನ ಕರದೆಲ್ಲ
ಶಿವಧೂತರನ್ನ ತೊರೆದೆಲ್ಲ
ಆನಂದ ಕವಿ ಬರೆದಲ್ಲ ॥ ೭ ॥

(ಆನಂದಾನುಭವ. ಪು. ೭–೮)

(ಸ್ವತಃ ಕವಿಗಳೇ ವಿವರಗಳನ್ನು ನೀಡಿದ್ದಾರೆ.)



ಆನಂದರಾವ ಮುಡಬಿ ಅವರ ಮನೆ (ಸಿರಗಾಪುರ).



ಆನಂದರಾವ ಅವರು ತತ್ತ್ವಪದ ಹಾಡುವುದರಲ್ಲಿ ಲೀನರಾಗಿರುವುದು.



ಆನಂದರಾವ ಮುಡಬಿ, (ಶಿರಗಾಪೂರ)



ಆನಂದರಾವ ಮುಡಬಿ ತಮ್ಮ ವಂಶ ಸಂತತಿಗಳೊಂದಿಗೆ.

೧೭. ರೇವಪ್ಪ ಸಿಂಧ್ಯೆ (ಕ್ರಿ.ಶ.ಸು. ೧೯೨೬-೨೦೦೭)

ಎಕಲೂರು ಗ್ರಾಮದ ಹೊರವಲಯದಲ್ಲಿ ಹಾದು ಹೋಗುವ ರಸ್ತೆಯನ್ನು ಸುತ್ತಿಕೊಂಡು ಬರುವಾಗ ಮನೆಗಳಿರುವ ಭಾಗಕ್ಕೆ ನೋಡುತ್ತ ಸಾಗಿದರೆ, ಒಂದು ಸ್ಥಳದಲ್ಲಿ ಮಾತ್ರವೆ ಎರಡು ಬಿಲ್ವಪತ್ರಿ ವೃಕ್ಷಗಳು ಬೆಳೆದು ನಿಂತಿರುವುದು ಕಾಣುತ್ತದೆ. ಹಾಗೆ ಕಂಡಾಗ "ಇಲ್ಲಿ ಯಾವುದಾದರೂ ಮಠವಿದೆಯೆ?" ಎಂದು ಅಲ್ಲಿದ್ದವರಿಗೆ ಪ್ರಶ್ನಿಸಿದೆನು. ಆಗ ಅವರಿಂದ ಬಂದ ಉತ್ತರವು ನನ್ನ ನಿರೀಕ್ಷೆ ಸುಳ್ಳು ಮಾಡಿತ್ತು. ಅಲ್ಲಿದ್ದ ವ್ಯಕ್ತಿಯೊಬ್ಬ "ಇಲ್ಲಿ ಮಠವಿಲ್ಲ ಸರ್ 'ಎಕಲೂರಿನ ಏಕತಾರಿ'ಯೆಂದೇ ಪ್ರಸಿದ್ಧನಾಗಿರುವ ರೇವಪ್ಪ ಸಿಂಧ್ಯೆ ಅವರ ಮನೆಯಿದೆ" ಎಂದನು. ರೇವಪ್ಪ ಸಿಂಧ್ಯೆಯವರ ಮನೆಯ ಒಳಗೆ ಬರುವವರನ್ನು ಮೊದಲಿಗೆ ಸ್ವಾಗತಿಸುವವು ಆ ಪತ್ರಿಗಿಡಗಳು. ರೇವಪ್ಪನವರು ತಮ್ಮ ಪೂಜೆಯ ಕಾರ್ಯಕ್ಕಾಗಿ ಪತ್ರಿಗಳು ಬೇಕೆಂದು ಆ ಗಿಡಗಳನ್ನು ನೆಟ್ಟು ಬೆಳೆಸಿದರಂತೆ. ಇಂದು ರೇವಪ್ಪನವರು ಇಲ್ಲ. ಆದರೆ ಪತ್ರಿಗಿಡಗಳು ಅವರ ಬದುಕಿನ ಕಥೆಯನ್ನು ಹೇಳುತ್ತ; ಜನತೆಯ ಭಕ್ತಿ ಪೂಜೆಗೆ ಪತ್ರಿಗಳನ್ನು ನೀಡುತ್ತ ನಿಂತುಕೊಂಡಿವೆ. ಬೀದರ ಜಿಲ್ಲೆ ಅಥವಾ ಬಸವಕಲ್ಯಾಣ ತಾಲ್ಲೂಕಾ ತತ್ತ್ವಪದ ಸಾಹಿತ್ಯ ಪರಂಪರೆಗೆ ಎಕಲೂರು ತನ್ನದೆ ಆದ ಕೊಡುಗೆ ನೀಡಿರುವುದು ರೇವಪ್ಪನವರಂತಹ ವ್ಯಕ್ತಿಗಳ ಮುಖಾಂತರವೆ.

ಈ ಗ್ರಾಮದಲ್ಲಿ ರೇವಪ್ಪನವರು ಜುಲೈ ೧೧, ಕ್ರಿ.ಶ. ೧೯೨೬ರಂದು ಜನಿಸಿದರು. ತಂದೆ ಮೈಲಪ್ಪ ಸಿಂಧ್ಯೆ. ತಾಯಿ ಪಾರ್ವತಿಬಾಯಿ.

ಮೈಲಪ್ಪನವರು ಕೃಷಿಯನ್ನೇ ನಂಬಿ ಬದುಕಿದವರು. ಭೂಮಿ ತಾಯಿಯ ಪೂಜೆಯೇ ಅವರ ಬದುಕಿನ ಸರ್ವಸ್ವವಾಗಿತ್ತು. ಕೃಷಿ ಕಾಯಕದ ಬಿಡುವಿನ ವೇಳೆಯಲ್ಲಿ ಸತ್ಸಂಗ ಮಾಡುವುದಕ್ಕಾಗಿ ಭಜನೆಗೆ ಹೋಗುತ್ತಿದ್ದರು. ಭಜನೆ ಪದಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ತಂದೆಯ ಈ ಹಾಡುಗಾರಿಕೆಯ ಪ್ರಭಾವು ಬಾಲಕ ರೇವಪ್ಪನವರ ಎಳೆಯ ಮನಸ್ಸಿನ ಮೇಲೆ ಆಗದೇ ಹೋಗಲಿಲ್ಲ. ಆಗಾಗ ತಂದೆಯೊಡನೆ ಭಜನೆಗೆ ಹೋಗುತ್ತಿದ್ದರು. ದೊಡ್ಡವರ ದನಿಯಲ್ಲಿ ತನ್ನ ಕಿರುದನಿಯನ್ನು ಕೂಡಿಸಿ ಹಾಡುತ್ತಿದ್ದರು. ಬಾಲಕ ರೇವಪ್ಪನವರಲ್ಲಿ ಹಾಡುಗಾರನೊಬ್ಬನು ಹುಟ್ಟಿಕೊಂಡಂತೆ, ತತ್ತ್ವಪದಕಾರನೂ ಹುಟ್ಟಿಕೊಳ್ಳತೊಡಗಿದನು. ತಂದೆ ಮೈಲಪ್ಪನವರಿಗೆ ಈ ಬೆಳವಣಿಗೆ ತಿಳಿಯದೆ ಹೋಗಲಿಲ್ಲ.

ಮನೆಯ ಪರಿಸರವು ರೇವಪ್ಪನವರ ಹಂಬಲಕ್ಕೆ ಪ್ರೋತ್ಸಾಹದಾಯಕ ನೆಲವನ್ನು ರಚಿಸಿಕೊಟ್ಟಿತು.

ರೇವಪ್ಪನವರು ಇಹದ ಬದುಕನ್ನೇ ಆಧ್ಯಾತ್ಮಯೋಗವಾಗಿಸಿಕೊಂಡು ಬದುಕಿದವರು. ಇಹದಲ್ಲಿ ಇದ್ದು, ಎಲ್ಲವನ್ನು ಪರಿಮಿತಿ ಮೀರದಂತೆ ನಡೆಸಿಕೊಂಡು ಹೋದವರು. ಅವರ ಧರ್ಮ ಪತ್ನಿ ನಾಗಮ್ಮನವರು. ದಾಂಪತ್ಯದ ಹೂವಾಗಿ ಅರಳಿದ ಗಂಡು–ಹೆಣ್ಣು ಮಕ್ಕಳು ಇವರೆಲ್ಲ ರೇವಪ್ಪನವರ ಸಾಧಕಹಾದಿಗೆ ಸಹಕಾರಿಯಾಗಿ ನಿಂತುಕೊಂಡರು.

ರೇವಪ್ಪನವರು ಶಿಕ್ಷಕವೃತ್ತಿಯನ್ನು ಆಯ್ಕೆ ಮಾಡಿಕೊಂಡು ಮಕ್ಕಳಿಗೆ ಅಕ್ಷರಭ್ಯಾಸವನ್ನು ಮಾಡಿಸಿದರು; ಸಮಾಜಕ್ಕೆ ಸುಜ್ಞಾನದ ಶಿಕ್ಷಣವನ್ನು ನೀಡಿದರು. ಅವರು ತಮ್ಮದೆ ಆದ ಒಂದು ಖಾಸಗಿ ಶಾಲೆಯನ್ನು ತೆರೆದರು. ಹರಿಜನರ–ಹಿಂದುಳಿದವರ, ದುರ್ಬಲರ ಮಕ್ಕಳು ವಿದ್ಯೆ ಕಲಿತು ಜ್ಞಾನವಂತರಾಗಬೇಕೆಂಬ ಕಳಕಳಿಯು ರೇವಪ್ಪನವರಲ್ಲಿ ಇದ್ದಿತು. ಶಿಕ್ಷಣಕ್ಕೆ ಮಹತ್ವ ನೀಡಿದ ಡಾ.ಬಾಬಾಸಾಹೇಬ ಅಂಬೇಡ್ಕರರ ಯೋಜನೆಯನ್ನು ರೇವಪ್ಪನವರು ತಮ್ಮ ಊರಲ್ಲಿ ಕಾರ್ಯಗತಗೊಳಿಸುವ ಪ್ರಯತ್ನ ಮಾಡಿದರು. ಗ್ರಾಮದ ಜನತೆಯು ರೇವಪ್ಪನವರನ್ನು "ರೇವಪ್ಪ ಮಾಸ್ತರ" ಎಂದು ಕರೆದು ಮನ್ನಿಸಿದರು.

ರೇವಪ್ಪನವರು ತಮ್ಮ ಗ್ರಾಮದ ಸುತ್ತಲಿರುವ ಬೇರೆ–ಬೇರೆ ಗ್ರಾಮಗಳಿಗೂ ಹೋಗುತ್ತಿದ್ದರು. ದಲಿತ ಬಾಂಧವರ ಮನೆಗಳಿಗೆ ಹೋಗಿ ಅವರಲ್ಲಿ ತುಂಬಿಕೊಂಡಿದ್ದ ಕಂದಾಚಾರ–ಮೌಢ್ಯಗಳ ಬಗೆಗೆ ತಿಳುವಳಿಕೆ ನೀಡುತ್ತಿದ್ದರು. ಅವುಗಳನ್ನು ದೂರೀಕರಿಸಲು ಹೇಳುತ್ತಿದ್ದರು. ದಲಿತ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂದು ಬೋಧಿಸುತ್ತಿದ್ದರು. ಅವರ ಮನೆಗಳಲ್ಲಿ ಸದಾಚಾರ ನೆಲೆಗೊಳ್ಳಲೆಂದು ವರದಾಶಂಕರ, ಸತ್ಯನಾರಾಯಣ, ಶನಿ ದೇವರಾದಿಗಳ ಪೂಜೆಗಳನ್ನು ನಡೆಸುತ್ತಿದ್ದರು. ರೇವಪ್ಪನವವರು ನಡೆಸುತ್ತಿದ್ದ ಪೂಜೆಗಳು ಭಕ್ತರುಗಳಿಗೆ ಸಂಪ್ರದಾಯದತ್ತ ಕರೆದುಕೊಂಡು ಹೋಗುತ್ತಿರಲಿಲ್ಲ. ಅವು ಜನರಲ್ಲಿ ಸದಾಚಾರ–ಸ್ವಚ್ಛತೆ–ಒಳ್ಳೆಯ ವಿಚಾರಗಳನ್ನು ಮೂಡಿಸಲು ಸಹಕಾರಿಯಾಗುತ್ತಿದ್ದವು.

ರೇವಪ್ಪನವರ ಬದುಕಿನ ಹಿಂದೆ ಬಸವಾದಿ ಶಿವಶರಣರ ಚಿಂತನೆಗಳ ತುಡಿತವಿದ್ದಿತು. ಭಾಲ್ಕಿಯ ಶರಣ ಉರಿಲಿಂಗ ಪೆದ್ದಿ ಮಠದ ಅಧಿಪತಿಗಳಾಗಿದ್ದ ಬಸವಣ್ಣನವರು ರೇವಪ್ಪನವರಿಗೆ ಗುರುಗಳಾಗಿದ್ದರು. ಉರಿಲಿಂಗ ಪೆದ್ದಿ ಶರಣನ ವಿಚಾರ ಧಾರೆಯು ರೇವಪ್ಪನವರಿಗೆ ಬಾಳ ಹಾದಿಯಲ್ಲಿ ಬೆಳಕಾಯಿತು. ಆ ಬೆಳಕನ್ನು ಕೇವಲ ತಮಗಾಗಿಯೇ ಇಟ್ಟುಕೊಳ್ಳಲಿಲ್ಲ, ಸಮಾಜಕ್ಕೂ ಅದನ್ನು ಕಾಣಿಸುವ ಪ್ರಯತ್ನ ಮಾಡಿದರು.

ರೇವಪ್ಪನವರು ಜನತೆಯ ನಡುವೆ ಇದ್ದು; ಅವರ ನಾಡಿಯ ಮಿಡಿತವನ್ನು ಸರಿಯಾಗಿ ತಿಳಿದವರಾಗಿದ್ದರು. ಹೀಗಾಗಿ ಊರಿನ–ಕೇರಿಯ ಜನತೆಗೆ ಯಾವುದೇ

ಸಮಸ್ಯೆ ಎದುರಾದರೂ, ಅದರ ನಿವಾರಣೆಗಾಗಿ ತಮ್ಮ ಕೈಲಾದ ಸಹಾಯ ನೀಡುತ್ತಿದ್ದರು. ರೇವಪ್ಪನವರಿಗೆ ಜ್ಯೋತಿಷ್ಯ ಶಾಸ್ತ್ರದಲ್ಲಿ ಆಳವಾದ ಜ್ಞಾನವಿದ್ದಿತ್ತು. ಅದನ್ನು ಸರಿಯಾಗಿ ನೋಡುತ್ತಿದ್ದರು. ಅವರು ಹೇಳಿದ ಮಾತುಗಳು ಜನತೆಗೆ ಸತ್ಯದ ನುಡಿಗಳಾಗಿ ಅನುಭವಕ್ಕೆ ಬರುತ್ತಿದ್ದವು. ಹೀಗಾಗಿ ಅವರಲ್ಲಿ ಜ್ಯೋತಿಷ್ಯ ಕೇಳಲೆಂದು ಬರುವವರ ಸಂಖ್ಯೆಯೂ ದೊಡ್ಡದೆ ಆಗಿತ್ತು. ಊರಿನವರಲ್ಲದೆ; ಸುತ್ತಮುತ್ತಲಿನ ಹಳ್ಳಿಯವರೂ ಯಾವುದೇ ಜಾತಿ ಭೇದವಿಲ್ಲದೆ ರೇವಪ್ಪನವರಲ್ಲಿಗೆ ಬಂದು ಜ್ಯೋತಿಷ್ಯದಿಂದ ಪರಿಹಾರ ಕೇಳಿಕೊಂಡು ಹೋಗುತ್ತಿದ್ದರು. ತಮ್ಮ ಆರಾಧ್ಯ ದೇವರಾದ ಉರಿಲಿಂಗನ ಹೆಸರಿನಲ್ಲಿ ರೇವಪ್ಪನವರು ಯಂತ್ರಗಳನ್ನು ಕಟ್ಟುತ್ತಿದ್ದರು. ಆಸ್ತಿಕ ಮನಸ್ಸುಗಳಿಗೆ ರೇವಪ್ಪನವರ ಇಂತಹ ಕ್ರಿಯೆಗಳು ಸಮಾಧಾನ ನೀಡುತ್ತಿದ್ದವು.

ರೇವಪ್ಪನವರ ಸಾತ್ವಿಕ ವ್ಯಕ್ತಿತ್ವ ಕಂಡ ಗ್ರಾಮದ ಜನತೆ ಅವರನ್ನು ರಾಜಕೀಯದಲ್ಲಿ ಸ್ಥಾನ ಕಲ್ಪಸಿಕೊಡಲು ಬಯಸಿದರು. ಇದರ ಫಲವಾಗಿ ಅವರು ಗ್ರಾಮ ಪಂಚಾಯತಿಯ ಸದಸ್ಯರಾಗಿ, ತಾಲ್ಲೂಕಾ ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ ಹಲವು ವರ್ಷ ಕಾರ್ಯನಿರ್ವಹಿಸಿದರು. ರೇವಪ್ಪನವರಿಗೆ ಕಪಟ–ಕಲಂಕದ ರಾಜಕಾರಣವು ತಿಳಿದಿರಲಿಲ್ಲ. ಅವರು ತಮಗೆ ದೊರೆತ ಅಧಿಕಾರದಿಂದ ಜನತೆಯ ಕ್ಷೇಮಕ್ಕಾಗಿ ಶ್ರಮಿಸಿದರು. ಒಳಗೂ–ಹೊರಗೂ ಸರಳವಾಗಿರುತ್ತಿದ್ದ ರೇವಪ್ಪನವರು ಶರಣ ಜೀವಿಯಂತಿದ್ದರು. ಹೀಗಾಗಿ ಸಮಸ್ಯೆ ತೆಗೆದುಕೊಂಡು ಬರುವ ಜನರಿಗೆ ಅತ್ಯಂತ ಸರಳವಾಗಿ ಪರಿಹಾರವು ಸಿಕ್ಕುತ್ತಲಿದ್ದಿತು. ಹದಿನೈದು ವರ್ಷಗಳ ಕಾಲ ಅವರು ಹರಿಜನ–ಗಿರಿಜನ ಹೌಸಿಂಗ್ ಸೊಸಾಯಿಟಿಯ ಅಧ್ಯಕ್ಷರಾಗಿ ಮಾಡಿದ ಕಾರ್ಯಗಳು ಇಂದಿಗೂ ಜನರ ಮನದಲ್ಲಿ ಹಸುರಾಗಿಯೇ ಉಳಿದುಕೊಂಡಿವೆ. ಬಸವಕಲ್ಯಾಣ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುತ್ತಿದ್ದ ಹರಿಜನ–ಗಿರಿಜನರ ವಸತಿಯ ಸಲುವಾಗಿ ಅವರು ಪ್ರಾಮಾಣಿಕ ಪ್ರಯತ್ನ ಮಾಡಿದರು. ತಲೆಯ ಮೇಲೆ ಸೂರಿಲ್ಲದೆ ಇರುವ ತನ್ನ ಜನರನ್ನು ನೋಡಿ ಕಳವಳಗೊಂಡರು. ಅಧಿಕಾರದಲ್ಲಿರುವ ಅವಧಿಯವರೆಗೂ ರೇವಪ್ಪನವರು ನೂರಾರು ದಲಿತರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಿಕೊಟ್ಟರು. ಅತ್ಯಂತ ಪಾರದರ್ಶಕವಾಗಿ ತಮ್ಮ ಅಧಿಕಾರವನ್ನು ಚಲಾಯಿಸಿದರು.

ಪುರೋಹಿತ, ಜ್ಯೋತಿಷಿ, ರಾಜಕಾರಣಿಯಾಗುತ್ತಲೇ ರೇವಪ್ಪನವರು ತತ್ತ್ವಪದಗಳ ಕವಿಯಾದುದು ಮಹತ್ವದ ಸಂಗತಿ. ಅವರು ಕಥೆ, ಕಾದಂಬರಿಯೊಂದಿಗೆ ಹಲವಾರು ತತ್ತ್ವಪದಗಳನ್ನು ರಚಿಸಿದ್ದಾರೆ. ಅವೆಲ್ಲವುಗಳನ್ನು ಸಂಗ್ರಹಿಸಿ ಪ್ರಕಟಿಸುವ ಪ್ರಯತ್ನದಲ್ಲಿ ರೇವಪ್ಪನವರ ಹಿರಿಯ ಮಗನಾದ ಶ್ರೀ ಸೋಪನರಾವ ಅವರು ತೊಡಗಿದ್ದಾರೆ. ರೇವಪ್ಪನವರ ಸಧ್ಯದ ವಂಶಸ್ಥರಲ್ಲಿ ಹೆಚ್ಚಿನ ಸದಸ್ಯರೆಲ್ಲ ಸುಶಿಕ್ಷಿತರಾಗಿ, ನೌಕರಿ–ರಾಜಕಾರಣಾದಿಗಳಲ್ಲಿ ಕ್ರಿಯಾಶೀಲರಾಗಿದ್ದಾರೆ. ಆದಷ್ಟು ತಮ್ಮ ಹಿರಿಯರ ಸಾಧನೆಯ ಕುರುಹುಗಳನ್ನು ರಕ್ಷಿಸುವ ದಿಶೆಯಲ್ಲಿ ಆಸ್ಥೆ ತಾಳಿದ್ದಾರೆ.

ರೇವಪ್ಪನವರು ಎಂಬತ್ತೊಂದು ವರುಷಗಳ ತುಂಬುವತ್ತ ಶರಣ ಬದುಕನ್ನು ಬದುಕಿ ದಿನಾಂಕ. ೧೭-೧೨-೨೦೦೭ರಂದು ಇಹಲೋಕ ತ್ಯಜಿಸಿದರು. ಅವರ ಸಮಾಧಿ ಹೊಲದಲ್ಲಿ ಮಾಡಲಾಗಿದೆ.

ರೇವಪ್ಪನವರು ಅಂದು ಜೀವಿಸಿದ್ದ ಜೀವನ ಸಿದ್ಧಾಂತದ ವಿವರಗಳು ಇಂದು ಅವರು ರಚಿಸಿದ ತತ್ತ್ವಪದಗಳ ಮುಖಾಂತರ ಧ್ವನಿಗೊಡುತ್ತಲಿವೆ. ಇಲ್ಲಿ ಎರಡು ತತ್ತ್ವಪದಗಳನ್ನು ಉದಾಹರಣೆಗಾಗಿ ಕೊಡಲಾಗಿದೆ. ಕವಿಗಳು ತಮ್ಮ ಹೆಸರಿನೊಂದಿಗೆ, ತಮ್ಮ ಗುರುಗಳ ಹೆಸರನ್ನೂ ಅಂಕಿತವಾಗಿ ಬಳಕೆ ಮಾಡಿದ್ದಾರೆ.

ಕೋತಿ ಮನಸ್ಸು

ಕೋತಿ ಮನಸ್ಸಿನ ಕಟಿ ಪಿಟಿ ನೋಡಣ್ಣಾ
ತಿಳಿಯೋ ಜಾಣ ॥ ಪ ॥

ಸತ್ಯದ ಹಾದಿ ತಿಳಿಯಲೊಲ್ಲದು
ನಿತ್ಯದ ಹಾದಿ ನಡೆಯಲೊಲ್ಲದು
ಗುರುವಿನ ಕೀಲ ನುಡಿಯಲೊಲ್ಲದು
ಹರನ ಮ್ಯಾಲ ನಂಬಗಿ ಇಡಲೊಲ್ಲದು ॥ ೧ ॥

ಎಲ್ಲವು ನನಗೆ ಇರಲಿ ಅನತಾದ
ಬೇರೆಯವರಿಗೆ ಸಿಕ್ಕದಂಗ ಮಾಡುತಾದ
ಬುದ್ಧ-ಬಸವಗ ದೂರ ಮಾಡುತಾದ
ಬಾಬಾ ಸಾಬರ ಮಾತ ಮೀರ್ಯಾದ ॥ ೨ ॥

ನಾನೇ ಶಾಣ್ಯಾ ಎಂದು ಕುಣಿದೆ ಕುಣಿತಾದ
ದರ್ಪ-ಅಹಂಕಾರವ ತುಂಬಿ ಕೊಂಡಾದ
ಭ್ರಮಾದ ಹೊದಿಕಿ ಹೊದ್ದು ಮಲಗ್ಯಾದ
ಎಚ್ಚರಾದಾಗ ಬರಿ ಕತ್ತಲಾಗ್ಯಾದ ॥ ೩ ॥

ಎಂಟು ಮದಗಳ ಗಂಟ ಹೊತ್ತಾದ
ಮೂರು ಮಲಗಳನು ತಾನೆ ತಿಂದಾದ

ಏಳು ವ್ಯಸನಗಳ ಆಸನ ಮಾಡ್ಯಾದ
ಘಾಷಿಲಿಂದ ಅದು ಗೋಳ್ಯಾಡತಾದ ॥ ೪ ॥

ದೇಶದೊಳಗ ನಮ್ಮ ವಾಸುಳ್ಳ ಎಕಲೂರ
ಬಸವಣ್ಣನ ಶಿಷ್ಯ ರ್‍ಯಾವಪ್ಪ ಮಾಸ್ತರ
ಗುರುಪದ ಹೊಂದೆಂದು ಹೇಳ ಹೇಳ್ಯಾದ
ಕೋತಿ ಮನಸ್ಸಿಗಿ ತಿಳಿಲಾರ್‍ದು ಹರಹರ ॥ ೫ ॥

ಅಕ್ಕಮಹಾದೇವಿ

ಅಕ್ಕ ಮಹಾದೇವಿ ಚರಿತ್ರೆಯ ನಾ
ನಿಕ್ಕ ಮಾಡಿ ತಿಳಿಸುವೆ ನಾ ॥ ಪ ॥

ಏಕವಾದ ಗುರು ಬೋಧ ಮಂತ್ರದಿಂದಾ
ನಿಜ ಹಾದಿಯು ತಿಳಿ ಮುಂದಾ ॥ ಅ. ಪ ॥

ಉಡತಡಿ ಊರ ಅಕಿನಾ
ನಡಿ ನುಡಿ ಪರಿಪೂರ್ಣ
ತೊಡಿತಾನ ಜಡಿ ಬಿಟ್ಟು ಧೃಡಭಾವದಿಂದ
ನಡೆದಾಳರಿ ಅಕ್ಕ ಶಿವಗ ಸಂದಾ ॥ ೧ ॥

ಅನುಭಾವ ಮಂಟಪದ ಸ್ಥಾನ
ಪ್ರಭುದೇವ ಇರುವನು ಶರಣ
ಕಲ್ಯಾಣದ ಅಣ್ಣ ಬಸವಣ್ಣ
ಹರಳಯ್ಯಾದಿ ನೂರಾರು ಶರಣಾ ॥ ೨ ॥


ಪ್ರಭು ಸ್ವಾಮಿ ಕೇಳಿದರು ಅಕ್ಕನ್ನ
ಇಷ್ಟೊಂದು ವೈರಾಗ್ಯ ಯಾಕವ್ವ ಇನ್ನ
ಹೊಂದುವಿ ಚೆನ್ನಮಲ್ಲಿಕಾರ್ಜುನನನ್ನಾ
ಚಿಂತೆ ಬಿಡು ತಾಯಿ ಆಗುವದು ಚೆನ್ನ ॥ ೩ ॥

ಶರಣರು ಎಲ್ಲರು ಶಿರಬಾಗಿ ನಿಂತರು
ಕಿರಿಯಳು ಇದ್ದರು ಅಕ್ಕ ಹಿರಿಯಳು ಅಂತಾರು
ಹೋಗಿ ಬಾ ತಾಯೆಂದು ಹರಕಿಯ ಕೊಟ್ಟಾರು
ಅಕ್ಕನ ಹಾದಿಗೆ ಹೂವ ಹಾಕಿದಾರು ॥ ೪ ॥


ಎಕಲೂರ ಸ್ಥಳವನ್ನಾ
ಅಕ್ಕನ ಬಳಗದವರು ಮಾಡಿದರು ನೇಮ
ಮುಕ್ಕಣ್ಣಾ ಶಿವನು ಗುರು ಬಸವಣ್ಣಾ
ಧ್ಯಾನದೊಳು ಇರಬೇಕು ಪೂರ್ಣಾ ॥ ೫ ॥

(ವಿವರಗಳನ್ನು ನೀಡಿದವರು ಕವಿಗಳ ಹಿರಿಯ ಮಗನಾದ ಶ್ರೀ ಸೋಪಾನರಾವ ಅವರು.)


□



ರೇವಪ್ಪ ಸಿಂಧ್ಯೆ ಅವರ ಮನೆ (ಎಕಲೂರು)



ರೇವಪ್ಪನವರು ಬೆಳೆಯಿಸಿದ ಮನೆಯ ಮುಂದಿನ ಬಿಲ್ವ ಪತ್ರಿಗಿಡ.



ರೇವಪ್ಪನವರ ಸಮಾಧಿ. (ಎಕಲೂರು)

೧೮. ಸಂಗಪ್ಪ ಹುಲೆಪ್ಪನವರ (ಕ್ರಿ.ಶ.ಸು. ೧೯೨೮-೧೯೯೮)

ಧನ್ನೂರ(ಕೆ) ಗ್ರಾಮದಲ್ಲಿ ಬಸವಣ್ಣನ ದೇವಾಲಯ, ರಾಚೋಟೇಶ್ವರ ದೇವಾಲಯ, ರೇವಣಸಿದ್ಧೇಶ್ವರ ದೇವಾಲಯ, ಮಹಾದೇವನ ದೇವಾಲಯ ಹೀಗೆ ಹಲವು ದೇವಾಲಯಗಳಿವೆ. ಇವುಗಳಲ್ಲಿ ಆ ಗ್ರಾಮದ ಜನತೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಯಾವಾಗಲೂ ಸ್ಮರಿಸುತ್ತಲಿರುತ್ತಾರೆ. ಈ ದೇವಾಲಯಗಳ ನಡುವೆಯೆ ಒಬ್ಬ ತತ್ತ್ವಪದ ಸಾಹಿತ್ಯದ ದೇವನ ಬಡತನದ ಮನೆಯೊಂದು ದೇವಾಲಯಕ್ಕೆ ಸರಿಯಾಗಿ ನಿಂತುಕೊಂಡುದನ್ನು ಹೆಚ್ಚು ಜನರು ಅರ್ಥಮಾಡಿಕೊಳ್ಳುವುದೇ ಇಲ್ಲ. ಹೀಗೆಂದ ಮಾತ್ರಕ್ಕೆ ಊರಿನ ಜನರು ಸಂಪೂರ್ಣವಾಗಿ ಅವನನ್ನು ಮರೆತು ಬಿಟ್ಟಿರುವರೆಂದೇನೂ ಅರ್ಥವಲ್ಲ. ಆ ತತ್ತ್ವಪದ ಸಾಹಿತ್ಯದ ದೇವರೆ ಸಂಗಪ್ಪ ಹುಲೆಪ್ಪನವರ.

ಸಂಗಪ್ಪನವರ ವಂಶದಲ್ಲಿ ಮೂರು-ನಾಲ್ಕು ತಲೆಮಾರುಗಳ ಹಿಂದೆ ಇದ್ದ ಹಿರಿಯರೊಬ್ಬರು ಊರಿಗೆ ದಾಳಿಮಾಡಲೆಂದು ಬಂದಿದ್ದ ಹುಲಿಯನ್ನು ಎದುರಿಸಿನಿಂತು ಕೊಂದು ಹಾಕಿದರಂತೆ. ಅಂದಿನಿಂದ ಅವರ ಮನೆತನಕ್ಕೆ "ಹುಲಿಯಪ್ಪನವರ" ಎಂಬ ಹೆಸರು ಸ್ಥಿರವಾಯಿತೆಂಬುದು ಜನ ಜನಿತ ಸಂಗತಿ. ಇದನ್ನು ಕೆಲವರು 'ಹೌದು' ಎನ್ನುವವರೂ ಇದ್ದಾರೆ. ವಾಸ್ತವತೆ ಏನೇ ಇರಲಿ ಇಂದು ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಧನ್ನೂರ(ಕೆ) ಗ್ರಾಮದಲ್ಲಿ ಹುಲಿಯಪ್ಪನವರ ಸಂಗಪ್ಪನ ಮನೆ ಇದೆಯೆಂಬುದಂತೂ ಸತ್ಯಕ್ಕೆ ಸತ್ಯವಾದ ಮಾತು.

ಸಂಗಪ್ಪನವರ ತಂದೆ ರೇವಣಸಿದ್ಧಪ್ಪನವರು. ಅವರ ತಂದೆ-ತಾಯಿಗಳು ಊರಿನ ಅಧಿದೇವರು ರೇವಣಸಿದ್ಧನಿಗೆ ಹರಕೆ ಹೊತ್ತು ಈ ಮಗನನ್ನು ಪಡೆದರು. ದೇವರ ಹೆಸರನ್ನೇ ಇರಿಸಿದರು. ರೇವಣಸಿದ್ಧಪ್ಪನವರು ಆಚಾರಶೀಲರು. ಆರ್ಥಿಕವಾಗಿ ಅಷ್ಟು ಸ್ಥಿತಿವಂತರಲ್ಲದಿದ್ದರೂ; ದೇವರು ಕೊಟ್ಟುದರಲ್ಲಿಯೇ ತೃಪ್ತಿಯಿಂದ ಬದುಕಿದವರು. ಕೃಷಿಕಾಯಕವನ್ನು ನಿರ್ವಹಿಸುತ್ತ ತಮ್ಮ ಸಂಸಾರವನ್ನು ನಡೆಸಿದವರು. ಹಿರಿಯರ ಈ ದಾರಿಯೇ ಮುಂದೆ ಸಂಗಪ್ಪನವರಿಗೆ ಅನುಸರಣೀಯುವಾಯಿತು. ಅನುಕರಣೀಯವಾಯಿತು.

ಸಂಗಪ್ಪನವರಿಗೆ ಹೆಚ್ಚಿನ ವಿದ್ಯಾಭ್ಯಾಸ ಲಭಿಸಲಿಲ್ಲ. ತಕ್ಕಮಟ್ಟಿಗೆ ಕನ್ನಡವನ್ನು ಕಲಿತರು. ಸಂಗಪ್ಪನವರು ದಾಂಪತ್ಯ ಜೀವನಕ್ಕೆ ಕಾಲಿರಿಸಿದಾಗ ಅವರಿಗೆ ಪತ್ನಿಯಾಗಿ

ದೊರೆಕೊಂಡವರು ಚೆನ್ನಮ್ಮ. ಪತಿಯ ಮನಸ್ಸನ್ನು ತಿಳಿದುಕೊಂಡು; ಅವರೊಡನೆ ಹೊಲದ ಕೆಲಸದಲ್ಲಿ ದುಡಿಯುತ್ತ ಸಂಸಾರದ ನೊಗಕ್ಕೆ ಹೆಗಲು ಕೊಟ್ಟವಳು ಈ ತಾಯಿ. ಸಂಗಪ್ಪನವರಿಗೆ ಒಬ್ಬ ಮಗ; ಒಬ್ಬಳು ಮಗಳು. ಮಗ ಬಸವರಾಜನು ಅಕಾಲ ಮರಣಕ್ಕೆ ತುತ್ತಾದನು. ಸಂಗಪ್ಪ ದಂಪತಿಗಳಿಗೆ ಮಗನ ಅಗಲುವಿಕೆಯು ಅತೀವ ನೋವನ್ನುಂಟು ಮಾಡಿತು. ಆದರೆ ಸೊಸೆ-ಮೊಮ್ಮಕ್ಕಳ ಮುಖದಲ್ಲಿ ಮಗನ ನಗುವನ್ನು ಕಂಡು ಒದಗಿದ ದುಃಖವನ್ನು ನಗುವಾಗಿ ಪರಿವರ್ತಿಸಿಕೊಂಡು ಬದುಕಿದರು.

ಸಂಗಪ್ಪನವರದು ಅಪ್ಪಟ್ಟ ಆಸ್ತಿಕ ಮನಸ್ಸು. ಗುರು-ಹಿರಿಯರನ್ನು, ಸಂತ-ಶರಣರನ್ನು ಕಂಡರೆ ನಿಂತಲ್ಲೆ ತಲೆಬಾಗಿ, ಕೈ ಮುಗಿಯುವ ನಿಷ್ಕಪಟ ಭಕ್ತಿ. ಗ್ರಾಮದ ದೇವರುಗಳ ಗುಡಿಯಲ್ಲಿ ನಡೆಯುವ ಭಜನೆಗಳಲ್ಲಿ ಸಂಗಪ್ಪನವರದು ಪ್ರಥಮ ಪಾತ್ರ. ಅವರ ಕಂಠ ಸಿರಿಯೂ ಸಮ್ಮೋಹಕವಾಗಿತ್ತು. ದನಿಯೆತ್ತಿ ಹಾಡಿದರೆ, ಅವರ ಹಾಡುಗಳನ್ನು ಕ್ಷಣಹೊತ್ತು ನಿಂತು ಕೇಳಬೇಕೆಂಬ ಭಾವನೆ ಜನತೆಯ ಮನದಲ್ಲಿ ಮೂಡುತ್ತಿದ್ದಿತು.

ಸಂಗಪ್ಪನವರು ದಿನ ನಿತ್ಯವೂ ದೇವರ ದರ್ಶನಹೊಂದುವ ಮತ್ತು ಗುಡಿಗಳಲ್ಲಿ ದೀಪ ಹಚ್ಚುವ ನೇಮದವರಾಗಿದ್ದರು. ಹೊಲಗಳಿಗೆ ಹೋಗುವುದಕ್ಕೂ ಮುನ್ನವೆ ರೇವಣಸಿದ್ಧೇಶ್ವರನೊಳಗೊಂಡು ಗ್ರಾಮದ ಎಲ್ಲ ದೇವರುಗಳ ದರ್ಶನ ಮಾಡಿಕೊಂಡು ಹೊರಡುತ್ತಿದ್ದರು. ಹೊಲದಿಂದ ಬಂದ ಕೂಡಲೇ ಮುಖ ತೊಳೆದುಕೊಂಡು ಹಣೆಯ ಮೇಲೆ ವಿಭೂತಿ ಧರಿಸಿ, ಕೈಯಲ್ಲಿ ಎಣ್ಣೆಯ ಕುಡಿಕೆ-ಬತ್ತಿಗಳನ್ನು ಹಿಡಿದುಕೊಂಡು ದೀಪ ಮುಡಿಸುವುದಕ್ಕಾಗಿ ಹೊರಡುತ್ತಿದ್ದರು. ಅದು ಅವರ ಶಕ್ತ್ಯಾನುಸಾರಿಯಾದ ಭಕ್ತಿಯ ಸೇವೆಯಾಗಿತ್ತು. ಅದಕ್ಕೆ ತಗಲುವ ಖರ್ಚನ್ನು ಅವರು ಯಾರಿಂದಲೂ ಬೇಡುತ್ತಿರಲಿಲ್ಲ. ತಮ್ಮ ಕೂಲಿಯ ಹಣದಲ್ಲಿಯೇ ಒಂದಿಷ್ಟು ಉಳಿಸಿ, ತಮ್ಮ ನೇಮಕ್ಕೆ ವಿನಿಯೋಗಿಸಿಕೊಳ್ಳುತ್ತಿದ್ದರು. ಸಂಗಪ್ಪನವರನ್ನು ಕುರಿತು ಧನ್ನೂರ(ಕೆ) ಗ್ರಾಮದ ವಯೋವೃದ್ಧರೂ, ಜ್ಞಾನವೃದ್ಧರೂ ಆಗಿರುವ ಶ್ರೀ ಮಾಣಿಕಪ್ಪ ಬಿರಾದಾರ ಅವರು ಹೀಗೆ ಹೇಳುತ್ತಾರೆ:

"ಸಂಗಪ್ಪ, ಒಂದು ಅರ್ಥದಲ್ಲಿ ಸಾಧುಜೀವಿಯೆಂತಲೇ ಹೇಳಬೇಕು. ತನ್ನ ಮನೆಯೊಳಗೆ ಅವನು ಚಟ್ನಿ, ಭಕರಿ ಉಂಡರೂ ಹೊರಗೆ ಬಂದಾಗ ನಗುನಗುತ್ತಲೇ ಇರುತ್ತಿದ್ದನು. ಅವನಿಗೆ ಕೆಲಸ ಮಾಡದೆ ಸುಮ್ಮನೆ ಹರಟೆ ಹೊಡೆಯುವ ಜನರೆಂದರೆ ಆಗುತ್ತಿರಲಿಲ್ಲ. ತನ್ನೊಡನೆ ಕೆಲಸ ಮಾಡುವವರಿಗೆ ಬೆವರು ಸುರಿಸಿ ದುಡಿಯುವಂತೆ ತಿಳಿಸುತ್ತಿದ್ದನು. ಆದುದರಿಂದ ಸಂಗಪ್ಪನು ಹೋದ ಯಾವ ಹೊಲದ ಒಡೆಯನೇ ಆಗಲಿ; ಅವನು ಹೊಲದ ಕೆಲಸಗಳ ಎಲ್ಲ ಜವಾಬ್ದಾರಿಯನ್ನು ಅವನ ಮೇಲೆಯೇ ಬಿಟ್ಟು ಹಾಯಾಗಿ ಇರುತ್ತಿದ್ದನು. ಸಂಗಪ್ಪನು ತನ್ನ ಹೊಲದ ಕೆಲಸದಂತೆಯೇ

ಭಾವಿಸಿ, ಸರಿಯಾಗಿ ಅಲ್ಲಿನ ಕೆಲಸವನ್ನು ಮಾಡುತ್ತಿದ್ದನು, ಮಾಡಿಸುತ್ತಿದ್ದನು. ನಮ್ಮೂರಿನಲ್ಲಿ ಅವನು ಒಬ್ಬನೇ ಒಬ್ಬ ಕವಿ. ಅವನಲ್ಲಿದ್ದ ಆಶುಕವಿತ್ವ ಶಕ್ತಿಯು ವಿಸ್ಮಯ ಪಡುವಂತಿದ್ದಿತು. ಯಾವುದೇ ವಿಷಯ ಹೇಳಿದರೂ ಅದರ ಮೇಲೆ ಕೆಲವು ನಿಮಿಷಗಳಲ್ಲಿಯೇ ಪದ್ಯವನ್ನು ಕಟ್ಟಿ ಹಾಡುತ್ತಿದ್ದನು. ಹೀಗೆ ಅವನು ಕಟ್ಟಿ ಹಾಡಿದ ಪದ್ಯಗಳಿಗೆ ಲೆಕ್ಕವಿಲ್ಲ. ನಾನೂ ಅವನ ಪದ್ಯಗಳು ಹಾಡುತ್ತಿದ್ದೆನು. ಈಗ ನನಗೆ ವಯಸ್ಸಾಯಿತು, ಕಿವಿಗಳು ಅಷ್ಟು ಸರಿಯಾಗಿ ಕೇಳುವುದಿಲ್ಲ, ಧನಿ ನಡುಗುತ್ತದೆ. ಹಾಡುವದನ್ನು ಬಿಟ್ಟಿರುವೆನು. ಅಂದು ಕಲಿತ ಹಾಡುಗಳು ಇಂದು ನನ್ನ ಸ್ಮರಣೆಯಲ್ಲೂ ಉಳಿದುಕೊಂಡಿಲ್ಲ. ಏನೋ ಒಂದೆರಡು ಹಾಡಬಹುದು. ಸಂಗಪ್ಪನೆಂದರೆ ಅವನೊಬ್ಬ ನಮ್ಮ ಊರಿನ ಸಾಹಿತ್ಯದ ಆಸ್ತಿಯಂತಿದ್ದ".

ಸಂಗಪ್ಪನ ಆರಾಧ್ಯ ದೇವರು ಒಬ್ಬರಾಗಿರಲಿಲ್ಲ. ಅವನಿಗೆ ಎಲ್ಲ ದೇವರುಗಳಲ್ಲಿಯೂ ಸಮಾನವಾದ ಭಕ್ತಿ-ಶ್ರದ್ಧೆಗಳಿದ್ದವು. ಹೀಗಾಗಿ ಅವನು ತನ್ನ ತತ್ತ್ವಪದಗಳಿಗೆ ಯಾವುದೇ ದೇವರ ಅಂಕಿತವನ್ನು ಇರಿಸಿಕೊಂಡಿಲ್ಲ. ತನ್ನ ಹೆಸರನ್ನೇ ಮುದ್ರೆಯಾಗಿ ಬಳಕೆ ಮಾಡಿರುವುದು ಕಂಡುಬರುತ್ತದೆ. ಕೆಲವರು ಅವನು "ರೇವಣಸಿದ್ಧ" ಎಂಬ ಹೆಸರಿನಲ್ಲಿ ಪದ್ಯಗಳನ್ನು ಕಟ್ಟಿದನೆಂದು ಹೇಳುತ್ತಾರೆ. ಆದರೆ ಇಂದು ಅಂತಹ ಪದ್ಯಗಳು ನಮಗೆ ಸಿಕ್ಕಲಿಲ್ಲ. ಹೀಗೆಂದ ಮಾತ್ರಕ್ಕೆ ರೇವಣಸಿದ್ಧನ ಅಂಕಿತದಲ್ಲಿ ಅವರು ಪದ್ಯರಚಿಸಲಿಲ್ಲವೆಂದು ಹೇಳುವುದಕ್ಕೂ ಆಗುವುದಿಲ್ಲ. ಏನೇ ಇರಲಿ, ಸಂಗಪ್ಪ ಹುಲೆಪ್ಪನವರ ಒಬ್ಬ ಉತ್ತಮ ತತ್ತ್ವಪದಕಾರರೆಂಬುದಲ್ಲಿ ಸಂಶಯವಿಲ್ಲ. ಅವರು ರಚಿಸಿದ ಎರಡು ತತ್ತ್ವಪದಗಳನ್ನು ಉದಾಹರಣೆಗಾಗಿ ಉದ್ಧರಿಸಲಾಗಿದೆ:

ಯಾಕೋ ಭವ ಭ್ರಾಂತಿ

ಯಾಕೋ ಭವ ಭ್ರಾಂತಿ ಮನವೆ
ನೀಗೋ ಕುಲನೀತಿ ॥ ಪ ॥

ಹೆಂಡತಿ-ಮಕ್ಕಳು ನನ್ನವರೆಂದು
ಸುಮ್ಮನ ಹೋರ್‍ಯಾಡತಿ
ಪುಂಡನಾಗಿ ಗುಂಡನಾಗಿ
ವ್ಯರ್ಥ ಕಾಲ ಯಾಕ ಕಳೀತಿ ॥ ೧ ॥

ರೊಕ್ಕಗಳಿಸಿದೆನೆಂದು ಗರ್ವದಿಂದ ಮೆರೀತಿ
ಇಲ್ಲ ನಿನಗ ಕಕ್ಕುಲಾತಿ
ಸೊಕ್ಕ ತ್ಯೆಲಿಗೆ ಏರಿದಾಂಗ
ಮಿಕ್ಕ ಮೀರಿ ಕುಣೀತಿ ॥ ೨ ॥

ಅಡ್ಡದಾರೀಗಿ ಬಿದ್ದು ನೀನು
ಅಡ್ನಾಡ್ಯಾಗಿ ಹೋಗುತಿ
ದೊಡ್ಡ ದೊಡ್ಡ ಮಾತುಗಳಾಡಿ
ಹೆಡ್ಡನಾಗಿ ಸಾಯುತಿ ॥ ೩ ॥

ನಿನದು ನಿನಗ ಖಬರ ಇಲ್ಲ
ನಿನ್ನ ಜೀವನದ ಅಬುರು ಇಲ್ಲ
ಎಲ್ಲ ಬಲ್ಲೆ ಬಲ್ಲೆ ಎನುತ
ಖುಲ್ಲನಾಗಿ ಹೋಗುತಿ ॥ ೪ ॥

ಸೊಕ್ಕ ಇಳದು, ರೊಕ್ಕ ಕಳೆದು
ಮಿಕ್ಕಿದೆಲ್ಲ ಉಳಿದು ಅಳಿದು
ಹೋದಮ್ಯಾಲ ದಿಕ್ಕ ತಪ್ಪಿ
ಬಿಕ್ಕಿ ಬಿಕ್ಕಿ ಅಳುತಿ ॥ ೫ ॥

ಮನುಷ್ಯನಾಗಿ ಹುಟ್ಟಿ ಬಂದಿ
ನಡೀಬೇಕು ಜೋಕಿಲಿಂದಿ
ಶೋಕಿ–ಝೋಕಿ ಎಲ್ಲ ಬಿಟ್ಟು
ಶರಣಾಗು ಶಿವನಿಗಿ ಹೊಂದಿ ॥ ೬ ॥

ಧರಿಯೊಳಗದ ಧನ್ನೂರ ಊರ
ಸಂಗಪ್ಪ ದೊಡ್ಡ ಕವಿಗಾರ
ಖುಲ್ಲಾ ಹೇಳ್ಯಾನ ಜೀವನ ಸಾರಾ
ತಿಳಿದು ಪಡೆಯೋ ಮುಕ್ತಿಯ ಹಾರ ॥ ೭ ॥

ಜಾತ್ರೆ

ಜಾತರಿ ಮಾಡಲು ಬಂದೇವಪ್ಪ
ಜಗದ ಒಡಲಿನ ಸೀಮೀಗಿ ॥ ಪ ॥

ಖಾತರಿ ಇಲ್ಲದೆ ನಿಂತೇವಪ್ಪ
ಸಿಗದಂತೀನ ಬಯಲೀಗಿ ॥ ಅ.ಪ ॥

ಬಯಲೀಗಿ ಡೇರೆವ ಹಾಕೀನಂತಿ
ಲಯದಾಗ ವ್ಯಾಪಾರ ಮಾಡೇನಂತಿ
ಭಯದ ಗಾಳ್ಯೇಲಿ ಬಾಯಿ ಬಿಡುತಿ
ಮಾಯೀಗಿ ಫಳಾರ ಮಾರೇನಂತಿ ॥ ೧ ॥

ಬಣ್ಣ–ಬಣ್ಣಗಳ ಗೊಂಬೆಗಳಣ್ಣ
ಅವಕ ಬರೆದಾರ ಮೈಗೆಲ್ಲ ಕಣ್ಣ
ಕಣ್ಣ ಮುಟ್ಟಿದರ ಮುಕ್ಕುತಿ ಮಣ್ಣ
ಜಾತರಿ ಆಟವು ಬಲು ಜೋರಣ್ಣ ॥ ೨ ॥


ಧರಿಯೊಳು ಬಸವನ ಕಲ್ಯಾಣಣ್ಣ
ಅದರೊಳು ಮೆರೆವ ಧನ್ನೂರಣ್ಣ
ಬಾಲಾನಾಗಿ ಹೇಳುವ ಸಂಗಣಣ್ಣ
ಬೆಳಗಿನ ಮೋತಿಗಿ ತೆರೆಯೋ ಕಣ್ಣ ॥ ೩ ॥

ಸಂಗಪ್ಪನವರು ಕ್ರಿ.ಶ. ೧೯೯೮ರಂದು ಬಯಲಾಗಿ ಹೋದರು. ಇಂದು ಅವರ ಸಮಾಧಿಯಂತಹ ಯಾವ ಕುರುಹು ಸಿಕ್ಕುವುದಿಲ್ಲ. ಸಾಮಾನ್ಯರಿಗೆ ಸಂಸ್ಕಾರ ಮಾಡುವ ಸ್ಥಳದಲ್ಲಿಯೇ ಸಂಗಪ್ಪನವರ ಸಂಸ್ಕಾರ ಮಾಡಲಾಯಿತು. ಭೌತಿಕದೇಹ ನಶ್ವರ, ಹಾಳಾಯಿತು. ಆದರೆ ಸಂಗಪ್ಪನವರು ರಚಿಸಿದ ತತ್ತ್ವಪದಗಳ ಏಕತಾರಿ ಇನ್ನು ನುಡಿಯುತ್ತಲಿದೆ.

(ಶ್ರೀ ಮಾಣಿಕಪ್ಪ ಬಿರಾದಾರ (ವ.೭೫) ಅವರು ಈ ವಿವರಗಳನ್ನು ನೀಡಿದ್ದಾರೆ.)



ಸಂಗಪ್ಪ ಹುಲೆಪ್ಪನವರ ಮನೆ (ಧನ್ನೂರು.ಕೆ)




ಸಂಗಪ್ಪನವರ ಆರಾಧ್ಯ ದೇವರು ರೇವಣಸಿದ್ದೇಶ್ವರ ದೇವಾಲಯ
(ಧನ್ನೂರು–ಕೆ).



ರೇವಣಸಿದ್ಧೇಶ್ವರ ದರ್ಶನ ಪ್ರತಿಮೆ.

ಸಂಗಪ್ಪನವರ ಆರಾಧ್ಯ ದೇವರು ಮಹಾದೇವ ದೇವಾಲಯ (ಧನ್ನೂರು-ಕೆ).





ಮಹಾದೇವನ ದರ್ಶನ ಪ್ರತಿಮೆ.



ಸಂಗಪ್ಪನವರ ಆರಾಧ್ಯ ದೇವರು ಬಸವಣ್ಣನ ದೇವಾಲಯ
(ಧನ್ನೂರು-ಕೆ)



ದೇವಾಲಯದೊಳಗಿರುವ ನಂದಿ ವಿಗ್ರಹ.

೧೯. ಅಣ್ಣಾರಾವ ಮಾಸ್ತರ (ಕ್ರಿ.ಶ.ಸು. ೧೯೨೮–೨೦೦೮)

ಪಾಟೀಲ ಮನೆತನಕ್ಕೆ ಸೇರಿದ ಅಣ್ಣಾರಾವ ಮಾಸ್ತರರು ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಗದಲೆಗಾಂವ ಗ್ರಾಮದವರು.

ಪಾಟೀಲರು ಹಾರ್ಮೋನಿಯಂ ನುಡಿಸುವುದರಲ್ಲಿ ಚತುರರಾಗಿದ್ದರು. ತಾವು ಕಲಿಸುವ ನಾಟಕಗಳಿಗೆ ಸುಮಧುರವಾದ ಹಿನ್ನೆಲೆ ಸಂಗೀತ ಸಂಯೋಜನೆ ಮಾಡಿ ಅದನ್ನು ಹಾರ್ಮೋನಿಯಂ ವಾದ್ಯದ ಮೂಲಕವೆ ಒದಗಿಸುತ್ತಿದ್ದರು. ಹೀಗಾಗಿ ಅವರನ್ನು ಕಲಾರಸಿಕರು "ಅಣ್ಣಾರಾವ ಮಾಸ್ತರ" ಎಂದೇ ಕರೆದು ಗೌರವಿಸಿದರು. ಅವರು ಲೋಕ ಶಾಲೆಯಲ್ಲಿ ಅಕ್ಷರ ಬಲ್ಲವರಿಗೆ–ನಿರಕ್ಷರಿಗಳಿಗೆ ಯಾವುದೇ ಭೇದವಿಲ್ಲದಂತೆ ನಾಟಕಗಳನ್ನು ಕಲಿಸಿದರು. ಬೇರೆ ಕವಿಗಳ ನಾಟಕಗಳನ್ನು ಆಡಿಸುವುದರೊಂದಿಗೆ ಅವರೂ ಸ್ವತಃ ಕೆಲವು ನಾಟಕಗಳನ್ನು ಬರೆದು ಆಡಿಸಿದಂತೆ ತಿಳಿದು ಬರುತ್ತದೆ. "ಸತಿ ಸಾವಿತ್ರಿ", "ಹನುಮ ವಿಜಯ" ಅವರು ಬರೆದ ನಾಟಕಗಳೆಂದು ಹೇಳಲಾಗುತ್ತದೆ. ಆದರೆ ಇಂದು ಅವುಗಳ ಹಸ್ತ ಪ್ರತಿಗಳು ದೊರಕುವುದಿಲ್ಲ. ನಾಟಕಗಳಿಗೆ ಇದ್ದ ಮೂಲ ಹಾಡುಗಳು ಸರಿಕಾಣದಾದಾಗ, ಅಣ್ಣಾರಾವ ಅವರು ಸ್ವತಃ ಹಾಡುಗಳನ್ನು ಬರೆಯುತ್ತಿದ್ದರು. ಆಡುವ ನಾಟಕಗಳಲ್ಲಿ ಅಳವಡಿಸುತ್ತಿದ್ದರು. ಹೀಗೆ ನಾಟಕಗಳನ್ನು ಬರೆಯುತ್ತ; ಅವುಗಳಿಗೆ ಬೇಕಾದ ಹಾಡುಗಳನ್ನು ರಚಿಸುತ್ತ ನಡೆದಂತೆ ಪಾಟೀಲರಲ್ಲಿ ಸಾಹಿತ್ಯದ ಆಸಕ್ತಿ ಇಮ್ಮಡಿಸುತ್ತ ಹೋಯಿತು. ತತ್ತ್ವಪದ ಇತ್ಯಾದಿ ಪ್ರಕಾರಗಳನ್ನು ಬರೆಯುತ್ತ ನಡೆದರು.

ಅಣ್ಣಾರಾವ ಪಾಟೀಲರ ತಂದೆ ಅಂಬಾರಾಯ. ತಾಯಿ ಶರಣಮ್ಮ. ಅಂಬಾರಾಯರಲ್ಲಿಯೂ ಕಲೆಯ ಬಗೆಗೆ ಆಸಕ್ತಿಯಿದ್ದಿತು. ಒಕ್ಕಲುತನಕಾರ್ಯದ ಬಿಡುವಿನ ವೇಳೆಯಲ್ಲಿ ಭಜನೆ–ಬಯಲಾಟದಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಹಾರಕೂಡ ಮಠದ ಚೆನ್ನಬಸವ ಶಿವಯೋಗಿಗಳೊಂದಿಗೆ ಒಡನಾಟವಿದ್ದ ಈ ಭಕ್ತನ ಮೇಲೆ ಪೂಜ್ಯರ ಕೃಪೆಯು ಪರಿಪೂರ್ಣವಾಗಿತ್ತು. ಆಗಾಗ ಶ್ರೀಗಳವರ ದರುಶನಕ್ಕಾಗಿ ಹಾರಕೂಡಕ್ಕೆ ಹೋಗುತ್ತಿದ್ದರು. ಪೂರ್ಣಿಮೆ–ಅಮವಾಸ್ಯೆಯ ದಿನಗಳಲ್ಲಿಯಂತೂ ಗದಲೆಗಾಂವ ಹಿರೇಮಠದಲ್ಲಿ ಭಜನೆ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದರು.

ಅಣ್ಣಾರಾವ ಅವರಿಗೆ ಬಾಲ್ಯದಿಂದಲೇ ಇಂತಹ ಪರಿಸರವು ದೊರಕಿದಂತಾಯಿತು. ತಾರುಣ್ಯಕ್ಕೆ ಬಂದಂತೆ ಅಣ್ಣಾರಾವ ಅವರಲ್ಲಿ ಕಲೆ ಮತ್ತು ಆಧ್ಯಾತ್ಮದ ಆಸಕ್ತಿಗಳು ವಿಕಾಸಗೊಂಡವು.

ಗೃಹಸ್ಥ ಆಶ್ರಮವನ್ನು ಸ್ವೀಕರಿಸಿದ ಪಾಟೀಲರು ಕೃಷಿ ಕಾಯಕದಕ್ಕಿಂತಲೂ ಕಲೆಯ ಕಾಯಕದತ್ತಲೇ ಹೆಚ್ಚಾಗಿ ಒಲಿದರು. ಅವರ ಪತ್ನಿ ಪಾರ್ವತಿ ಅವರು ಮನೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು.

ಅಣ್ಣಾರಾವ ಅವರಿಗೆ ಒಟ್ಟು ಮೂರು ಜನ ಮಕ್ಕಳು. ಅವರಲ್ಲಿ ಲಲ್ಲುಬಾಯಿ, ಅಂಜನಾಬಾಯಿ ಇಬ್ಬರು ಹೆಣ್ಣುಮಕ್ಕಳು. ದೇವಿಂದ್ರನೆಂಬುವನು ಒಬ್ಬ ಮಗ, ಸಧ್ಯ ಅವನು ಬದುಕಿಲ್ಲ.

ಮನೆತನದ ಗುರುಗಳು ಗದಲೆಗಾಂವ ಹಿರೇಮಠದ ನೀಲಕಂಠಯ್ಯ ಸ್ವಾಮಿಗಳು. ಅಣ್ಣಾರಾವ ಅವರ ಕಲೆಯನ್ನು ಮೆಚ್ಚಿಕೊಂಡಿದ್ದರು. ಅದಕ್ಕೆ ಪ್ರೋತ್ಸಾಹ ನೀಡುತ್ತ ಆಶೀರ್ವಾದದ ಮಾತುಗಳನ್ನು ಅವರು ಆಡುತ್ತಿದ್ದರು. ಅಣ್ಣಾರಾವ ಅವರಿಗೆ ಮೋಡಿ, ಮರಾಠಿ, ಹಿಂದಿ ಭಾಷೆಗಳು ಬರುತ್ತಿದ್ದವು. ಅವರು ಹೆಚ್ಚು ಕಲಿಯಲಿಲ್ಲ. ಐದನೆಯ ವರ್ಗದವರೆಗೆ ಓದಿ ಶಿಕ್ಷಣಕ್ಕೆ ಶರಣು ಹೊಡೆದು ಜೀವನ ಶಿಕ್ಷಣದ ಸಾಧನೆಗೆ ತೊಡಗಿದರು.

ಮುಂದಿನ ದಿನಗಳಲ್ಲಿ ಅಣ್ಣಾರಾವ ಅವರು ಹಾರಕೂಡ ಶಿವಯೋಗಿಗಳ ಪರಮ ಭಕ್ತರಾದರು. ಅವರ ಕೃಪೆಯೆ ತಮ್ಮ ಜೀವ ಧಾರಕ ಶಕ್ತಿಯೆಂದು ಬದುಕಿದರು. ಅವರು ಊರೂರು ಅಲೆದರು. ಕಲಾವಿದರನ್ನು ಗುರುತಿಸಿದರು; ಕೂಡಿಸಿದರು; ಅವರಿಗೆ ನಾಟಕಗಳನ್ನು ಕಲಿಸಿದರು. ನಾಟಕ ಪ್ರದರ್ಶನ ಮಾಡಿ, ಹೆಸರು ಬರುವಂತೆ ಮಾಡಿದರು.ಅವರ ನಾಟಕಗಳಲ್ಲಿ ಪಾತ್ರ ಮಾಡಿದ ಸಿದ್ದಪ್ಪನ ಮಾತುಗಳನ್ನು ಕೇಳಬೇಕು: "ಅಣ್ಣಾರಾವ ಮಾಸ್ತರರು ಬಹು ನೆಚ್ಚಿನ ವ್ಯಕ್ತಿಗಳು. ಅವರಿಗೆ ಅಶಿಸ್ತು ಆಗಿ ಬರುತ್ತಿರಲಿಲ್ಲ. ನಾಟಕದಲ್ಲಿಯಂತೂ ಅವರದು ಅತ್ಯಂತ ಕಠಿಣ ಸ್ವಭಾವ. ಯಾವುದನ್ನೂ ಅವರು ಸರಳವಾಗಿ ಹೊಂದಾಣಿಕೆ ಮಾಡಿಕೊಳ್ಳುವ ಮನೋಭಾವದವರಾಗಿರಲಿಲ್ಲ. ನಾಟಕ ಬೈಠಕ್ ಸರಿಯಾದ ಸಮಯಕ್ಕೆ ಆರಂಭವಾಗಬೇಕು; ಪಾತ್ರಧಾರಿಗಳು ಸರಿಯಾದ ಸಮಯಕ್ಕೆ ಬೈಠಕ್ ಕೋಣೆಯಲ್ಲಿ ಹಾಜರಿರಬೇಕು. ತಮ್ಮ ಬದಿಯಲ್ಲಿ ಒಂದು ಛಡಿ ಇಟ್ಟುಕೊಳ್ಳುತ್ತಿದ್ದರು. ಮಾತುಗಳನ್ನು ಸರಿಯಾಗಿ ಕಂಠಪಾಠ ಮಾಡಿ ಅಸ್ಖಲಿತವಾಗಿ ಹೇಳಬೇಕು. ತಪ್ಪು ನುಡಿದರೆ ಛಡಿ ಏಟು ಬೀಳುತ್ತಿದ್ದವು. ಸ್ವತಃ ಅವರು ಒಳ್ಳೆಯ ನಟರೂ ಆಗಿದ್ದರು, ಆಯಾ ಪಾತ್ರಗಳಿಗೆ ತಾವೇ ಅಭಿನಯಿಸಿ ತೋರಿಸುತ್ತಿದ್ದರು. ಆಯಾ ಸಂದರ್ಭಗಳಿಗೆ ತಕ್ಕಂತೆ ಹಾಡುಗಳನ್ನು ಕೂಡಿಸುತ್ತಿದ್ದರು. ಅವರ ಮನಸ್ಸಿಗೆ ಬಾರದ ಮೂಲದ ಹಾಡುಗಳನ್ನು ನಿರ್ದಾಕ್ಷಿಣ್ಯವಾಗಿ ತೆಗೆದು ಹಾಕುತ್ತಿದ್ದರು, ತಾವೇ

ರಚಿಸಿದ ಹೊಸ ಹಾಡುಗಳನ್ನು ಅಲ್ಲಿ ಕೂಡಿಸಿ; ಅದಕ್ಕೆ ರಾಗ ಸಂಯೋಜನೆ ಮಾಡುತ್ತಿದ್ದರು. ಅಣ್ಣಾರಾವ ಅವರು ಅಭಿಜಾತ ಕಲಾವಿದ-ಕವಿ".

ಅಣ್ಣಾರಾವ ಅವರ ಸ್ವನಾಮ ಮುದ್ರೆಯ ಕೆಲವು ತತ್ತ್ವಪದಗಳನ್ನು ಹಾಡುತ್ತಾರೆ. ಅವುಗಳಲ್ಲಿ ಸಾಕಷ್ಟು ಅಪಭ್ರಂಶ ಶಬ್ದಗಳು ಇವೆ. ಅವರ ವಂಶಸ್ಥರು ಇಂದು ಗದಲೆಗಾಂವದಲ್ಲಿದ್ದಾರೆ. ಮನೆಯ ಹಿರಿಯಳೊಬ್ಬಳು ಹರಕು ಮುರುಕಾಗಿ ಅಣ್ಣಾರಾವ ಅವರ ಪದಗಳನ್ನು ಹಾಡುತ್ತಾರೆ. ನಡು-ನಡುವೆ ನುಡಿಗಳು ನೆನಪಾಗುವುದಿಲ್ಲವೆಂದು ಹೇಳಿ ಬಿಟ್ಟು ಬೀಡುತ್ತಾರೆ. ಪ್ರಯಾಸದಿಂದ ಸಂಗ್ರಹಿಸಿದ ಎರಡು ಹಾಡಗಳನ್ನು ಇಲ್ಲಿ ಕೊಡಲಾಗಿದೆ:

ದೇವನ ಮರಿಬ್ಯಾಡ

ದೇವನಿಂದ ಬಂದಿ ಎಲೆ ಮನುಜಾ
ದೇವನೆಲ್ಲ ಅಂದಿ ॥
ದೇವರ ಮರಿಬ್ಯಾಡ
ಅವನ ಧ್ಯಾನವ ಬಿಡಬ್ಯಾಡ ॥ ಪ ॥

ಪ್ರಾಯದ ಮಬ್ಬಿನಲಿ ಎಲೆ ಮನುಜಾ
ಮಾಯದ ಭ್ರಾಂತಿಯಲಿ
ದೇವನ ಮರಿಬ್ಯಾಡ
ಅವನ ಧ್ಯಾಸವ ಬಿಡಬ್ಯಾಡ ॥ ೧ ॥

ಸಂತಿಗಂತ ಬಂದಿ ಎಲೆ ಮನುಜಾ
ಅಂತೆ-ಕಂತೆ ಅಂದಿ
ಚಿಂತಿಯ ಬಿಡು ಮನವೆ
ದೇವನ ಧ್ಯಾಸವ ಹಿಡಿ ಮನವೆ ॥ ೨ ॥

ಹೆಂಡತಿ ಮಕ್ಕಳಿಗಿ ಹೋರ್ಯಾಡಿ
ರೊಕ್ಕಾ ಗಳಿಸಿ ಇಟ್ಟಿ
ಕಟಪಟಿ ಸಂಸಾರಕ್ಕ ಭಾಳ
ಅಂಟಗೊಂಡು ನೀ ಬಿಟ್ಟಿ ॥ ೩ ॥

ನಿನಗ ತಿಳಿಲಿಲ್ಲ ಹುಚ್ಚಗೊಟ್ಟಿ
ಬದುಕೆಲ್ಲ ಮೂರ ದಿನದ ಲೊಳಲೊಟ್ಟಿ
ಅರುವಿಲ್ದೆ ನೀ ಕೆಟ್ಟಿ
ಒಂದುದಿನಾ ಆಗುದು ಮೂರಾಬಟ್ಟಿ ॥ ೪ ॥

ದೇಶದೊಳಗ ನಮ್ಮ ಲೇಸುಳ್ಳ ಗದಲೆಗಾಂವ
ಕೂಸ ಅಣ್ಣಾರಾಯ ಲೇಸಿಂದ ಹೇಳ್ಯಾನ
ದೇವರ ಮರಿಬ್ಯಾಡ ದೇವನ ಧ್ಯಾಸವ ಬಿಡಬ್ಯಾಡ ॥ ೫ ॥

ಸಂಸಾರದ ಧಗಿ

ಧಗಿ ಹತ್ತಿ ಧಗಿ ಹತ್ತಿ
ಧಗಿ ಹತ್ತಿ ಸತ್ತಿ
ಸಂಸಾರದ ಧಗಿ ಹತ್ತಿ
ಸುಡುತಾ ನೀ ಕುಂತಿ ॥ ಪ ॥

ಶಿನಾಮದ ತಣ್ಣೀರ ಮೈ ತೊಳೆದು ನೋಡು
ಶಿವನೆಂಬ ಮಜ್ಜಿಗೆಯ ನೀ ಕುಡಿವದು ಪಾಡು
ಅನುಭಾವದ ಅಂಬಲಿಯ ನೀ ಸುರಿದು ನೋಡು
ಅನುವಿಲೆ ಶಿವಧ್ಯಾನ ನಿತ್ಯದಲಿ ಮಾಡು ॥ ೧ ॥


ಗತಿಯಾರು ಈ ಭೂಮಿಯಲಿ ಹೇಳು ಎಲೆ ತಮ್ಮಾ
ಮತಿ ಯಾರು ಈ ಜನ್ಮದಲಿ ಕೇಳು ಎಲೆ ತಮ್ಮಾ
ಶಿವನಿಂದ ಗತಿ–ಮತಿಯು ಯಾರಿಲ್ಲೊ ತಮ್ಮಾ
ಭವ ನೀಗೋ ಮಂತ್ರವ ಶಿವಮಂತ್ರ ತಮ್ಮಾ ॥ ೨ ॥

ಅನುದಿನವು ಅನುನಯದಿ ಶಿವನಲ್ಲಿ ಬದುಕೊ
ಮನದಲ್ಲಿ ಶಿವಮಂತ್ರ ಬಿಡದೆ ನೀ ಜಪಿಸೊ
ಜನ್ಮದ ಜಂಜಡ ಬಿಸಿ–ಹಸಿ ನೀಗೋ
ಸದಮಲ ಪರಮನ ಪಾದವ ಕೂಡೊ ॥ ೩ ॥

ವಸುಧಿಯೊಳಗ ನಮ್ಮ ಲೇಸಾದ ಗದಲೆಗಾಂವ
ಶಿಸು ಅಣ್ಣರಾಯ ಹೇಳ್ಯಾನ ತಿಳಿ ಖೂನ
ಸಂಸಾರ ಧುನಿಯಲ್ಲಿ ಬಯಲಾಗಿ ಹೋಗುವುದು
ಪರತರ ಪರಮನ ವಲುಮೆ ದೊರಕುವುದು ॥ ೪ ॥



ಅಣ್ಣಾರಾವ ಗದಲೆಗಾಂವ ಅವರ ಮನೆ (ಗದಲೆಗಾಂವ)



ಅಣ್ಣಾರಾವ ಮಾಸ್ತರ ಅವರ ವಂಶದ ಸದಸ್ಯರು.

೨೦. ವೀರಣ್ಣ ಮಂಡೆ (ಕ್ರಿ.ಶ.ಸು. ೧೯೩೦)

ಕೃಷಿಕಾಯಕವನ್ನೆ ದೇವರೆಂದು ನಂಬಿದ ಮನೆತನ ವೀರಣ್ಣ ಮಂಡೆ ಅವರದು. ಅವರ ಮನೆಯ ಅಂಗಳಕ್ಕೆ ಪ್ರವೇಶಿಸಿ ನಿಂತುಕೊಂಡಾಗ ಈ ಮಾತು ಸತ್ಯವೆನಿಸುತ್ತದೆ. ಊರು ಬಿಟ್ಟು ಹೊರಟು ನಿಂತರೆ ಊರಿನ ಜನರು ಅವರನ್ನು ಕುರಿತು "ಯಾಕ್ರೀ ವೀರಣ್ಣ ಎಲ್ಲಿ ಹೋಯ್ತಿರಿ? ಯಾರು ಭಜನಿಗಿ ಕರದಾರೇನು?" ಎಂದು ಪ್ರಶ್ನಿಸುತ್ತಾರೆ. ತಲೆಯ ಮೇಲೆ ಬಿಳಿದಾದ ಟೊಪ್ಪಿಗೆ ಮೈಯಲ್ಲಿ ಬಿಳಿಯ ಬಣ್ಣದ ಕಮೀಸು ಅಂಗಿ, ಧೋತರು ಇವು ಅವರ ಉಡುಪು. ನೋಡಿದರೆ ಸಾತ್ವಿಕ ಭಾವ ಹೊರಸೂಸುವ ಮುಖ. ಶಾಂತ ಸೌಮ್ಯ-ಸಜ್ಜನಿಕೆಯ ಕಳೆ. ಎಂಬತ್ತರ ಹೊಸ್ತಿಲಿನಲ್ಲಿ ನಿಂತುಕೊಂಡು ಅವರು ಇನ್ನೂ ಕ್ರಿಯಾಶೀಲರಾಗಿ ಓಡಾಡುತ್ತಾರೆ; ತಮ್ಮ ಹೊಲಕ್ಕೆ ಹೋಗುತ್ತಾರೆ, ಕೃಷಿಕರ್ಮಗಳಲ್ಲಿ ಭಾಗಿಯಾಗುತ್ತಾರೆ.

ವೀರಣ್ಣ ಮಂಡೆ ಅವರ ಎಲ್ಲ ಕಾರ್ಯಗಳಿಗೆ ನೆಲೆಯಾಗಿ ಅವರ ಸ್ವಗ್ರಾಮಯೆನಿಸಿಕೊಂಡುದು ಬೀದರ ಜಿಲ್ಲೆಯ, ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ಖಾನಾಪುರ(ಬಿ) ಗ್ರಾಮ. ಇದನ್ನು ಜನರು "ಬಗ್ದರಿ ಖಾನಾಪುರ" ಎಂತಲೂ ಕರೆಯುತ್ತಾರೆ.

ವೀರಣ್ಣ ಮಂಡೆ ಅವರ ತಂದೆ ಮಹಾದೇವಪ್ಪ ಮಂಡೆ. ಒಕ್ಕಲುತನದ ವೃತ್ತಿಯಲ್ಲಿಯೇ ತನ್ನ ಬದುಕಿನ ಸೌಖ್ಯದ ಹಾದಿಯನ್ನು ಕಂಡು ಬದುಕಿದ ರೈತ. ಶ್ರಮಜೀವಿ. ದುಡಿತದಿಂದ ಮನೆಯ ಆರ್ಥಿಕ ಸ್ಥಿತಿಯನ್ನು ತಕ್ಕಮಟ್ಟಿಗೆ ಸುಧಾರಿಸಲು ಹವಣಿಸಿದ ವ್ಯಕ್ತಿ.

ವೀರಣ್ಣನವರ ತಾಯಿ ಅಂದೆವ್ವ ಪರಮ ದೈವೀ ಭಕ್ತಳು. ಪೂಜೆ-ಪುನಸ್ಕಾರಗಳನ್ನು ಮಾಡದೆ ಬಾಯಲ್ಲಿ ನೀರು ಹಾಕದೆ ಇದ್ದ ಹೆಣ್ಣುಮಗಳು. ಹೊಲದ ಎಲ್ಲ ಕೆಲಸಗಳನ್ನು ಬಲ್ಲವಳು. ಗಂಡನೊಡನೆ ಗಂಡಸಿನಂತೆ ಮೈಮುರಿದು ದುಡಿಯುವ ಕಾಯಕ ಜೀವಿ ಅವಳಾಗಿದ್ದಳು. ಹೀಗಾಗಿಯೇ ಮಂಡೆ ಅವರ ಮನೆತನ ಊರಿನಲ್ಲಿ ಸ್ಥಿತಿವಂತ ಮನೆತನ ಎಂದು ಹೇಳಿಸಿಕೊಳ್ಳುವದಕ್ಕೆ ಸಾಧ್ಯವಾದುದು.

ಈ ಶ್ರಮಜೀವಿ ದಂಪತಿಗಳ ಉದರದಿಂದ ವೀರಣ್ಣನವರು ಕ್ರಿ.ಶ. ೧೯೩೦ರ

ವರ್ಷದಲ್ಲಿ ಹುಟ್ಟಿದರು. ಮಹಾದೇವಪ್ಪನವರು ಮಕ್ಕಳಿಗೆ ಅಕ್ಷರಭ್ಯಾಸಕೊಡಿಸಲಿಲ್ಲ. ಅಂತಹ ವಾತಾವರಣವೂ ಅಂದು ಸರಳವಾಗಿ ಸಿಕ್ಕುವಂತಿರಲಿಲ್ಲ. ವೀರಣ್ಣ ಮಂಡೆ ಅವರು ಹೊಲವನ್ನೇ ತಮ್ಮ ಪಾಠಶಾಲೆಯನ್ನಾಗಿ ಮಾಡಿಕೊಂಡರು. ದುಡಿಮೆಯ ಶಿಕ್ಷಣವನ್ನೆ ಕಲಿತರು. ನಿಸರ್ಗ ವಾತಾವರಣದಲ್ಲಿ ಸ್ವಚ್ಛಂದ ಮತ್ತು ಸ್ವಚ್ಛ ಮನಸ್ಸನ್ನು ಬೆಳೆಯಿಸಿಕೊಂಡರು.

ವೀರಣ್ಣ ಮಂಡೆಯವರ ಪತ್ನಿ ಕಸ್ತೂರಬಾಯಿ. ಈ ದಂಪತಿಗಳಿಗೆ ಮೂವರು ಗಂಡು ಮಕ್ಕಳು; ಇಬ್ಬರು ಹೆಣ್ಣುಮಕ್ಕಳು. ಎಲ್ಲರೂ ಒಕ್ಕಲುತನದ ಕೆಲಸದಲ್ಲಿ ತೊಡಗಿದವರೆ.

ವೀರಣ್ಣ ಮಂಡೆ ಅವರಿಗೆ ಹುಟ್ಟುತ್ತಲೆ ಹಾಡುವ ಮತ್ತು ಹಾಡುಕಟ್ಟುವ ಕಲೆ ಸಿದ್ಧಿಗೊಂಡು ಬಂದಿದೆ. ತಮ್ಮ ವಯಸ್ಸಿನ ೧೭-೧೮ ವರ್ಷಗಳಿಂದಲೇ ಈ ಹವ್ಯಾಸವನ್ನು ಅವರು ಬೆಳೆಯಿಸಿಕೊಂಡು ಬಂದಿದ್ದಾರೆ. ವೀರಣ್ಣ ಮಂಡೆಯವರಲ್ಲಿರುವ ಕಾವ್ಯ ಪ್ರತಿಭೆಯನ್ನು ಪ್ರೋತ್ಸಾಹಿಸಿ; ಅದನ್ನು ಬೆಳೆಯಲು ಅನುವು ಮಾಡಿಕೊಟ್ಟವರು ಸಿರಗಾಪುರದ ನಾಗೀಂದ್ರಪ್ಪನವರು. ಈ ಕಾರಣದಿಂದಲೇ ಮಂಡೆ ಅವರು ನಾಗೀಂದ್ರಪ್ಪನವರನ್ನು ತಮ್ಮ ಗುರುಗಳೆಂದು ಅತ್ಯಂತ ಮೆಚ್ಚುಗೆಯಿಂದ ಹೇಳಿಕೊಳ್ಳುತ್ತಾರೆ. ವೀರಣ್ಣ ಮಂಡೆ ಅವರ ಪ್ರಕಾರ "ಏಕತಾರಿ ಪದಗಳದ್ದೆ ಒಂದು ಪ್ರಕಾರವು ತತ್ತ್ವಪದ ಸಾಹಿತ್ಯದಲ್ಲಿ ಬೆಳೆಯಬೇಕು" ಎನ್ನುತ್ತಾರೆ. ಅವರು ಏಕತಾರಿಯನ್ನು ಹಿಡಿದು ಹಾಡಲು ಕುಳಿತರೆ ತಮ್ಮನ್ನೂ ಮರೆಯುತ್ತಾರೆ. ಕೇಳುಗರನ್ನೂ ಏಕಾಗ್ರತೆಗೆ ಒಳಗು ಮಾಡುತ್ತಾರೆ. ಹಲವಾರು ಏಕತಾರಿಯ ಪದಗಳನ್ನು ವೀರಣ್ಣನವರು ಕಟ್ಟಿದ್ದುಂಟು. "ಕಲ್ಯಾಣರಾವ ಬಿರಾದಾರ ಎಂಬುವರು ಏಕತಾರಿ ಪದಗಳನ್ನು ಕಟ್ಟಲು ನನಗೆ ಗುರುಗಳಾಗಿ ದೊರಕಿದರೆಂದು" ಕವಿಗಳು ಹೇಳುತ್ತಾರೆ.

ವೀರಣ್ಣ ಮಂಡೆ ಅವರಲ್ಲಿ ಇನ್ನೊಂದು ಕಲೆಯಿದೆ. ಅದು ಜನಪದ ವೈದ್ಯ ಪದ್ಧತಿ. ಹೊಲಗಳಲ್ಲಿ ಕೆಲಸ ಮಾಡುತ್ತ, ಹೊತ್ತುಗಳೆಯುತ್ತಿದ್ದ ಅವರಿಗೆ ಎಷ್ಟೊ ಗಿಡಮೂಲಿಕೆಗಳ ಪರಿಚಯ ಮಾಡಿಕೊಟ್ಟವರು, ತಂದೆ ಮಹಾದೇವಪ್ಪನವರು. ಹೀಗಾಗಿ ವೀರಣ್ಣ ಮಂಡೆ ಅವರು ಒಬ್ಬ ಜನಪದ ವೈದ್ಯರಾಗಿಯೂ ಬೆಳೆದು ನಿಂತಿರುವರು. ಹಲವಾರು ಜನರ ಜಾಡ್ಯಗಳನ್ನು ಗಿಡಮೂಲಿಕೆಗಳ ಮೂಲಕ ಪರಿಹರಿಸಿದ್ದಾರೆ, ಪರಿಹರಿಸುತ್ತಿದ್ದಾರೆ. ತಮ್ಮ ವೈದ್ಯ ವೃತ್ತಿಯ ಬಗೆಗೆ ಅವರು ಇಂದು ಹೀಗೆ ಹೇಳುತ್ತಾರೆ: "ನನಗೆ ವಯಸ್ಸು ಇದ್ದಾಗ ಆಯಾ ರೋಗಗಳಿಗೆ ಬೇಕಾಗುವ ಔಷಧಿಯ ಗಿಡ ಮೂಲಿಕೆಗಳನ್ನು ಸ್ವತಃ ನಾನೇ ಅಡವಿಗೆ ಹೋಗಿ ಆರಿಸಿ ತರುತ್ತಿದ್ದೆ. ಈಗ ನನಗೆ ಕಣ್ಣುಗಳು ಸರಿಯಾಗಿ ಕಾಣುತ್ತಿಲ್ಲ. ಅಡವಿಯಲ್ಲಿ ಬಹುದೂರದವರೆಗೆ ನಡೆದಾಡುವುದಕ್ಕೂ ನನ್ನ ವೃದ್ಧಾಪ್ಯವು ಇಂದು ಅವಕಾಶ ಮಾಡಿ ಕೊಡುತ್ತಿಲ್ಲ.

ಹೀಗಾಗಿ ಜನರಿಗೆ ಔಷಧ ಕೊಡುವುದನ್ನು ಭಾಗಶಃ ನಿಲ್ಲಿಸಿಯೆ ಬಿಟ್ಟಿದ್ದೇನೆ. ಅನಿವಾರ್ಯವಾಗಿ ಕೊಡಬೇಕಾದ ಪ್ರಸಂಗ ಬಂದಲ್ಲಿ, ನಾನೇ ಸ್ವತಃ ಬಸವಕಲ್ಯಾಣ ಇಲ್ಲವೆ ಕಲಬುರ್ಗಿಗೆ ಹೋಗಿ ಆಯುರ್ವೇದದ ಗಿಡಮೂಲಿಕೆಗಳನ್ನು; ಮಾರುವ ಅಂಗಡಿಗಳಲ್ಲಿನ ಔಷಧಿಗಳನ್ನು ಪರೀಕ್ಷಿಸಿ ತರುತ್ತೇನೆ. ಮನೆಯಲ್ಲಿ ಔಷಧ ತಯ್ಯಾರಿಸಿ ಕೊಡುತ್ತೇನೆ. ಅವರಿಂದ ಔಷಧದ ವೆಚ್ಚವನ್ನು ಪಡೆಯುತ್ತೇನೆ ಹೊರತು ಇನ್ನಾವುದೇ ತೆರನಾದ ಹಣವನ್ನು ನಾನು ಪಡೆಯುವುದಿಲ್ಲ. ಅದೊಂದು ಸೇವೆಯೆಂದು ಮಾಡುತ್ತಿದ್ದೇನೆ".

ಆರಾಧ್ಯ ದೇವರಾಗಿರುವ ರಾಮಲಿಂಗನ ಮತ್ತು ಊರಿನ ದೇವರಾದ ಮಹಾದೇವನ ಅಂಕಿತದಲ್ಲಿ ಕವಿಗಳು ತಮ್ಮ ರಚನೆಗಳನ್ನು ಕಟ್ಟಿದ್ದಾರೆ. ಅವರು ಹಾಡುತ್ತಾರೆ. ಬರೆದುಕೊಳ್ಳುವವರು ಬರೆದುಕೊಳ್ಳುತ್ತಾರೆ. ನಾನು ಕಂಡಂತೆ ವೀರಣ್ಣನವರ ಸಾಹಿತ್ಯ ಕೃಷಿಗೆ ಮನೆಯ ವಾತಾವರಣವು ಪೂರಕವಾಗಿಲ್ಲ. "ಹಿತ್ತಲ ಗಿಡವು ಮದ್ದಲ್ಲ" ಎಂಬ ಧೋರಣೆಯು ಮನೆಯ ಸದಸ್ಯರಲ್ಲಿದೆ. ವೀರಣ್ಣನವರು ಅದರ ಬಗೆಗೆ ಯಾವುದೇ ತೆರನಾದ ಚಿಂತೆ ಮಾಡುವುದಿಲ್ಲ. ನಿರಾಳ ಮನದಿಂದ ತಮ್ಮ ತಾವು ಪದ ಕಟ್ಟಿ ಹಾಡುತ್ತಿರುತ್ತಾರೆ. ಕಲಿಯುವವರಿಗೆ ಕಲಿಸುತ್ತಾರೆ. ಮನೆಯ ವಾತಾವರಣದ ಬಗೆಗೆ ನಮ್ಮಂಥವರು ಕೆದಕಿ ಕೇಳಿದರೆ ಅವರ ಪ್ರತಿಕ್ರಿಯೆ ಹೀಗೆ ಪ್ರಕಟವಾಗುತ್ತದೆ: "ಕಾವ್ಯದ ಆಸಕ್ತಿ ಎಲ್ಲರಿಗೂ ಇರುವುದಿಲ್ಲ. ಪದ್ಯಗಳನ್ನು ಕಟ್ಟಬೇಕಾದರೆ ಪೂರ್ವ ಜನ್ಮದ ಪುಣ್ಯಬೇಕು. ಅಂತಹ ಪುಣ್ಯ ನಮ್ಮ ಮನೆಯಲ್ಲಿ ಯಾರೂ ಪಡೆದುಕೊಂಡು ಬಂದಿಲ್ಲ. ಆಧ್ಯಾತ್ಮ ಹಾಡಿನ ವಿಷಯಕ್ಕೆ ನಮ್ಮವರು ಶುದ್ಧ ಅಜ್ಞಾನಿಗಳೆಂದೇ ಹೇಳಬೇಕಾಗುತ್ತದೆ. ಅಂಥವರ ನಡುವೆ ನಾನು ಹಾಡುತ್ತ ಕುಳಿತುಕೊಂಡರೆ ಏನಾಗುತ್ತದೆ? ನಾನು ಕೊಡುವ ಔಷಧದ ಬಗೆಗೂ ಅವರಿಗೆ ಸದಾಭಿಪ್ರಾಯವಿಲ್ಲ, ಅವರ ಹಾದಿ ಅವರಿಗೆ, ನನ್ನ ಹಾದಿ ನನಗೆ. ಅದರಿಂದ ನನಗೆ ಯಾವುದೆ ತೆರನಾದ ಕೊರಗಿಲ್ಲ. ನಾನು ಹಾಡುವ ಹಾಡುಗಳನ್ನು ಮಹಾದೇವ ಕೇಳುತ್ತಾನೆ; ರಾಮಲಿಂಗ ಕೇಳುತ್ತಾನೆ. ಊರಿನ ಆರಾಧ್ಯದೇವರು ಶರಣಬಸವನು ಕೇಳುತ್ತಾನೆ. ಆಗಾಗ ನನ್ನಲ್ಲಿಗೆ ಬರುವ ಅನುಭಾವಿಗಳು ಕೇಳುತ್ತಾರೆ; ನಿಮ್ಮಂಥ ಸುಜ್ಞಾನಿಗಳು ಕೇಳುತ್ತಾರೆ; ಸಾಕಲ್ಲ?" ಇಂತಹ ನಿರ್ಲಿಪ್ತ ಭಾವ, ನಿಷ್ಪೃಹಮನದ ವೀರಣ್ಣನವರು ಹಲವಾರು ತತ್ತ್ವಪದಗಳನ್ನು ಕಟ್ಟಿದ್ದಾರೆ. ಇಲ್ಲಿ ಒಂದೆರಡನ್ನು ನಿದರ್ಶನಕ್ಕೆಂದು ಕೊಡಲಾಗಿದೆ:

ಸುಂದರ ಪ್ರಿಯನ ಮಂದಿರದೊಳು ನೋಡಿದ

ಸುಂದರ ಪ್ರಿಯನ ಮಂದಿರದೊಳು ನೋಡಿದ
ಮನೋಹರ ಪ್ರಿಯನ ಮಂದಿರದೊಳು ನೋಡಿದ ॥ ಪ ॥

ಮಂದಿರದೊಳು ನನ ಚಂದುಳ್ಳ ಪುರುಷನ
ಅಂದು-ಇಂದಿಗೆ ಎಂದು ನೋಡಿದ
ಗುರುವು ತೋರಿಸಿದ ಅರಿವಿನ ದಾರಿ
ಕೂಡಿಕೊಂಬ ನಿಜಭಕ್ತಿಲಿಂದ ॥ ೧ ॥

ಗಂಗ-ಸರಸ್ವತಿ-ಯಮುನಾ
ಇವ ದಾಟುವ ಸಲುವಾಗಿ ಗುರುವಿಗೆ ನಮನ
ಅವನೆ ಹೇಳಿದನು ಈ ಸಾಧನ
ಗುರು ವಚನದಾಂಗ ನಡೆದೆನು ನಾನ ॥ ೨ ॥

ಮಂತ್ರ ಸಂಗಡಿಗೆ ಯಂತ್ರ ದಾರಕಟ್ಟಿ
ತಂತ್ರ ಗುರುವಿನಂತರದಲೆ ಏರಿದ
ಥಾಟಿ ಹೋಗಿ ನಾ ಭೇಟಿ ತೊಗೊಂಡಿದೆ
ಗುರುವಿನ ರೂಪಾಗಿ ನಾನೇ ನಿಂತಿದ ॥ ೩ ॥

ಒಂದನೇ ಬಾಗಲಕ ಶಿವನಿಂತಿದಾನ
ಎರಡನೆಯ ಬಾಗಲಕ ಷಣ್ಮುಖ ಹಾನ
ಮೂರನೆಯ ಬಾಗಲದಲಿ ಗಣಪತಿ ಹಾನ
ನಾಕನೇ ಬಾಗಿಲದಲ್ಲಿ ಬ್ರಹ್ಮ ನಿಂತಾನ ॥ ೪ ॥

ಐದನೇ ಬಾಗಿಲಕ ಲಕ್ಷ್ಮಿಯ ಕಾವಲ
ಆರನೇ ಬಾಗಲಕ ರುದ್ರನ ಕಾವಲ
ಏಳನೇ ಬಾಗಿಲದಲಿ ಮಾಯೆಯ ಕಾವಲ
ಮೊಹಿನಿಯಾಗಿ ಕಾದಳು ಬಾಗಿಲ ॥ ೫ ॥

ದೇಶದೊಳು ನಮ್ಮ ಲೇಸ ಖಾನಾಪುರ
ಕೂಸಿನಂಗ ಹೆಸರಾ
ಭಕ್ತರ ನೆಲೆ ಬೀಡು ಇರುವುದು ನೋಡು
ರಾಮಲಿಂಗನ ಕೂಡಾ ॥ ೬ ॥

ಓಂ ನಮೋ ಎನ್ನಿರೆ

ಓಂ ನಮೋ ಎನ್ನಿರೋ
ಓಂ ನಮ ಶಿವಾಯ ಎನ್ನಿರೊ ॥ ಪ ॥

'ಓಂ' ಅಂದರ ಓಂಕಾರ ದೇವರ ರೂಪ
'ನ' ಅಂದರ ನಮಸ್ಕಾರ ದೈವಕ-ಲೇಪ
'ಮ' ಅಂದರ ಮನಘನವು ತಿಳಿಯೋ ಭೂಪ
'ಶಿ' ಅಂದರ ಸಿಕ್ಕುವದು ಶಿವನ ರೂಪ ॥ ೧ ॥


'ವಾ' ಅಂದರ ವಿಕಾರವೆಲ್ಲ ಸರ್ವನಾಶಾ
'ಯ' ಅಂದರ ಯಜ್ಞರೂಪ ನೀನೆ ಈಶಾ
ಓಂ ನಮ ಶಿವಯ ತಾನೇ ಸರ್ವೇಶಾ
ಓಂ ದಲ್ಲಿಯೆ ನೆಲಸ್ಯಾನ ನಮ್ಮ ಜಗದೀಶಾ ॥ ೨ ॥

ಓಂ ನಮ ಎನ್ನಿರೋ
ಓಂ ದೊಳಗ ಕೂಡಿರೋ
ಓಂ ಪದವ ಪಾಡಿರೋ
ರಾಮಲಿಂಗನ ಧ್ಯಾನ ಹಾಡಿರೋ ॥ ೩ ॥

(ಕವಿಗಳೆ ಈ ವಿವರಗಳನ್ನು ನೀಡಿದ್ದಾರೆ.)



ವೀರಣ್ಣ ಮಂಡೆ
ಅವರ ಮನೆ
(ಖಾನಾಪುರ-ಬಿ).



ವೀರಣ್ಣ ಮಂಡೆ ದಂಪತಿಗಳು ತಮ್ಮ ಮಗ ಸೊಸೆಯೊಂದಿಗೆ.



ವೀರಣ್ಣ ಮಂಡೆ

೨೧. ನಬಿಲಾಲ (ಕ್ರಿ.ಶ.ಸು ೧೯೩೫)

ಜೀವನದಾರಭ್ಯದಿಂದಲೂ ಆರ್ಥಿಕ ಬಡತನವನ್ನೇ ಹಾಸಿ ಹೊದ್ದು ಬದುಕಿರುವ ನಬಿಲಾಲರ ಮನಸ್ಸು–ಹೃದಯಗಳು ಶ್ರೀಮಂತವಾಗಿವೆ. ಅವರು ರಚಿಸಿದ ಸಾಹಿತ್ಯ ಶ್ರೀಮಂತವಾಗಿದೆ. ಭಜನೆ–ಸಾಹಿತ್ಯ ಕೃಷಿಯಲ್ಲಿ ಅವರಿಗೆ ಭೌತಿಕ ಬಡತನದ ಪರಿವೆಯೆ ಇಲ್ಲದಂತೆ ಕಾಣುತ್ತದೆ. ಸರಕಾರವು ಕೊಟ್ಟ ಜಾಗದಲ್ಲಿ ಸಣ್ಣದೊಂದು ಆಶ್ರಯದ ತಾಣ ಮಾಡಿಕೊಂಡು ವಾಸವಾಗಿದ್ದಾರೆ. ಈಗ ಅವರಿಗೆ ಎಪ್ಪತ್ತಾರು ವರ್ಷಗಳ ವಯಸ್ಸು. ತಾವೆ ಸಹಮನಸ್ಕರೊಡನೆ ಕೂಡಿ ಕಟ್ಟಿದ "ಬಜರಂಗ ಬಲಿ ಭಜನೆ ಮಂಡಳಿ"ಯೊಂದಿಗೆ ಆಗಾಗ ಬೇರೆ ಬೇರೆ ಸ್ಥಳಗಳಿಗೆ ಭಜನೆ ಮಾಡಲು ಹೋಗುತ್ತಾರೆ.

ಬಾಗ ಹಿಪ್ಪರಗಾ ನಬಿಲಾಲರ ಸ್ವಗ್ರಾಮ. ಇದು ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುತ್ತದೆ. ಇಲ್ಲಿನ ದಂಪತಿಗಳು ಗುಡುಸಾಬ ಮತ್ತು ಮೆಹಬೂಬಿ ಅವರ ಉದರದಿಂದ ಕ್ರಿ.ಶ. ೧೯೩೫ರಲ್ಲಿ ನಬಿಲಾಲರು ಜನಿಸಿದರು.

ಗುಡು ಸಾಬರಿಗೆ ಮಕತುಮ್‌ಸಾಬ, ನಬಿಲಾಲ, ಹೀರಾಮಾ, ರೋಶನ್‌ಬಿ ಎಂಬ ಮಕ್ಕಳು. ಬಡತನದ ಬದುಕು. ಗುಡು ಸಾಬರು ಜೀವನ ನಿರ್ವಹಣೆಗಾಗಿ ಒಕ್ಕಲುತನದ ಕೆಲಸ–ಬೇರೆಯವರ ಹೊಲಗಳಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು.

ಬಡತನದಲ್ಲಿಯೂ ಗುಡು ಸಾಬರಿಗೆ ತಮ್ಮ ಮಕ್ಕಳಿಗೆ ಒಂದಿಷ್ಟು ಅಕ್ಷರಭ್ಯಾಸ ಮಾಡಿಸಬೇಕೆಂಬ ಹಂಬಲವಿದ್ದಿತು. ಈ ಹಂಬಲವು ನಬಿಲಾಲರಿಂದ ಸಾರ್ಥಕವಾಯಿತು. ಬಾಗ ಹಿಪ್ಪರಗಾ ಗ್ರಾಮದಲ್ಲಿರುವ ಮರಾಠಿ ಶಾಲೆಯನ್ನೇ ಸೇರಿ ಅವರು ಮೂರನೆಯ ತರಗತಿಯವರೆಗೆ ಓದಿದರು. ಉರ್ದು, ಹಿಂದಿ, ಮೋಡಿ, ಕನ್ನಡ ಭಾಷೆಗಳನ್ನು ಸರಿಯಾಗಿ ಸ್ವಪ್ರಯತ್ನದಿಂದ ಕಲಿತರು. ಕನ್ನಡದ ಭಾಷೆಯನ್ನು ಮೋಡಿ ಲಿಪಿಯಲ್ಲಿ ಬರೆಯ ತೊಡಗಿದರು.

ನಬಿಲಾಲರದು ದೊಡ್ಡ ಸಂಸಾರ. ರುಕುಂಬಿ. ಹಸ್ಮತ್‌ಬಿ ಎಂಬ ಇಬ್ಬರು ಹೆಂಡಂದಿರು. ದಸ್ತಗೀರ್, ಸಲೀಮ್, ಕಲೀಮ ಎಂಬುವರು ಮೊದಲ ಹೆಂಡತಿ ಮಕ್ಕಳು, ಜಿಲಾನಿ, ಇಸ್ಮಾಯಿಲ್, ಮೆಹಬೂಬಿ, ಮದಿನಾ ಎಂಬುವರು ಹಸ್ಮತ್‌ಬಿ ಅವರ ಮಕ್ಕಳು. ಬದುಕಿನ ನಿರ್ವಹಣೆಗೆ ನಬಿಲಾಲರು ಆಶ್ರಯಿಸಿದ್ದು ಕೂಲಿ

ಮಾಡುವದನ್ನೇ. ಅವರೊಂದಿಗೆ ಹೆಂಡತಿ–ಮಕ್ಕಳೂ ಕೂಲಿ ಕೆಲಸಕ್ಕೆ ಹೋಗುತ್ತಾರೆ. ನಬಿಲಾಲರು ಭಜನೆಯಾದಿಗಳ ಗುಂಗಿನಲ್ಲಿ ಊರುಗಳಿಗೆ ಹೋದಾಗ ಮನೆಯ ನಿರ್ವಹಣೆ ಅವರ ಹೆಂಡತಿ–ಮಕ್ಕಳು ನಡೆಸಿಕೊಂಡು ಹೋಗುತ್ತಾರೆ. ಮುಸ್ಲೀಮರಾದ ನಬಿಲಾಲರು ವೀರಶೈವ ಸಂಸ್ಕೃತಿಯನ್ನು ಸರಿಯಾಗಿ ಅರ್ಥೈಸಿಕೊಂಡಿರುವುದು ವಿಶೇಷದ ಸಂಗತಿ. ಅವರಿಗೆ ಕಲಬುರ್ಗಿ ತಾಲ್ಲೂಕಿನಲ್ಲಿ ಬರುವ ಸಾವಳಗಿ ಗ್ರಾಮದ ಶಿವಲಿಂಗೇಶ್ವರ ಮಠದ ಶಿವಲಿಂಗೇಶ್ವರರು ಆರಾಧ್ಯ ದೇವರಾಗಿದ್ದಾರೆ. ಸಂಕೋಚ ಸ್ವಭಾವದ ನಬಿಲಾಲರು ಮುಗ್ಧರು, ಸರಳರು. ತಮ್ಮಲ್ಲಿಗೆ ಬರುವವರನ್ನು ಅವರು ತುಂಬುಮನದಿಂದ ಬರ ಮಾಡಿಕೊಳ್ಳುತ್ತಾರೆ. ಕೇಳಿದ್ದನ್ನು ಯಾವುದೇ ಆಡಂಬರವಿಲ್ಲದೆ ಸರಳವಾಗಿ–ವಾಸ್ತವವಾಗಿ ಬಿಚ್ಚಿಡುತ್ತಾರೆ.

ನಬಿಲಾಲರ ತಂದೆ ಗುಡು ಸಾಹೇಬರಿಗೂ ಕವಿತ್ವ ಶಕ್ತಿಯಿದ್ದಿತು. ಅವರು ಮೋಹರಮ್ ಪದಗಳನ್ನು ಸ್ವತಃ ಕಟ್ಟುತ್ತಿದ್ದರು ಹಾಗೂ ಹಾಡುತ್ತಿದ್ದರು. ಒಮ್ಮೆ ಅವರು ತಮ್ಮ ಹನ್ನೆರಡು ವರುಷದ ಮಗ ನಬಿಲಾಲರೊಂದಿಗೆ ಸಾವಳಗಿ ಮಹಮ್ಮದ ಸಾಬನಲ್ಲಿಗೆ ಹೋಗಿದ್ದರು. ಮಹಮ್ಮದ್ ಸಾಬರು ಬಹುದೊಡ್ಡ ಕವಿಗಳು. ಗುಡು ಸಾಬರು ಅವರನ್ನೇ ಗುರುವೆಂದು ನಂಬಿ. ತಮ್ಮ ಪದ್ಯಗಳನ್ನು ತೋರಿಸಲು ಆಗಾಗ ಹೋಗುತ್ತಿದ್ದರು. ಒಂದು ಸಲ ಮಹಮ್ಮದ ಸಾಬರು ತಮ್ಮಲ್ಲಿಗೆ ಬಂದ ಬಾಲಕ ನಬಿಲಾಲರನ್ನು ನೋಡಿದರು. ಅವನ ಮುಖದ ಲಕ್ಷಣಗಳನ್ನು ತದೇಕ ದೃಷ್ಟಿಯಿಂದ ಗಮನಿಸಿದರಂತೆ. ಅವರ ಮುಖದಿಂದ “ಇವನು ಮುಂದೆ ದೊಡ್ಡ ಕವಿಯಾಗುತ್ತಾನೆ. ನಿನ್ನ ಮಗ ನಿನ್ನನ್ನೂ ಮೀರಿಸುತ್ತಾನೆ” ಎಂಬ ಮಾತುಗಳು ಹೊರ ಬಿದ್ದವು. ಹಾಗೆಯೆ ಮಹಮ್ಮದ್ ಅವರು ನಬಿಲಾಲರ ತಲೆಯ ಮೇಲೆ ತಮ್ಮ ಕೈ ಇರಿಸಿ “ನೀನು ಹಾಡುಗಳನ್ನು ಬರೆ. ದೊಡ್ಡ ಕವಿಯಾಗುತ್ತಿ” ಎಂದು ಆಶೀರ್ವಾದ ಮಾಡಿದರಂತೆ. ಅಂದಿನಿಂದ ನಬಿಲಾಲರು ಪದ್ಯಗಳ ರಚನೆಗೆ ತೊಡಗಿದರು.

ಅಂದಿನಿಂದ ಇಂದಿನವರೆಗಿನ ಅವಧಿಯಲ್ಲಿ ನಬಿಲಾಲರು ಸಾವಿರಾರು ಹಾಡುಗಳನ್ನು ಬರೆದಿದ್ದಾರೆ. ಅವರು ರಚಿಸಿದ ಹಾಡುಗಳಲ್ಲಿ ತತ್ತ್ವಪದಗಳು, ಮೋಹರಮ್ ಹಾಡುಗಳು, ಕುಟುಂಬ ಯೋಜನೆಯ ಹಾಡುಗಳು; ರಾಷ್ಟ್ರಪ್ರೇಮವನ್ನು ಒಳಗೊಂಡ ಹಾಡುಗಳು, ಕೋಲಾಟದ ಪದಗಳು, ಸಾಕ್ಷರತಾ ಆಂದೋಲನಕ್ಕೆ ಸಂಬಂಧಿಸಿದ ಹಾಡುಗಳು; ಹಂತಿಯ ಹಾಡುಗಳು–ಎಂಬ ಇತ್ಯಾದಿ ಪ್ರಕಾರಗಳು ಕಾಣದೊರಕುತ್ತವೆ.

ತಮ್ಮ ಪದ್ಯಗಳಲ್ಲಿ ನಬಿಲಾಲರು ಸಾವಳಗಿ ಶಿವಲಿಂಗೇಶ್ವರನ ಅಂಕಿತವನ್ನು ನಮೂದಿಸಿದ್ದಾರೆ. ಕೆಲವು ಪ್ರಕಾರಗಳಿಗೆ ಮಹಿಬೂಬ ಸುಭಾನಿ ಮತ್ತು ಗಗನಶಹಾವಲಿಯ ಹೆಸರುಗಳನ್ನು ಹಾಕಿದ್ದಾರೆ. ಸಾವಳಗಿ ಶಿವಲಿಂಗೇಶ್ವರರನ್ನು ಅವರು “ಸಿದ್ಧ ಶಕ್ತಿ”ಯೆಂದು ನಂಬಿದ್ದಾರೆ. ಹೀಗಾಗಿ ಅವರ ಹಾಡುಗಳಲ್ಲಿ “ಸಾವಳಗಿ ಸಿದ್ಧ” ಎಂಬ ಅಂಕಿತವೂ

ಬರುತ್ತದೆ. ಕೆಲವು ಪದ್ಯಗಳಿಗೆ ಸ್ವನಾಮದ ಅಂಕಿತವೂ ಹಾಕಿದ್ದಾರೆ. ದೇವರ ಹೆಸರೇ ಇರಲಿ, ಸ್ವನಾಮವೇ ಇರಲಿ, ತಮ್ಮ ಊರನ್ನು ಅವರು ಹೆಚ್ಚಿನ ಹಾಡುಗಳಲ್ಲಿ ನಮೂದಿಸದೆ ಬಿಟ್ಟಿಲ್ಲ.

ನಬಿಲಾಲರಿಗೆ ಕರ್ನಾಟಕ ಸರಕಾರವು ಮಾಶಾಸನ ನೀಡಿದೆ. ರಾಜ್ಯ ಜಾನಪದ, ಯಕ್ಷಗಾನ ಅಕಾಡೆಮಿ ಪ್ರಶಸ್ತಿಯೂ ನೀಡಿ ಕ್ರಿ.ಶ. ೨೦೦೪ರಲ್ಲಿ ಗೌರವಿಸಿದೆ. ಕನ್ನಡ-ಸಂಸ್ಕೃತಿ ನಿರ್ದೇಶನಾಲಯದವರು ನಬಿಲಾಲರ "ಬಹುಮುಖ ಪ್ರತಿಭೆಯ ವ್ಯಕ್ತಿತ್ವ"ಕ್ಕೆ ಮನ್ನಣೆಯನ್ನು ನೀಡಿದ್ದಾರೆ.

ನಬಿಲಾಲರು ಹಲವಾರು ಜನ ವೀರಶೈವ ಶರಣ-ಸಂತರ ಬಗೆಗೆ ಹಾಡುಗಳನ್ನು ಬರೆದಿರುವರು. ಇನ್ನೊ ಬರೆಯುತ್ತಲೇ ಇದ್ದಾರೆ. ಅವರ ಎರಡು ಪದ್ಯಗಳನ್ನು ಉದಾಹರಣೆಗಾಗಿ ಎತ್ತಿಕೊಳ್ಳಲಾಗಿದೆ:

ಶರೀರವೆಂಬ ಹೊಲ ಹಸನ ಮಾಡು

ಒಕ್ಕಲಿಗರ ರೈತ ರುಕ್ಕಣ್ಣ
ಮುಕ್ಕಣ್ಣನ ಧ್ಯಾನ ಅಕ್ಕರೆಯಿಂದ ಮಾಡಬೇಕಣ್ಣ ॥ ಪ ॥

ಶರೀರವೆಂಬ ಹೊಲ ಮಾಡಪ್ಪ ಹಸನ
ಪರತತ್ವದ ತಿಳಿಯೋ ಖೂನ
ಅರಿತು ಮೋಕ್ಷದ ಫಲವನ್ನ
ಪ್ರೀತಿಲಿಂದ ಮಾಡೋ ಪಾವನ ॥ ೧ ॥

ಶಮ ದಮೆ ಎರಡು ಎತ್ತುಗಳ ಸಮಾನ
ಪ್ರೇಮಲಿಂದ ಕಟ್ಟುವ ಜಾಣ
ನಿರ್ಮಲವಾದ ಎಂಬ ಮನಸ್ಸಿನ
ನೇಮಲಿಂದ ನೇಗಿಲ ಹೂಡಣ್ಣ ॥ ೨ ॥

ನಾನು ನನ್ನದು ಅನ್ನಬ್ಯಾಡ ನೀನ
ಹೀನ ಅಹಂಕಾರ ಮಮಕಾರ ಗುಣ
ಇನ್ನ ಕಳಿಯೋ ಈ ಕಸವನ್ನ
ನಾನಾ ತರಹದ ಗೊಬ್ಬರ ಚೆಲ್ಲಣ್ಣ ॥ ೩ ॥

ಪೂಜ್ಯ ಗುರುವಿನ ಉಪದೇಶ ಘನ
ಬೀಜ ಬಿತ್ತೋ ಇಲ್ಲದೆ ಅನುಮಾನ
ನಿಜ ಸಂಸ್ಕಾರ ಎಂಬ ಧೂಳಿನ
ಭಜಿಸಿ ಶಿವನೀಗಿ ಬೇಡೋ ಅನುದಿನ ॥ ೪ ॥

ತಿಳಿವಳಿಕೆ ಎಂಬ ನಾಚಿಕೆ ಸಣ್ಣ
ಬೆಳೆಸಿ ಅದರ ಮಾಡಪ್ಪ ಜತನ
ಮೂಳ ಗುಣದ ಪಾಪ ಹುಲ್ಲಿನ
ಗೊಳಿಯಾಗಿ ಕಿತ್ತೊ ಇಡಬ್ಯಾಡ ಖೂನ ॥ ೫ ॥

ಸ್ಥಿರವಾದ ಮುಕ್ತಿ ಧ್ಯಾನ ಅನ್ನ
ಅತಿ ಪ್ರೀತೀಲಿ ಬೆಳೆಸುವ ತರುಣ
ಸ್ತುತಿಸಿ ತ್ರೀಲೋಚನನನ್ನ
ತುತ್ತು ಬಾಯಾಗಿಟ್ಟು ಮಾಡೋ ಭೋಜನ ॥ ೬ ॥

ಸಂಸಾರ ಎಂಬೋ ಭವದ ಬಂಧನ
ಜೈಸಿ ಹೋಗುದು ಬಹಳೇ ಕಠಿಣ
ದೇಶದೊಳು ಹಿಪ್ಪರಗಾ ಸ್ಥಾನ
ಈಗ ಸಾವಳಗಿ ಸಿದ್ಧನ ಕರುಣ ॥ ೭ ॥

(ಬೀದರ ಜಿಲ್ಲೆಯ ಅನುಭಾವಿ ಕವಿಗಳು. ಪು.೧೮೦-೧೮೧)

ಭವ ಚಿಂತಿ ಬಿಡು ಮನವೆ

ಭವಚಿಂತಿ ಬಿಡು ಮನವೆ
ಶಿವ ಚಿಂತಿ ಹಿಡಿ ॥ ಪ ॥

ಭವದ ಕೆಸರ ಬಲು ಘೋರ
ಅದರಿಂದ ನೀನು ಹೆಂಗಾದಿ ಪಾರ
ಮನೋಹರ ಮಹಾದೇವನ ಸಾರ
ತಿಳಿಲಿಲ್ಲ ನಿನಗ ಮಜಕೂರ ॥ ೧ ॥

ಬರುವಾಗ ಕೈ ಖಾಲಿ ಇಟಗೊಂಡು ಬಂದಿ
ಇರುವಾಗ ಎಲ್ಲವ ನಂದೆ ನಂದೆ ಅಂದಿ
ಭವದಾಗ ಬಿದ್ದು ಹೊರಳಾಡುತೀದಿ
ನರಜನ್ಮ ನೀಗು ನೀ ಹರ ನಾಗುತೀದಿ ॥ ೨ ॥


ಹೆಂಡತಿ ಚಿಂತ್ಯಾಗ ಸೊರಗ್ಹೋದಿ ನೀ ।
ಮಕ್ಕಳ ಚಿಂತ್ಯಾಗ ಕೊರಗ್ಹೋದಿ
ಹಣ-ಹಣ ಎಂದು ನೀ ಬಾಯಿ ತೆರದಿ
ಭವಾದಾಗ ಬಿದ್ದು ನೀ ಶಿವನ ಮರದಿ ॥ ೩ ॥

ಶಿವ ಚಿಂತಿಯ ನೀ ಶಿವನಾಗುತಿ
ಭವದ ಭಾದೆ ನೀಗುತಿ
ದೇಶದೊಳು ಹಿಪ್ಪರಗಾವೆ ಗತಿ
ಅಲ್ಲಿ ಸಾವಳಗಿ ಸಿದ್ಧನು ಹಾನ ಪ್ರೀತಿ ॥ ೪ ॥


(ಸ್ವತಃ ಕವಿಗಳೇ ಈ ವಿವರಗಳನ್ನು ನೀಡಿದ್ದಾರೆ.)




ಹಾರಕೂಡ ಹಿರೇಮಠದ ಸಧ್ಯದ ಪೀಠಾಧಿಪತಿಗಳಾಗಿರುವ
ಶ್ರೀ. ಷ.ಬ್ರ.ಚೆನ್ನವೀರ ಶಿವಚಾರ್ಯರಿಂದ
ನಬಿಲಾಲರಿಗೆ ಸನ್ಮಾನ.



ನಬಿಲಾಲ ಅವರ ಮನೆ (ಬಾಗ ಹಿಪ್ಪರಗಾ).




ನಬಿಲಾಲರ ಮಗ ಜಿಲಾನಿ - ಸೊಸೆ ಹಜರತಬಿ.




ನಬಿಲಾಲರ ಆರಾಧ್ಯ ದೇವರಾದ ಗಗನ ಶಹಾವಲಿ ಅವರ ದರ್ಗಾ (ಬಾಗಹಿಪ್ಪರಗಾ)



ನಬಿಲಾಲರ ಆರಾಧ್ಯ ದೇವರಾದ ಶ್ರೀಶಿವಲಿಂಗೇಶ್ವರ ಮಠ
(ಸಾವಳಗಿ)



ಮಠದ ಒಳಾಂಗಣ ನೋಟ



ಶಿವಲಿಂಗೇಶ್ವರ ದರ್ಶನ ಮೂರ್ತಿ.



ಶಿವಲಿಂಗೇಶ್ವರ ಮಠದಲ್ಲಿರುವ ಮಹಾ ದಾಸೋಹ ಮನೆ.

೨೨. ರಾಣಪ್ಪ ಕೋಟೆ (ಕ್ರಿ.ಶ.ಸು. ೧೯೩೫)

ಪೂರ್ವಾಶ್ರಮದಲ್ಲಿ ದಲಿತ ಜನಾಂಗಕ್ಕೆ ಸೇರಿದ ರಾಣಪ್ಪನವರು ಇಂದು ಸಂಪೂರ್ಣವಾಗಿ ತಮ್ಮನ್ನು ಬುದ್ಧನ ಸನ್ನಿಧಿಗೆ ಅರ್ಪಿಸಿಕೊಂಡು ಬೌದ್ಧ ಭಿಕ್ಷುವಾಗಿದ್ದಾರೆ. ಬುದ್ಧ ಮತ್ತು ಬಾಬಾ ಸಾಹೇಬ ಅಂಬೇಡ್ಕರ ಅವರ ತತ್ತ್ವಗಳನ್ನು ಪ್ರಸಾರ ಮಾಡುತ್ತ ಅವರು ಸಮಾಜದಲ್ಲಿ ಜಾಗ್ರತಿಯನ್ನುಂಟು ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ. ಸಧ್ಯ ಅವರ ವಯಸ್ಸು ಸು. ೭೬ ವರ್ಷ. ಈ ವಯಸ್ಸಿನಲ್ಲೂ ಅವರು ತತ್ತ್ವಪ್ರಸಾರಕ್ಕಾಗಿ ಊರಿನಿಂದ ಊರಿಗೆ ಅಲೆದಾಡುತ್ತಾರೆ. ಬೌದ್ಧ ಧರ್ಮದ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ಬುದ್ಧನ ಬಗೆಗೆ ಪ್ರವಚನ ಮಾಡುತ್ತಾರೆ. ಅಂಬೇಡ್ಕರ ಅವರ ವಿಚಾರ ಧಾರೆಗಳನ್ನು ಅತ್ಯಂತ ಸರಳವಾದ ನುಡಿಯಲ್ಲಿ ಸಾಮಾನ್ಯರಿಗೆ ತಿಳಿಸುತ್ತಿದ್ದಾರೆ.

ರಾಣಪ್ಪನವರ ಮೂಲಸ್ಥಳ ಸರಜೋಳಗಾ (ಜವಳಗಾ). ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ಚಿಕ್ಕ ಗ್ರಾಮ. ರಾಣಪ್ಪನವರ ತಂದೆ ಹುಸನಪ್ಪ. ತಾಯಿ ಬಸಮ್ಮ. ಹುಸನಪ್ಪನವರು ಕೃಷಿಕ. ಹಿಂದೂ ಸಂಸ್ಕೃತಿಯಲ್ಲಿಯೆ ಬದುಕಿದವರು. ತಕ್ಕ ಮಟ್ಟಿಗೆ ಶರಣ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದವರು.

ರಾಣಪ್ಪನವರು ಸ್ವಲ್ಪ ಶಿಕ್ಷಣ ಪೂರೈಸಿದ್ದಾರೆ. ಓದುವುದಕ್ಕೆ ಬರೆಯುವುದಕ್ಕೆ ಬರುತ್ತದೆ. ಲೋಕ ವ್ಯವಹಾರದ ಸಂಪರ್ಕದಿಂದ ಅವರು ಹಿಂದಿ-ಮರಾಠಿ ಭಾಷೆಗಳನ್ನು ಕರಗತ ಮಾಡಿಕೊಂಡಿದ್ದಾರೆ. ಇಂದು ಅವರ ಕನ್ನಡದ ಶಿಷ್ಯರಿಗೆ ಕನ್ನಡದಲ್ಲಿ; ಹಿಂದಿ ಭಾಷೆ ಬಲ್ಲವರಿಗೆ ಹಿಂದಿಯಲ್ಲಿ, ಮಹಾರಾಷ್ಟ್ರದ ಸ್ಥಳಗಳಲ್ಲಿ ಮರಾಠಿಯಲ್ಲಿ ಬೌದ್ಧಧರ್ಮ ವಿಚಾರಗಳನ್ನು ತಿಳಿಸುತ್ತಾರೆ.

ರಾಣಪ್ಪನವರ ಪತ್ನಿ ಲಕ್ಷ್ಮಿಬಾಯಿ. ವ್ಯವಹಾರ ಕುಶಲತೆಯುಳ್ಳವರು. ತಮ್ಮ ಪತಿಗೆ ಬೌದ್ಧಧರ್ಮ ಪ್ರಸಾರಕ್ಕೆ ಅನುವು ಮಾಡಿಕೊಟ್ಟು, ಮನೆತನದ ಜವಾಬ್ದಾರಿಯನ್ನು ಲಕ್ಷ್ಮಿಬಾಯಿ ಅವರು ಹಸನ್ಮುಖರಾಗಿ ನಿರ್ವಹಿಸುತ್ತಿದ್ದಾರೆ. ಈ ದಂಪತಿಗಳಿಗೆ ಒಟ್ಟು ಆರು ಜನ ಮಕ್ಕಳು. ಮೂವರು ಗಂಡು-ಮೂವರು ಹೆಣ್ಣುಮಕ್ಕಳು. ಇಂದು ಗಂಡುಮಕ್ಕಳು ದುಡಿಯುವವರಾಗಿದ್ದಾರೆ. ಹೀಗಾಗಿ ರಾಣಪ್ಪನವರಿಗೆ ಅಷ್ಟಾಗಿ ಮನೆಯ ಹೊಣೆಗಾರಿಕೆ ಹೊರಬೇಕಾದ ಅವಶ್ಯಕತೆ ಕಾಣಲಾರದು, ಆದುದರಿಂದಲೇ ಅವರು ಸಂನ್ಯಾಸ ದೀಕ್ಷೆಯನ್ನು ಸ್ವೀಕರಿಸಿದ್ದಾರೆ. ಮನೆತನವು ಆರ್ಥಿಕ ದೃಷ್ಟಿಯಿಂದ ತಕ್ಕ

ಮಟ್ಟಿಗೆ ಒಳ್ಳೆಯ ಸ್ಥಿತಿಯಲ್ಲೇ ಇದೆ. ಹಿಟ್ಟಿನ ಗಿರಣಿಯಿಂದ ಬರುವ ಉತ್ಪನ್ನ; ಮಕ್ಕಳ ದುಡಿಮೆಯಿಂದ ಬರುವ ಉತ್ಪನ್ನ ಇವು ರಾಣಪ್ಪನವರ ಬದುಕಿನ ಆರ್ಥಿಕ ಸಂಪನ್ಮೂಲಗಳಾಗಿವೆ.

ರಾಣಪ್ಪನವರಿಗೆ ಇಂದು ಬುದ್ಧ ದೇವನೆ ಆರಾಧ್ಯದೇವರು. ಡಾ.ಬಾಬಾ ಸಾಹೇಬ ಅಂಬೇಡ್ಕರರೆ ಮಾರ್ಗದರ್ಶಕರು. ಅವರ ನುಡಿಗಳಲ್ಲಿಯೇ ರಾಣಪ್ಪನವರ ಜೀವನದ ಪರಿಕ್ರಮವನ್ನು ಕೇಳಬಹುದಾಗಿದೆ:

"ನಾನು ಮೊದಲಿಗೆ ಅಂದರೆ ಬೌದ್ಧ ಧರ್ಮದ ದೀಕ್ಷೆ ಹೊಂದುವುದಕ್ಕಿಂತ ಮೊದಲಿಗೆ ಒಂದಿಷ್ಟು ಶರಣರ ಚಿಂತನೆಗಳನ್ನು ಓದಿದ್ದೇನೆ. ಹಲವಾರು ಶರಣರೊಡನೆ ಚಿಂತನೆ ಮಾಡಿದ್ದೇನೆ. ಅವರ ವಚನಗಳನ್ನು ಅಭ್ಯಾಸ ಮಾಡಿದ್ದೇನೆ. ಹೀಗಾಗಿ ನನ್ನ ಮನದ ಯಾವುದೋ ಭಾಗದಲ್ಲಿ ಶರಣರ ವಿಚಾರದ ಮಿಂಚು ಮಿಂಚುತ್ತಲಿದೆ. ಕಾಲಾಂತರದಲ್ಲಿ ನನಗೆ ಬೌದ್ಧ ಧರ್ಮದ ಆಕರ್ಷಣೆಯಾಯಿತು. ಡಾ. ಬಾಬಾ ಸಾಹೇಬರ ಸಾಹಿತ್ಯವನ್ನು ಹೆಚ್ಚು-ಹೆಚ್ಚು ಓದ ತೊಡಗಿದಂತೆ, ಅವರ ವಿಚಾರ ಧಾರೆಗೆ ಮನ ಸೋತೆನು. ಈಗ ನಾನು ಪೂರ್ಣ ಸಂನ್ಯಾಸಿಯಾಗಿದ್ದೇನೆ. ಬುದ್ಧನ ಕರುಣೆ ನನಗೆ ಆಗಿದೆ. ಬಾಬಾ ಸಾಹೇಬರ ವಿಚಾರದಿಂದ ನಡೆಯಬೇಕಾದ ಜೀವನದ ದಾರಿ ನನಗೆ ಸರಿಯಾಗಿ ಕಂಡಂತಾಗಿದೆ. ಈಗ ನಾನು ಬೌದ್ಧ ಧರ್ಮಪಥಾನು ಕ್ರಮಿತನಾಗಿದ್ದೇನೆ. ಬುದ್ಧನ ತತ್ತ್ವಗಳು ಜನರ ಮನದಲ್ಲಿ ಶಾಶ್ವತವಾಗಿ ಉಳಿಯ ಬೇಕೆಂಬ ಬಯಕೆ ನನ್ನದು. ಬುದ್ಧನ ತತ್ತ್ವಗಳನ್ನು ತಿಳಿದರೆ ಶರಣರ ತತ್ತ್ವಗಳು ತಿಳಿದಂತೆ ಆಗುತ್ತದೆ. ನಾನು ಬುದ್ಧನ ಬೆಳಕಿನಲ್ಲಿ ಶರಣರನ್ನು ನೋಡುತ್ತೇನೆ. ಬುದ್ಧ-ಬಾಬಾ ಸಾಹೇಬರು ನನ್ನ ಜೀವನದ ಎರಡು ಶಕ್ತಿಗಳು. ಬುದ್ಧನಿಂದ ಕೋಟ್ಯಾನು ಕೋಟಿ ಜನರು ಬೆಳಕು ಕಂಡಿದ್ದಾರೆ; ಕಾಣುತ್ತಲಿದ್ದಾರೆ. ಅಂಥವರಲ್ಲಿ ನಾನು ಒಬ್ಬನು.

ನಾನು ಬುದ್ಧನಿಗೆ ಶರಣಾಗಿದ್ದೇನೆ; ಅವನ ಧರ್ಮಕ್ಕೆ ಶರಣಾಗಿದ್ದೇನೆ; ಅವನ ಸಂಘಕ್ಕೆ ಶರಣಾಗಿದ್ದೇನೆ. ಬೌದ್ಧ ಧರ್ಮದ ಅನುಯಾಯಿಗಳೆಲ್ಲರೂ ಇದೇ ರೀತಿಯ ಆಚರಣೆ ಉಳ್ಳವರಾಗಿದ್ದಾರೆ".

ರಾಣಪ್ಪನವರು ನೂರಾರು ತತ್ತ್ವಪದಗಳನ್ನು ಬರೆದಿದ್ದಾರೆ. ಹೆಚ್ಚಿನ ಪದ್ಯಗಳು ಬುದ್ಧ-ಅಂಬೇಡ್ಕರರನ್ನು ಕುರಿತವುಗಳಾಗಿವೆ. ಕೆಲವು ತತ್ತ್ವವಾಚಿಯಾದ ಹಾಡುಗಳೂ ಅವರಲ್ಲಿವೆ. ಇಲ್ಲಿ ಒಂದೆರಡು ಪದ್ಯಗಳನ್ನು ನೋಡಬಹುದಾಗಿದೆ:

ನಿಜವು ತೋರಿದ ಧರ್ಮ

ನಿಜವು ತೋರಿತು ನನಗೆ ಧರ್ಮ
ನಿಜದಿ ಇದುವೆ ನಿತ್ಯದ ಧರ್ಮ ॥ ಪ ॥

ಬುದ್ಧನಿಗೆ ನಾನು ಶರಣಾದೆ
ಧರ್ಮಕ್ಕೆ ನಾನು ಶರಣಾದೆ
ಸಂಘಕ್ಕೆ ನಾನು ಶರಣಾದೆ
ಬುದ್ಧನ ನೀತಿಗೆ ಶರಣಾದೆ ॥ ೧ ॥

ಬುದ್ಧನಿಂದಲೇ ಬೆಳಕು ಕಂಡಿತು
ಅರಿವು ಮೂಡಿತು ಮರೆವು ಹೋಯಿತು
ಆಶೆ ಬಂಧನ ಕಡಿದು ಹೋಯಿತು
ಸುಖದ ನೆಲೆಯ ಬೆಳಕು ತೋರಿತು ॥ ೨ ॥

ಭಗವಾನನ ನಮಿಸುವೆ
ಬುದ್ಧ ಬಗವಾನಗೆ ನಮಿಸುವೆ
ಪ್ರಜ್ಞೆವಂತನಿಗೆ ಶರಣೆನುವ
ಸತ್ಯಶೀಲದ ಧೀರನಿಗೆ ವಂದಿಸುವೆ ॥ ೩ ॥

ಬುದ್ಧ ದೇವನ ತತ್ವದ ಮೂಲ ತಿಳಿಯೋಣ
ಅಂತರಂಗದಲ್ಲಿ ನಾವು ಪ್ರೀತಿ ಕಾಣೋಣ
ಜೀವ ಜಂತುಗಳಿಗೆಲ್ಲ ಒಳಿತು ಮಾಡೋಣ
ಬುದ್ಧ ನಿನಗೆ ನಮೋ ಎಂದು ನಮಿಸೋಣ ॥ ೪ ॥

ಹಿಂಸೆ ಬಿಡಿಸಿದ ಬುದ್ಧದೇವ
ಅಹಿಂಸೆ ಹಿಡಿಸಿದ ಬುದ್ಧದೇವ
ನಾವೆಲ್ಲ ಹೋಗೋಣ ದೀಕ್ಷಾ ಭೂಮೀಗಿ
ನಾವೆಲ್ಲ ಬೇಡೋಣ ಬುದ್ಧನಿಗೆ ಶರಣಾಗಿ ॥ ೫ ॥

ಹತ್ತು ದೇವರ ಡೊಂಬರಾಟ ಸಾಕು
ಹೊಟ್ಟೆ ಪಾಡೀನ ಧರ್ಮ ನೀತಿ ಸಾಕು

ಅಂಧ ಶ್ರದ್ಧೆ ಅಳಿದು ನೀ ಹಾಕು
ಬುದ್ಧನ ತತ್ತ್ವವು ಇಂದೆಮಗೆ ಬೇಕು ॥ ೬ ॥

ಧರೆಯೊಳಗ ಮೆರೆವ ಸರಜೋಳಗ ಊರ
ಅಲ್ಲಿ ಹಾನ ರಾಣಪ್ಪ ಬುದ್ಧನ ಪಾರಾ
ಬುದ್ಧನ ಕೊರಳಿಗೆ ಹೂವಿನ ಹಾರಾ
ಸಿದ್ಧಿಯ ಬೇಡೋಣ ಗಯಾಕ ಬಾರಾ ॥ ೭ ॥

ಕಲಿಯುಗ ಕೆಟ್ಟಿತ್ತು

ಕಲಿಯುಗ ಕೆಟ್ಟಿತ್ತ ನೋಡಣ್ಣಾ ಕರ್ಮಾವ ತುಂಬಿ ॥ ಪ ॥

ಹದಿನೆಂಟು ಜಾತಿ ಹದಗೆಟ್ಟಿ ಹೋದವು
ಹಲಕಟ್ಟಿ ಜನರು ಜಗದಾಗ ಬಹಳ
ತಂಗಳ ರೊಟ್ಟಿ ಮೇಲೆ ಖಾರಾ ಸಿಗುವುದಿಲ್ಲ
ಊರಾಗ ತಿರುಗುವರು ಉಡಾಳರು ಬಹಳ ॥ ೧ ॥

ಊರು ಕೇರಿಯಲ್ಲಿ ಉದ್ಧಾಟ ಬಹಳ
ಹಾದಿ ಬಟ್ಟೆಯಲ್ಲಿ ಬಡದಾಟ ಬಹಳ
ಸಂಧಿ ಸಂಧಿಯಲ್ಲಿ ಕಡದಾಟ ಬಹಳ
ಛೀಮಾರಿ ಮಂದಿಗೆ ಕಿಮ್ಮತ ಬಹಳ ॥ ೨ ॥

ಊರ ಮಂದಿ ಊಗಳಿದರ ಮೂರ ಮಂದಿಗಿ ಅಂತಾರ
ಲಂಚಾ ತಿಂದು ನ್ಯಾಯ ಹೇಳೋರು ಬಹಳ
ಉತ್ತಮರಿಗೆ ಕೆಡಿಸುವರು ಬಹಳ
ದುಡ್ಡಿನ ಸೂಳ್ಯಾರು ಮಾಡವರು ಹಾಳ ॥ ೩ ॥

ಊರಗ ಹೆಣ್ಣುಮಕ್ಕಳು ಸ್ವಾದ ಇಲ್ಲ ಸ್ಥಾನ ಇಲ್ಲ
ನೆರೆ ಮನೆಯರು ಕೂಡ ಹುಡುಕಾಟ ಬಹಳ
ಸಡಗರ ಸಂಪತ್ತು ಗಂಡಾನ ಬಿಟ್ಟು ಮಿಂಡನ
ಬೆನ್ನು ಹತ್ತಿ ತಿರುಗುವರು ಬಹಳ ॥ ೪ ॥

ಖರೆ ಮಾತೀಗೆ ಒಂದು ಕವಡಿ ಸಿಗಲಿಲ್ಲಾ
ಸುಳ್ಳು ಮಾತೀಗೆ ಜನ ಮೆಚ್ಚುದು ಬಹಳ
ದೇಶದೊಳಗೆ ನಮ್ಮ ವಾಸುಳ್ಳ ಸರ ಜೋಳಗ
ಕವಿ ಕೋಟೆ ಮಾಸ್ತರ ಹೇಳಿರುವುದು ಭೀಮನ ಪ್ರಭಾವ ಬಹಳ ॥ ೫ ॥

ದುಡಿದವರಿಗೆ ಫಲ ಸಿಗಲಿ

ನೀ ಸೊಂಬೇರಿಯಾಗಿ ಯಾಕ ಕುಂತಿ
ದುಡಿಲಾರದೆ ಫಲ ಬೇಕಂತಿ ॥ ಪ ॥

ದೇವರ ದೇವರ ಜಪಿಸುತ ಕುಂತರ
ಅನ್ನವ ಸಿಕ್ಕುವದೇನಾ ?
ಕೆಲಸವು ದೇವರ ಪೂಜೆಯ ಅಂದರೆ
ತಿನ್ನಾಕೆ ಕಡಿಮೇನಾ ? ॥ ೧ ॥

ಹೊನ್ನವು ಬೇಕಂತಿ
ಚೆನ್ನಾಗಿ ರೊಕ್ಕಾ ಗಳಿಸಿನಂತಿ
ದುಡಿದವರಿಗೆ ಫಲ
ದುಡಿವದು ಒಂದೇ ಛಲ ॥ ೨ ॥

ದೇವರು ಹೇಳುವನು ದುಡಿ ದುಡಿಯೆಂದು
ಬುದ್ಧನು ಹೇಳಿದ ದುಡಿಮೆಯಲಿ ನಿಂದು
ದುಡಿದವರಿಗೆ ಫಲವು ಸಿಗಲಿ
ಅವರ ಬದುಕಲಿ ಬೆಳಕು ಬರಲಿ ॥ ೩ ॥

ದುಡಿತದ ಮನೆಯು ದೇವರ ಗುಡಿಯು
ದುಡಿತದ ಕೈ ಬುದ್ಧನ ಪೂಜೆಯ ಕೈಯು
ದುಡಿಮೆಯಲ್ಲಿಯೇ ದೇವರ ಹುಡುಕ
ರಾಣಪ್ಪನ ನುಡಿ ಕಡಕು ಕಡಕು ॥ ೪ ॥

(ಸ್ವತಃ ಕವಿಗಳೆ ವಿವರಗಳನ್ನು ಒದಗಿಸಿರುವರು.)

□



ರಾಣಪ್ಪ ಕೋಟೆ ಅವರ ಮನೆ (ಸರಜೋಳಗಾ).



ರಾಣಪ್ಪನವರ ಪತ್ನಿ ಲಕ್ಷ್ಮಿಬಾಯಿ.



ಬೌದ್ಧ ಭಿಕ್ಷುವಾಗಿರುವ ರಾಣಪ್ಪನವರು ಭಕ್ತ-ಶಿಷ್ಯ ಸಮೂಹದ ನಡುವೆ.

೨೩. ಡಾ. ಮಾಣಿಕರಾವ ಧನಾಶ್ರೀ (ಕ್ರಿ.ಶ. ೧೯೩೬)

ಆಂಧ್ರ ಪ್ರದೇಶದ ನೆಲೆಯಲ್ಲಿರುವ ಧನಾಶ್ರೀ ಎಂಬ ಗ್ರಾಮವು ಇಂದು ಜಹಿರಾಬಾದ ತಾಲ್ಲೂಕಾ ಮತ್ತು ಮೆದಕ್ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುತ್ತದೆ. ಇದೊಂದು ಚರಿತ್ರೆಯುಳ್ಳ ಪ್ರಾಚೀನ ಗ್ರಾಮ. ಇದಕ್ಕೆ ಮಲ್ಲಿಕಾರ್ಜುನ - ಹನುಮಾನ ದೇವಾಲಯದಲ್ಲಿರುವ ಶಾಸನಗಳು ಸಾಕ್ಷಿ ಹೇಳುತ್ತವೆ. ಇದು ಕನ್ನಡ ಪ್ರದೇಶವಾಗಿರುವ ಹುಮನಾಬಾದ ತಾಲ್ಲೂಕಿನ ಗಡಿಯಾದ ಭಂಗೂರದಿಂದ ಸು. ಐದು ಕಿ.ಮೀ.ಗಳಷ್ಟು ದೂರವಾಗಿದೆ. ಇಂದು ನಾವು ಧನಾಶ್ರೀ ಗ್ರಾಮಕ್ಕೆ ಹೋದರೆ ಅಲ್ಲಿ ಕನ್ನಡ-ಮರಾಠಿ-ತೆಲಗು ಭಾಷೆಗಳ ಸಂಗಮ ಕಾಣುವಂತಾಗುತ್ತದೆ. ಏಳುವರೆ ದಶಕಗಳ ಪೂರ್ವದಲ್ಲೂ ಇದೇ ವಾತಾವರಣವಿದ್ದಿತು. ಅಂತಹ ಸಂದರ್ಭದಲ್ಲಿ ಧನಾಶ್ರೀ ಗ್ರಾಮದ ಹಲವು ಕನ್ನಡದ ಮನಸ್ಸುಗಳು ಆ ಪ್ರದೇಶದಲ್ಲಿ ಕನ್ನಡದ ದೀಪವು ಬೆಳಗುವಂತೆ ಮಾಡಿದವು. ಅವರಲ್ಲಿ ಪ್ರಮುಖರಾದವರೆಂದರೆ ವೀರಪ್ಪನವರು ಮತ್ತು ಅವರ ಮಗ ವಿರೂಪಾಕ್ಷಪ್ಪ ಧನಾಶ್ರೀ ಅವರು.

ವೀರಪ್ಪನವರು ಎಲ್ಲ ವ್ಯವಹಾರ ಕನ್ನಡದಲ್ಲಿಯೇ ಮಾಡುತ್ತಿದ್ದರು. ತಮ್ಮ ತಂದೆಯಂತೆ ವಿರೂಪಾಕ್ಷಪ್ಪನವರು ಶರಣ ಜೀವಿಗಳು, ಸಾತ್ವಿಕ ಮನದವರು, ಬದುಕಿನ ನಿರ್ವಹಣೆಗೆಂದು ಕೃಷಿ ಕಾಯಕದೊಂದಿಗೆ ವ್ಯಾಪಾರವನ್ನು ಮಾಡುತ್ತ ಸಮಾಜ ಸೇವೆಗೆಂದು ಜೀವಿಸಿದವರು. ವಿರೂಪಾಕ್ಷಪ್ಪನವರ ಪತ್ನಿ ಸಿದ್ಧಮ್ಮನವರು ಪತಿಯ ಹಿಂದಿನ ಶಕ್ತಿಯಾಗಿ ನಿಂತು, ಸಂಸಾರ ನಿರ್ವಹಣೆಗೆ ಸಾರವತ್ತಾದ ಸತ್ವವನ್ನು ಒದಗಿಸಿದವರು. ಸುಸಂಸ್ಕೃತ ಮನದ ಈ ದಂಪತಿಗಳಿಗೆ ಮೂವರು ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳು ಜನಿಸಿದರು. ಅವರಲ್ಲಿ ಹಿರಿಯರೆ ಮಾಣಿಕರಾವ ಅವರು. ದಿ. ೧೭.೦೯.೧೯೩೬ ರಂದು ಜನಿಸಿದ ಮಾಣಿಕರಾವ ಅವರು ಹೆಸರಿಗೆ ತಕ್ಕಂತೆ 'ಮಾಣಿಕ'ವಾಗಿಯೇ ಬೆಳೆಯತೊಡಗಿದರು. ವಿರೂಪಾಕ್ಷಪ್ಪನವರು ತಮ್ಮ ಎಲ್ಲ ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನೇ ನೀಡಿದರು.

ಡಾ. ಮಾಣಿಕರಾವ ಧನಾಶ್ರೀ ಅವರ ಆರಂಭದ ವಿದ್ಯಾಭ್ಯಾಸವು ಸ್ವಗ್ರಾಮದಲ್ಲಿಯೇ ಮರಾಠಿ-ಉರ್ದು ಮಾಧ್ಯಮದಲ್ಲಿ ಆರಂಭವಾಯಿತು. ಪ್ರಾಥಮಿಕ ಶಾಲೆಯ ಗುರುಗಳು ಮಾಣಿಕರಾವ ಅವರನ್ನು "ನಮ್ಮ ಶಾಲೆಯ ನಿಜವಾದ

ಮಾಣಿಕ್ಯ" ಎಂದು ಹೇಳುತ್ತಿದ್ದರು. ಬಾಲ್ಯದಲ್ಲಿಯೇ ಮಾಣಿಕರಾವ ಅವರು ತಮ್ಮಲ್ಲಿರುವ ಪ್ರತಿಭಾ ಶಕ್ತಿಯ ಮುಖಗಳನ್ನು ತೋರುತ್ತ ಬೆಳೆದರು. ತಂದೆ ವಿರೂಪಾಕ್ಷಪ್ಪನವರಿಗೆ ತಮ್ಮ ಹಿರಿಯ ಮಗನ ಬಗೆಗೆ ಅಭಿಮಾನವಿದ್ದಿತು. ಭವಿಷ್ಯತ್ತಿನ ಉಜ್ವಲತ್ವದ ನಿರೀಕ್ಷೆಯೂ ಇಟ್ಟುಕೊಂಡಿದ್ದರು. ಮಾಣಿಕರಾವ ಅವರು ನೂರಕ್ಕೆ ನೂರರ ಮಟ್ಟದಲ್ಲಿ ತಂದೆ–ತಾಯಿಗಳ ಆಶೆಗಳನ್ನು ಸತ್ಯವಾಗಿಸುವ ದಿಶೆಯಲ್ಲಿ ಬೆಳೆದರು.

ಧನಾಶ್ರೀ ಗ್ರಾಮದ ಹಿರೇಮಠ, ಮಲ್ಲಿಕಾರ್ಜುನ ದೇವಾಲಯ ಮತ್ತು ಶಾಲೆ – ಇವು ಮಾಣಿಕರಾವ ಅವರ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದವು.

ಸಾವಿರಾರು ವರ್ಷಗಳಷ್ಟು ಹಳೆಯದಾದ ಹಿರೇಮಠವು ಇಂದಿನವರೆಗಿನ ಅವಧಿಯಲ್ಲಿ ಸು. ಮೂವತ್ತು ಜನ ಪೀಠಾಧಿಪತಿಗಳನ್ನು ಕಂಡಿದೆ. ಇದರ ಮೂಲ ಪುರುಷರು ಶಿವಲಿಂಗ ಶಿವಾಚಾರ್ಯರೆಂದು ಹೇಳಲಾಗುತ್ತದೆ. ಸಧ್ಯ ಮಠದ ಅಧಿಪತಿಗಳಾಗಿರುವವರು ಷ.ಬ್ರ.ಶ್ರೀ ವೀರೇಶ್ವರ ಶಿವಾಚಾರ್ಯರು. ಮಾಣಿಕರಾವ ಅವರಿಗೆ ಶ್ರೀ ಮಠವು ವೀರಶೈವ ಸಂಸ್ಕೃತಿಯ ದೀಕ್ಷೆಯನ್ನು ಕರುಣಿಸಿತು. ಹಿರೇಮಠದ ಹಿಂದಿನ ಶಿವಾಚಾರ್ಯರ ಮಾರ್ಗದರ್ಶನವು ಧನಾಶ್ರೀ ಅವರ ಜೀವನದಲ್ಲಿ ಬೆಳಕಾಯಿತು.

ಮಲ್ಲಿಕಾರ್ಜುನ ದೇವರು ಮಾಣಿಕರಾವ ಅವರ ಆರಾಧ್ಯ ದೇವರು. ಊರಲ್ಲಿ ಇರುವಾಗ ಅವರು ಶ್ರೀ ಮಠ ಮತ್ತು ಮಲ್ಲಿಕಾರ್ಜುನ ದೇವರ ದರ್ಶನ ಹೊಂದದೆ ಇರುತ್ತಿರಲಿಲ್ಲ. ಇವೆರಡೂ ಅವರ ಮನಃಶಾಂತಿಯ ಸ್ಥಲಗಳಾಗಿದ್ದವು. ಸಾಹಿತ್ಯ ಕೃಷಿಗೆ ಪ್ರೇರಣೆಯನ್ನು ಒದಗಿಸಿದವು.

ಧನಾಶ್ರೀ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿದ ಮಾಣಿಕರಾವ ಅವರ ನಡೆಯು ಉನ್ನತ ಶಿಕ್ಷಣ ಹೊಂದುವೆಡೆಗೆ ಕ್ರಿಯಾಶೀಲವಾಯಿತು. ಚಿಂಚೋಳಿ, ಹೈದರಾಬಾದು, ಕರ್ನಾಟಕ ವಿಶ್ವವಿದ್ಯಾಲಯ, ಗುಲ್ಬರ್ಗ ವಿಶ್ವವಿದ್ಯಾಲಯ –ಇವುಗಳ ವ್ಯಾಪ್ತಿಯಲ್ಲಿ ಅವರ ಉನ್ನತ ಶಿಕ್ಷಣದ ಹಂತಗಳು ಬೆಳೆದು ನಿಂತವು. ಬಿ.ಇಡಿ., ಎಂ.ಇಡಿ ಮತ್ತು ಸ್ನಾತಕೋತ್ತರ ಶಿಕ್ಷಣ, ಪಿಎಚ್.ಡಿ. ಪದವಿ – ಇವು ಅವರ ಒಟ್ಟು ಶಿಕ್ಷಣ ಹಾದಿಯಲ್ಲಿನ ಮುಖ್ಯ ಘಟ್ಟಗಳಾಗಿವೆ. ಕ್ರಿ.ಶ. ಸು. ೧೯೬೨ ರಿಂದ ೧೯೮೬ ರವರೆಗಿನ ಅವಧಿಯವರೆಗೆ ಅವರ ಜ್ಞಾನಾರ್ಜನೆಯ ಯಾತ್ರೆಯು ನಡೆದಿದೆ. "ಕನ್ನಡದಲ್ಲಿ ಕಾಲಜ್ಞಾನ ಸಾಹಿತ್ಯ" – ಎಂಬುದು ಅವರ ಪಿಎಚ್.ಡಿ. ಸಂಶೋಧನ ಅಧ್ಯಯನದ ವಿಷಯವಾಗಿದೆ. ಕ್ರಿ.ಶ. ೧೯೮೬ ರಲ್ಲಿ ಅವರು ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದುಕೊಂಡರು.

ಡಾ. ಮಾಣಿಕರಾವ ಧನಾಶ್ರೀ ಅವರ ಶಿಕ್ಷಕ ವೃತ್ತಿಯ ಪಯಣ ಆರಂಭವಾದುದು

ಬೀದರ ಜಿಲ್ಲೆಯ ಯಾಕತ್‌ಪುರ ಗ್ರಾಮದಿಂದ ಕ್ರಿ.ಶ. ೧೯೫೪ ರಲ್ಲಿ. ಮುಂದಿನ ದಿನಗಳಲ್ಲಿ ಅವರು ಪ್ರಾಥಮಿಕ ಹಂತದಿಂದ, ಪ್ರೌಢಶಾಲೆಯ ಶಿಕ್ಷಕರಾಗಿ, ಶಾಲೆಗಳ ಮೇಲ್ವಿಚಾರಣ ಅಧಿಕಾರಿಗಳಾಗಿ (IOS) ಕಾರ್ಯ ನಿರ್ವಹಿಸಿದರು.

ಕ್ರಿ.ಶ. ೧೯೬೮ ರಲ್ಲಿ ಡಾ. ಮಾಣಿಕರಾವ ಧನಾಶ್ರೀ ಅವರು ಗುಲ್ಬರ್ಗದ ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಬಸವಕಲ್ಯಾಣದಲ್ಲಿ ನಡೆಯುತ್ತಿದ್ದ ಎಸ್.ಎಸ್. ಖೂಬಾ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ನೇಮಕಗೊಂಡರು. ಕ್ರಿ.ಶ. ೧೯೮೬ ರಲ್ಲಿ ಅವರಿಗೆ ಕಲಬುರ್ಗಿ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯಕ್ಕೆ ವರ್ಗವಾಯಿತು.

ಧನಾಶ್ರೀ ಅವರು ನಲವತ್ತು ವರುಷಗಳ ಸಾರ್ಥಕವಾದ ಸೇವೆ ಸಲ್ಲಿಸಿದ ಧನ್ಯತಾ ಭಾವದಿಂದ ಕ್ರಿ.ಶ. ೧೯೯೫ ರಲ್ಲಿ ನಿವೃತ್ತರಾದರು. ಇಂದು ಅವರು ಕಲಬುರ್ಗಿಯ ಜಯನಗರ ಬಡಾವಣೆಯ ಕಾಯಕ ನಿಲಯದಲ್ಲಿ ನಿವೃತ್ತಿ ಬದುಕನ್ನು ಕಳೆಯುತ್ತಿದ್ದಾರೆ.

ಡಾ. ಮಾಣಿಕರಾವ ಅವರ ದಾಂಪತ್ಯ ಜೀವನವು ಸಂತೃಪ್ತಿ–ಸಮಾಧಾನದಿಂದ ಕೂಡಿದುದಾಗಿದೆ. ಸಹಧರ್ಮಿಣಿ ಕಮಲಾಬಾಯಿ ಅವರು ಶಾಂತ ಸ್ವಭಾವದವರು, ಸುಸಂಸ್ಕೃತ ಮನದವರು. ಈ ದಂಪತಿಗಳಿಗೆ ನಾಲ್ವರು ಗಂಡು ಮಕ್ಕಳು; ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಈಗ ಅವರೆಲ್ಲ ವಿವಾಹಗೊಂಡು ಒಳ್ಳೆಯ ಉದ್ಯೋಗಗಳನ್ನು ನಿರ್ವಹಿಸುತ್ತ ಸುಖದಿಂದ ಜೀವಿಸುತ್ತಲಿದ್ದಾರೆ.

ಡಾ. ಮಾಣಿಕರಾವ ಧನಾಶ್ರೀ ಅವರ ಸಾಂಸ್ಕೃತಿಕ–ಸಾಹಿತ್ಯಿಕ ಜೀವನವು ಐಹಿಕ ಬದುಕಿನಕ್ಕಿಂತಲೂ ಹಿರಿದಾದುದು: ಅಮೂಲ್ಯವಾದುದು. ಅವರಿಗೆ ಉರ್ದು, ತೆಲಗು, ಹಿಂದಿ, ಇಂಗ್ಲೀಷ ಭಾಷೆಗಳು ಓದುವುದಕ್ಕೆ ಬರುತ್ತವೆ, ಬರೆಯುವುದಕ್ಕೂ ಬರುತ್ತವೆ. ಅವರು ಒಳ್ಳೆಯ ವಾಗ್ಮಿಗಳು. ಶ್ರೇಷ್ಠ ಅನುವಾದಕರು. ಅತ್ಯುತ್ತಮ ಕವಿಗಳು: ಅನುಭಾವದ ಸಂಪತ್ತಿನ ತತ್ತ್ವಪದಕಾರರು. ಗೀತಗುಚ್ಛ, ಕಡ್ಡಾಯ ಶಿಕ್ಷಣದ ಕರೆ, ಹಾಡುತ್ತ ಕಲಿ, ಕಾವ್ಯಶ್ರೀ, ಜನಸೇವಕನ ವಚನಗಳು (ಸಂ), ಲಕ್ಷ್ಮೀಶನ ಕಾಳಗದ ಕಲಿಗಳು (ಸಂ), ಮರಕುಂದಿಯ ಬಸವಣ್ಣಪ್ಪನ ಭಜನೆ–ತತ್ತ್ವಪದಗಳು (ಸಂ), ಶರಣೆ ಸತ್ಯಕ್ಕನ ವಚನ–ನಿರ್ವಚನ ಮುಂತಾದವುಗಳು ಅವರ ಪ್ರಮುಖ ಕೃತಿಗಳಾಗಿವೆ.

ಡಾ. ಮಾಣಿಕರಾವ ಧನಾಶ್ರೀ ಅವರಿಗೆ ಹಲವಾರು ಪ್ರಶಸ್ತಿ–ಪುರಸ್ಕಾರ–ಗೌರವ–ಸನ್ಮಾನಗಳು ಪ್ರಾಪ್ತವಾಗಿವೆ. "ಶಾಲೆಗಳ ಅತ್ಯುತ್ತಮ ಪರಿವೀಕ್ಷಣಾಧಿಕಾರಿ" (ಕರ್ನಾಟಕ ಸರಕಾರ), "ಪುರಾಣ ಪ್ರವಚನ ಪ್ರವೀಣ" (ಕಲಬುರ್ಗಿಯ ಶರಣಬಸವೇಶ್ವರ ಸಂಸ್ಥಾನ), "ಕಾಯಕ ರತ್ನ" (ಮಹಾಂತ ಜ್ಯೋತಿ ಮತ್ತು ಉದಯೋನ್ಮುಖ ಬರಹಗಾರರ ಪ್ರತಿಷ್ಠಾನ, ಕಲಬುರ್ಗಿ) ಇವು ಕೆಲವು ಮುಖ್ಯ ಪ್ರಶಸ್ತಿಗಳಾಗಿವೆ.

ಡಾ. ಧನಾಶ್ರೀಯವರನ್ನು ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಾ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಕ್ರಿ.ಶ. ೨೦೦೨ ರಲ್ಲಿ ಗೌರವಿಸಲಾಯಿತು. ಬೀದರ ಜಿಲ್ಲೆಯ ಒಂಬತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರನ್ನು ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಲಾಯಿತು. ಕ್ರಿ. ಶ. ೨೦೧೧ರಲ್ಲಿ ಅವರನ್ನು ಹುಮನಾಬಾದ ತಾಲ್ಲೂಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿ ಪುರಸ್ಕರಿಸಲಾಯಿತು.

ಡಾ. ಮಾಣಿಕರಾವ ಧನಾಶ್ರೀ ಅವರ ಹಲವಾರು ಚಿಂತನಗಳು, ಭಾಷಣಗಳು, ನಾಟಕಗಳು, ರೂಪಕಗಳು, ವೈಚಾರಿಕ ಬರಹಗಳು, ಬಾನುಲಿ–ದೂರದರ್ಶನ ಮಾಧ್ಯಮದ ಮೂಲಕ ಪ್ರಸಾರವಾಗಿವೆ. ಕಲಬುರ್ಗಿ ದೂರದರ್ಶನವು ಅವರ ಸಂದರ್ಶನವನ್ನು ಪ್ರಸಾರಗೊಳಿಸಿದೆ.

ಎಪ್ಪತ್ತೈದರ ವಯಸ್ಸಿನಲ್ಲಿಯೂ ಇಂದು ಡಾ. ಮಾಣಿಕರಾವ ಅವರು ತರುಣರೊಂದಿಗೆ ತರುಣರಾಗಿ: ವಯೋಮಾನದವರೊಂದಿಗೆ: ಹಿರಿಯರಾಗಿ, ವಿದ್ವಾಂಸ–ಕವಿಗಳೊಂದಿಗೆ, ವಿದ್ವಾಂಸ ಕವಿಗಳಾಗಿ, ಸಾಂಸ್ಕೃತಿಕ ರಂಗಕ್ಕೆ ತಮ್ಮ ಕೊಡುಗೆಯನ್ನು ಸಲ್ಲಿಸುತ್ತಲಿದ್ದಾರೆ.

ಡಾ. ಮಾಣಿಕರಾವ ಧನಾಶ್ರೀ ಅವರು ಶಿಷ್ಟಸಾಹಿತ್ಯ–ಕಾವ್ಯದೊಂದಿಗೆ ಹಲವಾರು ತತ್ತ್ವಪದಗಳನ್ನು ಬರೆದಿರುವರು. ಅವರ ಪದ್ಯಗಳ ಅಂಕಿತವು 'ಮಾಣಿಕ' ಎಂಬುದಾಗಿದೆ. ಇಲ್ಲಿ ಎರಡು ಪದ್ಯಗಳನ್ನು ಉದ್ಧರಿಸಲಾಗಿದೆ:

–೧–

ಯಾತರ ಧಿಮಾಕ

ಯಾತರ ಧಿಮಾಕೋ ತಮ್ಮಾ
ಖಾತರಿಲ್ಲದ ಈ ಜೀವದ ಹಮ್ಮಾ ॥ ಪ ॥

ಗಾಳಿಗೆ ಗಾಳಿ ಬೈಲಿಗೆ ಬೈಲು
ಮ್ಯಾಳವಿಲ್ಲದ ಮನಿ ತಿಳಿದಿಲ್ಲ ಕೀಲು
ವ್ಯಾಳ್ಯ ವ್ಯಾಳ್ಯಾಕ ಬರೇ ಇಮ್ಮನದೈಲು
ಒಳ್ಳೆಯವನಾಗಿ ಸುಮ್ಮ ಇರುವುದು ಮೇಲು ॥ ೧ ॥

ದುನೇದ ಧಿಮಾಕ ಮಾಡಿ ಆದಾರೋ ಮಣ್ಣ
ಹೀನ ಮನಸ ಜಗಕ ಮ್ಯಾಡ್ಯಾದೋ ಹಣ್ಣ
ನಾನಾ ಅಂದರ ನರಕಾದೋ ಅಣ್ಣಾ
ಕೋನಿ ಇಲ್ದ ಆಶೀಗಿ ಬಿದ್ದು ಆಗಾದು ಸುಣ್ಣ ॥ ೨ ॥

ರಾಜಾಧಿರಾಜರು ಮೆರದೆ ಮೆರದರೊ
ಗಜಬಜಿಸಿ ಅವರೆಲ್ಲ ಎಲ್ಲಿಗೆ ಹೋದರೋ?
ನಿಜವಿಲ್ಲ ಈ ಬಾಳು ಮಾಯಾ ಬಜಾರೊ
ಅಜನಿಗೂ ತಿಳಲಿಲ್ಲ ಇದರ ಮಜಕುರೊ ॥ ೩ ॥

ಧರೆಯೊಳು ಮೆರವದು ಧನಾಶ್ರೀ ಊರಾ
ವರ ಮಲ್ಲಿಕಾರ್ಜುನನ ದಯಾ ಆದ ಪೂರಾ
ಮರೆಯದೆ ಮಾಣಿಕ ಹೇಳಿದ ಸಾರಾ
ಅರಿಯಿರಿ ನಿಜದ ಗೊತ್ತಿನ ಪಾರಾ ॥ ೪ ॥

–೨–

ಯಾರು ವೀರ?


ವೀರ ಯಾರು ಜಗದಾಗ ಶೂರ ಯಾರು?
ನೂರ ಮಾತನಾಡಿದರೇನು ಇಲ್ಲ ನಿಜದ ಪಾರು ॥ ಪ ॥

ಮದವು ತಲೆಗೇರಿತು ನಿನಗ
ಹದವು ಮಾಡಿಕೋ ಮನದ ಒಳಗ
ಮದಗಜ, ಹುಲಿ ಕರಡಿ ಹೂಂಕರಿಸುತಾವೀಗ
ನದರಿಟ್ಟು ಬಾಣ ಹೊಡಿ ಬೀಳತಾವು ಕೆಳಗ ॥ ೧ ॥


ದೇಹದ ಕಾಡ ಕಾಡುತಾದ
ನೇಹದ ಮನಸು ಬಾಡುತಾದ
ಮೋಹದ ಜಿಂಕೆಯು ಓಡುತಾದ
ಸಾಹಸ ಮಾಡಬ್ಯಾಡ ಅದು ಸಿಗದಂಗಾದ ॥ ೨ ॥

ಮರಳು ಮನುಷ್ಯ ತಿಳಲಿಲ್ಲ ನಿನಗ
ಮರುಳಾಗಿ ನೀನು ಭವಜಂಜಡದಾಗ
ಅರಳು-ಮರಳು ಮಾತಾಡಿ ಬಿದ್ದಿ ಕೆಸರಿನಾಗ
ಯಾರು ಎತ್ತುತಾರೊ ಶೂರ ಆಗ ನಿನಗ? ॥ ೩ ॥

ಭೂಮಿ ಮ್ಯಾಲ ಮೆರೆವ ಧನಾಶ್ರೀ ಗ್ರಾಮ
ನೇಮದ ಶೂರ ಮಲ್ಲಿಕಾರ್ಜುನನ ಪ್ರೇಮ
ಒಮ್ಮಾದರೂ ಕೇಳು ಮಾಣಿಕನ ನಾಮ
ತಮ್ಮ ನಿನಗ ಸಿಗತಾದ ಮೋಕ್ಷದ ಧಾಮ ॥ ೪ ॥



ಡಾ.ಮಾಣಿಕರಾವ ಧನಾಶ್ರೀ ಅವರ ಮನೆ (ಧನಾಶ್ರೀ).



ಮನೆಯ ಪಾರ್ಶ್ವ ನೋಟ (ಧನಾಶ್ರೀ)



ಮನೆಯ ಒಳಾಂಗಣ ನೋಟ (ಧನಾಶ್ರೀ)



ಕವಿಗಳ ತಂದೆ ಅವರು ಕುಳಿತುಕೊಳ್ಳುತ್ತಿದ್ದ ಮನೆಯಲ್ಲಿನ ಒಳಾಂಗಣ ಸ್ಥಳ.




ಡಾ. ಮಾಣಿಕರಾವ ಧನಾಶ್ರೀ.




ಡಾ. ಮಾಣಿಕರಾವ ಅವರು ತಮ್ಮ ಗ್ರಾಮದ ಹಿರಿಯರೊಂದಿಗೆ




ಡಾ. ಮಾಣಿಕರಾವ ದಂಪತಿಗಳು. (ಪತ್ನಿ: ಕಮಲಾಬಾಯಿ).



ಡಾ. ಮಾಣಿಕರಾವ ಅವರ ಆರಾಧ್ಯ ದೇವರು ಮಲ್ಲಿಕಾರ್ಜುನ ಮಂದಿರ (ಧನಾಶ್ರೀ).




ಮಲ್ಲಿಕಾರ್ಜುನ ದೇವರ ದರ್ಶನ ಮೂರ್ತಿ



ಮಾಣಿಕರಾವ ಅವರ ಸಾಹಿತ್ಯ ಕೃಷಿಗೆ ಪ್ರೇರಣೆ ಒದಗಿಸಿದ ಹಿರೇಮಠ (ಧನಾಶ್ರೀ).



ಹಿರೇಮಠದ ಒಳಾಂಗಣ ನೋಟ.



ಹಿರೇಮಠದ ಮೂಲ ಪುರುಷರಾದ ಷ.ಬ್ರ. ಶ್ರೀ ಶಿವಲಿಂಗ ಶಿವಾಚಾರ್ಯರ ಗದ್ದುಗೆ. (ಧನಾಶ್ರೀ).




ಹಿರೇಮಠದ ಸಧ್ಯದ ಗುರುಗಳಾಗಿರುವ ಷ.ಬ್ರ. ಶ್ರೀ ವೀರೇಶ್ವರ ಶಿವಾಚಾರ್ಯರು.



ಡಾ. ಮಾಣಿಕರಾವ ಅವರು ಕಲಿತ ಶಾಲೆಯ ಸ್ಮಾರಕ (ಧನಾಶ್ರೀ)



ಮಾಣಿಕರಾವ ಅವರ ಆರಾಧ್ಯ ದೇವರು ಹನುಮಾನ ಮಂದಿರ (ಧನಾಶ್ರೀ).




ಹನುಮಾನ ಮಂದಿರದ ಒಳಾಂಗಣ ನೋಟ.




ಮಾಣಿಕರಾವ ಅವರು ವಾಸವಾಗಿರುವ 'ಕಾಯಕ'ನಿಲಯ (ಕಲಬುರ್ಗಿ).



ಮಾಣಿಕರಾವ ಅವರಿಗೆ ಸಂದ ಸನ್ಮಾನ ಫಲಕಗಳ ನೋಟ.



ಅಧ್ಯಯನ ನಿರತ ಮಾಣಿಕರಾವ



ಮಾಣಿಕರಾವ ಅವರಿಗೆ 'ಕಾಯಕ' ಪ್ರಶಸ್ತಿ ಸನ್ಮಾನ ಸಮಾರಂಭ
(ಕಲಬುರ್ಗಿ).

೨೪. ವೀರಣ್ಣ ಕಟ್ಟರ ಪಟ್ಟಿ (ಕ್ರಿ.ಶ.ಸು. ೧೯೪೦)

ವೀರಣ ಕಟ್ಟರ ಪಟ್ಟಿ ಅವರನ್ನು ನೋಡಿದರೆ ಅವರೊಬ್ಬ ಸಾಮಾನ್ಯಾತಿ ಸಾಮಾನ್ಯ ವ್ಯಕ್ತಿಯಂತೆ ಕಾಣುತ್ತಾರೆ. ಅವರ ಒಳಗೊಬ್ಬ 'ಕವಿ' ಅಡಗಿಕೊಂಡಿದ್ದಾನೆಂದು ಊಹಿಸುವುದಕ್ಕೆ ಸಾಧ್ಯವಾಗುವುದೇ ಇಲ್ಲ. ಅವರ ಸಂಪರ್ಕದಲ್ಲಿ ಹೋಗಿ, ಅವರೊಡನೆ ಮಾತನಾಡುವುದಕ್ಕೆ ತೊಡಗಿದಾಗ, ಆ ಮಾತುಗಳಲ್ಲಿ "ಕಾವ್ಯದ ಝಲಕ" ಹೊಳೆದಂತೆ ಕಾಣತೊಡಗುತ್ತದೆ.

ಸಧ್ಯ ಎಪ್ಪತ್ತರ ಹೊಸ್ತಲಲ್ಲಿ ಬಂದು ನಿಂತಿರುವ ವೀರಣ್ಣನವರು ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಮಂತಾಳ ಗ್ರಾಮದವರು. ಕೋಳಿ ಸಮಾಜಕ್ಕೆ ಸೇರಿದ ವೀರಣ್ಣನವರು ಯಾವುದೇ ಜಾತಿ ಭೇದ ಮಾಡದೆ ಸಕಲರೊಡನೆ ಬೆರೆಯುತ್ತಾರೆ. "ಎಲ್ಲರೂ ಕೂಡಿಕೊಂಡು ಮನಷ್ಯರಾಗಿ ಬಾಳಬೇಕೆಂಬುದೆ" ಅವರ ಆಶಯವಾಗಿದೆ. ಅವರ ಈ ಆಶಯವನ್ನು ತಮ್ಮ ಮಾತುಗಳುದ್ದಕ್ಕೂ ಅಭಿವ್ಯಕ್ತಿಸುತ್ತಿರುತ್ತಾರೆ.

ವೀರಣ್ಣನವರ ತಂದೆ ರಾಯಪ್ಪ ಕಟ್ಟರ ಪಟ್ಟಿ, ಮುಗ್ಧ ಕೂಲಿಕಾರ ರೈತ. ಅವನ ತಾಯಿ ನಾಗಮ್ಮ. ಮುಗ್ಧ ದಂಪತಿಗಳಾದ ಇವರು ತಮ್ಮ ಮಗ ವೀರಣ್ಣನವರಿಗೆ ಆರನೆಯ ತರಗತಿಯವರೆಗೆ ಓದಿಸಿದ್ದು ವಿಶೇಷದ ಸಂಗತಿ. ಕನ್ನಡದೊಂದಿಗೆ ಅವರು ತೆಲಗು, ಮರಾಠಿ, ಹಿಂದಿ ಭಾಷೆಗಳನ್ನು ಕಲಿತರು.

ವೀರಣ್ಣನವರ ಹೆಂಡತಿ ಲಕ್ಷ್ಮಿಬಾಯಿ. ಅವರಿಗೆ ತಂಗೆಮ್ಮ ಎಂಬ ಇನ್ನೊಂದು ಹೆಸರೂ ಇದೆ. ಈ ದಂಪತಿಗಳಿಗೆ ಮೂವರು ಗಂಡು–ಮೂವರು ಹೆಣ್ಣು–ಹೀಗೆ ಒಟ್ಟು ಆರು ಜನ ಮಕ್ಕಳು. ಆದರೆ ಅವರಲ್ಲಿ ಇಂದು ಉಳಿದವರು ಕೇವಲ ಒಬ್ಬ ಗಂಡು ಮಗ. ಇಬ್ಬರು ಹೆಣ್ಣುಮಕ್ಕಳು.

ವೀರಣ್ಣ ಕಟ್ಟರ ಪಟ್ಟಿ ಅವರು ಕೃಷಿಕಾಯಕದ ರೈತ. ಬೇರೆಯವರ ಹೊಲಗಳಿಗೆ ಕೂಲಿಗಾಗಿ ಹೋಗುವ ಶ್ರಮಜೀವಿ. ಅವನು ಎಂದೂ ಹಳ್ಳಿಯಲ್ಲಿನ ಕೆಟ್ಟ ವಾತಾವರಣಕ್ಕೆ ಬಲಿಬಿದ್ದವನಲ್ಲ, ಸೋಮಾರಿಗಳೊಡನೆ ಕೂಡಿ ದಾರಿ ಬಿಟ್ಟವನಲ್ಲ, ದುಡಿಮೆಯನ್ನೇ ನಂಬಿ ಬದುಕುತ್ತ, ಬದುಕಿನ ಬಂಡಿಯನ್ನು ಎಳೆದುಕೊಂಡು ಹೊರಟಿರುವ ಪ್ರಾಮಾಣಿಕ ದುಡಿಮೆಗಾರ.

ವೀರಣ್ಣನವರ ಗುರುಗಳು ಮಂಠಾಳದ ಜಂಗಮಮನೆತನದ ಗುರುಪಾದಯ್ಯ ಮಠ ಅವರು. ಗುರುಪಾದಯ್ಯನವರು ಸಾತ್ವಿಕರೂ ಸದಾಚಾರ ಸಂಪನ್ನರು. ವೀರಣ್ಣನವರನ್ನು ತಮ್ಮ ಶಿಷ್ಯನನ್ನಾಗಿಸಿಕೊಂಡು ಅವರಲ್ಲಿರುವ ಕವಿತ್ವದ ಕಲೆಯನ್ನು ಗುರುತಿಸಿ ಪ್ರೋತ್ಸಾಹಿಸಿದರು. ಬರವಣಿಗೆಗೆ ತೊಡಗಲು ತಿಳಿಸಿದರು.ಗುರುವಿನ ಕರುಣೆ ಮತ್ತು ಆದೇಶದಂತೆ ವೀರಣ್ಣನವರು ಹಲವಾರು ಪ್ರಕಾರದ ಹಾಡುಗಳನ್ನು ಬರೆಯುವುದಕ್ಕೆ ತೊಡಗಿದರು.

ಗುರುಪಾದಯ್ಯನವರು ಆಧ್ಯಾತ್ಮ ಜೀವಿಗಳಾಗಿದ್ದು, ಸದಾ ಸಾಧು–ಸತ್ಪುರುಷರ ಸಂಗವನ್ನು ಬಯಸುವವರಾಗಿದ್ದರು. ಸಾಧು–ಸಂತರೊಡಗೂಡಿ ಭಜನೆಯ ಕಾರ್ಯಕ್ರಮವನ್ನು ಆಗಾಗ ಹಮ್ಮಿಕೊಳ್ಳುತ್ತಿದ್ದರು. ಆಗ ಶಿಷ್ಯ ವೀರಣ್ಣನವರು ಅದರಲ್ಲಿ ಮುಂದಾಳುತನ ವಹಿಸಿ; ಭಜನೆ ನಡೆಸುತ್ತಿದ್ದರು. ಹೀಗೆ ಭಜನೆ ಪದಗಳನ್ನು ಹಾಡುತ್ತಲೇ ಅವರು ಕವಿಯಾಗಿ ಬೆಳೆಯತೊಡಗಿದರು.

ವೀರಣ್ಣನವರು ಶ್ರಾವಣಮಾಸ–ಅಮವಾಸ್ಯೆ–ಹುಣ್ಣಿಮೆಯಂತಹ ಸಂದರ್ಭದಲ್ಲಿ ಭಜನೆಯ ಕಾರ್ಯದಲ್ಲಿ ಉತ್ಸುಕತೆಯಿಂದ ಭಾಗವಹಿಸುವಂತೆ, ಮುಸ್ಲೀಮರ ಮೋಹರಮ್ ಹಬ್ಬದಲ್ಲಿಯೂ ಭಾಗವಹಿಸುತ್ತಿದ್ದರು. ಅವರಲ್ಲಿ ಹಿಂದೂ–ಮುಸ್ಲೀಮರೆಂಬ ತಾರತಮ್ಯವೇ ಇರಲಿಲ್ಲ. ಮೋಹರಮ್ ಹಬ್ಬದ ಎಲ್ಲ ಹಂತಗಳಲ್ಲಿಯೂ ವೀರಣ್ಣನವರು ಇರುತ್ತಿದ್ದುದುಂಟು. ಇಂದಿಗೂ ಅವರು ತಮ್ಮ ಆಚರಣೆ ಮುಂದುವರೆಸಿಕೊಂಡು ಬರುತ್ತಲಿದ್ದಾರೆ. ಮೋಹರಮ್ ಸಂದರ್ಭದಲ್ಲಿ ಅವರು ಮುಮ್ಮೇಳದಲ್ಲಿ ಪ್ರಮುಖ ಹಾಡುಗಾರರಾಗಿ ಹಾಡುತ್ತಿದ್ದರು. ನೂರಾರು ಮೋಹರಮ್ ಹಾಡುಗಳು ಅವರ ನಾಲಿಗೆಯ ಮೇಲಿವೆ.

ಭಜನೆಯ ಪದಗಳನ್ನು ಹಾಡುತ್ತಲೇ ವೀರಣ್ಣನವರು ಇತ್ತಿತ್ತಲಾಗಿ ಭಜನೆ ಪದಗಳ ರಚನೆಗೆ ತೊಡಗಿದರು. ಮೋಹರಮ್ ಪದಗಳ ರಚನೆ ಮಾಡಿದರು. "ನೀವು ಸ್ವತಃ ಹಾಡು ಕಟ್ಟುತ್ತೀರೆಂದು ಹೇಳುತ್ತಾರೆ. ಹೌದೆ?" ಎಂದು ನಾನು ಪ್ರಶ್ನಿಸಿದಾಗ ವೀರಣ್ಣನವರು ಮುದುರಿ ಹೋದರು. ಅವರಿಗೆ "ತಾವು ಕವಿಯೆಂದು ಹೇಳಿಕೊಳ್ಳುವುದಕ್ಕೆ ಸಂಕೋಚ", ತಾವು ರಚನೆಮಾಡಿದ ರಚನೆಗಳು "ಹಾಡುಗಳೇ ಅಲ್ಲವೆಂಬುದು" ಅವರ ಭಾವನೆ. ನಿಜವಾದ ಕವಿಗಳು ತಮ್ಮನ್ನು ತಾವು ಹೊಗಳಿಕೊಳ್ಳುವುದಿಲ್ಲ, "ತಾವು ಕವಿಗಳೆಂದು" ಬೊಬ್ಬೆ ಹಾಕುವುದಿಲ್ಲ, ಅವರು ಅತ್ಯಂತ ಮೌನವಾಗಿಯೇ ಇರುತ್ತಾರೆ. ತಮಗೆ ತೋಚಿದ್ದನ್ನು ಮನದಲ್ಲಿ ಗುಣಗುಣಿಸುತ್ತಾರೆ. ಬರೆಯಲು ಬಂದರೆ ಬರೆಯುತ್ತಾರೆ; ಬರವಣಿಗೆ ಬಾರದಿದ್ದವರು ತಮ್ಮ ಆಪ್ತರ ಎದುರಿನಲ್ಲಿ ಹಾಡುತ್ತಾರೆ. ವೀರಣ್ಣ ಕಟ್ಟರ ಪಟ್ಟಿ ಅವರ ಪರಿಸ್ಥಿತಿಯೂ ಹೀಗೆ ಆಗಿದೆ. ಅವರ ಮಾತುಗಳನ್ನು ಕೇಳೋಣ:

"ಯಪ್ಪಾ, ನಾಯೇನೂ ಹೆಚ್ಚು ಓದಿದವನು ಅಲ್ಲರಿ, ಧಡ್ಡ ಮುಂಡೇ ಮಕ್ಕಳು ನಾವು. ಅದ್ರ ನನಗ ಭಜನಿ ಆಂಧ್ರ ಭಾಳ ಭಕ್ತಿ. ಅದಕ್ಕ ಹತ್ತಾರು ಭಜನಿ ಪದಗಳನ್ನು ಕಂಠ ಪಾಠ ಮಾಡಿನ್ರಿ. ಹಂಗೆ ಎಷ್ಟೊ ವರುಷದಿಂದ ಮೋಹರಮ್ ಹಾಡಾ ಹಾಡ್ಕೋತ ಬಂದಿದೇವುರಿ, ಹೀಗಾಗಿ ನೂರಾರು ಮೋಹರಮ್ ಪದ ಬರ್ತಾವ್ರಿ. ಇಕಡಿಕಡಿ ನಾನೂ ಕೆಲವು ಭಜನಿ ಪದಗೋಳು ಬರೆದಿನ್ರಿ. ಮೋಹರಮ್ ಪದಗಳೂ ಬರೆದು ಒಟ್ಟಿನ್ರಿ, ಯಾ ಶಾಣಾರಿಗಿ ನಾನು ತೋರ್ಸಲ್ಕ ಹೋಗಿಲ್ಲರಿ, ಅವರು ತೋರಿಸಿದ್ರ, ನಕ್ಕಾರು ಅಂತ ನಾಚ್ಕೊಂಡು ಬಿಟ್ಟೀನ್ರಿ. ಯಾರರೆ ಕೇಳಿದ್ರ 'ನಾನು ಕವಿನೆ ಅಲ್ಲ' ಅಂತ ಹೇಳಿಬಿಡ್ತೀನ್ರಿ. ಇಲ್ಲದ ಪೀಡಾ ಅಕಾಡಿ ಹೋಗಿ ಬಿಡ್ತಾದ".

ವೀರಣ್ಣ ಕಟ್ಟರ ಪಟ್ಟಿ ಅವರು ಜಾನಪದ ಸೊಗಡಿನ ಒಳ್ಳೆಯ ತತ್ತ್ವಪದಕಾರರಾಗಿದ್ದಾರೆ. ತಮ್ಮ ಪದಗಳಿಗೆ ತಮ್ಮ ಮತ್ತು ಗುರುವಿನ ಅಂಕಿತ ಹಾಕಿದ್ದಾರೆ. ಮೋಹರಮ್ ಹಾಡುಗಳಿಗೆ 'ಹುಸೇನ್ ಪಾಶಾ' ಎಂಬ ಅಂಕಿತವನ್ನು ಇಟ್ಟು ಕೊಂಡಿದ್ದಾರೆ.

ಈಗ ವೃದ್ಧಾಪ್ಯದ ಕಾರಣದಿಂದ ಬರವಣಿಗೆ ನಿಲ್ಲಿಸಿದ್ದಾರೆ. ದೇಹದಲ್ಲಿ ಸ್ವಾಸ್ಥ್ಯವಿದ್ದರೆ ಭಜನೆಗಳಿಗೆ ಹೋಗುತ್ತಾರೆ. ಮೋಹರಮ್ ಹಾಡು ಹಾಡುತ್ತಾರೆ. ಇಲ್ಲದಿದ್ದರೆ ಮನೆಯಲ್ಲಿ ಕೂಡುತ್ತಾರೆ. ಅವರ ರಚನೆಯ ಎರಡು ಪದ್ಯಗಳನ್ನು ಇಲ್ಲಿ ಕೊಡಲಾಗಿದೆ:

ಕರಿನಾಯಿ

ನರಾ ನೀ ಎಚ್ಚರಿರಬೇಕೋ
ಕರಿನಾಯಿ ಬರತಾದೋ ॥ ಪ ॥

ಜ್ವಾಕಿಲಿಂದ ಮನಿಯ ಕಾಯಲು ಬೇಕು
ಬಾಗಿಲ ಕಿಂಡಕಿ ಹಾಕಿರಬೇಕು
ನೇಕಿಲಿಂದ ಕಾವಲಕಾಯ್ತಿರಬೇಕು
ಕರಿನಾಯಿ ಬರತಾ ದೋ ॥ ೧ ॥

ಬಡಗಿ ಹಿಡಿದು ಬಾಗಲಕ ನಿಂತಿರಬೇಕು
ಅಡವಿಯ ಮೋಹ ಬಿಟ್ಟಿರಬೇಕು
ಗಡಗ್ಯಾಗ ಬಾಯಿ ಹಾಕಲಿಕ್ಕಂತ
ಕರಿನಾಯಿ ಬರತಾದೊ ॥ ೨ ॥

ತ್ವಾಟದ ಕಡೀಗಿ ನೋಡ್ತಿರಬೇಕೋ
ತಾಟಿನ ಮ್ಯಾಲ ಧ್ಯಾಸರಿರಬೇಕೋ
ಮಟ ಮಟ ಮಧ್ಯಾಹ್ನ ಹೊತ್ತ ನೋಡಿಕೊಂಡು
ವಟಗುಟ್ಟತಲಿ ನಾಯಿ ಬರುತಾದೋ ॥ ೩ ॥

ಕಾಲೀಗಿ ಭಡಾವ ಹಾಕಿರಬೇಕು
ಬಾಯಿಂದ ಸಿಳ್ಳ ಹೊಡಿತಿರಬೇಕು
ಧಿಕ್ಕ ಧಿಕ್ಕ ನೆಲ ಗುದ್ದಿರಬೇಕು
ನಾಯೀಗಿ ಬಂಧನ ಮಾಡಿರಬೇಕು ॥ ೪ ॥

ದೇಶದೊಳಗ ನಮ್ಮ ಲೇಸುಳ್ಳ ಮಂತಾಳ
ಗುರುಪಾದನ ಶಿಷ್ಯ ವೀರಣ್ಣನು
ಬಣ್ಣಿಸಿ ಹಾಡಿದ ಹಾಡನು ಕೇಳುತ
ಎಚ್ಚರರಿರಬೇಕೋ ನರರೆ ನೀವು ॥ ೫ ॥

ಕತ್ತಲಿ ಕಾಡ

ಕತ್ತಲಿನ ಕಾಡಾಗ ಕಣ್ಣ ಕಾಣದಾಂಗಾಯ್ತೊ
ಬೆಳಕ ತೋರಿ ನಡಸೋ ಗುರುವೆ ॥ ಪ ॥

ಸಂಸಾರದ ಕಾಡಿನಾಗ
ಮರವೀನ ಕತ್ತಲಿ
ಕಣ್ಣ ಕಾಣದು ನನಗೆ ಗುರುವೆ
ಬೆಳಕು ತೋರಿ ನಡಸು ವಿಭವೆ ॥ ೧ ॥

ಕಾಮ ಎಂಬ ಕರಡಿ ಇಲ್ಲಿ
ಕ್ರೋಧಯೆಂಬ ಹುಲಿ ಇಲ್ಲಿ
ಮದವೆಂಬ ಆನಿಯು ಇಲ್ಲಿ
ಮತ್ಸರವೆಂಬ ಹೆಬ್ಬಾವು ಇಲ್ಲಿ ॥ ೨ ॥

ಮೋಹವೆಂಬ ನರಿಯು ಇಲ್ಲಿ
ಲೋಭವೆಂಬ ತೋಳ ಇಲ್ಲಿ
ಮನವೆಂಬ ಚಂಚಲ ಮಂಗನ ಕುಣದಾಟ
ಆಶೆಂಬ ಪಿಶಾಚಿಯ ಅಟ್ಟ ಆರ್ಭಟ ॥ ೩ ॥


ಅರುವಿನ ಸೂರ್ಯನು ಮೂಡಿ
ಮರವಿನ ಕತ್ತಲಿ ದೂಡಿ
ಮಂತಾಳ ಗುರುವಿನ ಪಾದಕ್ಕೆ
ವೀರ ಧೀರ ಕೂಡಿ ॥ ೪ ॥

(ಸ್ವತಃ ಕವಿಗಳೆ ವಿವರಗಳನ್ನು ನೀಡಿದ್ದಾರೆ.)

▯



ಈರಣ್ಣ ಕಟ್ಟರ ಪಟ್ಟಿ ಅವರ ಮನೆ (ಮಂತಾಳ).



ಈರಣ್ಣ ಕಟ್ಟರ ಪಟ್ಟಿ ಅವರ ಗುರುಗಳ ಮಠ (ಮಂಠಾಳ).



ಈರಣ್ಣ ಕಟ್ಟರ ಪಟ್ಟಿ.

೨೫. ಲಕ್ಷ್ಮಣರಾವ ಕಮಲಾಪುರ(ಕ್ರಿ.ಶ.ಸು. ೧೯೪೦)

ಲಕ್ಷ್ಮಣರಾವ ಅವರ ಹೆಸರಿನ ಮುಂದೆ 'ಕಮಲಾಪುರ' ಎಂಬ ಗ್ರಾಮನಾಮ ಹತ್ತಿರುವುದರಿಂದ ಅವರ ಪೂರ್ವಿಕರು ಕಲಬುರ್ಗಿ ಜಿಲ್ಲೆ ಕಮಲಾಪುರದಿಂದ ಖೇಳಗಿ(ಬಿ) ಗ್ರಾಮಕ್ಕೆ ಬಂದು ನೆಲೆಸಿರುವಂತೆ ಸಂಭಾವಿಸಬಹುದಾಗಿದೆ. ಆದರೆ ಇದರ ಬಗೆಗೆ 'ಇದಂ ಇತ್ಥಂ' ಎಂದು ಹೇಳುವ ಹಾಗಿಲ್ಲ. ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ಖೇಳಗಿ ಗ್ರಾಮಕ್ಕೆ ಖೇರಡಾ(ಬಿ)ಎಂತಲೂ ಕರೆಯುತ್ತಾರೆ. ಆದರೆ ಹಳೆಯ ಹೆಸರು 'ಖೇಳಗಿ'ಯಂತಲೇ ಇರುವುದು.

ಕೋಳಿ ಸಮಾಜಕ್ಕೆ ಸೇರಿದ ಲಕ್ಷ್ಮಣರಾವ ಅವರ ತಂದೆ ಪೀರಪ್ಪನವರು. ಪೀರಪ್ಪನವರ ತಂದೆ ಸಾಯಬಣ್ಣ. ಊರಿನ ಶಿವಯೋಗಿಶ್ವರ ಮಠದ ಭಕ್ತರಾಗಿದ್ದು ಸ್ವತಃ ಪದ್ಯಗಳನ್ನು ರಚಿಸುತ್ತಿದ್ದರು. ಆಳಂದ ತಾಲ್ಲೂಕಿನ ದ್ಯಾಗಾಯಿ ಗುಂಡಪ್ಪ ಪೀರಪ್ಪನವರಿಗೆ ಗುರು. ಪೀರಪ್ಪನವರು ರಚಿಸಿದ ಯಾವುದೇ ಹಾಡು ಇಂದು ಸಿಕ್ಕುವುದಿಲ್ಲ.

ಪೀರಪ್ಪ-ಅಂಬಾಬಾಯಿ ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು. ಒಬ್ಬಳು ಹೆಣ್ಣುಮಗಳು. ಇಬ್ಬರು ಗಂಡು ಮಕ್ಕಳಲ್ಲಿ ಲಕ್ಷ್ಮಣರಾವ ಅವರೆ ಹಿರಿಯ ಮಗ. ತಂದೆಯ ಸಾಹಿತ್ಯಿಕ-ಆಧ್ಯಾತ್ಮಿಕ ಗುಣಗಳನ್ನು ಮೈಗೊಂಡು ಬೆಳೆದರು.

ಲಕ್ಷ್ಮಣರಾವ ಅವರ ಶಿಕ್ಷಣವು ಖೇಳಗಿ ಗ್ರಾಮದ ಮೋಡಿ ಶಾಲೆಯಲ್ಲಿ ಆರಂಭವಾಯಿತು. ಐದನೆಯ ತರಗತಿಯವರೆಗೆ ಓದಿದ್ದಾರೆ. ಸ್ವಪ್ರಯತ್ನದಿಂದ ಕನ್ನಡದ ಬರಹ-ಹಿಂದಿ ಭಾಷೆಗಳನ್ನು ಕಲಿತುಕೊಂಡಿದ್ದಾರೆ.

ಲಕ್ಷ್ಮಣರಾವ ಅವರ ಹೆಂಡತಿ ತೇಜಮ್ಮ. ಈ ದಂಪತಿಗಳಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಗಂಡು ಮಕ್ಕಳು. ಲಕ್ಷ್ಮಣರಾವ ಅವರು ಕೃಷಿಯ ಕೆಲಸ ಇಲ್ಲದೆ ಇರುವಾಗ ಮನೆಯಲ್ಲಿ ಬಟ್ಟೆ ಹೊಲಿಯುವ ಕಾರ್ಯ ಮಾಡುತ್ತಾರೆ. ಉಳಿದ ಸಮಯದಲ್ಲಿ ಹೊಲದಲ್ಲಿನ ಕೆಲಸಗಳಲ್ಲಿ ತೊಡಗಿರುತ್ತಾರೆ.

ಲಕ್ಷ್ಮಣರಾವ ಅವರಿಗೆ ತಂದೆ ಪೀರಪ್ಪನವರೆ ಗುರುಗಳು. ತಂದೆಯ ಗರಡಿಯಲ್ಲಿ ತರಬೇತುಗೊಳ್ಳುತ್ತಲೇ ಅವರು ಒಳ್ಳೆಯ ಕವಿಗಳಾಗಿ ಬೆಳೆದಿದ್ದಾರೆ. ಲಕ್ಷ್ಮಣರಾವ

ಅವರು ಪರಿಶುದ್ಧ ಮತ್ತು ಪ್ರಾಮಾಣಿಕ ಮನದ ವ್ಯಕ್ತಿ. ದಿನವಿಡಿ ಕಾಯಕದಲ್ಲಿಯೇ ತೊಡಗಿರುವ ಕಾಯಕ ಜೀವಿ. ಅವರು ತಮ್ಮ ಸಾಹಿತ್ಯ ಕೃಷಿಯ ಬಗೆಗೆ ಹೇಳುವ ಮಾತುಗಳನ್ನು ಆಲಿಸಬೇಕು. "ನನಗೆ ನನ್ನ ತಂದೆಯವರೆ ಪ್ರೇರಣೆ. ಅವರು ಹಾಡುಗಳನ್ನು ಸ್ವತಃ ಕಟ್ಟುತ್ತಿದ್ದರು ಮತ್ತು ಹಾಡುತ್ತಿದ್ದರು. ನನಗೂ ಹಾಡು ಬರೆಯುವುದಕ್ಕೆ ತಿಳಿಸಿದರು. ನಾನು ಹಾಡು ಬರೆಯುವುದಕ್ಕೆ ಆರಂಭ ಮಾಡಿದೆನು. ಬರೆದ ಪದ್ಯಗಳನ್ನು ನನ್ನ ತಂದೆಯ ಎದುರಿನಲ್ಲಿ ಹಾಡಿ ತೋರಿಸುತ್ತಿದ್ದೆನು. ನನಗೆ ಸರಿಯಾಗಿ ಹಾಡುವುದಕ್ಕೆ ಬರುವುದಿಲ್ಲ. ಬಂದ ರೀತಿಯಲ್ಲೆ ಹಾಡಿದಾಗ ನನ್ನ ತಂದೆ ಸಂತೋಷ ಪಡುತ್ತಿದ್ದರು. ದೋಷಗಳು ಏನಾದರೂ ಆಗಿದ್ದರೆ, ಅವುಗಳ ಬಗೆಗೆ ಹೇಳುತ್ತಿದ್ದರು. ಅವರ ಮಾರ್ಗದರ್ಶನದಿಂದ ನಾನು ಬರೆಯುವುದಕ್ಕೆ ತೊಡಗಿ ಈಗಾಗಲೇ ನೂರಾರು ಪದ್ಯಗಳನ್ನು ಬರೆದಿರುವೆನು. ಅವುಗಳಲ್ಲಿ ಹಲವಾರು ತತ್ತ್ವಪದಗಳಿವೆ, ಮೋಹರಮ್ ಪದ್ಯಗಳಿವೆ. ನಾನು ಆದಷ್ಟು ಒಕ್ಕಲುತನದ ಕೆಲಸಗಳ ಬಿಡುವಿನ ವೇಳೆಯಲ್ಲಿ, ಒಂದೊಂದು ಸಲ ಹೊಲದಲ್ಲಿಯೇ ಕುಳಿತು ಬರೆಯುತ್ತೇನೆ. ಅದುವೆ ನನಗೆ ವಿಶ್ರಾಂತಿ. ಹಾಗೇ ಬರೆದ ಹಾಡುಗಳನ್ನು ನಸುಕಿನಲ್ಲಿ ಎದ್ದು ಮುಖತೊಳೆದುಕೊಂಡು, ಒಂದು ಕಪ್ಪು ಚಹಾ ಕುಡಿದು ಪರಿಶೀಲನ ಮಾಡುತ್ತೇನೆ. ಸರಿಕಾಣದ ಸಾಲುಗಳನ್ನು ಮತ್ತೆ ತಿದ್ದುತ್ತೇನೆ. ಕೊನೆಯಲ್ಲಿ ಅವುಗಳಿಗೆ ಒಂದು ಅಂತಿಮ ರೂಪ ದೊರಕಿದಾಗ ಕಾಪಿಯಲ್ಲಿ ಬರೆದು ಇಟ್ಟುಕೊಳ್ಳುತ್ತೇನೆ."

ಲಕ್ಷ್ಮಣರಾವ ಅವರು ಬರೆದಿರುವ ತತ್ತ್ವಪದಗಳನ್ನು ಹಲವಾರು ಜನರು ಈ ಭಾಗದಲ್ಲಿ ಹಾಡುತ್ತಾರೆ. ತಂದೆ ಪೀರಪ್ಪನವರಂತೆ ಶಿವಯೋಗೀಶ್ವರ ಸ್ವಾಮಿಗಳಲ್ಲಿ ಅಪ್ರತಿಮ ಭಕ್ತಿವುಳ್ಳ ಅವರಿಗೆ ಪದ್ಯಗಳ ಅಂಕಿತವೂ 'ಶಿವಯೋಗಿ'ಯೇ ಆಗಿದ್ದಾರೆ. ಖೇಳಗಿಯಲ್ಲಿ ಶಿವಯೋಗಿಶ್ವರ ವಿರಕ್ತಮಠವೆಂಬ ಒಂದು ಮಠವಿದೆ. ಶಿವಯೋಗೀಶ್ವರರು ಮಠದ ಮೂಲಸ್ಥಾಪಕರು. ಆ ಮೂಲ ಪುರುಷನಲ್ಲಿಯೇ ಕವಿಗಳ ಭಕ್ತಿ ಅಚಲವಾಗಿ ಬೇರೂರಿದೆ.

ಲಕ್ಷ್ಮಣರಾವ ಸ್ವತಃ ಅಧ್ಯಯನದಿಂದ ಸಾಕಷ್ಟು ಜ್ಞಾನವನ್ನು ಗಳಿಸಿದ್ದಾರೆ. ಶರಣರ ವಚನಗಳನ್ನು ಓದಿದ್ದಾರೆ. ಆಗಾಗ ಓದುತ್ತಲಿರುತ್ತಾರೆ. ಹಿಂದಿ ಸಂತರ ದೋಹೆಗಳನ್ನು ಓದಿದ್ದಾರೆ. ಮರಾಠಿ ಸಂತರ ಅಭಂಗಗಳನ್ನು ಅಧ್ಯಯನ ಮಾಡಿದ್ದಾರೆ. ಹೀಗಾಗಿ ಅವರಲ್ಲಿ ಸಾಹಿತ್ಯ ಮತ್ತು ಆಧ್ಯಾತ್ಮಗಳೆರಡೂ ಮೇಳೈಸಿಕೊಂಡಿವೆ.

ಲಕ್ಷ್ಮಣರಾವ ಅವರು ರಚಿಸಿರುವ ಒಂದೆರಡು ಪದ್ಯಗಳನ್ನು ಇಲ್ಲಿ ನೋಡಬಹುದಾಗಿದೆ:

ಶೀಲ ಮಾಡುವರಿಗೆ ಶಿವ ಸಿಗುವುದಿಲ್ಲ

ಶೀಲ–ಶೀಲಯೆಂದು ಬರಿ ಶೀಲ ಮಾಡುತ್ತೀರಿ
ಶೀಲ ಮಡುವವರಿಗೆ ಶಿವ ಸಿಗೂದಿಲ್ಲ ॥ ಪ ॥

ತೊಗಲ ಮಲಿಯ ಹಾಲು ಕುಡಿದು ದೊಡ್ಡವರಾಗಿ
ಶೀಲ ಮಾಡುತೀರಿ ನಾಡೆಲ್ಲ
ತೊಗಲಿನ ಆಟಾ ತಿಳಿಯದೋ ತಮ್ಮಾ
ತಗಲು ಮಾತು ಒಂದು ಚೂರಿಲ್ಲ ॥ ೧ ॥

ಒಳಗಿನ ಹೊಲಸನು ತೊಳೆವುದೆ ಶೀಲ
ಹೀನ ಗುಣಗಳನು ಅಳಿವುದೆ ಶೀಲ
ನೇಮ–ನಿಷ್ಠೆಗಳ ನಡೆವುದೆ ಶೀಲ
ಕಾಮನ ಪಾಶವ ಹರಿವುದೇ ಶೀಲ ॥ ೨ ॥

ಮನಕೆ ಮನ ಒಂದಾಗುವುದು ಶೀಲ
ಮನಸಿಲೆ ಭಕ್ತಿಯ ಮಾಡುವುದು ಶೀಲ
ಮನದ ಮೈಲಿಗೆ ಕಳೆವುದು ಶೀಲ
ಜನನ–ಮರಣಗಳ ನೀಗುವುದು ಶೀಲ ॥ ೩ ॥

ತೊಗಲಿನ ಮಲಿಹಾಲ ಕುಡಿದವರೆಲ್ಲಾ
ತೊಗಲಿನ ಬೀಗರು ಆದೆವಲ್ಲಾ
ಶಿವಯೋಗಿ ನೆಂಟರು ಯಾರಿಲ್ಲ
ತೊಗಲೊಳಗೆ ತಗಲುವರಲ್ಲಾ ॥ ೪ ॥

ನವಲಿಂಗ

ನವವಿಧ ಲಿಂಗಗಳು ಅಂಗದಲೆ ಇರುವಾಗ
ಭವ ಭಾದಿ ಅಂಜೀಕಿ ಇಲ್ಲ ನೋಡು ॥ ಪ ॥

ಗುರುಕೊಟ್ಟ ಲಿಂಗವ ಗಟಮುಟ್ಟಿ ಹಿಡಿಬೇಕು
ಕರದೊಳಗ ಇಟ್ಟು ದಿನವು ಭಜಿಸಬೇಕು
ಅರಿ ಆರುಗುಣಗಳು ದೂರ ಮಾಡಲುಬೇಕು
ವರ ಇಷ್ಟಲಿಂಗನಿಗೆ ತನುವ ಸಲಿಸಲುಬೇಕು ॥ ೧ ॥

ಕಣ್ಣುಗಳಲಿ ಶಿವಲಿಂಗ
ಕಿವಿಯಲ್ಲಿ ಪ್ರಸಾದಲಿಂಗ
ಮೂಗಿನಲಿ ಆಚಾರಲಿಂಗ
ನಾಲಗೆಯಲ್ಲಿ ಗುರುಲಿಂಗ ॥ ೨ ॥

ಚರ್ಮದಲಿ ಜಂಗಮಲಿಂಗ
ಭಾವದಲಿ ಭಾವಲಿಂಗ
ಮನದಲಿ ಮಹಾಲಿಂಗ
ಆತ್ಮದಲಿ ಪರಮಾತ್ಮಲಿಂಗ ॥ ೩ ॥

ಆಚಾರಲಿಂಗಕ್ಕೆ ಆಧಾರಕೀಲಿ
ಗುರುಲಿಂಗ ಆದ ಸ್ವಾದಿಷ್ಟದಲ್ಲಿ
ಶಿವಲಿಂಗ ಆದ ಮಣಿಪುರದಲಿ
ಲೋಕದೊಳಗೆ ನೀ ಹಾಕಿದ್ದಿ ಜಾಲಿ ॥ ೪ ॥

ಜಂಗಮ ಲಿಂಗ ಇರುವುದು ಅನಾಹತದಲ್ಲಿ
ಪ್ರಸಾದಲಿಂಗ ಇರುವುದು ವಿಸುದ್ಧಿಯಲ್ಲಿ
ಮಹಾಲಿಂಗ ಇರುವುದು ಖೇಳಗಿ ಶಿವಲಿಂಗನಲ್ಲಿ
ಇದು ತಿಳಿದು ನಡೆದರೆ ಮೋಕ್ಷವಹುದಲ್ಲಿ ॥ ೫ ॥

ಸುಜನರಿಗೆ ಹಾಡಿ ಸುಖವು ಪಡಿಸೋಣಾ

ಸುಜನರಿಗೆ ಹಾಡಿ ಸುಖವು ಪಡಿಸೋಣ ಬಾರಾ
ಪಂಕನಿಲ್ಲದೆ ಪಕ್ಷಿ ಒಂದು ಇರುವದೊ ಧೀರ

ಹಗಲು ಇರುಳು ಹಾರುವುದೊ ಲಕ್ಷಗಾವುದ ॥ ಪ ॥
ಪಕ್ಷಿ ಬಂದು ಕೂಡುವದೊ ಯಾವ ಜಾಗಕ
ಕಣ್ಣ ಮೂಗ ಬಣ್ಣ ಇದಿದ್ದಿಲೊ ಅದಕ
ಇತ್ತೊ ಭಾಳ ನಾಜುಕ ಎಪ್ಪ ಬಹಳ ನಾಜುಕ ॥ ೧ ॥

ಅಣುರೇಣ ಕಣ್ಣ ಸಣ್ಣದಿತ್ತೊ ಹೆಡಕ
ತಟ್ಟಿ ಮುಟ್ಟಿ ಕಣ್ಣ ತೇರಿತ್ತಿತೊ ಜವಜವಕ
ಬಿದ್ದಂಗೆ ಬೆಳಕ ಬಿದ್ದಂಗ ಬೆಳಕ ॥ ೨ ॥

ಪುಂಡ ಭಕ್ತರ ಹಚ್ಚಿದಾನೊ ಮಠಕ್ಕ
ಕಂಡು ಶಿವಲಿಂಗೇಶ ಕಿಲಿ ಕಿಲಿ ನಕ್ಕಾ
ವಾಶ ಖೇಳಗಿ ಈಶನ ಸುತ್ತ್ಯಲ್ಲ ಬೆಳಕ ॥ ೩ ॥

(ಸ್ವತಃ ಕವಿಗಳೇ ವಿವರಗಳನ್ನು ನೀಡಿದ್ದಾರೆ.)


□



ಲಕ್ಷ್ಮಣರಾವ ಕಮಲಾಪುರ ಅವರ ಮನೆ (ಖೇಳಗಿ–ಬಿ).



ಲಕ್ಷ್ಮಣರಾವ ಕಮಲಾಪುರ.



ಲಕ್ಷ್ಮಣರಾವ ಅವರ ಮನೆಯ ಒಳಾಂಗಣ ನೋಟ.



ಲಕ್ಷ್ಮಣರಾವ ಅವರ ಆರಾಧ್ಯ ಗುರುಗಳಾದ ಶ್ರೀ ಶಿವಯೋಗೀಶ್ವರರ ಮಠ

೨೬. ಕಾಶೆಪ್ಪ ಹೆಗ್ಗಣೆ (ಕ್ರಿ.ಶ.ಸು. ೧೯೪೧)

ಬಸವಕಲ್ಯಾಣ ತಾಲ್ಲೂಕಾವಷ್ಟೆ ಅಲ್ಲ; ಒಟ್ಟು ಬೀದರ ಜಿಲ್ಲೆಯಲ್ಲಿಯೇ ಪರಿಚಿತರಾಗಿರುವ ಕಾಶಪ್ಪ ಹೆಗ್ಗಣೆ ಅವರು ವೃತ್ತಿಯಿಂದ ರೈತ ಸಮುದಾಯದಿಂದಲೇ ಮೇಲೆದ್ದು ಬಂದವರು. ಇಂದು ಕೃಷಿಕರಿಗೆ ತಮ್ಮ ಕೈಲಾದ ಸೇವೆಯನ್ನು ಸಲ್ಲಿಸುತ್ತಿರುವವರು.

ತಂದೆ ಸಂಗಪ್ಪನವರು; ತಾಯಿ ಚಂದಮ್ಮ. ಸಂಗಪ್ಪನವರು ಕೃಷಿಕರು; ಧರ್ಮವಂತ ಮನಸ್ಸಿನವರು; ಬಡಬಗ್ಗರ ಬಗೆಗೆ ಅತೀವ ಕಳಕಳಿವುಳ್ಳವರು. ಅವರು ತಮ್ಮ ಕೇರಿ ಅಥವಾ ಊರಲ್ಲಿ ಯಾರಾದರೂ ಉಪವಾಸದಿಂದ ಇದ್ದಾರೆಂಬುದನ್ನು ಕೇಳಿದರೆ ಕೂಡಲೇ ಅವರಿಗೆ ತಮ್ಮ ಕೈಲಾದ ಮಟ್ಟಿಗೆ ಸಹಾಯ ಹಸ್ತ ಚಾಚಲು ಮುಂದೆ ಬರುತ್ತಿದ್ದ ಸ್ವಭಾವದವರು. ಪರೋಪಕಾರದ ಈ ಗುಣವೆ ಕಾಶಪ್ಪ ಹೆಗ್ಗಣೆಯವರಲ್ಲಿ ಪುನರ್ ರೂಪ ತಾಳಿತೆನ್ನಬೇಕು.

ವ್ಯಾಟ್ರಿಕ್‌ವರೆಗೂ ಓದಿದ ಕಾಶಪ್ಪನವರು ಹಿಂದಿ ವಿಶಾರದ ಪರೀಕ್ಷೆ ಪಾಸುಮಾಡಿದರು. ಕನ್ನಡದೊಂದಿಗೆ ರಾಷ್ಟ್ರಭಾಷೆ ಹಿಂದಿಯಲ್ಲೂ ಪರಿಣತೆಯನ್ನು ಸಾಧಿಸಿದರು. ವ್ಯವಹಾರದಲ್ಲಿ ಮರಾಠಿಯುನ್ನೂ ಕಲಿತುಕೊಂಡರು. ಹುಡುಗನಾಗಿದ್ದಾಗನಿಂದಲೂ ಸಂಗೀತದೆಡೆಗೆ ಒಲವಿತ್ತು, ತಬಲಾ ಬಾರಿಸುವುದನ್ನು ಕಲಿಯ ತೊಡಗಿದರು. ಕಾಶಪ್ಪನವರು ಅತ್ಯಂತ ಮನೋಹರವೆನ್ನುವಂತೆ ತಬಲಾ ಬಾರಿಸುತ್ತಾರೆ. ಹಾಡುಗಳನ್ನು ಹಾಡುತ್ತಾರೆ. ಒಂದು ಸಲ ಒಂದು ರಾಗದಲ್ಲಿ ಹಾಡಿದ ಹಾಡು ಇನ್ನೊಂದು ಸಲ ಅದೇ ರಾಗದಲ್ಲಿ ಹಾಡುವುದಿಲ್ಲ. ಅದಕ್ಕೆ ಬೇರೆ ರಾಗ ಹಚ್ಚಿ ಹಾಡುತ್ತಾರೆ. ಈ ಕಲೆಯು ಎಲ್ಲರಿಗೂ ಬರುವುದಿಲ್ಲ. ಒಂದೆ ಹಾಡಿಗೆ ಹಲವಾರು ರಾಗಗಳನ್ನು ಅನ್ವಯ ಮಾಡುವುದರ ಮುಖಾಂತರ ಕಾಶಪ್ಪನವರು ತಮಗಿದ್ದ ಸಂಗೀತದ ಬಗೆಗಿನ ಗತಿಯನ್ನು ಮನವರಿಕೆ ಮಾಡಿಕೊಡುತ್ತಾರೆನ್ನಬಹುದು.

ಕಾಶಪ್ಪನವರು ತಮ್ಮ ತಾರುಣ್ಯಾವಸ್ಥೆಯಲ್ಲಿ ಒಂದಿಷ್ಟು ಪ್ರಯತ್ನ ಮಾಡಿದ್ದರೆ ಯಾವುದೊ ಒಂದು ಸರಕಾರಿ ನೌಕರಿ ಹಿಡಿಯಬಹುದಿತ್ತು, ಆದರೆ ಅವರು ನೌಕರಿಗಾಗಿ ಹಂಬಲಿಸಲಿಲ್ಲ. ಕೃಷಿ ಕಾಯಕವನ್ನು ಸುಧಾರಿಸುವತ್ತ ಆಸ್ಥೆವಹಿಸಿದರು; ಕೃಷಿಕರ

ಬದುಕನ್ನು ಒಳಹೊಕ್ಕು ನೋಡುವ ಪ್ರಯತ್ನ ಕೈಕೊಂಡರು. ರೈತರಾಗಿ ರೈತರ ನಡುವಿದ್ದು ಅವರ ನೋವು-ನಲಿವುಗಳನ್ನು ಅರ್ಥಮಾಡಿಕೊಳ್ಳುವುದೇ ಕಾಶಪ್ಪನವರಿಗೆ ಪರಮಾರ್ಥದ ಸಾಧನೆಯೆನಿಸಿತು. ರೈತರ ಸಮಸ್ಯೆಗಳಿಗೆ ಧ್ವನಿಯಾಗತೊಡಗಿದರು; ಅವುಗಳ ಪರಿಹಾರಕ್ಕಾಗಿ ಹೋರಾಡತೊಡಗಿದರು. ಜನ ಪ್ರತಿನಿಧಿಗಳಲ್ಲಿಗೆ ಹೋಗಿ ರೈತರ ಕಷ್ಟ-ನಷ್ಟಗಳನ್ನು ಕುರಿತು ಹೇಳತೊಡಗಿದರು. ಹೀಗಾಗಿ ರೈತ ಸಮುದಾಯಕ್ಕೆ ಕಾಶಪ್ಪನವರೆಂದರೆ ಆಶೆಯ ಬೆಳಕಿನಂತೆ ಕಂಡರು. ಕಾಶಪ್ಪನವರು ರೈತ ಸಂಘದ ಸಕ್ರೀಯ ಸದಸ್ಯರಾದರು. ರೈತ ಚಳುವಳಿಗಳಲ್ಲಿ ಭಾಗವಹಿಸ ತೊಡಗಿದರು. ಮುಂದಾಳುತನವಹಿಸಿ ಚಳುವಳಿಗಳನ್ನು ಮುನ್ನಡೆಸ ತೊಡಗಿದರು. ಹೀಗಾಗಿ ಕಾಶಪ್ಪನವರಿಗೆ ರಾಷ್ಟ್ರ ಮಟ್ಟದ ರೈತ ಮುಖಂಡರೊಡನೆ ಸಹಜವಾಗಿಯೇ ಸಂಪರ್ಕ ಏರ್ಪಟ್ಟಿತು. ಇದರ ಫಲವಾಗಿ ಕಾಶಪ್ಪನವರು ಬಸವಕಲ್ಯಾಣ ತಾಲ್ಲೂಕಿನ ರೈತ ಸಂಘದ ಅಧ್ಯಕ್ಷರಾದರು.ರೈತ ಚಳುವಳಿ; ರೈತರ ಜಾಥಾಗಳಂತಹ ಚಟುವಟಿಕೆಗಳಲ್ಲಿ ಭಾಗವಹಿಸಿ, ಅವರು ಹಲವಾರು ಸಲ ಬೆಂಗಳೂರು, ದೆಹಲಿಗಳಿಗೆ ಹೋಗಿ ಬಂದರು. ಇಂತಹ ಸಂದರ್ಭಗಳಲ್ಲಿ ಕಾಶಪ್ಪನವರು ರೈತ ಸಮುದಾಯಕ್ಕೆ ಅನ್ವಯವಾಗುವ ಹಲವಾರು ಕ್ರಾಂತಿಗೀತೆಗಳನ್ನು ಬರೆದರು. ಹಾಡಿದರು; ಹಾಡಿಸಿದರು.

ಕಾಶಪ್ಪ ಹೆಗ್ಗಣೆ ಅವರಿಗೆ ಈ ಸಾಧನೆ ಮತ್ತು ಸೇವೆಗಾಗಿ ಕೌಟುಂಬಿಕ ವಾತಾವರಣ ಎಲ್ಲವೂ ಪೂರಕವಾಗಿ ನಿಂತುಕೊಂಡಿದೆ. ಅವರ ಪತ್ನಿ ಕಮಲಾಬಾಯಿ ಅವರು ತ್ಯಾಗ ಜೀವಿ. ನಿರಂತರವಾಗಿ ಪತಿ ಮತ್ತು ಕುಟುಂಬದ ಕ್ಷೇಮಕ್ಕಾಗಿ ದುಡಿಯುತ್ತಿರುವ ಸಾಧ್ವಿ. ಈ ದಂಪಗಳಿಗೆ ಒಬ್ಬಗಂಡು ಮಗ; ಇಬ್ಬರು ಹೆಣ್ಣುಮಕ್ಕಳು. ಒಟ್ಟು ಪರಿವಾರವು ಸುಖದ ಪರಿವಾರವಾಗಿ ಸಮಾಜಕ್ಕೆ ಆದರ್ಶದಂತಿದೆ.

ಸಾಹಿತ್ಯ-ಸಂಗೀತ-ಹೋರಾಟ-ಆಧ್ಯಾತ ಇವೆಲ್ಲವುಗಳನ್ನು ಮೇಳವಿಸಿಕೊಂಡು ಹೊರಟ ಕಾಶಪ್ಪನವರ ಜೀವನ ನಿಜಕ್ಕೂ ಅನನ್ಯವಾದುದು. ಮನೆತನದ ದೇವರು ಕೂಡಲ ಸಂಗಮನಲ್ಲಿ ಕಾಶಪ್ಪನವರಿಗೆ ಅಪಾರ ಭಕ್ತಿ, ಕಿಟ್ಟಾ ಗ್ರಾಮದ ಹಿರೇಮಠದವರು ಮನೆತನದ ಗುರುಗಳು. ಸಧ್ಯ ಇರುವ ಶ್ರೀ ಸಿದ್ಧೇಶ್ವರ ಶಿವಾಚಾರ್ಯರಲ್ಲಿ ಕಾಶಪ್ಪನವರಿಗೆ ಅಸೀಮ ಶ್ರದ್ಧೆಯಿದೆ. ಬುರಾಣಪುರದ ಸಿದ್ಧೇಶ್ವರರು ಅವರ ಭಕ್ತಿಯ ಇನ್ನೊಬ್ಬ ಕೇಂದ್ರ ಶಕ್ತಿ, ಗುರು-ಹಿರಿಯರು-ಜಂಗಮರಾದಿಗಳಲ್ಲಿ ನಿಷ್ಠೆಯಿರಿಸಿದ ಕಾಶಪ್ಪನವರು ಸುಸಂಸ್ಕೃತ ಮನಸ್ಸು-ಹೃದಯದವರು. ಹೀಗಾಗಿಯೇ ಅವರಿಗೆ ಸಹಜವಾಗಿ ಕಾವ್ಯತ್ವದ ಸಿದ್ಧಿ ದೊರಕಿದೆ.

ಬಿಡುವು ಸಿಕ್ಕಾಗ ಅವರು ಸುಮ್ಮನೆ ಕೂಡುವುದಿಲ್ಲ. ಬಸವಾದಿ ಶಿವಶರಣರ ವಚನಗಳನ್ನು ಓದುತ್ತಾರೆ. ತುಕಾರಾಮ ಜ್ಞಾನೇಶ್ವರರ ಸಾಹಿತ್ಯವನ್ನು ಅವರು ಸಾಕಷ್ಟು ಸಲ ತಿರುವಿಹಾಕಿದ್ದಾರೆ. ಅವರು ಹೇಳುವ ಈ ಮಾತುಗಳನ್ನು ಕೇಳಬೇಕು.

“ನಾನು ಕನ್ನಡದಲ್ಲಿ ಬಸವಾದಿ ಶರಣರ ವಚನಗಳನ್ನು ಪಂಚಾಕ್ಷರ ಮಂತ್ರಗಳಂತೆ ಓದಿದ್ದೇನೆ; ಓದುತ್ತೇನೆ. ನನಗೆ ವಚನಗಳನ್ನು ಓದಿದಾಗ ಮನಸ್ಸಿಗೆ ಶಾಂತಿ ಸಿಕ್ಕಂತಾಗುತ್ತದೆ. ಬಗ್ಗಡದ ಮನಸ್ಸು-ಪರಿಶುದ್ಧಗೊಂಡಂತಾಗುತ್ತದೆ. ಹಾಗೆಯೇ ನನ್ನ ಮೇಲೆ ಪ್ರಭಾವ ಬೀರಿದವರು ಸಂತ ತುಕಾರಾಮ ಮಹಾರಾಜರು; ಸಂತಜ್ಞಾನದೇವ ಮತ್ತು ಸಂತ ಕಬೀರರು. ಆದುದರಿಂದ ಅವರೆಲ್ಲರ ಭಕ್ತಿಯ ಸಾಹಿತ್ಯವನ್ನು ಓದಿದ್ದೇನೆ. ಅವು ವಚನಗಳಂತೆ ನನ್ನ ಮನವನ್ನು ಹಿಡಿದುಕೊಂಡಿವೆ. ಮನದಲ್ಲಿ ಭಕ್ತಿ ರಸವನ್ನು ತುಂಬುವಂತೆ ಮಾಡಿವೆ. ನನ್ನ ಬರವಣಿಗೆಯ ಮೇಲೆಯೂ ಸಂತ-ಶರಣರ ಪ್ರಭಾವವಾಗಿದೆ.

ಕಾಶಪ್ಪನವರು ಆಗಾಗ ಗೀಚಿದ ಪದಗಳ ಸಂಖ್ಯೆ ಎರಡುನೂರರ ಗಡಿದಾಟಿದೆ. ಇನ್ನೂ ಅವರ ಲೇಖನಿ ಕಾರ್ಯ ನಿರತವಾಗಿದೆ. ತಾವು ರಚಿಸುವ ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿ ಹಾಡುತ್ತಾರೆ; ಕೇಳುಗರನ್ನು ಮಂತ್ರ ಮುಗ್ಧರನ್ನಾಗಿಸುತ್ತಾರೆ. ಅವರ ರಚನೆಯ ಎರಡು ತತ್ತ್ವಪದಗಳನ್ನು ಇಲ್ಲಿ ಉದ್ಧರಿಸಲಾಗಿದೆ. ತತ್ತ್ವಪದಗಳ ಅಂಕಿತವು “ಸಿದ್ಧೇಶ್ವರ” ಎಂಬುದಾಗಿದೆ:

ಬೆವರಿನ ಬೆಲಿ

ಬೆವರಿನ ಬೆಲೆ ನೀ ತಿಳಿಬೇಕಾದರ
ಬೆವರ ಸುರಿಸಿ ನೀ ದುಡಿಬೇಕೋ ॥ ಪ ॥

ಬೆವರಿನ ಮ್ಯಾಲ ಶಿವ ನಿಂತಾನ
ಬೆವರಿನ ಮ್ಯಾಲ ಹರಿ ನಿಂತಾನ
ಬೆವರಿನ ಮ್ಯಾಲ ಸುರ ನಿಂತಾನ
ಬೆವರಿನ ಬೆಲಿ ನೀ ತಿಳಿಬೇಕೋ ॥ ೧ ॥

ಬೆವರಿಂದ ದಿನ ನಿತ್ಯ ಸೂರ್ಯ ಹುಟ್ಟತಾನ
ಬೆವರಿಂದ ರಾತ್ರೀಗಿ ಚಂದ್ರ ಹುಟ್ಟುತಾನ
ಬೆವರಿಂದ ಚಿಕ್ಕಿಗಳು ಥಳಥಳ ಹೊಳಿತಾವ
ಬೆವರಿಂದ ಹೂಗಳು ಮಗಿಮಗಿಸುತಾವ ॥ ೨ ॥

ನೂರ ದೇವರುಗಳನ್ನು ದೂಡಲು ಬೇಕು
ಊರ ದೇವರ ಪೂಜೆ ಮಾಡಲು ಬೇಕು
ಭೂಮಿತಾಯಿ ದೇವರೆಂದು ನಂಬಲಿಬೇಕು
ಬೆವರಿಲೆ ಅಭಿಷೇಕ ಮಾಡಲು ಬೇಕು ॥ ೩ ॥

ಬೆವರಾಗ ಭೂಮಿ ತಾಯಿ ಹುಟ್ಟಿದಾಳು
ಬೆವರಿನ ಜಳಕವೆ ಮಾಡಿದಾಳು
ಬೆವರಿನ ಸಿರೆಯ ಉಟ್ಟಿದಾಳು
ಬೆವರಿನ ಆಭರಣ ತೊಟ್ಟಿದಾಳು ॥ ೪ ॥

ರೈತನ ಪೂಜೆಗೆ ಬೆವರೆ ಮಡಿನೀರ
ರೈತನ ದುಡಿಮೆಗೆ ಬೆವರೆ ಆಧಾರ
ಬೆವರಿನ ಕುಂಡಾದಾಗ ಹಾನ ಸಿದ್ಧೇಶ್ವರ
ಬೆವರೆ ಬದುಕಿನ ಸಾರೋದ್ಧಾರ ॥ ೫ ॥

ಸಂಸಾರೆಂಬ ಹೆಬ್ಬಾವು

ಸಂಸಾರೆಂಬ ಹೆಬ್ಬಾವು ಎಂಥಾದಾದೋ । ಯಪ್ಪಾ
ಮೂರು ಲೋಕಕ ಬಾಲ ಚ್ಯಾಚ್ಯಾದೋ ॥ ಪ ॥

ಭುಸ್ ಭುಸ್ ಭುಸ್ಸಂತ ಕೂಗತಾದೋ । ಯಪ್ಪಾ
ಪಾತಾಳಕ ನಾಲಗಿ ಚಾಚ್ಯಾದೋ ।
ಕಾಲ–ಕರ್ಮಗಳ ಒಳಗಾದೋ । ಯಪ್ಪಾ
ನಿಯಮ–ನಿಯತಿಗಳ ಮೀರ್ಯಾದೋ ॥ ೧ ॥

ನಾನಾ ಅನಾವರನ್ನೆಲ್ಲ ನುಂಗ್ಯಾದೋ । ಯಪ್ಪಾ
ನಾಮ–ಸೀಮೆಗಳ ಹೊರಗಾದೋ ।
ಪಂಚ ಭೂತಗಳ ಒಳಗಾದೋ । ಯಪ್ಪಾ
ಸಂಚಿತಘೂತ್ಕಾರ ಮಾಡತಾದೋ ॥ ೨ ॥

ಗಾನ ಗಂಧರ್ವರ ಬೆನ್ನ ಹತ್ತ್ಯಾದೋ । ಯಪ್ಪ
ಕಿವಿಯ ಹಿಡಿದು ಮ್ಯಾಲೆತ್ತ್ಯಾದೋ
ಮನು–ಮುನಿಗಳಿಗೆಲ್ಲ ಮೀರ್ಯಾದೋ । ಯಪ್ಪ
ತನುವೀಗಿ ಆಸರೆ ಆಗ್ಯಾದೋ ॥ ೩ ॥

ಕಾಮಿನಿ–ಕಾಂಚನ ಬೇರ್ಯಾದೋ । ಯಪ್ಪಾ
ಭಾಮಿನಿಯರೆಲ್ಲರ ಕುಣಿಸ್ಯಾದೋ ।
ವ್ಯೋಮಗಾಮಿಗಳಿಗೆಲ್ಲ ಮಣಿಸ್ಯಾದೋ । ಯಪ್ಪ
ರೋಮ–ರೋಮಗಳ ತಣಿಸ್ಯಾದೋ ॥ ೪ ॥

ಕೆಕ್ಕರಿಸಿ ಕಣ್ಣ ಬಿಟ್ಟಾದೋ । ಯಪ್ಪಾ
ವಕ್ಕರಿಸಿ ಎಲ್ಲರ ನುಂಗ್ಯಾದೋ ।
ರಕ್ಕಸಿ ಯಂಥಾ ಹಾವಾದೋ । ಯಪ್ಪಾ
ಸಿಕ್ಕ ಸಿಕ್ಕವರಿಗೆಲ್ಲ ಕಚ್ಚ್ಯಾದೋ ॥ ೫ ॥

ಮೆಚ್ಚಿಗಿ ಹುಚ್ಚ ಹಿಡದಾದೋ । ಯಪ್ಪಾ
ರೊಚ್ಚಿಗಿ ಬಂದು ನಿಂತಾದೋ
ಮಿಥ್ಯಕ ತಲೆ ಅಲ್ಲಾಡುಸುತಾದೋ । ಯಪ್ಪಾ
ಸತ್ಯದ ಜನರಿಂದ ದೂರಾದೋ ॥ ೬ ॥


ಧರಿಯೊಳಗ ಮಿಗಿಲುಳ್ಳ ಕಿಟ್ಟಾದೊಳಗೋ । ಯಪ್ಪ
ಮೆರೆವ ಸಿದ್ಧೇಶ್ವರ ದೇವರ ಹಾನೋ
ದೇವರಿಗಿ ನಂಬಿದರ ಲೇಸಾದೋ । ಯಪ್ಪ
ಸಂಸಾರದ ಹೆಬ್ಬಾವು ಸಾಯಿತಾದೋ ॥ ೭ ॥

(ಸ್ವತಃ ಕವಿಗಳೇ ಈ ವಿವರಗಳನ್ನು ನೀಡಿದ್ದಾರೆ.)

□



ಕಾಶಪ್ಪ ಹೆಗ್ಗಣೆ



ಕಾಶಪ್ಪ ಹೆಗ್ಗಣೆ ಅವರ ಪೂಜ್ಯ ಗುರುಗಳ ಮಠದ ಮಹಾದ್ವಾರ.



ಕಾಶಪ್ಪ ಹೆಗ್ಗಣೆ ಅವರ ಪೂಜ್ಯ ಗುರುಗಳಾದ ಸಿದ್ಧೇಶ್ವರ ಸ್ವಾಮಿಗಳು



ಕಾಶಪ್ಪ ಹೆಗ್ಗಣೆ ಅವರ ಪರಿವಾರ.



ಕಾಶಪ್ಪ ಹೆಗ್ಗಣೆ ಅವರ ಮನೆ (ಕಿಟ್ಟಾ).

೨೭. ಬಸವಣ್ಣಪ್ಪ ಪಾಟೀಲ (ಕ್ರಿ.ಶ.ಸು. ೧೯೪೨)

ಅರವತ್ತೆಂಟು ವರ್ಷಗಳ ವಯಸ್ಸಿನಲ್ಲಿರುವ ಬಸವಣ್ಣಪ್ಪ ಪಾಟೀಲ ಅವರದು ಪಾದರಸದಂತಹ ಚಟುವಟಿಕೆಯ ಬದುಕು. ವ್ಯಾಯಾಮ-ಯೋಗ ಸಾಧನೆ ಮಾಡಿದ ದೇಹಕ್ಕೆ ಮುಪ್ಪಿನ ಅಪ್ಪುವಿಕೆ ಆಗಿಲ್ಲ. ಸೇವಾ ಮನೋಭಾವದಿಂದ ಜೀವಿಸುತ್ತಿರುವ ಪಾಟೀಲರು ಸದಾ ಕ್ರಿಯಾಶೀಲರಾಗಿರುತ್ತಾರೆ. ಹಾರಕೂಡದ ಶ್ರೀ ಚೆನ್ನಬಸವ ಶಿವಯೋಗಿಗಳ ಪರಮ ಶಿಷ್ಯರಾಗಿರುವ ಬಸವಣ್ಣಪ್ಪನವರು ಪ್ರತಿ ಸೋಮವಾರ ಶ್ರೀ ಮಠಕ್ಕೆ ಹೋಗುತ್ತಾರೆ. ಮಠದಲ್ಲಿ ಸೇವೆ ಸಲ್ಲಿಸುತ್ತಾರೆ. ಹೀಗಾಗಿ ಸಧ್ಯ ಶ್ರೀ ಮಠದ ಅಧಿಪತಿಗಳಾಗಿರುವ ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯರಿಗೆ ಬಸವಣ್ಣಪ್ಪನವರೆಂದರೆ ಅತೀವ ಪ್ರೇಮವಿದೆ. ಸ್ವತಃ ಬಸವಣ್ಣಪ್ಪನವರು ಶ್ರೀ ಮಠದ ಅಧಿಪತಿಗಳ ಬಗೆಗೆ ಹೊಂದಿರುವ ಭಕ್ತಿಯನ್ನು ಕುರಿತು ಹೇಳುತ್ತಾರೆ: "ಇಡೀ ಊರಿಗೆ ಊರೇ ಹಾರಕೂಡ ಮಠದ ಬಗೆಗೆ ಅಪಾರವಾದ ಭಕ್ತಿ ಹೊಂದಿದೆ. ನಾನು ತಾರುಣ್ಯಾವಸ್ಥೆಯಿಂದಲೂ ಶ್ರೀ ಮಠದ ಪರಮ ಶಿಷ್ಯನಾಗಿಯೇ ಬೆಳೆದುಕೊಂಡು ಬಂದವನಾಗಿದ್ದೇನೆ. ಹಿಂದಿನ ಅಪ್ಪವರಾದ ಚೆನ್ನಬಸವ ಶಿವಯೋಗಿಗಳು ಮಹಾಪವಾಡ ಪುರುಷರಾಗಿದ್ದರು. ನಾವು ಭಜನೆ ಮಾಡುವಾಗ ಅವರ ನಾಮ ಸ್ಮರಣೆಯಿಂದಲೇ ಆರಂಭ ಮಾಡುತ್ತಿದ್ದೇವು. ನಮ್ಮ ಮನೆಯ ಜೇಳಜಿಯಲ್ಲಿ ಭಜನೆ ನಡೆಯುತ್ತಿದ್ದಿತು. ಆಗ ನಮ್ಮದು ಬಡತನದ ಸ್ಥಿತಿಯಿದ್ದಿತು. ಆರತಿಗೆ ಎಣ್ಣೆ ಹಾಕುವುದಕ್ಕೂ ಸಾಧ್ಯವಿಲ್ಲದಂತಹ ಆರ್ಥಿಕ ಮುಗ್ಗಟ್ಟು. ಹೀಗಾಗಿ ಆರತಿಯಲ್ಲಿಯ ದೀಪ ನಂದುವಷ್ಟರಲ್ಲಿಯೇ ಭಜನೆ ಮುಗಿಸಿ; ಮಂಗಳಾರತಿ ಮಾಡುತ್ತಿದ್ದೇವು. ಆ ಭಜನೆ ಚೆನ್ನಬಸವನ ಭಜನೆಯೇ ಆಗಿರುತ್ತಿದ್ದಿತು. ಅವರ ಕೃಪೆಯಿಂದಲೇ ಈಗ ನಮ್ಮ ಮನೆತನ ಸುಧಾರಿಸಿದೆ. ಅವರ ಕೃಪೆಯಿಲ್ಲದೆ ನಮ್ಮಲ್ಲಿ ಏನೂ ನಡೆಯುವುದಿಲ್ಲ".

ಬಸವಣ್ಣಪ್ಪನವರ ಸ್ವಗ್ರಾಮ ಬೀದರ ಜಿಲ್ಲೆ; ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ಗಿಲಿಗಿಲಿ. ಇದಕ್ಕೆ ಜನರು 'ಗಿಲಕಿ'ಯೆಂತಲೂ ಕರೆಯುತ್ತಾರೆ. ಬಸವಣ್ಣಪ್ಪನವರ ತಂದೆ ಹಣಮಂತರಾವ ಪಾಟೀಲರು. ಶ್ರದ್ಧಾವಂತ ವೀರಶೈವ ಆಚಾರಿಗಳು. ಮನೆಯಲ್ಲಿ ಗುರು-ಜಂಗಮ ಸೇವೆ ನಡೆಸುತ್ತಿದ್ದವರು. ಅವರ ಪತ್ನಿ ಶಿವಮ್ಮ. ಈ ದಂಪತಿಗಳ ಮಗನಾಗಿ ಬಸವಣ್ಣಪ್ಪನವರು ಕ್ರಿ.ಶ. ೧೯೪೨ರ ವರ್ಷದಲ್ಲಿ ಜನಿಸಿದರು. ಬಸವಣ್ಣಪ್ಪನವರು ಖಾಸಗಿ ಶಾಲೆಯಲ್ಲಿ ನಾಲ್ಕನೆಯ ತರಗತಿಯವರೆಗೆ ಕನ್ನಡದಲ್ಲಿ ಶಿಕ್ಷಣ ಪಡೆದರು. ಮುಂದೆ ಶಾಲೆ ಬಿಟ್ಟು, ಕೃಷಿಕಾರ್ಯಕ್ಕೆ ತೊಡಗಿದರು.

ಬಸವಣ್ಣಪ್ಪನವರ ಹೆಂಡತಿ ಕಸ್ತೂರಬಾಯಿ ಅವರು. ಇವರಿಗೆ ಒಟ್ಟು ನಾಲ್ಕು ಜನ ಮಕ್ಕಳು. ಇಂದುಬಾಯಿ, ಸರಸ್ವತಿ, ಜ್ಯೋತಿ ಮೂವರು ಹೆಣ್ಣುಮಕ್ಕಳು; ರೇವಣಸಿದ್ಧನೆಂಬ ಒಬ್ಬ ಮಗ ಇದ್ದಾರೆ.

ಬಸವಣ್ಣಪ್ಪನವರ ಮನೆಯ ದೇವರು ಮಹಾರಾಷ್ಟ್ರದ ಅಕ್ಕಲಕೋಟ ತಾಲ್ಲೂಕಿನಲ್ಲಿ ಬರುವ ಬುರಾಣಪುರದ ಸಿದ್ಧಯ್ಯಪ್ಪ. ಬಸವಕಲ್ಯಾಣ ತಾಲ್ಲೂಕಿನ ಹತ್ತರಗಾ ಗ್ರಾಮದ ಹಿರೇಮಠದ ಮನೆತನದವರು ಮನೆಯ ಗುರುಗಳಾಗಿದ್ದಾರೆ. ರಟಕಲ್ಲಿನ ರೇವಣಸಿದ್ಧನಲ್ಲಿಯೂ ಬಸವಣ್ಣಪ್ಪನವರಿಗೆ ಭಕ್ತಿಯಿದೆ.

ಬಸವಣ್ಣಪ್ಪನವರು ತಾರುಣ್ಯದಲ್ಲಿ ಕೆಲವು ಕೆಟ್ಟಚಟಗಳ ದಾಸರಾಗಿದ್ದರು, ಬೀಡಿ ಸೇದುವುದು; ಕೆಲಸವಿಲ್ಲದವರೊಡನೆ ಕೂಡಿ ಸೋಮಾರಿಯಾಗಿ ತಿರುಗಾಡುವುದು ಹೀಗೆಲ್ಲ ಮಾಡುತ್ತಿದ್ದರು. ಒಂದು ದಿನ ಗಿಲಿಗಿಲಿ ಗ್ರಾಮದವನೆ ಆದ ಕುಸ್ತಿ ಪೈಲವಾನನು ಬಸವಣ್ಣಪ್ಪನವರಿಗೆ ವ್ಯಂಗ್ಯ ನುಡಿಗಳನ್ನಾಡಿ, ತನ್ನೊಡನೆ ಕುಸ್ತಿ ಆಡಲು ಕರೆದನಂತೆ. ಬಸವಣ್ಣಪ್ಪನವರು ಅವನೊಡನೆ ಕುಸ್ತಿಯ ಅಖಾಡಕ್ಕೆ ಇಳಿದರು. ಪೈಲ್ವಾನನು ಅವರನ್ನು ಎತ್ತಿ ಒಗೆದನಂತೆ, ಬಸವಣ್ಣಪ್ಪನವರಿಗೆ ಅದು ದೊಡ್ಡ ಆಘಾತವೆ ಆಯಿತು; ಜನರು ಅಪಮಾನ ಮಾಡಲು ಆರಂಭಿಸಿದರು. ಎರಡು ತಿಂಗಳಲ್ಲಿಯೇ ದೈಹಿಕ ಸಾಧನೆ ಮಾಡಿ, ಹಿಂದೆ ತಮ್ಮನ್ನು ಸೋಲಿಸಿದ್ದ ಪೈಲವಾನನನ್ನು ಪಾಟೀಲರು ಸೋಲಿಸಿ ಬಿಟ್ಟರು. ಅಂದಿನಿಂದ ಅವರಿಗೆ ಕುಸ್ತಿಯಾಡುವುದು ಒಂದು ಹವ್ಯಾಸವೆ ಆಯಿತು.

ಬಸವಣ್ಣಪ್ಪನವರು 'ಕುಸ್ತಿಯ' ಹವ್ಯಾಸ ಬೆಳೆಯಿಸಿಕೊಳ್ಳುವುದಕ್ಕೆ ಒದಗಿಬಂದ ಘಟನೆಯು ಕ್ರಿ.ಶ. ೧೯೬೮ರ ವರ್ಷವು ಆಕಸ್ಮಿಕವಾಗಿರುವಂತೆ; ಕವಿಯಾಗಿ ಬೆಳೆದುದೂ ಆಕಸ್ಮಿಕವೇ ಆಗಿದೆ. ಅವರು ತಮ್ಮ ಗೆಳೆಯರೊಡನೆ ಬೇರೆ ಊರಿನ ಜಾತ್ರೆಗೆ ಹೋದರು. ಅಲ್ಲಿ ಹಾಡುಗಾರಿಕೆ ನಡೆದಿತ್ತು. ದೊಡ್ಡ ದೊಡ್ಡ ಆಶುಕವಿಗಳ ಮೇಳದವರೇ ಅದರಲ್ಲಿದ್ದರು. ಬಸವಣ್ಣಪ್ಪನವರೊಂದಿಗೆ ಇದ್ದ ನಜೀರಸಾಬ ಅವರು 'ಶ್ರವಣಕುಮಾರ'ನ ಕುರಿತು ಒಂದು ಪದ್ಯ ಹಾಡಿದರು. ಅಲ್ಲಿದ್ದ ಕವಿಯೊಬ್ಬನು ಅದನ್ನು ಹೀಯಾಳಿಸಿದನು. ಅದರಿಂದ ಕೋಪಗೊಂಡ ಬಸವಣ್ಣಪ್ಪನವರು ಹೀಯಾಳಿಸಿದ ಕವಿಗಿಂತಲೂ ಉತ್ತಮ ರೀತಿಯ ಹಾಡು ರಚಿಸುವುದಾಗಿ ನಿರ್ಧಾರ ಮಾಡಿ, ಅಂದಿನಿಂದಲೇ ಅವರು ಹಾಡುಗಳನ್ನು ಬರೆಯುವುದಕ್ಕೆ ಆರಂಭಿಸಿದರು.

ಬಸವಣ್ಣಪ್ಪನವರು ಭಜನೆಯನ್ನು ಇನ್ನೊಂದು ಹವ್ಯಾಸವಾಗಿ ಬೆಳೆಯಿಸಿಕೊಂಡು ಅದಕ್ಕಾಗಿ ಹಲವಾರು ತತ್ತ್ವಪದಗಳನ್ನು ಬರೆದರು. ತಮ್ಮ ಶಿಷ್ಯರಾಗಿರುವ ನಜೀರಸಾಬ; ಅಣ್ಣಪ್ಪ ನಾಟೀಕಾರ, ವಿದ್ಯಾಸಾಗರ ಗುತ್ತೇದಾರ ಅವರುಗಳಿಂದ ಹಾಡಿಸತೊಡಗಿದರು.

ಬಸವಣ್ಣಪ್ಪನವರು ಇಲ್ಲಿಯವರೆಗಿನ ಅವಧಿಯಲ್ಲಿ ಐದುನೂರುಕ್ಕೆ ಮೇಲ್ಪಟ್ಟು ಹಾಡುಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಗೀಗೀ–ಲಾವಣಿ; ಹಂತಿಯ ಹಾಡುಗಳಿರುವಂತೆ;

ನೂರಾರು ಭಜನೆ ಮತ್ತು ತತ್ತ್ವಪದಗಳಿವೆ. ತಮ್ಮ ಎಲ್ಲ ಹಾಡುಗಳಿಗೆ ಬಸವಣ್ಣಪ್ಪನವರು ತಮಗೆ ಆರಾಧ್ಯ ದೇವನಾಗಿರುವ ಹನುಮಂತನ ಹೆಸರನ್ನೇ ಮುದ್ರೆಯಾಗಿ ಇಟ್ಟುಕೊಂಡಿದ್ದಾರೆ. ತಮ್ಮ ಕಾವ್ಯ ಕೃಷಿ ಕುರಿತು ಬಸವಣ್ಣಪ್ಪನವರು ಹೀಗೆ ಹೇಳುತ್ತಾರೆ: "ನಾನು ಯಾವಾಗಲೂ ಪದ್ಯ ಬರೆಯುವುದಿಲ್ಲ. ತಲೆಯಲ್ಲಿ ವಿಚಾರಗಳು ಕುಣಿಯುವುದಕ್ಕೆ ಆರಂಭವಾದಾಗ ಮಾತ್ರ ಬರೆಯುತ್ತೇನೆ. ಎಷ್ಟೋ ಸಲ ಭಾಳ ಕಾಲದವರೆಗೂ ಪದ್ಯ ಬರೆಯುವುದಕ್ಕೆ ಆಗುವುದಿಲ್ಲ. ಒಂದೊಂದು ಸಲ ರಾತ್ರಿ ಮಲಗಿದಾಗ ವಿಚಾರಗಳು ಬಂದು ಬಿಡುತ್ತವೆ. ಎದ್ದು ಕುಳಿತು ಬರೆದು ಬಿಡುತ್ತೇನೆ. ಒಳ್ಳೆಯ ಪದ್ಯಗಳು ಬರೆಯ ಬೇಕಾದರೆ ಅದಕ್ಕೆ ಚಿಂತನೆ ಬೇಕಾಗುತ್ತದೆ. ಸವಾಲು, ಜವಾಬಿನ ಪದ್ಯಗಳು ಆ ಕೂಡಲೇ ರಚಿಸಿ ಬಿಡಬಹುದು.

ಸವಾಲು ಹಾಕಿ ಯಾರಾದರೂ ಕೆಣಕಿದರೆ ಆ ಕ್ಷಣವೆ ನನ್ನಲ್ಲಿ ಹಾಡು ಹುಟ್ಟಿಕೊಳ್ಳುತ್ತವೆ".

ಸಮಾಜ ಸೇವಕ, ಕುಸ್ತಿಪಟು, ಹಾಡುಗಾರ; ತತ್ತ್ವಪದಕಾರರಾಗಿ ಹೆಸರು ಮಾಡಿರುವ ಬಸವಣ್ಣಪ್ಪನವರಿಗೆ ಹಲವಾರು ಮಠ–ಮಾನ್ಯಗಳು ಸನ್ಮಾನ ಮಾಡಿವೆ. ಅದರಲ್ಲೂ ಹಾರಕೂಡದ ಶ್ರೀ ಮಠವು ಬಸವಣ್ಣಪ್ಪನವರನ್ನು ಎಲ್ಲ ನೆಲೆಯಲ್ಲೂ ಎತ್ತಿ ಹಿಡಿದ ಸ್ಥಾನವಾಗಿದೆ.

ಬಸವಣ್ಣಪ್ಪನವರ ಕೆಲವು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ಬಡತನದೊಳಗ ಅದ ಸುಖ

ಬಡತನದೊಳಗ ಅದ ಸುಖಸಾರಾ
ಕಾಯೋ ಶಂಕರಾ ಹರಹರ ॥ ಪ ॥

ಉದ್ದ ಅಡ್ಡಗಲ ಶುದ್ಧವಿದ್ದಾರೋ ಮುರೋರಿ ಮಳಾ ಅವರಾ
ಶುದ್ಧವಾಗಿ ನೀ ತಿದ್ದಿ ನೋಡೊ ತಮ್ಮಾ ಅದಕಾಲಾ ಒಂಬತ್ತುದ್ದಾರಾ
ಮಧ್ಯ ಭಾಗ ದಾಟಿದ ಕದ್ದ ಕಳ್ಳರು ಲಿಂಗ ಮುದ್ರೆ ವಯುತಾರ ॥ ೧ ॥

ಒಂದೆ ಸಂದಿ ಹಿಡದು ನೀ ಹಾದು ಹೋಗೋ ತಮ್ಮ ಮಂದಿದಾಂದು ಕಡಿ ಪೂರಾ
ಬಂದ ಜನರೀಗಿ ಕೊಂದು ಹಾಕಬೇಕು ಆರು ಮಂದಿ ಅವರಾ
ಛಂದ ನಡದರ ಕುಂದ ಬರಲಾರದು ನುಡಿ ಶಿವ ಮಂತರ ॥ ೨ ॥

ಒಂಟ ಹೋದರ ಎಂಟು ಮಂದಿ ತಂಟ ತಗಿಯತಾರ
ಬಂಟ ಆದರ ಹತ್ತೆ ಮಂದಿ ಗೊತ್ತ ನಿನಗ ಮಾಡತಾರ
ಕಟ್ಟಿ ಹಾಕಿಸಿ ಮುಟ್ಟಬೇಕು ತಮ್ಮಾ ಲಿಂಗಮುದ್ರೆ ದೇವರ ॥ ೩ ॥

ದುಷ್ಟ ಜನರೀಗಿ ಕಷ್ಟ ಕೊಟ್ಟು ಯಮಪುರದವರು ಎಳದಾರ
ಶ್ರೇಷ್ಠ ಆದ ಜನ ಗುರು ಮಂತ್ರವ ನುಡಿದು ಮೋಕ್ಷವ ಪಡದಾರ
ಶ್ರೇಷ್ಠ ಹಾರಕೂಡದಲಿ ಚೆನ್ನಬಸವಯೋಗಿ ದೇವರಾಗಿ ಕುಂತಾರ ॥ ೪ ॥

ದೇಶದೊಳಗ ನಮ ಖಾಸ ಗಿಲಕಿಯ ಬಾಲಹನುಮ ದೇವರ
ಸೋಸಿ ನೋಡೋ ನೀ ಖಾಸ ಗಂಗಾದೇವಿ ಪಶ್ಚಿಮಕ್ಕೆ ಹರಿತಾಳ
ದೋಷ ಅಳಿದು ಆ ದಾಸ ಕವಿಗಾರ ಗುರು ಸೇವೆಗೆ ನಿಂತಾರ ॥ ೫ ॥

ಸಂಸಾರದೊಳಗ ಸುಖವಿಲ್ಲ

ಸಂಸಾರದೊಳಗ ಎಳ್ಳಷ್ಟು ನಿನಗ ಸುಖವಿಲ್ಲೊ
ಜ್ಞಾನ ಸತ್ಸಂಗದೊಳು ಇರುವೆ ನೀನಾ ಭಕ್ತಿಯಿಟ್ಟು ನಡಿದವನೆ ಶರಣ ॥ ಪ ॥

ಧರ್ಮಾರ್ಥಕ್ಕಾಗಿ ಬಂದು ತೀರಿದಾನೋ ವರಣ
ಶೂರ ಶಾಹೀರ ಅನಿಸಿದಾನೋ ಧಾನಶೂರ ಕರಣ
ಧ್ರುವನ ಶತಕೋಟಿ ಜಪವ ಮಾಡಿದಾನೋ ತರುಣ
ನೂರ ವರುಷ ಆಯುಷ್ಯ ಪಡೆದ ಮಾರ್ಕಂಡೇಯ ಶರಣ ॥ ೧ ॥

ಜಿತೀಂದ್ರಿಯನಾಗಿ ಶಕ್ತಿ ಕಾಯ್ದಿದಾನೋ ವೀರ ಹನುಮಾನ
ಬೋಧ ಮಾಡಿದ ಅರ್ಜುನಗ ರಥ ಹೊಡಿಯಲು ಸಿದ್ಧನಾದ ಕೃಷ್ಣ
ತಾತ ಭೀಷ್ಮಗ ಶಿಖಂಡಿಯಿಂದಾಯಿತೋ ಮರಣ ॥ ೨ ॥

ಬ್ರಹ್ಮಚಾರ್ಯ ಪರಿಪಾಲನೆ ಮಾಡಿದಾನೋ ಲಕ್ಷ್ಮಣ
ಅರಣ್ಯದಲ್ಲಿ ಫಲ ಅವನೀಗಿ ಕೊಟ್ಟಿಲ್ಲ ಆವರಣ
ಗರ್ವ ಭಂಗ ಮಾಡದಕ ಸೀತಾಗ ಕದ್ದೊಯ್ದ ರಾವಣ
ಕರ್ಮಕ್ಕಾಗಿ ಬಂದು ಒದಗಿತ್ತೋ ಮರಣ ॥ ೩ ॥

ಲಿಂಗ ಧಾರಣ ಮಾಡಲಾಕ ಬಂದ ಬಸವಣ್ಣ
ಮಂಗ್ಯಾನಂಗ ಕುಣಿತಿದ್ದ ಕೊಂಡಿಮಂಚಣ್ಣ
ಸಂಗಮೇಶ್ವರಗ ಶರಣೆನಲಿಲ್ಲ ಬಿಜ್ಜಳ ಸ್ಥಾನ ॥ ೪ ॥

ತನುಮನ ಧನ ಗುರುವಿನ ಪಾದಕ್ಕ ಅರ್ಪಣ
ಹೊನ್ನು ಹೆಣ್ಣು ಮಣ್ಣು ಇವು ಬಹಳ ಕೆಟ್ಟದ್ದಣ್ಣ
ಖೂನಾ ಹಿಡಿದು ಬಾ ನೀ ಗಿಲ್ಕಿಯನ್ನ
ಬಾಲ ಹನುಮಾನ ದಯಲಿಂದ ದಶಿಂದ್ರಿ ಸ್ವಾಧೀನ ॥ ೫ ॥

ಹೊಲ

ಹೆಂತ ಹೊಲ ಮಾಡಲಿಲ್ಲ
ಖ್ಯಾಲ ಹರಕೊಂಡು ಹೋಯಿತ್ತಲ್ಲ ॥ ಪ ॥

ಬುದ್ಧಿಯ ಮೋಡಿ
ತಿದ್ದಿದು ನೋಡಿ ಕಲ್ಲ ಕಟ್ಟಲಿಲ್ಲ ॥ ಅ.ಪ ॥

ಮೂರೋರಿ ಎಕರೆ ಈ ಹೊಲದೊಳು
ಜೇಕ ಕರಕಿ ಹುಲ್ಲ
ಶಿವಜ್ಞಾನವೆಂಬ ಗುದ್ದಲಿ ಹಚ್ಚಿ
ಹುಲ್ಲ ತೆಗೆಯಲಿಲ್ಲ ॥ ೧ ॥

ಮೂನ್ನೂರದರವತ್ತು ನರಬೇರಗಳು
ಆಯ್ದು ತಗಿಯಬೇಕು ಮೊದಲ
ಎಳ ಹಾದಿ ಬಿದ್ದು ಹಾಳ ಆಗತಾದ
ಹೊಲ ಅದು ನಿನ್ನಗ ತಿಳಿದಿಲ್ಲ ॥ ೨ ॥

ಕಸರ ಇಲ್ಲದೆ ಕಸ ಹೊಡಿದು
ಹಸನ ಇಡಬೇಕು ಖಿಲ್ಲಾ

ವ್ಯಸನದ ಕಾಳಕಿ ಕಡಿಯಲು ಬೇಕು
ಕಾಸಗಿ ಕಾಳಗಿ ಆಯಲುಬೇಕು ॥ ೩ ॥

ಗುರು ಮಂತ್ರ ಎಂಬೊ ಗೊಬ್ಬರ ಹರವಿ
ಹೊಡಿಬೇಕು ನೇಗಿಲಾ
ಕೀಲಯೆಂಬ ಉಡಚೀಲಕಟ್ಟಿ
ಬೀಜ ಬಿಡಬೇಕು ತಡವಿಲ್ಲ ॥ ೪ ॥

ಕಷ್ಟ ಇಲ್ಲದೆ ತಿಳಿ ನಷ್ಟ ಆಗಲಾರದು
ಬೆಳೆದು ಬರುತ್ತಾದಲ್ಲ
ಮಳ್ಳ ಮನುಜನಿಗೆ ಮುಳ್ಳ ಹಚ್ಚ
ಅಂತ ಅಂದ್ರನೂ ಕೇಳಲಿಲ್ಲ ॥ ೫ ॥

ಬಾಗಿದ ತೆನಿ ಮ್ಯಾಲ ಕಾಗಿ ಕುಂತ
ಕಾಳತಿನಬೇಕೆಂದಿತಲ್ಲ
ಬಂದ ಕಾಗಿಗೆ ಗಿಲ್ಕಿಯ ಬಾಲಹನುಮ
ಕಟ್ಟಿ ಹಾಕಿದನಲ್ಲ ॥ ೬ ॥


(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿದ್ದಾರೆ.)




ಬಸವಣ್ಣಪ್ಪನವರಿಗೆ 'ಸೇವಾ ದೀಕ್ಷೆ' ನೀಡಿದ ಶ್ರೀ ಸದ್ಗುರು ಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಹಾರಕೂಡ.




ಬಸವಣ್ಣಪ್ಪನವರು ತಮ್ಮ ಎದೆಯಲ್ಲಿ ತಬಲದ ನಾದ ಹೊರಡಿಸುತ್ತ ಹಾಡುತ್ತಿರುವ ನೋಟ.



ಬಸವಣ್ಣಪ್ಪ ಪಾಟೀಲರ ತತ್ತ್ವಪದಗಳಿಗೆ ಪ್ರಸಾರ ಮಾಧ್ಯಮವಾಗಿರುವ ಶ್ರೀಯುತರಾದ ವಿದ್ಯಾಸಾಗರ ಗುತ್ತೇದಾರ, ನಜೀರ ಸಾಹೇಬ, ಅಣ್ಣಪ್ಪ ನಾಟೀಕಾರ ಅವರು.



ಬಸವಣ್ಣಪ್ಪನವರು ತಮ್ಮ ಮನೆತನದ ಗುರುಗಳ ಮಠದಲ್ಲಿನ ಗುರುತಾಯಿ ಅವರೊಂದಿಗೆ. (ಹತ್ತರಗಾ).




ಬಸವಣ್ಣಪ್ಪ ಪಾಟೀಲ ಅವರ ಮನೆ ದೇವರು ಬುರಾಣಪುರ ಸಿದ್ಧಯ್ಯಪ್ಪನ ಛಾಯಾಚಿತ್ರ.



ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯರು, ಹಾರಕೂಡ–ಅವರ ಸನ್ನಿಧಿಯಲ್ಲಿ ಬಸವಣ್ಣಪ್ಪನವರು.



ಬಸವಣ್ಣಪ್ಪನವರ ಆರಾಧ್ಯ ದೇವರು ಹನುಮಾನ ದೇವಾಲಯ (ಗಿಲಿಗಿಲಿ).




ಬಸವಣ್ಣಪ್ಪನವರ ಪರಿವಾರ.



ಬಸವಣ್ಣಪ್ಪ ಪಾಟೀಲ.



ಬಸವಣ್ಣಪ್ಪ ಪಾಟೀಲರ ಮನೆ (ಗಿಲಿಗಿಲಿ).



ಬಸವಣ್ಣಪ್ಪ ದಂಪತಿಗಳು (ಪತ್ನಿ ಕಸ್ತೂರಬಾಯಿ).



ಪೈಲ್ವಾನ ಬಸವಣ್ಣಪ್ಪ ಪಾಟೀಲ.



ಬಸವಣ್ಣಪ್ಪನವರ ಮನೆಯ ಒಳಾಂಗಣ.

೨೮. ನಾಗೇಂದ್ರಪ್ಪ ಬಿರಾದಾರ (ಕ್ರಿ.ಶ.ಸು. ೧೯೪೫–೨೦೧೦)

ಕೊಹಿನೂರು ಗ್ರಾಮಕ್ಕೆ ಹತ್ತಿರದ ನೆಲೆ ಸಿರಗಾಪುರ. ಬಸವಕಲ್ಯಾಣ ತಾಲ್ಲೂಕಿನ ಗ್ರಾಮವಿದು. ಇಲ್ಲಿನ ಬಿರಾದಾರ ಮನೆತನವು ವೀರಶೈವ ಸಂಸ್ಕೃತಿಗೆ ಸಾಕಾರವಾದ ವಂಶ. ಈ ಮನೆತನದ ಧರ್ಮರಾವ ಬಿರಾದಾರ ಎಂಬುವವರು ನಿಷ್ಠಾವಂತ ವೀರಶೈವರು. ಹಾರಕೂಡ ಚೆನ್ನಬಸವ ಶಿವಯೋಗಿಗಳ ಪರಮ ಶಿಷ್ಯರಾಗಿದ್ದು ಅವರನ್ನು ಕುರಿತು ತಮ್ಮ ಮಗನಿಂದ ಭಕ್ತಿಯ ಹಾಡುಗಳನ್ನು ರಚಿಸುವಂತೆ ಪ್ರೇರಣೆ ನೀಡಿದ್ದಾರೆ. ಆ ಮಗನೆ ನಾಗೇಂದ್ರಪ್ಪನವರು. ಕವಿಗಳ ತಾಯಿ ಮಹಾದೇವಿ.

ಧರ್ಮರಾವ ಮತ್ತು ಮಹಾದೇವಿ ದಂಪತಿಗಳಿಗೆ ನಾಗೇಂದ್ರಪ್ಪನವರಲ್ಲದೆ ಇನ್ನು ನಾಲ್ಕು ಜನ ಮಕ್ಕಳಿದ್ದಾರೆ. ಮನೆತನಗ ಕಾಯಕ ಒಕ್ಕಲುತನ. ಆರ್ಥಿಕವಾಗಿ ಸುಸ್ಥಿಯಲ್ಲಿರುವ ಕುಟುಂಬ. ಕಾಯಕ ಜೀವಿಗಳಾಗಿದ್ದ ಧರ್ಮರಾವ ಬಿರಾದಾರ ಅವರು ಕೃಷಿಯೊಂದಿಗೆ ಬಟ್ಟೆ ಮಾರುವ ವ್ಯಾಪಾರವನ್ನು ಮಾಡುತ್ತಿದ್ದರು. ಅವರಿಗೆ ಕಲಾವಿದರು ಎಂದರೆ ತುಂಬಾ ಗೌರವ. ಈ ಕಾರಣದಿಂದಲೇ ಕೊಹಿನೂರು ಬಿಟ್ಟು ಸಿರಗಾಪುರಕ್ಕೆ ಬಂದ ಹುಸನಾ ಸಾಬರಿಗೆ ಬಿರಾದಾರ ತಮ್ಮಲ್ಲಿ ಆಶ್ರಯ ನೀಡಿ, ಅವರ ಜೀವನಕ್ಕೊಂದು ನೆಲೆ ಒದಗಿಸಿಕೊಟ್ಟರು. ಹಾಗೆಯೇ ಬಿರಾದಾರ ಮನೆತನದವರು ಬಡವರನ್ನು; ದುರ್ಬಲ–ದುಃಖಿತರನ್ನು ದಯೆ–ಅಂತಃಕರಣದಿಂದ ಕಾಣುತ್ತ ಬಂದವರು. ಅವರಿಗೆ ತಮ್ಮ ಕೈಲಾದ ಸಹಾಯವನ್ನು ನೀಡುತ್ತಲೇ ಬದುಕಿದರು.

ನಾಗೇಂದ್ರಪ್ಪನವರು ಶಾಲೆಗೆ ಹೋಗಿ ಗಳಿಸಿದ ಶಿಕ್ಷಣದಕ್ಕಿಂತಲೂ ಜೀವನ ಶಾಲೆಯಲ್ಲಿ ಕಲಿತದ್ದು ಹೆಚ್ಚು. ಅವರ ಅನುಭವದ ಬದುಕು ಸಾರವತ್ತಾದುದು, ಹಿತ–ಮಿತದಿಂದ ಕೂಡಿದುದು. ಅವರ ಧರ್ಮಪತ್ನಿ ರತ್ನಾಬಾಯಿ. ಈ ದಂಪತಿಗಳಿಗೆ ಒಬ್ಬ ಗಂಡುಮಗ ಮತ್ತೆ ಇಬ್ಬರು ಹೆಣ್ಣುಮಕ್ಕಳು ಇದ್ದಾರೆ.

ಬಿರಾದಾರ ಮನೆತನದ ದೇವರು ಮಹಾರಾಷ್ಟ್ರದಲ್ಲಿ ಬರುವ ನಾಗರಾಳ ಗ್ರಾಮದ ಸಿದ್ಧೇಶ್ವರ. ಮನೆಯ ಗುರುಗಳು ಹಾರಕೂಡ ಹಿರೇಮಠದ ಚೆನ್ನಬಸವ ಶಿವಯೋಗಿಗಳು.

ತಮ್ಮ ತಂದೆಯವರು ಖ್ಯಾತ ಕವಿ ಹುಸನಾಸಾಬರಿಗೆ ಆಶ್ರಯ ನೀಡಿದ್ದರಿಂದ, ನಾಗೇಂದ್ರಪ್ಪನವರ ಮೇಲೆ ಆ ಕವಿಯ ಪ್ರಭಾವವಾಯಿತು. ಕಿರಿಯ ವಯಸ್ಸಿನಿಂದಲೇ

ಹುಸನಾ ಸಾಬರ ಸಂಪರ್ಕ ಒದಗಿ ಬಂದಂತಾಯಿತು. ಹುಸನಾ ಅವರು ಹಾಡುತ್ತಿದ್ದ ಪದ್ಯಗಳನ್ನು ಕೇಳುತ್ತಿದ್ದ ನಾಗೇಂದ್ರಪ್ಪನವರು ಅವುಗಳನ್ನು ಕಲಿಯುವುದಕ್ಕೆ ಆರಂಭಿಸಿದರು. ಅವರಿಗೆ ಹಾಡುವ ಕಂಠವಿದ್ದಿತು. ಭಜನೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದರು. ಹುಸನಾ ಮತ್ತು ಇನ್ನಿತರ ತತ್ತ್ವಪದಕಾರರ ಹಾಡುಗಳನ್ನು ಹಾಡುತ್ತಿದ್ದರು.

ಹುಸನಾ ಮಾಸ್ತರರು ನಾಗೇಂದ್ರಪ್ಪನವರ ಕಲೆಗಾರಿಕೆಯನ್ನು ಗುರುತಿಸಿದರು. ಅವರಿಗೆ ಗುರುವಾಗಿ ನಿಂತುಕೊಂಡು ಮಾರ್ಗದರ್ಶನ ನೀಡಿದರು. ಆದುದರಿಂದಲೇ ನಾಗೇಂದ್ರಪ್ಪನವರು ತಮ್ಮ ಗುರು ಮತ್ತು ಆರಾಧ್ಯದೇವರನ್ನು ಮನದಿಂದ ಸ್ಮರಿಸಿರುವರು:

"ಹುಸನಾನ ಶಿಷ್ಯ ನೋಡ್ರಿ ನಾಗೀಂದ್ರ
ವ್ಯಸನ ತೆಗೆದು ನಿಮಗ ತಿಳಿಸಿ ಹೇಳ್ಯಾರ"
"ದೇಶದೊಳು ಸಿರಗಾಪುರ ಸ್ಥಳಕ್ಕೂ । ಗುರುಮನಿ ಆದ ಠಿಕೊ
ಶಶಿಧರನ ದರುಶನ ಮಾಡಿ ಮುಕ್ತಿಯ ಪಡಿಬೇಕೊ".

ನಾಗೇಂದ್ರಪ್ಪನವರಿಗೆ ಹಲವು ಸಂಗೀತ ವಾದ್ಯಗಳು ಅತ್ಯಂತ ಶಾಸ್ತ್ರೀಯವಾಗಿ ನುಡಿಸುವುದಕ್ಕೆ ಬರುತ್ತಿದ್ದವು. ಶಾಸ್ತ್ರೀಯ ಸಂಗೀತ ಜ್ಞಾನವಿದ್ದಿತು. ಹಾಡುಗಳನ್ನು ರಾಗಕ್ಕೆ ಅಳವಡಿಸಿ ಹಾಡುತ್ತಿದ್ದರು. ಅದರಲ್ಲೂ ಹಾರ್ಮೋನಿಯಂ ನುಡಿಸುವುರಲ್ಲಿ ಅವರದು ಸಿದ್ಧಹಸ್ತ. ಈ ಕಲೆಯನ್ನು ನಾಗೇಂದ್ರಪ್ಪನವರು ಹಲವು ಕಾಲ ಕಲಬುರ್ಗಿ ಜಿಲ್ಲೆ, ಆಳಂದ ತಾಲ್ಲೂಕಿನ ಬೋಧನ ಗ್ರಾಮದಲ್ಲಿದ್ದ ಗುರುಲಿಂಗಪ್ಪನವರಲ್ಲಿ ಕಲಿತರು. ಹಾರ್ಮೋನಿಯಂ ಬಾರಿಸುತ್ತ : ಅದರೊಡನೆ ಧ್ವನಿ ಮೇಳವಿಸಿ ಹಾಡುತ್ತಲೇ ನಾಗೇಂದ್ರಪ್ಪನವರು ಸ್ವತಃ ಪದ್ಯಗಳ ರಚನೆ ಆರಂಭ ಮಾಡಿದರು. ಕ್ರಿ.ಶ ೧೯೭೭ರಿಂದ ಅವರ ಹಾಡುಗಳ ರಚನೆಗೆ ಆರಂಭವಾದಂತೆ ತಿಳಿದು ಬರುತ್ತದೆ.

ನಾಗೇಂದ್ರಪ್ಪನವರು ತಮ್ಮಲ್ಲಿನ ಸಾಮರ್ಥ್ಯವನ್ನು ಸರಿಯಾಗಿ ದುಡಿಸಿಕೊಳ್ಳುವುದಕ್ಕಾಗಿ ಭಜನಾ ಸಂಘವೊಂದನ್ನು ಕಟ್ಟಿದರು. ಅದಕ್ಕೆ "ಮಹದೇವ ಭಜನಾ ಸಂಘ"ವೆಂದು ನಾಮಕರಣ ಮಾಡಿದರು. ತಮಗೆ ಸಹವರ್ತಿಗಳು ಮತ್ತು ಸಮಾನ ಮನೋಧರ್ಮದವರಾಗಿದ್ದವರನ್ನು ಸಂಘದಲ್ಲಿ ಕೂಡಿಸಿಕೊಂಡರು. ಹಣಮಂತ ಬಿರಾದಾರ, ಸಿದ್ರಾಮಪ್ಪ ಬಿರಾದಾರ, ಹಣಮಂತ ಜಮಾದಾರ, ಸೂರ್ಯಕಾಂತ ಬಿರಾದಾರ, ನಿಜಣ್ಣಾ ಮುಲಗೆ, ಗುಲಾಲಸಾಬ, ದತ್ತು ಮುಲಗೆ ಅವರಲ್ಲಿ ಕೆಲವರಾಗಿದ್ದಾರೆ. ನಾಗೇಂದ್ರಪ್ಪನವರ ನೇತೃತ್ವದಲ್ಲಿ ಮಹಾದೇವ ಭಜನಾಸಂಘವು ಕನ್ನಡ ನಾಡಿನ ಗಡಿಯನ್ನು ದಾಟಿ ಆಂಧ್ರ, ಮಹಾರಾಷ್ಟ್ರದ ಪ್ರದೇಶಗಳಲ್ಲಿಯೂ ಸಂಚರಿಸಿದ್ದುಂಟು.

ನಾಗೇಂದ್ರಪ್ಪನವರಲ್ಲಿ ನಾಟಕದ ಬಗೆಗೂ ಆಸಕ್ತಿಯಿದ್ದಿತು. ಪೇಟಿ ಮಾಸ್ತರರಾಗಿದ್ದರಿಂದ ಹಲವಾರು ನಾಟಕಗಳಿಗೆ ಹಾರ್ಮೋನಿಯಂ ಬಾರಿಸುತ್ತ ನಾಟಕ

ಮಾಸ್ತರಿಕೆಯೂ ಮಾಡಿದ್ದುಂಟು ಅವರು ಕಲಿಸಿದ ನಾಟಕಗಳಲ್ಲಿ ರತ್ನಮಾಂಗಲ್ಯ, ತವರೂರು, ರೈತನ ರಕ್ತ, ಅಣ್ಣ – ತಂಗಿ ಇತ್ಯಾದಿ ನಾಟಕಗಳು ಪ್ರಮುಖವಾಗಿವೆ. ನಾಗೇಂದ್ರಪ್ಪನವರ ನಾಟಕ ಪ್ರದರ್ಶನದ ಬಗೆಗೆ ಇಂದಿಗೂ ಸಿರಗಾಪುರದ ಜನತೆ ನೆನೆಸುತ್ತಾರೆ.

ನಾಗೇಂದ್ರಪ್ಪನವರು ನಿಶ್ಚಿತವಾದ ಸಮಯದಲ್ಲಿ ಪದ್ಯಗಳನ್ನು ಕಟ್ಟುತ್ತಿದ್ದಂತೆ ಹೇಳಲಾಗುತ್ತದೆ. ಅವರು ರಾತ್ರಿ ಒಂಬತ್ತರಿಂದ ಹನ್ನೊಂದು ಗಂಟೆಯವರೆಗೆ ಮತ್ತು ಮುಂಜಾನೆ ಆರರಿಂದ ಎಂಟು ಗಂಟೆಯವರೆಗೆ ಪದ್ಯಗಳನ್ನು ರಚಿಸುತ್ತಿದ್ದರಂತೆ. ಅವರು ಕಟ್ಟಿದ ಪದ್ಯಗಳನ್ನು ಆಳಂದ ತಾಲ್ಲೂಕಿನ ಸಿರಿಚಂದ ಗ್ರಾಮದ ಹಣಮಂತ ಬಿರಾದಾರ ಕನ್ನಡದ ಅಕ್ಷರಗಳಲ್ಲಿ ಸುಂದರವಾಗಿ ಬರೆದು ಸಂಗ್ರಹಿಸಿ ಇಡುತ್ತಿದ್ದರು. ಹಾರಕೂಡ ಹಿರೇಮಠದ ಪ್ರಕಾಶನದಿಂದ ನಾಗೇಂದ್ರಪ್ಪನವರ ಹಾಡುಗಳು ಸಂಗ್ರಹಿಸಿ ಕ್ರಿ.ಶ ೨೦೧೦ರಲ್ಲಿ ಹೊರ ತಂದಿರುವುದು ಶ್ಲಾಘನೀಯ ಸಂಗತಿಯಾಗಿದೆ. ಕ್ರಿ.ಶ.೧೯೯೭ರಲ್ಲಿ ಅವರ ಮುಖ್ಯ ಹಾಡುಗಳ 'ಕ್ಯಾಸೆಟ್ಟ' ಒಂದು ಬಿಡುಗಡೆಯಾಗಿದೆ.

ನಾಗೇಂದ್ರಪ್ಪನವರು ಆರುವರೆ ದಶಕಗಳ ಸಾರ್ಥಕ ಬದುಕನ್ನು ನಡೆಯಿಸಿ ಕ್ರಿ.ಶ. ೨೦೧೦ರಲ್ಲಿ ಲಿಂಗದೊಳಗಾದರು. ನಾಗೇಂದ್ರಪ್ಪನವರು ಹೆಚ್ಚಿನ ಪದಗಳಿಗೆ "ಶಶಿಧರ"ನ ಅಂಕಿತವೂ; ಕೆಲವು ಪದ್ಯಗಳಿಗೆ ತಮ್ಮ ಹೆಸರಿನ ಅಂಕಿತವೂ ಹಾಕಿ ಕಟ್ಟಿರುವುದುಂಟು. ಇಲ್ಲಿ ಅವರ ಎರಡು ಪದ್ಯಗಳನ್ನು ಕೊಡಲಾಗಿದೆ:

ನನ್ನ ಮೋಹನ

ನೀ–ನನ್ನ ಮೋಹನ
ನೀ ಹೋಗದು ನನಗೇನು ಖೂನ ॥ ಪ ॥

ಏನ ಸುಖ ಆಗಿಲ್ಲ ನೋಡ್ರಿ ನನ್ನ
ಆಶಿ ಹೇಳಿ ನನಗೆ ಘಾಶಿ ಮಾಡ್ಯಾನ
ಹಣೆ ಮ್ಯಾಲಿನ ಕುಂಕುಮ ಕೆಡಿಸಿ ಬಿಟ್ಟಾನ
ಕೊರಳೊಳಗಿನ ತಾಳಿ ಕಡಿದು ಹಾಕ್ಯಾನ ॥ ೧ ॥

ಭಾರಿ ಮಾಡಿದ ನಿನ್ನ ವರ್ಣನ
ನನ್ನ ಕಿಮ್ಮತ ಕಾಯಿದಿಲ್ಲ ಕಡಿತನ

ಮತ್ತೊಮ್ಮೆ ಬರಬ್ಯಾಡ ನನ್ನ ಮನಿತಾನ
ಕದ್ದು ತಿಂದು ವಿಶ್ವಾಸ ಇಲ್ಲದವನ ॥ ೨ ॥

ಪಂಚ ತತ್ತ್ವಮನಿ ಕಟ್ಟಿ ಬಿಟ್ಟಾನ
ಎಂಥ ಶಕ್ತಿ ನೋಡ್ರಿ ಬ್ರಹ್ಮದೇವರನ
ಇಬ್ಬರು ಮಾಡಬೇಕು ಮನಿಯ ಹಸನ
ಲಕ್ಷ ತಿಳಿ ತಿರುಗ ಬ್ಯಾಡೋ ಶ್ವಾನ ॥ ೩ ॥

ಮನಿಯ ಕಾರಬಾರ ಮಾಡವ ನೀನ
ಹೇಳಿದಂಗ ಕೇಳಿ ನಡಿಯಾಕೆ ನಾನ
ಕೆಡಸಿ ಬಿಟ್ಟಿ ಎಂಥ ಮನಿತಾನ
ಮಣ್ಣಾಗ ಒತ್ತಿ ಬಂದೀದಿ ನನ್ನ ॥ ೪ ॥

ದೇಶದೊಳಗ ಸಿರಗಾಪೂರ ಸ್ಥಾನ
ವರವು ಬೇಡ್ಯಾಳ ಶಶಿಧರ
ಸವೆಯಲಾರದ ಭಾಗ್ಯ ನೀಡಿ ಬಿಟ್ಟಾನ
ಜನ್ಮ ಉದ್ಧಾರ ಆಯಿತು ಹೆಣ್ಣಿನ ॥ ೫ ॥

(ಬೀ. ಜಿ. ಅ.ಕ–ಪು.೨೦೦–೨೦೧)

ವ್ಯಾಪಾರ ಮಾಡ್ರಿ

ಮೂರು ಲೋಕದ ಮುತ್ತು; ಥಳಥಳ ಹೊಳಿತಾದ ಶಿಸ್ತ
ವ್ಯಾಪಾರ ಮಾಡ್ರಿ ತುರ್ತ; ಲಾಭ ಆಗುತಾದ ನೋಡ್ರಿ ಮುತ್ತ ॥ ಪ ॥

ಬಾಜಾರದೊಳಗ ಹುಡುಕಿದರ ಸಿಗಲ್ಲಾ ನೋಡ್ರಿ ಮುತ್ತ
ಮುತ್ತ ಕೊಂಡ್ರ ಖೊಲ್ಲಿ ಆದ ನೋಡ್ರಿ ಬಹಳ ನಿವಂತ
ರೊಕ್ಕ ಇಲ್ಲದ ಸಿಗತಾದ ನೋಡ್ರಿ ಸವಿಲಾರದ ಮುತ್ತ
ಜಾಹೀರ ಬಸವಕಲ್ಯಾಣ ತಾಲ್ಲೂಕದೊಳಗಿರುವ ಮುತ್ತ ॥ ೧ ॥

ನಿತ್ಯ ತಪ್ಪದ ಹಾರಕೂಡ ಮಠದಾಗ ಪೂಜೆ ಮಾಡೋ ಮುತ್ತ
ಅಭಿಮಾನ ತೊಟ್ಟು ವೀರಶೈವರ ಉದ್ಧಾರ ಮಾಡಿದ ಮುತ್ತ

ಕೋಟಿ ಜನರಿಗೆ ಅನ್ನ ಹಾಕಿ ತೃಪ್ತಿ ಪಡಿಸಿದ ಮುತ್ತ
ಜನನ ಮರಣ ತಪ್ಪಿಸಿ ಚೆನ್ನಾಗಿ ಹೆಸರ ಪಡೆದ ಮುತ್ತ ॥ ೨ ॥
ಬ್ರಹ್ಮಚರ್ಯ ಪಾಲಿಸಿಕೊಂಡು ಪವಾಡ ತೋರಿಸಿದ ಮುತ್ತ
ತನ್ನ ಶರೀರ ಮೇಲೆ ಇದ್ದ ಕೂದಲಿಗೆ ಬಂಗಾರ ಮಾಡಿದ ಮುತ್ತ
ನೀರಿಲ್ಲದ ಬಾವಿಯೊಳಗ ಹೋಗಿ ನಿಂತುಕೊಂಡು ಮುತ್ತ
ಮಡಿಬಟ್ಟಿ ತನ್ನ ಕೈಲಿ ಹಿಂಡಿ ಬಾವಿಗೆ ನೀರು ತಂದ ಮುತ್ತ ॥ ೩ ॥

ಸಣ್ಣ ಶಿಶುವಿಗೆ ತೊಡಿಯ ಮ್ಯಾಲೆ ಎತ್ತಿಕೊಂಡು ಆಡಿಸಿದ ಮುತ್ತ
ಶಿಶುವಿನ ಮೈಯಾಗಿನ ರೋಗ ನಿವಾರಣೆ ಮಾಡಿದ ಮುತ್ತ
ತನ್ನ ಭಕ್ತರು ನಡಿದಾಡುವ ಹಾದಿ ಹಸನು ಮಾಡಿದ ಮುತ್ತ
ಇಷ್ಟ ಪ್ರಾಣ ದಾಟಿ ಭಾವಲಿಂಗ ಸ್ಥಲಕ್ಕೆ ಮುಟ್ಟಿದ ಮುತ್ತ ॥ ೪ ॥

ತಾಯಿ ರೇವಮ್ಮನ ಉದರದಲ್ಲಿ ಉದ್ಭವಿಸಿ ಬಂದ ಮುತ್ತ
ರಜ–ತಮ–ಸತ್ವ ಮೂರು ಗುಣ ತಿಳಿದ ಮುತ್ತ
ಏಕೋ ಚಿತ್ ಒಂಬತ್ತು ಲಿಂಗದ ಪೂಜಿ ಮಾಡಿದ ಮುತ್ತ
ಇಪ್ಪತ್ತೊಂದು ಸಾವಿರದ ಆರುನೂರು ಜಪ ಎಣಿಸಿದ ಮುತ್ತ ॥ ೫ ॥

ಮಗಿ ಗ್ರಾಮದಲ್ಲಿ ಹೂವಿನಂತೆ ಆನಂದ ಬೆಳೆದ ಮುತ್ತ
ತಾಲ್ಲೂಕ ಚಿಂಚೋಳಿ ಸ್ಥಳದಾಗ ಚಿನ್ನ ಇಟ್ಟ ಮುತ್ತ
ಕರ್ನಾಟಕ ತುಂಬಾ ಜ್ಯೋತಿ ಹಚ್ಚಿ ಬೆಳಗಿಸಿದ ನೋಡು ಮುತ್ತ
ಸಿರಗಾಪುರ ನಾಗೇಂದ್ರಗ ಆಶೀರ್ವಾದ ಮಾಡಿದ ಮುತ್ತ ॥ ೬ ॥

(ಸಿರಗಾಪುರದಲ್ಲಿಂದು ವಾಸವಾಗಿರುವ ನಾಗೇಂದ್ರಪ್ಪನವರ ವಂಶಸ್ಥರು ಈ ವಿವರಗಳನ್ನು ನೀಡಿದ್ದಾರೆ.)



ನಾಗೇಂದ್ರಪ್ಪ ಅವರ ತಾಯಿ
ಮಹಾದೇವಿ ಬಿರಾದಾರ.

ನಾಗೇಂದ್ರಪ್ಪ
ಬಿರಾದಾರ.





ನಾಗೇಂದ್ರಪ್ಪನವರ ಕರುಳುಬಳ್ಳಿ



ನಾಗೇಂದ್ರಪ್ಪ ಬಿರಾದಾರ ಅವರ ಮನೆಯ ಹೊರಗಿನ ನೋಟ (ಸಿರಗಾಪುರ).



ನಾಗೇಂದ್ರಪ್ಪನವರಿಗೆ ಬೆನ್ನ
ಹಿಂದಿನ ಬೆಳಕಾಗಿದ್ದ
ಷ.ಬ್ರ.ಚೆನ್ನವೀರ
ಶಿವಾಚಾರ್ಯರು



ನಾಗೇಂದ್ರಪ್ಪ ಬಿರಾದಾರ
ಅವರ ಪರಮಾರಾಧ್ಯ
ಗುರುಗಳು ಲಿಂ.ಶ್ರೀ.ಷ.ಬ್ರ.
ಚೆನ್ನಬಸವ
ಶಿಯೋಗಿಗಳು.(ಹಾರಕೂಡ).

೨೯. ಸಿದ್ಧಮಲ್ಲಪ್ಪ ಪಾಟೀಲ (ಕ್ರಿ.ಶ.ಸು. ೧೯೪೫)

'ಎಕಲೂರು' ಎಂದ ಕೂಡಲೇ ಬೀದರ ಜಿಲ್ಲೆಯ ಭಕ್ತಮನಗಳಿಗೆ ಅಷ್ಟೇ ಅಲ್ಲ; ಅದರ ಗಡಿಯಾಚೆಯವರೆಗೂ "ಭಜನಾ ಮಂಡಳಿ" ಕೀರ್ತಿ ನೆನಪಾಗಿ ಆಧ್ಯಾತ್ಮದ ಆನಂದ ಉಂಟಾಗುತ್ತದೆ. ಹಿಂದಿನ ಹಿರಿಯರು ನಡೆಸಿಕೊಂಡು ಬಂದಿದ್ದ ಪರಿಮಿತ ವ್ಯಾಪ್ತಿಯ ಭಜನೆಯ ಸಂಘಕ್ಕೆ ಸಮಷ್ಟಿ ರೂಪ ನೀಡಿ, ಅದು ಅಭಿವೃದ್ಧಿಯಾಗುವಂತೆ ಮಾಡಿದ ಕೀರ್ತಿ ಸಿದ್ಧಮಲ್ಲಪ್ಪ ಪಾಟೀಲರಿಗೆ ಸಲ್ಲುತ್ತದೆ.

ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ಚಿಕ್ಕ ಗ್ರಾಮ ಎಕಲೂರ. ಈ ಗ್ರಾಮದಲ್ಲಿ ಸಿದ್ಧಮಲ್ಲಪ್ಪನವರು ಕ್ರಿ.ಶ. ೧೯೪೫ರಲ್ಲಿ ಜನಿಸಿದರು. ತಂದೆ ಚಂದ್ರಾಮಪ್ಪ ಗೌಡರು. ತಾಯಿ ಗದಿಗೆಮ್ಮ.

ಚಂದ್ರಾಮಪ್ಪಗೌಡರು ಗೌಡಕಿಯ ಮನೆತನದವರಾದರೂ ಅವರಲ್ಲಿ ಗೌಡಕಿ ಸಹಜವಾದ ದರ್ಪ– ಬಿಗುಮಾನಗಳಿರಲಿಲ್ಲ. ಅತ್ಯಂತ ಸರಳ ಮತ್ತು ಸಾತ್ವಿಕ ವ್ಯಕ್ತಿಗಳಾಗಿದ್ದರು. ತಮ್ಮ ಸ್ಥಿತಿವಂತಿಕೆಯನ್ನು ಬಡವರ ಯೋಗ ಕ್ಷೇಮಕ್ಕಾಗಿ ಬಳಕೆ ಮಾಡುತ್ತಿದ್ದರು. ಮನೆಯಲ್ಲಿ ಲಕ್ಷ್ಮಿ ನೆಲೆಸುವುದಕ್ಕೆ ಕಾರಣವಾಗಿದ್ದ ಕೃಷಿಕಾಯಕವನ್ನು ಅತ್ಯಂತ ಶ್ರದ್ಧೆಯಿಂದ ಮಾಡುತ್ತಿದ್ದರು; ಆಳುಗಳಿಂದಲೂ ಮಾಡಿಸುತ್ತಿದ್ದರು.

ಸಿದ್ಧಮಲ್ಲಪ್ಪ ಪಾಟೀಲರಲ್ಲಿ ಸರಳತೆ ಮತ್ತು ಶ್ರಮಸಂಸ್ಕೃತಿಯ ಶ್ರದ್ಧೆ ಅವರ ತಂದೆಯವರಿಂದಲೇ ಅಡಕಗೊಂಡು ಬಂದಿದೆ. "ದಣಿವು ಕಾಣುವುದಕ್ಕೆ ಬದಲಾಗಿ ಕಾಯಕದಲ್ಲಿ ಮನದ ಆನಂದ ಕಾಣಬೇಕೆಂಬುದು" ಪಾಟೀಲರ ಜೀವನ ತತ್ತ್ವವಾಗಿದೆ.

ಸಿದ್ಧಮಲ್ಲಪ್ಪನವರು ಎಂಟನೆಯ ತರಗತಿಯವರೆಗೆ ಓದಿದ್ದಾರೆ. ಕನ್ನಡದೊಂದಿಗೆ ಮರಾಠಿ, ಹಿಂದಿ, ಮೋಡಿ, ಉರ್ದು ಭಾಷೆಗಳು ಬರುತ್ತವೆ. ಆದರೆ ಅವರು ಕನ್ನಡವನ್ನು ಅತಿಯಾಗಿ ಪ್ರೀತಿಸುವ ಭಾವ ಹೊಂದಿದ್ದಾರೆ.

ಸಿದ್ಧಮಲ್ಲಪ್ಪನವರು ಸ್ವತಃ ಕೃಷಿಕಾಯಕ ಕೈಗೊಂಡು ನಡೆಸುತ್ತಿದ್ದಾರೆ. ಹೊಲ–ತೋಟಗಳಲ್ಲಿ ಆಳುಗಳೊಂದಿಗೆ ಆಳಿನಂತೆ ದುಡಿಯುತ್ತಾರೆ. ಆದರೆ ದುಡಿದ ಫಲವನ್ನೆಲ್ಲ ತಮ್ಮ ಬದುಕಿಗಾಗಿಯೇ ಸಂಗ್ರಹಿಸಿಕೊಳ್ಳುವ ಸ್ವಾರ್ಥಿಗಳಲ್ಲ. ಜೋಗಿ–ಜಂಗಮರಿಗೆ, ಬಡ–ಬಗ್ಗರಿಗೆ ಸುಗ್ಗಿಯ ಕಾಲದಲ್ಲಿ ಮನಸಾರೆ ದಾನ ಮಾಡುತ್ತಾರೆ.

ಪಾಟೀಲರ ಅಹಿಕ ಬದುಕು ಹಿತ-ಮಿತವಾದದು. ಒಬ್ಬ ಮಗನು ಬೆಂಗಳೂರಿನ ಎಚ್.ಎ.ಎಲ್. ಉದ್ಯೋಗಿಯಾಗಿದ್ದಾನೆ. ಮಗಳಿಗೆ ವಿವಾಹ ಪೂರೈಸಿ ಗೃಹ ಕರ್ತವ್ಯದಿಂದ ಬಿಡುಗಡೆಗೊಂಡಿದ್ದಾರೆ. ಸಿದ್ಧಮಲ್ಲಪ್ಪನವರ ಧರ್ಮಪತ್ನಿ ಸುಭದ್ರಾ ಅವರು ಮುತ್ತೈದೆ ಭಾಗ್ಯದೊಂದಿಗೆ ಇಹಲೋಕ ಯಾತ್ರೆ ಪೂರೈಸಿದ್ದಾರೆ. ಈಗ ಸಿದ್ಧಮಲ್ಲಪ್ಪನವರು ನಿರಂಜನ ಜಂಗಮನಂತಿದ್ದಾರೆ.

ಮನೆಯ ದೇವರು ಮೈಲಾರದ ಮಲ್ಲಯ್ಯನಲ್ಲಿ ನಿಷ್ಠೆ ಇರಿಸಿ; ಎಕಲೂರ ಗ್ರಾಮದ ಕೆಳಗಿನ ಮಠದ ರುದ್ರಮುನಿ ಸ್ವಾಮಿಗಳನ್ನು ಮನೆತನದ ಗುರುಗಳೆಂದು ಸೇವಿಸುತ್ತ "ಬಬಲಾದಿಯ ಮುತ್ತ್ಯಾ" ಎಂದೇ ಖ್ಯಾತಿಗೊಂಡಿದ್ದ ಚೆನ್ನವೀರ ಶಿವಯೋಗಿಗಳನ್ನು ಭಜಿಸುತ್ತ ಸಿದ್ಧಮಲ್ಲಪ್ಪನವರು ತಮ್ಮ ಶೇಷ ಜೀವನವನ್ನು ಕಳೆಯುತ್ತಲಿದ್ದಾರೆ.

ಎಕಲೂರಿನ ಆರಾಧ್ಯ ಮತ್ತು ಆಧಿದೇವರು ಪರಮೇಶ್ವರ. ಆದುದರಿಂದ ಸಿದ್ಧಮಲ್ಲಪ್ಪ ಪಾಟೀಲರು ತತ್ತ್ವಪದ ಸಾಹಿತ್ಯಕ್ಕೆ ಸಾಧಕವಾದ ಭಜನಾ ಮಂಡಳಿಯನ್ನು ಸಮಾನಶೀಲರೊಂದಿಗೆ ಕೂಡಿಕೊಂಡು ಕಟ್ಟಿ, ಅದಕ್ಕೆ ಪರಮೇಶ್ವರನ ಹೆಸರನ್ನೇ ಇಟ್ಟಿದ್ದಾರೆ. ಎಕಲೂರಿನ ಪರಮೇಶ್ವರ ಭಜನಾ ಮಂಡಳಿಯು ನೂರಾರು ಭಜನಾ ಕಾರ್ಯಕ್ರಮಗಳನ್ನು ಪೂರೈಸಿದೆ. ಭಜನೆಯಿಂದ ಬಂದ ಭಕ್ತರ ಕೊಡುಗೆಯನ್ನು ಸಂಗ್ರಹಿಸಿ ಪರಮೇಶ್ವರ ದೇವಾಲಯದ ಜೀರ್ಣೋದ್ಧಾರ ಮಾಡಲಾಗಿದೆ. ಭಜನಾ ಸಾಮಗ್ರಿಗಳ ಆಶ್ರಯಕ್ಕಾಗಿಯೇ ಒಂದು ಬೃಹತ್ ಕೋಣೆಯನ್ನು ನಿರ್ಮಿಸಲಾಗಿದೆ.

ತಾರುಣ್ಯದಿಂದಲೂ ಸಿದ್ಧಮಲ್ಲಪ್ಪನವರಿಗೆ ಆಧ್ಯಾತ್ಮದತ್ತ ಒಲವು. ಹೀಗಾಗಿಯೇ ಭಜನೆಯೊಂದಿಗಿನ ನಂಟು ಬಿಡಿಸಲಾರದ ಬಾಂಧವ್ಯವಾಯಿತು. ಅವರು ತಮ್ಮ ಹರೆಯದ ಮೂವತ್ತೈದು ವಯಸ್ಸಿನಿಂದಲೇ ತತ್ತ್ವಪದಗಳನ್ನು ರಚಿಸಲು ತೊಡಗಿದರು. ತಮಗೆ ತತ್ತ್ವಪದ ರಚನೆಗೆ ದೊರೆತ ಪ್ರೇರಣೆಯನ್ನು ಸಿದ್ಧಮಲ್ಲಪ್ಪನವರು ಹೀಗೆ ಹೇಳುತ್ತಾರೆ:

"ಬಬಲಾದ ಮುತ್ತ್ಯಾ ಅವರು ಮಹಾ ತಪಸ್ವಿಗಳು. ನಿಜವಾದ ಅರ್ಥದಲ್ಲಿ ಶ್ರೇಷ್ಠ ಜಂಗಮ ಪುಂಗವರು. ಭಜನಾ ಮಂಡಳಿಯೊಂದಿಗೆ ನಾನು ಒಂದು ಸಲ ಅವರ ಸಾನಿಧ್ಯಕ್ಕೆ ಹೋದೆನು. ರಾತ್ರಿಯಲ್ಲಿ ಶ್ರೀ ಮಠದಲ್ಲಿ ಭಜನೆ ಮಾಡಿದೆವು. ಶ್ರೀಗಳು ಸ್ವತಃ ಸಾನ್ನಿಧ್ಯ ವಹಿಸಿ ಭಜನೆಯಲ್ಲಿ ಅಂದು ಪಾಲ್ಗೊಂಡಿದ್ದರು. ಮರುದಿನ ಅವರಲ್ಲಿಗೆ ಹೋಗಿ ನಮಸ್ಕರಿಸಿ; ಊರಿಗೆ ಮರಳಲು ಅಪ್ಪಣೆ ಕೇಳಿದಾಗ, ಅವರು ನನ್ನ ತಲೆಯ ಮೇಲೆ ಕೈ ಇರಿಸಿದರು. ಸಿದ್ಧಮಲ್ಲ ನೀನು ಬಹು ಸುಶ್ರಾವ್ಯವಾಗಿ ಹಾಡುತ್ತಿ ಮಗಾ. ಬೇರೆಯವರ ಪದ್ಯಗಳೊಂದಿಗೆ ನಿನ್ನ ಪದ್ಯಗಳು ಭಜನೆಯಲ್ಲಿ ಹಾಡುವಂತಾಗಬೇಕು. ಇಂದು ನಾನು ನಿನಗೆ ಆಶೀರ್ವಾದ ಮಾಡಿದ್ದೇನೆ. ಹಾಡುಗಳನ್ನು ಬರೆಯುತ್ತ ಹೋಗು; ಹಾಡುತ್ತ ಹೋಗು ಎಂದರು".

ಪೂಜ್ಯ ಬಬಲಾದ ಮುತ್ತ್ಯಾ ಅವರ ಆಶೀರ್ವಾದದಿಂದ ಅದೇ ವರುಷವೇ ಕೆಲವು ಪದ್ಯಗಳನ್ನು ಪಾಟೀಲರು ಬರೆದೇ ಬಿಟ್ಟರು. ಕ್ರಿ.ಶ.ಸು ೧೯೮೦ ರಲ್ಲಿ ಆರಂಭವಾದ ಸಿದ್ಧಮಲ್ಲಪ್ಪನವರ ತತ್ತ್ವಪದ ರಚನೆಯ ಸಾಹಿತ್ಯ ಯಾತ್ರೆಯು ಇಂದಿಗೂ ಅವ್ಯಾಹತವಾಗಿ ನಡೆದುಕೊಂಡು ಬರುತ್ತಲಿದೆ.

ಸಿದ್ಧಮಲ್ಲಪ್ಪನವರು ತಾವು ಹಾಡುವ ರಚನೆಯ ಪದ್ಯಗಳನ್ನು ಬಬಲಾದ ಮುತ್ತ್ಯಾ ಅವರು ನುಡಿಸಿದ ಹಾಡುಗಳೆಂದೇ ಹೇಳಿಕೊಳ್ಳುತ್ತಾರೆ. "ಅವರು ಯಾವಾಗ ಹಾಡಿಸುತ್ತಾರೋ, ಆಗ ನಾನು ಹಾಡುತ್ತೇನೆ; ಅದನ್ನೆ ಬರೆದು ಇಡುತ್ತೇನೆ" ಎನ್ನುತ್ತಾರೆ ಸಿದ್ಧಮಲ್ಲಪ್ಪನವರು.

ಸಿದ್ಧಮಲ್ಲಪ್ಪನವರಿಗೆ ಬಬಲಾದ ಶ್ರೀಗಳವರು "ಪುರಸ್ಕಾರ ಪತ್ರ" ನೀಡಿ ಆಶೀರ್ವದಿಸಿದ್ದಾರೆ. ಹುಲಸೂರಿನ ಪೂಜ್ಯ ಶ್ರೀ ಶಿವಾನಂದ ಸ್ವಾಮಿಗಳು ಪ್ರಶಸ್ತಿ ಪತ್ರ ನೀಡಿ ಆಶೀರ್ವಾದ ಮಾಡಿದ್ದಾರೆ.

ಸಿದ್ಧಮಲ್ಲಪ್ಪನವರು ಸು. ಐದುನೂರಕ್ಕು ಮೇಲ್ಪಟ್ಟು ತತ್ತ್ವಪದಗಳನ್ನು ರಚಿಸಿದ್ದಾರೆ. ಆದರೆ ಅವುಗಳಲ್ಲಿ ಹೆಚ್ಚಿನವುಗಳನ್ನು ಬೇರೆಯವರು ಹಾಡುವುದಕ್ಕಾಗಿ ತೆಗೆದುಕೊಂಡು ಹೋಗಿದ್ದಾರೆನ್ನುತ್ತಾರೆ ಗೌಡರು. ಕೆಲವು ಪದ್ಯಗಳನ್ನು ಬರೆದು ಕಾಪಿಟ್ಟುಕೊಂಡಿದ್ದಾರೆ. ಊರಿನ ಅಧಿದೇವರಾದ ಪರಮೇಶ್ವರನ ನಾಮವನ್ನೇ ಸಿದ್ಧಮಲ್ಲಪ್ಪನವರು ತಮ್ಮ ತತ್ತ್ವಪದಗಳಿಗೆ ಅಂಕಿತವಾಗಿಟ್ಟುಕೊಂಡಿದ್ದಾರೆ.

ಆವರನ್ನು ಕುರಿತು ನಾನು "ನಿಮ್ಮ ತತ್ತವಪದಗಳು ಬಬಲಾದ ಮುತ್ತ್ಯಾ ಅವರು ಕೃಪೆಯಿಂದ ಬಂದವುಗಳು. ನೀವು ಅವರ ನಾಮವನ್ನೇ ಅಂಕಿತವಾಗಿಟ್ಟುಕೊಳ್ಳಬಹುದಿತ್ತಲ್ಲ?"ಎಂದು ಪ್ರಶ್ನಿಸಿದೆ. ಅದಕ್ಕೆ ಅವರು "ಹೌದು ಮೊದಲಿಗೆ ನಾನು ಹಾಗೇ ಅಂದು ಕೊಂಡಿದ್ದೆನು. ಆದರೆ ಮುತ್ತ್ಯಾ ಅವರೆ ಹೆಸರು ಹಾಕಲು ಬೇಡವೆಂದು ಹೇಳಿದರು. ಪರಮೇಶ್ವರನ ಹೆಸರಿನಲ್ಲಿ ಹಾಡುಗಳು ರಚಿಸು ಎಂದು ತಿಳುಹಿದರು. ಹೀಗಾಗಿ ನಾನು ನಮ್ಮ ಊರಿನಲ್ಲಿರುವ ದೇವರ ಹೆಸರಿನಲ್ಲಿಯೇ ತತ್ತ್ವಪದಗಳನ್ನು ಬರೆಯಲು ತೊಡಗಿದೆ" ಎಂದು ತಿಳಿಸಿದರು.

ಸಿದ್ಧಮಲ್ಲಪ್ಪ ಪಾಟೀಲರು ತಮ್ಮ ಹಾಡುಗಳಿಗೆ ಆಧ್ಯಾತ್ಮ ಸಾಧಕರಿಂದ ಹೆಚ್ಚಿನ ಮೆಚ್ಚುಗೆ ದೊರುಕುತ್ತಿಯೆಂದು ಹೇಳುತ್ತಾರೆ. ಅದಕ್ಕೆ ಅವರು ಶಂಕರಾಚಾರ್ಯ ಮಠದ ಗುರುಗಳ ಸಂದರ್ಭವನ್ನು ನೆನಪಿಸಿ ಕೊಳ್ಳುತ್ತಾರೆ. ಕೆಲವು ವರ್ಷಗಳ ಹಿಂದೆ ಶಂಕರಾಚಾರ್ಯ ಮಠದ ಪೂಜ್ಯರು ಬಂದು ಕಲಬುರ್ಗಿ ಜಿಲ್ಲೆ ಮಣಗಾಣಿ ಹತ್ತಿರದಲ್ಲಿ ಕೆಲವು ದಿನಗಳ ಕಾಲ ವಾಸ್ತವ್ಯ ಮಾಡಿದ್ದರು. ಆಗ ಸಿದ್ಧಮಲ್ಲಪ್ಪ ಪಾಟೀಲರು ತಮ್ಮ ಭಜನಾ ಸಂಘದೊಂದಿಗೆ ಶಂಕರಾಚಾರ್ಯ ಗುರುಗಳಲ್ಲಿಗೆ

ಬಂದರು. ಭಜನೆ ಮಾಡಿದರು. ಭಜನಾ ಸಂಘದವರ ಭಜನೆಯಿಂದ ಗುರುಗಳು ಅತ್ಯಂತ ಹರುಷಗೊಂಡರಂತೆ. "ನಿನ್ನ ರಚನೆಯ ಹಾಡು; ಹಾಡಿನ ರೀತಿ ಉಭಯವೂ ಶ್ರೇಷ್ಠವಾದವೆ" ಎಂದು ಆಶೀರ್ವದಿಸಿದರಂತೆ.

ಸಿದ್ಧಮಲ್ಲಪ್ಪನವರ ರಚನೆಯ ಕೆಲವು ತತ್ತ್ವಪದಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ:

ಕೆಟ್ಟ ಜನ

ಕೆಟ್ಟ ಜನರ ಹಾವಳಿ ಹೆಚ್ಚಾಯ್ತು
ವಿಚಾರ ತಪ್ಪಿ ನಡೆದ್ಯೆಯ್ತೊ ॥ ಪ ॥

ದೇವರ ಧ್ಯಾನವು ಮರತ್ಯೆತೋ
ಪಾಪವು ತುಂಬಿ ತುಳಕತ್ಯೆತೋ ॥ ಅ.ಪ ॥

ತಂದೆ–ತಾಯಿಗಿಲ್ಲ ಕಿಮ್ಮತ್ತೋ
ಹುಟ್ಟಿ ಬಂದ ಕಳ್ಳ ದೂರಾಯಿತೋ
ಸಂಸಾರದ ಖಬರ ಹೊಂಟು ಹೊಯಿತೋ ॥ ೧ ॥

ಕಾಮ ವಾಸನಿಯಲಿ ಕೆಟ್ಟ್ಯೆಲ್ಲ
ಬಂಧು–ಬಳಗ ಎಲ್ಲ ಬಿಟ್ಟ್ಯೆಲ್ಲ
ಅಕ್ಕ–ತಂಗಿ ಮ್ಯಾಲ ಮನ ಇಟ್ಟ್ಯೆಲ್ಲ
ತಾಯಿ–ಮಗಳ ಅರಿವ ಬಿಟ್ಟೆಲ್ಲ ॥ ೨ ॥

ಮನಿ ಬಿಟ್ಟು ಹೊರಗೊಂದು ಮನಿ ಐತಿ
ಮಾನಗೇಡಿ ಹೆಣ್ಣೊಂದು ಅಲ್ಲಿ ಐತಿ
ಹೊರಗ ಹೋಗಿ ತಿನ್ನದು ನೀ ಕಲ್ತಿ
ಕುಡಿದು ದಾರ್‍ಯಾಗ ಬಿದ್ದ್ಯೆತಿ ॥ ೩ ॥

ಲಂಚದ ರಾಜಕೀಯ ಬಂದ್ಯೆತಿ
ಲಂಚ ಕೊಟ್ಟರ ಕುರ್ಚಿ ಸಿಗತ್ಯೆತಿ
ನ್ಯಾಯ–ಅನ್ಯಾಯ ಎಲ್ಲ್ಯೆತಿ
ಲಂಚದ ಗಂಟಿನೊಳು ಕುಂತ್ಯೆತಿ ॥ ೪ ॥

ದೇವರ ಆಟ ಬ್ಯಾರೈತಿ
ಪಾಪವು ಸುಡಲು ಬಂದೈತಿ
ಭೂಮಿಯು ನಡಗುತ ನಡದೈತಿ
ಮನಿ ಹೊರಗ ಗುಡಿ ಕಟ್ಟಿ ಇರೋದೈತಿ ॥ ೫ ॥

ಗುರು–ಲಿಂಗ–ಜಂಗಮರ ಮರತೈತಿ
ಸತ್ಯ ಶರಣರ ನಿಂದಾ ಮಾಡತೈತಿ
ನಿಜ ಗುರುವಿನ ಖೂನ ಬಿಟ್ಟೈತಿ
ಕೆಟ್ಟ ಭಂಡ ಜನ ಹುಟ್ಟೈತಿ ॥ ೬ ॥

ಭೂಮಿ ತಾಯಿಗೆ ಭಾರ ಆಗೈತಿ
ಪ್ರಳಯ ಆಗುವುದು ಬಂದೈತಿ
ಸೊಳ್ಳ ಹಾರಿ ಘಟ್ಟಿ ಉಳಿತೈತಿ
ಪುಣ್ಯದ ಹಾದಿ ತೆರಿತೈತಿ ॥ ೭ ॥

ಧರಿಯೊಳು ಎಕಲೂರ ಊರೈತಿ
ದೇವ ಪರಮೇಶ್ವರನ ಬೆಳಗೈತಿ
ನಿತ್ಯ ದೇವರ ಪೂಜಾ ನಡದೈತಿ
ಸಾಕ್ಷಾತ ದರುಶನ ಸಿಗತೈತಿ ॥ ೮ ॥

ಜಂಗಮ ಯೋಗಿ ಬಂದ

ಆಕಾಶದಿಂದ ಜಂಗಮಯೋಗಿ ಬಂದ
ಭೂಮಿಗೆ ಅವ ಬೆಳಕು ತಂದ ॥ ಪ ॥

ಬ್ರಹ್ಮಾಂಡ ತುಂಬಿ ತಾ ನಿಂದ
ಬ್ರಹ್ಮನ ಜ್ಞಾನವ ಒಳಕೊಂಡ
ಬ್ರಹ್ಮಾನಂದದಲಿ ತಾ ಮಿಂದ
ಆತನೆ ಜಂಗಮ ನಿಜಲಿಂಗ ॥ ೧ ॥

ಪ್ರಣವದ ಮಂತ್ರ ಜಪಿಸುತಾನ
ಓಂಕಾರ ಜ್ಯೋತಿಯಾಗಿ ಹೊಳಿಯುತಾನ

ಷಟ್‌ಸ್ಥಲದ ಮೇಲೆ ತಾನೇ ಕುಂತಾನ
ಬಬಲಾದ ತಾತಾನ ಅವತಾರ ಅವ ಹಾನ ॥ ೨ ॥

ಬಾಯಿಂದ ಲಿಂಗವ ನುಡಿವವನವ್ವ
ಕಣ್ಣಿಂದ ಜಂಗಮ ಕಾಣುವವನವ್ವ
ಕಿವಿಯಿಂದ ಮಂತ್ರವ ಕೇಳುತಾನವ್ವ
ಅವನೆ ಜಂಗಮ ಪುಂಗವನವ್ವ ॥ ೩ ॥

ನಿರಾಕಾರ ನಿರಂಜನ ಅವತಾರನವ್ವ
ಸಾಕಾರ–ವಿಕಾರ ಇಲ್ಲದವನವ್ವ
ಭಕ್ತರ ಮನದಾಗ ಬೆಳಕಾದನವ್ವ
ಪರಶಿವ ರೂಪನೆ ಅವನವ್ವ ॥ ೪ ॥

ಏಕಲೂರಾಗ ಪರಮೇಶ್ವರ ದೇವರನವ್ವ
ನಿತ್ಯ–ನಿತ್ಯ ಅವನ ನೆನಿಬೇಕವ್ವ
ಅಂತರಂಗದೊಳು ತಾ ಇರುವನವ್ವ
ಆತನೆ ಜಂಗಮ ನಿಜಲಿಂಗನವ್ವ ॥ ೫ ॥

(ಸ್ವತಃ ಕವಿಗಳೇ ತಮ್ಮ ವಿವರಗಳನ್ನು ಒದಗಿಸಿದ್ದಾರೆ.)


□



ಸಿದ್ಧಮಲ್ಲಪ್ಪ ಪಾಟೀಲರು.



ಸಿದ್ಧಮಲ್ಲಪ್ಪ ಪಾಟೀಲರ
ಇನ್ನೊಂದು ಭಂಗಿ.



ಸಿದ್ಧಮಲ್ಲಪ್ಪ ಪಾಟೀಲರ ಮನೆ (ಎಕಲೂರು).



ಸಿದ್ಧಮಲ್ಲಪ್ಪ ಪಾಟೀಲ ತಮ್ಮ ಪರಿವಾರದೊಂದಿಗೆ



ಸಿದ್ಧಮಲ್ಲಪ್ಪನವರ
ಕೃಷಿ ಕುಟುಂಬ.



ಸಿದ್ಧಮಲ್ಲಪ್ಪನವರ
ಕೃಷಿ ಕಾಯಕದ ಹೊಲ.



ಸಿದ್ಧಮಲ್ಲಪ್ಪನವರ
ಆರಾಧ್ಯದೇವರು
ಪರಮೇಶ್ವರ
ದೇವಾಲಯ
(ಎಕಲೂರು).

೩೦. ವೀರಣ್ಣ ಸಂತಾಜಿ (ಕ್ರಿ.ಶ.ಸು. ೧೯೪೫–೧೯೯೮)

ಕೊಹಿನೂರ ಗ್ರಾಮದ ಇನ್ನೊಬ್ಬ ಕವಿ ವೀರಣ್ಣ ಸಂತಾಜಿ. ಇಂದು ಕವಿಯ ಹೆಸರನ್ನು ಸ್ಥಿತವಾಗಿ ಉಳಿಸಿ; ಅವನ ಹಾಡುಗಳನ್ನು ಹಾಡಿ ಪ್ರಸಾರ ಮಾಡುವ ಶಿಷ್ಯವರ್ಗವು ಕೊಹಿನೂರ ಮತ್ತು ಅದರ ಸುತ್ತಮುತ್ತಲಿನ ಪರಿಸರದಲ್ಲಿ ತಯ್ಯಾರಾಗಿದೆ. ಚಂದ್ರಕಾಂತ ಸಂತಾಜಿ, ಪರ್ವತಯ್ಯ ಸ್ವಾಮಿ, ರೇವಣಸಿದ್ಧಪ್ಪ ಸುಗೂರ ಮುಂತಾದವರನ್ನು ಹೆಸರಿಸಬಹುದಾಗಿದೆ.

ವೀರಣ್ಣನವರ ತಂದೆ ಬುದ್ಧಪ್ಪ. ತಾಯಿ ಚೆನ್ನಮ್ಮನವರು ವೀರಶೈವ ಸಂಸ್ಕೃತಿಯ ಶ್ರದ್ಧಾವಂತ ಅನುಯಾಯಿಗಳು. ಈ ದಂಪತಿಗಳಿಗೆ ಒಬ್ಬಳು ಮಗಳು ಶರಣಮ್ಮ; ಮಗ ವೀರಣ್ಣ ಜನಿಸಿದರು. ವೀರಣ್ಣನವರಿಗೆ ಶರಣಮ್ಮ ಕಿರಿಯ ಸಹೋದರಿ.

ವೀರಣ್ಣನವರು ಜನಿಸಿದ ಸ್ವಲ್ಪ ಅವಧಿಯಲ್ಲಿಯೇ ತಂದೆ–ತಾಯಿ ಗತಿಸಿ ಹೋದರು. ಅವರ ಸೋದರ ಮಾವ ಅಂಬಾಜಿಯವರು ಆಶ್ರಯ ನೀಡಿದರು. ಸೋದರಮಾವನ ಪೋಷಣೆ ಮತ್ತು ಮಾರ್ಗದರ್ಶನದಲ್ಲಿ ವೀರಣ್ಣನವರ ಬಾಲ್ಯವು ವಿಕಾಸವಾಗ ತೊಡಗಿತು. ಕೊಹಿನೂರು ಗ್ರಾಮದ ಗವಠಿ ಶಾಲೆಯಲ್ಲಿಯೇ ಮೂರನೆಯ ತರಗತಿಯವರೆಗೆ ಮೋಡಿ ಶಿಕ್ಷಣದ ಅಭ್ಯಾಸ ಮುನ್ನಡೆಯಿತು.

ವೀರಣ್ಣನವರು ಸ್ವಾಭಿಮಾನಿಗಳು; ಶ್ರಮ ಜೀವಿಗಳು. ಮುಂದೆ ಸ್ವಯಂ ಬದುಕಿನ ನಿರ್ವಹಣೆಗೆ ಮನಸ್ಸು ಮಾಡಿ, ಗೃಹಸ್ಥ ಬದುಕಿನಲ್ಲಿ ಪ್ರವೇಶ ಮಾಡಿದರು. ತಾರಾಬಾಯಿ ಅವರ ಹೆಂಡತಿ. ಈ ದಂಪತಿಗಳಿಗೆ ಇಬ್ಬರು ಮಕ್ಕಳು. ಶಿವಶರಣಪ್ಪ ಮತ್ತು ಚೆನ್ನಮ್ಮ ಎಂಬುವವರೆ ಆ ಮಕ್ಕಳು.

ಕೊಹಿನೂರು ಗ್ರಾಮದ ಚೆನ್ನಮಲ್ಲೇಶ್ವರನಲ್ಲಿ ವೀರಣ್ಣನವರಿಗೆ ಅಪಾರ ಭಕ್ತಿಯಿದ್ದಿತು. ಅವರ ಮನೆತನದ ಗುರುಗಳು ಗುರುಸ್ಥಲ ಮಠದ ಭದ್ರಯ್ಯನವರು. ಆ ಊರಿನಲ್ಲಿಯೇ ಖ್ಯಾತಿವೆತ್ತಿದ್ದ ಕವಿ ಹುಸನಾ ಮಾಸ್ತರರ ಶಿಷ್ಯತ್ವ ವಹಿಸಿ; ವೀರಣ್ಣನವರು ಸಾಹಿತ್ಯ ಕೃಷಿಯಲ್ಲಿ ತೊಡಗಿದರು. ಆಗ ಅವರಿಗೆ ಹತ್ತೊಂಬತ್ತನೆಯ ವಯಸ್ಸು. ವೀರಣ್ಣನವರು ಸುಮಧುರವಾಗಿ ಹಾಡುಗಳನ್ನು ಹಾಡುತ್ತಿದ್ದರು. ಹಾರ್ಮೋನಿಯಂ, ತಬಲಾ, ಏಕತಾರಿ ವಾದ್ಯಗಳನ್ನು ನುಡಿಸುತ್ತಿದ್ದರು. ಆರಾಧ್ಯ ದೇವರು ಚೆನ್ನಮಲ್ಲೇಶ್ವರರ ಹೆಸರಿನಲ್ಲಿಯೇ

ಒಂದು ಭಜನಾ ಸಂಘವನ್ನು ಸ್ಥಾಪಿಸಿದರು. ಅದರ ಮೂಲಕ ಹಲವಾರು ಸ್ಥಳಗಳ ಸಂಚಾರ ಕೈಗೊಂಡರು. ವೀರಣ್ಣನವರ ಕಾರ್ಯಕ್ರಮಗಳು ರಾಜ್ಯೋತ್ಸವದಂತಹ ಮಹತ್ವದ ಸಂದರ್ಭದಲ್ಲಿಯೂ ನಡೆದಿವೆ.

ವೀರಣ್ಣನವರು ಪ್ರತಿಭಾವಂತರು. ಪದ್ಯ ಶಕ್ತಿಯ ಕಾರಂಜಿಯೇ ಅವರಲ್ಲಿ ಉದ್ಭವವಾದಂತಿದ್ದರು. ಸವಾಲು–ಜವಾಬು ಸಂದರ್ಭಗಳಲ್ಲಿಯಂತೂ ಅವರಿಂದ ಹಾಡಿನ ಬಾಣಗಳು ಮಿಂಚಿನಂತೆ ಹೊರಬರುತ್ತಿದ್ದವು.

ಒಕ್ಕಲುತನ ಅವರ ಬದುಕಿನ ನಿರ್ವಹಣೆಗೆ ಊರುಗೋಲಾಗಿತ್ತು. ನಿಸರ್ಗದ ಮಡಿಲಿನಲ್ಲಿ ಮನ ಬಿಚ್ಚಿ ಹಾಡುತ್ತಿದ್ದರು. ಅಭಿವ್ಯಕ್ತಿಗೆ ಸಿಲುಕಿದ್ದನ್ನು ಬರಹಕ್ಕೆ ಅಳವಡಿಸುತ್ತಿದ್ದರು. ವೀರಣ್ಣನವರು ವಾಚಾಳಿಗಳಲ್ಲ. ಯಾರೊಂದಿಗೂ ಅವರು ಸುಮ್ಮ–ಸುಮ್ಮನೆ ಹಾಳು ಹರಟೆಯಲ್ಲಿ ತೊಡಗುತ್ತಿರಲಿಲ್ಲ. ಅವರು ಮೃದು ಸ್ವಭಾವಿ. ಯಾರ ಮನಸ್ಸೂ ಅವರು ನೋಯಿಸುತ್ತಿರಲಿಲ್ಲ.

ವೀರಣ್ಣನವರು ತತ್ತ್ವಪದ, ಗೀಗೀ ಪದ, ಮೋಹರಮ್ ಹಾಡುಗಳನ್ನು ಬರೆದರು. ನಾಟಕಗಳಲ್ಲಿ ಪಾತ್ರಗಳನ್ನು ಮಾಡಿದರು. ವೀರಣ್ಣನವರ ವ್ಯಕ್ತಿತ್ವ ಕುರಿತು ಅವರ ಶಿಷ್ಯರಾದ ರೇವಣ್ಣಸಿದ್ಧಪ್ಪ ಸುಗೂರೆ ಮತ್ತು ಪರ್ವತಯ್ಯನವರು ಒಂದೊಂದು ಪದ್ಯವನ್ನು ರಚಿಸಿದ್ದಾರೆ. ಇವು ಶಿಷ್ಯರು ತಮ್ಮ ಗುರುವಿಗೆ ಸಮರ್ಪಿಸಿದ ಭಕ್ತಿ ಭಾವದ ಕಾವ್ಯಸುಮಗಳಾಗಿವೆ. ಆ ಪದ್ಯಗಳನ್ನು ಇಲ್ಲಿ ದಾಖಲಿಸಲಾಗಿದೆ:

– ೧ –

ಸಾಹಿತ್ಯದೊಳಗ ಪಾಗಲ ಮಾಡಿಟ್ಟ ಕೊಹಿನೂರು ವೀರಣ್ಣ
ಸವಿರಾರು ಜನ ಉಂಡು ನಡಸ್ಯಾರ ದೊಡ್ಡ ದೊಡ್ಡ ಕಾರಣ
ಸಾಹಿತ್ಯ ಕೊಟ್ಟರ ತಪ್ಪಲಾರದಂಗ ಜನನ ಮರಣ ॥ ಪ ॥

ತಂದಿ ಬುದ್ಧಪ್ಪ ತಾಯಿ ಚೆನ್ನಮ್ಮನ ಗರ್ಭದೊಳು ತಾನ
ಜನಿಸಿ ಬಂದಾಗ ತಂದಿ–ತಾಯಿದು ಕಳಕೊಂಡ ಪ್ರೀತಿಯನ
ತಂದಿ–ತಾಯಿ ಸತ್ತರ ಸೋದರ ಮಾವ ಇರಬೇಕೆಂದರಣ್ಣ
ಸೋದರ ಮಾವನ ಆಶೀರ್ವಾದದಲ್ಲೇ ಬೆಳದ ಗುರುವರ ವೀರಣ್ಣ ॥ ೧ ॥

ಬುದ್ಧಪ್ಪ ತಂದಿ ಹೆಸರಿಟ್ಟ ಮಾಯದಿಂದೆ ಬುದ್ಧಿಯ ಕಲಿಸ್ಯಾನ
ತಾಯಿ ಚೆನ್ನಮ್ಮ ರಾಣಿ ಚನ್ನಮ್ಮನಂತೆ ಧೈರ್ಯಕೊಟ್ಟಳು ಮಗನ
ತಂದಿ ತಾಯಿ ಇಲ್ಲದ ಮಕ್ಕಳ ಯಾತರ ಜೀವನ
ಅವರಿಬ್ಬರ ಭಾರ ಇಟ್ಟುಕೊಂಡು ಸೋದರ ಮಾವ ದೊಡ್ಡವ ಮಾಡ್ಯಾನ ॥ ೧ ॥

ಭಾವ ಭಕ್ತಿಲಿಂದ ಭವದೊಳು ಬಂದರ ಶಿವ ಎನ್ನುವ ತಾನ
ಹರಮುನಿದರೆ ಗುರು ಕಾಯುವ ಇದ್ದವರೀಗಿ ಪೂರ್ಣ
ಆತ್ಮ ಧರ್ಮಕ ಪ್ರಮಾಣ ಮಾಡ್ಯಾರ ಬಂದಿಯೊಳು ತನ್ನ
ಮಾನವ ಧರ್ಮದ ಗುಣಲಕ್ಷಣ ಅಂತು ಹೋಗ್ಯಾರ ಒಂದೆ ಸವನ ॥ ೩ ॥

ಹೂವಿನಂತೆ ಜೋಪಾನ ಮಾಡಿ ಪಾಲನ–ಪೋಷಣ
ಅವರ ಮನಿಯಲ್ಲಿ ಇರತಿದ್ದ ವರಗುರು ಕೊಳ್ಳುರು ಹುಸನಾ
ಅಂತರ್ ಖ್ಯಾಲದಿಂದ ಗುರು ಮಾಡಿಕೊಂಡವರ ಪಡಕೊಂಡಾನ
ಗುರುವಿನ ವಾಕ್ಯ ಗುರ್ತಿಸಿ ಕಳಕೊಂಡ ತನ್ನ ಮೈಲಿಗಿ ತಾನ ॥ ೪ ॥

ಪೂರ್ವ ಭಾದ್ರಪದ ನಕ್ಷತ್ರ ಇವರೀಗಿ ಹಚ್ಚ್ಯಾದ ಸಂಪೂರ್ಣ
ಸಾಹಿತ್ಯದೊಳಗ ಸಾಕಷ್ಟು ದುಡಿದರ ಬರುತಾನ ಸಂಪೂರ್ಣ
ಕಾಯಕದಿಂದ ಖಾಯ ತೊಳದಾರ ಮೈಲಗಿಲ್ಲಂದಾನ ತಾನ
ಕಾಡ ದಾರೀಗ ಕಾಡಲ್ದೆ ಬಿಡೋದಿಲ್ಲ ಸೇರಿಲ್ದೆ ಕಾನನ ॥ ೫ ॥

ವಿಶ್ವವಿಖ್ಯಾತಿ ಆಗಿ ಮೆರೆದ ನಮ್ಮ ಗುರುವರ ವೀರಣ್ಣ
ತತ್ತ್ವದ ಸತ್ವವು ತಿಳಿಕೊಂಡು ತಾನು ಮಹತ್ವದ ಮೂರ್ತಿಯನ
ಕಲ್ಲಿನಂತೆ ಇರೋ ನನ್ನ ಜನ್ಮಕ ಮಾಡ್ಯಾರ ಪಾವನ
ಗುರೂಪದೇಶ ಕೊಟ್ಟವರವರೀಗಿ ಮೊದಲೇ ಕೊಳ್ಳುರು ಹುಸನಾ ॥ ೬ ॥

(ಬೀದರ ಜಿಲ್ಲೆಯ ಅನುಭಾವ ಕವಿಗಳು. ಪು.೧೯೩. ರೇವಣಸಿದ್ಧಪ್ಪನ ಪದ.)

–೨–

ಚನ್ನವೀರ ಶರಣ ಚೆನ್ನಾಗಿ ದುಡಿದರ ವೀರಣ್ಣ
ಭಕ್ತಿಗಾಗಿ ಬಂದರ ಭಗವಾನ । ಭವ ಗೆದ್ದಿ ಹೋಗ್ಯಾರ ಸಂಪೂರ್ಣ ॥ ಪ ॥

ಜಿಲ್ಲಾ ಬೀದರ ತಾಲ್ಲೂಕ ಬಸವಕಲ್ಯಾಣ ಕಲ್ಯಾಣ ಬಸವಣ್ಣ
ತಂದಿ ಬುದ್ಧಪ್ಪ ತಾಯಿ ಚೆನ್ನಮ್ಮ ಸ್ಥಾನ ಕೊಹಿನೂರು ನೋಡಣ್ಣ
ಜನಸಿ ಬರುವಾಗ ಜಗದ್ಗುರುವೀಗ ಹಿಡಿಕೊಂಡು ಬಂದಾನ
ವೀರಣ್ಣ ಜನಿಸಿ ಏಳು ದಿವಸೀಗಿ ಕೊಟ್ಟಿದಾರೋ ಮರಣ ॥ ೧ ॥

ತಾರೀಖು ೧೦ ಮೈನಾ ೮, ೯೮ ಇಸ್ವಿಯಣ್ಣ
ನಡುಬಾಗಿಲದಾಗ ನಡುವಿನ ಸೋಮವಾರ ಬಿಟ್ಟಿದಾನೋ ಪ್ರಾಣ
ಅಷ್ಟ ಮದವೆಲ್ಲ ನಷ್ಟ ಗೈದ ಶ್ರೇಷ್ಠಾಗಿದ ಸಂಪೂರ್ಣ
ಆರು ಮೂರು ಒಂಬತ್ತ ಲಿಂಗ ಕೊರಳೀಗಿ ಕಟ್ಟಿಗೊಂಡಾನ ॥ ೨ ॥

ನಡುವಿನ ಗುಡಿ ಹೊಡೆದಾಂಗ ನುಡಿ, ಗುಡಿ ಶಿಖರ ಗುಣ
ಗಡಿಗಿ ಜಡಿ ನಾಲ್ಕು ತಂಗಿ ಹಿಡಕೊಂಡು ನಡೆದಾನ
ಸೌಭಾಗ್ಯ ಶಿವನೀಗಿ, ಶಿವನೀಗ ಕೊಟ್ಟಿದಾನೋ ಪ್ರಾಣ
ಸ್ವರ್ಗ ಲೋಕದಾಗ ಸರಿಯಾಗಿ ಶಿವನೀಗಿ ಆಗಿದ್ದ ಶ್ರವಣ ॥ ೩ ॥

ಎಂಟೆಂಟು ದಿನಕೊಮ್ಮೆ ಒಂಟಾಗಿ ಓದಿದ ಹದಿನೆಂಟು ಪುರಾಣ
ಪುರಾಣದೊಳಗ ಹದಿನೆಂಟು ಮಂಟಪ ತಯ್ಯಾರ ಮಾಡ್ಯಾನ
ಗಂಟೆ ಗಂಟ್ಯಾಗ ಘಂಟೆ ಹೊಡಿಯುವದ ದೇವರ ಠಿಕಾಣ
ತಂಟೆ ಇಲ್ಲದಾಂಗ ಸಿಟ್ಟ ಪಡಕೊಂಡು ಹೋಗ್ಯಾನ ॥ ೪ ॥

ಮುನ್ನೂರದರವತ್ತು ಮೂಲಮಂತ್ರದ ಮೈಲ ತೊಳದಾನ
ಲಕ್ಷ ಚೌರ್ಯಾಂಸಿ ಲೆಕ್ಕ ಮಾಡಿಕೊಂಡು ಭಿಕ್ಷಾ ನೀಡ್ಯಾನ
ಒಂಬತ್ತ ಪರ್ವತ ಹನ್ನೊಂದು ಆಕಾಶ ಕೈಲಾಸ ತಿಳಿದಾನ
ಅಕ್ಷರದೊಳಗ ಶಿಕ್ಷಣಾಗಿ ಕವಿತಾ ಬರದಾನ ॥ ೫ ॥

ನಾಡಿನೊಳಗ ನಮ್ಮ ಪಹಾಡ ಕೊಹಿನೂರ ಅದ ನೋಡಿರಿ ಸ್ಥಾನ
ಚನ್ನವೀರ ದೇವ ಕೃಪಾ ಮಾಡ್ಯಾರ ಸಂಪೂರ್ಣ
ಚನ್ನವೀರನ ಶಿಷ್ಯನಾಗಿ ಪರ್ವತಯ್ಯ ಕವಿತಾ ಬರದಾನ
ತಪ್ಪು ಆದರೆ ಕುಂತ ಜನರೆಲ್ಲ ಮಾಪ ಮಾಡ್ರಿ ಅಂದಾನ ॥ ೬ ॥

(ಅದೇ–ಮ. ೧೯೩–೧೯೪ ಪರ್ವತಯ್ಯ.)

ವೀರಣ್ಣನವರು ದೀರ್ಘಕಾಲ ಬದುಕಲಿಲ್ಲ. ಅವರಿಗೆ ಪಾರ್ಶ್ವರೋಗ ಬಂದು ಬಡಿಯಿತು. ಕ್ರಿಶ ೧೯೬೮ರಲ್ಲಿ ಅವರು ಲಿಂಗೈಕ್ಯರಾದರು. ವೀರಣ್ಣನವರ ತತ್ತ್ವಪದಗಳಲ್ಲಿ ಒಂದನ್ನು ಇಲ್ಲಿ ಉದ್ಧರಿಸಲಾಗಿದೆ.

ಕಾಯಪುರ

ಸೃಷ್ಟಿಯೊಳ ಕಾಯಪುರ ಸಧ್ಯಕ
ಬ್ರಷ್ಠಾಗ್ಯಾವರಿ ನಿಷ್ಠೆ ಇಲ್ಲದಕ ॥ ಪ ॥

ಬಣ್ಣದಾಗ ಈ ಊರ ಕಾಣುವದು ಭಡಕ
ಒಂಬತ್ತು ಅಗಸಿಗಳು ಬಿಟ್ಟಾನೋ ಇದಕ
ಸೇಲಾ ಕಾಣುವುದು ಊರಮ್ಯಾಲೆ ನೋಡದಕ
ಒಳಹೊಕ್ಕು ನೋಡಿದರ ಭಾಳೆ ಅದ ಕೊಳಕ ॥ ೧ ॥


ಊರ ನಡಾವಳಿ ಆಗ್ಯಾವ ವಂಕ
ಆರು ಮಂದಿ ಮಾಡಿ ಬಿಟ್ಟಾರೋ ಡೊಂಕ
ಇವರದೇ ಕಾರಬಾರ ನಡಿತೋ ಸಧ್ಯಕ
ಬುದ್ಧಿ ಇದ್ದು ಬಿದ್ದೇವು ಹಿಂದಕ ॥ ೨ ॥

ಹಾದಿ ತಪ್ಪಿದೇವು ಗುರು ಇಲ್ಲದಕ
ಗುರು ಬಿಟ್ಟ ಆದೇವು ನಾವು ಮೂರ್ಖ
ಕರಿವಲ್ರು ನಮಗ್ಯಾರು ಸನಿಯಾಕ
ಸಾಕಪ್ಪ ಈ ಊರ ಇಲ್ಲೊ ಸಾರ್ಥಕ ॥ ೩ ॥
ನಾಡಿನೊಳಗ ಕೊಹಿನೂರ ಭಾಳ ಠೀಕ
ಗುಡಿತುಂಬ ನೋಡು ಚನ್ನನ ಬೆಳಕ
ಬೇಡಿಕೊಳ್ಳವೆನೆರಗಿ ಚರಣಕ
ಸೇಲಾಗಿ ಹೋಗುವನು ಶಿವ ಮಂದಿರಕ ॥ ೪ ॥

(ಅದೇ-ಮ.೧೯೫೫-೧೯೬೮)

(ವೀರಣ್ಣ ಸಂತಾಜಿ ಅವರ ಶಿಷ್ಯರಾದ ರೇವಣಸಿದ್ಧಪ್ಪ-ಪರ್ವತಯ್ಯನವರು ವಿವರಗಳನ್ನು ಒದಗಿಸಿದ್ದಾರೆ.)


□ □ □ □ □ □ □ □



ವೀರಣ್ಣ ಸಂತಾಜಿ ಅವರ ಮನೆ (ಕೊಹಿನೂರು).



ವೀರಣ್ಣ ಸಂತಾಜಿ ಅವರ ಆರಾಧ್ಯ ದೇವರು ಶ್ರೀ ಚೆನ್ನಮಲ್ಲೇಶ್ವರ (ಕೊಹಿನೂರು).



ವೀರಣ್ಣ ಸಂತಾಜಿ ಅವರು ಪೂಜಿಸುತ್ತಿದ್ದ ಚೆನ್ನಮಲ್ಲೇಶ್ವರಲಿಂಗ.

೩೧. ಮಾಣಿಕಪ್ಪ ಮೀನಕೇರಾ (ಕ್ರಿ.ಶ.ಸು. ೧೯೪೭)

ಬೀದರ ಜಿಲ್ಲೆಯ ಸಾಂಸ್ಕೃತಿಕ ಮತ್ತು ತಾಲ್ಲೂಕಾ ಕೇಂದ್ರವಾಗಿರುವ ಬಸವಕಲ್ಯಾಣದಲ್ಲಿ ಇಂದು ಮಾಣಿಕಪ್ಪನವರು ತಮ್ಮ ನಿವೃತ್ತಿಯ ಬದುಕನ್ನು ಕಳೆಯುತ್ತಿದ್ದಾರೆ. ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ; ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿ ಸೇವೆಸಲ್ಲಿಸಿದ ಅವರು ಶಿಕ್ಷಣ ಸೇವೆಯಿಂದ ಮಕ್ಕಳ ಮನವನ್ನು ಅರಳಿಸಿದ್ದಾರೆ. ತತ್ತ್ವಪದ ಸಾಹಿತ್ಯ ಕೃಷಿಯಿಂದ ಸಮಾಜದ ಮನವನ್ನೂ ಮುದ–ಹದಗೊಳಿಸಿದ್ದಾರೆ; ಗೊಳಿಸುತ್ತಲಿದ್ದಾರೆ.

ಕುರುಬ ಜನಾಂಗಕ್ಕೆ ಸೇರಿದ ಮಾಣಿಕಪ್ಪನವರು ಜನಿಸಿದ್ದು ಮೂಲತಃ ಬೀದರ ತಾಲ್ಲೂಕಿನ ಸಿಂಧೋಲ ಗ್ರಾಮದಲ್ಲಿ. ತಂದೆ ತಿಪ್ಪಣ್ಣ. ತಾಯಿ ಝುರಣಮ್ಮ. 'ಮೀನಕೇರಾ' ಗ್ರಾಮದಿಂದ ಇವರ ಪೂರ್ವಜರು ಬಂದವರಾಗಿರುವ ಕಾರಣದಿಂದ ಮಾಣಿಕಪ್ಪನವರ ಮನೆತನಕ್ಕೆ "ಮೀನಕೇರಾ" ಎಂಬ ಹೆಸರು ಬಂದಿರುವ ಸಾಧ್ಯತೆಯಿದೆ. ಆದರೆ ಇದರ ಬಗೆಗೆ ಸ್ಪಷ್ಟವಾದ ಆಧಾರಗಳು ಯಾರಿಗೂ ಗೊತ್ತಿಲ್ಲ.

ತಿಪ್ಪಣ್ಣ–ಝುರಣಮ್ಮ ದಂಪತಿಗಳಿಗೆ ಮಾಣಿಕಪ್ಪನವರೆ ಹಿರಿಯ ಮಗ. ದಿ.೨೦–೧–೧೯೪೭ರಂದು ಅವರ ಜನನವಾಯಿತು. ಮಾಣಿಕಪ್ಪನವರಿಗೆ ಮುಕ್ತಮ್ಮ ಎಂಬ ಒಬ್ಬಳು ಕಿರಿಯ ಸಹೋದರಿಯಿದ್ದಾಳೆ. ಶಿವರಾಜ, ಪ್ರಕಾಶ ಎಂಬ ಇಬ್ಬರು ಕಿರಿಯ ಸಹೋದರಿದ್ದಾರೆ.

ಬಡತನದ ಬದುಕಿನ ನಡುವೆಯೂ ಮಾಣಿಕಪ್ಪನವರು ಪ್ರತಿಭಾವಂತ ವಿದ್ಯಾರ್ಥಿಯಾಗಿ ಎಸ್.ಎಸ್.ಎಲ್.ಸಿ ವರೆಗೆ ಓದಿದರು. ನಂತರ ಶಿಕ್ಷಕರ ತರಬೇತಿಯನ್ನು ಪೂರ್ಣಗೊಳಿಸಿದರು. ಹೀಗಾಗಿ ಅವರಿಗೆ ಕ್ರಿ.ಶ. ೧೯೬೦ರಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕ ವೃತ್ತಿಯು ದೊರಕಿತು. ಬಡತನದ ವಾತಾವರಣವು ಬರುವ ಸಂಬಳದಿಂದ ಒಂದಿಷ್ಟು ಬಯಲಾಗತೊಡಗಿತು. ತಂದೆ–ತಾಯಿಗಳಿಗೆ ಹರುಷವಾಯಿತು.

ನೌಕರಿಯಾದನಂತರ ಮಾಣಿಕಪ್ಪನವರು ಸಂಸಾರದ ಬದುಕಿಗೆ ಕಾಲಿರಿಸಿದರು. ಅವರ ಪತ್ನಿ ಸೋನಮ್ಮ. ಮಾಣಿಕಪ್ಪನವರಿಗೆ ಮೂರು ಜನ ಗಂಡು ಮಕ್ಕಳಿದ್ದಾರೆ. ಮಲ್ಲಿಕಾರ್ಜುನ, ಕಮಲಾಕರ, ವಿಶಾಲ ಎಂಬುವರೆ ಅವರು. ಮಾಣಿಕಪ್ಪನವರು

ಶಿಕ್ಷಕ ವೃತ್ತಿಯಲ್ಲಿದ್ದುದರಿಂದ ಅವರ ಬದುಕು ಮೌಲ್ಯಗಳಿಂದ ಕೂಡಿದೆ. ಆಡಂಬರ ರಹಿತ ಜೀವನ; ಸ್ವಚ್ಛ ಮನಸ್ಸು; ನಿರಹಂಕಾರ ಭಾವ; ನಿಷ್ಕಪಟ ನಡೆ – ಇವು ಅವರ ಜೀವನದಲ್ಲಿ ಕಾಣುವ ವೈಶಿಷ್ಟ್ಯಗಳಾಗಿವೆ. ಅವರ ಅಂತರಂಗವು ಆಧ್ಯಾತ್ಮಿಕತೆಯಿಂದ ಆವರಿಸಿಕೊಂಡಿದೆ.

ಮಾಣಿಕಪ್ಪನವರು ದೇವಿ ಉಪಾಸಕರು; ದಸರಾ ಹಬ್ಬದ ಸಂದರ್ಭದಲ್ಲಿ ಒಂಬತ್ತು ದಿನಗಳ ಕಾಲ ಉಪವಾಸ ವ್ರತವನ್ನು ಕೈಗೊಳ್ಳುತ್ತಾರೆ. ಅವರ ಪ್ರಕಾರ ಉಪವಾಸವು "ಮನಸ್ಸಿನ ನೆಮ್ಮದಿ ಮತ್ತು ಆತ್ಮಬಲ ಹೆಚ್ಚಿಸುವ" ಸಾಧನವಾಗಿದೆ. ಅವರು ಹಲವಾರು ಇಂತಹ ಉಪವಾಸ ವ್ರತಗಳ ಆಚರಣೆಗೆ ತೊಡಗಿದುದುಂಟು. ಆಧ್ಯಾತ್ಮದ ಬಗೆಗೆ ಇರುವ ಆಸಕ್ತಿ ಇಂದು–ನಿನ್ನೆಯದಲ್ಲ. ಶಾಲೆಯ ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಅದು ಅವರೊಡನೆ ವಿಕಾಸಗೊಂಡು ಬಂದಿದೆ. ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ ಅವರು ದೇವರ ಧ್ಯಾನ ಮಾಡುತ್ತಿದ್ದರು. ಶಾಲೆಯಲ್ಲೂ ಒಂದೊಂದು ಸಲ ಕಣ್ಣು ಮುಚ್ಚಿ ಕುಳಿತು ಬಿಡುತ್ತಿದ್ದರಂತೆ. ಶಾಲೆಯ ಸಮಯದ ನಂತರ ಅವರು ಹೊಲಕ್ಕೆ ಹೋಗುತ್ತಿದ್ದರು. ಅಲ್ಲಿಯೂ ಗಿಡದ ಕೆಳಗೆ ಏಕಾಂತವಾಗಿ ದೇವರನ್ನು ಧ್ಯಾನಿಸುತ್ತ ಕುಳಿತು ಬಿಡುತ್ತಿದ್ದರು. ಹೀಗೆ ಬಾಲ್ಯದಿಂದಲೇ ಅವರಲ್ಲಿ ಆಧ್ಯಾತ್ಮ–ದೇವರು ಎಂಬಂತಹ ತತ್ತ್ವಗಳು ಬೆಳೆದು ಬಂದವು.

ಮಾಣಿಕಪ್ಪನವರ ಜೀವನವು ಆರಂಭದಲ್ಲಿ ಆರ್ಥಿಕವಾಗಿ ಕುಂಟುತ್ತಲೆ ನಡೆಯುತ್ತಿದ್ದಿತು. ತಂದೆ–ತಾಯಿ; ಹೆಂಡತಿ–ಮಕ್ಕಳಿಂದ ಕೂಡಿದ ದೊಡ್ಡ ಕುಟುಂಬ. ಪ್ರಾಥಮಿಕ ಶಾಲೆಯ ಶಿಕ್ಷಕನಿಗೆ ಅತ್ಯಂತ ಕಡಿಮೆ ಸಂಬಳವಿದ್ದ ಕಾಲವದು. ಸಂಬಳದಲ್ಲಿಯೇ ಎಲ್ಲವನ್ನು ನಿಭಾಯಿಸಬೇಕು. ಮಾಣಿಕಪ್ಪನವರು ಎಲ್ಲ ಭಾರವನ್ನು ದೇವರ ಮೇಲೆ ಹಾಕಿ, ತಮ್ಮ ಕರ್ತವ್ಯ ನಿಭಾಯಿಸುವ ಮನೋಭಾವದವರು. ಹೀಗಾಗಿ "ದೇವರು ಯಾವ ಹಂತದಲ್ಲಿಯೂ ತಮ್ಮ ಕೈ ಬಿಡಲಿಲ್ಲಯೆಂಬುದೇ" ಅವರ ಭಾವನೆ.

ಮಾಣಿಕಪ್ಪನವರಿಗೆ ಹಾಡುವುದಕ್ಕೆ ಬರುವುದಿಲ್ಲ. ಸಂಗೀತ ವಾದ್ಯಗಳ ಪರಿಚಯವೂ ಇಲ್ಲ. ಆದರೆ ಅವರಿಗೆ ಭಜನೆಯಲ್ಲಿ ಭಾಗವಹಿಸಿ, ಅಲ್ಲಿ ಹಾಡುವ ಹಾಡುಗಾರರ ಹಾಡುಗಳನ್ನು ಕೇಳುವ ಅದಮ್ಯ ಆಸಕ್ತಿಯಿದೆ. ಆಗಾಗ ಅಲ್ಲಲ್ಲಿ ನಡೆಯುವ ಭಜನೆಗಳಿಗೆ ಬಿಡುವು ಮಾಡಿಕೊಂಡು ಹೋಗುತ್ತಾರೆ. ಹಾಡುಗಳನ್ನು ಕೇಳುತ್ತಾರೆ. ಈ ಹವ್ಯಾಸವು ಅವರಿಗೆ ತಾರುಣ್ಯದಿಂದಲೇ ಅಂಟಿಕೊಂಡು ಬಂದುದು. ಹಾಡುಗಳನ್ನು ಕೇಳುತ್ತಲೇ ಮಾಣಿಕಪ್ಪನವರಲ್ಲಿ 'ಹಾಡು ಬರೆಯಬೇಕೆಂಬ ಭಾವವು' ಎಚ್ಚರಗೊಳ್ಳ ತೊಡಗಿತು. ಕ್ರಿ.ಶ.೧೯೮೬ರಿಂದ ಅವರ ಕಾವ್ಯಕೃಷಿ ಆರಂಭವಾಯಿತು.

ಮಾಣಿಕಪ್ಪನವರು ತಮ್ಮ ಪ್ರತಿಭೆಗೆ ಪೂರಕವಾಗಿ ವ್ಯುತ್ಪತ್ತಿಯ ಬಲವನ್ನು ಹಿನ್ನೆಲೆಯಾಗಿಸಿಕೊಂಡರು. ಅವರು ಶರಣರ ವಚನಗಳನ್ನು ಮನದಿಂದ ಓದಿದರು. ಕನ್ನಡದ ಶತಕಗಳನ್ನು ಅಭ್ಯಾಸ ಮಾಡಿದರು. ತತ್ತ್ವಪದಗಳನ್ನು ಓದಿ, ಅದರ ಬಂಧ–ಛಂದವನ್ನು ತಮ್ಮದಾಗಿಸಿಕೊಂಡರು. ಅವರು ಪ್ರಚಾರಕ್ಕಾಗಿ ಹಾಡುಗಳನ್ನು ಬರೆಯುತ್ತಿಲ್ಲ. ಯಾವುದೇ ಸದ್ದು–ಗದ್ದಲವಿಲ್ಲದೆ ಮೌನವಾಗಿದ್ದು, ತತ್ತ್ವಪದ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ಇಂದು ಬಸವಕಲ್ಯಾಣ ಪರಿಸರದಲ್ಲಿ ನೆಲೆನಿಂತು ಅಲ್ಲಿನ ಶರಣಸಂಸ್ಕೃತಿಯ ಸತ್ವವನ್ನು ಅರಗಿಸಿಕೊಳ್ಳುತ್ತಿದ್ದಾರೆ. ಶರಣರನ್ನು ಕುರಿತು ಪದ್ಯಗಳನ್ನು ರಚಿಸುತ್ತಿದ್ದಾರೆ. ಇಲ್ಲಿಯವರೆಗೆ ಅವರು ರಚಿಸಿದ ಪದ್ಯಗಳ ಸಂಖ್ಯೆ ೨೬೩೯.

ಮಾಣಿಕಪ್ಪನವರಿಗೆ ಹಲವು ಮಾನ–ಸನ್ಮಾನಗಳು ದೊರಕಿವೆ. ಕ್ರಿ.ಶ. ೧೯೯೩ರಲ್ಲಿ ಅವರನ್ನು ಬೀದರ ಜಿಲ್ಲೆಯ "ಅತ್ಯುತ್ತಮ ಶಿಕ್ಷಕ"ರೆಂದು ಸನ್ಮಾನಿಸಲಾಯಿತು. ಕ್ರಿ.ಶ.೨೦೦೪ರಲ್ಲಿ ಖೇಳಗಿ ಗ್ರಾಮದಲ್ಲಿ ಜರುಗಿದ ಬಸವಕಲ್ಯಾಣ ತಾಲ್ಲೂಕಿನ ಎರಡನೆಯ ಸಾಹಿತ್ಯ ಸಮ್ಮೇಳನದಲ್ಲಿ ಅವರನ್ನು ಗೌರವಿಸಲಾಯಿತು. ಕ್ರಿ.ಶ. ೨೦೦೮ರಲ್ಲಿ ಅವರನ್ನು ತಾಲ್ಲೂಕಾ ಸಾಹಿತ್ಯ ಸಮ್ಮೇಳನದಲ್ಲಿ ಮತ್ತೆ ಸನ್ಮಾನಿಸಲಾಯಿತು. ಕ್ರಿ.ಶ. ೨೦೧೦ರಲ್ಲಿ ಅವರಿಗೆ ತಾಲ್ಲೂಕಾ ಮಟ್ಟದ "ರಾಜ್ಯೋತ್ಸವ ಪ್ರಶಸ್ತಿ' ನೀಡಿ ಸತ್ಕರಿಸಲಾಯಿತು.

ಮಾಣಿಕಪ್ಪನವರು ತಾವು ರಚಿಸಿದ ಭಜನೆ ಅಥವಾ ತತ್ತ್ವಪದಗಳಿಗೆ "ವಿರೂಪಾಕ್ಷ" ಎಂಬ ಅಂಕಿತವನ್ನು ಇರಿಸಿಕೊಂಡಿರುವರು. ಅವರು ರಚಿಸಿದ ಕೆಲವು ಪದ್ಯಗಳನ್ನು ಇಲ್ಲಿ ಗಮನಿಸಬೇಕು:

ಸಾವು ನಿಶ್ಚಿತ

ಸಾವು ನಿಶ್ಚಿತ ಅದಕ್ಕಿಲ್ಲ ಸಮಯ ನಿಗದಿತ
ಯಾವ ಘಳಿಗೆಗಾದರು ಬಂದೆರಗಬಹುದು ಅಭಾದಿತ ॥ ಪ ॥

ಸನ್ನದ್ಧಾಗಿರು ಚೇತನ ಸ್ವರೂಪ ಚೈತನ್ಯವೆ
ನಿನ್ನದೆಂಬ ಆಯ್ಕೆ ಇಲ್ಲ ತಿಳಿ ಮನವೆ
ಬನ್ನ ಬಡುವುದೇಕೆ ಈ ಘಳಿಗೆಗೆ
ಸನ್ನದ್ಧಾಗಿರು ಚೇತನವೆ ॥ ೧ ॥

ಧರ್ಮ – ಅಧರ್ಮಕ್ಕೂ ನಿಲುಕದ ಗೂಢವೆ
ಎಲ್ಲವೂ ನಿರಾಡಂಬರಿಲ್ಲದ ನಿರಾಳ ನಿರುಪಮವೆ
ಬಲ್ಲ ಜ್ಞಾನಿಗಳಿಗೂ ನಿಲುಕದ ಗುರುವೆ ॥ ೨ ॥

ಧರ್ಮದಧಿಕೃತದಧಿಕಾರದಿ ರಾಜನು ಅವನು
ಅವನಿವನೆನ್ನುವ ತಾರತಮ್ಯ ಮಾಡದ ನಿರಂಕುಶನು
ಕೊಂಡೊಯ್ಯದ ರೀತಿ–ರಿವಾಜು ನೋಡದ ಯಮನು
ಕೊಂಡದೊಳು ನೂಕುವನು ಪಾಪಿಗಳನು ॥ ೩ ॥

ಅವರವರ ಕರ್ಮಕಾರ್ಯಕ್ಕನುಗುಣುವೆ
ಅನವರತ ನಡೆಯುವ ಅನುಪಮ ಅನುಷ್ಠಾನವೆ
ಇದಕ್ಕಿಲ್ಲ ಹೊಣೆ ಇಲ್ಲ್ಯಾರು ಅವರವರೆ ಹೊಣೆಗಾರರೆ
ಸಧ್ಯಕ್ಕಿಲ್ಲ ಅದರಲ್ಲಿ ಅವರ ಹಕ್ಕು ತಿಳಿಯಿರೆ ॥ ೪ ॥

ಕರ್ತಾರನ ಕಮ್ಮಟದ ಕಠಾರಿ–ಕಠೋರ ಕಣಜದಿ
ಬದುಕು–ಸಾವು ಎರಡು ಜೀವಿಗಳ ಅವಿಭಾಜ್ಯ ಅಂಗವಲ್ಲವೆ ?
ಮೃತ್ಯುಂಜಯ ಮಂತ್ರ ಪಠಿಸುವರೆಲ್ಲ ಅಮರರೆ ॥ ೫ ॥

ಮೂರು ಗುಂಡು

ಒಲೆಗಿರುವುದು ಮೂರು ಗುಂಡು
ಮೂರರೊಳು ವಿಶ್ವ ದುಂಡು ॥ ಪ ॥

ಮೂರು ಬಿಟ್ಟರೆ ಇನ್ನೊಂದಿಲ್ಲ
ಮೂರರೊಳಗೆ ಇನ್ನೊಂದಿಲ್ಲ
ಮೂರರೊಳಗೆ ಸರ್ವರೆಲ್ಲ
ಮೂರು ಬಿಟ್ಟವನು ಜಗ ಗೆಲ್ಲ ॥ ೧ ॥

ಮೂರರೊಳಗೆ ಸೌದೆ ಇಟ್ಟು
ಅಡುಗೆ ಮಾಡುವರು ಸರ್ವರೆಲ್ಲ
ಮೂರು ತುತ್ತು ಬಾಯೊಳಿಟ್ಟು
ಮೂರು ಮಾತು ಆಡುವರಲ್ಲ ॥ ೨ ॥

ಮೂರಕ್ಕೆ ಮಾಡ್ವರು ಮೂವರು ಕೂಡಿ
ಒಳ್ಳೆಯ ಧನಿಯರಿದ್ದರು ಮೂವರಿಲ್ಲಿ

ಮಾತು ಕೊಟ್ಟು ಹೋದವರು
ತಿರುಗಿ ಬಂದಿಲ್ಲ ಒಬ್ಬರಿಲ್ಲಿ ॥ ೩ ॥


ಮೂರು ಬಣ್ಣದ ಬಟ್ಟೆ ಉಟ್ಟು
ಮೂರು ಕಾಲ ಮೇಲೆ ನಿಂತು
ತೂಕ ಮಾಡಿ ತೂಗುತ್ತಿದೆ
ಎರಡು ಅಳಿದು ಉಳಿಯಿತೊಂದು ॥ ೪ ॥

ಮೂರು ಬಿಟ್ಟು ಕೆಟ್ಟರಲ್ಲ
ತಿಳಕೊಳ್ಳರಿ ಮೂರರ ಮೂಲ
ಮೂರ ಬಿಟ್ಟು ಬದುಕಿದವರಿಲ್ಲ
ವಿರುಪಾಕ್ಷ ಹೇಳಿ ಹೊರಟನಲ್ಲ ॥ ೫ ॥

(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿದ್ದಾರೆ.)



ಮಾಣಿಕಪ್ಪ ಮೀನಕೇರಾ ಅವರ ಮನೆ (ಬಸವಕಲ್ಯಾಣ).



ಮಾಣಿಕಪ್ಪ ಮೀನಕೇರಾ ಅವರಿಗೆ ಶಿಕ್ಷಕರ ದಿನಾಚಾರಣೆಯಂದು ಸನ್ಮಾನ.



ಮಾಣಿಕಪ್ಪ ಮೀನಕೇರಾ ಅವರು ಸಾಹಿತ್ಯ ಸಮ್ಮೇಳನದಲ್ಲಿ ಭಾಷಣ ಮಾಡುತ್ತಿರುವುದು.



ಮಾಣಿಕಪ್ಪ ದಂಪತಿಗಳು ಮಗ ಸೊಸೆ ಮೊಮ್ಮಗಳೊಂದಿಗೆ.



ಮಾಣಿಕಪ್ಪ
ಮೀನಕೇರಾ.



ಮಾಣಿಕಪ್ಪ ದಂಪತಿಗಳು. (ಪತ್ನಿ : ಸೋನಮ್ಮ).

೩೭. ಅಣ್ಣಪ್ಪ ಸಾಮದೆ (ಕ್ರಿ.ಶ.ಸು. ೧೯೪೯)

ಬೀದರ ಜಿಲ್ಲೆಯ ಬಸವಕಲ್ಯಾಣದ ನೆಲೆಯ ಹಾರಕೂಡ ಗ್ರಾಮವು ತನ್ನ ಹೆಸರನ್ನೇ ನಾಡಿನುದ್ದಗಲಕ್ಕೂ ಹಬ್ಬಿಸಿಕೊಂಡಿರುವುದು ಅಲ್ಲಿನ ಹಿರೇಮಠದಿಂದ, ಹಿರೇಮಠದ ಅಧಿಪತಿಗಳಾಗಿದ್ದ ಚೆನ್ನಬಸವ ಶಿವಯೋಗಿಗಳಿಂದ. ಮಹಾತಪಸ್ವಿ ಚೆನ್ನಬಸವ ಶಿವಯೋಗಿಗಳ ಪರಮ ಭಕ್ತನೇ ಈ ಅಣ್ಣಪ್ಪ ಸಾಮದೆ ಅವರು.

ಅಣ್ಣಪ್ಪ ಸಾಮದೆ ಅವರ ತಂದೆ ಭೀಮಶಾ ಸಾಮದೆ. ಒಕ್ಕಲುತನ ಮಾಡುತ್ತ; ಭಕ್ತಿಯಿಂದ ಬದುಕುತ್ತಿದ್ದ ಪಕ್ಕಾ ರೈತ. ಆತನಿಗೆ ಚೆನ್ನಬಸವ ಶಿವಯೋಗಿಗಳಲ್ಲಿ ಅಪ್ರತಿಮ ಭಕ್ತಿಯಿದ್ದಿತು. ಮಠದ ಸೇವಾಕಾರ್ಯದಲ್ಲಿ ಅವನು ಯಾವಾಗಲೂ ಮುಂಚೂಣಿಯಲ್ಲಿ ನಿಂತು ಅದನ್ನು ನಿರ್ವಹಿಸುತ್ತಿದ್ದನು. ಮಠದ ಆವರಣವನ್ನು ಗುಡಿಸುವುದು; ಥಳಿ ಹೊಡೆಯುವುದು, ಮಠದ ಆವರಣಕ್ಕೆ ಹತ್ತಿಕೊಂಡು ಕಮರಿ–ಕಂಟಿಗಳು ಬೆಳೆದಿದ್ದರೆ, ಅವುಗಳನ್ನು ಕಡಿದು ಸ್ವಚ್ಛಗೊಳಿಸುವುದು ಇಂತಹ ಕೆಲಸಗಳನ್ನು ಭೀಮಶಾ ಸಾಮದೆ ಮಾಡುತ್ತ ಬಂದಿದ್ದರು. ತಂದೆಯಂತೆಯೆ ಅಣ್ಣಪ್ಪ ಸಾಮದೆ ಅವರು ಹಾರಕೂಡ ಮಠದ ಮಗನಾದರು, ಭಕ್ತಿಯ ಶಿಷ್ಯನಾದರು. ಮನೆತನದ ಗುರುಗಳಾಗಿದ್ದವರು ಹಿರೇಮಠದ ವೀರಯ್ಯ ಸ್ವಾಮಿಗಳು.

ಅಣ್ಣಪ್ಪನವರ ತಾಯಿ ಮಹಾದೇವಿ, ಶರಣೆ, ಚನ್ನಬಸವ ಶಿವಯೋಗಿಗಳ ಪಾದದಲ್ಲಿ ಭಕ್ತಿಯಿಟ್ಟು ನಡೆಯುತ್ತ, ಮನೆಯ ದೇವರಾದ ಬುರಾಣಪುರದ ಸಿದ್ಧಯ್ಯಪ್ಪನ ಪರಮ ಭಕ್ತಳಾಗಿದ್ದವಳು.

ತಂದೆ ಭೀಮಶಾ – ತಾಯಿ ಮಹಾದೇವಿ ದಂಪತಿಗಳು ಅಕ್ಷರಭ್ಯಾಸವಿಲ್ಲದಿದ್ದರೂ, ಸುಸಂಸ್ಕೃತಿಯ ಮನವನ್ನು ಹೊಂದಿದವರಾಗಿದ್ದರು. ತಮ್ಮ ಮಗನಿಗೆ ಹತ್ತನೆಯವರೆಗೂ ಶಿಕ್ಷಣ ಕೊಡಿಸಿದರು.

ಅಣ್ಣಪ್ಪನವರಿಗೆ ಮುಂದೆ ಓದುವ ಮನಸ್ಸಾಗಲಿಲ್ಲ. ಶಾಲೆಗೆ ಶರಣು ಹೊಡೆದರು. ಕೃಷಿ ಕಾಯಕಕ್ಕೆ ತೊಡಗಿದರು. ತಂದೆಗೆ ಸಹಾಯಕರಾಗಿ ನಿಂತುಕೊಂಡರು. ಸಂಸಾರದ ಭಾರವನ್ನು ಹೊತ್ತರು. ಅಣ್ಣಪ್ಪನವರ ಹೆಂಡತಿ ಶಾಂತಾಬಾಯಿ. ಇವರಿಗೆ ಮೂವರು ಗಂಡು ಸಂತತಿಗಳು.

ಅಣ್ಣಪ್ಪ ಸಾಮದೆ ಅವರು ತಮಗೆ ದೊರಕಿದ ಹಾಡಿನ ರಚನೆಯ ಪ್ರೇರಣೆಯನ್ನು ಕುರಿತು ಹೇಳುತ್ತಾರೆ: "ನಾನು ಸು. ಮೂವತ್ತು ವರ್ಷ ವಯಸ್ಸಿನಿಂದಲೇ ಹಾಡುಗಳನ್ನು ಬರೆಯುವುದಕ್ಕೆ ಆರಂಭ ಮಾಡಿದೆನು. ಹಾರಕೂಡದ ಹಿರೇಮಠದಲ್ಲಿ ನಡೆಯುತ್ತಿದ್ದ ಭಜನೆ–ಸಂಗೀತದಂತಹ ಕಾರ್ಯಕ್ರಮಗಳು ನನಗೆ ಅತ್ಯಂತ ಆಕರ್ಷಣೀಯವಾಗಿದ್ದಂತೆ, ಹಾಡು ಬರೆಯುವುದಕ್ಕೂ ಪ್ರೇರಣೆ ನೀಡಿದವು. ಮೊದ ಮೊದಲಿಗೆ ನಾನು ಬೇರೆಯವರು ರಚಿಸಿದ ಹಾಡುಗಳನ್ನು ಅತ್ಯಂತ ಆಸ್ಥೆಯಿಂದ ಕೇಳುತ್ತಿದ್ದೆ, ಅವುಗಳನ್ನೂ ಹಾಡುತ್ತಿದ್ದೆ, ಹಾಗೆ ಹಾಡುವಾಗ ನನ್ನ ಮನಸ್ಸಿನಲ್ಲಿ 'ನಾನೂ ಏಕೆ ಹಾಡುಗಳನ್ನು ಬರೆಯಬಾರದು?' ಎಂಬ ಭಾವನೆ ಬರುತ್ತಿದ್ದಿತು. ಬರೆಯುವುದಕ್ಕೆ ಆರಂಭ ಮಾಡಿದೆ. ಗುರುಗಳಿಗೆ ತೋರಿಸಿದೆ, ತಲೆಯ ಮೇಲೆ ಕೈಯಿಟ್ಟು ಹರಿಸಿದರು. ಹಿರಿಯರಿಗೆ ತೋರಿಸಿದೆ, 'ಶಬ್ಬಾಶ್' ಎಂದರು. ಗೆಳೆಯರ ಎದುರಿನಲ್ಲಿ ಹಾಡಿದೆ, ಅವರು 'ಭೇಷ್' ಎಂದರು. ಹೀಗಾಗಿ ಹಾಡು ರಚನೆಯ ಶಕ್ತಿ ನನ್ನಲ್ಲಿ ಇಮ್ಮಡಿಸಿತು, ಬೆಳೆಯಿತು, ಇಂದಿಗೂ ಆಗಾಗ ಬರೆಯುತ್ತಲೇ ಇದ್ದೇನೆ".

ಅಣ್ಣಪ್ಪ ಸಾಮದೆ ಅವರು ಮೊದಲಿಗೆ ಚೆನ್ನಬಸವ ಶಿವಯೋಗಿಗಳನ್ನು ಕುರಿತು ಭಕ್ತಿಯ ಗೀತೆಗಳನ್ನು ರಚಿಸಿದರು. ಆನಂತರ ಸುಗ್ಗಿಯ ಸಮಯದಲ್ಲಿ ಹೊಲದಲ್ಲಿ ಹಂತಿ ಹೊಡೆಯುತ್ತ, ತಮ್ಮದೆ ಆದ ಹಂತಿಯ ಹಾಡುಗಳನ್ನು ಹೊಸೆದರು. ಜಾತ್ರೆಯಾದಿಗಳಿಗೆ ಹೋದಾಗ ಅಲ್ಲಿ ಗೀಗೀ–ಲಾವಣಿ ಪದ್ಯಗಳನ್ನು ಕಟ್ಟಿ ಹಾಡಿದರು. ಅಲಾವಿಯ ಸಮಯದಲ್ಲಿ ಮುಸ್ಲೀಮ ಬಾಂಧವರೊಂದಿಗೆ ಮೋಹರಮ್ ಹಾಡುಗಳನ್ನು ಹಾಡುತ್ತ, ತಾವೇ ಕೆಲವು ಮೋಹರಮ್ ಹಾಡುಗಳನ್ನು ರಚಿಸಿದರು. ಹೀಗೆ ಅಣ್ಣಪ್ಪ ಸಾಮದೆ ಅವರ ಹಾಡಿನ ರಚನೆಯ ಯಾತ್ರೆ ನಿರಾತಂಕವಾಗಿ ಸಾಗಿತು.

ಅಣ್ಣಪ್ಪ ಸಾಮದೆ ಅವರಿಗೆ ರಂಗಭೂಮಿಯಲ್ಲಿ ಆಸಕ್ತಿಯಿದೆ. ಅವರು ಮೊದ ಮೊದಲಿಗೆ ದೊಡ್ಡಾಟಗಳನ್ನು ಕಲಿಸಿದರು; ಕಡಿಮೆ ಬಿದ್ದಾಗ ದೊಡ್ಡಾಟದ ಪಾತ್ರವಾಗಿ ಮುಖಕ್ಕೆ ಬಣ್ಣ ಹಚ್ಚಿಕೊಂಡು ರಂಗದ ಮೇಲೆ ಕಾಣಿಸಿಕೊಂಡರು. ದೊಡ್ಡಾಟಕ್ಕೆ ಬೇಕಾದ ಹಾಡುಗಳನ್ನು ಬರೆದು, ಹಾಡುಗಾರಿಕೆಯಲ್ಲಿಯೂ ಭಾಗಿಗಳಾದರು. ದೊಡ್ಡಾಟಗಳನ್ನು ಕಲಿಸುತ್ತಿದ್ದುದರಿಂದ ಅಣ್ಣಪ್ಪನವರು "ದೊಡ್ಡಾಟದ ಮಾಸ್ತರ" ಆದರು.

ಈಗ ಅಣ್ಣಪ್ಪನವರಿಗೆ ಅರವತ್ತರ ವಯಸ್ಸು ಮೀರಿದೆ. ಮೊದಲಿನಂತೆ ಬೇರೆ–ಬೇರೆ ಕಾರ್ಯಗಳಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಕೃಷಿ ಕಾರ್ಯವನ್ನು ನಿರ್ವಹಿಸುತ್ತ, ಸ್ವಗ್ರಾಮದಲ್ಲಿಯೇ ಆಗಾಗ ಭಜನೆಗಳಲ್ಲಿ ಭಾಗವಹಿಸಿ ಹಾಡುತ್ತ, ಮನವನ್ನು ಆನಂದದ ನೆಲೆಯಾಗಿಸಿಕೊಂಡು ಬದುಕುತ್ತಿದ್ದಾರೆ. ಅವರು ಆದಷ್ಟು ಸುಮ್ಮನೆ ಕೂಡಬೇಕೆನ್ನುತ್ತಾರೆ. ಅವರ ಒಳಗಿನ ಸೃಜನಾತ್ಮಕ ಮನಸ್ಸು ಸುಮ್ಮನೆ ಕೂಡಗೊಡುವುದಿಲ್ಲ. ಮತ್ತೆ–ಮತ್ತೆ ಹೊರಗೆ ಬರುತ್ತಾರೆ. ಜನಕ್ಕೆ ಸಮ್ಮುಖರಾಗುತ್ತಾರೆ.

ಅಣ್ಣಪ್ಪ ಸಾಮದೆ ಅವರು ಇಲ್ಲಿಯವರೆಗಿನ ಅವಧಿಯಲ್ಲಿ ಐದನೂರಕ್ಕೂ ಹೆಚ್ಚಿನ ಬೇರೆ-ಬೇರೆ ಪ್ರಕಾರದ ಹಾಡುಗಳನ್ನು ರಚಿಸಿರುವುದಾಗಿ ಹೇಳುತ್ತಾರೆ. ಅವುಗಳಲ್ಲಿ ಹಲವು ತತ್ತ್ವಪದಗಳೂ ಇವೆ. ಹಾರಕೂಡ ಹಿರೇಮಠದ ಚೆನ್ನಬಸವ ಶಿವಯೋಗಿಗಳ ಪುಣ್ಯ ನಾಮವನ್ನು ಅಣ್ಣಪ್ಪನವರು ತಮ್ಮ ಹಾಡುಗಳಿಗೆ ಅಂಕಿತವನ್ನಾಗಿಸಿಕೊಂಡಿದ್ದಾರೆ. ಅವರ ಎರಡು ಹಾಡುಗಳನ್ನು ಉದ್ಧರಿಸಲಾಗಿದೆ:

ಜಾತ್ರೆಗೆ ಬಂದೆವಣ್ಣಾ

ಜಾತ್ರೀಗಿ ಬಂದವಣ್ಣಾ । ನಾವು
ಯಾತ್ರೀಗಿ ಬಂದೆವಣ್ಣಾ ॥ ಪ ॥

ಒಳ್ಳ್ಯಾದು ಕೆಟ್ಟಾದು ವಸ್ತುಗಳಲ್ಲಿ
ಸತ್ಯಾದು ಸುಳ್ಳಾದು ದಿನಸುಗಳಲ್ಲಿ
ನೀತಿ-ಅನೀತಿಯ ಧಾನ್ಯಾಗಳ ಒಕ್ಕಿ
ಜಾತಿ-ವಿಜಾತಿಯ ರೊಕ್ಕಾದ ಬುಕ್ಕಿ ॥ ೧ ॥

ಬಂದೆ ಬರತಾರ ಹೋಗೆ ಹೋಗತಾರ
ಲೆಕ್ಕಕ್ಕ ಮಿಕ್ಕೀದ ವ್ಯಾಪಾರ ಮಾಡತಾರ
ಚಿಕ್ಕವರು ದೊಡ್ಡವರು
ಮಕ್ಕಳು ಮುದುಕುರು ॥ ೨ ॥

ಜೋಗಿಗಳು ಬಂದಾರ
ತ್ಯಾಗಿಗಳು ಬಂದಾರ
ಭೋಗಿಗಳು ಬಂದಾರ
ರೋಗಿಗಳು ಬಂದಾರ ॥ ೩ ॥

ಎಲ್ಲಾರೂ ಬಂದಾರ
ಎಲ್ಲಾರೂ ಹೋಗ್ಯಾರ
ಅಡಿಯಿಲ್ಲ; ತಡೆಯಿಲ್ಲ
ಕೊನೆಯಿಲ್ಲ; ಮನೆಯಿಲ್ಲ ॥ ೪ ॥

ಕೊಂಡವರು ಕೊಂಡಾರು
ಉಂಡವರು ಉಂಡಾರು
ಭಂಡಾರ ಹಚ್ಚ್ಯಾರು
ಖೆಂಡಾವ ತುಳದಾರು ॥ ೫ ॥

ಬಂದವರು ಇಲ್ಲಿ ಇರುವದು ಇಲ್ಲ
ಕೊಟ್ಟದ್ದು ಕೊಂಡದ್ದು ಉಳಿಯುವುದು ಇಲ್ಲ
ಅಲ್ಲದ್ದು ಬಿಟ್ಟು ಸಲ್ಲದ್ದು ಕೊಂಡು
ಚೆನ್ನಬಸವನ ದೊಡ್ಡ ಜಾತರಿ ಮಾಡಾಮು ॥ ೬ ॥

ಲಿಂಗದಲ್ಲೆ ಎಲ್ಲಾ

ಗುರು ಚೆನ್ನಬಸವನು ಕರುಣಿಸಿದ ವರಲಿಂಗ
ಅದರೊಳಗೆಲ್ಲಾ ಇರುವದು ಸಂಗ ॥ ಪ ॥

ತನವು ಲಿಂಗದೊಳಗ
ಮನವು ಲಿಂಗದೊಳಗ
ಧನವೆಲ್ಲ ಲಿಂಗದೊಳಗ
ಜೀವನೆಲ್ಲ ಲಿಂಗದೊಳಗ ॥ ೧ ॥

ನಾನು ಲಿಂಗದೊಳಗ
ಅವನು ಲಿಂಗದೊಳಗ
ತಾನು ಲಿಂಗದೊಳಗ
ನೀನು ಲಿಂಗದೊಳಗ ॥ ೨ ॥

ಗುರುಕೊಟ್ಟ ಲಿಂಗವ ಬಿಡಬ್ಯಾಡ ಖೋಡಿ
ಅರುವಿಂದೆ ಪೂಜಿಸು ನದರಿಟ್ಟು ನೋಡಿ
ನಿನ್ನರೂಪವ ಅದರೊಳಗ ನೋಡು
ಗುರು ಚೆನ್ನಬಸವನೆ ಅಲ್ಲಿಹನು ಪಾಡು ॥ ೩ ॥

ಮಾನವ ಶರೀರ ಒಂದು ಗಡುಗೆ

ಮಾಡ್ಯಾನ ಗಡುಗಿ ಕುಂಬಾರ
ತೊಡ್ಯಾನ ನಂಬರ ಶಂಬೊರಾ
ವಡಕ ಗಡುಗಿ ಇದರ ಬುಡಕ ನೋಡಿದರಾ
ಧಡ ಇಲ್ಲ ನೋಡೋ ಒಂದಾರಾ ‖ ಪ ‖

ಗಂಭೀರ ಕುಂಬಾರ ನವತಾರಾ
ಬ್ರಹ್ಮ ದೇವರು ಇದರ ಅಧಿಕಾರ
ಸಂಸಾರ ಎಂಥ ಅಂವಸಾರಾ
ಸೋರುವ ಗಡಗ್ಯಾಗ ಅಡುಗಿ ಮಾಡ್ಯಾರಾ
ನಾರುವ ಗಡಗಿ ಈ ಶರೀರಾ
ಯಾರ್‍ಯಾರು ಎಲ್ಲಿಂದ ತಂದಾರಾ ‖ ೧ ‖

ಕಸರಿಲ್ಲ ತುಸು ಹೇರ ಫೇರಾ
ಬ್ಯಾಸರಿಲ್ಲದೆ ಮಾಡಿಟ್ಟಾರ
ಹಸಿಕೆಸರಾ ಹುಸಿ ಇಲ್ಲ ಜರಾ
ಖುಸಿಲಿಂದೆ ಗಡಗಿ ಮಾಡ್ಯಾರಾ
ಹೊಸ ಹೊಸ ಮಾಟಾ ಕೆತ್ತ್ಯಾರಾ
ಸೊಸಿ ನೋಡಿ ಗಡಗಿ ಸುಟ್ಟಾರಾ ‖ ೨ ‖

ಗಡಗಿ ನೋಡಲಕ ಭಾಳ ಚದುರಾ
ಸುಡಗಾಡದಾಗ ಯಾಕ ಇಡತಾರಾ
ಸಡಗರದಿಂದ ಮೇರಶ್ಯಾರಾ
ಕಡಿಗದು ಕೈಲಿಂದ ವಡದಾರಾ
ವಡಕಗಡಗೀಗಿ ಫಡಕೀ ಸುತ್ತ್ಯಾರ
ಮಾಡವನೆ ಮಾಡತಾನ ಅದರ ಆಕಾರಾ ‖ ೩ ‖

ಬ್ಯಾರೆ ಬ್ಯಾರೆ ಬಣ್ಣ ಕೊಟ್ಟರಾ
ಅರುವಿಲಿ ಗಡಗಿ ಮುಟ್ಯಾರಾ

ಕಿಂಕರ ಶಂಕರ ಓಂಕಾರಾ ಇದೆ ಗಡಗ್ಯಾಗ ಕುಂತಾರಾ
ಮಾಡ್ಯಾರ ಶಿವನ ಸ್ತೋತರಾ
ಹಾರಕೂಡ ಹುಡುಗರು ಹಾಡ್ಯಾರಾ ॥ ೪ ॥

ಶರೀರ ಹೆಣ್ಣು ಪ್ರಾಣ ಗಂಡು

ಗಂಡ ಸಿಕ್ಕಾನವ್ವ ಮಳ್ಳಾ । ಯಾರೀಗಿ ಹೇಳಲಿ ನನ್ನ ಗೋಳಾ
ಖೂಳ ಗಂಡಗ ಮಾಡಿಕೊಂಡು ನನ್ನ ಸಂಸಾರ ಆಯ್ತ ಹಾಳಾ ॥ ಪ ॥

ಕಾಲ ಕೈಯಿಲ್ಲ ಮಂಡಾಸ ಮೂಳಾ
ಜಾಗ ಹಿಡದಾನ ಮೂರವರಿಮಳಾ
ಇಂವ ನನ್ನ ಆಳಾ ಕೊಟ್ಟಾರ ತಿಂತಾನ ಕೂಳಾ
ವ್ಯಾಳ್ಯಾ ಆದರ ಅಳತಾನ ಗಳಗಳಾ ॥ ೧ ॥

ಕೆಟ್ಟಚಟಗಳು ಇವನಲ್ಲಿ ಭಾಳಾ
ನೋಡಲಾರದೆ ಮಾಡಿಕೊಂಡು ಆದ ಹಾಳಾ
ನನಗ ಆಗ್ಯಾನ ಕಾಳಾ ದುಡದ ಹಾಕಂತನ ಕೂಳಾ
ಸದಾ ಸೋರತಾದ ಯವ್ವಾ ಇವನ ಸುಂಬಳಾ ॥ ೨ ॥


ಖೂನಾ ಇರಲೆಂದು ಕಟ್ಟ್ಯಾನ ನನಗ ಗುಳ್ಳ
ಕದ್ದು ಕುಂತು ಮನಿಮಾಡ್ಯಾನ ಹಾಳಾ
ಸದಾ ಆಡತ್ತಾನ ಸುಳ್ಳ ಮಂದೀಗಿ ಮಾಡತ್ತಾನ ಮಳ್ಳಾ
ಎಷ್ಟಂತ ತಾಳಲಿ ಇವನ ಗೋಳಾ ॥ ೩ ॥

ಸಾಕಂತ ಕಡಕೊಂಡು ಸಂಸಾರ ಮಾಡ್ಯಾನ ಗಾಳಾ
ಥೈ ಥೈ ಕುಣಿತಾನ ಎದ್ದಂಗ ದಳಾ
ಹಾರಿ ಹೋದಂಗ ಧೂಳಾ ಓಡಿ ಹೋದಂಗ ಮಳ್ಳ
ಮನಿ ಬಿದ್ದು ಆಗಿ ಹೋಯಿತ್ತು ಹಾಳಾ ॥ ೪ ॥


ದೇಶದೊಳು ಹಾರಕೂಡ ನಮ್ಮ ಸ್ಥಳಾ
ಚೆನ್ನಬಸವನ ಭಜನಿಯ ಮೇಳಾ
ಹಾಡಿ ಹೇಳ್ಯಾರ ಜಳ ಜಳಾ
ಖೂಳಾ ಗಂಡನ ಗೋಳಾ
ತಾಳಿ ಬಾಳ್ವೆ ಮಾಡಂದ ಜಗದೋಳಾ ॥ ೫ ॥

(ಈ ವಿವರಗಳನ್ನು ಸ್ವತಃ ಕವಿಗಳೇ ಒದಗಿಸಿರುವರು.)

▯



ಅಣ್ಣಪ್ಪ ಸಾಮದೆ ಅವರ ಮನೆ (ಹಾರಕೂಡ).



ಅಣ್ಣಪ್ಪ ಸಾಮದೆ ದಂಪತಿಗಳು (ಪತ್ನಿ : ಶಾಂತಾಬಾಯಿ).



ಅಣ್ಣಪ್ಪ ಸಾಮದೆ

೩೩. ಶಂಕರ ಶೀಲವಂತ (ಕ್ರಿ.ಶ.ಸು. ೧೯೫೧)

ಹಾರಕೂಡ ಗ್ರಾಮದ ತತ್ತ್ವಪದಕಾರರ ಪರಂಪರೆಯನ್ನು ಮುಂದುವರೆಸುವ ಇನ್ನೊಬ್ಬ ಕವಿ ಶಂಕರ ಶೀಲವಂತ. ಇವರ ಮನೆತನವು ಅಕ್ಕಸಾಲಿಗ ವೃತ್ತಿಯಿರುವ ಕಾರಣದಿಂದ ಅದಕ್ಕೆ ಪರ್ಯಾಯ ನಾಮವೆನ್ನುವದಕ್ಕಾಗಿ 'ಶೀಲವಂತ' ಎಂದು ಕರೆದುದಲ್ಲ. ಅದರೊಂದಿಗೆ ಅವರ ಮನೆತನದ ಹಿರಿಯರು ಸದಾಚಾರ – ಶೀಲ ಸಂಪನ್ನರಾಗಿದ್ದರೆಂಬ ಕಾರಣಕ್ಕಾಗಿಯೂ ಆ ಹೆಸರು ಅನ್ವರ್ಥಕವಾಗಿ ನಿಂತುಕೊಳ್ಳುತ್ತದೆ.

ಶೀಲವಂತಮನೆತನದ ಗುರುಲಿಂಗಪ್ಪ ಮತ್ತು ಪಾರ್ವತಿ ದಂಪತಿಗಳು ಸಾತ್ವಿಕರು; ಗುರುಲಿಂಗ – ಜಂಗಮರಲ್ಲಿ ಭಕ್ತಿವುಳ್ಳವರು. ಹಿರೇಮಠದ ಚೆನ್ನಬಸವ ಶಿವಯೋಗಿಯ ಸೇವೆಯಲ್ಲಿ ನೆಲೆನಿಂತವರು. ಈ ದಂಪತಿಗಳಿಗೆ ಕ್ರಮವಾಗಿ ವೀರಶೆಟ್ಟೆಪ್ಪ, ಗುರುಪಾದಪ್ಪ, ಶಂಕರ, ಕಮಲಾಬಾಯಿ, ನಾಗಣ್ಣ ಎಂಬ ಮಕ್ಕಳು ಜನಿಸಿದರು.

ಶಂಕರ ಶೀಲವಂತ ಅವರ ಶಿಕ್ಷಣ ಸ್ವಗ್ರಾಮದಲ್ಲಿಯೇ ಆರಂಭವಾಯಿತು. ಒಂಬತ್ತನೆಯವರೆಗೆ ಓದಿದ ಅವರು ಶಿಕ್ಷಣಕ್ಕೆ ಶರಣು ಹೊಡೆದು ಮನೆತನದ ಅಕ್ಕಸಾಲಿಗ ವೃತ್ತಿಯೆಡೆಗೆ ಮುಖ ಮಾಡಿದರು.

ಶಂಕರ ಅವರ ಪತ್ನಿ ಉಮಾದೇವಿ. ಈ ದಂಪತಿಗಳಿಗೆ ಒಟ್ಟು ನಾಲ್ಕು ಜನ ಮಕ್ಕಳು. ಅವರಲ್ಲಿ ಮೂವರು ಗಂಡು ಮಕ್ಕಳು; ಒಬ್ಬಳು ಮಗಳು. ಮನೆತನದ ಗುರುಗಳು ಹಾರಕೂಡ ಹಿರೇಮಠದ ಚೆನ್ನಬಸವ ಶಿವಯೋಗಿಗಳು. ಅವರ ಹೆಸರಿನ ಅಂಕಿತವನ್ನು ಶಂಕರ ತಮ್ಮ ಪದ್ಯಗಳಿಗೆ ಇರಿಸಿಕೊಂಡಿದ್ದಾರೆ.

ಶಂಕರ ಹುಟ್ಟು ಕಲಾವಿದ ಮತ್ತು ಆಸ್ತಿಕ ಭಾವದ ಮನದವರು. ಈ ಪ್ರವೃತ್ತಿ ಅವರಿಗೆ ದೊರೆತದ್ದು ಎರಡು ಮೂಲಗಳಿಂದ: ಒಂದು ಅವರ ತಂದೆ–ತಾಯಿಗಳಿಂದ. ಅವರಿಗೆ ಇದ್ದ ದೇವರಲ್ಲಿನ ನಂಬುಗೆ ಮತ್ತೆ ಶಂಕರನಲ್ಲಿ ಸಾಕಾರವಾದಂತಾಯಿತು. ಎರಡನೆಯ ಮೂಲವೆಂದರೆ ಅವರ ಸೋದರಮಾವನ ಆಶ್ರಯ. ಶಂಕರ ಅವರ ಸೋದರಮಾವ ಶಾಂತಪ್ಪ ಶೀಲವಂತ ಮಹಾಕಲಾವಿದರಾಗಿದ್ದರು. ಅವರು ತಮ್ಮ ಜೀವಿತದ ಅವಧಿಯಲ್ಲಿ ಹಲವಾರು ಲಾವಣಿ–ಭಜನೆ ಹಾಡುಗಳನ್ನು ರಚಿಸಿ; ಜನತೆಯ ಮನದಲ್ಲಿ ಉಳಿಯುವಂತಾದರು.

ಶಂಕರ ಅವರಿಗೆ ಸೋದರಮಾವ ಶಾಂತಪ್ಪನವರ ಸಂಪರ್ಕ ಮತ್ತು ಪ್ರಭಾವಗಳೆರಡೂ ಒದಗಿ ಬಂದವು. ಶಾಂತಪ್ಪನವರು ಬಾಲ್ಯದಿಂದಲೇ ಶಂಕರನಲ್ಲಿದ್ದ ಪ್ರತಿಭೆಯನ್ನು ಗುರುತಿಸಿಕೊಂಡಿದ್ದರು. ಅವರು ಸೋದರಳಿಯನನ್ನು ತಾವು ಹೋಗುವ ಭಜನೆಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಅವರು ಮುಮ್ಮೇಳದಲ್ಲಿ ಹಾಡಿದರೆ, ಶಂಕರ ಅವರನ್ನು ಹಿಮ್ಮೇಳದಲ್ಲಿ ತಮ್ಮ ಧ್ವನಿಯನ್ನು ಸೇರಿಸುವಂತೆ ತಿಳಿಸುತ್ತಿದ್ದರು. ಬಾಲಕ ಶಂಕರ ಹಿಮ್ಮೇಳದವರೊಂದಿಗೆ ಲಯಬದ್ಧವಾಗಿ ಹಾಡುತ್ತಿದ್ದರು. ಸೋದರಮಾವ ಶಾಂತಪ್ಪನವರಿಗೂ ಇದರಿಂದ ಖುಷಿಯಾಯಿತು. ತಮ್ಮ ಅಳಿಯನನ್ನು ಸರಿಯಾಗಿ ಈ ದಿಶೆಯಲ್ಲಿ ಬೆಳೆಯಿಸಬೇಕೆಂಬ ಸಂಕಲ್ಪ ಮಾಡಿದರು. ಅವರ ಸಂಕಲ್ಪದ ಫಲವಾಗಿ ಶಂಕರ ಒಬ್ಬ ಅನುಭಾವಿ ಕವಿಯಾಗಿ ಬೆಳೆಯುವುದಕ್ಕೆ ಸಾಧ್ಯವಾಯಿತು. ಇದನ್ನು ಶಂಕರ ಸ್ವತಃ ಒಪ್ಪಿಕೊಳ್ಳುತ್ತಾರೆ.

ಶಂಕರ ಅವರ ಅನುಭಾವ ಪದಗಳ ಹಾಡುಗಾರಿಕೆ ಮತ್ತು ರಚನಾ ಪ್ರವೃತ್ತಿಗೆ ಚನ್ನಬಸವೇಶ್ವರ ಮಠ ಹಾಗೂ ಅವರ ಹೆಸರಿನಲ್ಲಿಯೆ ರಚಿಸಿಕೊಂಡಿದ್ದ "ಚನ್ನಬಸವೇಶ್ವರ ಭಜನೆ ಸಂಘ" ಇವು ಪ್ರಮುಖ ವೇದಿಕೆಗಳಾದವು. ಇಂದು ಅವರ ಭಜನಾ ಸಂಘದಲ್ಲಿರುವ ಸದಸ್ಯರ ಹೆಸರುಗಳನ್ನು ಶಂಕರ ಅವರು ಉಲ್ಲೇಖಿಸುತ್ತಾರೆ. ಈರಣ್ಣಾ ಕರಾರೆ, ಮಾರುತಿ ಮಾನೆ, ಅಯ್ಯಪ್ಪ ಸಜ್ಜನಶೆಟ್ಟಿ, ನಬಿಸಾಬ ಪಠಾಣ, ಚನ್ನಪ್ಪ ದಾಮಾ, ಚನ್ನಮಲ್ಲಯ್ಯ ಸ್ವಾಮಿ, ಮಖಬುಲ್ ನದಾಫ್, ಅಲ್ಲವುದ್ದೀನ್ ನದಾಫ್, ರಾಜಪ್ಪ ಡವರೆ, ಪ್ರಭು ಜೋಜನ, ಸಿದ್ರಾಮ ಗದುಗೆ, ಶಿವಲಿಂಗ ದಾಮಾ ಮುಂತಾದವರು ಭಜನಾ ಸಂಘದ ಸದಸ್ಯರು.

ಶಂಕರ ಶೀಲವಂತ ಅವರಿಗೆ ಹದಿನೇಳನೆಯ ವಯಸ್ಸಿನಿಂದ ಹಾಡು ರಚನೆಯ ಕಲೆ ಒಲಿಯಿತು. ಅಂದಿನಿಂದ ನಿರಂತರವಾಗಿ ಹಾಡುಗಳನ್ನು ರಚಿಸುತ್ತ ಬಂದಿದ್ದಾರೆ. ಬರೆದ ಹಾಡುಗಳನ್ನು ಕಾಪಿಯಲ್ಲಿ ಸಂಗ್ರಹಿಸಿ ಇಡುತ್ತಾರೆ. ಈಗ ಅವರು ಬರೆದ ಪದಗಳ ಸಂಖ್ಯೆ ನೂರರ ಗಡಿ ದಾಟಿದೆ. ಶಂಕರ ಅವರು ತಮ್ಮ ವೃತ್ತಿಯ ನಡುವೆಯೂ ಸಮಯ ಮಾಡಿಕೊಂಡು ಭಜನೆ ಮಾಡಲು ಹೋಗುತ್ತಾರೆ. ಕಲಬುರ್ಗಿಯಲ್ಲಿದ್ದರೂ ಅವರಿಗೆ ಹಾರಕೂಡ ಮತ್ತು ಅದರ ಸುತ್ತಮುತ್ತಲಿನ ಗ್ರಾಮಗಳಿಂದ ಆಗಾಗ ಭಜನೆಗಳಿಗಾಗಿ ಕರೆ ಬರುತ್ತವೆ. ಆಗ ಶಂಕರ ಅವರ ಅಕ್ಕಸಾಲಿಗತನದ ಅಂಗಡಿಗೆ ಬೀಗ ಹಾಕಿರುತ್ತದೆ. ಬೀಗ ಹಾಕಿದ ಅಂಗಡಿಯನ್ನು ನೋಡಿದ ಜನರು "ಶಂಕರ ಬಹುಶಃ ಯಾವುದೋ ಭಜನೆಗೆ ಹೋಗಿದ್ದಾನೆ" ಎಂದು ನುಡಿಯುತ್ತಾರೆ.

ಶಂಕರ ಉತ್ತಮ ಹಾಡುಗಾರ; ಕವಿ ಮತ್ತು ನಟ. ಹಾಗೆಯೇ ಭಜನೆಯಲ್ಲಿ ಅತ್ಯುತ್ತಮ ಹಾರ್ಮೋನಿಯಂ ನುಡಿಸುವ ಕುಶಲ. ಹಲವಾರು ನಾಟಕಗಳಲ್ಲಿ ಶಂಕರ ಸ್ತ್ರೀ ಪಾತ್ರ ವಹಿಸಿ ಪ್ರೇಕ್ಷಕರಿಂದ 'ಶಬಾಶ್' ಪಡೆದು ಕೊಂಡಿದ್ದಾರೆ. ಗದಲೆಗಾಂವ

ಅಣ್ಣಾರಾವ ಅವರು ಉತ್ತಮ ನಾಟಕ ಮಾಸ್ತರರು. ಅವರು ನಾಟಕಗಳಿಗೆ ಬೇಕಾದ ಪದ್ಯಗಳನ್ನು ಸ್ವತಃ ರಚಿಸುತ್ತಿದ್ದರು. ಅವರ ಮನಸ್ಸು ಅನುಭಾವಿಕನ ಮನಸ್ಸು. ಅವರು ಅನುಭಾವಿಕ ಮನದಿಂದ ಹಲವಾರು ಅನುಭಾವದ ಹಾಡುಗಳು ಆಗಾಗ ಬರೆದುದುಂಟು. ಅವರ ಸಂಪರ್ಕ ಶಂಕರ ಅವರಿಗೆ ದೊರೆತುದು ಒಂದು ಪ್ರಯೋಜನದಾಯಕವಾದ ಸಂದರ್ಭ. ಶಂಕರ ಇಂದಿಗೂ ಬರೆಯುತ್ತಲಿದ್ದಾರೆ. ಅವರ ಕೆಲವು ಹಾಡುಗಳನ್ನು ಇಲ್ಲಿ ಉದ್ಧರಿಸಲಾಗಿದೆ:

ಲುಂಗಿ

ಮಂದಿಗೆಲ್ಲ ಮಾಡಬ್ಯಾಡಪ್ಪ ಮಂಗ
ನಿಂದೆಂಥ ಡಂಗ ॥ ಪ ॥

ಲುಂಗಿ ಇಲ್ಲದೆ ಈಸ ದಿನ ಇದ್ದಿದಿ ಹ್ಯಾಂಗ
ಮೂರುವರಿ ಲುಂಗಿ ಅದ ನಿನ್ನಮ್ಯಾಗ
ಜ್ವಾಕಿ ಮಾಡು ನೂರು ರೂಪಾಯಿ ಲುಂಗೀಗ
ಹರಿದ ಬಳಿಕ ಇಡುವುದು ಯಾ ಜಾಗ ॥ ೧ ॥

ಕರ್ಮ ಎಂಬ ಚಾಪಿ ಅದ ನಿನ್ನ ಮ್ಯಾಗ
ತಿಳಿದವರು ತಿಳಿಯಬಲ್ಲವರು ಆಡತಾರ ಮಟಕ
ಗಳ್ಯಾ ಹೊಡಿದು ಮಮಕಾರದ ಹುಲ್ಲು ತೆಗಿ ಬೇಗ
ದೇವರೆಂದು ತಿಳಿ ತಾಯಿ ತಂದೀಗ ॥ ೨ ॥

ಚಿಲ್ಲರ ಗುಣದ ರೊಕ್ಕ ಬ್ಯಾಡ ಕಿಸೆದಾಗ
ಅರು ಎಂಬ ಟಿಕೇಟ ಕೊಳ್ಳಪ್ಪ ಬೇಗ
ಭವ ಎಂಬ ಸಿನಿಮಾ ಮಂದಿರದೊಳಗ
ದೇವರ ಆಟ ಕಾಣವಲ್ದು ಕಣ್ಣೀಗ ॥ ೩ ॥

ದೇಶದೊಳು ನಮ್ಮ ಹಾರಕೂಡ ಜಾಗ
ಈಶ ಚನ್ನಬಸವೇಶನ ದಯ ನಮಗ
ಸೋಸಿ ತಿಳಿಯೋ ಒಳಗಿನ ಅಂಗ
ಖಾಸಕವಿಗಾರ ಪದಗಳು ಹಿಂಗ ॥ ೪ ॥

ನೀ ಯಾರು ಕರಿಲಾಕ

ನೀ ಯಾರು ಕರಿಲಾಕ । ನನ್ನ ಮನಸ್ಸದಾ ಬರಲಾಕ ।
ನಿನ್ನ ಗುಣಗಳು ಕೆಡಕ । ಎಲ್ಲರು ಇಲ್ಲ ನಿನ್ನಂಗ ಹಲಕ ॥ ಪ ॥

ಬರಂಗ ಬಂದಿದಿ ಬೆನ್ಹತ್ತಿ ಬಾಜರಕ । ಎಲ್ಲ ಬೇಕಂತಿದಿ ಹುಡುಗ ಇಲ್ಲ ।
ರೊಕ್ಕ ತಪ್ಪ್ಯಾದ ನಿನದಕ್ಕ । ಗಪ್ಪಾಗಿ ಕುಂತ್ಯಾಕ ।
ನಿನ್ನ ಗುಣಗಳು ಅವ ಕೆಡಕ । ಎಲ್ಲರು ಇಲ್ಲ ನಿನ್ನಂಗ ಹಲಕ ॥೧ ॥

ನಾನೆ ಎಲ್ಲಾ ಮಾಡಿನೀ ಅಂತಿದಿ ಈ ಜಗಕ । ಸುಳ್ಳೆ ಇಲ್ಲೆ ಬಿಟ್ಟು ನಡದೀದಿ ಗಡಿ ತೀರಕ
ಅರವತ್ತು ವರುಷಕ । ಅರು ಬಂತು ನಿನಗ್ಯಾಕ
ನಿನ್ನ ಗುಣಗಳು ಅವ ಕೆಡಕ ಎಲ್ಲರು ಇಲ್ಲ ನಿನ್ನಂಗ ಹಲಕ ॥ ೨ ॥

ಮಾಳಿಗಿ ಮ್ಯಾಲ ಮಾಡಾ ಬಿಟ್ಟೀರಿ ಮೂರು ಯಾಕ
ಕಳ್ಳರು ಬರತಾರೊ ಕದಿಲಾಕ । ಒಳ್ಳೆ ಮಾರ್ಗದಿ ನಡಿ ಮೂರ್ಖ ।
ನಿನ್ನ ಗುಣಗಳು ಅವ ಕೆಡಕ । ಎಲ್ಲರು ಇಲ್ಲ ನಿನ್ನಂಗ ಹಲಕ ॥ ೩ ॥

ಹಾರಕೂಡ ಮುತ್ಯಾಗ ಮರಿಬ್ಯಾಡ ಜಲ್ಮ ಇರೋತನಕ ।
ಸರಿಲಾರದಷ್ಟು ಸಿರಿ ಬರುತಾದ ನಮ್ಮ ಮನಿತನಕ ।
ಬರದು ಹೇಳಿದ ಕವಿ ತಳಕ–ಗುರು ದರುಶನವೆ ಸಾಕ
ನಿನ್ನ ಗುಣಗಳು ಅವ ಕೆಡಕ । ಎಲ್ಲರೂ ಇಲ್ಲ ನಿನ್ನಂಗ ಹಲಕ ॥ ೪ ॥

ನಿಂದೆ ನಿನಗ ತಿಳಿಲಿಲ್ಲ

ನಿಂದೆ ನಿನಗೆ ತಿಳಿಲಿಲ್ಲ । ಪರನಿಂದೆ ಮಾತ್ರ ಬಿಡಲಿಲ್ಲ
ಗುರುಸೇವೆ ನೀ ಮಾಡಲಿಲ್ಲ । ಬರೀ ಗರ್ವದಿಂದ ನಡದೆಲ್ಲ ॥ ಪ ॥

ಹೆತ್ತವರ ನೀ ನೋಡಲಿಲ್ಲ । ಉತ್ತಮರ ಜೊತೆ ಗೂಡಲಿಲ್ಲ
ಮಿಥ್ಯವಾಗಿ ಮಾತಾಡಿದ್ಯೆಲ್ಲ । ಮತಿಗೆಟ್ಟು ಹೊಂಟಿಯಲ್ಲ ॥ ೧ ॥

ಮನೆತನದ ಘನತೆ ನಿನಗಿಲ್ಲ । ಮಮತೆಯಲ್ಲಿ ನೀ ಬಾಳಲಿಲ್ಲ
ಯಾರ ಅಳಲು ನೀ ಕೇಳಲಿಲ್ಲ । ಊರೊಳಗ ಚೂರು ಬೆಲೆಯಿಲ್ಲ ॥ ೨ ॥

ಸಂತ ಸಂಗದಲ್ಲಿ ನೀ ಕೂಡಿ । ಭಜಿಸಿಲ್ಲ ಭಗವಂತನ್ನಾಡಿ
ಮನೆಂದು ಉಂಡು ಮಂದಿ ಮಾತಾಡಿ । ಮಂದ್ಯಾಗ ಬ್ಯಾರಾದೊ ಖೋಡಿ॥ ೩ ॥

ಸದ್ಗುರುವಿನಡಿಗಿ ಬರಲಿಲ್ಲ । ಸದ್ವಿಚಾರ ನೀ ಕೇಳಲಿಲ್ಲ
ಸದ್ಗತಿಯ ನೀ ಹೊಂದಲಿಲ್ಲ । ಶಿವರುದ್ರ ಹೇಳಿದ್ದು ಸುಳ್ಳಲ್ಲ ॥ ೪ ॥

ಮದುವಿಯಾದ ಮೂರುದಿನಕ

ಮದುವಿಯಾದ ಮೂರು ದಿನಕ ಹೆಣ್ಣೀಗಿ ದೆವ್ವ ಬಡದಾದ
ಹಾದಿ ಬೀದಿಯಲ್ಲಿ ಸಿಕ್ಕಂಗ ಚೀರಿ ಒದರೆ ಒದರತಾದ ॥ ಪ ॥

ಕೌಡಿ ಹಾಕಿ ಕೇಳಿಸಿ ನೋಡಿದರ ಮೂರು ಮೂಲಿ ಹಿಡದಾದ ।
ಮೂರು ಆಡಿನ ಕಾಲ ಹದಿನಾರು ಹೋಳಿಗಿ ದೆವ್ವ ಬೇಡ್ಯಾದ ।
ಬ್ಯಾಡ ಅಂದಲ್ಲಿ ಬೇಕಂತ ಹೋಗದು ರಾಟಿ ಬಿದ್ದಾದ ।
ನಾಲ್ಕು ಮಾಡಿ ಇಳಿಸಿ ಬಿಟ್ಟಿದ ಮೇಲೆ ದೆವ್ವ ಓಡ್ಯಾದ ॥ ೧ ॥

ಮರುದಿನ ಹೆಣತಿ ಕಸ ತೆಗಿಲಕ ಹೊಲಕ ಹೋಗ್ಯಾಳ ।
ಮೂರು ಮೂಲಿಯಲಿ ಇಳಿಸಿ ಬಿಟ್ಟಿದ ಹೋಳಗಿ ನೋಡ್ಯಾಳ ॥
ಅರಿಯದ ಹೆಣ್ಣೀಗಿ ಏನ ಖೂನ ಎಲ್ಲನೆ ತಿಂದಾಳ ।
ಸಿರಗೇಡಿ ಹೆಂಗಸೀಗಿ ಸೀರಿ ಉಡಸಿದರ ಹ್ಯಾಂಗ ತಿಳಿತಾಳ ॥ ೨ ॥

ಬ್ಯಾರೆ ಆಗಮಂತ ಗಂಡನ ಗುಡ ಢಂಗ ತೆಗದಾದ
ನೀರ ತರಲಕಂತ ಕೊಡ ಇಲ್ಲದೆ ನೀರೀಗಿ ನಡದಾದ
ಭಾರಿ ಕಿಮ್ಮತಿನ ಸೀರಿ ಬೇಕಂತ ಖೊಂಡ ಹಿಡದಾದ
ಹಿರಿಯರ ಕಿರಿಯರ ಕಿಮ್ಮತ ಇದಕ್ಕಿಲ್ಲ ಎಲ್ಲಿಂದ ಬಂದಾದ । ೩ ॥

ಮಾವ ಅತ್ತಿಯ ಮಾತು ಕೇಳಿದರ ಕಿಮ್ಮತ ಬರತಾದ ।
ಭಾವ ಮೈದುನ ನಾದಿನಿಗೆ ಮೊದಲೆ ದೂರ ಇಟ್ಟಾದ ।
ಯಾವ ಅಂಜಿಕಿ ಇಲ್ಲದೆ ಮನಿಯಲ್ಲಿ ಕಾರಬಾರ ನಡೆಶ್ಯಾದ ।
ಸೇವಾ ಮಾಡು ಗಂಡನೆ ದೇವರೆಂದರ ಮುಕ್ತಿ ಸಿಗತಾದ ॥ ೪ ॥

ಆಕಳಂಥ ಗಂಡನ ಅಂಜಿಸಿ ಅಡಿ ಸೇರಿಶ್ಯಾದ ।
ಜ್ವಾಕಿಲಿಂದ ಇದ್ದರೆ ತಾನು ತಾನೆ ಮಣಿತಾದ ।
ಬೇಕಾದ ವಡವಿ ಮಾಡಸೀನಿ ತೂತಾ ಇಲ್ಲದ ವಡಿ ಬೇಕಂತಾದ ।
ಲೋಕದ ಹಾರಕೂಡ ಗುರುವಿನ ಗುಡಿಯಲ್ಲಿ ಹಸನಾಗಿರತಾದ ॥ ೫ ॥

ನೀ ಬಂದೀ ಮುಲ್ಲಾ

ಉಳಿಲಾರದ ಹೆಂಡತಿನಾ ಮಾಡಿಕೊಂಡಿ
ಘಳಿಗ್ಯಾಗ ಬರತಿನಂತ ಓಡಿ ಹೋಗ್ಯಾದ ॥ ಪ ॥

ಮೂಹುರ್ತ ನೋಡಿ ನಿಶ್ಚಯ ಮಾಡಿದ
ಮೂರುವರಿ ಮಳದ ಸೀರಿ ಉಡಸಿದ
ಊರಾನ ಐದು ಮಂದಿ ಪಂಚರ ಕರಸಿದ
ಬ್ಯಾರೆ ಮಾಡಿ ಕೊಟ್ಟರ ಇರತಿನಂತಾದ ॥ ೧ ॥

ತಾಳಿ ಕರಮಣಿ ಹೇಳಿ ಮಾಡಿಸಿದ
ಬಾಳಗೇಡಿ ಕೊರಳಿಗಿ ಕಟ್ಟಿದಾ
ಸುಳ್ಳೆ ಹೇಳಿ ನನ್ನ ಮಳ್ಳ ಮಾಡತಾದ
ಹೇಳಲ್ದೆ ತವರಿಗಿ ಹೋಗಿ ಬರತಾದ ॥ ೨ ॥

ಸಿಟ್ಟೀಗಿ ಬಂದು ಸಿಕ್ಕಂಗ ಹೊಡದದಾ
ಕೆಟ್ಟ ಶಬ್ದ ತನ್ನ ಬಾಯ್ಲಿ ನುಡಿತಾದ
ಖೊಟ್ಟಿ ಹೆಣ್ಣ ಮನಿ ಹಾಳ ಮಾಡ್ಯಾದ
ಬಟ್ಟ ಬೈಲಾಗಿಟ್ಟು ಕುಳಿತು ನಗತದ ॥ ೩ ॥

ಎಂಟು ಮಕ್ಕಳಿಗಿ ಜ್ವಾಕಿ ಮಾಡ್ಯಾದ
ಬಂಟ ಹೊಲ್ಯಾಗ ಗಣ್ಯರು ಅನುತಾದ
ಕುಂಟ ಹೆಣ್ಣ ಇದು ಕುಣಿಸಿ ಕುಣತಾದ
ಗಂಟ ಬಿದ್ದಾದ ಯಾರೀಗಿ ಹೇಳೋದ ? ॥ ೪ ॥

ತಪ್ಪದೆ ಹಾರಕೂಡ ಊರೀಗಿ ಬರತಾದ
ಮುಪ್ಪ ಮುತ್ತ್ಯಾನ ಸೇವಾ ಮಾಡತಾದ
ಝುಪ್ಪಿಸಿ ಶಿವನ ನಾಮ ನುಡಿದರ
ತುಪ್ಪದ ಆರುತಿ ಹಚ್ಚಿ ಬೆಳಗ್ಯಾದ ॥ ೫ ॥

(ಈ ವಿವರಗಳನ್ನು ಸ್ವತಃ ಕವಿಗಳು ನೀಡಿದ್ದಾರೆ.)

□



ಶಂಕರ ಶೀಲವಂತ ಅವರ ಮನೆ (ಹಾರಕೂಡ).




ಶಂಕರ ಅವರ ಸಹೋದರ ಸಂಬಂಧಿ ಶಿವಾನಂದ.



ಶಂಕರ ಶೀಲವಂತ.



ಕಾಯಕ ನಿರತ ಶಂಕರ ಶೀಲವಂತ.



ಶಂಕರ ಹಾರಕೂಡ ಅವರು ಕಾಯಕ
ನಿರ್ವಹಿಸುತ್ತಿರುವ ಸರಾಫ ಅಂಗಡಿ (ಕಲಬುರ್ಗಿ).

೩೪. ಶ್ರೀ ಮ.ನಿ.ಪ್ರ ಶಿವಾನಂದ ಸ್ವಾಮಿ (ಕ್ರಿ.ಶ.ಸು. ೧೯೫೨)

ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನಲ್ಲಿ ಹುಲಸೂರು ಗ್ರಾಮವು ಖ್ಯಾತಿ ಪಡೆದಿರುವುದು ಶ್ರೀ ಗುರುಬಸವೇಶ್ವರ ವಿರಕ್ತ ಮಠದಿಂದ. ಶ್ರೀಮಠಕ್ಕೆ ಇಂದು ಅಧಿಪತಿಗಳಾಗಿರುವ ಶ್ರೀ.ಮ.ನಿ.ಪ್ರ. ಶಿವಾನಂದ ಮಹಾಸ್ವಾಮಿಗಳವರು ಅದನ್ನೊಂದು ಸಂಸ್ಕೃತಿಯ ಕೇಂದ್ರವನ್ನಾಗಿ ವಿಕಾಸ ಪಡೆಸಿದ್ದಾರೆ; ಪಡೆಸುತ್ತಲಿದ್ದಾರೆ. ಸಮಾಜ ಸೇವೆಗೆ ಶ್ರೀಮಠವನ್ನು ಸಂಪೂರ್ಣವಾಗಿ ಅರ್ಪಿಸಿ ಬಿಟ್ಟಿದ್ದಾರೆ.

ಶ್ರೀ ಶಿವಾನಂದ ಸ್ವಾಮಿಗಳವರ ಪೂರ್ವಾಶ್ರಮದ ಹೆಸರು ಶಿವಯ್ಯ. ಬಾಗಲಕೋಟೆ ಜಿಲ್ಲೆ; ಮುಧೋಳ ತಾಲ್ಲೂಕಿನಲ್ಲಿ ಬರುವ ಲಿಂಗಾಪುರವು ಶ್ರೀಗಳವರ ಜನ್ಮಗ್ರಾಮ. ತಾಯಿ ಕಾಶಮ್ಮನವರು. ತಂದೆ ಗುರುಪಾದಯ್ಯ ಸ್ವಾಮಿಗಳು.

ಆರಂಭದ ಶಿಕ್ಷಣವನ್ನು ಸ್ವಗ್ರಾಮದಲ್ಲಿ ಆರಂಭಿಸಿದ ಶಿವಾನಂದರು ಮುಂದಿನ ಶಿಕ್ಷಣವನ್ನು ಮುಧೋಳ ಪಟ್ಟಣದಲ್ಲಿ ಮುಂದುವರೆಸಿದರು. ಅಕ್ಷರ ಅಭ್ಯಾಸದೊಂದಿಗೆ ಹಲವಾರು ತಾತ್ವಿಕ ಸಾಹಿತ್ಯದ ಗ್ರಂಥಗಳ ಅಧ್ಯಯನ ಕೈಗೊಂಡರು. ಬಸವಾದಿ ಶಿವಶರಣರ ವಾಙ್ಮಯ ತಲಸ್ಪರ್ಶಿಯಾಗಿ ಮನನಿಸಿದರು.

ಮುಧೋಳ ಗವಿಮಠದ ಶ್ರೀಮೃತ್ಯುಂಜಯ ಸ್ವಾಮಿಗಳ ಕೃಪೆಗೆ ಪಾತ್ರರಾಗಿ ಕ್ರಿ.ಶ.೧೯೭೧ರಲ್ಲಿ ಕಲಬುರ್ಗಿ ಜಿಲ್ಲೆ; ಚಿಂಚೋಳಿ ತಾಲ್ಲೂಕಿನಲ್ಲಿ ಬರುವ ಮುಕರಂಬಾ ಮಠದ ಪೀಠಾಧಿಪತಿಗಳಾದರು. ಈಗ ಶಿವಯ್ಯನವರು "ಶಿವಾನಂದ ಮಹಾಸ್ವಾಮಿ"ಗಳಾದರು.

ಶ್ರೀ ಶಿವಾನಂದ ಸ್ವಾಮಿಗಳನ್ನು ಹುಲುಸೂರು ಮಠವು ಕ್ರಿ.ಶ ೧೯೭೯ರಲ್ಲಿ ಸ್ವಾಗತ ಕೋರಿತು. ಈ ಮಠವು ಹನ್ನೆರಡನೆಯ ಶತಮಾನದಷ್ಟು ಪ್ರಾಚೀನವಾದುದೆಂದು ಹೇಳಲಾಗುತ್ತದೆ. ಶ್ರೀ ಶಿವಾನಂದ ಸ್ವಾಮಿಗಳ ಪೂರ್ವದಲ್ಲಿ ಹತ್ತೊಂಬತ್ತು ಜನ ಸ್ವಾಮಿಗಳು ಆಗಿ ಹೋಗಿದ್ದರು. ಶ್ರೀ ಬಸವಕುಮಾರ ಶಿವಯೋಗಿಗಳು ಮಠದ ಪೀಠ ಪರಂಪರೆಯಲ್ಲಿ ಹತ್ತೊಂಬತ್ತನೆಯವರಾಗಿ; ಶ್ರೀ ಮಠವನ್ನು ಸಾಕಷ್ಟು ಬೆಳೆಯಿಸಿದರು. ಶ್ರೀ ಬಸವಕುಮಾರ ಸ್ವಾಮಿಗಳು ಕ್ರಿ.ಶ. ೧೯೭೦ರಲ್ಲಿ ಲಿಂಗೈಕ್ಯರಾದರು. ಅವರ ಲಿಂಗೈಕ್ಯದ ನಂತರ ಶಿವಾನಂದ ಸ್ವಾಮಿಗಳು ಹುಲುಸೂರು ಮಠದ

ಉತ್ತಾರಾಧಿಕಾರಿಯಾಗಿ, ಶಿವಯೋಗ ಮಂದಿರಕ್ಕೆ ಹೋಗಿ, ಅಲ್ಲಿ ಸಾಧಕರಾಗಿ ಕೆಲವು ವರ್ಷ ಅಧ್ಯಯನ ಮಾಡಿದರು. ಕ್ರಿ.ಶ. ೧೯೮೧ರಲ್ಲಿ ಹುಲಸೂರಿನ ಮಠಕ್ಕೆ ನಿರಂಜನ ಪಟ್ಟಾಧಿಕಾರಿಯೆಂದು ನೇಮಿಸಲಾಯಿತು.

ಶ್ರೀ ಶಿವಾನಂದ ಸ್ವಾಮಿಗಳ ಸಾಧನೆಯನ್ನು ಗಮನಿಸಿ, ಇನ್ನೂ ಹಲವಾರು ಮಠಗಳು ಪೂಜ್ಯರ ಆಧೀನಕ್ಕೆ ಬರಲು ತವಕಿಸತೊಡಗಿದವು. ಅಂಥ ಮಠಗಳಲ್ಲಿ ಹುಲಿಕುಂಟೆ ಮಠವೂ ಒಂದು. ಇದು ಭಾಲ್ಕಿ ತಾಲ್ಲೂಕಿನ ಖಟಕ್ ಚಿಂಚೋಳಿ ಗ್ರಾಮದ ವ್ಯಾಪ್ತಿಯಲ್ಲಿದೆ. ಈ ಮಠವು ಹದಿನೈದನೆಯ ಶತಮಾನದಲ್ಲಿ ಶ್ರೀ ಶಾಂತಲಿಂಗ ಸ್ವಾಮಿಗಳಿಂದ ಸ್ಥಾಪನೆಯಾಯಿತು. ಶಿವಾನಂದರಿಗೆ ಪೂರ್ವದಲ್ಲಿ ಹತ್ತು ಜನ ಸ್ವಾಮಿಗಳು ಆಗಿ ಹೋಗಿದ್ದರು. ಶಿವಾನಂದರು ಹನ್ನೊಂದನೆಯ ಸ್ವಾಮಿಗಳಾಗಿ ಹುಲಕುಂಟೆ ಮಠದ ಅಧಿಕಾರವನ್ನು ವಹಿಸಿಕೊಂಡರು.

ಹುಲುಸೂರು, ಮುಕರಂಬಾ; ಹುಲಿಕುಂಟಿ ಮಠಗಳ ಅಧಿಪತಿಗಳಾದ ಶ್ರೀ ಶಿವಾನಂದ ಮಹಾಸ್ವಾಮಿಗಳು ಎಲ್ಲ ಮಠಗಳನ್ನು ಆಶ್ಚರ್ಯ ಪಡುವಂತೆ ಅಭಿವೃದ್ಧಿ ಪಡಿಸಿದ್ದಾರೆ. ಶಿವಾನಂದ ಸ್ವಾಮಿಗಳು ಜನಪರರೂ, ದಯಾವಂತರೂ, ಆಧ್ಯಾತ್ಮಸಾಧಕರೂ ಆಗಿ ತಮ್ಮನ್ನು ಸರ್ವವಿಧದಲ್ಲೂ ಸಮಾಜ–ಧರ್ಮ–ಶಿಕ್ಷಣ ಸಂಸ್ಕೃತಿ ಕ್ಷೇತ್ರಗಳಿಗೆ ಸಮರ್ಪಿಸಿಕೊಂಡಿದ್ದಾರೆ. ಅವರಿಗೆ ಬಡತನ–ಅಜ್ಞಾನ–ಅಸ್ಪೃಶ್ಯತೆಯಾದಿಗಳಂತಹ ಅನಿಷ್ಟಗಳ ನಿವಾರಣೆಯ ಬಗೆಗೆ ಕಳಕಳಿಯಿದೆ. ಪ್ರಕೃತಿವಿಕೋಪಗಳಾದ ನೆರೆಹಾವಳಿ, ಬರಗಾಲ, ಭೂಕಂಪದಂತಹ ಸಂದರ್ಭದಲ್ಲಿ ಶ್ರೀಗಳವರು ತಮ್ಮ ಶ್ರೀ ಮಠದಿಂದ ಹಲವಾರು ದಾಸೋಹ ಕಾರ್ಯಗಳನ್ನು ಹಮ್ಮಿಕೊಂಡು, ತೊಂದರೆಗೆ ಒಳಗಾದ ಜನತೆಗೆ ಸಹಾಯ ಮಾಡಿರುವರು. ಅವರ ಕಾರ್ಯವು ಕೇವಲ ಕನ್ನಡ ನಾಡಿಗಷ್ಟೇ ಸೀಮಿತವಾಗಿಲ್ಲ, ನೆರೆಯ ಆಂಧ್ರ–ಮಹಾರಾಷ್ಟ್ರಗಳಲ್ಲಿ ಆಗಾಗ ಪಾದಯಾತ್ರೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ಜನಜಾಗ್ರತಿಯ ಕಾರ್ಯವನ್ನು ನಿರ್ವಹಿಸುತ್ತಲಿದ್ದಾರೆ.

ಲಿಂಗದೀಕ್ಷೆ, ಅನುಭಾವ ಗೋಷ್ಠಿ, ಸಹಪಂಕ್ತಿ ಭೋಜನಗಳಂತಹ ಕಾರ್ಯಕ್ರಮಗಳಿಂದ ಪೂಜ್ಯರು ಸಾಮಾಜಿಕ ಸಾಮರಸ್ಯವನ್ನುಂಟು ಮಾಡುತ್ತಿದ್ದಾರೆ. ಬಸವಾದಿ ಶರಣರ ಚಿಂತನೆಗಳ ಪ್ರಸಾರದಿಂದ ಜನಾಂಗದಲ್ಲಿ ವೈಚಾರಿಕ ಪ್ರಭೆಯನ್ನು ಬೆಳಗಿಸುತ್ತಿದ್ದಾರೆ. ಶ್ರೀಮಠದಲ್ಲಿ ಹಲವಾರು ಅನಾಥ ಮಕ್ಕಳಿಗೆ ಆಶ್ರಯ ನೀಡಿ, ಅವರ ಬದುಕಿಗೆ ದಾರಿ ತೋರುತ್ತಲಿದ್ದಾರೆ.

ಶ್ರೀ ಶಿವಾನಂದ ಸ್ವಾಮಿಗಳು ಶ್ರೀ ಮಠದಿಂದ ಹಲವಾರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಶ್ರೀ ಬಸವಕುಮಾರ ಸ್ವಾಮಿಗಳು ಆರಂಭಿಸಿದ್ದ ಶಿಕ್ಷಣ ಸಂಸ್ಥೆಗಳು ಸಧ್ಯದ ಶ್ರೀಗಳವರ ನೇತೃತ್ವದಲ್ಲಿ ಬೆಳವಣಿಗೆ ಹೊಂದುತ್ತಲಿವೆ. ಮಕ್ಕಳಿಗೆ ಸತ್ವಪೂರ್ಣ ಶಿಕ್ಷಣ ನೀಡುತ್ತಲಿವೆ. ಶ್ರೀ ಗುರುಬಸವೇಶ್ವರ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿಂದು

ಹುಲುಸೂರು, ಬಸವಕಲ್ಯಾಣ, ಮುಕರಂಬಾ, ಹುಲಿಕುಂಟೆ ಮುಂತಾದ ಸ್ಥಳಗಳಲ್ಲಿ ಹಲವಾರು ಪ್ರಾಥಮಿಕ-ಪ್ರೌಢ ಶಾಲೆಗಳು ಶಿಕ್ಷಣ ದಾಸೋಹದಲ್ಲಿ ತೊಡಗಿವೆ.

ಶ್ರೀ ಶಿವಾನಂದ ಸ್ವಾಮಿಗಳು ಸಾಹಿತ್ಯ ಕೃಷಿಕರೂ ಆಗಿದ್ದಾರೆ. ಅವರು ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗಲೇ ಸ್ವರಚಿತ ಕವನಗಳ ಸಂಕಲನವೊಂದು ಹೊರ ತಂದುದು ಮಹತ್ವದ ಸಂಗತಿ. ಅದು 'ಕನ್ನಡ ಕೋಗಿಲೆ' ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಅದರಲ್ಲಿ ಮೂವತ್ತೇಳು ಕವನಗಳಿವೆ.

ಶ್ರೀಗಳವರು ಮೂರು ನಾಟಕಗಳ ರಚನೆ ಮಾಡಿದ್ದಾರೆ. ರಣಹದ್ದುಗಳು, ಪತಿವ್ರತೆಯ ಪ್ರಭಾವ, ಸಂನ್ಯಾಸಿಗೆ ಸವಾಲು-ಇವೆ ಆ ನಾಟಕಗಳಾಗಿವೆ.

ಪೂಜ್ಯರು ಹಲವಾರು ತತ್ತ್ವಪದ ಮತ್ತು ವಚನಗಳನ್ನು ರಚಿಸಿದ್ದಾರೆ. ಕ್ರಿ.ಶ. ೧೯೮೯ರಲ್ಲಿ ಅವರು ರಚಿಸಿದ ವಚನಗಳ ಸಂಗ್ರಹವು "ಹುಲಸೂರಿನ ಶಿವಾನಂದ ಸ್ವಾಮಿಗಳ ವಚನಗಳು" ಎಂಬ ಹೆಸರಿನಲ್ಲಿ ಪ್ರಕಟವಾಗಿದೆ.

ಕ್ರಿ.ಶ. ೨೦೦೧ರಲ್ಲಿ ಪ್ರಕಟವಾದ 'ಕಲ್ಯಾಣ ಕೈಲಾಸ' ಎಂಬ ಕೃತಿಯಲ್ಲಿ ಶ್ರೀಗಳು ರಚಿಸಿದ ತತ್ತ್ವಪದಗಳು ಸಂಗ್ರಹಗೊಂಡಿವೆ. ಬಸವತತ್ತ್ವ ಪ್ರಸಾರಕ್ಕೆ ಕಂಕಣಬದ್ಧರಾಗಿರುವ ಶ್ರೀಗಳವರು ತಮ್ಮ ಶ್ರೀಮಠದಿಂದ ಆ ಕಾರ್ಯ ಸಾಧನೆಗೆ ಹಲವು - ಹತ್ತು ಕಾರ್ಯ ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತರಾಗಿದ್ದಾರೆ. ಅದರ ಅಂಗವಾಗಿ ಶ್ರೀಗಳು ಹೊರದೇಶ ಯಾತ್ರೆಯನ್ನೂ ಕೈಗೊಂಡಿದ್ದಾರೆ. ಇಲ್ಲಿ ನಿದರ್ಶನಕ್ಕಾಗಿ ಶ್ರೀಗಳವರು ರಚಿಸಿದ ಕೆಲವು ತತ್ತ್ವಪದಗಳನ್ನು ಉದ್ಧರಿಸಲಾಗಿದೆ. "ಗುರುಬಸವ"ನೆಂಬುದು ಪದಗಳ ಅಂಕಿತವಾಗಿದೆ.

ಬಣ್ಣದ ಪಕ್ಷಿ

ಬಣ್ಣ ಬಣ್ಣದ ಪಕ್ಷಿ ನೋಡ ತಂಗೆಮ್ಮ
ಸಣ್ಣ ಮನಸ್ಸಿನ ಪಕ್ಷಿ ಕೈಯಾಗ ಸಿಗಲೊಲ್ಲದಮ್ಮ ॥ ಪ ॥

ಆಕಾಶಕ್ಕೆ ಹಾರುತಾದ ಭೂಮಿಗೆ ಬರುತಾದ
ಏಕರೂಪಾಗಿ ಜಗವ ಸುತ್ತುತಾದ
ನಾಲ್ಕು ದಿಕ್ಕಿನಲ್ಲಿ ಗೂಡುವ ಕಟ್ಟಿಕೊಂಡಾದ
ಸಾಕು ಮಾಡ್ಯಾದ ಸದ್ದು ಗದ್ದಲವಿಲ್ಲದೆ ಕಾಡುತಾದ ॥ ೧ ॥

ಬಣ್ಣಾದ ಗರಿ ಬಿಚ್ಚಿ ಸಣ್ಣಗ ಕುಣಿತೈತಿ
ಕಣ್ಣ ಸನ್ನೆಯ ಮಾಡಿ ಕರಿತೈತಿ ಓಡತೈತಿ
ಸುಣ್ಣದ ಮಡಲಿನಲ್ಲಿ ಬಿದ್ದು ಸಾಯತೈತಿ
ಗುಣವಂತರ ಗುರುತ ಹಿಡಿಯದೆ ಹೋಗುತೈತಿ ॥ ೨ ॥

ಧರಿಯೊಳು ಮೆರೆಯುವ ಹುಲಸೂರಾಗ
ಪುರದೊಡೆಯ ಗುರುಬಸವನಿಗೆ ಸಿರಬಾಗ
ಸ್ಥಿರವಲ್ಲ ಸಂಸಾರ ಸಾಕು ಬಿಡಬೇಕಮ್ಮ
ಮೂರು ದಿವಸದ ಸಂತಿ ಸುಧಾರಿಸಿ ಮಾಡಮ್ಮ ॥ ೩ ॥

(ಬಸವಯೋಗಿ. ಪು. ೮೩)

ಹಡಗ ಏರಿ ಕಡಲ ದಾಟು

ಜಿನಗು ಮಳೆಯು ಹತ್ತ್ಯಾದ ನೋಡಮ್ಮ
ಜಾರಿ ಬಿದ್ದರ ಕೈಕಾಲು ಮುರಿತಾವ ಕೇಳಮ್ಮ ॥ ಪ ॥

ಹಾದಿ ಬೀದಿಯಲ್ಲಿ ಕೆಸರು ಆಗೈತಿ ನೋಡಮ್ಮ
ಕಲ್ಲ ಮೇಲೆ ಕಾಲು ಇಟ್ಟು ಜಿಗಿಯ ಬೇಡಮ್ಮಾ
ಕಾಲ ತಪ್ಪಿದರೆ ಹೋಯಿತು ನಿನ್ನ ಹಲ್ಲು ನೋಡಮ್ಮ
ಬಲು ಜೋಕಿಯಿಂದ ವಿಚಾರ ಮಾಡಿ ನಡೆಯಮ್ಮ ॥ ೧ ॥

ಆ ಕಡೆ ಈ ಕಡೆ ನೋಡದೆ ಮುಂದಿನ ದಾರಿ ಹಿಡಿಯಮ್ಮ
ಕಡೆ ತನಕ ಬಿಡದೆ ದೇವರ ನಾಮ ನುಡಿಯಮ್ಮ
ಬಡತನ ಸಿರಿತನ ಕಡಲದ ತೆರೆಯು ನೋಡಮ್ಮ
ಹಡಗವ ಏರಿ ಕಡಲವ ದಾಟಿ ಹೋಗಮ್ಮ ॥ ೨ ॥

ದೇಶದೊಳು ಹೆಸರಾದ ಹುಲಸೂರ ಗುರು ಬಸವೇಶನಮ್ಮ
ಕೋಳಿ ಕೂಗದ ಮುನ್ನ ಬ್ರಹ್ಮ ಮುಹೂರ್ತದಲ್ಲಿ ನೆನೆಯಮ್ಮಾ
ಸುಳ್ಳ ಮೋಸವಂಚನೆ ಬಿಟ್ಟು ಗುರುಪಾದ ಹಿಡಿಯಮ್ಮ
ಗುರುಲಿಂಗ ಜಂಗಮ ಹಿಡಿದು ಮುಕ್ತಿಯ ಪಡೆಯಮ್ಮ ॥ ೩ ॥

(ಅದೇ-೮೪)

ನಿನ್ನ ಮಾಲಕ ನೀನೆ

ನೌಕರಿ ಮಾಡಬೇಕೊ ಲೆಕ್ಕಹಾಕಿ
ನಗುನಗುತ್ತ ಚಾಕರಿ ಮಾಡೋ ಸುದರಾಸಿ ॥ ಪ ॥

ಬೆಕ್ಕಿನಂಗ ತಿರಗಬ್ಯಾಡೋ
ಸೊಕ್ಕಿನ ಸೊಳೆಯರ ಸಂಗ ಮಾಡಬ್ಯಾಡೋ
ಅಕ್ಕಂದಿರು ಹೇಳು ಮಾತ ಕೇಳಬೇಕೋ
ಠಕ್ಕ ಮೂಳರ ಸಂಗ ಮಾಡಬ್ಯಾಡೋ ॥ ೧ ॥

ಮಾಲಕ ಮೆಚ್ಚುವಂಗ ಕೆಲಸ ಮಾಡಬೇಕೋ
ಮೂಲಂತ್ರವ ತಿಳದಿರಬೇಕೋ ।
ಯಮನ ಜಾಲ ತಪ್ಪಿಸ ಬೇಕೋ
ನಿಯಮದಿಂದ ಶಿವ ನೀನಾಗಬೇಕೋ ॥ ೨ ॥

ಹೊಲದೊಳಗಿನ ಕರಕಿ ತೆಗೆಯ ಬೇಕೋ
ಮೇಳದಿಂದ ಬಿತ್ತಿ ಬೆಳೆಯ ನೋಡಬೇಕೋ
ಸುಳ್ಳಲ್ಲೋ ನಿನ್ನ ಮಾಲಿಕ ನೀನೇ ನೋಡೋ
ಹುಲಸೂರು ಗುರುಬಸವನ ಕೂಡಬೇಕೋ ॥ ೩ ॥

ತಗಣೀ ಕಡಿತೈತಿ

ತಗಣಿ ಕಡಿತೈತಿ ನಿಂಗಮ್ಮ
ಹಗಲು ರಾತ್ರಿ ತಗಣಿ ಕಡಿತೈತಿ ॥ ಪ ॥


ಕಣ್ಣಿಗೆ ನಿದ್ದಿ ಬರವಲ್ಲದು ನೋಡಾ
ಸಣ್ಣಗೆ ಕಡಿತೈತಿ ಮೈಯಲ್ಲಿ ಕುಳತು
ಕೈಯಾಗ ಹಿಡಿದರೆ ಸಿಗುವುದಿಲ್ಲದು ನೋಡಾ
ಎನಗ ಏನು ಮೂಲಾಗಿ ಕುಳಿತೈತಿ ತಗಣಿ ॥ ೧ ॥

ಹಾಸಗಿ ಜಾಡಿಸಿ ಸಾಕಾಗ್ಯಾದಮ್ಮ
ಹೇಸಿಗಿ ಬಂದು ಹೋಗ್ಯಾದ ತಗಣಿವಾಸನೆಗೆ ।
ಬ್ಯಾಸರಕಿ ಬಂದದ ನಿದ್ದಿ ಇಲ್ಲದ ಜೀವಕ್ಕೆ
ಸೋಸಿ ನೋಡು ನಿನ್ನೊಳೆ ತಗಣಿಯ ಕಾಟಕ್ಕೆ ॥ ೨ ॥

ಬೆಣ್ಯಾನ ಕೂದಲಂಗ ತೆಗೆಬೇಕದಕ
ಬೆಳಕಿನಲಿ ಸದಾ ಹುಡಕ ಬೇಕ
ಗುರು ಬಸವನ ಸ್ಮರಣೆಯೇ ಬೆಳಕಾಗಬೇಕ
ತಗಣಿ ಸತ್ತ ಮ್ಯಾಲ ನಿತ್ಯ – ಸತ್ಯ ತಿಳಿಯೋ ಪಕ್ಕಾ ॥ ೩ ॥

(ಅದೇ – ಪು. ೮೮)


▯



ಗುರುಬಸವೇಶ್ವರರ ಹಳೆಯ ಮಠದ ಮಹಾದ್ವಾರ (ಹುಲಸೂರು).




ಮಠದ ಮಹಾದ್ವಾರ (ಹುಲಸೂರು).




ಗುರುಬಸವೇಶ್ವರ ಮಠದ ಒಳಾಂಗಣ ನೋಟ (ಹುಲಸೂರು).




ಗುರುಬಸವರ ದರ್ಶನ ಪ್ರತಿಮೆ.




ಜಗದ್ಗುರು ಬಸವಕುಮಾರೇಶ್ವರರ ದರ್ಶನ ಪ್ರತಿಮೆ



ಗುರು ಬಸವೇಶ್ವರರ ಮಠದಲ್ಲಿರುವ ಪೂಜಾಗೃಹ (ಹುಲಸೂರು)



ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಶರಣರೊಂದಿಗೆ ಶ್ರೀ ಶಿವಾನಂದ ಮಹಾಸ್ವಾಮಿಗಳು ಸಹಜ ಶಿವಯೋಗದಲ್ಲಿ ತಲ್ಲೀನರಾಗಿರುವುದು.



ಮ.ನಿ.ಪ್ರ.ಶಿವಾನಂದ ಮಹಾಸ್ವಾಮಿಗಳು ಭಕ್ತರಿಗೆ ದರ್ಶನ ನೀಡಲು
ಆಸೀನರಾಗುವ ಪೀಠ.



ಪೂಜ್ಯರಿಗೆ ಪರಮ ಪೂಜ್ಯರುಗಳಿಂದ ಗೌರವ



ಮಠದ ೧೯ನೇ ಪೀಠಾಧಿಪತಿ ಶ್ರೀ ಬಸವಕುಮಾರ ಶೀವಯೋಗಿಗಳು.

೩೫. ಮನೋಹರ ಮುಲಗೆ (ಕ್ರಿ.ಶ.ಸು. ೧೯೫೨)

ಅರವತ್ತು ವರುಷಗಳ ಹೊಸ್ತಿಲಿನಲ್ಲಿರುವ ಮನೋಹರ ಮುಲಗೆ ಅವರದು ಸಧ್ಯ ಅಶಾಂತ ಮತ್ತು ಮಾನಸಿಕ ಸ್ಥಿರತೆಯಿಲ್ಲದ ಬದುಕೆಂದು ಹೇಳಬಹುದಾಗಿದೆ. ಅವರು ಬದುಕಿನುದ್ದಕ್ಕು ಭೌತಿಕ ನೆಲೆಗಳನ್ನು ಬದಲಾಯಿಸುತ್ತ ಬಂದಿರುವುದಕ್ಕೆ ಇದೇ ಕಾರಣವಾಗಿದೆ. ಹಲವಾರು ಸಂಸಾರಿಕ ಸಮಸ್ಯೆಗಳಿಂದ ಜರ್ಜಿತರಾಗಿರುವ ಮನೋಹರ ಸ್ವಯಂ ಮಾನಸಿಕ ಗೊಂದಲಕ್ಕೆ ಸಿಕ್ಕು ಹಾಕಿಕೊಂಡು ಚಡಪಡಿಸುತ್ತಿದ್ದಾರೆ. ಇಂತಹ ಕಸವಿಸಿಯ ನಡುವೆಯೂ ಅವರು ಭಜನೆಯಲ್ಲಿ ಪಾಲುಗೊಳ್ಳುತ್ತಾರೆ; ಹಾಡುತ್ತಾರೆ, ಜನತೆಗೆ ಮುದವನ್ನು ನೀಡುತ್ತಾರೆ. ಬವಣೆಯ ಬದುಕಿನ ಕಹಿಯನ್ನು ಉಣ್ಣುತ್ತಲೇ ಮನೋಹರ ಕಲೆಯ ಸಿಹಿಯನ್ನು ಸಮಾಜಕ್ಕೆ ಹಂಚುತ್ತಲಿದ್ದಾರೆ.

ಮನೋಹರ ಮುಲಗೆ ಅವರ ಮೂಲ ಗ್ರಾಮ ಬಸವಕಲ್ಯಾಣ ತಾಲ್ಲೂಕಿನ ಖೇಳಗಿ (ಖೇಡಗಿ. ಕೆ) ಗ್ರಾಮ. ತೀರಾ ಬಡ ದಂಪತಿಗಳಾಗಿದ್ದ ಚಂದ್ರಪ್ಪ–ಸಾಯಬವ್ವಾ ದಂಪತಿಗಳ ಒಬ್ಬನೆ ಮಗ ಈ ಮನೋಹರ ಕ್ರಿ.ಶ. ೧೯೫೨ರ ವರ್ಷದಲ್ಲಿ ಜನಿಸಿದರು. ಅಂಬಿಗ ಕುಟುಂಬಕ್ಕೆ ಸೇರಿದ ಮನೋಹರ ಅವರ ಮನೆತದ ಹೆಸರು 'ಮುಲಗೆ' ಎಂಬುದಾಗಿದೆ.

ಮನೋಹರ ಮುಲಗೆ ಅವರಿಗೆ ಕೊಹಿನೂರವಾಡಿ ಗ್ರಾಮವು ಅವರ ತಾಯಿಯ ತವರು ಮನೆಯಾಗಿ ಸಂಬಂಧ ಹೊಂದುತ್ತದೆ. ಈ ಕಾರಣದಿಂದಲೇ ಮನೋಹರ ಸಧ್ಯ ನೆಲೆಸಿರುವುದು ಬಸವಕಲ್ಯಾಣ ತಾಲ್ಲೂಕಿನ ಕೊಹಿನೂರ ವಾಡಿ ಸಮೀಪದ ಕೊಹಿನೂರಿನಲ್ಲಿ.

ಮನೋಹರ ಮುಲಗೆ ಅವರು ಬಾಲ್ಯ ಕಳದದ್ದು ಕೊಹಿನೂರುವಾಡಿಯಲ್ಲಿ. ಅದಕ್ಕೆ ಹತ್ತಿರದ ನೆಲೆಯಾದ ಆಳಂದ ತಾಲ್ಲೂಕಿನ ಗ್ರಾಮ ಸಲಗರದಲ್ಲಿ ಅವರ ಪ್ರಾಥಮಿಕ ಶಿಕ್ಷಣವಾಯಿತು. ಮುಂದೆ ಅಲ್ಲಿಂದ ಮನೋಹರ ಸಂಗೀತ ಕಲಿಯಲು ಹುಮನಾಬಾದಿನ ಮಾಣಿಕ ನಗರಕ್ಕೆ ಹೋದರು. ಅಲ್ಲಿ ಹಲವಾರು ರಾಗಗಳ ಅಭ್ಯಾಸ ಮಾಡಿ ಸಂಗೀತ ಕಲೆಯಲ್ಲಿ ಪಾಂಡಿತ್ಯಗಳಿಸಿ, ಮರಳಿ ಊರಿಗೆ ಬಂದರು. ಕೊಹಿನೂರಿನಲ್ಲಿದ್ದ ಶ್ರೇಷ್ಠ ತತ್ತ್ವಪದಕಾರರಾಗಿದ್ದ ಹುಸನಾ ಮಾಸ್ತರರ ಸಂಪರ್ಕವು

ದೊರಕಿತು. ಅವರ ಶಿಷ್ಯತ್ವವಹಿಸಿದ ಮನೋಹರ ಅವರು ಹಾಡುಗಾರಿಕೆ, ಹಾಡುರಚನೆಯ ಬಗೆಗೆ ಮಾರ್ಗದರ್ಶನ ಪಡೆದುಕೊಂಡರು. ಹುಸನಾಸಾಹೇಬರು ಮನೋಹರ ಅವರ ಕಲೆಗಾರಿಕೆಯನ್ನು ತುಂಬಾ ಮೆಚ್ಚಿದವರಾಗಿದ್ದರು. ಅವರ ಹಾಡುಗಳಿಗೆ ಮನ ಸೋತಿದ್ದರು. ಒಂದು ದಿನ ಮನೋಹರ ಅವರನ್ನು ಕರೆದು "ತಮ್ಮಾ ನೀನು ಒಳ್ಳೆಯ ಹಾಡುಗಾರ ಮತ್ತು ಸಂಗೀತಗಾರನಾಗಿದ್ದಿ; ಮುಂದೆ ಒಳ್ಳೆಯ ಕವಿಯೂ ಆಗು" ಎಂದು ಆಶೀರ್ವಾದ ಮಾಡಿದರು.

ಗುರುಗಳ ಆಶೀರ್ವಾದ ಹೊಂದಿದ ಮುಲಗೆ ಮನೋಹರನ ಸಂಗೀತ-ಸಾಹಿತ್ಯಯಾತ್ರೆ ಆರಂಭವಾಯಿತು. ಈ ಸಮಯದಲ್ಲಿ ಮನೋಹರ ಅವರ ತಂದೆ ಚಂದ್ರಪ್ಪ ಕಾರಣಾಂತರಗಳಿಂದ ಕೊಹಿನೂರು ಗ್ರಾಮ ಬಿಟ್ಟು ಕಣಜಿ ಗ್ರಾಮದಲ್ಲಿ ಬಂದು ನೆಲೆಸಿದರು.

ಮನೋಹರ ಅವರು "ಭಜನೆ ಕಲಿಸುವ ಮಾಸ್ತರ"ರಾಗಿ ಹಲವಾರು ಭಜನೆ ಸಂಘಗಳಿಗೆ ಭಜನೆಯನ್ನು ಕಲಿಸಿದರು. ಮುಚಳಂಬಾ ಗ್ರಾಮದ ಅಕ್ಕ ಮಹಾದೇವಿ ಭಜನಾ ಸಂಘ, ಬೀರಲಿಂಗೇಶ್ವರ ಭಜನಾ ಮಂಡಳಿ, ಸೆಡೋಳ ಗ್ರಾಮದ ಜಗದಂಬಾ ಭಜನಾ ಸಂಘ, ಮುಂತಾದವುಗಳು ಮನೋಹರ ಅವರಿಂದ ಭಜನೆಯ ಕಲೆಯನ್ನು ಕಲಿತು ಕೊಂಡಿವೆ.

ಕಣಜಿ ಗ್ರಾಮಕ್ಕೆ ಬಂದು ನೆಲೆ ನಿಂತ ಮೇಲೆಯೇ ಮನೋಹರ ಅವರ ಮದುವೆಯಾಯಿತು. ಅವರ ಮದುವೆಯ ವರ್ಷ ಕ್ರಿ.ಶ. ೧೯೮೭ . ಜಯಶ್ರೀ ಮುಲಗೆ ಅವರ ಪತ್ನಿ. ಈ ದಂಪತಿಗಳಿಗೆ ಇಂದು ಇಬ್ಬರು ಗಂಡು, ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಕಣಜಿಯಲ್ಲಿ ಮನೋಹರ ಮುಲಗೆ ಅವರ ಕುಟುಂಬವು ವಾಸವಾದದ್ದು ಹಣಮಂತ ಕಲಮುಲೆ ಅವರ ಮನೆಯಲ್ಲಿ. ಆ ಮನೆಯ ವಂಶಸ್ಥರಾದ ಶ್ರೀ ಅಮೃತರಾವ ಅವರು ನಮಗೆ ಮನೋಹರ ಅವರ ಬಗೆಗೆ ಕೆಲವು ವಿವರಗಳನ್ನು ನೀಡಿದ್ದಾರೆ. ಕಣಜಿಯ ಕಣಿಕೇಶ್ವರ ದೇವರ ಪರಮ ಭಕ್ತರಾಗಿ ಮನೋಹರ ಕಣಜಿಯಲ್ಲಿ ಭಜನಾ ಮಂಡಳಿಯೊಂದನ್ನು ಕಟ್ಟಿದರು. ಅದಕ್ಕೆ " ಸಾಯಿಬಾಬಾ ಭಜನಾ ಸಂಘ" ಎಂದು ಹೆಸರಿಟ್ಟರು. ಕಣಜಿಯ ಹಲವಾರು ಭಜನಾ ಕಲಾವಿದರು ಅದರ ಸದಸ್ಯರಾದರು.

ಮನೋಹರ ಮುಲಗೆ ಸಂಗೀತಗಾರ, ಹಾಡುಗಾರ, ತತ್ತ್ವಪದಕಾರರಾಗಿರುವಂತೆ ನಾಟಕಕಾರರೂ ಆಗಿದ್ದಾರೆ. ಹಲವಾರು ನಾಟಕಗಳನ್ನು ಕಲಿಸಿದ್ದಾರೆ. ಹಲವು ನಾಟಕಗಳಲ್ಲಿ ನಟರಾಗಿ ನಟಿಸಿದ್ದಾರೆ. ಇಂದು ಮನೋಹರ ಮುಲಗೆ ಕೊಹಿನೂರಿಗೆ ಮರಳಿ ಮತ್ತೆ ಬಂದಿದ್ದಾರೆ. ಈಗ ಅಲ್ಲಿಯೆ ವಾಸವಾಗಿದ್ದಾರೆ.

ಮನೋಹರ ಮುಲಗೆ ಅವರ ಹಾಡುಗಳನ್ನು ಹಲವಾರು ಭಜನಾ ಸಂಘಗಳು

ಹಾಡುತ್ತವೆ. ಮನೋಹರ ಮುಲಗೆ ತತ್ತ್ವಪದಗಳಿಗೆ ತಮ್ಮ ಹೆಸರನ್ನೆ ಮುದ್ರೆಯಾಗಿಟ್ಟುಕೊಂಡಿದ್ದಾರೆ. ಅವರು ರಚಿಸಿದ ತತ್ತ್ವಪದವನ್ನು ಇಲ್ಲಿ ಕೊಡಲಾಗಿದೆ:

ಗೌಡ ಭಾಳ ಬೆರಕಿ

ಗೌಡ ಭಾಳ ಬೆರಕಿ । ತಮ್ಮ
ನೋಡಪ್ಪ ಊರಾಗ್ಹ್ಯಾಂಗ ಇರುತಿ ॥ ಪ ॥

ಕಾಡಿಸುತಾನ; ಏಡಿಸುತಾನ
ಪೀಡಿಸುತಾನ ತಮ್ಮ ದಂಡಿಸುತಾನ
ನೋಡ ನೋಡದರಾಗ ಎಲ್ಲೊ ಇರುತಾನ
ಯಾರಿಗೀ ಕಾಣದಾಂಗ ಒಳಗೆ ಇರುತಾನ ॥ ೧ ॥

ಪಿಂಡವ ಮಾಡುತಾನ
ದಂಡವ ಕೊಡಿಸುತಾನ
ಭಂಡ ಮಾಡುತಾನ
ಹಂಡ ಗೌಡನಿವನ ॥ ೨ ॥

ಇಲ್ಲಿ ಹನಾ ಅಂದರ ಎಲ್ಲೋ ಹೋಗುತಾನ
ಎಲ್ಲೋ ಹ್ವಾದಂದರ ಬಲ್ಲೆ ಬರುತಾನ
ಖುಲ್ಲ ಗೌಡ ಬರೇ ಗುಲ್ಲ ಮಾಡುತಾನ
ಮಾಯಾದ ಮನೆಯಾಗ ಹಾಯಾಗಿ ಇರುತಾನ ॥ ೩ ॥

ನ್ಯಾಯ ಮಾಡುತಾನ ಲಂಚ ಬೇಡುತನ
ನಾಯಂಗ ಬಾಯಾಗ ಜೊಲ್ಲ ಸುರುಸುತಾನ
ಮಾಯಾದ ಹೆಂಡತಿನ ಕೂಡಿಯೆ ಇರುತಾನ
ಮೋಹದ ಮಗಳೀಗೆ ಭಾಳ ಜೀವ ಮಾಡುತಾನ ॥ ೪ ॥


ಶತ್ರುವಾಗುತಾನ ಮಿತ್ರನಾಗುತಾನ
ತಂತ್ರ ಮಾಡುತಾನ; ಮಂತ್ರ ಓದುತಾನ

ಯಂತ್ರಗಾರನಾಗಿ ಕಂತ್ರಿ ಮಾಡುತಾನ
ಸ್ವತಂತ್ರನಾಗಿ ತಾನು ತಿರುಗೆ ತಿರುಗುತಾನ ॥ ೫ ॥

ಪಂಚಕಳ್ಳರ ಕೈಯ್ಯಾಗ ಸಿಗುತಾನ
ಪಂಚಕಳ್ಳರಿಗೆ ಮಳ್ಳ ಮಾಡಿ ಓಡುತಾನ
ಮೇಳ ಕೂಡಿಸುತಾನ, ಗಾಳ ಹಾಕುತಾನ
ಒಳ್ಳೊಳ್ಳೆ ಮಾತುಗಳ ಸುಳ್ಳೇ ಹೇಳತಾನ ॥ ೬ ॥

ಧರಿಯೊಳು ಮರೆಯುವ ಕಣಜಿ ಊರಾಗ
ಕೊಹಿನೂರ ವಾಡಿ ಬಡವ ಮನೋಹರ
ಗೌಡ ಹಿಡಿದು ಜಡತಿ ಮಾಡತಾನ
ನೋಡದಂಗೆ ಮರೆಯಾಗಿ ತಾನೆ ಇರುತಾನ ॥ ೭ ॥

(ಈ ವಿವರಗಳನ್ನು ಸ್ವತಃ ಕವಿಯೇ ನೀಡಿದ್ದಾರೆ.)




ಮನೋಹರ ಮುಲಗೆ ಅವರ ವಾಸದ ಮನೆ (ಕೊಹಿನೂರು).



ಮನೋಹರ ಮುಲಗೆ ಅವರ ಪರಿವಾರ




ಮನೋಹರ ಮುಲಗೆ ಅವರು ವಾಸಿಸುತ್ತಿದ್ದ ಅಮೃತ ಕಲಮುಲೆ ಅವರ ಮನೆ
(ಕಣಜಿ)




ಮನೋಹರ ಮುಲಗೆ ಅವರ
ಸಹೋದರ ಸಂಬಂಧಿ
ಅಮೃತರಾವ ಕಲಮುಲೆ

ಮನೋಹರ ಮುಲಗೆ







ಮನೋಹರ ಮುಲಗೆ ಅವರ
ಅಕ್ಕಂದಿರು: ಲಕ್ಕಮ್ಮ–ನಾಗಮ್ಮ



ಮನೋಹರ ಮುಲಗೆ ಅವರ ಇನ್ನೊಂದು ವಾಸದ ಮನೆ (ಕೊಹಿನೂರುವಾಡಿ).




ಕಣಕೇಶ್ವರ ದೇವಾಲಯದ ಒಳಾಂಗಣ ನೋಟ



ಮನೋಹರ ಮುಲಗೆ ಅವರ ಆರಾಧ್ಯ ದೇವರು ಹನುಮಾನ ದೇವಾಲಯ
(ಕೊಹಿನೂರುವಾಡಿ)



ಮನೋಹರ ಮುಲಗೆ ಅವರ ಆರಾಧ್ಯ ದೇವರು ಕಣಕೇಶ್ವರ ದೇವಾಲಯ (ಕಣಜಿ).



ಮನೋಹರ ಮುಲಗೆ ಅವರ ಮೋಹರಮ್ ಹಾಡುಗಳಿಗೆ ಪ್ರೇರಕವಾದ ಕೊಹಿನೂರ ವಾಡಿ ದರ್ಗಾ.

೩೬. ರೇವಣಸಿದ್ಧಪ್ಪ ನಾಟೀಕಾರ (ಕ್ರಿ.ಶ.ಸು. ೧೯೫೪)

ಕಲ್‌ಖೋರಾ ಗ್ರಾಮವು ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ಸಣ್ಣ ಊರು. ಅಲ್ಲಿನ ಕೋಳಿಸಮಾಜದ ಮನೆತನಕ್ಕೆ ರೇವಣಸಿದ್ಧಪ್ಪನವರು ಸಂಬಂಧ ಪಟ್ಟವರಾಗಿದ್ದಾರೆ. 'ನಾಟೀಕಾರ' ಎಂಬುದು ಅವರ ಮನೆತನದ ಅಡ್ಡ ಹೆಸರು. ಈ ಮನೆತನದಲ್ಲಿ ಮೊದಲ ತತ್ತ್ವಪದಕಾರರಾಗಿ ಕಾಣಿಸಿಕೊಂಡ ಖ್ಯಾತಿ ಇವರದು.

ರೇವಣಸಿದ್ಧಪ್ಪನವರ ಅಜ್ಜ ಬಂಡೆಪ್ಪ ನಾಟೀಕಾರ ಅವರು ಕ್ರಿ.ಶ.ಸು. ೧೯೫೫ರಲ್ಲಿ ಲಿಂಗೈಕ್ಯರಾದರು. ಅವರೂ ಕವಿಗಳಾಗಿದ್ದರು. ಅವರು ನೂರುಷಗಳಿಗೆ ಸಮೀಪವಾಗಿ ಬದುಕಿದ್ದರೆಂದು ಹೇಳಲಾಗುತ್ತದೆ. ಬಂಡೆಪ್ಪನವರಿಗೆ ಇಬ್ಬರು ಗಂಡು ಮಕ್ಕಳಿದ್ದರು. ಮೂವರು ಹೆಣ್ಣಮಕ್ಕಳಿದ್ದರು. ಮೂವರು ಗಂಡುಮಕ್ಕಳಲ್ಲಿ ರೇವಣಸಿದ್ದಪ್ಪನವರ ತಂದೆ ಗುಂಡಪ್ಪನವರು ಒಬ್ಬರು.

ಬಂಡೆಪ್ಪನವರು ಒಕ್ಕಲುತನ ಮಾಡುತ್ತಿದ್ದರು. ಅವರು ಹೆಚ್ಚಾಗಿ ಬರೆದದ್ದು ಮೋಹರಮ್ ಹಾಡುಗಳನ್ನು. ತಮ್ಮ ಹಾಡುಗಳಿಗೆ ಬಂಡೆಪ್ಪವರು ಮಹಿಬೂಬ ಸುಭಾನಿ ಅಂಕಿತ ಹಾಕುತ್ತಿದ್ದರು.

ಅಜ್ಜ ಬಂಡೆಪ್ಪನವರ ಕವಿತಾಶಕ್ತಿಯು ಮತ್ತೆ ನಾಟೀಕಾರರ ಮನೆತನದಲ್ಲಿ ಪ್ರತ್ಯಕ್ಷವಾದುದು ರೇವಣಸಿದ್ಧಪ್ಪನವರ ಮುಖಾಂತರ. ರೇವಣಸಿದ್ಧಪ್ಪನವರು ಕ್ರಿ.ಶ. ೧೯೫೪ರಲ್ಲಿ ಗುಂಡಪ್ಪ–ಈರಮ್ಮ ದಂಪತಿಗಳ ಹೊಟ್ಟೆಯಿಂದ ಹುಟ್ಟಿದರು. ಈ ದಂಪತಿಗಳಿಗೆ ರೇವಣಸಿದ್ಧಪ್ಪ ಒಬ್ಬನೆ ಮಗ. ಅವರು ಬಾಲ್ಯದಲ್ಲಿ ಯಾವುದೇ ಶಾಲೆಗೆ ಹೋಗಲಿಲ್ಲ. ಅಕ್ಷರ ಕಲಿಯಲ್ಲಿಲ್ಲ. ಬೆಳೆಯುತ್ತಲೆ ಕೃಷಿಕರಾಗಿ ಬೆಳೆದರು. ಕಾವ್ಯಗಳನ್ನು ಸ್ವತ: ಕಟ್ಟಿ ಸಾಹಿತ್ಯದ ಕೃಷಿಯನ್ನು ಮಾಡಲು ಆರಂಭಿಸಿದರು. ರೇವಣಸಿದ್ಧಪ್ಪನವರಿಗೆ ಹಾಡು ಕಟ್ಟುವ ಪ್ರೇರಣೆ ಒದಗಿದ ಬಗೆಗೆ ಒಂದು ಕತೆ ಹೇಳಲಾಗುತ್ತದೆ.

ಒಂದು ಸಲ ರೇವಣಸಿದ್ಧಪ್ಪ ಹೊಲಕ್ಕೆ ಬಿತ್ತಣಿಕೆಯ ಕೆಲಸ ಮಾಡಲು ಹೋದರು. ಜೋಳ ಬಿತ್ತಿದರು. ನಡುವೆ ಒಂದಿಷ್ಟು ಆಯಾಸವಾಯಿತು. ದಣಿವು ನಿವಾರಿಸಿಕೊಳ್ಳಲೆಂದು ತಮ್ಮ ಅಜ್ಜನ ಸಮಾಧಿಯ ಕಟ್ಟೆಯ ಮೇಲೆ ಮಲಗಿದರು. ಸ್ವಲ್ಪ ಮಂಪರು ಆವರಿಸಿಕೊಂಡಿತು. ಕನಸೊಂದು ಬಿದ್ದಿತು. ಅವರ ಕನಸಿನಲ್ಲಿ ಅಜ್ಜ

ಬಂಡೆಪ್ಪನವರು ಕಾಣಿಸಿಕೊಂಡು ರೇವಣಸಿದ್ಧಪ್ಪನಿಗೆ ಹಾಡು ಕಟ್ಟಲು ಹೇಳಿದರಂತೆ. ಅದರಂತೆ ರೇವಣಸಿದ್ಧಪ್ಪನವರು ಹಾಡುಕಟ್ಟಲು ಆರಂಭಿಸಿದರೆಂದು ಹೇಳಲಾಗುತ್ತದೆ.

ರೇವಣಸಿದ್ಧಪ್ಪನವರಿಗೆ ಮದುವೆಯಾಗಿಲ್ಲ. ಅವರನ್ನು ಕುಷ್ಟರೋಗವು ಆವರಿಸಿಕೊಂಡಿದೆ. ಹೀಗಾಗಿ ಅವರಿಗೆ ಯಾರೂ ಹೆಣ್ಣು ಕೊಡುವುದಕ್ಕೆ ಬರಲಿಲ್ಲ. ತಾಯಿಯ ಆಶ್ರಯದಲ್ಲಿಯೇ ಉಳಿದುಕೊಂಡಿದ್ದಾರೆ. ರೋಗದ ಕಾರಣದಿಂದ ರೇವಣಸಿದ್ಧಪ್ಪನವರಿಗೆ ಜೀವನದಲ್ಲಿ ಅತ್ಯಂತ ನಿರಾಶೆ–ಹತಾಶೆ ಭಾವಗಳು ಮೂಡಿವೆ. ರೋಗದಿಂದ ಉಂಟಾದ ಚಿಂತೆಯನ್ನು ಮರೆಯುವುದಕ್ಕಾಗಿ ಗಾಂಜಾ ಸೇದುವ ಚಟಕ್ಕೆ ಬಲಿಯಾಗಿದ್ದಾರೆ. ಗಾಂಜಾ ಸೇದಿ ಅದರ ಅಮಲು ಏರಿದಾಗ ಆ ಅಮಲಿನ ಆವೇಶದಲ್ಲಿ ರೇವಣಸಿದ್ಧಪನರು ಬಾಯಿಗೆ ಬಂದಂತೆ ಹಾಡುಲು ಆರಂಭಿಸುತ್ತಾರೆ. ಅವರು ಹಾಡಿದ್ದೇ ಹಾಡಾಗುತ್ತದೆ. ರೇವಣಸಿದ್ಧಪ್ಪನವರು ಹಾಡಿದ ಹಾಡುಗಳನ್ನು ಅದೇ ಗ್ರಾಮದ ರವಿ ಬಿರಾದಾರ ಮತ್ತ ಶೇಖ್ ಅಲಿ ಅವರು ಬರೆದಿಡುವ ಕಾರ್ಯ ಮಾಡಿದ್ದಾರೆ.

ರೇವಣಸಿದ್ಧಪ್ಪನವರ ಮನೆಯ ದೇವರು ಬೀದರ ತಾಲ್ಲೂಕಿನ ಮೈಲಾರದ ಮಲ್ಲಯ್ಯ. ಅವರು ತಾವು ಬರೆದ ಹಾಡುಗಳಿಗೆಗೆ ಊರಿನ ಆರಾಧ್ಯ ದೇವರಾದ ಮಹಾದೇವನ ಅಂಕಿತವನ್ನು ಹಾಕಿದ್ದಾರೆ. ಇನ್ನು ಕೆಲವು ಹಾಡುಗಳಿಗೆ ತಮ್ಮ ಹೆಸರನ್ನೇ ಅಂಕಿತವಾಗಿರಿಸಿಕೊಂಡಿದ್ದಾರೆ. ಅವರು ರಚಿಸಿದ ಹಾಡುಗಳಲ್ಲಿ ಕಲಬುರ್ಗಿ ಶರಣಬಸವ, ಬಬಲಾದ ಮುತ್ತ್ಯಾ, ಹಾರಕೂಡ ಚೆನ್ನಬಸವ ಶಿವಯೋಗಿ, ನೀಲೂರು ನಿಂಬೆಕ್ಕ, ಸತಿಸಾವಿತ್ರಿ, ಭಕ್ತ ಮಾರ್ಕಂಡೇಯ ಇಂತಹ ಹಲವಾರು ಶರಣ – ಸತ್ಪುರುಷರ ಬಗೆಗೆ ಬರೆದ ರಚನೆಗಳಿವೆ.

ರೇವಣಸಿದ್ಧಪ್ಪ ಒಂದು ಭಜನಾ ಸಂಘವನ್ನು ಕಟ್ಟಿದ್ದಾರೆ. ಅದರ ಹೆಸರು **'ಮಹಾದೇವ ಭಜನಾ ಸಂಘ'** ಎಂಬುದು. ಈ ಭಜನಾ ಸಂಘದವರು ಹೆಚ್ಚಾಗಿ ರೇವಣಸಿದ್ಧಪ್ಪನ ತತ್ತ್ವಪದಗಳನ್ನು ಹಾಡುತ್ತಾರೆ. ಭಜನಾ ಸಂಘದಲ್ಲಿ ಸಕ್ರೀಯವಾಗಿ ಕೆಲವು ವ್ಯಕ್ತಿಗಳಿದ್ದಾರೆ. ಅವರಲ್ಲಿ ಬಿರಾದಾರ ಮನೆತನದ ನಾಗಣ್ಣ ವಿಠ್ಠಲ, ಉಮೇಶ, ಅಂಬಾರಾವ, ರೇವಣಸಿದ್ಧಪ್ಪ, ಬಾಬು, ಶಂಕರ, ಹಣಮಂತ ಇವರು ಪ್ರಮುಖರು. ಅವರೊಂದಿಗೆ ಬಸವಂತ ಕುನಾಳಿ, ರೇವಣಸಿದ್ಧಪ್ಪ ಬಡದಾಳ, ಅಮೃತ ಸಿರಗಾಪೂರ ಮುಂತಾದವರಿದ್ದಾರೆ.

ರೇವಣಸಿದ್ಧಪ್ಪನವರು ತತ್ತ್ವಪದಗಳೊಂದಿಗೆ ನೂರಾರು ಮೋಹರಮ್ ಪದಗಳನ್ನು ಬರೆದಿದ್ದಾರೆ. ಅವರಿಗೆ ಹಾಡುಗಾರಿಕೆ ಬರುವುದಿಲ್ಲ. ಹೀಗಾಗಿ ಹಾಡುವವರಿಗೆ ತಮ್ಮ ಹಾಡುಗಳನ್ನು ಕಟ್ಟಿಕೊಟ್ಟು ಅವರು ಹಾಡಿದಾಗ ಅತೀವ ಹರುಷ ಪಡುತ್ತಾರೆ. ರೇವಣಸಿದ್ಧಪ್ಪನವರ ಎರಡು ಹಾಡುಗಳನ್ನು ಇಲ್ಲಿ ನಿದರ್ಶನಕ್ಕಾಗಿ ಕೊಡಲಾಗಿದೆ:

ಕಲಬುರ್ಗಿ ಶರಣ

ಕನ್ನಡ ನಾಡೊಳು ಕರುಣ ತೋರಿದನು ಕಲಬುಗಿ ಶರಣ
ಭಕ್ತರ ಮಾಡಿದ ಉದ್ಧರಣ ಬಡವರ ಮೇಲೆ ಅಂತಃಕರಣ ॥ಪ॥

ಅರಳಗುಂಡಗಿ ನಿನ್ನ ಜನ್ಮ ಗ್ರಾಮ
ಮಲಕಪ್ಪ–ಸಂಗಮ್ಮ ತಂದೆ–ತಾಯಿ ನಾಮ
ಶಿವನ ಸಮಯದಲ್ಲಿ ಹುಟ್ಟಿದ ಶರಣ
ನಮನ ಮಾಡುವೆನು ನಿಮ್ಮ ಚರಣ ॥ ೧ ॥

ಕಲಕೇರಿ ಮರುಳ ಸಿದ್ಧರು ಗುರುದೇವರು
ಅವರ ಶಿಷ್ಯರಾಗಿ ದುಡಿದರು ಶರಣರು
ಮೂರು ಹೊತ್ತ ಪೂಜಿ ಮೂರು ಹೊತ್ತ ದಾಸೋಹ ಸಂಪೂರ್ಣ
ಜನತೆಯ ಮಾಲ್ಯ ನಿನ ಅಂತಃಕರಣ ॥ ೨ ॥

ಒಕ್ಕಲು ಮಗನಾಗಿ ಕೃಷಿಯ ಮಾಡಿದಿ
ಹಕ್ಕಿ–ಪಕ್ಕಿಗಳಿಗೆ ದಾಸೋಹ ಮಾಡಿದಿ
ನೀರ ತುಂಬಿದ ರಂಜಣಿಗಿ ಇರಿಸಿದಿ
ಪಶು–ಪಕ್ಷಿಗಳ ಕೂಗಿ ಕರೆದಿದಿ ॥ ೩॥
ಹೊಲಕ ಬೇಲಿಯ ಹಚ್ಚಲೇ ಇಲ್ಲ
ಅಟ್ಟ ಹಾಕಿ ಹಕ್ಕಿ ಹೊಡೆಯಲೇ ಇಲ್ಲ
ಹಕ್ಕಿ ತಿಂದ ಕಂಕಿ ರಾಶಿ ಮಾಡಿದಿ
ವಕ್ಕಳ ವಕ್ಕಳ ಜ್ವಾಳಾ ಬೆಳೆದಿದಿ ॥ ೪ ॥

ಕಣ್ಣ ಇಲ್ಲದವರಿಗೆ ಕಣ್ಣ ಕೊಟ್ಟಿದಿ
ಹೆಣ್ಣು ಬಂಜೆಯರಿಗೆ ಸಂತಾನ ನೀಡಿದಿ
ಮಣ್ಣಾಗ ಹೋಗವರಿಗಿ ಮರು ಜೀವನ ನೀಡಿದಿ
ಚೆನ್ನ ಮಾಡಿ ಹಾವ ಭಕ್ತಗ ನೀಡಿದಿ ॥ ೫ ॥

ಕಳ್ಳರಿಗೆ ಒಳ್ಳೆ ಬುದ್ಧಿ ನೀಡಿದಿ
ಕೊಲ್ಲಲು ಬಂದವರಿಗೆ ಬುದ್ಧಿ ಹೇಳಿದಿ
ಶುದ್ಧಯೋಗಿ ಕಡಕೋಳ ಮಡಿವಾಳನಿಗೆ
ಶುದ್ಧ ಮನದಿಂದ ದೀಕ್ಷೆ ಮಾಡಿದಿ ॥ ೬ ॥

ಧರೆಯೊಳು ಮೆರೆಯುವ ಕಲಕೋರ ಗ್ರಾಮ
ಅಲ್ಲಿ ಹಾನ ದೇವ ಮಹಾದೇವ ಕ್ಷೇಮ
ಶರಣಬಸವನ ಅಂತಃಕರಣ
ನಿನ್ನಿಂದ ಆಗಲಿ ಜಗದ ಉದ್ಧರಣ ॥ ೭ ॥

ಕಲಿಗಾಲ

ಹೆಂತ ಕಲಿಗಾಲ ಬಂತೆಪ್ಪ
ಸತ್ಯವಂತ ನೀ ಬಾಯಿ ಮುಚ್ಚಿ ಕುಂತೆಪ್ಪ ॥ ಪ ॥

ಕರಿದ್ಕ ಬೀಳೀದು ಮಾಡ್ತರಲ್ಲ
ಬೀಳಿದ್ಕ ಕರೀದು ಮಾಡ್ತರಲ್ಲ
ಒಳ್ಳೆದ್ಕ ಕೆಟ್ಟದೆಂದು ಹೇಳ್ತಾರಲ್ಲ
ಕೆಟ್ಟದ್ಕ ಒಳ್ಳೆದೆಂದು ಕರಿತಾರಲ್ಲ ॥ ೧ ॥

ಗ್ವಾಡೀಗಿ ಕುಂತಾವ ಇಂದ ಲೋಡೋಗಿ ಕುಂತಾನ
ನೆಲಕ ಬಿದ್ದಾವ ಇಂದ ಗೂಡ್ಯಾ ಏರಿ ನಿಂತಾನ
ನಾ ವೀರ – ನಾ ಪೀರ ಅಂದೆ ಅಂತಾನ
ಭ್ರಾಂತಿಲಿಂದ ಬಾಯಿ ಬಡದೆ ಸಾಯಿತಾನ ॥ ೨ ॥


ಮಾಯಾದ ಮೋಹಕ ಮರಳಾದ
ತಿಳಿಯದೆ ನರಕಕ ಬಿದ್ದಾದ
ಯಮಭಾದಿಯ ಕಡೆಗೆ ನಡೆದಾದ
ಕಲಿಕಾಲದಾಟ ತಿಳಿಯದಾದ ॥ ೩ ॥

ಇದು ಹೆಂತದು ಬಂತು ಕಲಿಗಾಲ
ಇದರ ನೆಲಿ ಯಾರಿಗೂ ತಿಳಿದಿಲ್ಲ
ನಡದದ ನೋಡುತಾ ತೋಲ
ಪರಮಾತ್ಮಗ ದಿಕ್ಕು ತಪ್ಪ್ಯಾದಲ್ಲ ॥ ೪ ॥
ವಸುಧಿಯೊಳಗ ನಮ್ಮ ಕಲಖೋರ ಊರಾ


ಕಲಿಯುಗದೊಳಗ ಅದಕ್ಕಿಲ್ಲ ಪಾರ
ದೇವ ಮಹಾದೇವನ ದಯಾ ಪೂರಾ
ಕಲಿಯುಗ ಕೆಟ್ಟು ಹೋಯಿತು ಬಾರಾ ॥ ೫ ॥

(ಸ್ವತಃ ಕವಿಯೆ ವಿವರಗಳನ್ನು ನೀಡಿದ್ದಾರೆ.)

□ □ □



ರೇವಣಸಿದ್ಧಪ್ಪನವರ ಮನೆ (ಕಲ್‌ಖೋರಾ)



ರೇವಣಸಿದ್ಧಪ್ಪನವರ ಅಜ್ಜಂದಿರಾದ ಶ್ರೀ ಬಂಡೆಪ್ಪನವರ ಆರಾಧ್ಯದೇವರು
ಮಹಿಬೂಬ ಸುಭಾನಿ (ಕಲ್‌ಖೋರಾ)



ರೇವಣಸಿದ್ಧಪ್ಪ ನಾಟೀಕಾರ



ರೇವಣಸಿದ್ಧಪ್ಪನವರ ಸಂಬಂಧಿವರ್ಗ



ರೇವಣಸಿದ್ಧಪ್ಪನವರ ಆರಾಧ್ಯ ದೇವರು ಮಹಾದೇವರ ಗುಡಿ
(ಕಲ್‌ಖೋರಾ)

ಆಕರ ಗ್ರಂಥಗಳು

ಗ್ರಾಮಶಿಲ್ಪಿ (ಗುರುಪಾದಪ್ಪನವರ ಬಗೆಗೆ–ವಿವಿಧ ಲೇಖಕರು ಬರೆದ ಲೇಖನಗಳು)–೧೯೫೬
ಸಿದ್ಧಲಿಂಗೇಶ್ವರ ಭಜನಾಮೃತ (ಕವಿ: ಮಡಿವಾಳಪ್ಪ ಕೆಂಚಾ): ಸಂ. ಸಿದ್ಧರಾಮಯ್ಯಸ್ವಾಮಿ ಕೌಠಾ (ಬಿ)–೧೯೬೮.
ಭಜನ ಮಾಡಿ ಭವ ಗೆದಿ – ಗುರುಪಾದಪ್ಪ ಶಿವರಡ್ಡಿ– ೧೯೭೯.
ವೀರಸಂಗಯ್ಯನವರ ಭಜನೆ – ಶ್ರೀ ಶಾಂತಲಿಂಗಸ್ವಾಮಿ – ೧೯೮೫.
ಶಿಲ್ಲಪ್ಪ ಕವಿಯ ಬದುಕು–ಬರಹ–ಡಾ. ಎಂ.ಎಸ್. ಲಠ್ಠೆ–ಎಚ್. ಕಾಶೀನಾಥರಡ್ಡಿ–೧೯೮೭.
ನಜಲಿಂಗಭದ್ರೇಶ್ವರ ಅನುಭವ ಪದಗಳು – ಸಂ. ಡಾ. ಎಂ.ಎಸ್. ಲಠ್ಠೆ– ಕಾಶೀನಾಥರಡ್ಡಿ – ೧೯೮೭.
ಮಹಾತ್ಮ ರೇವಪ್ಪಯ್ಯ (ನಾಟಕ) – ಕರಿಬಸವ ಕವಿಗಳು – ೧೯೮೯.
ಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು – ಶ್ರೀ ಆರೂಢ ಪ್ರಕಾಶನ, ಬೀದರ–೧೯೯೩.
ನಾವದಗಿ ರೇವಪ್ಪಯ್ಯನವರು ವಿರಚಿತ 'ಮನಬೋಧ' – ಸಂ. ನಾಗಲಿಂಗ ಕವಿ– ೧೯೯೫.
ಮರುಕುಂದಿ ಬಸವಣ್ಣಪ್ಪನವರ ಭಜನೆ ಹಾಗೂ ತತ್ತ್ವಪದಗಳು – ಸಂ. ಡಾ. ಮಾಣಿಕರಾವ ಧನಾಶ್ರೀ – ಎಚ್. ಕಾಶೀನಾಥರಡ್ಡಿ–೧೯೯೫.
ಶ್ರೀ ಸಿದ್ಧಪ್ರಭು – ಶ್ರೀ ಎಚ್. ಕಾಶೀನಾಥರಡ್ಡಿ–೧೯೯೬
ಧಮ್ಮ ಸಂದೇಶ ಗೀತೆಗಳು – ಈಶ್ವರ ಕರುಣಸಾಗರ–೧೯೯೭.
ಕೊಳ್ಳೂರ ಹುಸನಾ ಸಾಹೇಬ – ಡಾ. ಜಿ.ಬಿ. ವಿಸಾಜಿ–೧೯೯೮.
ಗುರುಗಾನ ಸ್ತುತಿ – ವಿರುಪಾಕ್ಷಯ್ಯ ಗೋರಟಾ–೨೦೦೦.
ಕಲ್ಯಾಣ ಕೈಲಾಸ – ಶ್ರೀ ಶಿವಾನಂದ ಸ್ವಾಮಿಗಳು – ೨೦೦೧.
ಕಲ್ಯಾಣ ನಾಡಿನ ಪರಂಜ್ಯೋತಿ – ಸಂ. ಡಾ. ಎಂ.ಎಸ್. ಲಠ್ಠೆ–೨೦೦೨.

ಶ್ರೀ ಮಾಣಿಕ ಪ್ರಭು – ಡಾ. ಎಂ.ಎಸ್. ಲಠ್ಠೆ–೨೦೦೨.
ಬೀದರ ಜಿಲ್ಲೆಯ ದಲಿತ ತತ್ತ್ವಪದಕಾರರು (ಪಿಎಚ್.ಡಿ. ಮಹಾಪ್ರಬಂಧ) ಡಾ. ಐಶ್ವರ್ಯ–೨೦೦೨.
ಕಾವ್ಯ ಕಾರಂಜಿ–ಸಂ. ದೇಶಾಂಶ ಹುಡಗಿ–೨೦೦೩.
ಆನಂದಾನುಭವ ತತ್ತ್ವಪದಗಳು – ಆನಂದರಾವ ಮುಡಬಿ – ೨೦೦೫.
ಶ್ರೀ ಆರೂಢ ಗ್ರಂಥಮಾಲಾ (ಭಜನೆ ಹಾಡುಗಳು)–ಶ್ರೀ ಶಿವಕುಮಾರ ಸ್ವಾಮಿಗಳು – ೨೦೦೫.
ಪಂಚಶೀಲನ ಮೂಕ ನಾಯಕ -- ಸಂ. ಡಾ. ಟಿ.ಎಂ. ಭಾಸ್ಕರ–೨೦೦೫.
ಬೀದರ ಜಿಲ್ಲೆಯ ಅನುಭಾವಿ ಕವಿಗಳು (ಪಿಎಚ್.ಡಿ. ಮಹಾಪ್ರಬಂಧ) – ಡಾ. ಗುರುಲಿಂಗಪ್ಪ ಧಬಾಲೆ–೨೦೦೬.
ಬಸವಯೋಗಿ–ಸಂ. ಡಾ. ಗುರುಲಿಂಗಪ್ಪ ಧಬಾಲೆ–೨೦೦೬.
ಶ್ರೀ ಲೇಂಗಟಿ ಕರಿಬಸವೇಶ್ವರರು--ರಘುನಾಥ ಹಡಪದ – ೨೦೦೬.
ದಖನ ಹಿಂದೀಕೆ ರಚನಾಕಾರ (ಹಿಂದಿ)–ಡಾ. ನಾಮದೇವ ಉತಕರ–೨೦೦೬ಗುರು–ಮೈತ್ರಿ – ಸಂ. ಬಿ.ಎನ್. ಸೊಲ್ಲಾಪುರೆ–೨೦೦೬.
ಭಕ್ತಿ ಕುಸುಮಾಂಜಲಿ–ವಿರೂಪಾಕ್ಷಯ್ಯ ಗೋರಟಾ–೨೦೦೭.
ಅವ್ವ ಕಾಡಾದಿ ಗೌರವ್ವ ಹಾಡಿದ ಹಾಡು–ಸಂ. ಡಾ. ನೀಲಾಂಬಿಕಾ ಪೋಲೀಸ ಪಾಟೀಲ–೨೦೦೭.
ಪ್ರೀತಿ–ಚಂದ್ರಪ್ಪ ಹೆಬ್ಬಾಳಕರ್–ಸುಮನ್ ಹೆಬ್ಬಾಳಕರ್–೨೦೦೮.
ತತ್ತ್ವಪದಕಾರರು ಮತ್ತು ವಸಾಹತುಶಾಹಿ ವ್ಯವಸ್ಥೆ–ಒಂದು ಅಧ್ಯಯನ– ಡಿ. ರಘುನಾಥರಾವ, ನವಕರ್ನಾಟಕ ಪ್ರಕಾಶನ–೨೦೦೮.
ಜ್ಯೋತಿ ಬೆಳಗುತಿದೆ – ದೇಶಾಂಶ ಹುಡಗಿ–೨೦೦೯.
ಮೋಹರಮ್ ಹಾಗೂ ಇತರ ಹಾಡುಗಳು – ಚಂದ್ರಪ್ಪ ಹೆಬ್ಬಾಳಕರ್–೨೦೦೯.
ವಿಶ್ವಪಿತರೇವಪ್ಪಯ್ಯ (ಹಿಂದಿ) ಸೂರ್ಯಕಾಂತ ದ್ವಾಸೆ – ೨೦೧೦.
ಯೋಗ ಸಿದ್ಧಾಂತ – ಸಂ. ರಘುನಾಥ ಹಡಪದ.

ಸಾಹಿತ್ಯದ ವಾದಗಳು ಏನೇ ಇರಲಿ, "ಸಾಹಿತ್ಯವು ಜೀವನ ಮುಖಿಯಾಗಿರಬೇಕೆಂಬುದು" ನಿರ್ವಿವಾದದ ಸಂಗತಿ. ಈ ಸಂಗತಿಯನ್ನು ಅತ್ಯಂತ ಗಟ್ಟಿ ಧ್ವನಿಯಲ್ಲಿ ಸಾರಿ ಕ್ರಿಯಾ ಶೀಲಗೊಳಿಸಿದವರು ವಚನಕಾರರು, ತತ್ತ್ವಪದಕಾರರು, ದಾಸರು. ಇವು ಕಲ್ಯಾಣ ಕರ್ನಾಟಕ ಸಂಸ್ಕೃತಿಯ ಜೀವನದಿಗಳಷ್ಟೇ ಅಲ್ಲ; ಪ್ರಭಾವ - ಪ್ರೇರಣೆಯ ದೃಷ್ಟಿಯಿಂದ ಸೀಮೆಯನ್ನು ಉಲ್ಲಂಘಿಸಿ, ವಿಶ್ವಜನಾಂಗದ ಹಿತ ಸಾಧನೆಯ ನೆಲೆಯತ್ತ ಅವು ಪ್ರವಹಿಸಿವೆ. ಡಾ. ಎಸ್.ಎಂ. ಹಿರೇಮಠ ಅವರು ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳ ಸಂಶೋಧನೆ ಮಾಡಿ ಸಂಪುಟಗಳ ಪ್ರಕಟಣೆಯ ಮೂಲಕ ಇದನ್ನು ಸಾಧಾರಭದ್ರವಾಗಿಸಿದ್ದಾರೆ. ತತ್ತ್ವಪದ ಸಾಹಿತ್ಯವು ನಿಜಕ್ಕೂ ಜನಹಿತದ ಸಾಹಿತ್ಯ, ಜನತೆಯ ಸಾಹಿತ್ಯ, ಜನತೆಯ ನಡುವೆಯೇ ಜೀವನದ ಸತ್ವಸಾರವನ್ನು ಹೀರಿಕೊಂಡು ಹುಟ್ಟಿದ ಸಾಹಿತ್ಯ. ತತ್ತ್ವಪದಕಾರರ ಜೀವನ - ಸಾಹಿತ್ಯ ಸಾಧನೆಯ ವಿವರಗಳ ಒಡಲಲ್ಲಿ ಈ ನೆಲದ ಸಂಸ್ಕೃತಿಯ ಸಂಪತ್ತು ಅಡಗಿದೆ. ಅದರ ಒಳನೋಟಗಳು ಈ ಪ್ರದೇಶದ ಹಿರಿಮೆಗೆ ಪ್ರಕಾಶವನ್ನು ಹಿಡಿಯುತ್ತವೆ. ಗುಲಬರ್ಗಾ ವಿಶ್ವವಿದ್ಯಾಲಯವು ಇಂತಹ ಸಾಂಸ್ಕೃತಿಕ ಸಾಧನೆಗೆ ಕಾರಣವಾದುದರಿಂದ ಅದರ ಕುಲಪತಿಯಾದ ನನಗೆ ಅತೀವ ಸಂತಸವಾಗಿದೆ.

ಪ್ರೊ.ಈ.ಟಿ.ಪುಟ್ಟಯ್ಯ
ಕುಲಪತಿಗಳು

978-81-920110-1-1

ರೂ.500.00